# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪<br>Part – IV | ಬೆಂಗಳೂರು, ಬುಧವಾರ, ೧೦ ಸೆಪ್ಟೆಂಬರ್, ೨೦೨೫ (ಭಾದ್ರಪದ ೧೯, ಶಕವರ್ಷ ೧೯೪೭)<br>BENGALURU, WEDNESDAY, 10 SEPTEMBER, 2025 (BHADRAPADA 19, SHAKAVARSHA 1947) | ನಂ. ೫೬೮<br>No. 568 |
|---|---|---|


**ಭಾಷಾಂತರ ನಿರ್ದೇಶನಾಲಯ**

**ಅಧಿಸೂಚನೆ**

ಸಂಖ್ಯೆ: ಭಾನಿ 10/ಆಮುಪ್ರಶಾ/ಇ–ಗೆಜೆಟ್/2025 ಬೆಂಗಳೂರು, ದಿನಾಂಕ:10–09–2025

ಭಾರತ ಸರ್ಕಾರದ Official Language Wing, Ministry of Law and Justice, Government of India ರವರ ಪತ್ರ ಸಂಖ್ಯೆ:F.No.10(iii)(IX)/Auth./Kannada/79-OL/192, ದಿನಾಂಕ:26–08–2025 ರ ಪತ್ರದಲ್ಲಿ ಸೂಚಿಸಿದಂತೆ The Authoritative Text (Central Laws) Act, 1973 (Central Act 50 of 1973)ರ ಪ್ರಕರಣ 2(ಎ)ರ ಅಡಿಯಲ್ಲಿ ದಿನಾಂಕ:18–08–2025 ರಂದು ಸನ್ಮಾನ್ಯ ರಾಷ್ಟ್ರಪತಿಯವರಿಂದ ಅಧಿಕೃತಗೊಂಡಿದೆ. ಕೇಂದ್ರ ಅಧಿನಿಯಮವಾದ **ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಸಂಖ್ಯೆ 46)ರ (THE BHARATIYA NAGARIK SURAKSHA SANHITA, 2023 (NO.46 OF 2023))** ಕನ್ನಡ ಆವೃತ್ತಿಯನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ–IV) ಪ್ರಕಟಿಸಲು ಆದೇಶಿಸಲಾಗಿದೆ,–

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
**(ವಿಶೇಷ ಸಂಚಿಕೆ)**

**भाग IX अनुभाग 1**
**PART IX SECTION 1**
**ಭಾಗ IX ವಿಭಾಗ 1**

प्राधिकार से प्रकाशित
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, सोमवार, 18 अगस्त, 2025 | श्रावण 25, 1947 (शक) | खंड.59 |
| No.1, New Delhi, Monday, August 18, 2025 | Shravana 25, 1947 (saka) | Vol. 59 |
| ನಂ.1, ನವದೆಹಲಿ, ಸೋಮವಾರ, ಆಗಸ್ಟ್ 18, 2025 | ಶ್ರಾವಣ 25, 1947 (ಶಕ) | ಸಂಪುಟ.59 |

**Ministry of Law and Justice**
(Legislative Department)
New Delhi, 18th August, 2025

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

ನವದೆಹಲಿ, 18ನೇ ಆಗಸ್ಟ್, 2025

The Translation in Kannada of **THE BHARATIYA NAGARIK SURAKSHA SANHITA, 2023 (NO.46 OF 2023)** -is hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

**ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಸಂಖ್ಯೆ 46)-** ಇದರ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023

## (2023ರ ಸಂಖ್ಯೆ 46)

*[25ನೇ ಡಿಸೆಂಬರ್, 2023.]*

ದಂಡ ಪ್ರಕ್ರಿಯೆಗೆ ಸಂಬಂಧಿಸಿದ ಕಾನೂನನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿಸಲಾಗಿದೆ:-

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಎಂದು ಕರೆಯತಕ್ಕದ್ದು.

(2) ಈ ಸಂಹಿತೆಯ IX, XI ಮತ್ತು XIIನೇ ಅಧ್ಯಾಯಗಳಿಗೆ ಸಂಬಂಧಿಸಿದ ಉಪಬಂಧಗಳನ್ನುಳಿದು, ಇತರ ಉಪಬಂಧಗಳು,-

(ಎ) ನಾಗಾಲ್ಯಾಂಡ್ ರಾಜ್ಯಕ್ಕೆ;

(ಬಿ) ಬುಡಕಟ್ಟು ಪ್ರದೇಶಗಳಿಗೆ

- ಅನ್ವಯವಾಗತಕ್ಕದ್ದಲ್ಲ;

ಆದರೆ ಸಂಬಂಧಪಟ್ಟ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ಪೂರಕ, ಪ್ರಾಸಂಗಿಕ ಅಥವಾ ಆನುಷಂಗಿಕ ಮಾರ್ಪಾಟುಗಳೊಂದಿಗೆ ಅಂಥ ಉಪಬಂಧಗಳನ್ನು ಅಥವಾ ಅವುಗಳಲ್ಲಿ ಯಾವುದನ್ನಾದರೂ, ಸಂದರ್ಭಾನುಸಾರ, ಇಡೀ ನಾಗಾಲ್ಯಾಂಡ್ ರಾಜ್ಯಕ್ಕೆ ಅಥವಾ ಅದರ ಭಾಗಕ್ಕೆ ಅಥವಾ ಅಂಥ ಬುಡಕಟ್ಟು ಪ್ರದೇಶಗಳಿಗೆ ಅನ್ವಯಿಸಬಹುದು.

*ವಿವರಣೆ.-* ಈ ಪ್ರಕರಣದಲ್ಲಿ ìಬುಡಕಟ್ಟು ಪ್ರದೇಶಗಳುî ಎಂದರೆ, 1972ರ ಜನವರಿ 21ನೇ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಸಂವಿಧಾನದ ಆರನೇ ಅನುಸೂಚಿಯ 20ನೇ ಪ್ಯಾರಾದಲ್ಲಿ ಉಲ್ಲೇಖಿಸಲಾದ ಅಸ್ಸಾಮ್ ಬುಡಕಟ್ಟು ಪ್ರದೇಶಗಳು ಒಳಗೊಂಡಿದ್ದಂಥ ಮತ್ತು ಷಿಲಾಂಗ್ ಪೌರ ಸಮಿತಿಯ ಸ್ಥಳೀಯ ಪರಿಮಿತಿಯೊಳಗಿರದ ಇತರ ರಾಜ್ಯಕ್ಷೇತ್ರಗಳು.

(3) ಇದು ಕೇಂದ್ರ ಸರ್ಕಾರವು ಅಧಿಕೃತ ರಾಜಪತ್ರದಲ್ಲಿ ಗೊತ್ತುಪಡಿಸಿದ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ಸಂಹಿತೆಯಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಶ್ರವ್ಯ-ದೃಶ್ಯ ವಿದ್ಯುನ್ಮಾನ" ಎಂದರೆ, ವೀಡಿಯೋ ಸಂವಾದ ನಡೆಸುವುದು, ಯಾವುದೇ ಸಂಪರ್ಕ ಸಾಧನವನ್ನು ಬಳಸುವುದು, ಸಾಕ್ಷ್ಯವನ್ನು ಗುರುತಿಸುವ, ಶೋಧಿಸುವ ಮತ್ತು ವಶಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಗಳನ್ನು ದಾಖಲಿಸುವ, ವಿದ್ಯುನ್ಮಾನ ಸಂವಹನವನ್ನು ಪ್ರಸರಣದ ಉದ್ದೇಶಗಳಿಗಾಗಿ ಮತ್ತು ಅಂಥ ಇತರೆ ಉದ್ದೇಶಗಳಿಗಾಗಿ

---

* (ಮೊದಲನೇ ಅನುಸೂಚಿಯಲ್ಲಿ ಪ್ರಕರಣ 106(2)ಕ್ಕೆ ಸಂಬಂಧಪಟ್ಟ ನಮೂದಿನ ಉಪಬಂಧಗಳನ್ನು ಹೊರತುಪಡಿಸಿ) 1ನೇ ಜುಲೈ 2024ರಂದು ಜಾರಿಗೆ ಬಂದಿರುತ್ತದೆ. ಅಧಿಸೂಚನೆ ಸಂಖ್ಯೆ: ಎಸ್.ಓ 848(ಇ), ದಿನಾಂಕ: 23ನೇ ಫೆಬ್ರವರಿ, 2024, ಭಾರತ ರಾಜಪತ್ರ, ವಿಶೇಷ, ಭಾಗ II, ಪ್ರ. 3(ii) ಅನ್ನು ನೋಡಿ.

ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಇತರೆ ಸಾಧನಗಳ ಮೂಲಕ ಯಾವುದೇ ಸಂವಹನ ಸಾಧನದ ಬಳಕೆ ಮಾಡುವುದನ್ನು ಒಳಗೊಳ್ಳುತ್ತದೆ;

(ಬಿ) "ಜಾಮೀನು" ಎಂದರೆ, ಅಧಿಕಾರಿ ಅಥವಾ ನ್ಯಾಯಾಲಯವು, ಅಪರಾಧ ಎಸಗಿರುವ ಆರೋಪಿ ಅಥವಾ ಶಂಕಿತ ವ್ಯಕ್ತಿಯನ್ನು ಕೆಲವು ಷರತ್ತುಗಳನ್ನು ವಿಧಿಸಿದ ನಂತರ, ಅಂಥ ವ್ಯಕ್ತಿಯು ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಟ್ಟ ನಂತರ ಅವನನ್ನು ಕಾನೂನಿನ ಅಭಿರಕ್ಷೆಯಿಂದ ಬಿಡುಗಡೆಗೊಳಿಸುವುದು;

(ಸಿ) "ಜಾಮೀನೀಯ ಅಪರಾಧ" ಎಂದರೆ, ಮೊದಲನೇ ಅನುಸೂಚಿಯಲ್ಲಿ ಜಾಮೀನೀಯವೆಂದು ನಮೂದಿಸಿದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಿಂದ ಜಾಮೀನೀಯವೆಂದು ಉಪಬಂಧಿಸಲಾದ ಅಪರಾಧ ಮತ್ತು "ಜಾಮೀನೀಯವಲ್ಲದ ಅಪರಾಧ" ಎಂದರೆ, ಇತರ ಯಾವುದೇ ಅಪರಾಧ;

(ಡಿ) "ಜಾಮೀನು ಬಂಧಪತ್ರ" ಎಂದರೆ, ಬಿಡುಗಡೆಗಾಗಿ ಜಾಮೀನಿನೊಂದಿಗೆ ತೆಗೆದುಕೊಳ್ಳುವ ಮುಚ್ಚಳಿಕೆ;

(ಇ) "ಬಂಧಪತ್ರ" ಎಂದರೆ, ಬಿಡುಗಡೆಗಾಗಿ ತೆಗೆದುಕೊಳ್ಳುವ ವೈಯಕ್ತಿಕ ಬಂಧಪತ್ರ ಅಥವಾ ಜಾಮೀನು ರಹಿತವಾದ ಮುಚ್ಚಳಿಕೆ;

(ಎಫ್) "ಆರೋಪ" ಎಂಬುದು, ಅದು ಒಂದಕ್ಕಿಂತ ಹೆಚ್ಚು ಆರೋಪಗಳ ಶೀರ್ಷಿಕೆಗಳನ್ನೊಳಗೊಂಡಿದ್ದಾಗ, ಯಾವುದಾದರೂ ಆರೋಪದ ಶೀರ್ಷಿಕೆಯನ್ನು ಒಳಗೊಳ್ಳುತ್ತದೆ;

(ಜಿ) "ಸಂಜ್ಞೇಯ ಅಪರಾಧÎ ಮತ್ತು "ಸಂಜ್ಞೇಯ ಮೊಕದ್ದಮೆ" ಎಂದರೆ, ಪೊಲೀಸ್ ಅಧಿಕಾರಿಯು ಮೊದಲನೇ ಅನುಸೂಚಿಗನುಸಾರವಾಗಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ವಾರಂಟ್ ಇಲ್ಲದೆ ದಸ್ತಗಿರಿ ಮಾಡಬಹುದಾದ ಯಾವುದೇ ಅಪರಾಧ ಮತ್ತು ಮೊಕದ್ದಮೆ;

(ಎಚ್) **"ದೂರು"** ಎಂದರೆ, ಯಾರೇ ಪರಿಚಿತ ಅಥವಾ ಅಪರಿಚಿತ ವ್ಯಕ್ತಿಯು ಒಂದು ಅಪರಾಧವೆಸಗಿದ್ದಾನೆಂದು ಮ್ಯಾಜಿಸ್ಟ್ರೇಟನಿಗೆ ಮೌಖಿಕವಾಗಿ ಅಥವಾ ಲಿಖಿತದಲ್ಲಿ, ಈ ಸಂಹಿತೆಯ ಮೇರೆಗೆ ಆ ಮ್ಯಾಜಿಸ್ಟ್ರೇಟನು ಕ್ರಮ ಕೈಗೊಳ್ಳಬೇಕೆಂದು ಉದ್ದೇಶಿಸಿ ಮಾಡಲಾದ ಯಾವುದೇ ಆಪಾದನೆ, ಆದರೆ ಅದು ಪೊಲೀಸ್ ವರದಿಯನ್ನು ಒಳಗೊಳ್ಳುವುದಿಲ್ಲ.

*ವಿವರಣೆ.-* ತನಿಖೆಯ ನಂತರ ಸಂಜ್ಞೇಯವಲ್ಲದ ಅಪರಾಧದ ಕೃತ್ಯವನ್ನು ತೋರಿಸುವಂಥ ವರದಿಯನ್ನು ಪೊಲೀಸ್ ಅಧಿಕಾರಿಯು ಮಾಡಿದ ಸಂದರ್ಭದಲ್ಲಿ, ಆ ವರದಿಯನ್ನು ದೂರು ಎಂದು ಭಾವಿಸತಕ್ಕದ್ದು ಮತ್ತು ಅಂಥ ವರದಿಯನ್ನು ಮಾಡಿದ ಪೊಲೀಸ್ ಅಧಿಕಾರಿಯನ್ನು ದೂರುದಾರ ಎಂದು ಭಾವಿಸತಕ್ಕದ್ದು;

(ಐ) "ವಿದ್ಯುನ್ಮಾನ ಸಂವಹನ" ಎಂದರೆ, ದೂರವಾಣಿ, ಮೊಬೈಲ್ ಫೋನು ಅಥವಾ ಇತರೆ ನಿಸ್ತಂತು ದೂರಸಂಪರ್ಕ ಸಾಧನ ಅಥವಾ ಕಂಪ್ಯೂಟರ್ ಅಥವಾ ಶ್ರವ್ಯ-ದೃಶ್ಯ ಸಾಧನ (ಪ್ಲೇಯರ್) ಅಥವಾ ಕ್ಯಾಮರಾ ಅಥವಾ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವಿದ್ಯುನ್ಮಾನ ಸಾಧನ ಅಥವಾ ವಿದ್ಯುನ್ಮಾನ ವಿಧಾನದ ಮೂಲಕ ಕಳುಹಿಸಿದ ಅಥವಾ ವರ್ಗಾಯಿಸಿದ (ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಅಥವಾ ಒಂದು ಸಾಧನದಿಂದ ಮತ್ತೊಂದು ಸಾಧನಕ್ಕೆ ಅಥವಾ ವ್ಯಕ್ತಿಯಿಂದ ಸಾಧನಕ್ಕೆ ಅಥವಾ ಸಾಧನದಿಂದ ವ್ಯಕ್ತಿಗೆ) ಯಾವುದೇ ಲಿಖಿತ, ಮೌಖಿಕ, ಸಚಿತ್ರ ಮಾಹಿತಿ ಅಥವಾ ವೀಡಿಯೋ ಚಿತ್ರೀಕರಿಸಿದ ವಿಷಯದ ಸಂವಹನ;

(ಜೆ) "ಉಚ್ಚ ನ್ಯಾಯಾಲಯ" ಎಂದರೆ:-

(i) ಯಾವುದೇ ರಾಜ್ಯದ ಸಂಬಂಧದಲ್ಲಿ, ಆ ರಾಜ್ಯದ ಉಚ್ಚ ನ್ಯಾಯಾಲಯ;

(ii) ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ, ಆ ಕ್ಷೇತ್ರಕ್ಕೆ ಯಾವ ರಾಜ್ಯದ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಕಾನೂನಿನ ಮೂಲಕ ವಿಸ್ತೃತಗೊಳಿಸಲಾಗಿದೆಯೋ ಆ ಉಚ್ಚ ನ್ಯಾಯಾಲಯ;

(iii) ಇತರ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವಲ್ಲದ ಆ ಕ್ಷೇತ್ರದ ಉನ್ನತ ಕ್ರಿಮಿನಲ್ ಅಪೀಲು ನ್ಯಾಯಾಲಯ;

(ಕೆ) "ವಿಚಾರಣೆ" ಎಂದರೆ, ಈ ಸಂಹಿತೆಯ ಮೇರೆಗೆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ನಡೆಸುವ ಅಧಿವಿಚಾರಣೆಯಲ್ಲದ ಪ್ರತಿಯೊಂದು ವಿಚಾರಣೆ;

(ಎಲ್) "ತನಿಖೆ" ಎಂಬುದು ಪೊಲೀಸ್ ಅಧಿಕಾರಿ ಅಥವಾ ಮ್ಯಾಜಿಸ್ಟ್ರೇಟನಿಂದ ಈ ಬಗ್ಗೆ ಅಧಿಕೃತನಾದ (ಮ್ಯಾಜಿಸ್ಟ್ರೇಟನಲ್ಲದ) ಇತರ ಯಾರೇ ವ್ಯಕ್ತಿಯು ಸಾಕ್ಷ್ಯವನ್ನು ಸಂಗ್ರಹಿಸಲು ಈ ಸಂಹಿತೆಯ ಮೇರೆಗೆ ನಡೆಸುವ ಎಲ್ಲ ವ್ಯವಹರಣೆಗಳನ್ನೂ ಒಳಗೊಳ್ಳುತ್ತದೆ.

*ವಿವರಣೆ.-* ವಿಶೇಷ ಅಧಿನಿಯಮದ ಯಾವುವೇ ಉಪಬಂಧಗಳು ಈ ಸಂಹಿತೆಯ ಉಪಬಂಧಗಳಿಗೆ ಅಸಂಗತವಾಗಿದ್ದಲ್ಲಿ ವಿಶೇಷ ಅಧಿನಿಯಮದ ಉಪಬಂಧಗಳು ಮಾನ್ಯವಾಗತಕ್ಕದ್ದು;

(ಎಂ) "ನ್ಯಾಯಿಕ ವ್ಯವಹರಣೆ" ಎಂಬುದು ಯಾವ ವ್ಯವಹರಣೆಯ ಕ್ರಮದಲ್ಲಿ ಕಾನೂನುಬದ್ಧವಾಗಿ ಪ್ರಮಾಣದ ಮೇಲೆ ಸಾಕ್ಷ್ಯವನ್ನು ತೆಗೆದುಕೊಳ್ಳಲಾಗಿದೆಯೋ ಅಥವಾ ತೆಗೆದುಕೊಳ್ಳಬಹುದೋ ಆ ಯಾವುದೇ ವ್ಯವಹರಣೆಯನ್ನು ಒಳಗೊಳ್ಳುತ್ತದೆ;

(ಎನ್) ನ್ಯಾಯಾಲಯಕ್ಕೆ ಅಥವಾ ಮ್ಯಾಜಿಸ್ಟ್ರೇಟನಿಗೆ ಸಂಬಂಧಿಸಿದ "ಸ್ಥಳೀಯ ಅಧಿಕಾರವ್ಯಾಪ್ತಿ" ಎಂದರೆ, ಈ ಸಂಹಿತೆಯ ಮೇರೆಗೆ ಯಾವ ಸ್ಥಳೀಯ ಪ್ರದೇಶದೊಳಗೆ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು, ಅದರ ಅಥವಾ ತನ್ನ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದೋ, ಆ ಸ್ಥಳೀಯ ಪ್ರದೇಶ ಮತ್ತು ಅಂಥ ಸ್ಥಳೀಯ ಪ್ರದೇಶವು, ಇಡೀ ರಾಜ್ಯವನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರಾಜ್ಯದ ಯಾವುದೇ ಭಾಗವನ್ನು ಒಳಗೊಂಡಿರಬಹುದು;

(ಓ) "ಸಂಜ್ಞೇಯವಲ್ಲದ ಅಪರಾಧ" ಮತ್ತು "ಸಂಜ್ಞೇಯವಲ್ಲದ ಮೊಕದ್ದಮೆ" ಎಂದರೆ, ಪೊಲೀಸ್ ಅಧಿಕಾರಿಯು ವಾರಂಟ್ ಇಲ್ಲದೆ ದಸ್ತಗಿರಿ ಮಾಡುವ ಅಧಿಕಾರವನ್ನು ಹೊಂದಿರದ ಅಪರಾಧ ಮತ್ತು ಮೊಕದ್ದಮೆ;

(ಪಿ) "ಅಧಿಸೂಚನೆ" ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿತವಾದ ಅಧಿಸೂಚನೆ;

(ಕ್ಯೂ) "ಅಪರಾಧ" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಿಂದ ದಂಡನೀಯವೆಂದು ಉಪಬಂಧಿಸಲಾದ ಯಾವುದೇ ಕೃತ್ಯ ಅಥವಾ ಲೋಪ ಮತ್ತು ಜಾನುವಾರು ಅತಿಕ್ರಮಣ ಪ್ರವೇಶ ಅಧಿನಿಯಮ, 1871 (1871 ರ 1)ರ 20ನೇ ಪ್ರಕರಣದ ಮೇರೆಗೆ ದೂರು ಕೊಡಬಹುದಾದ ಯಾವುದೇ ಕೃತ್ಯವನ್ನು ಅದು ಒಳಗೊಳ್ಳುತ್ತದೆ;

(ಆರ್) "ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿ" ಎಂಬುದು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಠಾಣೆಯಲ್ಲಿ ಹಾಜರಿಲ್ಲದಿರುವಾಗ ಅಥವಾ ಅನಾರೋಗ್ಯ ಅಥವಾ ಇತರ ಕಾರಣದಿಂದಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸಲು ಅಶಕ್ತನಾಗಿರುವಾಗ, ಅಂಥ ಅಧಿಕಾರಿಗೆ ದರ್ಜೆಯಲ್ಲಿ ಎರಡನೆಯವನಾಗಿದ್ದು ಪೊಲೀಸ್ ಠಾಣೆಯಲ್ಲಿ ಹಾಜರಿರುವ ಮತ್ತು ಪೊಲೀಸ್ ಕಾನ್ಸ್‌ಟೇಬಲ್‌ಗಿಂತ ಮೇಲಿನ

ದರ್ಜೆಯವನಾಗಿರುವ ಪೊಲೀಸ್ ಅಧಿಕಾರಿಯನ್ನು ಅಥವಾ ರಾಜ್ಯ ಸರ್ಕಾರವು ಹಾಗೆ ನಿರ್ದೇಶಿಸುವಾಗ, ಹಾಗೆ ಹಾಜರಿರುವ ಇತರ ಯಾರೇ ಪೊಲೀಸ್ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಎಸ್) "ಸ್ಥಳ" ಎಂಬುದು ಮನೆ, ಕಟ್ಟಡ, ಡೇರೆ, ವಾಹನ ಮತ್ತು ನೌಕೆಯನ್ನು ಒಳಗೊಳ್ಳುತ್ತದೆ;

(ಟಿ) "ಪೊಲೀಸ್ ವರದಿ" ಎಂದರೆ, 193ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪೊಲೀಸ್ ಅಧಿಕಾರಿಯು ಮ್ಯಾಜಿಸ್ಟ್ರೇಟನಿಗೆ ಕಳುಹಿಸಿದ ವರದಿ;

(ಯು) "ಪೊಲೀಸ್ ಠಾಣೆ" ಎಂದರೆ, ರಾಜ್ಯ ಸರ್ಕಾರದಿಂದ, ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಪೊಲೀಸ್ ಠಾಣೆ ಎಂದು ಘೋಷಿಸಲಾದ ಯಾವುದೇ ಸ್ಥಾನ ಅಥವಾ ಸ್ಥಳ ಮತ್ತು ಈ ಬಗ್ಗೆ ರಾಜ್ಯ ಸರ್ಕಾರದಿಂದ ನಿರ್ದಿಷ್ಟಪಡಿಸಿದ ಯಾವುದೇ ಸ್ಥಳೀಯ ಪ್ರದೇಶವನ್ನೂ ಅದು ಒಳಗೊಳ್ಳುತ್ತದೆ;

(ವಿ) "ಪಬ್ಲಿಕ್ ಪ್ರಾಸಿಕ್ಯೂಟರ್" ಎಂದರೆ, 18ನೇ ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ವ್ಯಕ್ತಿ ಮತ್ತು ಇದು ಪಬ್ಲಿಕ್ ಪ್ರಾಸಿಕ್ಯೂಟರನ ನಿರ್ದೇಶನಗಳ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಡಬ್ಲ್ಯೂ) "ಉಪ-ವಿಭಾಗ" ಎಂದರೆ, ಜಿಲ್ಲೆಯ ಉಪ-ವಿಭಾಗ;

(ಎಕ್ಸ್) ‘ಸಮನ್-ಮೊಕದ್ದಮೆ" ಎಂದರೆ, ಅಪರಾಧಕ್ಕೆ ಸಂಬಂಧಿಸಿದ ಮತ್ತು ವಾರಂಟ್ ಮೊಕದ್ದಮೆಯಲ್ಲದ ಮೊಕದ್ದಮೆ;

(ವೈ) ‘ಸಂತ್ರಸ್ತ ವ್ಯಕ್ತಿ’ ಎಂದರೆ, ಆಪಾದಿತ ವ್ಯಕ್ತಿಯ ಕೃತ್ಯ ಅಥವಾ ಲೋಪದ ಕಾರಣದಿಂದಾಗಿ ಯಾವ ವ್ಯಕ್ತಿಗೆ ಯಾವುದೇ ನಷ್ಟ ಅಥವಾ ಕ್ಷತಿ ಆಗಿದೆಯೋ ಆ ವ್ಯಕ್ತಿ ಮತ್ತು ಸಂತ್ರಸ್ತ ವ್ಯಕ್ತಿ ಎಂಬ ಪದವು, ಆತನ ಅಥವಾ ಆಕೆಯ ಪಾಲಕನನ್ನು ಅಥವಾ ಕಾನೂನುಸಮ್ಮತ ವಾರಸುದಾರನನ್ನು ಒಳಗೊಳ್ಳುತ್ತದೆ;

(ಝಡ್) "ವಾರಂಟ್-ಮೊಕದ್ದಮೆ" ಎಂದರೆ, ಮರಣ, ಆಜೀವ ಕಾರಾವಾಸ ಅಥವಾ ಎರಡು ವರ್ಷಗಳಿಗೆ ಮೀರುವ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದ ಮೊಕದ್ದಮೆ;

(2) ಇಲ್ಲಿ ಉಪಯೋಗಿಸಲಾಗಿರುವ ಮತ್ತು ಪರಿಭಾಷಿಸದೆ ಇರುವ ಆದರೆ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ದ 2) ಮತ್ತು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರಲ್ಲಿ ಪರಿಭಾಷಿಸಲಾಗಿರುವ ಪದಗಳು ಮತ್ತು ಪದಾವಳಿಗಳು ಅವುಗಳಿಗೆ ಆ ಅಧಿನಿಯಮ ಮತ್ತು ಸಂಹಿತೆಯಲ್ಲಿ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಉಲ್ಲೇಖಗಳ ಅರ್ಥೈಸುವಿಕೆ.-** (1) ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಮ್ಯಾಜಿಸ್ಟ್ರೇಟನಿಗೆ ಯಾವುದೇ ವಿಶೇಷಣೆಗಳಿಲ್ಲದೆ, ಯಾವುದೇ ಕಾನೂನಿನಲ್ಲಿ ಮಾಡಿದ ಯಾವುದೇ ಉಲ್ಲೇಖವು, ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಅಥವಾ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನನ್ನು ಕುರಿತು ಮಾಡಿದ ಯಾವುದೇ ಉಲ್ಲೇಖವನ್ನು ಅಂಥ ಪ್ರದೇಶದಲ್ಲಿ ತನಗಿರುವ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತಿರುವ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಸಂದರ್ಭಾನುಸಾರ ದ್ವಿತೀಯ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನನ್ನು ಕುರಿತು ಮಾಡಿದ ಉಲ್ಲೇಖವೆಂದು ಅರ್ಥ ಮಾಡತಕ್ಕದ್ದು.

(2) ಈ ಸಂಹಿತೆಯ ಅಲ್ಲದ ಯಾವುದೇ ಇತರ ಕಾನೂನಿನ ಮೇರೆಗೆ ಮ್ಯಾಜಿಸ್ಟ್ರೇಟನು ನಿರ್ವಹಿಸಬಹುದಾದ ಪ್ರಕಾರ್ಯಗಳು,-

(ಎ) ಸಾಕ್ಷ್ಯದ ಮೌಲ್ಯಮಾಪನವನ್ನು ಅಥವಾ ಪರಿಶೋಧನೆಯನ್ನು ಅಥವಾ ಯಾವುದೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಅಥವಾ ದಂಡಕ್ಕೆ ಗುರಿಮಾಡುವ ಅಥವಾ ತನಿಖೆ, ವಿಚಾರಣೆ ಅಥವಾ ಅಧಿವಿಚಾರಣೆಯ ಕಾಲದಲ್ಲಿ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸುವ ಅಥವಾ ಅಧಿವಿಚಾರಣೆಗಾಗಿ ಯಾವುದೇ ನ್ಯಾಯಾಲಯದ ಮುಂದೆ ಆತನನ್ನು ಕಳುಹಿಸುವ ಯಾವುದೇ ತೀರ್ಮಾನವನ್ನು ರೂಪಿಸುವುದನ್ನು ಒಳಗೊಳ್ಳುವ ವಿಷಯಗಳಿಗೆ ಸಂಬಂಧಿಸಿರುವಲ್ಲಿ, ಅವುಗಳನ್ನು ಈ ಸಂಹಿತೆಯ ಉಪಬಂಧಗಳಿಗೊಳಪಟ್ಟು ನ್ಯಾಯಿಕ ಮ್ಯಾಜಿಸ್ಟ್ರೇಟನು ಚಲಾಯಿಸತಕ್ಕದ್ದು; ಅಥವಾ

(ಬಿ) ಲೈಸೆನ್ಸ್ ಕೊಡುವಿಕೆ, ಲೈಸೆನ್ಸಿನ ಅಮಾನತು ಅಥವಾ ರದ್ದುಗೊಳಿಸುವಿಕೆ, ಪ್ರಾಸಿಕ್ಯೂಷನ್ ಮಂಜೂರು ಮಾಡುವಿಕೆ ಅಥವಾ ಪ್ರಾಸಿಕ್ಯೂಷನನ್ನು ಹಿಂತೆಗೆದುಕೊಳ್ಳುವಿಕೆಯಂಥ ಆಡಳಿತಾತ್ಮಕ ಅಥವಾ ಕಾರ್ಯನಿರ್ವಾಹಕ ಸ್ವರೂಪದ ವಿಷಯಗಳಿಗೆ ಸಂಬಂಧಿಸಿರುವಲ್ಲಿ ಆ ಪ್ರಕಾರ್ಯಗಳು, (ಎ) ಖಂಡದ ಉಪಬಂಧಗಳಿಗೊಳಪಟ್ಟು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಚಲಾಯಿಸತಕ್ಕದ್ದು.

**4. ಭಾರತೀಯ ನ್ಯಾಯ ಸಂಹಿತೆ, 2023 ಮತ್ತು ಇತರ ಕಾನೂನಿನ ಮೇರೆಗಿನ ಅಪರಾಧಗಳ ಅಧಿವಿಚಾರಣೆ.-** (1) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಮೇರೆಗಿನ ಎಲ್ಲ ಅಪರಾಧಗಳನ್ನು ಇದರಲ್ಲಿ ಈ ಮುಂದಿನ ಉಪಬಂಧಗಳಿಗನುಸಾರವಾಗಿ ತನಿಖೆ ಮಾಡತಕ್ಕದ್ದು, ವಿಚಾರಣೆ ಮಾಡತಕ್ಕದ್ದು, ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಅನ್ಯಥಾ ವ್ಯವಹರಿಸತಕ್ಕದ್ದು.

(2) ಇತರ ಯಾವುದೇ ಕಾನೂನಿನ ಮೇರೆಗಿನ ಎಲ್ಲ ಅಪರಾಧಗಳನ್ನು, ಅವೇ ಉಪಬಂಧಗಳಿಗನುಸಾರವಾಗಿ ತನಿಖೆ ಮಾಡತಕ್ಕದ್ದು, ವಿಚಾರಣೆ ಮಾಡತಕ್ಕದ್ದು, ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಅನ್ಯಥಾ ವ್ಯವಹರಿಸತಕ್ಕದ್ದು, ಆದರೆ ಅಂಥ ಅಪರಾಧಗಳನ್ನು ತನಿಖೆ ಮಾಡುವ, ವಿಚಾರಣೆ ಮಾಡುವ, ಅಧಿವಿಚಾರಣೆ ಮಾಡುವ ಮತ್ತು ಅನ್ಯಥಾ ವ್ಯವಹರಿಸುವ ರೀತಿ ಅಥವಾ ಸ್ಥಳವನ್ನು ವಿನಿಯಮಿಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಕ್ಕೆ ಅದು ಒಳಪಟ್ಟಿರತಕ್ಕದ್ದು.

**5. ಉಳಿಸುವಿಕೆ.-** ಈ ಸಂಹಿತೆಯಲ್ಲಿ ಇರುವುದಾವುದೂ, ತದ್ವಿರುದ್ಧವಾದ ನಿರ್ದಿಷ್ಟ ಉಪಬಂಧವು ಇಲ್ಲದಿರುವಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಶೇಷ ಅಥವಾ ಸ್ಥಳೀಯ ಕಾನೂನಿನ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಿಂದ ಪ್ರದತ್ತವಾದ ಯಾವುದೇ ವಿಶೇಷ ಅಧಿಕಾರವ್ಯಾಪ್ತಿಯ ಅಥವಾ ಅಧಿಕಾರದ ಮೇಲೆ ಅಥವಾ ನಿಯಮಿಸಲಾದ ಪ್ರಕ್ರಿಯೆಯ ವಿಶೇಷ ವಿಧಾನದ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡತಕ್ಕದ್ದಲ್ಲ.

## ಅಧ್ಯಾಯ II

## ಕ್ರಿಮಿನಲ್ ನ್ಯಾಯಾಲಯಗಳ ಮತ್ತು ಕಾರ್ಯಾಲಯಗಳ ರಚನೆ

**6. ಕ್ರಿಮಿನಲ್ ನ್ಯಾಯಾಲಯಗಳ ದರ್ಜೆಗಳು.-** ಉಚ್ಚ ನ್ಯಾಯಾಲಯಗಳು ಮತ್ತು ಈ ಸಂಹಿತೆಯಲ್ಲದ ಯಾವುದೇ ಇತರ ಕಾನೂನಿನ ಮೇರೆಗೆ ರಚಿತವಾದ ನ್ಯಾಯಾಲಯಗಳಲ್ಲದೇ, ಪ್ರತಿಯೊಂದು ರಾಜ್ಯದಲ್ಲಿ ಈ ಕೆಳಗಿನ ದರ್ಜೆಗಳ ಕ್ರಿಮಿನಲ್ ನ್ಯಾಯಾಲಯಗಳಿರತಕ್ಕದ್ದು, ಎಂದರೆ:-

(i) ಸೆಷನ್ ನ್ಯಾಯಾಲಯಗಳು;

(ii) ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರು;

(iii) ದ್ವಿತೀಯ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರು; ಮತ್ತು

(iv) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು.

**7. ಪ್ರಾದೇಶಿಕ ವಿಭಾಗಗಳು.-** (1) ಪ್ರತಿಯೊಂದು ರಾಜ್ಯವೂ ಒಂದು ಸೆಷನ್ಸ್ ವಿಭಾಗವಾಗಿರತಕ್ಕದ್ದು ಅಥವಾ ಸೆಷನ್ಸ್ ವಿಭಾಗಗಳನ್ನು ಹೊಂದಿರತಕ್ಕದ್ದು ಮತ್ತು ಪ್ರತಿಯೊಂದು ಸೆಷನ್ಸ್ ವಿಭಾಗವು ಈ ಸಂಹಿತೆಯ ಉದ್ದೇಶಗಳಿಗಾಗಿ ಜಿಲ್ಲೆಯಾಗಿರತಕ್ಕದ್ದು ಅಥವಾ ಜಿಲ್ಲೆಗಳನ್ನು ಹೊಂದಿರತಕ್ಕದ್ದು.

(2) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಂಥ ವಿಭಾಗಗಳ ಮತ್ತು ಜಿಲ್ಲೆಗಳ ಪರಿಮಿತಿಗಳನ್ನು ಅಥವಾ ಸಂಖ್ಯೆಯನ್ನು ಬದಲಾಯಿಸಬಹುದು.

(3) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಯಾವುದೇ ಜಿಲ್ಲೆಯನ್ನು ಉಪವಿಭಾಗಗಳಾಗಿ ವಿಭಾಗಿಸಬಹುದು ಮತ್ತು ಅಂಥ ಉಪವಿಭಾಗಗಳ ಪರಿಮಿತಿಗಳನ್ನು ಅಥವಾ ಸಂಖ್ಯೆಯನ್ನು ಬದಲಾಯಿಸಬಹುದು.

(4) ಈ ಸಂಹಿತೆಯ ಪ್ರಾರಂಭದಲ್ಲಿ ರಾಜ್ಯದಲ್ಲಿದ್ದ ಸೆಷನ್ಸ್ ವಿಭಾಗಗಳು, ಜಿಲ್ಲೆಗಳು ಮತ್ತು ಉಪವಿಭಾಗಗಳನ್ನು ಈ ಪ್ರಕರಣದ ಮೇರೆಗೆ ರೂಪಿಸಲಾಗಿದೆಯೆಂದು ಭಾವಿಸತಕ್ಕದ್ದು.

**8. ಸೆಷನ್ ನ್ಯಾಯಾಲಯ.-** (1) ಪ್ರತಿಯೊಂದು ಸೆಷನ್ಸ್ ವಿಭಾಗಕ್ಕೂ ರಾಜ್ಯ ಸರ್ಕಾರವು ಒಂದು ಸೆಷನ್ ನ್ಯಾಯಾಲಯವನ್ನು ಸ್ಥಾಪಿಸತಕ್ಕದ್ದು.

(2) ಉಚ್ಚ ನ್ಯಾಯಾಲಯದಿಂದ ನೇಮಕವಾಗುವ ನ್ಯಾಯಾಧೀಶನು ಪ್ರತಿಯೊಂದು ಸೆಷನ್ ನ್ಯಾಯಾಲಯದ ಪೀಠಾಸೀನ ನ್ಯಾಯಾಧೀಶನಾಗಿರತಕ್ಕದ್ದು.

(3) ಸೆಷನ್ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಚಲಾಯಿಸಲು ಅಪರ ಸೆಷನ್ಸ್ ನ್ಯಾಯಾಧೀಶರನ್ನು ಉಚ್ಚ ನ್ಯಾಯಾಲಯವು ನೇಮಕ ಮಾಡಬಹುದು.

(4) ಒಂದು ಸೆಷನ್ಸ್ ವಿಭಾಗದ ಸೆಷನ್ಸ್ ನ್ಯಾಯಾಧೀಶರನ್ನು ಉಚ್ಚ ನ್ಯಾಯಾಲಯವು ಇನ್ನೊಂದು ವಿಭಾಗದ ಒಬ್ಬ ಅಪರ ಸೆಷನ್ಸ್ ನ್ಯಾಯಾಧೀಶರನ್ನಾಗಿಯೂ ನೇಮಕ ಮಾಡಬಹುದು ಮತ್ತು ಅಂಥ ಸಂದರ್ಭದಲ್ಲಿ ಅವರು ಉಚ್ಚ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಆ ಇನ್ನೊಂದು ವಿಭಾಗದ ಅಂಥ ಸ್ಥಳ ಅಥವಾ ಸ್ಥಳಗಳಲ್ಲಿ ಮೊಕದ್ದಮೆಗಳ ಇತ್ಯರ್ಥಕ್ಕಾಗಿ ಉಪವೇಶನ ನಡೆಸಬಹುದು.

(5) ಸೆಷನ್ಸ್ ನ್ಯಾಯಾಧೀಶನ ಪದವು ಖಾಲಿ ಇರುವಲ್ಲಿ, ಉಚ್ಚ ನ್ಯಾಯಾಲಯವು ಆ ಸೆಷನ್ಸ್ ವಿಭಾಗದಲ್ಲಿರುವ ಅಪರ ಸೆಷನ್ಸ್ ನ್ಯಾಯಾಧೀಶನಿಂದ ಅಥವಾ ಅಪರ ಸೆಷನ್ಸ್ ನ್ಯಾಯಾಧೀಶ ಇಲ್ಲದಿದ್ದರೆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಂದ, ಅಂಥ ಸೆಷನ್ ನ್ಯಾಯಾಲಯದ ಮುಂದೆ ಸಲ್ಲಿಸಿದ್ದ ಅಥವಾ ಸಲ್ಲಿಸಬಹುದಾದ ಅಥವಾ ಇತ್ಯರ್ಥವಾಗಲು ಬಾಕಿಯಿರುವ ಯಾವುದೇ ತುರ್ತು ಅರ್ಜಿಯ ವಿಲೆ ಮಾಡುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡಬಹುದು ಮತ್ತು ಅಂಥ ಪ್ರತಿಯೊಬ್ಬ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟನು ಅಂಥ ಯಾವುದೇ ಅರ್ಜಿಯನ್ನು ಕುರಿತು ವ್ಯವಹರಿಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(6) ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳ ಅಥವಾ ಸ್ಥಳಗಳಲ್ಲಿ ಸೆಷನ್ ನ್ಯಾಯಾಲಯವು ಸಾಮಾನ್ಯವಾಗಿ ತನ್ನ ಉಪವೇಶನ ನಡೆಸತಕ್ಕದ್ದು, ಆದರೆ ಯಾವುದೇ ನಿರ್ದಿಷ್ಟ ಮೊಕದ್ದಮೆಯಲ್ಲಿ ಸೆಷನ್ಸ್ ವಿಭಾಗದಲ್ಲಿನ ಇತರ ಯಾವುದೇ ಸ್ಥಳದಲ್ಲಿ ತನ್ನ ಉಪವೇಶನ ನಡೆಸುವುದು ಪಕ್ಷಕಾರರಿಗೂ ಮತ್ತು ಸಾಕ್ಷಿದಾರರಿಗೂ

ಸಾಮಾನ್ಯವಾಗಿ ಅನುಕೂಲವಾಗುವುದೆಂದು ಸೆಷನ್ ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಪ್ರಾಸಿಕ್ಯೂಷನ್ ಮತ್ತು ಆಪಾದಿತರ ಒಪ್ಪಿಗೆಯ ಮೇಲೆ ಮೊಕದ್ದಮೆಯ ಇತ್ಯರ್ಥಕ್ಕಾಗಿ ಅಥವಾ ಅದರಲ್ಲಿರುವ ಯಾವುದೇ ಸಾಕ್ಷಿಯ ಅಥವಾ ಸಾಕ್ಷಿದಾರರ ವಿಚಾರಣೆಗಾಗಿ ಆ ಸ್ಥಳದಲ್ಲಿ ಉಪವೇಶನ ನಡೆಸತಕ್ಕದ್ದು.

(7) ಸೆಷನ್ಸ್ ನ್ಯಾಯಾಧೀಶನು ಕಾಲಕಾಲಕ್ಕೆ ಅಪರ ಸೆಷನ್ಸ್ ನ್ಯಾಯಾಧೀಶರ ನಡುವೆ ಕಾರ್ಯಕಲಾಪಗಳ ಹಂಚಿಕೆಗಾಗಿ ಈ ಸಂಹಿತೆಗೆ ಸುಸಂಗತವಾದಂಥ ಆದೇಶಗಳನ್ನು ಮಾಡಬಹುದು.

(8) ಸೆಷನ್ಸ್ ನ್ಯಾಯಾಧೀಶನು ತನ್ನ ಅನುಪಸ್ಥಿತಿಯ ಸಂದರ್ಭದಲ್ಲಿ ಅಥವಾ ಕಾರ್ಯನಿರ್ವಹಿಸಲು ಸಾಧ್ಯವಾಗದಿರುವ ಸಂದರ್ಭದಲ್ಲಿ ಕಾಲಕಾಲಕ್ಕೆ ಅಪರ ಸೆಷನ್ಸ್ ನ್ಯಾಯಾಧೀಶನು ಅಥವಾ ಅಪರ ಸೆಷನ್ಸ್ ನ್ಯಾಯಾಧೀಶನು ಇಲ್ಲದಿದ್ದಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಯಾವುದೇ ತುರ್ತು ಅರ್ಜಿಯನ್ನು ವಿಲೆ ಮಾಡುವುದಕ್ಕಾಗಿಯೂ ಸಹ ಅವಕಾಶ ಕಲ್ಪಿಸಬಹುದು ಮತ್ತು ಅಂಥ ಅರ್ಜಿಯ ಬಗ್ಗೆ ವ್ಯವಹರಿಸುವ ಅಧಿಕಾರವ್ಯಾಪ್ತಿಯನ್ನು ಅಂಥ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ಹೊಂದಿದ್ದಾನೆಂದು ಭಾವಿಸತಕ್ಕದ್ದು.

*ವಿವರಣೆ*.- ಈ ಸಂಹಿತೆಯ ಉದ್ದೇಶಗಳಿಗಾಗಿ, "ನೇಮಕಾತಿ" ಎಂಬುದರಲ್ಲಿ ಒಕ್ಕೂಟ ಅಥವಾ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ ಯಾವುದೇ ಸೇವೆಗೆ ಅಥವಾ ಹುದ್ದೆಗೆ ಒಬ್ಬ ವ್ಯಕ್ತಿಯನ್ನು ಯಾವುದೇ ಕಾನೂನಿನ ಮೇರೆಗೆ ನೇಮಕ, ಪದನಿಯುಕ್ತಿ ಅಥವಾ ಪದೋನ್ನತಿಯನ್ನು ಸರ್ಕಾರವು ಮಾಡುವುದು ಅಗತ್ಯವಾಗಿದ್ದರೆ, ಸರ್ಕಾರವು ಹಾಗೆ ಮೊದಲ ಸಲ ಮಾಡಿದ ಅಂಥ ನೇಮಕ, ಪದನಿಯುಕ್ತಿ ಅಥವಾ ಪದೋನ್ನತಿಯು ಒಳಗೊಳ್ಳುವುದಿಲ್ಲ.

**9. ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು.-** (1) ಪ್ರತಿಯೊಂದು ಜಿಲ್ಲೆಯಲ್ಲಿ, ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿದ ತರುವಾಯ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳನ್ನು ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿ ಸ್ಥಾಪಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಯಾವುದೇ ಸ್ಥಳೀಯ ಪ್ರದೇಶಕ್ಕಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪ್ರಥಮ ದರ್ಜೆ ಅಥವಾ ದ್ವಿತೀಯ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ವಿಶೇಷ ನ್ಯಾಯಾಲಯಗಳನ್ನು ಯಾವುದೇ ನಿರ್ದಿಷ್ಟ ಮೊಕದ್ದಮೆ ಅಥವಾ ನಿರ್ದಿಷ್ಟ ವರ್ಗದ ಮೊಕದ್ದಮೆಗಳನ್ನು ಅಧಿವಿಚಾರಣೆ ಮಾಡಲು ಸ್ಥಾಪಿಸಬಹುದು ಮತ್ತು ಅಂಥ ಯಾವುದೇ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿರುವಲ್ಲಿ, ಆ ಸ್ಥಳೀಯ ಪ್ರದೇಶದಲ್ಲಿನ ಇತರೆ ಯಾವುದೇ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು, ಅಂಥ ನ್ಯಾಯಿಕ ಮ್ಯಾಜಿಸ್ಟ್ರೇಟನ ವಿಶೇಷ ನ್ಯಾಯಾಲಯವನ್ನು ಯಾವ ಮೊಕದ್ದಮೆ ಅಥವಾ ಯಾವ ವರ್ಗದ ಮೊಕದ್ದಮೆಗಳಿಗಾಗಿ ಅಧಿವಿಚಾರಣೆ ನಡೆಸಲು ಸ್ಥಾಪಿಸಲಾಗಿತ್ತೋ ಆ ಯಾವುದೇ ಮೊಕದ್ದಮೆ ಅಥವಾ ವರ್ಗದ ಮೊಕದ್ದಮೆಗಳನ್ನು ಅಧಿವಿಚಾರಣೆ ನಡೆಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ಅಂಥ ನ್ಯಾಯಾಲಯಗಳ ಪೀಠಾಸೀನಾಧಿಕಾರಿಗಳನ್ನು ಉಚ್ಚ ನ್ಯಾಯಾಲಯವು ನೇಮಕ ಮಾಡತಕ್ಕದ್ದು.

(3) ಉಚ್ಚ ನ್ಯಾಯಾಲಯವು, ಅದು ತನಗೆ ಯುಕ್ತ ಅಥವಾ ಅವಶ್ಯವೆಂದು ಕಂಡುಬಂದಾಗಲೆಲ್ಲಾ ಪ್ರಥಮ ದರ್ಜೆ ಅಥವಾ ದ್ವಿತೀಯ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು, ಸಿವಿಲ್ ನ್ಯಾಯಾಲಯದ ನ್ಯಾಯಾಧೀಶನಾಗಿ ಕೆಲಸ ಮಾಡುತ್ತಿರುವ ರಾಜ್ಯದ ನ್ಯಾಯಿಕ ಸೇವೆಯಲ್ಲಿರುವವನಿಗೆ ಪ್ರದಾನ ಮಾಡಬಹುದು.

**10. ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಮತ್ತು ಅಪರ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್, ಮುಂತಾದವರು.-** (1) ಉಚ್ಚ ನ್ಯಾಯಾಲಯವು, ಪ್ರತಿಯೊಂದು ಜಿಲ್ಲೆಯಲ್ಲಿ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನನ್ನಾಗಿ ನೇಮಕ ಮಾಡತಕ್ಕದ್ದು.

(2) ಉಚ್ಚ ನ್ಯಾಯಾಲಯವು ಪ್ರಥಮ ದರ್ಜೆಯ ಯಾರೇ ನ್ಯಾಯಿಕ ಮ್ಯಾಜಿಸ್ಟ್ರೇಟನನ್ನು ಅಪರ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನನ್ನಾಗಿ ನೇಮಕ ಮಾಡಬಹುದು ಮತ್ತು ಅಂಥ ಮ್ಯಾಜಿಸ್ಟ್ರೇಟನು ಉಚ್ಚ ನ್ಯಾಯಾಲಯವು ನಿರ್ದೇಶಿಸಬಹುದಾದಂತೆ ಈ ಸಂಹಿತೆಯ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಉಚ್ಚ ನ್ಯಾಯಾಲಯವು ಪ್ರಥಮ ದರ್ಜೆಯ ಯಾರೇ ನ್ಯಾಯಿಕ ಮ್ಯಾಜಿಸ್ಟ್ರೇಟನನ್ನು, ಯಾವುದೇ ಉಪವಿಭಾಗದಲ್ಲಿ, ಆ ಉಪವಿಭಾಗದ ನ್ಯಾಯಿಕ ಮ್ಯಾಜಿಸ್ಟ್ರೇಟನೆಂದು ನಾಮನಿರ್ದೇಶನ ಮಾಡಬಹುದು ಮತ್ತು ಸಂದರ್ಭವು ಅಗತ್ಯಪಡಿಸಿದಂತೆ ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಜವಾಬ್ದಾರಿಗಳಿಂದ ಆತನನ್ನು ಮುಕ್ತಗೊಳಿಸಬಹುದು.

(4) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟು ಪ್ರತಿಯೊಬ್ಬ ಉಪವಿಭಾಗ ನ್ಯಾಯಿಕ ಮ್ಯಾಜಿಸ್ಟ್ರೇಟನೂ ಸಹ, ಉಚ್ಚ ನ್ಯಾಯಾಲಯವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಉಪವಿಭಾಗದಲ್ಲಿ (ಅಪರ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್‌ರಲ್ಲದ) ನ್ಯಾಯಿಕ ಮ್ಯಾಜಿಸ್ಟ್ರೇಟನ ಕಾರ್ಯದ ಮೇಲೆ ಮೇಲ್ವಿಚಾರಣೆಯ ಮತ್ತು ನಿಯಂತ್ರಣದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

**11. ವಿಶೇಷ ನ್ಯಾಯಿಕ ಮ್ಯಾಜಿಸ್ಟ್ರೇಟರು.-** (1) ಉಚ್ಚ ನ್ಯಾಯಾಲಯವು, ಯಾವುದೇ ಸ್ಥಳೀಯ ಪ್ರದೇಶದಲ್ಲಿ ನಿರ್ದಿಷ್ಟ ಮೊಕದ್ದಮೆಗಳ ಅಥವಾ ನಿರ್ದಿಷ್ಟ ವರ್ಗದ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಪ್ರಥಮ ದರ್ಜೆ ಅಥವಾ ದ್ವಿತೀಯ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ, ಈ ಸಂಹಿತೆಯ ಮೂಲಕ ಅಥವಾ ಮೇರೆಗೆ ಪ್ರದಾನ ಮಾಡಿದ ಅಥವಾ ಮಾಡಬಹುದಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಸರ್ಕಾರದ ಅಧೀನದಲ್ಲಿ ಯಾವುದೇ ಹುದ್ದೆಯನ್ನು ಹೊಂದಿರುವ ಅಥವಾ ಹೊಂದಿದ್ದ ಯಾರೇ ವ್ಯಕ್ತಿಗೆ ಪ್ರದಾನ ಮಾಡುವಂತೆ ಕೇಂದ್ರ ಅಥವಾ ರಾಜ್ಯ ಸರ್ಕಾರವು ಕೋರಿಕೊಂಡರೆ ಹಾಗೆ ಮಾಡಬಹುದು:

ಪರಂತು, ಉಚ್ಚ ನ್ಯಾಯಾಲಯವು ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಕಾನೂನಿನ ವ್ಯವಹರಣೆಗಳಿಗೆ ಸಂಬಂಧಿಸಿದಂಥ ಅರ್ಹತೆ ಅಥವಾ ಅನುಭವವನ್ನು ಅವನು ಹೊಂದಿರುವ ಹೊರತು ಯಾವುದೇ ಅಂಥ ಅಧಿಕಾರವನ್ನು ಆ ವ್ಯಕ್ತಿಗೆ ಪ್ರದಾನ ಮಾಡತಕ್ಕದ್ದಲ್ಲ.

(2) ಅಂಥ ಮ್ಯಾಜಿಸ್ಟ್ರೇಟನನ್ನು ವಿಶೇಷ ನ್ಯಾಯಿಕ ಮ್ಯಾಜಿಸ್ಟ್ರೇಟ್ ಎಂದು ಕರೆಯತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಒಂದು ಬಾರಿಗೆ ಒಂದು ವರ್ಷಕ್ಕೆ ಮೀರದ ಅವಧಿಗೆ ಆತನನ್ನು ನೇಮಕ ಮಾಡತಕ್ಕದ್ದು.

**12. ನ್ಯಾಯಿಕ ಮ್ಯಾಜಿಸ್ಟ್ರೇಟರ ಸ್ಥಳೀಯ ಅಧಿಕಾರವ್ಯಾಪ್ತಿ.-** (1) ಉಚ್ಚ ನ್ಯಾಯಾಲಯದ ನಿಯಂತ್ರಣಕ್ಕೊಳಪಟ್ಟು, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು, 9ನೇ ಪ್ರಕರಣ ಅಥವಾ 11ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮ್ಯಾಜಿಸ್ಟ್ರೇಟನಿಗೆ ಈ ಸಂಹಿತೆಯ ಮೇರೆಗೆ ಅನುಕ್ರಮವಾಗಿ ವಹಿಸಿಕೊಟ್ಟ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಬಹುದಾದ ಪ್ರದೇಶಗಳ ಸ್ಥಳೀಯ ಪರಿಮಿತಿಗಳನ್ನು ಕಾಲಕಾಲಕ್ಕೆ ನಿರ್ಧರಿಸಬಹುದು:

ಪರಂತು, ವಿಶೇಷ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಅದನ್ನು ಯಾವ ಸ್ಥಳೀಯ ಪ್ರದೇಶಕ್ಕಾಗಿ ಸ್ಥಾಪಿಸಲಾಗಿದೆಯೋ ಆ ಪ್ರದೇಶದೊಳಗಿನ ಯಾವುದೇ ಸ್ಥಳದಲ್ಲಿ ತನ್ನ ಉಪವೇಶನ ನಡೆಸಬಹುದು.

(2) ಅಂಥ ನಿರ್ಧರಣೆಯ ಮೂಲಕ ಅನ್ಯಥಾ ಉಪಬಂಧಿಸಲಾದುದನ್ನು ಹೊರತುಪಡಿಸಿ ಅಂಥ ಪ್ರತಿಯೊಬ್ಬ ಮ್ಯಾಜಿಸ್ಟ್ರೇಟನ ಅಧಿಕಾರವ್ಯಾಪ್ತಿ ಮತ್ತು ಅಧಿಕಾರಗಳು ಇಡೀ ಜಿಲ್ಲೆಗೆ ವ್ಯಾಪ್ತವಾಗತಕ್ಕದ್ದು.

(3) 9ನೇ ಪ್ರಕರಣ ಅಥವಾ 11ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮ್ಯಾಜಿಸ್ಟ್ರೇಟನ ಸ್ಥಳೀಯ ಅಧಿಕಾರವ್ಯಾಪ್ತಿಯು, ಅವನು ಸಾಮಾನ್ಯವಾಗಿ ನ್ಯಾಯಾಲಯವನ್ನು ನಡೆಸುವಂಥ ಜಿಲ್ಲಾ ಪ್ರದೇಶವನ್ನು ಮೀರಿದ ಪ್ರದೇಶಕ್ಕೆ ವಿಸ್ತರಿಸಿರುವಲ್ಲಿ, ಈ ಸಂಹಿತೆಯಲ್ಲಿ ಸೆಷನ್ ನ್ಯಾಯಾಲಯ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಮಾಡಿದ ಯಾವುದೇ ಉಲ್ಲೇಖವನ್ನು ಅಂಥ ಮ್ಯಾಜಿಸ್ಟ್ರೇಟನಿಗೆ ಸಂಬಂಧಪಟ್ಟಂತೆ ಅವನ ಸ್ಥಳೀಯ ಅಧಿಕಾರವ್ಯಾಪ್ತಿಯಲ್ಲಿರುವ ಇಡೀ ಪ್ರದೇಶದಾದ್ಯಂತ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಸದರಿ ಜಿಲ್ಲೆಗೆ ಸಂಬಂಧಪಟ್ಟಂತೆ ಸಂದರ್ಭಾನುಸಾರ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವ ಸೆಷನ್ ನ್ಯಾಯಾಲಯಕ್ಕೆ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**13. ನ್ಯಾಯಿಕ ಮ್ಯಾಜಿಸ್ಟ್ರೇಟರ ಅಧೀನತೆ.-** (1) ಪ್ರತಿಯೊಬ್ಬ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಸೆಷನ್ಸ್ ನ್ಯಾಯಾಧೀಶನಿಗೆ ಅಧೀನನಾಗಿರತಕ್ಕದ್ದು ಮತ್ತು ಪ್ರತಿಯೊಬ್ಬ ಇತರ ನ್ಯಾಯಿಕ ಮ್ಯಾಜಿಸ್ಟ್ರೇಟನು, ಸೆಷನ್ಸ್ ನ್ಯಾಯಾಧೀಶನ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಧೀನನಾಗಿರತಕ್ಕದ್ದು.

(2) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ತನಗೆ ಅಧೀನರಾಗಿರುವ ನ್ಯಾಯಿಕ ಮ್ಯಾಜಿಸ್ಟ್ರೇಟರಲ್ಲಿ, ಕಾರ್ಯಕಲಾಪಗಳನ್ನು ಹಂಚಿಕೆ ಮಾಡುವ ಬಗ್ಗೆ ಈ ಸಂಹಿತೆಗೆ ಸುಸಂಗತವಾಗಿರುವ ನಿಯಮಗಳನ್ನು ಕಾಲಕಾಲಕ್ಕೆ ರಚಿಸಬಹುದು ಅಥವಾ ವಿಶೇಷ ಆದೇಶಗಳನ್ನು ಮಾಡಬಹುದು.

**14. ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು.-** (1) ರಾಜ್ಯ ಸರ್ಕಾರವು, ಪ್ರತಿಯೊಂದು ಜಿಲ್ಲೆಯಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರನ್ನಾಗಿ ನೇಮಕ ಮಾಡಬಹುದು ಮತ್ತು ಅವರಲ್ಲಿ ಒಬ್ಬನನ್ನು ಜಿಲ್ಲಾ ಮ್ಯಾಜಿಸ್ಟ್ರೇಟನನ್ನಾಗಿ ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನನ್ನು ಅಪರ ಜಿಲ್ಲಾ ಮ್ಯಾಜಿಸ್ಟ್ರೇಟನನ್ನಾಗಿ ನೇಮಕ ಮಾಡಬಹುದು ಮತ್ತು ಅಂಥ ಮ್ಯಾಜಿಸ್ಟ್ರೇಟನು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತೆ ಈ ಸಂಹಿತೆಯ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನ ಅಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಜಿಲ್ಲಾ ಮ್ಯಾಜಿಸ್ಟ್ರೇಟನ ಪದವು ಖಾಲಿಯಾಗುವುದರ ಪರಿಣಾಮವಾಗಿ ಜಿಲ್ಲೆಯ ಕಾರ್ಯನಿರ್ವಾಹಕ ಆಡಳಿತಕ್ಕಾಗಿ ಹಂಗಾಮಿಯಾಗಿ ಉತ್ತರವರ್ತಿಯಾಗುವ ಯಾರೇ ಅಧಿಕಾರಿಯು ರಾಜ್ಯ ಸರ್ಕಾರದ ಆದೇಶವು ಬರುವವರೆಗೆ, ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಈ ಸಂಹಿತೆಯ ಮೂಲಕ ಅನುಕ್ರಮವಾಗಿ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ವಿಧಿಸಲಾದ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(4) ರಾಜ್ಯ ಸರ್ಕಾರವು, ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನನ್ನು ಉಪವಿಭಾಗದ ಪ್ರಭಾರದಲ್ಲಿ ಇರಿಸಬಹುದು ಮತ್ತು ಸಂದರ್ಭವು ಅಗತ್ಯಪಡಿಸಿದಂತೆ ಅವನನ್ನು ಪ್ರಭಾರದಿಂದ ಮುಕ್ತಗೊಳಿಸಬಹುದು ಮತ್ತು ಹಾಗೆ ಉಪವಿಭಾಗದ ಪ್ರಭಾರದಲ್ಲಿರಿಸಿದ ಮ್ಯಾಜಿಸ್ಟ್ರೇಟನನ್ನು ಉಪವಿಭಾಗೀಯ ಮ್ಯಾಜಿಸ್ಟ್ರೇಟನೆಂದು ಕರೆಯತಕ್ಕದ್ದು.

(5) ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮತ್ತು ವಿಧಿಸುವುದು ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿಯಂತ್ರಣಕ್ಕೆ ಮತ್ತು ನಿರ್ದೇಶನಗಳಿಗೆ ಒಳಪಟ್ಟು, (4)ನೇ ಉಪಪ್ರಕರಣದ ಮೇರೆಗಿನ ತನ್ನ ಅಧಿಕಾರಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಪ್ರತ್ಯಾಯೋಜಿಸಬಹುದು.

(6) ರಾಜ್ಯ ಸರ್ಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು, ಪೊಲೀಸ್ ಆಯುಕ್ತರಿಗೆ ಪ್ರದಾನ ಮಾಡುವುದಕ್ಕೆ ಈ ಪ್ರಕರಣದಲ್ಲಿರುವುದು ಯಾವುದೂ ಅಡ್ಡಿಯಾಗತಕ್ಕದ್ದಲ್ಲ.

**15. ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು.-** ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಯವರೆಗೆ, ನಿರ್ದಿಷ್ಟ ಪ್ರದೇಶಗಳಿಗೆ ಅಥವಾ ನಿರ್ದಿಷ್ಟ ಪ್ರಕಾರ್ಯಗಳ ನಿರ್ವಹಣೆಗಾಗಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನನ್ನು ಅಥವಾ ಪೊಲೀಸ್ ಅಧೀಕ್ಷಕ ಅಥವಾ ತತ್ಸಮಾನ ದರ್ಜೆಗೆ ಕಡಿಮೆಯಲ್ಲದ ಯಾರೇ ಪೊಲೀಸ್ ಅಧಿಕಾರಿಯನ್ನು ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರನ್ನಾಗಿ ನೇಮಕ ಮಾಡಬಹುದು ಮತ್ತು ಅದು ಸೂಕ್ತವೆಂದು ಭಾವಿಸಬಹುದಾದಂತೆ ಈ ಸಂಹಿತೆಯ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಪ್ರದಾನ ಮಾಡಬಹುದಾದಂಥ ಅಧಿಕಾರಗಳನ್ನು ಅಂಥ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಪ್ರದಾನ ಮಾಡಬಹುದು.

**16. ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರ ಸ್ಥಳೀಯ ಅಧಿಕಾರವ್ಯಾಪ್ತಿ.-** (1) ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ಈ ಸಂಹಿತೆಯ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನು ತನ್ನಲ್ಲಿ ನಿಹಿತವಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು ಯಾವ ಪ್ರದೇಶಗಳಲ್ಲಿ ಚಲಾಯಿಸಬಹುದೋ ಆ ಪ್ರದೇಶಗಳ ಸ್ಥಳೀಯ ಪರಿಮಿತಿಗಳನ್ನು ಕಾಲಕಾಲಕ್ಕೆ ನಿರ್ಧರಿಸಬಹುದು.

(2) ಅಂಥ ನಿರ್ಧರಣೆಯ ಮೂಲಕ ಅನ್ಯಥಾ ಉಪಬಂಧಿಸಲಾದುದನ್ನು ಹೊರತುಪಡಿಸಿ ಅಂಥ ಪ್ರತಿಯೊಬ್ಬ ಮ್ಯಾಜಿಸ್ಟ್ರೇಟನ ಅಧಿಕಾರವ್ಯಾಪ್ತಿ ಮತ್ತು ಅಧಿಕಾರಗಳು ಇಡೀ ಜಿಲ್ಲೆಗೆ ವ್ಯಾಪ್ತವಾಗತಕ್ಕದ್ದು.

**17. ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರ ಅಧೀನತೆ.-** (1) ಎಲ್ಲಾ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು, ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಧೀನರಾಗಿರತಕ್ಕದ್ದು ಮತ್ತು ಉಪವಿಭಾಗದಲ್ಲಿ ಅಧಿಕಾರಗಳನ್ನು ಚಲಾಯಿಸುವ (ಉಪವಿಭಾಗದ ಮ್ಯಾಜಿಸ್ಟ್ರೇಟನಲ್ಲದ) ಪ್ರತಿಯೊಬ್ಬ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು, ಜಿಲ್ಲಾ ಮ್ಯಾಜಿಸ್ಟ್ರೇಟನ ಸಾಮಾನ್ಯ ನಿಯಂತ್ರಣಕ್ಕೆ ಒಳಪಟ್ಟು, ಉಪವಿಭಾಗದ ಮ್ಯಾಜಿಸ್ಟ್ರೇಟನಿಗೂ ಅಧೀನನಾಗಿರತಕ್ಕದ್ದು.

(2) ಜಿಲ್ಲಾ ಮ್ಯಾಜಿಸ್ಟ್ರೇಟನು ತನ್ನ ಅಧೀನದಲ್ಲಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರ ನಡುವೆ ಕಾರ್ಯಕಲಾಪಗಳ ವಿತರಣೆ ಅಥವಾ ಹಂಚಿಕೆ ಮಾಡುವ ಬಗ್ಗೆ ಕಾಲಕಾಲಕ್ಕೆ ಈ ಸಂಹಿತೆಗೆ ಸುಸಂಗತವಾಗಿರುವ ನಿಯಮಗಳನ್ನು ರಚಿಸಬಹುದು ಅಥವಾ ವಿಶೇಷ ಆದೇಶಗಳನ್ನು ಮಾಡಬಹುದು.

**18. ಪಬ್ಲಿಕ್ ಪ್ರಾಸಿಕ್ಯೂಟರು.-** (1) ಪ್ರತಿಯೊಂದು ಉಚ್ಚ ನ್ಯಾಯಾಲಯಕ್ಕಾಗಿ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಪಬ್ಲಿಕ್ ಪ್ರಾಸಿಕ್ಯೂಟರನನ್ನು ನೇಮಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯದಲ್ಲಿ ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಪರವಾಗಿ ಯಾವುದೇ ಪ್ರಾಸಿಕ್ಯೂಷನ್, ಅಪೀಲು ಅಥವಾ ಇತರೆ ವ್ಯವಹರಣೆಯನ್ನು ನಡೆಸುವುದಕ್ಕಾಗಿ ಒಬ್ಬ ಅಥವಾ ಹೆಚ್ಚು ಅಪರ ಪಬ್ಲಿಕ್ ಪ್ರಾಸಿಕ್ಯೂಟರರನ್ನೂ ಸಹ ನೇಮಿಸಬಹುದು:

ಪರಂತು, ರಾಷ್ಟ್ರದ ರಾಜಧಾನಿ ದೆಹಲಿ ರಾಜ್ಯಕ್ಷೇತ್ರಕ್ಕಾಗಿ ಕೇಂದ್ರ ಸರ್ಕಾರವು ದೆಹಲಿ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ ಈ ಉಪಪ್ರಕರಣದ ಉದ್ದೇಶಗಳಿಗಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕೂಟರರನ್ನು ನೇಮಕ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು ಯಾವುದೇ ಜಿಲ್ಲೆ ಅಥವಾ ಸ್ಥಳೀಯ ಪ್ರದೇಶದಲ್ಲಿ ಯಾವುದೇ ಮೊಕದ್ದಮೆಯನ್ನು ನಡೆಸುವ ಉದ್ದೇಶಕ್ಕಾಗಿ ಒಬ್ಬ ಅಥವಾ ಹೆಚ್ಚು ಪಬ್ಲಿಕ್ ಪ್ರಾಸಿಕ್ಯೂಟರರನ್ನು ನೇಮಿಸಬಹುದು.

(3) ರಾಜ್ಯ ಸರ್ಕಾರವು, ಪ್ರತಿಯೊಂದು ಜಿಲ್ಲೆಗೆ ಒಬ್ಬ ಪಬ್ಲಿಕ್ ಪ್ರಾಸಿಕ್ಯೂಟರನನ್ನು ನೇಮಿಸತಕ್ಕದ್ದು ಮತ್ತು ಆ ಜಿಲ್ಲೆಗಾಗಿ ಒಬ್ಬ ಅಥವಾ ಹೆಚ್ಚು ಅಪರ ಪಬ್ಲಿಕ್ ಪ್ರಾಸಿಕ್ಯೂಟರರನ್ನು ಸಹ ನೇಮಿಸಬಹುದು:

ಪರಂತು, ಒಂದು ಜಿಲ್ಲೆಗಾಗಿ ನೇಮಿಸಲಾದ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರರನ್ನು ಬೇರೊಂದು ಜಿಲ್ಲೆಗಾಗಿಯೂ ಸಹ ಸಂದರ್ಭಾನುಸಾರ, ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರ್ ಎಂದು ನೇಮಿಸಬಹುದು.

(4) ಜಿಲ್ಲಾ ಮ್ಯಾಜಿಸ್ಟ್ರೇಟನು, ಸೆಷನ್ಸ್ ನ್ಯಾಯಾಧೀಶನೊಂದಿಗೆ ಸಮಾಲೋಚಿಸಿ, ಆ ಜಿಲ್ಲೆಗಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರ್ ಗಳಾಗಿ ನೇಮಕಗೊಳ್ಳಲು ತನ್ನ ಅಭಿಪ್ರಾಯದಲ್ಲಿ ಸೂಕ್ತರೆಂದು ಭಾವಿಸುವ ವ್ಯಕ್ತಿಗಳ ಹೆಸರಿನ ಪಟ್ಟಿಯನ್ನು ತಯಾರಿಸತಕ್ಕದ್ದು.

(5) ರಾಜ್ಯ ಸರ್ಕಾರವು, (4)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನು ತಯಾರಿಸಿದ ಹೆಸರುಗಳ ಪಟ್ಟಿಯಲ್ಲಿ ವ್ಯಕ್ತಿಯ ಹೆಸರು ಇದ್ದ ಹೊರತು, ಆ ಜಿಲ್ಲೆಗಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಬೇರೆ ಯಾರೇ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದಲ್ಲ.

(6) (5)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಜ್ಯದಲ್ಲಿ ಪ್ರಾಸಿಕ್ಯೂಟಿಂಗ್ ಅಧಿಕಾರಿಗಳ ಕ್ರಮಬದ್ಧ ವೃಂದ ಇರುವಲ್ಲಿ, ರಾಜ್ಯ ಸರ್ಕಾರವು ಅಂಥ ವೃಂದದಲ್ಲಿರುವ ವ್ಯಕ್ತಿಗಳೊಳಗಿಂದ ಮಾತ್ರವೇ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರರನ್ನು ನೇಮಕ ಮಾಡತಕ್ಕದ್ದು:

ಪರಂತು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅಂಥ ನೇಮಕಾತಿಗಾಗಿ ಅಂಥ ವೃಂದದಲ್ಲಿ ಯಾರೇ ಸೂಕ್ತ ವ್ಯಕ್ತಿ ಲಭ್ಯವಿಲ್ಲದಿದ್ದಲ್ಲಿ, ಸರ್ಕಾರವು (4)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನು ಸಿದ್ಧಪಡಿಸಿದ ಹೆಸರುಗಳ ಪಟ್ಟಿಯೊಳಗಿನ ವ್ಯಕ್ತಿಯನ್ನು ಮಾತ್ರ ಸಂದರ್ಭಾನುಸಾರ, ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಿಸಬಹುದು.

*ವಿವರಣೆ.*- ಈ ಉಪಪ್ರಕರಣದ ಉದ್ದೇಶಗಳಿಗಾಗಿ,-

(ಎ) ìಪ್ರಾಸಿಕ್ಯೂಟಿಂಗ್ ಅಧಿಕಾರಿಗಳ ಕ್ರಮಬದ್ಧ ವೃಂದî ಎಂದರೆ, ಯಾವುದೇ ಹೆಸರಿನಿಂದ ಕರೆಯಲಾಗುತ್ತಿರುವ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಯನ್ನು ಒಳಗೊಂಡಿರುವ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುತ್ತಿರುವ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಿರುವ, ಪ್ರಾಸಿಕ್ಯೂಟಿಂಗ್ ಅಧಿಕಾರಿಗಳ ವೃಂದ;

(ಬಿ) ‌‌‌‌‌‌‌‌‌"ಪ್ರಾಸಿಕ್ಯೂಟಿಂಗ್ ಅಧಿಕಾರಿ" ಎಂದರೆ, ಈ ಸಂಹಿತೆಯ ಮೇರೆಗೆ ಪಬ್ಲಿಕ್ ಪ್ರಾಸಿಕ್ಯೂಟರ್, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್, ಅಪರ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ನ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಕ ಮಾಡಲಾದ ಯಾವುದೇ ಹೆಸರಿನಿಂದ ಕರೆಯಲಾಗುವ ವ್ಯಕ್ತಿ.

(7) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ ಅಥವಾ (6)ನೇ ಉಪಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯು, ಆತನು ಏಳು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನ್ಯಾಯವಾದಿಯಾಗಿ ವೃತ್ತಿಯಲ್ಲಿದ್ದರೆ ಮಾತ್ರ ಆತನು ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(8) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಯಾವುದೇ ಮೊಕದ್ದಮೆಯ ಅಥವಾ ಯಾವುವೇ ಮೊಕದ್ದಮೆಗಳ ವರ್ಗಗಳ ಉದ್ದೇಶಗಳಿಗಾಗಿ, ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ನ್ಯಾಯವಾದಿಯಾಗಿ ವೃತ್ತಿಯಲ್ಲಿರುವ ವ್ಯಕ್ತಿಯನ್ನು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಿಸಬಹುದು:

ಪರಂತು, ಸಂತ್ರಸ್ತ ವ್ಯಕ್ತಿಯು ಈ ಉಪಪ್ರಕರಣದ ಮೇರೆಗೆ ಪ್ರಾಸಿಕ್ಯೂಷನ್ನಿಗೆ ನೆರವಾಗಲು ತಾನು ಆಯ್ಕೆ ಮಾಡಿಕೊಳ್ಳುವ ನ್ಯಾಯವಾದಿಯನ್ನು ನೇಮಿಸಿಕೊಳ್ಳಲು ನ್ಯಾಯಾಲಯವು ಅನುಮತಿಸಬಹುದು.

(9) (7)ನೇ ಉಪಪ್ರಕರಣದ ಮತ್ತು (8)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಯು ನ್ಯಾಯವಾದಿಯಾಗಿ ವೃತ್ತಿಯಲ್ಲಿದ್ದ ಅವಧಿಯನ್ನು ಅಥವಾ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ಅಪರ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ಅಥವಾ ಇತರ ಪ್ರಾಸಿಕ್ಯೂಟಿಂಗ್ ಅಧಿಕಾರಿಯಾಗಿ, ಅದನ್ನು ಯಾವುದೇ ಹೆಸರಿನಿಂದಾದರೂ ಕರೆಯಲಿ (ಈ ಸಂಹಿತೆಯ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ) ಸೇವೆ ಸಲ್ಲಿಸಿದ್ದಂಥ ಅವಧಿಯನ್ನು, ಅಂಥ ವ್ಯಕ್ತಿಯು ನ್ಯಾಯವಾದಿಯಾಗಿ ವೃತ್ತಿಯಲ್ಲಿದ್ದಂಥ ಅವಧಿಯೆಂದು ಭಾವಿಸತಕ್ಕದ್ದು.

**19. ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರು.-** (1) ರಾಜ್ಯ ಸರ್ಕಾರವು, ಪ್ರತಿಯೊಂದು ಜಿಲ್ಲೆಗೆ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳಲ್ಲಿ ಪ್ರಾಸಿಕ್ಯೂಷನ್ ನಡೆಸುವುದಕ್ಕಾಗಿ, ಒಬ್ಬ ಅಥವಾ ಹೆಚ್ಚು ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರರನ್ನು ನೇಮಕ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು, ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳಲ್ಲಿ ಯಾವುದೇ ಮೊಕದ್ದಮೆಯನ್ನು ಅಥವಾ ಯಾವುವೇ ವರ್ಗಗಳ ಮೊಕದ್ದಮೆಗಳನ್ನು ನಡೆಸುವ ಉದ್ದೇಶಕ್ಕಾಗಿ, ಒಬ್ಬ ಅಥವಾ ಹೆಚ್ಚು ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರರನ್ನು ನೇಮಿಸಬಹುದು.

(3) (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ಅಡಕವಾಗಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಯಾವುದೇ ನಿರ್ದಿಷ್ಟ ಮೊಕದ್ದಮೆಯ ಉದ್ದೇಶಗಳಿಗಾಗಿ ಯಾರೇ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ದೊರೆಯದಿರುವಲ್ಲಿ, ಜಿಲ್ಲಾ ಮ್ಯಾಜಿಸ್ಟ್ರೇಟನು, ರಾಜ್ಯ ಸರ್ಕಾರಕ್ಕೆ ಹದಿನಾಲ್ಕು ದಿನಗಳ ನೋಟೀಸು ನೀಡಿದ ತರುವಾಯ, ಆ ಮೊಕದ್ದಮೆಯನ್ನು ನಡೆಸಲು ಇತರ ಯಾರೇ ವ್ಯಕ್ತಿಯನ್ನು ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಕ ಮಾಡಬಹುದು:

ಪರಂತು, ಯಾರೇ ಪೊಲೀಸ್ ಅಧಿಕಾರಿಯು,-

(ಎ) ಆಪಾದಿತನನ್ನು ಪ್ರಾಸಿಕ್ಯೂಟ್ ಮಾಡಲಾಗಿರುವ ಅಪರಾಧದ ತನಿಖೆಯಲ್ಲಿ ಅವನು ಯಾವುದೇ ರೀತಿಯಲ್ಲಿ ಭಾಗವಹಿಸಿದ್ದರೆ; ಅಥವಾ

(ಬಿ) ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆ ದರ್ಜೆಯವನಾಗಿದ್ದರೆ

- ಅವನು ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರನಾಗಿ ನೇಮಕವಾಗಲು ಅರ್ಹನಾಗತಕ್ಕದ್ದಲ್ಲ.

**20. ಪ್ರಾಸಿಕ್ಯೂಷನ್ ನಿರ್ದೇಶನಾಲಯ.-** (1) ರಾಜ್ಯ ಸರ್ಕಾರವು,-

(ಎ) ರಾಜ್ಯದಲ್ಲಿ ಪ್ರಾಸಿಕ್ಯೂಷನ್ ನಿರ್ದೇಶಕನನ್ನು ಮತ್ತು ಅದು ಯುಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಪ್ರಾಸಿಕ್ಯೂಷನ್ ಉಪನಿರ್ದೇಶಕರನ್ನು ಒಳಗೊಂಡ ಪ್ರಾಸಿಕ್ಯೂಷನ್ ನಿರ್ದೇಶನಾಲಯವನ್ನು; ಮತ್ತು

(ಬಿ) ಪ್ರತಿಯೊಂದು ಜಿಲ್ಲೆಯಲ್ಲಿ ಅದು ಯುಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಪ್ರಾಸಿಕ್ಯೂಷನ್ ಉಪನಿರ್ದೇಶಕರನ್ನು ಮತ್ತು ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕರನ್ನು ಒಳಗೊಂಡ ಜಿಲ್ಲಾ ಪ್ರಾಸಿಕ್ಯೂಷನ್ ನಿರ್ದೇಶನಾಲಯವನ್ನು

- ಸ್ಥಾಪಿಸಬಹುದು.

(2) ಯಾರೇ ವ್ಯಕ್ತಿಯು,-

(ಎ) ಹದಿನೈದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ನ್ಯಾಯವಾದಿಯಾಗಿ ವೃತ್ತಿನಿರತನಾಗಿದ್ದರೆ ಅಥವಾ ಸೆಷನ್ಸ್ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸುತ್ತಿದ್ದರೆ ಅಥವಾ ಸೆಷನ್ಸ್ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸಿದ್ದರೆ, ಅವರನ್ನು ಪ್ರಾಸಿಕ್ಯೂಷನ್ ನಿರ್ದೇಶಕನಾಗಿ ಅಥವಾ ಪ್ರಾಸಿಕ್ಯೂಷನ್ ಉಪನಿರ್ದೇಶಕನಾಗಿ;

(ಬಿ) ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ನ್ಯಾಯವಾದಿಯಾಗಿ ವೃತ್ತಿನಿರತನಾಗಿದ್ದರೆ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಾಗಿದ್ದರೆ ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕನಾಗಿ

- ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(3) ಪ್ರಾಸಿಕ್ಯೂಷನ್ ನಿರ್ದೇಶಕನು ಪ್ರಾಸಿಕ್ಯೂಷನ್ ನಿರ್ದೇಶನಾಲಯದ ಮುಖ್ಯಸ್ಥನಾಗಿದ್ದು, ಆತನು ರಾಜ್ಯದ ಗೃಹ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಪ್ರತಿಯೊಬ್ಬ ಪ್ರಾಸಿಕ್ಯೂಷನ್ ಉಪನಿರ್ದೇಶಕ ಅಥವಾ ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕನು ಪ್ರಾಸಿಕ್ಯೂಷನ್ ನಿರ್ದೇಶಕನಿಗೆ ಅಧೀನನಾಗಿರತಕ್ಕದ್ದು ಮತ್ತು ಪ್ರತಿಯೊಬ್ಬ ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕನು ಪ್ರಾಸಿಕ್ಯೂಷನ್ ಉಪನಿರ್ದೇಶಕನಿಗೆ ಅಧೀನನಾಗಿರತಕ್ಕದ್ದು.

(5) ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ನಡೆಸಲು ರಾಜ್ಯ ಸರ್ಕಾರದ ಮೂಲಕ 18ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (8)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಪಬ್ಲಿಕ್ ಪ್ರಾಸಿಕ್ಯೂಟರ್, ಅಪರ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನು ಪ್ರಾಸಿಕ್ಯೂಷನ್ ನಿರ್ದೇಶಕನಿಗೆ ಅಧೀನರಾಗಿರತಕ್ಕದ್ದು.

(6) ಜಿಲ್ಲಾ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ನಡೆಸಲು ರಾಜ್ಯ ಸರ್ಕಾರದಿಂದ 18ನೇ ಪ್ರಕರಣದ (3)ನೇ ಉಪಪ್ರಕರಣ ಅಥವಾ (8)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಪಬ್ಲಿಕ್ ಪ್ರಾಸಿಕ್ಯೂಟರ್, ಅಪರ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರನು ಮತ್ತು 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರನು ಪ್ರಾಸಿಕ್ಯೂಷನ್ ಉಪನಿರ್ದೇಶಕ ಅಥವಾ ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕನಿಗೆ ಅಧೀನರಾಗಿರತಕ್ಕದ್ದು.

(7) ಹತ್ತು ಅಥವಾ ಹೆಚ್ಚು ವರ್ಷಗಳ ದಂಡನೀಯ ಅಪರಾಧಗಳ ಅಥವಾ ಆಜೀವ ಕಾರಾವಾಸ ಅಥವಾ ಮರಣದಂಡನೆಯ ಮೊಕದ್ದಮೆಗಳ ಮೇಲ್ವಿಚಾರಣೆ ಮಾಡುವುದು, ವ್ಯವಹರಣೆಗಳನ್ನು ತ್ವರಿತಗೊಳಿಸುವುದು ಮತ್ತು ಅಪೀಲುಗಳನ್ನು ಸಲ್ಲಿಸುವುದಕ್ಕೆ ಅಭಿಪ್ರಾಯ ನೀಡುವುದು ಪ್ರಾಸಿಕ್ಯೂಷನ್ ನಿರ್ದೇಶಕನ ಅಧಿಕಾರಗಳು ಮತ್ತು ಪ್ರಕಾರ್ಯಗಳಾಗಿರತಕ್ಕದ್ದು.

(8) ಪೊಲೀಸ್ ವರದಿಯನ್ನು ಪರಿಶೀಲಿಸುವುದು ಮತ್ತು ಪರಿಶೋಧಿಸುವುದು ಹಾಗೂ ಏಳು ಅಥವಾ ಹೆಚ್ಚು ವರ್ಷಗಳ ಆದರೆ ಹತ್ತು ವರ್ಷಗಳಿಗಿಂತ ಕಡಿಮೆ ದಂಡನೀಯ ಅಪರಾಧ ಮೊಕದ್ದಮೆಗಳನ್ನು, ಅವುಗಳ ತ್ವರಿತ ಇತ್ಯರ್ಥವನ್ನು ಖಾತ್ರಿಪಡಿಸುವುದಕ್ಕಾಗಿ ಮೇಲ್ವಿಚಾರಣೆ ಮಾಡುವುದು, ಪ್ರಾಸಿಕ್ಯೂಷನ್ ಉಪನಿರ್ದೇಶಕನ ಅಧಿಕಾರಗಳು ಮತ್ತು ಪ್ರಕಾರ್ಯಗಳಾಗಿರತಕ್ಕದ್ದು.

(9) ಏಳು ವರ್ಷಗಳಿಗಿಂತ ಕಡಿಮೆ ದಂಡನೀಯ ಅಪರಾಧ ಮೊಕದ್ದಮೆಗಳನ್ನು ಮೇಲ್ವಿಚಾರಣೆ ಮಾಡುವುದು, ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕನ ಪ್ರಕಾರ್ಯಗಳಾಗಿರತಕ್ಕದ್ದು.

(10) (7), (8) ಮತ್ತು (9)ನೇ ಉಪಪ್ರಕರಣಗಳಲ್ಲಿ ಏನೇ ಅಡಕಗೊಂಡಿದ್ದಾಗ್ಯೂ, ಪ್ರಾಸಿಕ್ಯೂಷನ್ನಿನ ನಿರ್ದೇಶಕ, ಉಪನಿರ್ದೇಶಕ ಅಥವಾ ಸಹಾಯಕ ನಿರ್ದೇಶಕನು ಈ ಸಂಹಿತೆಯ ಮೇರೆಗಿನ ಎಲ್ಲ ವ್ಯವಹರಣೆಗಳನ್ನು ನಡೆಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಎಲ್ಲಾ ವ್ಯವಹರಣೆಗಳಿಗೆ ಜವಾಬ್ದಾರನಾಗಿರತಕ್ಕದ್ದು.

(11) ಪ್ರಾಸಿಕ್ಯೂಷನ್ ನಿರ್ದೇಶಕ, ಪ್ರಾಸಿಕ್ಯೂಷನ್ ಉಪನಿರ್ದೇಶಕರ ಮತ್ತು ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕರ ಇತರೆ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹಾಗೂ ಪ್ರತಿಯೊಬ್ಬ ಪ್ರಾಸಿಕ್ಯೂಷನ್ ಉಪನಿರ್ದೇಶಕರ ಮತ್ತು ಪ್ರಾಸಿಕ್ಯೂಷನ್ ಸಹಾಯಕ ನಿರ್ದೇಶಕರನ್ನು ಯಾವ ಕ್ಷೇತ್ರಗಳಿಗೆ ನೇಮಕಮಾಡಲಾಗಿದೆಯೋ ಆ ಕ್ಷೇತ್ರಗಳು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥವುಗಳಾಗಿರತಕ್ಕದ್ದು.

(12) ರಾಜ್ಯದ ಅಡ್ವೋಕೇಟ್ ಜನರಲ್‌ರವರು ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಪ್ರಕಾರ್ಯ ನಿರ್ವಹಿಸುವಾಗ ಈ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ III

## ನ್ಯಾಯಾಲಯಗಳ ಅಧಿಕಾರ

**21. ಅಪರಾಧಗಳನ್ನು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯಗಳು.-** ಈ ಸಂಹಿತೆಯ ಇತರ ಉಪಬಂಧಗಳಿಗೊಳಪಟ್ಟು,-

(ಎ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಮೇರೆಗೆ ಯಾವುದೇ ಅಪರಾಧವನ್ನು,-

(i) ಉಚ್ಚ ನ್ಯಾಯಾಲಯವು; ಅಥವಾ

(ii) ಸೆಷನ್ ನ್ಯಾಯಾಲಯವು; ಅಥವಾ

(iii) ಯಾವ ನ್ಯಾಯಾಲಯವು ಅಂಥ ಅಪರಾಧವನ್ನು ಅಧಿವಿಚಾರಣೆ ಮಾಡಬಹುದೆಂದು ಮೊದಲನೇ ಅನುಸೂಚಿಯಲ್ಲಿ ತೋರಿಸಲಾಗಿದೆಯೋ ಆ ಯಾವುದೇ ನ್ಯಾಯಾಲಯವು

- ಅಧಿವಿಚಾರಣೆ ಮಾಡಬಹುದು:

ಪರಂತು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ ಅಥವಾ 71ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು, ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ, ಮಹಿಳೆಯು ಪೀಠಾಸೀನಳಾಗಿರುವ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದು.

(ಬಿ) ಯಾವುದೇ ಇತರ ಕಾನೂನಿನ ಮೇರೆಗೆ ಯಾವುದೇ ಅಪರಾಧವನ್ನು, ಅಂಥ ಕಾನೂನಿನಲ್ಲಿ ಈ ಬಗ್ಗೆ ಯಾವ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದೆಂದು ನಮೂದಿಸಲಾಗಿದೆಯೋ, ಅಂಥ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಯಾವುದೇ ನ್ಯಾಯಾಲಯವನ್ನು ಹಾಗೆ ನಮೂದಿಸದೇ ಇರುವಾಗ,-

(i) ಉಚ್ಚ ನ್ಯಾಯಾಲಯವು; ಅಥವಾ

(ii) ಯಾವ ನ್ಯಾಯಾಲಯವು ಅಂಥ ಅಪರಾಧವನ್ನು ಅಧಿವಿಚಾರಣೆ ಮಾಡಬಹುದೆಂದು ಮೊದಲನೇ ಅನುಸೂಚಿಯಲ್ಲಿ ತೋರಿಸಲಾಗಿದೆಯೋ ಆ ಯಾವುದೇ ಇತರ ನ್ಯಾಯಾಲಯವು

- ಅಧಿವಿಚಾರಣೆ ಮಾಡಬಹುದು.

**22. ಉಚ್ಚ ನ್ಯಾಯಾಲಯಗಳು ಮತ್ತು ಸೆಷನ್ಸ್ ನ್ಯಾಯಾಧೀಶರು ಮಾಡಬಹುದಾದ ಶಿಕ್ಷೆಯ ಆದೇಶಗಳು.-** (1) ಉಚ್ಚ ನ್ಯಾಯಾಲಯವು, ಕಾನೂನಿನ ಮೂಲಕ ಅಧಿಕೃತವಾದ ಯಾವುದೇ ಶಿಕ್ಷೆಯ ಆದೇಶವನ್ನು ಮಾಡಬಹುದು.

(2) ಸೆಷನ್ಸ್ ನ್ಯಾಯಾಧೀಶ ಅಥವಾ ಅಪರ ಸೆಷನ್ಸ್ ನ್ಯಾಯಾಧೀಶನು ಕಾನೂನಿನ ಮೂಲಕ ಅಧಿಕೃತವಾದ ಯಾವುದೇ ಶಿಕ್ಷೆಯ ಆದೇಶವನ್ನು ಮಾಡಬಹುದು, ಆದರೆ, ಅಂಥ ಯಾವುದೇ ನ್ಯಾಯಾಧೀಶನು ಮಾಡಿದ ಮರಣದಂಡನೆ ಶಿಕ್ಷೆಯ ಆದೇಶವು, ಉಚ್ಚ ನ್ಯಾಯಾಲಯದ ಸ್ಥಿರೀಕರಣಕ್ಕೆ ಒಳಪಡತಕ್ಕದ್ದು.

**23. ಮ್ಯಾಜಿಸ್ಟ್ರೇಟರು ಮಾಡಬಹುದಾದ ಶಿಕ್ಷೆಯ ಆದೇಶಗಳು.-** (1) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯವು, ಮರಣದಂಡನೆಯ ಶಿಕ್ಷೆಯ ಆದೇಶದ ಅಥವಾ ಆಜೀವ ಕಾರಾವಾಸದ ಅಥವಾ ಏಳು ವರ್ಷಗಳಿಗೆ ಮೀರುವ ಅವಧಿಯ ಕಾರಾವಾಸದ ಹೊರತು, ಕಾನೂನಿನ ಮೂಲಕ ಅಧಿಕೃತವಾದ ಯಾವುದೇ ಶಿಕ್ಷೆಯ ಆದೇಶವನ್ನು ಮಾಡಬಹುದು.

(2) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯವು, ಮೂರು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸ ಅಥವಾ ಐವತ್ತು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯ ಅಥವಾ ಅವೆರಡೂ ಅಥವಾ ಸಮುದಾಯ ಸೇವೆಯ ಶಿಕ್ಷೆಯ ಆದೇಶಗಳನ್ನು ಮಾಡಬಹುದು.

(3) ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯವು, ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯ ಅಥವಾ ಅವೆರಡೂ ಅಥವಾ ಸಮುದಾಯ ಸೇವೆ ಮಾಡುವಂಥ ಶಿಕ್ಷೆಯ ಆದೇಶಗಳನ್ನು ಮಾಡಬಹುದು.

*ವಿವರಣೆ.-* "ಸಮುದಾಯ ಸೇವೆ" ಎಂದರೆ, ನ್ಯಾಯಾಲಯವು ನಿರ್ಣೀತ ಅಪರಾಧಿಗೆ ದಂಡನೆಯ ರೂಪದಲ್ಲಿ ಯಾವುದೇ ಸಂಭಾವನೆ ಪಡೆಯುವ ಹಕ್ಕಿಲ್ಲದೆ ಸಮುದಾಯಕ್ಕೆ ಪ್ರಯೋಜನವಾದ ಕೆಲಸವನ್ನು ಮಾಡುವಂತೆ ಆತನಿಗೆ ಆದೇಶ ಮಾಡತಕ್ಕದ್ದು.

**24. ಜುಲ್ಮಾನೆ ಕೊಡಲು ತಪ್ಪಿದ್ದಲ್ಲಿ ಕಾರಾವಾಸ ಶಿಕ್ಷೆಯ ಆದೇಶ.-** (1) ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ, ಮ್ಯಾಜಿಸ್ಟ್ರೇಟನ ನ್ಯಾಯಾಲಯವು, ಕಾನೂನಿನ ಮೂಲಕ ಅಧಿಕೃತವಾದಂಥ ಅವಧಿಯ ಕಾರಾವಾಸವನ್ನು ವಿಧಿಸಬಹುದು:

ಪರಂತು, ಆ ಅವಧಿಯು,-

(ಎ) 23ನೇ ಪ್ರಕರಣದ ಮೇರೆಗಿನ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಮೀರತಕ್ಕದ್ದಲ್ಲ;

(ಬಿ) ಒಟ್ಟು ಶಿಕ್ಷೆಯ ಭಾಗವಾಗಿ ಕಾರಾವಾಸವನ್ನು ವಿಧಿಸಲಾಗಿದ್ದಲ್ಲಿ, ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ, ವಿಧಿಸಬಹುದಾದ ಕಾರಾವಾಸವನ್ನು ಹೊರತುಪಡಿಸಿ ಅಪರಾಧಕ್ಕೆ ದಂಡನೆಯಾಗಿ ಯಾವ ಕಾರಾವಾಸವನ್ನು ವಿಧಿಸಲು ಮ್ಯಾಜಿಸ್ಟ್ರೇಟನು ಸಕ್ಷಮನಾಗಿರುವನೋ, ಆ ಕಾರಾವಾಸದ ಅವಧಿಯ ನಾಲ್ಕನೇ ಒಂದು ಭಾಗವನ್ನು ಮೀರತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ವಿಧಿಸಲಾದ ಕಾರಾವಾಸವು, 23ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ವಿಧಿಸಬಹುದಾದ ಗರಿಷ್ಠ ಅವಧಿ ಕಾರಾವಾಸದ ಮುಖ್ಯ ಶಿಕ್ಷೆಯ ಜೊತೆಗೆ ಇರಬಹುದು.

**25. ಅಧಿವಿಚಾರಣೆಯಲ್ಲಿ ಹಲವು ಅಪರಾಧಗಳು ನಿರ್ಣೀತವಾದ ಮೊಕದ್ದಮೆಗಳಲ್ಲಿ ಶಿಕ್ಷೆಯ ಆದೇಶ.-** (1) ಒಂದು ಅಧಿವಿಚಾರಣೆಯಲ್ಲಿ ಒಬ್ಬ ವ್ಯಕ್ತಿಯು ಎರಡು ಅಥವಾ ಹೆಚ್ಚು ಅಪರಾಧಗಳ ಬಗ್ಗೆ ಅಪರಾಧಿ ಎಂದು ನಿರ್ಣೀತನಾದಾಗ, ಅಂಥ ಅಪರಾಧಗಳಿಗಾಗಿ ಗೊತ್ತುಪಡಿಸಲಾದ ಹಲವು ದಂಡನೆಗಳನ್ನು ವಿಧಿಸಲು ಸಕ್ಷಮವಾಗಿರುವ ನ್ಯಾಯಾಲಯವು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 9ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಆ ದಂಡನೆಗಳನ್ನು ಅವನಿಗೆ ವಿಧಿಸಬಹುದು. ಅಂಥ ಶಿಕ್ಷೆಗಳು ಕಾರಾವಾಸವನ್ನು ಒಳಗೊಂಡಿರುವಾಗ, ಅಂಥ ದಂಡನೆಗಳನ್ನು ಏಕಕಾಲದಲ್ಲಿ ಅನುಭವಿಸತಕ್ಕದ್ದೆಂದು ನ್ಯಾಯಾಲಯವು ನಿರ್ದೇಶಿಸಿದ ಹೊರತು, ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಕ್ರಮದಲ್ಲಿ ಒಂದು ಮುಗಿದ ನಂತರ ಮತ್ತೊಂದು ಪ್ರಾರಂಭವಾಗತಕ್ಕದ್ದು.

(2) ಒಂದಾದ ಮೇಲೊಂದರಂತೆ ಬರುವ ಶಿಕ್ಷೆಗಳ ಸಂದರ್ಭದಲ್ಲಿ, ಒಂದು ಅಪರಾಧದ ನಿರ್ಣಯವಾದ ಮೇಲೆ ತಾನು ವಿಧಿಸಲು ಸಕ್ಷಮವಾಗಿರುವ ದಂಡನೆಗಿಂತ ಹಲವು ಅಪರಾಧಗಳಿಗಾಗಿ ವಿಧಿಸಲಾದ ಒಟ್ಟು ದಂಡನೆಯು ಮೀರಿರುವ ಕಾರಣ ಮಾತ್ರದಿಂದಲೇ ಅಪರಾಧಿಯನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಅಧಿವಿಚಾರಣೆಗಾಗಿ ಕಳುಹಿಸುವುದು ನ್ಯಾಯಾಲಯಕ್ಕೆ ಅವಶ್ಯವಾಗಿರತಕ್ಕದ್ದಲ್ಲ:

ಪರಂತು,-

(ಎ) ಯಾವುದೇ ಸಂದರ್ಭದಲ್ಲಿ, ಇಪ್ಪತ್ತು ವರ್ಷಗಳಿಗಿಂತ ದೀರ್ಘಾವಧಿ ಕಾರಾವಾಸ ಶಿಕ್ಷೆಯಿಂದ ಅಂಥ ವ್ಯಕ್ತಿಯು ದಂಡಿತನಾಗತಕ್ಕದ್ದಲ್ಲ;

(ಬಿ) ಒಟ್ಟು ದಂಡನೆಯು, ಒಂದು ಅಪರಾಧಕ್ಕಾಗಿ ನ್ಯಾಯಾಲಯವು ವಿಧಿಸಲು ಸಕ್ಷಮವಾಗಿರುವ ದಂಡನೆಯ ಪರಿಮಾಣದ ಎರಡರಷ್ಟನ್ನು ಮೀರತಕ್ಕದ್ದಲ್ಲ.

(3) ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯು ಅಪೀಲು ಮಾಡುವ ಉದ್ದೇಶಕ್ಕಾಗಿ, ಈ ಪ್ರಕರಣದ ಮೇರೆಗೆ ಆತನ ವಿರುದ್ಧ ವಿಧಿಸಲಾದ ಒಂದಾದ ಮೇಲೊಂದರಂತೆ ಬರುವ ಒಟ್ಟು ಶಿಕ್ಷೆಗಳ ಪರಿಮಾಣವನ್ನು ಒಂದೇ ಶಿಕ್ಷೆಯೆಂದು ಭಾವಿಸತಕ್ಕದ್ದು.

**26. ಅಧಿಕಾರಗಳನ್ನು ಪ್ರದಾನ ಮಾಡುವ ರೀತಿ.-** (1) ಈ ಸಂಹಿತೆಯ ಮೇರೆಗೆ ಅಧಿಕಾರಗಳನ್ನು ಪ್ರದಾನ ಮಾಡುವಲ್ಲಿ, ಸಂದರ್ಭಾನುಸಾರ, ಉಚ್ಚ ನ್ಯಾಯಾಲಯವು ಅಥವಾ ರಾಜ್ಯ ಸರ್ಕಾರವು, ವ್ಯಕ್ತಿಗಳನ್ನು ವಿಶೇಷವಾಗಿ ಹೆಸರಿನ ಮೇಲೆ ಅಥವಾ ಅವರ ಪದದ ಆಧಾರದ ಮೇಲೆ ಅಥವಾ ಅಧಿಕಾರಿಗಳ ವರ್ಗಗಳನ್ನು ಸಾಮಾನ್ಯವಾಗಿ ಅವರ ಪದಾಭಿದಾನಗಳ ಮೇಲೆ ಆದೇಶದ ಮೂಲಕ ಅಧಿಕಾರ ನೀಡಬಹುದು.

(2) ಹಾಗೆ ಅಧಿಕಾರ ನೀಡಲಾದ ವ್ಯಕ್ತಿಗೆ ಅದನ್ನು ತಿಳಿಸಿದ ದಿನಾಂಕದಿಂದ ಅಂಥ ಪ್ರತಿಯೊಂದು ಆದೇಶವೂ ಜಾರಿಗೆ ಬರತಕ್ಕದ್ದು.

**27. ನೇಮಕಗೊಂಡ ಅಧಿಕಾರಿಗಳ ಅಧಿಕಾರಗಳು.-** ಯಾವುದೇ ಸ್ಥಳೀಯ ಪ್ರದೇಶದಾದ್ಯಂತ ಈ ಸಂಹಿತೆಯ ಮೇರೆಗೆ ಯಾವುವೇ ಅಧಿಕಾರಗಳನ್ನು ಉಚ್ಚ ನ್ಯಾಯಾಲಯವು ಅಥವಾ ರಾಜ್ಯ ಸರ್ಕಾರವು, ವಹಿಸಿಕೊಟ್ಟಿರುವ ಸರ್ಕಾರಿ ಸೇವೆಯಲ್ಲಿ ಪದವನ್ನು ಹೊಂದಿರುವ ಯಾರೇ ವ್ಯಕ್ತಿಯು, ಅದೇ ರಾಜ್ಯ ಸರ್ಕಾರದ ಅಧೀನದಲ್ಲಿ ಅಂಥದೇ ಸ್ಥಳೀಯ ಪ್ರದೇಶದೊಳಗೆ, ಅದೇ ಸ್ವರೂಪದ ಸಮಾನ ಅಥವಾ ಉನ್ನತ ಪದಕ್ಕೆ ನೇಮಕವಾದಾಗ, ಸಂದರ್ಭಾನುಸಾರ, ಉಚ್ಚ ನ್ಯಾಯಾಲಯವು ಅಥವಾ ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸುವ ಅಥವಾ ಅನ್ಯಥಾ ನಿರ್ದೇಶಿಸಿದ್ದ ಹೊರತು, ಹಾಗೆ ನೇಮಕವಾದ ಸ್ಥಳೀಯ ಪ್ರದೇಶದಲ್ಲಿ ಅವೇ ಅಧಿಕಾರಗಳನ್ನು ಅವನು ಚಲಾಯಿಸತಕ್ಕದ್ದು.

**28. ಅಧಿಕಾರಗಳ ಹಿಂಪಡೆಯುವಿಕೆ.-** (1) ಸಂದರ್ಭಾನುಸಾರ, ಉಚ್ಚ ನ್ಯಾಯಾಲಯವು ಅಥವಾ ರಾಜ್ಯ ಸರ್ಕಾರವು, ಈ ಸಂಹಿತೆಯ ಮೇರೆಗೆ ತಾನು ಅಥವಾ ತನಗೆ ಅಧೀನನಾಗಿರುವ ಯಾರೇ ಅಧಿಕಾರಿಯು ಯಾರೇ ವ್ಯಕ್ತಿಗೆ ಪ್ರದಾನ ಮಾಡಿದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಹಿಂಪಡೆಯಬಹುದು.

(2) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಪ್ರದಾನ ಮಾಡಿದ ಯಾವುದೇ ಅಧಿಕಾರಗಳನ್ನು, ಅಂಥ ಅಧಿಕಾರಗಳನ್ನು ಪ್ರದಾನ ಮಾಡಿದ ಮ್ಯಾಜಿಸ್ಟ್ರೇಟನು ಹಿಂಪಡೆಯಬಹುದು.

**29. ನ್ಯಾಯಾಧೀಶರ ಮತ್ತು ಮ್ಯಾಜಿಸ್ಟ್ರೇಟರ ಪದದ-ಉತ್ತರಾಧಿಕಾರಿಗಳು ಚಲಾಯಿಸಬಹುದಾದ ಅವರ ಅಧಿಕಾರಗಳು.-** (1) ಈ ಸಂಹಿತೆಯ ಇತರ ಉಪಬಂಧಗಳಿಗೊಳಪಟ್ಟು, ನ್ಯಾಯಾಧೀಶರ ಅಥವಾ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಹಾಗೂ ಕರ್ತವ್ಯಗಳನ್ನು ಆತನ ಪದದ-ಉತ್ತರಾಧಿಕಾರಿಯು ಚಲಾಯಿಸಬಹುದು ಅಥವಾ ನಿರ್ವಹಿಸಬಹುದು.

(2) ಪದದ-ಉತ್ತರಾಧಿಕಾರಿ ಯಾರು ಎಂಬ ಬಗ್ಗೆ ಯಾವುದೇ ಸಂದೇಹ ಉಂಟಾದಾಗ, ಈ ಸಂಹಿತೆಯ ಅಥವಾ ಅದರ ಮೇರೆಗಿನ ಯಾವುದೇ ವ್ಯವಹರಣೆಗಳ ಅಥವಾ ಆದೇಶದ ಉದ್ದೇಶಗಳಿಗಾಗಿ ಯಾವ ನ್ಯಾಯಾಧೀಶರನ್ನು ಪದದ-ಉತ್ತರಾಧಿಕಾರಿಯೆಂದು ಭಾವಿಸಬೇಕೆಂಬುದನ್ನು ಸೆಷನ್ಸ್ ನ್ಯಾಯಾಧೀಶನು ಲಿಖಿತ ಆದೇಶದ ಮೂಲಕ ನಿರ್ಧರಿಸತಕ್ಕದ್ದು.

(3) ಯಾರೇ ಮ್ಯಾಜಿಸ್ಟ್ರೇಟನ ಪದದ-ಉತ್ತರಾಧಿಕಾರಿ ಯಾರು ಎಂಬ ಬಗ್ಗೆ ಯಾವುದೇ ಸಂದೇಹ ಉಂಟಾದಾಗ, ಸಂದರ್ಭಾನುಸಾರ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಈ ಸಂಹಿತೆಯ ಅಥವಾ ಅದರ ಮೇರೆಗಿನ ಯಾವುದೇ ವ್ಯವಹರಣೆಗಳ ಅಥವಾ ಆದೇಶದ ಉದ್ದೇಶಗಳಿಗಾಗಿ ಯಾವ ಮ್ಯಾಜಿಸ್ಟ್ರೇಟನನ್ನು ಅಂಥ ಮ್ಯಾಜಿಸ್ಟ್ರೇಟನ ಪದದ-ಉತ್ತರಾಧಿಕಾರಿಯಾಗಿ ಭಾವಿಸಬೇಕೆಂಬುದನ್ನು ಲಿಖಿತ ಆದೇಶದ ಮೂಲಕ ನಿರ್ಧರಿಸತಕ್ಕದ್ದು.

## ಅಧ್ಯಾಯ IV

**ಪೊಲೀಸ್ ವರಿಷ್ಠಾಧಿಕಾರಿಗಳ ಅಧಿಕಾರಗಳು ಹಾಗೂ ಮಾಜಿಸ್ಟ್ರೇಟ್ ಮತ್ತು ಪೊಲೀಸರಿಗೆ ನೆರವು**

**30. ಪೊಲೀಸ್ ವರಿಷ್ಠಾಧಿಕಾರಿಗಳ ಅಧಿಕಾರಗಳು.-** ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ದರ್ಜೆಯಲ್ಲಿ ವರಿಷ್ಠರಾಗಿರುವ ಪೊಲೀಸ್ ಅಧಿಕಾರಿಗಳು, ಅಂಥ ಅಧಿಕಾರಿಯು ತನ್ನ ಠಾಣೆಯ ಪರಿಮಿತಿಗಳೊಳಗೆ ಚಲಾಯಿಸಬಹುದಾದಂಥ ಅಧಿಕಾರಗಳನ್ನೇ ಅವನು ನೇಮಕವಾಗಿರುವ ಸ್ಥಳೀಯ ಪ್ರದೇಶದಾದ್ಯಂತ ಚಲಾಯಿಸಬಹುದು.

**31. ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ಅಧಿಕಾರಿಗೆ ಸಾರ್ವಜನಿಕರು ಯಾವಾಗ ನೆರವು ನೀಡುವುದು.-** ಪ್ರತಿಯೊಬ್ಬ ವ್ಯಕ್ತಿಯು,-

(ಎ) ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಅಧಿಕಾರಿಯು ಯಾರನ್ನು ದಸ್ತಗಿರಿ ಮಾಡಲು ಅಧಿಕೃತನಾಗಿರುವನೋ, ಆ ಇತರ ಯಾರೇ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಳ್ಳುವಲ್ಲಿ ಅಥವಾ ಅವನು ತಪ್ಪಿಸಿಕೊಳ್ಳುವುದನ್ನು ತಡೆಹಿಡಿಯುವುದರಲ್ಲಿ; ಅಥವಾ

(ಬಿ) ಶಾಂತಿ ಭಂಗವನ್ನು ತಡೆಯುವಲ್ಲಿ ಅಥವಾ ದಮನ ಮಾಡುವಲ್ಲಿ; ಅಥವಾ

(ಸಿ) ಯಾವುದೇ ಸಾರ್ವಜನಿಕ ಸ್ವತ್ತಿಗೆ ಯಾವುದೇ ಕ್ಷತಿಯನ್ನು ಮಾಡುವ ಪ್ರಯತ್ನ ತಡೆಯುವಲ್ಲಿ

- ಯುಕ್ತವಾಗಿ ಆತನ ನೆರವನ್ನು ಕೇಳುವ ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಅಧಿಕಾರಿಗೆ ನೆರವು ನೀಡಲು ಬದ್ಧನಾಗಿರುತ್ತಾನೆ.

**32. ವಾರಂಟನ್ನು ಜಾರಿ ಮಾಡುವ ಪೊಲೀಸ್ ಅಧಿಕಾರಿಯಲ್ಲದ ವ್ಯಕ್ತಿಗೆ ನೆರವು.-** ಪೊಲೀಸ್ ಅಧಿಕಾರಿಯಲ್ಲದ ಒಬ್ಬ ವ್ಯಕ್ತಿಗೆ ವಾರಂಟನ್ನು ನಿರ್ದೇಶಿಸಿರುವಾಗ, ಯಾರಿಗೆ ಆ ವಾರಂಟನ್ನು ನಿರ್ದೇಶಿಸಲಾಗಿದೆಯೋ ಆ ವ್ಯಕ್ತಿಯು ಹತ್ತಿರದಲ್ಲಿದ್ದರೆ ಮತ್ತು ವಾರಂಟನ್ನು ಜಾರಿ ಮಾಡಲಾಗುತ್ತಿದ್ದರೆ ಅಂಥ ವಾರಂಟನ್ನು ಜಾರಿ ಮಾಡಲು ಇತರ ಯಾರೇ ವ್ಯಕ್ತಿಯು ನೆರವು ನೀಡಬಹುದು.

**33. ಸಾರ್ವಜನಿಕರು ಕೆಲವು ಅಪರಾಧಗಳ ಮಾಹಿತಿಯನ್ನು ನೀಡುವುದು.-** (1) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಈ ಕೆಳಕಂಡ ಯಾವುದೇ ಪ್ರಕರಣಗಳ ಮೇರೆಗೆ, ಎಂದರೆ:-

(i) 103 ರಿಂದ 105 ರವರೆಗಿನ ಪ್ರಕರಣಗಳು (ಎರಡೂ ಸೇರಿ);

(ii) 111 ರಿಂದ 113 ರವರೆಗಿನ ಪ್ರಕರಣಗಳು (ಎರಡೂ ಸೇರಿ);

(iii) 140 ರಿಂದ 144 ರವರೆಗಿನ ಪ್ರಕರಣಗಳು (ಎರಡೂ ಸೇರಿ);

(iv) 147 ರಿಂದ 154 ರವರೆಗಿನ ಪ್ರಕರಣಗಳು (ಎರಡೂ ಸೇರಿ) ಮತ್ತು 158ನೇ ಪ್ರಕರಣ;

(v) 178 ರಿಂದ 182 ರವರೆಗಿನ ಪ್ರಕರಣಗಳು (ಎರಡೂ ಸೇರಿ);

(vi ) 189 ಮತ್ತು 191ನೇ ಪ್ರಕರಣಗಳು;

(vii) 274 ರಿಂದ 280 ರವರೆಗಿನ ಪ್ರಕರಣಗಳು (ಎರಡೂ ಸೇರಿ);

(viii) 307ನೇ ಪ್ರಕರಣ;

(ix) 309 ರಿಂದ 312 ರವರೆಗಿನ ಪ್ರಕರಣಗಳು (ಎರಡೂ ಸೇರಿ);

(x) 316ನೇ ಪ್ರಕರಣದ (5)ನೇ ಉಪಪ್ರಕರಣ;

(xi) 326 ರಿಂದ 328 ರವರೆಗಿನ ಪ್ರಕರಣಗಳು (ಎರಡೂ ಸೇರಿ); ಮತ್ತು

(xii) 331 ಮತ್ತು 332ನೇ ಪ್ರಕರಣಗಳು

- ಇವುಗಳ ಮೇರೆಗೆ ದಂಡನೀಯವಾದ ಯಾವುದೇ ಕೃತ್ಯದ ಬಗ್ಗೆ ಅಥವಾ ಅಪರಾಧವನ್ನು ಮಾಡಲು ಇತರ ಯಾರೇ ವ್ಯಕ್ತಿಗೆ ಇರುವ ಉದ್ದೇಶದ ಬಗ್ಗೆ ಅರಿವಿರುವ ಪ್ರತಿಯೊಬ್ಬ ವ್ಯಕ್ತಿಯು, ಯಾವ ಕಾರಣವನ್ನು ರುಜುವಾತು ಮಾಡುವ ಹೊಣೆಯು ಹಾಗೆ ಅರಿವಿರುವ ವ್ಯಕ್ತಿಯ ಮೇಲೆ ಇರುವುದೋ, ಆ ಯಾವುದೇ ಯುಕ್ತ ಕಾರಣವು ಇಲ್ಲದಿರುವಲ್ಲಿ ಸಮೀಪದ ಮ್ಯಾಜಿಸ್ಟ್ರೇಟನಿಗೆ ಅಥವಾ ಪೊಲೀಸ್ ಅಧಿಕಾರಿಗೆ ಅಂಥ ಕೃತ್ಯ ಅಥವಾ ಉದ್ದೇಶದ ಬಗ್ಗೆ ಕೂಡಲೇ ಮಾಹಿತಿಯನ್ನು ನೀಡತಕ್ಕದ್ದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ, "ಅಪರಾಧ" ಎಂಬ ಪದವು, ಭಾರತದ ಹೊರಗೆ ಯಾವುದೇ ಸ್ಥಳದಲ್ಲಿ ನಡೆದ, ಭಾರತದಲ್ಲಿ ನಡೆದಿದ್ದರೆ ಅಪರಾಧ ಎಂದು ಪರಿಗಣಿತವಾಗುವ ಯಾವುದೇ ಕೃತ್ಯವನ್ನು ಒಳಗೊಳ್ಳುತ್ತದೆ.

**34. ಗ್ರಾಮದ ವ್ಯವಹಾರಗಳ ಬಗ್ಗೆ ಕೆಲವು ವರದಿ ಮಾಡಲು ನಿಯೋಜಿತರಾದ ಅಧಿಕಾರಿಗಳ ಕರ್ತವ್ಯ.-** (1) ಗ್ರಾಮದ ವ್ಯವಹಾರಗಳ ಬಗ್ಗೆ ನಿಯೋಜಿತನಾದ ಪ್ರತಿಯೊಬ್ಬ ಅಧಿಕಾರಿಯು ಮತ್ತು ಗ್ರಾಮದಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಯು, ಸಮೀಪದ ಮ್ಯಾಜಿಸ್ಟ್ರೇಟ್ ಅಥವಾ ಸಮೀಪದ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗಳಲ್ಲಿ ಯಾರು ಹತ್ತಿರವಿರುವರೋ ಅವರಿಗೆ,-

(ಎ) ಅಂಥ ಗ್ರಾಮದಲ್ಲಿ ಅಥವಾ ಅದರ ಸಮೀಪದಲ್ಲಿ ಕಳವಾದ ಸ್ವತ್ತಿನ ಯಾರೇ ಕುಖ್ಯಾತ ಸ್ವೀಕರ್ತನ ಅಥವಾ ಮಾರಾಟಗಾರನ ಖಾಯಂ ಅಥವಾ ತಾತ್ಕಾಲಿಕ ನಿವಾಸದ ಬಗ್ಗೆ;

(ಬಿ) ಸುಲಿಗೆಕೋರ, ತಪ್ಪಿಸಿಕೊಂಡ ನಿರ್ಣೀತ ಅಪರಾಧಿ ಅಥವಾ ಘೋಷಿತ ಅಪರಾಧಿ ಎಂದು ತಾನು ತಿಳಿದಿರುವ ಅಥವಾ ಹಾಗೆ ಯುಕ್ತವಾಗಿ ಶಂಕಿಸುವ ಯಾರೇ ವ್ಯಕ್ತಿಯು ಹೋಗುವ ಗ್ರಾಮದಲ್ಲಿರುವ ಯಾವುದೇ ಸ್ಥಳದ ಅಥವಾ ಅಂಥ ಗ್ರಾಮದ ಮೂಲಕ ಯಾವುದೇ ಸ್ಥಳಕ್ಕೆ ಹೋಗುವ ಮಾರ್ಗದ ಬಗ್ಗೆ;

(ಸಿ) ಜಾಮೀನೀಯವಲ್ಲದ ಯಾವುದೇ ಅಪರಾಧವನ್ನು ಅಥವಾ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 189ನೇ ಪ್ರಕರಣ ಮತ್ತು 191ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಂಥ ಗ್ರಾಮದಲ್ಲಿ ಅಥವಾ ಅದರ ಸಮೀಪದಲ್ಲಿ ಮಾಡಿರುವ ಬಗ್ಗೆ ಅಥವಾ ಮಾಡುವ ಉದ್ದೇಶ ಹೊಂದಿರುವ ಬಗ್ಗೆ;

(ಡಿ) ಯಾವುದೇ ಹಠಾತ್ ಅಥವಾ ಅಸ್ವಾಭಾವಿಕ ಮರಣವು ಅಥವಾ ಸಂಶಯಾತ್ಮಕ ಸನ್ನಿವೇಶಗಳಲ್ಲಿ ಯಾವುದೇ ಮರಣವು, ಅಂಥ ಗ್ರಾಮದಲ್ಲಿ ಅಥವಾ ಅದರ ಸಮೀಪದಲ್ಲಿ ಸಂಭವಿಸಿದ ಬಗ್ಗೆ ಅಥವಾ ಯಾವುದೇ ಶವವನ್ನು ಅಥವಾ ಶವದ ಯಾವುದೇ ಭಾಗವನ್ನು, ಅಂಥ ಸಾವು ಸಂಭವಿಸಿದ ಬಗ್ಗೆ ಯುಕ್ತ ಸಂಶಯಕ್ಕೆಡೆ ಮಾಡಿಕೊಡುವ ಸಂದರ್ಭಗಳಲ್ಲಿ ಅಂಥ ಗ್ರಾಮದಲ್ಲಿ ಅಥವಾ ಅದರ ಸಮೀಪದಲ್ಲಿ ಪತ್ತೆ ಹಚ್ಚಿದ ಬಗ್ಗೆ ಅಥವಾ ಯಾವ ವ್ಯಕ್ತಿಯ ಬಗ್ಗೆ ಜಾಮೀನೀಯವಲ್ಲದ ಅಪರಾಧವನ್ನು ಮಾಡಲಾಗಿದೆಯೆಂಬ ಯುಕ್ತ ಸಂಶಯಕ್ಕೆಡೆ ಮಾಡಿಕೊಡುವ ಸಂದರ್ಭಗಳು ಇರುವವೋ ಆ ವ್ಯಕ್ತಿಯು ಅಂಥ ಗ್ರಾಮದಿಂದ ಕಾಣೆಯಾದ ಬಗ್ಗೆ;

(ಇ) ಯಾವ ಕೃತ್ಯವು ಭಾರತದಲ್ಲಿ ಮಾಡಲಾಗಿದ್ದರೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಈ ಕೆಳಕಂಡ ಯಾವುದೇ ಪ್ರಕರಣಗಳ, ಎಂದರೆ, 103, 105, 111, 112, 113, 178 ರಿಂದ 181 (ಎರಡೂ ಸೇರಿ),

305, 307, 309 ರಿಂದ 312 (ಎರಡೂ ಸೇರಿ), 326ನೇ ಪ್ರಕರಣದ (ಎಫ್) ಮತ್ತು (ಜಿ) ಖಂಡ, 331 ಅಥವಾ 332 ಇವುಗಳ ಮೇರೆಗೆ, ದಂಡನೀಯವಾದ ಅಪರಾಧವಾಗುವ ಅಂಥ ಯಾವುದೇ ಕೃತ್ಯವನ್ನು ಅಂಥ ಗ್ರಾಮದ ಸಮೀಪದಲ್ಲಿ ಭಾರತದ ಹೊರಗೆ ಯಾವುದೇ ಸ್ಥಳದಲ್ಲಿ ಮಾಡಿರುವುದರ ಬಗ್ಗೆ ಅಥವಾ ಮಾಡುವ ಉದ್ದೇಶ ಹೊಂದಿರುವ ಬಗ್ಗೆ;

(ಎಫ್) ಸುವ್ಯವಸ್ಥೆ ಪಾಲನೆಗೆ ಅಥವಾ ಅಪರಾಧ ನಿವಾರಣೆಗೆ ಅಥವಾ ವ್ಯಕ್ತಿಯ ಅಥವಾ ಸ್ವತ್ತಿನ ಸುರಕ್ಷತೆಗೆ ಬಾಧಕವನ್ನುಂಟು ಮಾಡಬಹುದಾದ ಯಾವ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸಬೇಕೆಂದು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಜಿಲ್ಲಾ ಮ್ಯಾಜಿಸ್ಟ್ರೇಟನು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅವನನ್ನು ನಿರ್ದೇಶಿಸಿದ್ದಾನೋ ಆ ಯಾವುದೇ ವಿಷಯದ ಬಗ್ಗೆ

- ತಾನು ಹೊಂದಿರುವ ಯಾವುದೇ ಮಾಹಿತಿಯನ್ನು ಕೂಡಲೇ ನೀಡತಕ್ಕದ್ದು.

(2) ಈ ಪ್ರಕರಣದಲ್ಲಿ,-

(i) "ಗ್ರಾಮ" ಎಂಬುದು ಗ್ರಾಮ ಭೂಮಿಗಳನ್ನು ಒಳಗೊಳ್ಳುತ್ತದೆ;

(ii) "ಘೋಷಿತ ಅಪರಾಧಿ" ಎಂಬ ಪದಾವಳಿಯು, ಈ ಸಂಹಿತೆಯು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳಲ್ಲಿ ಯಾವ ಕೃತ್ಯವನ್ನು ಮಾಡಿದ್ದರೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಮೇರೆಗೆ ಹತ್ತು ವರ್ಷಗಳ ಅಥವಾ ಅದಕ್ಕಿಂತ ಹೆಚ್ಚಿನ ಕಾರಾವಾಸದಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಮರಣದಂಡನೆಯಿಂದ ದಂಡನೀಯವಾದ ಅಪರಾಧವಾಗುತ್ತಿತ್ತೋ ಆ ಯಾವುದೇ ಕೃತ್ಯದ ಬಗ್ಗೆ, ಈ ಸಂಹಿತೆಯು ವ್ಯಾಪ್ತವಾಗದ ಭಾರತದಲ್ಲಿರುವ ಯಾವುದೇ ರಾಜ್ಯಕ್ಷೇತ್ರದ ಯಾವುದೇ ನ್ಯಾಯಾಲಯದಿಂದ ಅಥವಾ ಪ್ರಾಧಿಕಾರದಿಂದ ಅಪರಾಧಿ ಎಂದು ಘೋಷಿತನಾದ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(iii) "ಗ್ರಾಮದ ವ್ಯವಹಾರಗಳ ಬಗ್ಗೆ ನಿಯೋಜಿತನಾದ ಅಧಿಕಾರಿ" ಎಂಬ ಪದಗಳು, ಗ್ರಾಮದ ಪಂಚಾಯತಿಯ ಸದಸ್ಯನೆಂದು ಅರ್ಥ ಮತ್ತು ಅವು ಮುಖ್ಯಸ್ಥನನ್ನು ಮತ್ತು ಗ್ರಾಮಾಡಳಿತಕ್ಕೆ ಸಂಬಂಧಿಸಿದ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ನೇಮಿತನಾದ ಪ್ರತಿಯೊಬ್ಬ ಅಧಿಕಾರಿ ಅಥವಾ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

## ಅಧ್ಯಾಯ V

## ವ್ಯಕ್ತಿಗಳ ದಸ್ತಗಿರಿ

**35. ವಾರಂಟಿಲ್ಲದೆ ಯಾವಾಗ ಪೊಲೀಸರು ದಸ್ತಗಿರಿ ಮಾಡಬಹುದು.-** (1) ಯಾರೇ ಪೊಲೀಸ್ ಅಧಿಕಾರಿಯು, ಮ್ಯಾಜಿಸ್ಟ್ರೇಟನಿಂದ ಆದೇಶವಿಲ್ಲದೆ ಮತ್ತು ವಾರಂಟಿಲ್ಲದೆ,-

(ಎ) ಪೊಲೀಸ್ ಅಧಿಕಾರಿಯ ಸಮಕ್ಷಮದಲ್ಲಿ ಸಂಜ್ಞೇಯ ಅಪರಾಧವನ್ನು ಮಾಡಿರುವ ಯಾರೇ ವ್ಯಕ್ತಿಯನ್ನು; ಅಥವಾ

(ಬಿ) ಯಾವ ವ್ಯಕ್ತಿಯು, ಏಳು ವರ್ಷಕ್ಕಿಂತ ಕಡಿಮೆ ಅವಧಿಯ ಕಾರಾವಾಸದಿಂದ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ, ಜುಲ್ಮಾನೆ ಸಹಿತ ಅಥವಾ ಜುಲ್ಮಾನೆ ರಹಿತ, ದಂಡನೀಯವಾದ ಸಂಜ್ಞೇಯ ಅಪರಾಧವನ್ನು ಮಾಡಿರುತ್ತಾನೆಂದು ಆ ವ್ಯಕ್ತಿಯ ವಿರುದ್ಧ ಸಮಂಜಸ ದೂರನ್ನು ಸಲ್ಲಿಸಲಾಗಿದ್ದರೆ ಅಥವಾ

ಆ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಬಂದಿದ್ದರೆ ಅಥವಾ ಅಂಥ ಅಪರಾಧವನ್ನು ಆ ವ್ಯಕ್ತಿಯು ಮಾಡಿರುತ್ತಾನೆಂದು ನಂಬಲು ಸಕಾರಣವಾದ ಸಂಶಯ ಇದ್ದರೆ ಮತ್ತು ಈ ಕೆಳಕಂಡ ಸಂದರ್ಭ ಸನ್ನಿವೇಶಗಳಲ್ಲಿ, ಎಂದರೆ:-

(i) ಅಂಥ ದೂರಿನ, ಮಾಹಿತಿಯ ಅಥವಾ ಸಂಶಯದ ಆಧಾರದ ಮೇಲೆ ಆ ವ್ಯಕ್ತಿಯು ಸದರಿ ಅಪರಾಧವನ್ನು ಮಾಡಿರುತ್ತಾನೆಂದು ಪೊಲೀಸ್ ಅಧಿಕಾರಿಯು ನಂಬಲು ಕಾರಣ ಇದ್ದರೆ;

(ii) ಪೊಲೀಸ್ ಅಧಿಕಾರಿಗೆ,-

(ಎ) ಆ ವ್ಯಕ್ತಿಯು ಯಾವುದೇ ಇತರ ಅಪರಾಧವನ್ನು ಮಾಡುವುದನ್ನು ತಡೆಯಲು; ಅಥವಾ

(ಬಿ) ಅಪರಾಧದ ಬಗ್ಗೆ ಸರಿಯಾದ ತನಿಖೆಯನ್ನು ಮಾಡಲು; ಅಥವಾ

(ಸಿ) ಅಪರಾಧದ ಸಾಕ್ಷ್ಯವನ್ನು ಇಲ್ಲದಂತೆ ಮಾಡುವುದನ್ನು ಅಥವಾ ಯಾವುದೇ ವಿಧಾನದಲ್ಲಿ ಅಂಥ ಸಾಕ್ಷ್ಯವನ್ನು ಅಕ್ರಮವಾಗಿ ತಿದ್ದುವುದನ್ನು ತಡೆಯಲು; ಅಥವಾ

(ಡಿ) ಪ್ರಕರಣದ ಸಂಗತಿಗಳನ್ನು ತಿಳಿದಿರುವ ಯಾರೇ ವ್ಯಕ್ತಿಯು ಆ ಸಂಗತಿಗಳನ್ನು ನ್ಯಾಯಾಲಯಕ್ಕೆ ಅಥವಾ ಪೊಲೀಸ್ ಅಧಿಕಾರಿಗೆ ತಿಳಿಸದಂತೆ ಆತನನ್ನು ಪ್ರೇರೇಪಿಸುವುದನ್ನು, ಬೆದರಿಕೆ ಹಾಕುವುದನ್ನು ಅಥವಾ ಆತನಿಗೆ ವಾಗ್ದಾನ ಮಾಡುವುದನ್ನು ತಡೆಯಲು; ಅಥವಾ

(ಇ) ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಹೊರತು, ಅಗತ್ಯವಿರುವಾಗಲೆಲ್ಲ ನ್ಯಾಯಾಲಯದಲ್ಲಿ ಆತನ ಹಾಜರಾತಿಯನ್ನು ಖಾತ್ರಿಪಡಿಸಲು

- ಸಾಧ್ಯವಾಗದಿದ್ದರೆ ದಸ್ತಗಿರಿ ಮಾಡಬಹುದು ಮತ್ತು ಅಂಥ ದಸ್ತಗಿರಿಯನ್ನು ಮಾಡುವಾಗ ಆ ಬಗ್ಗೆ ಪೊಲೀಸ್ ಅಧಿಕಾರಿಯು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡತಕ್ಕದ್ದು:

ಪರಂತು, ಈ ಉಪಪ್ರಕರಣದ ಉಪಬಂಧಗಳ ಮೇರೆಗೆ ಒಬ್ಬ ವ್ಯಕ್ತಿಯ ದಸ್ತಗಿರಿಯು ಅಗತ್ಯವಿಲ್ಲದಿರುವ, ಎಲ್ಲಾ ಮೊಕದ್ದಮೆಗಳಲ್ಲಿ ದಸ್ತಗಿರಿ ಮಾಡದಿರುವುದಕ್ಕೆ ಕಾರಣಗಳನ್ನು ಪೊಲೀಸ್ ಅಧಿಕಾರಿಯು ಲಿಖಿತದಲ್ಲಿ ದಾಖಲಿಸತಕ್ಕದ್ದು; ಅಥವಾ

(ಸಿ) ಆ ವ್ಯಕ್ತಿಯು, ಜುಲ್ಮಾನೆ ಸಹಿತ ಅಥವಾ ಜುಲ್ಮಾನೆ ರಹಿತ ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಮರಣದಂಡನೆಯಿಂದ ದಂಡನೀಯವಾದ ಸಂಜ್ಞೇಯ ಅಪರಾಧವನ್ನು ಮಾಡಿದ್ದಾನೆಂಬ ಬಗ್ಗೆ ವಿಶ್ವಾಸಾರ್ಹ ಮಾಹಿತಿಯನ್ನು ಪಡೆಯಲಾಗಿದ್ದರೆ ಮತ್ತು ಅಂಥ ಮಾಹಿತಿಯ ಆಧಾರದ ಮೇಲೆ ಆ ವ್ಯಕ್ತಿಯು ಸದರಿ ಅಪರಾಧವನ್ನು ಮಾಡಿದ್ದಾನೆಂದು ನಂಬಲು ಪೊಲೀಸ್ ಅಧಿಕಾರಿಗೆ ಕಾರಣ ಇರುವಾಗ ಆ ಯಾರೇ ವ್ಯಕ್ತಿಯನ್ನು; ಅಥವಾ

(ಡಿ) ಯಾರು ಈ ಸಂಹಿತೆಯ ಮೇರೆಗೆ ಅಥವಾ ರಾಜ್ಯ ಸರ್ಕಾರದ ಆದೇಶದ ಮೂಲಕ ಅಪರಾಧಿಯೆಂದು ಘೋಷಿತನಾಗಿರುವ ಆ ಯಾರೇ ವ್ಯಕ್ತಿಯನ್ನು; ಅಥವಾ

(ಇ) ಕಳವು ಸ್ವತ್ತೆಂದು ಸಕಾರಣವಾಗಿ ಸಂಶಯಪಡಬಹುದಾದ ಯಾವುದೇ ವಸ್ತುವು ಯಾರ ಸ್ವಾಧೀನದಲ್ಲಿ ಕಂಡುಬರುವ ಮತ್ತು ಯಾರು ಅಂಥ ವಸ್ತುವಿನ ಸಂಬಂಧದಲ್ಲಿ ಅಪರಾಧವನ್ನು ಮಾಡಿರುವುದಾಗಿ ಸಕಾರಣವಾಗಿ ಸಂಶಯಪಡಬಹುದಾದ ಆ ಯಾರೇ ವ್ಯಕ್ತಿಯನ್ನು; ಅಥವಾ

(ಎಫ್) ಕರ್ತವ್ಯ ನಿರತ ಪೊಲೀಸ್ ಅಧಿಕಾರಿಯು ತನ್ನ ಕರ್ತವ್ಯವನ್ನು ನಿರ್ವಹಿಸುವಾಗ ಆತನನ್ನು ಅಡ್ಡಿಪಡಿಸುವ ಅಥವಾ ಕಾನೂನುಬದ್ಧ ಅಭಿರಕ್ಷೆಯಿಂದ ತಪ್ಪಿಸಿಕೊಂಡಿರುವ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಯಾರೇ ವ್ಯಕ್ತಿಯನ್ನು; ಅಥವಾ

(ಜಿ) ಯಾವುದೇ ಕೇಂದ್ರ ಸಶಸ್ತ್ರ ಸೇನೆಯನ್ನು ತ್ಯಜಿಸಿರುವನೆಂದು ಯುಕ್ತವಾಗಿ ಸಂಶಯಪಡುವ ಯಾರೇ ವ್ಯಕ್ತಿಯನ್ನು; ಅಥವಾ

(ಎಚ್) ಭಾರತದಲ್ಲಿ ಮಾಡಿದ್ದರೆ ಅಪರಾಧವೆಂದು ದಂಡನೀಯವಾಗುವ, ಭಾರತದ ಹೊರಗೆ ಯಾವುದೇ ಸ್ಥಳದಲ್ಲಿ ಮಾಡಲಾದ ಯಾವುದೇ ಕೃತ್ಯದಲ್ಲಿ ಸಂಬಂಧಪಟ್ಟಿರುವುದೋ ಅಥವಾ ಅವನು ಹಾಗೆ ಸಂಬಂಧಪಟ್ಟಿರುವನೆಂದು ಯಾರ ವಿರುದ್ಧ ಸಕಾರಣವಾದ ದೂರನ್ನು ಸಲ್ಲಿಸಲಾಗಿದೆಯೋ ಅಥವಾ ವಿಶ್ವಾಸಾರ್ಹವಾದ ಮಾಹಿತಿಯನ್ನು ಪಡೆಯಲಾಗಿದೆಯೋ ಅಥವಾ ಸಕಾರಣವಾದ ಸಂಶಯವಿರುವುದೋ ಮತ್ತು ಪ್ರತ್ಯರ್ಪಣ ಅಥವಾ ಅನ್ಯಥಾ ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ ಭಾರತದಲ್ಲಿ ದಸ್ತಗಿರಿ ಮಾಡಲು ಅಥವಾ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಲು ಗುರಿಯಾಗುವ ಯಾರೇ ವ್ಯಕ್ತಿಯನ್ನು; ಅಥವಾ

(ಐ) ಬಿಡುಗಡೆಯಾದ ನಿರ್ಣೀತ ಅಪರಾಧಿಯಾಗಿದ್ದು, 394ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಉಲ್ಲಂಘನೆ ಮಾಡುವ ಯಾರೇ ವ್ಯಕ್ತಿಯನ್ನು; ಅಥವಾ

(ಜೆ) ಯಾರ ದಸ್ತಗಿರಿಗಾಗಿ ಮೌಖಿಕ ಅಥವಾ ಲಿಖಿತದಲ್ಲಿ ಯಾವುದೇ ಕೋರಿಕೆಯು ಬೇರೆ ಪೊಲೀಸ್ ಅಧಿಕಾರಿಯಿಂದ ಬಂದಿದೆಯೋ, ಪರಂತು ದಸ್ತಗಿರಿಯಾಗುವ ವ್ಯಕ್ತಿಯನ್ನು ಮತ್ತು ದಸ್ತಗಿರಿ ಮಾಡಲು ಇರುವ ಅಪರಾಧವನ್ನು ಅಥವಾ ಇತರ ಕಾರಣವನ್ನು ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿದ್ದು ಮತ್ತು ಕೋರಿಕೆಯನ್ನು ನೀಡಿದ ಅಧಿಕಾರಿಯು, ವಾರಂಟಿಲ್ಲದೆ ಆ ವ್ಯಕ್ತಿಯನ್ನು ಕಾನೂನುಬದ್ಧವಾಗಿ ದಸ್ತಗಿರಿ ಮಾಡಬಹುದೆಂದು ಅದರಿಂದ ಕಂಡುಬಂದರೆ ಆ ಯಾರೇ ವ್ಯಕ್ತಿಯನ್ನು

- ದಸ್ತಗಿರಿ ಮಾಡಬಹುದು.

(2) 39ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸಂಜ್ಞೇಯವಲ್ಲದ ಅಪರಾಧಕ್ಕೆ ಸಂಬಂಧಪಟ್ಟಿರುವ ಅಥವಾ ಯಾರ ವಿರುದ್ಧ ದೂರನ್ನು ಸಲ್ಲಿಸಲಾಗಿರುವ ಅಥವಾ ವಿಶ್ವಾಸಾರ್ಹವಾದ ಮಾಹಿತಿಯನ್ನು ಪಡೆಯಲಾಗಿರುವ ಅಥವಾ ಆತನು ಹಾಗೆ ಸಂಬಂಧಪಟ್ಟಿರುತ್ತಾನೆಂದು ಸಕಾರಣವಾಗಿ ಸಂಶಯವಿರುವ ಯಾರೇ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ವಾರಂಟ್ ಅಥವಾ ಆದೇಶದ ಮೇರೆಗೆ ಹೊರತು ದಸ್ತಗಿರಿ ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಮೇರೆಗೆ ಪೊಲೀಸ್ ಅಧಿಕಾರಿಯು, ವ್ಯಕ್ತಿಯ ದಸ್ತಗಿರಿಯು ಅಗತ್ಯವಿಲ್ಲದಿರುವ ಎಲ್ಲ ಮೊಕದ್ದಮೆಗಳಲ್ಲಿ ಯಾವ ವ್ಯಕ್ತಿಯ ವಿರುದ್ಧ ಆತನು ಸಂಜ್ಞೇಯ ಅಪರಾಧ ಮಾಡಿರುತ್ತಾನೆಂದು ಯುಕ್ತ ದೂರನ್ನು ಸಲ್ಲಿಸಲಾಗಿದೆಯೋ ಅಥವಾ ವಿಶ್ವಾಸಾರ್ಹ ಮಾಹಿತಿ ಪಡೆಯಲಾಗಿದೆಯೋ ಅಥವಾ ಸಕಾರಣವಾದ ಸಂಶಯ ಇದೆಯೋ, ಆ ವ್ಯಕ್ತಿಯು ತನ್ನ ಮುಂದೆ ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಹಾಜರಾಗುವಂತೆ ನಿರ್ದೇಶಿಸಿ ಆತನಿಗೆ ನೋಟೀಸನ್ನು ನೀಡತಕ್ಕದ್ದು.

(4) ಯಾರೇ ವ್ಯಕ್ತಿಗೆ ಅಂಥ ನೋಟೀಸನ್ನು ಕೊಟ್ಟಿದ್ದರೆ, ಆ ನೋಟೀಸಿನಲ್ಲಿನ ನಿಬಂಧನೆಗಳನ್ನು ಪಾಲಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

(5) ಅಂಥ ವ್ಯಕ್ತಿಯು ನೋಟೀಸನ್ನು ಪಾಲಿಸಿದಲ್ಲಿ ಮತ್ತು ಪಾಲಿಸುವುದನ್ನು ಮುಂದುವರೆಸಿರುವಲ್ಲಿ ಅವನನ್ನು ನೋಟೀಸಿನಲ್ಲಿ ಉಲ್ಲೇಖಿಸಿದ ಅಪರಾಧದ ಸಂಬಂಧದಲ್ಲಿ ದಸ್ತಗಿರಿ ಮಾಡಲೇಬೇಕಾಗುತ್ತದೆಂದು ಆ ಬಗೆಗಿನ ಕಾರಣಗಳನ್ನು ದಾಖಲಿಸಿ ಪೊಲೀಸ್ ಅಧಿಕಾರಿಯು ಅಭಿಪ್ರಾಯಪಟ್ಟ ಹೊರತು ಆ ವ್ಯಕ್ತಿಯನ್ನು ದಸ್ತಗಿರಿ ಮಾಡತಕ್ಕದ್ದಲ್ಲ.

(6) ಅಂಥ ಆ ವ್ಯಕ್ತಿಯು ನೋಟೀಸಿನಲ್ಲಿನ ಯಾವುದೇ ನಿಬಂಧನೆಗಳನ್ನು ಯಾವುದೇ ಕಾಲದಲ್ಲಿ ಪಾಲಿಸಲು ತಪ್ಪಿದ್ದಲ್ಲಿ ಅಥವಾ ತನ್ನ ಗುರುತನ್ನು ಹೇಳಲು ಇಚ್ಛಿಸದಿದ್ದರೆ ಈ ಬಗ್ಗೆ ಸಕ್ಷಮ ನ್ಯಾಯಾಲಯವು ಮಾಡಬಹುದಾದಂಥ ಆದೇಶಗಳಿಗೆ ಒಳಪಟ್ಟು ಆತನನ್ನು ಆ ನೋಟೀಸಿನಲ್ಲಿ ನಮೂದಿಸಿರುವ ಅಪರಾಧಕ್ಕಾಗಿ ಪೊಲೀಸ್ ಅಧಿಕಾರಿಯು ದಸ್ತಗಿರಿ ಮಾಡಬಹುದು.

(7) ಮೂರು ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸದಿಂದ ದಂಡನೀಯ ಅಪರಾಧದ ಸಂದರ್ಭದಲ್ಲಿ ಮತ್ತು ಅಂಥ ವ್ಯಕ್ತಿಯು ಅಶಕ್ತ ಅಥವಾ ಅರವತ್ತು ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಾಗಿರುವ ಸಂದರ್ಭದಲ್ಲಿ, ಪೊಲೀಸ್ ಉಪ-ಅಧೀಕ್ಷಕನ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಯಿಂದ ಪೂರ್ವ ಅನುಮತಿ ಪಡೆಯದೇ ಅವನನ್ನು ದಸ್ತಗಿರಿ ಮಾಡತಕ್ಕದ್ದಲ್ಲ.

**36. ದಸ್ತಗಿರಿಯ ಪ್ರಕ್ರಿಯೆ ಮತ್ತು ದಸ್ತಗಿರಿ ಮಾಡುವ ಅಧಿಕಾರಿಯ ಕರ್ತವ್ಯಗಳು.-** ದಸ್ತಗಿರಿ ಮಾಡುವಾಗ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು,-

(ಎ) ಅವನ ಹೆಸರನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವ ಹಾಗೆ ಖಚಿತವಾದ, ಕಣ್ಣಿಗೆ ಕಾಣುವ ಮತ್ತು ಸ್ಪಷ್ಟವಾದ ತನ್ನ ಗುರುತನ್ನು ಹೊಂದಿರತಕ್ಕದ್ದು.

(ಬಿ) ದಸ್ತಗಿರಿ ಮಾಡಿದಾಗ,-

(i) ದಸ್ತಗಿರಿಯಾದ ವ್ಯಕ್ತಿಯ ಕುಟುಂಬದ ಸದಸ್ಯನು ಅಥವಾ ದಸ್ತಗಿರಿಯಾದ ಸ್ಥಳದಲ್ಲಿನ ಗೌರವಾನ್ವಿತ ಸದಸ್ಯನು ಸಾಕ್ಷಿದಾರನಾಗಿದ್ದರೆ ಕನಿಷ್ಠ ಒಬ್ಬರು ದೃಢೀಕರಿಸಿದ;

(ii) ದಸ್ತಗಿರಿಯಾದ ವ್ಯಕ್ತಿಯು ಮೇಲುಸಹಿ ಮಾಡಿದ

- ದಸ್ತಗಿರಿ ವಿವರಣಾಪತ್ರವನ್ನು ಸಿದ್ಧಪಡಿಸತಕ್ಕದ್ದು; ಮತ್ತು

(ಸಿ) ದಸ್ತಗಿರಿ ಮಾಡಲಾದ ವ್ಯಕ್ತಿಯ ಕುಟುಂಬದ ಒಬ್ಬ ಸದಸ್ಯನು ವಿವರಣಾಪತ್ರವನ್ನು ದೃಢೀಕರಿಸದಿದ್ದರೆ, ತನ್ನ ದಸ್ತಗಿರಿಯ ವಿಷಯವನ್ನು ತಾನು ಹೆಸರು ಹೇಳುವ ತನ್ನ ಸಂಬಂಧಿಕನಿಗೆ ಅಥವಾ ಸ್ನೇಹಿತನಿಗೆ ತಿಳಿಸಲು ಅವನಿಗೆ ಹಕ್ಕು ಇರುತ್ತದೆ ಎಂದು ಅವನಿಗೆ ತಿಳಿಸತಕ್ಕದ್ದು.

**37. ಗೊತ್ತುಪಡಿಸಲಾದ ಪೊಲೀಸ್ ಅಧಿಕಾರಿ.-** ರಾಜ್ಯ ಸರ್ಕಾರವು,-

(ಎ) ಪ್ರತಿಯೊಂದು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಪೊಲೀಸ್ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸತಕ್ಕದ್ದು;

(ಬಿ) ಪ್ರತಿಯೊಂದು ಜಿಲ್ಲೆ ಮತ್ತು ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಹಾಯಕ ಸಬ್-ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಪೊಲೀಸ್ ಅಧಿಕಾರಿಯನ್ನು ಗೊತ್ತುಪಡಿಸತಕ್ಕದ್ದು. ಅವನು ದಸ್ತಗಿರಿಯಾದ ವ್ಯಕ್ತಿಗಳ ಹೆಸರು ಮತ್ತು ವಿಳಾಸ, ಆರೋಪಿಸಲಾದ ಅಪರಾಧ ಸ್ವರೂಪದ ಮಾಹಿತಿಯನ್ನು ನಿರ್ವಹಿಸುವುದಕ್ಕಾಗಿ ಜವಾಬ್ದಾರನಾಗಿರತಕ್ಕದ್ದು. ಅದನ್ನು ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಮತ್ತು ಜಿಲ್ಲಾ ಕೇಂದ್ರಸ್ಥಾನದ ಮುಖ್ಯಸ್ಥಳಗಳಲ್ಲಿ ಡಿಜಿಟಲ್ ರೂಪವೂ ಸೇರಿದಂತೆ ಯಾವುದೇ ವಿಧಾನದಲ್ಲಿ ಪ್ರದರ್ಶಿಸತಕ್ಕದ್ದು.

**38. ವಿಚಾರಣೆಯ ಕಾಲದಲ್ಲಿ ತಾನು ಆಯ್ಕೆ ಮಾಡಿಕೊಳ್ಳುವ ನ್ಯಾಯವಾದಿಯನ್ನು ಭೇಟಿ ಮಾಡಲು ದಸ್ತಗಿರಿಯಾದ ವ್ಯಕ್ತಿಯ ಹಕ್ಕು.-** ಯಾರೇ ವ್ಯಕ್ತಿಯನ್ನು ಪೊಲೀಸರು ದಸ್ತಗಿರಿ ಮಾಡಿದಾಗ ಮತ್ತು ಆತನನ್ನು ವಿಚಾರಣೆಗೊಳಪಡಿಸಿರುವಾಗ, ಸಂಪೂರ್ಣ ವಿಚಾರಣೆಯುದ್ದಕ್ಕೆ ಅಲ್ಲದಿದ್ದರೂ, ವಿಚಾರಣೆಯ ಕಾಲದಲ್ಲಿ ತಾನು ಆಯ್ಕೆ ಮಾಡಿಕೊಳ್ಳುವ ನ್ಯಾಯವಾದಿಯನ್ನು ಭೇಟಿಯಾಗಲು ಆತನು ಹಕ್ಕುಳ್ಳವನಾಗಿರುತ್ತಾನೆ.

**39. ಹೆಸರು ಮತ್ತು ವಾಸಸ್ಥಳವನ್ನು ತಿಳಿಸಲು ನಿರಾಕರಿಸಿದ ಬಗ್ಗೆ ದಸ್ತಗಿರಿ.-** (1) ಪೊಲೀಸ್ ಅಧಿಕಾರಿಯ ಸಮಕ್ಷಮದಲ್ಲಿ, ಸಂಜ್ಞೇಯವಲ್ಲದ ಅಪರಾಧವನ್ನು ಮಾಡಿರುವ ಅಥವಾ ಮಾಡಿರುವುದಾಗಿ ಆಪಾದಿತನಾದ ಯಾರೇ ವ್ಯಕ್ತಿಯು, ಅಂಥ ಪೊಲೀಸ್ ಅಧಿಕಾರಿಯು ಕೇಳಿದ ಮೇಲೆ ಆತನು ತನ್ನ ಹೆಸರು ಹಾಗೂ ವಾಸಸ್ಥಳವನ್ನು ತಿಳಿಸಲು ನಿರಾಕರಿಸಿದಾಗ ಅಥವಾ ಅಂಥ ಅಧಿಕಾರಿಯು ಸುಳ್ಳೆಂದು ನಂಬಲು ಕಾರಣವಿರುವ ಹೆಸರು ಹಾಗೂ ವಾಸಸ್ಥಳವನ್ನು ತಿಳಿಸಿದಾಗ, ಆತನ ಹೆಸರು ಅಥವಾ ವಾಸಸ್ಥಳವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಂಥ ಅಧಿಕಾರಿಯು ಆತನನ್ನು ದಸ್ತಗಿರಿ ಮಾಡಬಹುದು.

(2) ಅಂಥ ವ್ಯಕ್ತಿಯ ನಿಜವಾದ ಹೆಸರನ್ನು ಮತ್ತು ವಾಸಸ್ಥಳವನ್ನು ಖಚಿತಪಡಿಸಿಕೊಂಡಾಗ, ಮ್ಯಾಜಿಸ್ಟ್ರೇಟನ ಮುಂದೆ ಆತನು ಹಾಜರಾಗಲು ಅಗತ್ಯಪಡಿಸಿದರೆ, ಹಾಗೆ ಹಾಜರಾಗುತ್ತೇನೆಂದು ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಟ್ಟ ಮೇಲೆ ಆತನನ್ನು ಬಿಡುಗಡೆ ಮಾಡತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ಭಾರತದ ನಿವಾಸಿಯಾಗಿಲ್ಲದಿದ್ದರೆ, ಭಾರತದ ನಿವಾಸಿಯಾಗಿರುವ ಜಾಮೀನುದಾರ ಅಥವಾ ಜಾಮೀನುದಾರರಿಂದ ಜಾಮೀನು ಬಂಧಪತ್ರವನ್ನು ಪಡೆಯತಕ್ಕದ್ದು.

(3) ದಸ್ತಗಿರಿಯಾದ ಕಾಲದಿಂದ ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಅಂಥ ವ್ಯಕ್ತಿಯ ಹೆಸರು ಮತ್ತು ವಾಸಸ್ಥಳವನ್ನು ಖಚಿತಪಡಿಸಿಕೊಳ್ಳಲಾಗದಿದ್ದರೆ ಅಥವಾ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಲು ಆತನು ವಿಫಲನಾದರೆ ಅಥವಾ ಸಾಕಷ್ಟು ಜಾಮೀನು ಒದಗಿಸಲು ಅಗತ್ಯಪಡಿಸಿದ್ದು ಅದನ್ನು ಒದಗಿಸಲು ವಿಫಲನಾದರೆ, ಅಧಿಕಾರವ್ಯಾಪ್ತಿಯುಳ್ಳ ಸಮೀಪದ ಮ್ಯಾಜಿಸ್ಟ್ರೇಟನ ಬಳಿಗೆ ಅವನನ್ನು ಕೂಡಲೇ ಹಾಜರುಪಡಿಸತಕ್ಕದ್ದು.

**40. ಖಾಸಗಿ ವ್ಯಕ್ತಿಯಿಂದ ದಸ್ತಗಿರಿ ಮತ್ತು ಅಂಥ ದಸ್ತಗಿರಿಯ ಪ್ರಕ್ರಿಯೆ.-** (1) ಯಾರೇ ಖಾಸಗಿ ವ್ಯಕ್ತಿಯು, ಜಾಮೀನೀಯವಲ್ಲದ ಮತ್ತು ಸಂಜ್ಞೇಯ ಅಪರಾಧವನ್ನು ತನ್ನ ಮುಂದೆ ಮಾಡುವ ಯಾರೇ ವ್ಯಕ್ತಿಯನ್ನು ಅಥವಾ ಯಾರೇ ಘೋಷಿತ ಅಪರಾಧಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡಿಸಬಹುದು ಮತ್ತು ಅನಾವಶ್ಯಕ ವಿಳಂಬವಿಲ್ಲದೆ, ಅಂಥ ದಸ್ತಗಿರಿಯಾದ ವ್ಯಕ್ತಿಯನ್ನು ಆರು ಗಂಟೆಗಳೊಳಗೆ ಪೊಲೀಸ್ ಅಧಿಕಾರಿಗೆ ಒಪ್ಪಿಸತಕ್ಕದ್ದು ಅಥವಾ ಒಪ್ಪಿಸುವಂತೆ ಮಾಡತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯು ಗೈರುಹಾಜರಾಗಿದ್ದರೆ, ಅಂಥ ವ್ಯಕ್ತಿಯನ್ನು ಸಮೀಪದ ಪೊಲೀಸ್ ಠಾಣೆಗೆ ಅಭಿರಕ್ಷೆಯಲ್ಲಿ ಕರೆದುಕೊಂಡು ಹೋಗತಕ್ಕದ್ದು ಅಥವಾ ಕರೆದುಕೊಂಡು ಹೋಗುವಂತೆ ಮಾಡತಕ್ಕದ್ದು.

(2) ಪೊಲೀಸ್ ಅಧಿಕಾರಿಯು, ಅಂಥ ವ್ಯಕ್ತಿಯು 35ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಡುತ್ತಾನೆಂದು ನಂಬಲು ಕಾರಣವಿದ್ದರೆ, ಆತನನ್ನು ಪುನಃ ದಸ್ತಗಿರಿ ಮಾಡತಕ್ಕದ್ದು.

(3) ಅವನು ಸಂಜ್ಞೇಯವಲ್ಲದ ಅಪರಾಧವನ್ನು ಮಾಡಿದ್ದಾನೆಂದು ನಂಬಲು ಕಾರಣವಿದ್ದರೆ, ಪೊಲೀಸ್ ಅಧಿಕಾರಿಯು ಕೇಳಿದಾಗ ತನ್ನ ಹೆಸರು ಮತ್ತು ವಾಸಸ್ಥಳವನ್ನು ತಿಳಿಸಲು ನಿರಾಕರಿಸಿದರೆ ಅಥವಾ ಅಂಥ ಅಧಿಕಾರಿಯು ಸುಳ್ಳೆಂದು ನಂಬಲು ಕಾರಣವಿರುವ ಹೆಸರು ಮತ್ತು ವಾಸಸ್ಥಳವನ್ನು ತಿಳಿಸಿದರೆ, 39ನೇ ಪ್ರಕರಣದ ಉಪಬಂಧಗಳ ಮೇರೆಗೆ ಅವನ ಮೇಲೆ ಕ್ರಮ ಜರುಗಿಸತಕ್ಕದ್ದು, ಆದರೆ ಅವನು ಯಾವುದೇ ಅಪರಾಧವನ್ನು ಮಾಡಿರುವನೆಂದು ನಂಬಲು ಸಾಕಷ್ಟು ಕಾರಣವಿಲ್ಲದಿದ್ದರೆ, ಅವನನ್ನು ಕೂಡಲೇ ಬಿಡುಗಡೆ ಮಾಡತಕ್ಕದ್ದು.

**41. ಮ್ಯಾಜಿಸ್ಟ್ರೇಟನಿಂದ ದಸ್ತಗಿರಿ.-** (1) ಕಾರ್ಯನಿರ್ವಾಹಕ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಅವನ ಸಮಕ್ಷಮದಲ್ಲಿ ಯಾವುದೇ ಅಪರಾಧವನ್ನು ಮಾಡಲಾಗಿದ್ದರೆ, ಅವನು ಸ್ವತಃ ಅಪರಾಧಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಯಾರೇ ವ್ಯಕ್ತಿಗೆ ಆದೇಶಿಸಬಹುದು ಮತ್ತು ಆನಂತರ ಜಾಮೀನಿನ ಬಗ್ಗೆ ಇದರಲ್ಲಿ ಇರುವ ಉಪಬಂಧಗಳಿಗೊಳಪಟ್ಟು, ಅಪರಾಧಿಯನ್ನು ಅಭಿರಕ್ಷೆಗೆ ಒಪ್ಪಿಸಬಹುದು.

(2) ಯಾರೇ ಕಾರ್ಯನಿರ್ವಾಹಕ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟನು, ಯಾರ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸಲು ಆ ಸಮಯದಲ್ಲಿ ಮತ್ತು ಸನ್ನಿವೇಶಗಳಲ್ಲಿ ಸಕ್ಷಮನಾಗಿರುವನೋ ಆ ಯಾರೇ ವ್ಯಕ್ತಿಯನ್ನು, ಯಾವುದೇ ಸಮಯದಲ್ಲಿ ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ತನ್ನ ಸಮಕ್ಷಮದಲ್ಲಿ ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿಗೆ ನಿರ್ದೇಶಿಸಬಹುದು.

**42. ಸಶಸ್ತ್ರ ಸೇನೆಗಳ ಸದಸ್ಯರಿಗೆ ದಸ್ತಗಿರಿಯಿಂದ ರಕ್ಷಣೆ.-** (1) 35ನೇ ಪ್ರಕರಣ ಮತ್ತು 39 ರಿಂದ 41ರವರೆಗಿನ ಪ್ರಕರಣಗಳಲ್ಲಿ (ಎರಡೂ ಸೇರಿ) ಏನೇ ಇದ್ದರೂ, ಕೇಂದ್ರ ಸರ್ಕಾರದ ಸಮ್ಮತಿಯನ್ನು ಪಡೆಯದೆ ಒಕ್ಕೂಟದ ಸಶಸ್ತ್ರ ಸೇನೆಗಳ ಯಾರೇ ಸದಸ್ಯನನ್ನು ಆತನು ತನ್ನ ಪದದ ಕರ್ತವ್ಯಗಳನ್ನು ನಿರ್ವಹಿಸುವಾಗ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕೃತ್ಯಕ್ಕಾಗಿ ದಸ್ತಗಿರಿ ಮಾಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಹೊಣೆಗಾರರಾದ ಸೇನೆಯ ಅಂಥ ವರ್ಗದ ಅಥವಾ ಪ್ರವರ್ಗದ ಸದಸ್ಯರಿಗೆ ಅವರು ಎಲ್ಲೇ ಸೇವೆ ಸಲ್ಲಿಸುತ್ತಿರಲಿ ಅವರಿಗೆ (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯಿಸತಕ್ಕದ್ದು ಎಂದು ನಿರ್ದೇಶಿಸತಕ್ಕದ್ದು ಮತ್ತು ಆನಂತರ ಅದರಲ್ಲಿ ಬರುವ "ಕೇಂದ್ರ ಸರ್ಕಾರ" ಎಂಬ ಪದಾವಳಿಗೆ "ರಾಜ್ಯ ಸರ್ಕಾರ" ಎಂಬ ಪದಾವಳಿಯನ್ನು ಪ್ರತ್ಯಾಯೋಜಿಸಲಾಗಿದ್ದರೆ ಹೇಗೋ ಹಾಗೆ ಆ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

**43. ದಸ್ತಗಿರಿ ಮಾಡುವುದು ಹೇಗೆ.-** (1) ದಸ್ತಗಿರಿಯಾಗುವ ವ್ಯಕ್ತಿಯು ಮಾತಿನ ಅಥವಾ ಕ್ರಿಯೆಯ ಮೂಲಕ ಅಭಿರಕ್ಷೆಗೆ ಅಧೀನನಾಗದಿದ್ದಲ್ಲಿ, ಅವನನ್ನು ದಸ್ತಗಿರಿ ಮಾಡುವಾಗ, ಹಾಗೆ ಮಾಡುವ ಪೊಲೀಸ್ ಅಧಿಕಾರಿ ಅಥವಾ ಇತರ ವ್ಯಕ್ತಿಯು ಅವನ ದೇಹವನ್ನು ವಾಸ್ತವಿಕವಾಗಿ ಮುಟ್ಟತಕ್ಕದ್ದು ಅಥವಾ ಬಂಧಿಸತಕ್ಕದ್ದು:

ಪರಂತು, ಮಹಿಳೆಯನ್ನು ದಸ್ತಗಿರಿ ಮಾಡಬೇಕಾಗಿದ್ದಲ್ಲಿ, ಸಂದರ್ಭಗಳು ವಿರುದ್ಧವಾಗಿರುವುದನ್ನು ಸೂಚಿಸಿದ್ದ ಹೊರತು, ದಸ್ತಗಿರಿ ಮಾಡುವ ಬಗ್ಗೆ ಮೌಖಿಕ ಮಾಹಿತಿ ನೀಡಿದ ನಂತರ ಆಕೆಯು ಅಭಿರಕ್ಷೆಗೆ ಅಧೀನನಾಗಿದ್ದಾಳೆಂದು ಪೂರ್ವಭಾವನೆ ಮಾಡತಕ್ಕದ್ದು ಮತ್ತು ಸಂದರ್ಭಗಳು ಅನ್ಯಥಾ ಅಗತ್ಯಪಡಿಸಿದ ಹೊರತು ಅಥವಾ ಅಂಥ ಪೊಲೀಸ್ ಅಧಿಕಾರಿಯು ಮಹಿಳಾ ಪೊಲೀಸ್ ಅಧಿಕಾರಿಯಾಗಿದ್ದ ಹೊರತು, ಪುರುಷ ಪೊಲೀಸ್ ಅಧಿಕಾರಿಯು ಆಕೆಯನ್ನು ದಸ್ತಗಿರಿ ಮಾಡಲು ಆಕೆಯ ದೇಹವನ್ನು ಮುಟ್ಟತಕ್ಕದ್ದಲ್ಲ.

(2) ಅಂಥ ವ್ಯಕ್ತಿಯು ತನ್ನನ್ನು ದಸ್ತಗಿರಿ ಮಾಡುವ ಪ್ರಯತ್ನವನ್ನು ಬಲಪ್ರಯೋಗದಿಂದ ಪ್ರತಿಭಟಿಸಿದರೆ ಅಥವಾ ದಸ್ತಗಿರಿಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಅಂಥ ಪೊಲೀಸ್ ಅಧಿಕಾರಿಯು ಅಥವಾ ಇತರ ವ್ಯಕ್ತಿಯು, ದಸ್ತಗಿರಿ ಮಾಡಲು ಅವಶ್ಯಕವಾದ ಎಲ್ಲ ಸಾಧನಗಳನ್ನು ಬಳಸಬಹುದು.

(3) ಪೊಲೀಸ್ ಅಧಿಕಾರಿಯು, ಅಪರಾಧದ ಸ್ವರೂಪ ಮತ್ತು ಗಂಭೀರತೆಯನ್ನು ದೃಷ್ಟಿಯಲ್ಲಿರಿಸಿಕೊಂಡು ವ್ಯಕ್ತಿಯನ್ನು ದಸ್ತಗಿರಿ ಮಾಡುವಾಗ ಅಥವಾ ಅಂಥ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಾಗ, ರೂಢಿಗತ ಅಪರಾಧಿ ಅಥವಾ ಪುನರಾವರ್ತಿತ ಅಪರಾಧಿ ಅಥವಾ ಅಭಿರಕ್ಷೆಯಿಂದ ತಪ್ಪಿಸಿಕೊಂಡಿರುವ ಅಥವಾ ಸಂಘಟಿತ ಅಪರಾಧ,

ಭಯೋತ್ಪಾದಕ ಕೃತ್ಯ, ಮಾದಕದ್ರವ್ಯಕ್ಕೆ ಸಂಬಂಧಿಸಿದ ಅಪರಾಧ ಅಥವಾ ಆಯುಧಗಳು ಅಥವಾ ಸ್ಫೋಟಕಗಳನ್ನು ಕಾನೂನುಬಾಹಿರವಾಗಿ ಸ್ವಾಧೀನದಲ್ಲಿರಿಸಿಕೊಂಡಿರುವ, ಕೊಲೆ, ಅತ್ಯಾಚಾರ, ಆ್ಯಸಿಡ್ ದಾಳಿ, ನಕಲಿ ನಾಣ್ಯ ಮತ್ತು ಕರೆನ್ಸಿ ನೋಟುಗಳನ್ನು ಚಲಾವಣೆ ಮಾಡುವ, ಮಾನವ ಕಳ್ಳಸಾಗಾಣೆ, ಮಕ್ಕಳ ಮೇಲಿನ ಲೈಂಗಿಕ ಅಪರಾಧ ಅಥವಾ ಸರ್ಕಾರದ ವಿರುದ್ಧದ ಅಪರಾಧ ಮಾಡಿರುವ ಅಪರಾಧಿಗೆ ಕೈಕೋಳಗಳನ್ನು ಬಳಸಬಹುದು.

(4) ಮರಣದಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಆಪಾದಿಸಲಾಗಿಲ್ಲದ ವ್ಯಕ್ತಿಗೆ ಮರಣವನ್ನುಂಟು ಮಾಡಲು ಈ ಪ್ರಕರಣದಲ್ಲಿರುವುದು ಯಾವುದೂ ಹಕ್ಕು ನೀಡುವುದಿಲ್ಲ.

(5) ಅಸಾಧಾರಣ ಸನ್ನಿವೇಶಗಳು ಇದ್ದ ಹೊರತು, ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯಕ್ಕೆ ಮೊದಲು ಯಾರೇ ಮಹಿಳೆಯನ್ನು ದಸ್ತಗಿರಿ ಮಾಡತಕ್ಕದ್ದಲ್ಲ ಮತ್ತು ಅಂಥ ಅಸಾಧಾರಣ ಸನ್ನಿವೇಶಗಳು ಇದ್ದರೆ, ಮಹಿಳಾ ಪೊಲೀಸ್ ಅಧಿಕಾರಿಯು ಅಪರಾಧ ನಡೆದ ಅಥವಾ ದಸ್ತಗಿರಿ ಮಾಡಬೇಕಾದ ಸ್ಥಳದ ಸ್ಥಳೀಯ ಅಧಿಕಾರವ್ಯಾಪ್ತಿ ಹೊಂದಿರುವ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಲಿಖಿತದಲ್ಲಿ ವರದಿಯನ್ನು ಸಲ್ಲಿಸಿ, ದಸ್ತಗಿರಿ ಮಾಡಲು ಅವರ ಪೂರ್ವಾನುಮತಿಯನ್ನು ಪಡೆದುಕೊಳ್ಳತಕ್ಕದ್ದು.

**44. ದಸ್ತಗಿರಿಯಾಗಬೇಕಾದ ವ್ಯಕ್ತಿಯು ಪ್ರವೇಶಿಸಿದ ಸ್ಥಳದ ಶೋಧನೆ.-** (1) ದಸ್ತಗಿರಿಯ ವಾರಂಟಿನ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು ಅಥವಾ ದಸ್ತಗಿರಿ ಮಾಡಲು ಅಧಿಕಾರವುಳ್ಳ ಯಾರೇ ಪೊಲೀಸ್ ಅಧಿಕಾರಿಯು, ದಸ್ತಗಿರಿಯಾಗಬೇಕಾದ ವ್ಯಕ್ತಿಯು ಯಾವುದೇ ಸ್ಥಳದೊಳಗೆ ಪ್ರವೇಶಿಸಿರುವನೆಂದು ಅಥವಾ ಇರುವನೆಂದು ನಂಬಲು ಕಾರಣವಿದ್ದರೆ, ಅಂಥ ಸ್ಥಳದಲ್ಲಿ ವಾಸಿಸುತ್ತಿರುವ ಅಥವಾ ಅಂಥ ಸ್ಥಳದ ಸುಪರ್ದಿ ಹೊಂದಿರುವ ಯಾರೇ ವ್ಯಕ್ತಿಯು, ಮೇಲೆ ಹೇಳಿದಂತೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯು ಅಥವಾ ಅಂಥ ಪೊಲೀಸ್ ಅಧಿಕಾರಿಯು ಕೇಳಿದಾಗ, ಅದರ ಅಬಾಧಿತ ಪ್ರವೇಶಕ್ಕೆ ಆತನಿಗೆ ಅವಕಾಶ ನೀಡತಕ್ಕದ್ದು ಮತ್ತು ಅಲ್ಲಿ ಶೋಧನೆ ಮಾಡಲು ಎಲ್ಲ ಯುಕ್ತವಾದ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಂಥ ಸ್ಥಳಕ್ಕೆ ಪ್ರವೇಶವನ್ನು ಪಡೆಯಲಾಗದಿದ್ದರೆ, ವಾರಂಟಿನ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯು, ಯಾವುದೇ ಸಂದರ್ಭದಲ್ಲಿ ಮತ್ತು ವಾರಂಟನ್ನು ನೀಡಬಹುದಾದ ಯಾವುದೇ ಸಂದರ್ಭದಲ್ಲಿ, ಆದರೆ ದಸ್ತಗಿರಿಯಾಗಬೇಕಾದ ವ್ಯಕ್ತಿಗೆ ತಪ್ಪಿಸಿಕೊಳ್ಳಲು ಅವಕಾಶವಿಲ್ಲದಂತೆ ವಾರಂಟನ್ನು ಪಡೆಯಲಾಗದಿದ್ದಲ್ಲಿ, ಪೊಲೀಸ್ ಅಧಿಕಾರಿಯು ಅಂಥ ಸ್ಥಳವನ್ನು ಪ್ರವೇಶಿಸುವುದಕ್ಕಾಗಿ ಮತ್ತು ಅದನ್ನು ಶೋಧಿಸುವುದಕ್ಕಾಗಿ ಹಾಗೂ ಅಂಥ ಸ್ಥಳಕ್ಕೆ ಪ್ರವೇಶಿಸುವುದಕ್ಕೋಸ್ಕರ ತನ್ನ ಅಧಿಕಾರ ಮತ್ತು ಉದ್ದೇಶವನ್ನು ತಿಳಿಸಿದ ತರುವಾಯವೂ ಮತ್ತು ಪ್ರವೇಶವನ್ನು ಯುಕ್ತವಾಗಿ ಕೇಳಿದ ತರುವಾಯವೂ, ಆ ಅಧಿಕಾರಿಯು ಅನ್ಯಥಾ ಪ್ರವೇಶವನ್ನು ಪಡೆಯಲು ಸಾಧ್ಯವಿಲ್ಲದಿದ್ದರೆ, ದಸ್ತಗಿರಿಯಾಗಬೇಕಾದ ವ್ಯಕ್ತಿಯ ಅಥವಾ ಇತರ ಯಾರೇ ವ್ಯಕ್ತಿಯ ಯಾವುದೇ ಮನೆ ಅಥವಾ ಸ್ಥಳದ ಹೊರ ಅಥವಾ ಒಳ ಬಾಗಿಲು ಅಥವಾ ಕಿಟಕಿಯನ್ನು ಮುರಿಯುವುದು ಕಾನೂನುಬದ್ಧವಾಗಿರತಕ್ಕದ್ದು:

ಪರಂತು, ಅಂಥ ಯಾವುದೇ ಸ್ಥಳವು ರೂಢಿಗನುಸಾರವಾಗಿ ಬಹಿರಂಗವಾಗಿ ಕಾಣಿಸಿಕೊಳ್ಳದ (ದಸ್ತಗಿರಿಯಾಗಬೇಕಾದ ವ್ಯಕ್ತಿಯಲ್ಲದ) ಒಬ್ಬ ಮಹಿಳೆಯ ವಾಸ್ತವಿಕ ಅಧಿಭೋಗದಲ್ಲಿರುವ ಕೊಠಡಿಯಾಗಿದ್ದರೆ, ಅಂಥ ವ್ಯಕ್ತಿ ಅಥವಾ ಪೊಲೀಸ್ ಅಧಿಕಾರಿಯು, ಅಂಥ ಕೊಠಡಿಯನ್ನು ಪ್ರವೇಶಿಸುವ ಮುನ್ನ, ಅಂಥ ಮಹಿಳೆಯು ಹೊರಹೋಗಲು ಸ್ವತಂತ್ರಳೆಂದು ಅವಳಿಗೆ ಸೂಚನೆ ನೀಡತಕ್ಕದ್ದು ಮತ್ತು ಅವಳು ಹೊರಹೋಗುವುದಕ್ಕೆ ಯುಕ್ತವಾದ ಪ್ರತಿಯೊಂದು ಸೌಲಭ್ಯವನ್ನು ನೀಡತಕ್ಕದ್ದು ಮತ್ತು ತರುವಾಯ ಕೊಠಡಿಯನ್ನು ಒಡೆದು ಪ್ರವೇಶಿಸಬಹುದು.

(3) ಯಾರೇ ಪೊಲೀಸ್ ಅಧಿಕಾರಿಯು ಅಥವಾ ದಸ್ತಗಿರಿ ಮಾಡಲು ಅಧಿಕಾರವುಳ್ಳ ಇತರ ವ್ಯಕ್ತಿಯು, ದಸ್ತಗಿರಿ ಮಾಡುವ ಉದ್ದೇಶಕ್ಕಾಗಿ ಕಾನೂನುಬದ್ಧವಾಗಿ ಪ್ರವೇಶಿಸಿದ್ದು, ಅದರೊಳಗೆ ತನ್ನನ್ನು ಅಥವಾ ಯಾರೇ ವ್ಯಕ್ತಿಯನ್ನು ತಡೆಹಿಡಿದಿರಿಸಿದ್ದರೆ, ಸ್ವತಃ ತಾನು ಅಥವಾ ಇತರೆ ಯಾರೇ ವ್ಯಕ್ತಿಯು ಅಲ್ಲಿಂದ ಹೊರಬರಲು ಯಾವುದೇ ಮನೆಯ ಅಥವಾ ಸ್ಥಳದ ಹೊರ ಅಥವಾ ಒಳ ಬಾಗಿಲು ಅಥವಾ ಕಿಟಕಿಯನ್ನು ಮುರಿಯಬಹುದು.

**45. ಇತರ ಅಧಿಕಾರವ್ಯಾಪ್ತಿಗೊಳಪಟ್ಟಿರುವ ಪ್ರದೇಶಗಳಲ್ಲಿ ಅಪರಾಧಿಗಳನ್ನು ದಸ್ತಗಿರಿ ಮಾಡಲು ಹೋಗುವುದು.-** ಒಬ್ಬ ಪೊಲೀಸ್ ಅಧಿಕಾರಿಯು, ದಸ್ತಗಿರಿ ಮಾಡಲು ತಾನು ಪ್ರಾಧಿಕೃತನಾದ ಯಾರೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡುವ ಉದ್ದೇಶಕ್ಕಾಗಿ ಅಂಥ ವ್ಯಕ್ತಿಯನ್ನು ಭಾರತದ ಯಾವುದೇ ಸ್ಥಳದಲ್ಲಿ ಬೆನ್ನಟ್ಟಿ ಹೋಗಬಹುದು.

**46. ಅನಾವಶ್ಯಕವಾಗಿ ಪ್ರತಿಬಂಧಿಸದಿರುವುದು.-** ದಸ್ತಗಿರಿಯಾದ ವ್ಯಕ್ತಿಯು ತಪ್ಪಿಸಿಕೊಳ್ಳುವುದನ್ನು ತಡೆಯುವುದಕ್ಕೆ ಅವಶ್ಯಕವಾದುದಕ್ಕಿಂತ ಹೆಚ್ಚಿನ ಪ್ರತಿಬಂಧಕ್ಕೆ ಅವನನ್ನು ಗುರಿಮಾಡತಕ್ಕದ್ದಲ್ಲ.

**47. ದಸ್ತಗಿರಿಯಾದ ವ್ಯಕ್ತಿಗೆ ದಸ್ತಗಿರಿಯ ಕಾರಣಗಳನ್ನು ಮತ್ತು ಜಾಮೀನಿಗೆ ಅವನಿಗಿರುವ ಹಕ್ಕಿನ ಬಗ್ಗೆ ತಿಳಿಸುವುದು.-** (1) ವಾರಂಟಿಲ್ಲದೆ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ಅಥವಾ ಇತರ ವ್ಯಕ್ತಿಯು, ಅವನನ್ನು ಯಾವ ಅಪರಾಧಕ್ಕಾಗಿ ದಸ್ತಗಿರಿ ಮಾಡಲಾಗಿದೆಯೋ ಆ ಅಪರಾಧದ ಪೂರ್ಣ ವಿವರಗಳನ್ನು ಅಥವಾ ಅಂಥ ದಸ್ತಗಿರಿಗೆ ಇರುವ ಇತರ ಕಾರಣಗಳನ್ನು ಆ ಕೂಡಲೇ ಅವನಿಗೆ ತಿಳಿಸತಕ್ಕದ್ದು.

(2) ಒಬ್ಬ ಪೊಲೀಸ್ ಅಧಿಕಾರಿಯು ಜಾಮೀನೀಯವಲ್ಲದ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಿದಾಗ, ಅವನು ಜಾಮೀನಿನ ಮೇಲೆ ಬಿಡುಗಡೆ ಹೊಂದಲು ಹಕ್ಕುಳ್ಳವನೆಂದು ಮತ್ತು ಅವನು ತನ್ನ ಪರವಾಗಿ ಜಾಮೀನುದಾರರ ವ್ಯವಸ್ಥೆ ಮಾಡಿಕೊಳ್ಳಬಹುದೆಂದು ದಸ್ತಗಿರಿಯಾದ ವ್ಯಕ್ತಿಗೆ ತಿಳಿಸತಕ್ಕದ್ದು.

**48. ದಸ್ತಗಿರಿ ಮಾಡುವ ವ್ಯಕ್ತಿಯು, ದಸ್ತಗಿರಿ, ಇತ್ಯಾದಿಗಳ ಬಗ್ಗೆ ಸಂಬಂಧಿಕರು ಅಥವಾ ಸ್ನೇಹಿತರಿಗೆ ಮಾಹಿತಿ ನೀಡುವ ಬಾಧ್ಯತೆ.-** (1) ಈ ಸಂಹಿತೆಯ ಮೇರೆಗೆ ದಸ್ತಗಿರಿ ಮಾಡುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ಅಥವಾ ಇತರ ವ್ಯಕ್ತಿಯು, ಅಂಥ ದಸ್ತಗಿರಿ ಬಗ್ಗೆ ಮತ್ತು ಯಾವ ವ್ಯಕ್ತಿಯನ್ನು ದಸ್ತಗಿರಿ ಮಾಡಲಾಗಿದೆಯೋ ಆ ವ್ಯಕ್ತಿಯನ್ನು ಯಾವ ಸ್ಥಳದಲ್ಲಿ ಇರಿಸಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು, ಆತನ ಯಾರೇ ಸಂಬಂಧಿಕರಿಗೆ, ಸ್ನೇಹಿತರಿಗೆ ಅಥವಾ ಅಂಥ ಮಾಹಿತಿಯನ್ನು ತಿಳಿಸುವ ಉದ್ದೇಶಕ್ಕಾಗಿ ದಸ್ತಗಿರಿಯಾದ ವ್ಯಕ್ತಿಯು ಯಾರಿಗೆ ತಿಳಿಸಬೇಕೆಂದು ಹೇಳಬಹುದೋ ಅಥವಾ ನಾಮನಿರ್ದೇಶನ ಮಾಡಬಹುದೋ ಅಂಥ ಇತರ ವ್ಯಕ್ತಿಗಳಿಗೆ ಮತ್ತು ಜಿಲ್ಲೆಯಲ್ಲಿ ಗೊತ್ತುಪಡಿಸಲಾದ ಪೊಲೀಸ್ ಅಧಿಕಾರಿಗೂ ಸಹ ಮಾಹಿತಿ ನೀಡತಕ್ಕದ್ದು.

(2) ದಸ್ತಗಿರಿ ಮಾಡಿದ ವ್ಯಕ್ತಿಯನ್ನು ಪೊಲೀಸ್ ಠಾಣೆಗೆ ಕರೆತಂದ ಕೂಡಲೇ (1)ನೇ ಉಪಪ್ರಕರಣದ ಮೇರೆಗೆ ಅವನಿಗಿರುವ ಹಕ್ಕುಗಳ ಬಗ್ಗೆ ಪೊಲೀಸ್ ಅಧಿಕಾರಿಯು ಅವನಿಗೆ ತಿಳಿಸತಕ್ಕದ್ದು.

(3) ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಸಂಗತಿಯನ್ನು, ಯಾರಿಗೆ ತಿಳಿಸಲಾಗಿದೆ ಅನ್ನುವುದನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಪೊಲೀಸ್ ಠಾಣೆಯಲ್ಲಿ ಇಟ್ಟಿರುವ ಪುಸ್ತಕದಲ್ಲಿ ನಮೂದಿಸತಕ್ಕದ್ದು.

(4) ದಸ್ತಗಿರಿ ಮಾಡಿದ ಅಂಥ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಿದಾಗ, (2)ನೇ ಉಪಪ್ರಕರಣದ ಮತ್ತು (3)ನೇ ಉಪಪ್ರಕರಣದಲ್ಲಿ ಹೇಳಿರುವ ಎಲ್ಲ ಅಗತ್ಯತೆಗಳನ್ನು ಪಾಲಿಸಲಾಗಿದೆಯೇ ಎಂಬ ಬಗ್ಗೆ ಮ್ಯಾಜಿಸ್ಟ್ರೇಟನು ಮನವರಿಕೆ ಮಾಡಿಕೊಳ್ಳುವುದು ಅವನ ಕರ್ತವ್ಯವಾಗಿರತಕ್ಕದ್ದು.

**49. ದಸ್ತಗಿರಿಯಾದ ವ್ಯಕ್ತಿಯ ಶೋಧನೆ.-** (1) ಯಾವಾಗಲಾದರೂ,-

(i) ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿರದ ವಾರಂಟಿನ ಮೇರೆಗೆ ಅಥವಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿರುವ ವಾರಂಟಿನ ಮೇರೆಗೆ, ಆದರೆ ದಸ್ತಗಿರಿಯಾದ ವ್ಯಕ್ತಿಯು ಜಾಮೀನು ಒದಗಿಸಲಾಗದೆ ಪೊಲೀಸ್ ಅಧಿಕಾರಿಯಿಂದ ಒಬ್ಬ ವ್ಯಕ್ತಿಯು ದಸ್ತಗಿರಿಯಾದಾಗ; ಮತ್ತು

(ii) ವಾರಂಟಿಲ್ಲದೆ ವ್ಯಕ್ತಿ ದಸ್ತಗಿರಿಯಾದಾಗ ಅಥವಾ ವಾರಂಟಿನ ಮೇರೆಗೆ ಒಬ್ಬ ಖಾಸಗಿ ವ್ಯಕ್ತಿಯಿಂದ ದಸ್ತಗಿರಿಯಾದಾಗ ಮತ್ತು ಕಾನೂನುಸಮ್ಮತವಾಗಿ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆಗದಿದ್ದಾಗ ಅಥವಾ ಜಾಮೀನು ಒದಗಿಸಲು ಸಾಧ್ಯವಾಗದಿದ್ದಾಗ

- ದಸ್ತಗಿರಿ ಮಾಡುವ ಅಧಿಕಾರಿಯು ಅಥವಾ ಖಾಸಗಿ ವ್ಯಕ್ತಿಯು, ದಸ್ತಗಿರಿ ಮಾಡಿದಾಗ, ದಸ್ತಗಿರಿಯಾದ ವ್ಯಕ್ತಿಯನ್ನು ಯಾವ ಪೊಲೀಸ್ ಅಧಿಕಾರಿಗೆ ಒಪ್ಪಿಸಲಾಗಿದೆಯೋ, ಆ ಅಧಿಕಾರಿಯು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಮತ್ತು ಅವನಲ್ಲಿ ದೊರೆತ ಅವಶ್ಯಕ ಉಡುಪನ್ನುಳಿದು ಎಲ್ಲ ವಸ್ತುಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿಡಬಹುದು ಮತ್ತು ದಸ್ತಗಿರಿಯಾದ ವ್ಯಕ್ತಿಯಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಳ್ಳಲಾಗಿದ್ದರೆ, ಪೊಲೀಸ್ ಅಧಿಕಾರಿಯು ಸ್ವಾಧೀನಪಡಿಸಿಕೊಂಡ ವಸ್ತುಗಳನ್ನು ತೋರಿಸುವ ರಸೀದಿಯನ್ನು ಅಂಥ ವ್ಯಕ್ತಿಗೆ ಕೊಡತಕ್ಕದ್ದು.

(2) ಒಬ್ಬ ಮಹಿಳೆಯನ್ನು ಶೋಧನೆ ಮಾಡಿಸುವುದು ಅವಶ್ಯಕವಾದಾಗ, ಸಭ್ಯತೆಗೆ ಪೂರ್ಣ ಗಮನಕೊಟ್ಟು ಮತ್ತೊಬ್ಬ ಮಹಿಳೆಯು ಶೋಧನೆ ಮಾಡತಕ್ಕದ್ದು.

**50. ಘಾತಕ ಆಯುಧಗಳನ್ನು ವಶಪಡಿಸಿಕೊಳ್ಳಲು ಅಧಿಕಾರ.-** ಈ ಸಂಹಿತೆಯ ಮೇರೆಗೆ ದಸ್ತಗಿರಿ ಮಾಡುವ ಯಾರೇ ಅಧಿಕಾರಿ ಅಥವಾ ಇತರ ವ್ಯಕ್ತಿಯು, ದಸ್ತಗಿರಿ ಮಾಡಿದ ನಂತರ ಕೂಡಲೇ, ದಸ್ತಗಿರಿಯಾದ ವ್ಯಕ್ತಿಯಿಂದ ಅವನು ಹೊಂದಿರುವ ಯಾವುವೇ ಘಾತಕ ಆಯುಧಗಳನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ದಸ್ತಗಿರಿ ಮಾಡುವ ಅಧಿಕಾರಿಯು ಅಥವಾ ವ್ಯಕ್ತಿಯು, ದಸ್ತಗಿರಿಯಾದ ವ್ಯಕ್ತಿಯನ್ನು ಹಾಜರುಪಡಿಸಬೇಕಾದ ನ್ಯಾಯಾಲಯದ ಅಥವಾ ಅಧಿಕಾರಿಯ ಮುಂದೆ ಹಾಗೆ ತೆಗೆದುಕೊಂಡ ಎಲ್ಲ ಆಯುಧಗಳನ್ನು ಒಪ್ಪಿಸತಕ್ಕದ್ದು.

**51. ಪೊಲೀಸ್ ಅಧಿಕಾರಿಯ ಕೋರಿಕೆಯ ಮೇರೆಗೆ ವೈದ್ಯ ವೃತ್ತಿಗನಿಂದ ಆಪಾದಿತನ ಪರೀಕ್ಷೆ.-** (1) ವ್ಯಕ್ತಿಯ ದೇಹದ ಪರೀಕ್ಷೆಯು, ಅಪರಾಧವು ನಡೆದ ಬಗ್ಗೆ ಸಾಕ್ಷ್ಯವನ್ನು ಒದಗಿಸುವುದೆಂದು ನಂಬಲು ಸೂಕ್ತ ಕಾರಣಗಳಿರುವಂಥ ಸ್ವರೂಪದ ಅಪರಾಧವನ್ನು ಅವನು ಮಾಡಿದ್ದಾನೆಂಬ ಆಪಾದನೆಯ ಮೇಲೆ ಅವನು ದಸ್ತಗಿರಿಯಾದಾಗ ಮತ್ತು ಅಂಥ ಸನ್ನಿವೇಶಗಳಲ್ಲಿ ಆ ಕೃತ್ಯವೆಸಗಿದ್ದಾನೆಂದು ಹೇಳಲಾದಾಗ, ಕಾರ್ಯನಿರ್ವಹಿಸುತ್ತಿರುವ ಯಾರೇ ಪೊಲೀಸ್ ಅಧಿಕಾರಿಯ ಕೋರಿಕೆಯ ಮೇರೆಗೆ ನೋಂದಾಯಿತ ವೈದ್ಯನು ಅಥವಾ ಅವನಿಗೆ ಸಹಾಯಕನಾಗಿ ಸದ್ಭಾವನೆಯಿಂದ ಮತ್ತು ಆತನ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯು, ಅಂಥ ಸಾಕ್ಷ್ಯವನ್ನು ಒದಗಿಸಬಹುದಾದ ಸಂಗತಿಗಳನ್ನು ತಿಳಿಯುವುದಕ್ಕೋಸ್ಕರ ಸಕಾರಣವಾಗಿ ಅಗತ್ಯವಾಗಿರುವ ದಸ್ತಗಿರಿಯಾದ ವ್ಯಕ್ತಿಯ ಪರೀಕ್ಷೆಯನ್ನು ಮಾಡುವುದು ಮತ್ತು ಆ ಉದ್ದೇಶಕ್ಕಾಗಿ ಸಕಾರಣವಾಗಿ ಅವಶ್ಯಕವಾಗಿರುವಂಥ ಬಲವನ್ನು ಉಪಯೋಗಿಸುವುದು ಕಾನೂನುಬದ್ಧವಾಗಿರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಒಬ್ಬ ಮಹಿಳೆಯ ದೈಹಿಕ ಪರೀಕ್ಷೆ ಮಾಡಬೇಕಾದಾಗ, ನೋಂದಾಯಿತ ವೈದ್ಯೆಯಿಂದ ಅಥವಾ ಅವಳ ಮೇಲ್ವಿಚಾರಣೆಯಲ್ಲಿ ಮಾತ್ರ ಪರೀಕ್ಷೆ ಮಾಡತಕ್ಕದ್ದು.

(3) ನೋಂದಾಯಿತ ವೈದ್ಯ ವೃತ್ತಿಗರು ಯಾವುದೇ ವಿಳಂಬ ಮಾಡದೆ ಪರೀಕ್ಷಾ ವರದಿಯನ್ನು ತನಿಖಾಧಿಕಾರಿಗೆ ಕಳುಹಿಸತಕ್ಕದ್ದು.

*ವಿವರಣೆ.*- ಈ ಪ್ರಕರಣದಲ್ಲಿ ಮತ್ತು 52ನೇ ಮತ್ತು 53ನೇ ಪ್ರಕರಣಗಳಲ್ಲಿ,-

(ಎ) ‟ಪರೀಕ್ಷೆ" ಎಂಬುದು, ರಕ್ತವನ್ನು, ರಕ್ತದ ಕಲೆಗಳನ್ನು, ವೀರ್ಯವನ್ನು, ಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದಂತೆ ಸ್ವ್ಯಾಬ್ ಗಳನ್ನು, ಸ್ಪುಟಮ್‌ಗಳನ್ನು ಮತ್ತು ಬೆವರನ್ನು, ಕೂದಲಿನ ಮಾದರಿಗಳನ್ನು, ಉಗುರಿನ ತುಣುಕುಗಳನ್ನು ಆಧುನಿಕ ಮತ್ತು ವೈಜ್ಞಾನಿಕ ತಂತ್ರಗಳ ಮೂಲಕ ಡಿ.ಎನ್.ಎ. ವಿಧಾನವೂ ಒಳಗೊಂಡಂತೆ ಪರೀಕ್ಷಿಸುವುದನ್ನು ಮತ್ತು ಒಂದು ನಿರ್ದಿಷ್ಟ ಪ್ರಕರಣದಲ್ಲಿ ಅವಶ್ಯವೆಂದು ನೋಂದಾಯಿತ ವೈದ್ಯನು ಭಾವಿಸುವಂಥ ಪರೀಕ್ಷೆಯನ್ನು ಒಳಗೊಳ್ಳುತ್ತದೆ;

(ಬಿ) ‟ನೋಂದಾಯಿತ ವೈದ್ಯ ವೃತ್ತಿಗ" ಎಂದರೆ, ರಾಷ್ಟ್ರೀಯ ವೈದ್ಯಕೀಯ ಆಯೋಗ ಅಧಿನಿಯಮ, 2019 (2019ರ 30)ರ ಮೇರೆಗೆ ಮಾನ್ಯತೆ ಪಡೆದ ಯಾವುದೇ ವೈದ್ಯಕೀಯ ಅರ್ಹತೆಯನ್ನು ಹೊಂದಿರುವ ಮತ್ತು ರಾಷ್ಟ್ರೀಯ ವೈದ್ಯಕೀಯ ರಿಜಿಸ್ಟರಿನಲ್ಲಿ ಅಥವಾ ರಾಜ್ಯ ವೈದ್ಯಕೀಯ ರಿಜಿಸ್ಟರಿನಲ್ಲಿ ಆ ಅಧಿನಿಯಮದ ಮೇರೆಗೆ ಹೆಸರನ್ನು ನೋಂದಾಯಿತನಾದ ವೈದ್ಯ ವೃತ್ತಿಗ.

**52. ಅತ್ಯಾಚಾರದ ಅಪರಾಧಕ್ಕಾಗಿ ಆಪಾದಿತನಾದ ವ್ಯಕ್ತಿಯನ್ನು ವೈದ್ಯ ವೃತ್ತಿಗನು ಪರೀಕ್ಷಿಸುವುದು.-** (1) ಅತ್ಯಾಚಾರ ಮಾಡಿರುವನೆಂಬ ಅಥವಾ ಮಾಡಲು ಪ್ರಯತ್ನಿಸಿದನೆಂಬ ಆಪಾದನೆಯ ಮೇಲೆ ವ್ಯಕ್ತಿಯನ್ನು ದಸ್ತಗಿರಿ ಮಾಡಿದಾಗ, ಆ ವ್ಯಕ್ತಿಯ ದೈಹಿಕ ಪರೀಕ್ಷೆ ಮಾಡುವುದರಿಂದ ಅಂಥ ಅಪರಾಧ ಮಾಡಿರುವ ಬಗ್ಗೆ ಸಾಕ್ಷ್ಯ ದೊರಕಬಹುದೆಂದು ನಂಬಲು ಸಕಾರಣಗಳಿದ್ದಾಗ, ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನಡೆಸುತ್ತಿರುವ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮತ್ತು ಅಪರಾಧ ನಡೆದ ಸ್ಥಳದಿಂದ ಹದಿನಾರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಅಂಥ ವೈದ್ಯ ವೃತ್ತಿಗನು ದೊರಕದಿದ್ದರೆ, ಕಾರ್ಯನಿರ್ವಹಿಸುತ್ತಿರುವ ಯಾರೇ ಪೊಲೀಸ್ ಅಧಿಕಾರಿಯು ಕೋರಿದಾಗ ಇತರ ಯಾರೇ ನೋಂದಾಯಿತ ವೈದ್ಯ ವೃತ್ತಿಗನು ಮತ್ತು ಆ ವೈದ್ಯ ವೃತ್ತಿಗನಿಗೆ ಸದ್ಭಾವನೆಯಿಂದ ನೆರವಾಗುತ್ತಿರುವ ಮತ್ತು ಆ ವೈದ್ಯ ವೃತ್ತಿಗನ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು, ದಸ್ತಗಿರಿಯಾದ ವ್ಯಕ್ತಿಯ ಪರೀಕ್ಷೆ ಮಾಡುವುದು ಮತ್ತು ಆ ಉದ್ದೇಶಕ್ಕಾಗಿ ಸಕಾರಣವಾಗಿ ಅವಶ್ಯಕವಾಗಿರುವಂಥ ಬಲವನ್ನು ಉಪಯೋಗಿಸುವುದು ಕಾನೂನುಬದ್ಧವಾಗಿರತಕ್ಕದ್ದು.

(2) ಅಂಥ ಪರೀಕ್ಷೆಯನ್ನು ಮಾಡುವ ನೋಂದಾಯಿತ ವೈದ್ಯ ವೃತ್ತಿಗನು, ಯಾವುದೇ ವಿಳಂಬ ಮಾಡದೆ, ಅಂಥ ವ್ಯಕ್ತಿಯನ್ನು ಪರೀಕ್ಷಿಸತಕ್ಕದ್ದು ಮತ್ತು ಈ ಕೆಳಗಿನ ವಿವರಗಳನ್ನು ನೀಡುವ ಪರೀಕ್ಷಾ ವರದಿಯನ್ನು ಸಿದ್ಧಪಡಿಸತಕ್ಕದ್ದು, ಅಂದರೆ:-

(i) ಆಪಾದಿತನ ಮತ್ತು ಆತನನ್ನು ಕರೆದುಕೊಂಡು ಬಂದ ವ್ಯಕ್ತಿಯ ಹೆಸರು ಮತ್ತು ವಿಳಾಸ;

(ii) ಆಪಾದಿತನ ವಯಸ್ಸು;

(iii) ಆಪಾದಿತನ ದೇಹದ ಮೇಲೆ ಗಾಯದ ಗುರುತುಗಳೇನಾದರೂ ಇದ್ದರೆ, ಆ ಗಾಯದ ಗುರುತುಗಳು;

(iv) ಡಿ.ಎನ್.ಎ. ಪ್ರೊಫೈಲಿಂಗ್‌ಗಾಗಿ ಆಪಾದಿತನ ದೇಹದಿಂದ ತೆಗೆದುಕೊಂಡ ವಸ್ತುವಿನ ವರ್ಣನೆ; ಮತ್ತು

(v) ಯುಕ್ತ ವಿವರಣೆಯೊಂದಿಗೆ ಇತರ ಮಹತ್ವದ ವಿವರಗಳು.

(3) ಪ್ರತಿಯೊಂದು ನಿರ್ಣಯದ ಬಗೆಗಿನ ಸಂಕ್ಷಿಪ್ತ ಕಾರಣಗಳನ್ನು ವರದಿಯಲ್ಲಿ ಖಚಿತವಾಗಿ ನಿರೂಪಿಸತಕ್ಕದ್ದು.

(4) ಪರೀಕ್ಷೆಯನ್ನು ಪ್ರಾರಂಭಿಸಿದ ಮತ್ತು ಮುಕ್ತಾಯಗೊಳಿಸಿದ ನಿಖರವಾದ ಸಮಯವನ್ನು ವರದಿಯಲ್ಲಿ ನಮೂದು ಮಾಡತಕ್ಕದ್ದು.

(5) ನೋಂದಾಯಿತ ವೈದ್ಯ ವೃತ್ತಿಗನು, ಯಾವುದೇ ವಿಳಂಬ ಮಾಡದೆ ಆ ವರದಿಯನ್ನು ತನಿಖಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ತನಿಖಾಧಿಕಾರಿಯು ಆ ವರದಿಯನ್ನು 193ನೇ ಪ್ರಕರಣದ (6)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿರುವ ದಾಖಲೆಗಳ ಭಾಗವಾಗಿ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

**53. ವೈದ್ಯಾಧಿಕಾರಿಯು ದಸ್ತಗಿರಿಯಾಗಿರುವ ವ್ಯಕ್ತಿಯನ್ನು ಪರೀಕ್ಷಿಸುವುದು.-** (1) ಯಾರೇ ವ್ಯಕ್ತಿಯು ದಸ್ತಗಿರಿಯಾದಾಗ, ಕೂಡಲೇ ಆತನನ್ನು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿರುವ ವೈದ್ಯಾಧಿಕಾರಿಯು ಪರೀಕ್ಷಿಸತಕ್ಕದ್ದು ಮತ್ತು ವೈದ್ಯಾಧಿಕಾರಿಯು ಲಭ್ಯವಿರದಿರುವಾಗ ನೋಂದಾಯಿತ ವೈದ್ಯ ವೃತ್ತಿಗನು ಪರೀಕ್ಷಿಸತಕ್ಕದ್ದು:

ಪರಂತು, ವೈದ್ಯಾಧಿಕಾರಿ ಅಥವಾ ವೈದ್ಯ ವೃತ್ತಿಗನು ಅಂಥ ವ್ಯಕ್ತಿಗೆ ಮತ್ತೊಂದು ಪರೀಕ್ಷೆಯ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟಲ್ಲಿ, ಆತನು ಪರೀಕ್ಷೆ ಮಾಡಬಹುದು:

ಮತ್ತು ಪರಂತು, ದಸ್ತಗಿರಿಯಾದ ವ್ಯಕ್ತಿಯು ಮಹಿಳೆಯಾಗಿದ್ದಾಗ ಆಕೆಯ ದೇಹದ ಪರೀಕ್ಷೆಯನ್ನು ಮಹಿಳಾ ವೈದ್ಯಾಧಿಕಾರಿಯು ಅಥವಾ ಅವಳ ಮೇಲ್ವಿಚಾರಣೆಯಲ್ಲಿ ಮತ್ತು ಮಹಿಳಾ ವೈದ್ಯಾಧಿಕಾರಿ ಲಭ್ಯವಿರದಿದ್ದ ಸಂದರ್ಭದಲ್ಲಿ, ನೋಂದಾಯಿತ ಮಹಿಳಾ ವೈದ್ಯೆ ಮಾಡತಕ್ಕದ್ದು.

(2) ದಸ್ತಗಿರಿಗೊಳಗಾದ ವ್ಯಕ್ತಿಯನ್ನು ಹಾಗೆ ಪರೀಕ್ಷೆ ಮಾಡಿದ ವೈದ್ಯಾಧಿಕಾರಿಯು ಅಥವಾ ನೋಂದಾಯಿತ ವೈದ್ಯ ವೃತ್ತಿಗನು, ಅಂಥ ಪರೀಕ್ಷೆಯ ದಾಖಲೆಯನ್ನು ಸಿದ್ಧಪಡಿಸತಕ್ಕದ್ದು. ಅದರಲ್ಲಿ ದಸ್ತಗಿರಿಗೊಳಗಾದ ವ್ಯಕ್ತಿಗೆ ಆಗಿರುವ ಯಾವುದೇ ಗಾಯಗಳನ್ನು ಅಥವಾ ಹಿಂಸೆಯ ಗುರುತುಗಳನ್ನು ಮತ್ತು ಅಂಥ ಗಾಯಗಳನ್ನು ಮಾಡಿರಬಹುದಾದ ಅಥವಾ ಗುರುತುಗಳು ಆಗಿರಬಹುದಾದ ಸರಿಸುಮಾರು ಸಮಯವನ್ನು ನಮೂದಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಪರೀಕ್ಷೆಯನ್ನು ಮಾಡಿದ್ದಲ್ಲಿ ಅಂಥ ಪರೀಕ್ಷೆಯ ವರದಿಯ ಪ್ರತಿಯನ್ನು, ಸಂದರ್ಭಾನುಸಾರ ವೈದ್ಯಾಧಿಕಾರಿಯು ಅಥವಾ ನೋಂದಾಯಿತ ವೈದ್ಯ ವೃತ್ತಿಗನು, ದಸ್ತಗಿರಿಗೊಳಗಾದ ವ್ಯಕ್ತಿಗೆ ಅಥವಾ ಹಾಗೆ ದಸ್ತಗಿರಿಗೊಳಗಾದ ವ್ಯಕ್ತಿಯು ನಾಮನಿರ್ದೇಶನ ಮಾಡಿದ ವ್ಯಕ್ತಿಗೆ ಒದಗಿಸತಕ್ಕದ್ದು.

**54. ದಸ್ತಗಿರಿಯಾದ ವ್ಯಕ್ತಿಯನ್ನು ಗುರುತಿಸುವುದು.-** ಅಪರಾಧ ಮಾಡಿದ್ದಾನೆಂಬ ಆಪಾದನೆಯ ಮೇಲೆ ವ್ಯಕ್ತಿಯನ್ನು ದಸ್ತಗಿರಿ ಮಾಡಿರುವಲ್ಲಿ ಮತ್ತು ಅಂಥ ಅಪರಾಧದ ತನಿಖೆಯ ಉದ್ದೇಶಕ್ಕಾಗಿ ಬೇರೆ ವ್ಯಕ್ತಿಯು ಅಥವಾ ವ್ಯಕ್ತಿಗಳು ಆತನನ್ನು ಗುರುತಿಸುವುದು ಅವಶ್ಯವೆಂದು ಪರಿಗಣಿಸಿದರೆ, ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯವು, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಕೋರಿಕೆಯ ಮೇರೆಗೆ, ಆ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ಆತನನ್ನು ಬೇರೆ ವ್ಯಕ್ತಿಯು ಅಥವಾ ವ್ಯಕ್ತಿಗಳು ಗುರುತಿಸುವುದಕ್ಕೆ ಒಳಪಡುವಂತೆ ನಿರ್ದೇಶಿಸಬಹುದು:

ಪರಂತು, ದಸ್ತಗಿರಿಯಾದ ವ್ಯಕ್ತಿಯನ್ನು ಗುರುತಿಸುವ ವ್ಯಕ್ತಿಯು ಮಾನಸಿಕವಾಗಿ ಅಥವಾ ದೈಹಿಕವಾಗಿ ಅಶಕ್ತನಾದವನಾಗಿದ್ದರೆ, ಗುರುತಿಸುವ ಅಂಥ ಪ್ರಕ್ರಿಯೆಯು ನ್ಯಾಯಿಕ ಮ್ಯಾಜಿಸ್ಟ್ರೇಟನ ಮೇಲ್ವಿಚಾರಣೆಯಲ್ಲಿ ನಡೆಯತಕ್ಕದ್ದು. ಆ ನ್ಯಾಯಿಕ ಮ್ಯಾಜಿಸ್ಟ್ರೇಟನು, ದಸ್ತಗಿರಿಯಾದ ವ್ಯಕ್ತಿಯನ್ನು ಗುರುತಿಸುವ ಅಂಥ ಅಶಕ್ತ ವ್ಯಕ್ತಿಯು ಬಳಸುವ ವಿಧಾನಗಳನ್ನು

ಬಳಸಲು ಅನುಕೂಲವಾದವುಗಳೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಹಾಗೂ ಗುರುತಿಸುವ ಪ್ರಕ್ರಿಯೆಯನ್ನು ಯಾವುದೇ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕ ದಾಖಲಿಸಿಕೊಳ್ಳತಕ್ಕದ್ದು.

**55. ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡಲು ಅಧೀನ ಅಧಿಕಾರಿಯನ್ನು ಪ್ರತಿನಿಯೋಜಿಸಿದಾಗಿನ ಪ್ರಕ್ರಿಯೆ.-** (1) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಯಾರೇ ಅಧಿಕಾರಿಯು ಅಥವಾ ಅಧ್ಯಾಯ XIIIರ ಮೇರೆಗೆ ತನಿಖೆ ಮಾಡುತ್ತಿರುವ ಯಾರೇ ಪೊಲೀಸ್ ಅಧಿಕಾರಿಯು, ವಾರಂಟಿಲ್ಲದೆ ಕಾನೂನುಬದ್ಧವಾಗಿ ದಸ್ತಗಿರಿ ಮಾಡಬಹುದಾದ ಯಾರೇ ವ್ಯಕ್ತಿಯನ್ನು (ತನ್ನ ಸಮ್ಮುಖದಲ್ಲಲ್ಲದೆ) ವಾರಂಟಿಲ್ಲದೆ ದಸ್ತಗಿರಿ ಮಾಡಲು ತನ್ನ ಅಧೀನ ಅಧಿಕಾರಿಯನ್ನು ಅಗತ್ಯಪಡಿಸುವಾಗ ಆತನನ್ನು ದಸ್ತಗಿರಿ ಮಾಡಲು ಅಗತ್ಯಪಡಿಸಲಾದ ಅಧಿಕಾರಿಗೆ ದಸ್ತಗಿರಿಯಾಗಬೇಕಾದ ವ್ಯಕ್ತಿಯನ್ನು ಮತ್ತು ದಸ್ತಗಿರಿಗೆ ಸಂಬಂಧಿಸಿದ ಅಪರಾಧ ಅಥವಾ ಇತರ ಕಾರಣವನ್ನು ನಿರ್ದಿಷ್ಟಪಡಿಸುವ ಆದೇಶವನ್ನು ಲಿಖಿತದಲ್ಲಿ ಕೊಡತಕ್ಕದ್ದು ಮತ್ತು ಹಾಗೆ ಅಗತ್ಯಪಡಿಸಲಾದ ಅಧಿಕಾರಿಯು, ದಸ್ತಗಿರಿ ಮಾಡುವ ಮುನ್ನ ದಸ್ತಗಿರಿಯಾಗುವ ವ್ಯಕ್ತಿಗೆ ಆದೇಶದ ಸಾರಾಂಶವನ್ನು ತಿಳಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಹಾಗೆ ಅಗತ್ಯಪಡಿಸಿದರೆ, ಆತನಿಗೆ ಆದೇಶವನ್ನು ತೋರಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿರುವ ಯಾವುದೂ, 35ನೇ ಪ್ರಕರಣದ ಮೇರೆಗೆ ವ್ಯಕ್ತಿಯನ್ನು ದಸ್ತಗಿರಿ ಮಾಡುವ ಪೊಲೀಸ್ ಅಧಿಕಾರಿಯ ಅಧಿಕಾರಕ್ಕೆ ಬಾಧಕವಾಗತಕ್ಕದ್ದಲ್ಲ.

**56. ದಸ್ತಗಿರಿಗೊಳಗಾದ ವ್ಯಕ್ತಿಯ ಆರೋಗ್ಯ ಮತ್ತು ಸುರಕ್ಷತೆ.-** ಆಪಾದಿತನ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಯುಕ್ತ ಎಚ್ಚರಿಕೆ ವಹಿಸುವುದು ಆಪಾದಿತನ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು.

**57. ದಸ್ತಗಿರಿಯಾದ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಮುಂದೆ ಹಾಜರುಪಡಿಸುವುದು.-** ವಾರಂಟಿಲ್ಲದೆ ದಸ್ತಗಿರಿ ಮಾಡುವ ಪೊಲೀಸ್ ಅಧಿಕಾರಿಯು, ಅನಾವಶ್ಯಕ ವಿಳಂಬವಿಲ್ಲದೆ ಮತ್ತು ಜಾಮೀನಿಗೆ ಸಂಬಂಧಿಸಿದಂತೆ ಇದರಲ್ಲಿರುವ ಉಪಬಂಧಗಳಿಗೊಳಪಟ್ಟು, ಮೊಕದ್ದಮೆಗೆ ಸಂಬಂಧಿಸಿದಂತೆ ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಅಥವಾ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಮುಂದೆ ದಸ್ತಗಿರಿಯಾದ ವ್ಯಕ್ತಿಯನ್ನು ಕರೆದೊಯ್ಯತಕ್ಕದ್ದು ಅಥವಾ ಕಳುಹಿಸತಕ್ಕದ್ದು.

**58. ದಸ್ತಗಿರಿಯಾದ ವ್ಯಕ್ತಿಯನ್ನು ಇಪ್ಪತ್ತನಾಲ್ಕು ಗಂಟೆಗಳಿಗಿಂತ ಹೆಚ್ಚು ಕಾಲ ತಡೆಹಿಡಿದಿರಿಸಬಾರದು.-** ಯಾರೇ ಪೊಲೀಸ್ ಅಧಿಕಾರಿಯು, ವಾರಂಟಿಲ್ಲದೆ ದಸ್ತಗಿರಿಯಾದ ವ್ಯಕ್ತಿಯನ್ನು ಮೊಕದ್ದಮೆಯ ಎಲ್ಲ ಸಂದರ್ಭಗಳಲ್ಲೂ ಯುಕ್ತವಾದುದಕ್ಕಿಂತ ಹೆಚ್ಚಿನ ಅವಧಿಯವರೆಗೆ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದಲ್ಲ ಮತ್ತು ಅಂಥ ಅವಧಿಯು 187ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ವಿಶೇಷ ಆದೇಶವಿಲ್ಲದಿರುವಲ್ಲಿ, ದಸ್ತಗಿರಿಯಾದ ಸ್ಥಳದಿಂದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಅಥವಾ ಹೊಂದಿಲ್ಲದಿರುವ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಬರಲು ಅಗತ್ಯವಿರುವ ಸಮಯವನ್ನು ಬಿಟ್ಟು ಇಪ್ಪತ್ತನಾಲ್ಕು ಗಂಟೆಗಳನ್ನು ಮೀರತಕ್ಕದ್ದಲ್ಲ.

**59. ಪೊಲೀಸರು ದಸ್ತಗಿರಿಗಳ ಬಗ್ಗೆ ವರದಿ ಮಾಡುವುದು.-** ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗಳು ಅನುಕ್ರಮವಾಗಿ ತಮ್ಮ ತಮ್ಮ ಠಾಣೆಯ ಪರಿಮಿತಿಯೊಳಗೆ ವಾರಂಟಿಲ್ಲದೆ ದಸ್ತಗಿರಿಯಾದ ಎಲ್ಲ ವ್ಯಕ್ತಿಗಳ ಮೊಕದ್ದಮೆಗಳನ್ನು, ಅಂಥ ವ್ಯಕ್ತಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿರಲಿ, ಇಲ್ಲದಿರಲಿ, ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಅವರು ಹಾಗೆ ನಿರ್ದೇಶಿಸಿದರೆ ಉಪವಿಭಾಗದ ಮ್ಯಾಜಿಸ್ಟ್ರೇಟನಿಗೆ ವರದಿ ಮಾಡತಕ್ಕದ್ದು.

**60. ದಸ್ತಗಿರಿಯಾಗಿದ್ದ ವ್ಯಕ್ತಿಯ ಬಿಡುಗಡೆ.-** ಪೊಲೀಸ್ ಅಧಿಕಾರಿಯು ದಸ್ತಗಿರಿ ಮಾಡಿರುವ ಯಾರೇ ವ್ಯಕ್ತಿಯನ್ನು, ಆತನ ಬಂಧಪತ್ರದ ಮೇಲೆ ಅಥವಾ ಜಾಮೀನು ಬಂಧಪತ್ರದ ಮೇಲೆ ಅಥವಾ ಮ್ಯಾಜಿಸ್ಟ್ರೇಟನ ವಿಶೇಷ ಆದೇಶದ ಮೇರೆಗೆ ಹೊರತು, ಬಿಡುಗಡೆ ಮಾಡತಕ್ಕದ್ದಲ್ಲ.

**61. ತಪ್ಪಿಸಿಕೊಂಡಾಗ ಬೆನ್ನಟ್ಟುವ ಮತ್ತು ಪುನಃ ವಶಕ್ಕೆ ತೆಗೆದುಕೊಳ್ಳುವ ಅಧಿಕಾರ.-** (1) ಕಾನೂನುಬದ್ಧ ಅಭಿರಕ್ಷೆಯಲ್ಲಿರುವ ವ್ಯಕ್ತಿಯು ತಪ್ಪಿಸಿಕೊಂಡರೆ ಅಥವಾ ಬಿಡಿಸಿಕೊಂಡು ಹೋದರೆ, ಯಾವ ವ್ಯಕ್ತಿಯ ಅಭಿರಕ್ಷೆಯಿಂದ ಅವನು ತಪ್ಪಿಸಿಕೊಂಡನೋ ಅಥವಾ ಬಿಡಿಸಿಕೊಂಡು ಹೋದನೋ ಆ ವ್ಯಕ್ತಿಯು ಕೂಡಲೇ ಭಾರತದ ಯಾವುದೇ ಸ್ಥಳದಲ್ಲಿ ಆತನನ್ನು ಬೆನ್ನಟ್ಟಬಹುದು ಮತ್ತು ದಸ್ತಗಿರಿ ಮಾಡಬಹುದು.

(2) ಅಂಥ ಯಾವುದೇ ದಸ್ತಗಿರಿಯನ್ನು ಮಾಡುವ ವ್ಯಕ್ತಿಯು ವಾರಂಟಿನ ಮೇರೆಗೆ ಕಾರ್ಯನಿರ್ವಹಿಸದೇ ಇದ್ದರೂ ಮತ್ತು ದಸ್ತಗಿರಿ ಮಾಡಲು ಪ್ರಾಧಿಕಾರ ಹೊಂದಿರುವ ಪೊಲೀಸ್ ಅಧಿಕಾರಿಯಾಗಿಲ್ಲದಿದ್ದರೂ, 44ನೇ ಪ್ರಕರಣದ ಉಪಬಂಧಗಳು, (1)ನೇ ಉಪಪ್ರಕರಣದ ಮೇರೆಗಿನ ದಸ್ತಗಿರಿಗಳಿಗೂ ಅನ್ವಯವಾಗತಕ್ಕದ್ದು.

**62. ಸಂಹಿತೆಯ ಪ್ರಕಾರ ಕಟ್ಟುನಿಟ್ಟಾಗಿ ದಸ್ತಗಿರಿಯನ್ನು ಮಾಡುವುದು.-** ಈ ಸಂಹಿತೆಯ ಅಥವಾ ದಸ್ತಗಿರಿಗೆ ಉಪಬಂಧ ಕಲ್ಪಿಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗನುಸಾರವಾಗಿಯಲ್ಲದೆ ಬೇರೆ ರೀತಿಯಲ್ಲಿ ದಸ್ತಗಿರಿ ಮಾಡತಕ್ಕದ್ದಲ್ಲ.

## ಅಧ್ಯಾಯ VI

## ಹಾಜರಾತಿಯನ್ನು ಒತ್ತಾಯಪಡಿಸಲು ಆದೇಶಿಕೆಗಳು

### *ಎ.- ಸಮನುಗಳು*

**63. ಸಮನುಗಳ ನಮೂನೆ.-** ಈ ಸಂಹಿತೆಯ ಮೇರೆಗೆ ನ್ಯಾಯಾಲಯದಿಂದ ಹೊರಡಿಸಲಾದ ಪ್ರತಿಯೊಂದು ಸಮನ್,-

(i) ಲಿಖಿತದಲ್ಲಿ, ದ್ವಿಪ್ರತಿಯಲ್ಲಿದ್ದು, ಅಂಥ ನ್ಯಾಯಾಲಯದ ಪೀಠಾಸೀನ ಅಧಿಕಾರಿಯು ಅಥವಾ ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ನಿಯಮಗಳ ಮೂಲಕ ನಿರ್ದೇಶಿಸಬಹುದಾದಂಥ ಇತರ ಅಧಿಕಾರಿಯು ಅದಕ್ಕೆ ಸಹಿ ಮಾಡತಕ್ಕದ್ದು ಮತ್ತು ಅದು ನ್ಯಾಯಾಲಯದ ಮುದ್ರೆಯನ್ನು; ಅಥವಾ

(ii) ಗೂಢಲಿಪೀಕರಿಸಿದ ಅಥವಾ ವಿದ್ಯುನ್ಮಾನ ಸಂಪರ್ಕದ ಯಾವುದೇ ಇತರೆ ನಮೂನೆಯಲ್ಲಿರತಕ್ಕದ್ದು ಮತ್ತು ಅದು ನ್ಯಾಯಾಲಯದ ಮುದ್ರೆ ಅಥವಾ ಡಿಜಿಟಲ್ ಸಹಿಯ ಚಿತ್ರವನ್ನು

- ಹೊಂದಿರತಕ್ಕದ್ದು.

**64. ಸಮನುಗಳನ್ನು ಹೇಗೆ ಜಾರಿ ಮಾಡುವುದು.-** (1) ಪ್ರತಿಯೊಂದು ಸಮನುಗಳನ್ನು ಪೊಲೀಸ್ ಅಧಿಕಾರಿಯು, ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಅದನ್ನು ಹೊರಡಿಸುವ ನ್ಯಾಯಾಲಯದ ಅಧಿಕಾರಿಯು ಅಥವಾ ಇತರ ಸರ್ಕಾರಿ ನೌಕರನು ಜಾರಿ ಮಾಡತಕ್ಕದ್ದು:

ಪರಂತು, ಪೊಲೀಸ್ ಠಾಣೆ ಅಥವಾ ನ್ಯಾಯಾಲಯದ ರಿಜಿಸ್ಟ್ರಾರನು, ವಿಳಾಸ, ಇ-ಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಇತರೆ ವಿವರಗಳನ್ನು ನಮೂದಿಸಲು ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) ಕಾರ್ಯಸಾಧ್ಯವಾದರೆ, ಸಮನುಗಳನ್ನು ಸಮನ್ ಮಾಡಲಾದ ವ್ಯಕ್ತಿಗೆ ಖುದ್ದಾಗಿ ಸಮನಿನ ದ್ವಿಪ್ರತಿಗಳಲ್ಲೊಂದನ್ನು ಒಪ್ಪಿಸುವುದರ ಅಥವಾ ನೀಡುವುದರ ಮೂಲಕ ಜಾರಿ ಮಾಡತಕ್ಕದ್ದು:

ಪರಂತು, ನ್ಯಾಯಾಲಯದ ಮುದ್ರೆಯ ಚಿತ್ರವನ್ನು ಹೊಂದಿರುವ ಸಮನುಗಳನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ವಿದ್ಯುನ್ಮಾನ ಸಂಪರ್ಕದ ಮೂಲಕ ಸಹ ಜಾರಿ ಮಾಡಬಹುದು.

(3) ಯಾರಿಗೆ ಖುದ್ದಾಗಿ ಸಮನ್ ಜಾರಿ ಮಾಡಲಾಯಿತೋ ಆ ಪ್ರತಿಯೊಬ್ಬ ವ್ಯಕ್ತಿಯು, ಸಮನ್ ಜಾರಿ ಮಾಡುವ ಅಧಿಕಾರಿಯು ಅಗತ್ಯಪಡಿಸಿದರೆ, ಸಮನಿನ ಮತ್ತೊಂದು ದ್ವಿಪ್ರತಿಯ ಹಿಂಬದಿಯಲ್ಲಿ ಸ್ವೀಕರಿಸಿರುವ ಬಗ್ಗೆ ಸಹಿ ಮಾಡತಕ್ಕದ್ದು.

**65. ನಿಗಮಿತ ನಿಕಾಯಗಳಿಗೆ, ಫರ್ಮ್ ಗಳಿಗೆ ಮತ್ತು ಸಂಘಗಳಿಗೆ ಸಮನುಗಳ ಜಾರಿ.-** (1) ಕಂಪನಿ ಅಥವಾ ನಿಗಮದ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಗೆ ಸಮನ್ ಜಾರಿ ಮಾಡುವುದರ ಮೂಲಕ ಅಥವಾ ಭಾರತದಲ್ಲಿನ ಕಂಪನಿ ಅಥವಾ ನಿಗಮದ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರೆ ಅಧಿಕಾರಿಯ ವಿಳಾಸಕ್ಕೆ ಬರೆಯಲಾದ ನೋಂದಾಯಿತ ಅಂಚೆಯ ಮೂಲಕ ಕಳುಹಿಸಲಾದ ಪತ್ರದ ಮೂಲಕ, ಕಂಪನಿ ಅಥವಾ ನಿಗಮಕ್ಕೆ ಸಮನ್ ಜಾರಿ ಮಾಡಬಹುದು. ಈ ಸಂದರ್ಭದಲ್ಲಿ ಪತ್ರವು ಅಂಚೆಯ ಸಾಮಾನ್ಯ ಕ್ರಮದಲ್ಲಿ ತಲುಪಿದ ಕೂಡಲೇ ಸಮನ್ ಜಾರಿಯಾಗಿದೆಯೆಂದು ಭಾವಿಸತಕ್ಕದ್ದು.

*ವಿವರಣೆ.-* ಈ ಪ್ರಕರಣದಲ್ಲಿ "ಕಂಪನಿ" ಎಂದರೆ, ನಿಗಮಿತ ನಿಕಾಯ. "ನಿಗಮ" ಎಂದರೆ, ನಿಗಮಿತ ಕಂಪನಿ ಅಥವಾ ಕಂಪನಿಗಳ ಅಧಿನಿಯಮ, 2013 (2013ರ 18)ರ ಮೇರೆಗೆ ನೋಂದಾಯಿತವಾದ ಇತರ ನಿಗಮಿತ ನಿಕಾಯ ಅಥವಾ ಸಂಘಗಳ ನೋಂದಣಿ ಅಧಿನಿಯಮ, 1860 (1860 ರ 21)ರ ಮೇರೆಗೆ ನೋಂದಾಯಿತವಾದ ಸಂಘ.

(2) ಫರ್ಮ್ ಅಥವಾ ಇತರೆ ವ್ಯಕ್ತಿಗಳ ಸಂಘಕ್ಕೆ ಜಾರಿಗೊಳಿಸುವ ಸಮನುಗಳನ್ನು ಅಂಥ ಫರ್ಮ್ ಅಥವಾ ಸಂಘದ ಯಾರೇ ಪಾಲುದಾರರಿಗೆ ಜಾರಿ ಮಾಡುವುದರ ಮೂಲಕ ಅಥವಾ ಅಂಥ ಪಾಲುದಾರನ ವಿಳಾಸಕ್ಕೆ ನೋಂದಾಯಿತ ಅಂಚೆಯ ಮುಖಾಂತರ ಕಳುಹಿಸಲಾದ ಪತ್ರದ ಮೂಲಕ ಜಾರಿಗೊಳಿಸಬಹುದು. ಅಂಥ ಸಂದರ್ಭದಲ್ಲಿ ಸಮನಿನ ಜಾರಿಯು, ಆ ಪತ್ರವು ಅಂಚೆಯ ಸಾಮಾನ್ಯ ಕ್ರಮದಲ್ಲಿ ತಲುಪಿದ ಕೂಡಲೇ ಸಮನ್ ಜಾರಿಯಾಗಿರುವುದೆಂದು ಭಾವಿಸತಕ್ಕದ್ದು.

**66. ಸಮನ್ ಮಾಡಲಾದ ವ್ಯಕ್ತಿಗಳು ಸಿಕ್ಕದಿದ್ದಾಗ ಸಮನಿನ ಜಾರಿ.-** ಸಮನ್ ಮಾಡಲಾದ ವ್ಯಕ್ತಿಯು, ಸೂಕ್ತ ಪ್ರಯತ್ನ ಮಾಡಿದರೂ ಸಿಕ್ಕದಿದ್ದರೆ, ಸಮನಿನ ದ್ವಿಪ್ರತಿಗಳಲ್ಲೊಂದನ್ನು ಅವನೊಡನೆ ವಾಸಿಸುವ ಅವನ ಕುಟುಂಬದ ವಯಸ್ಕ ಪುರುಷನಿಗೆ ಕೊಡುವುದರ ಮೂಲಕ ಜಾರಿ ಮಾಡಬಹುದು ಮತ್ತು ಹಾಗೆ ಸಮನನ್ನು ಪಡೆದ ವ್ಯಕ್ತಿಯು, ಜಾರಿ ಮಾಡುವ ಅಧಿಕಾರಿಯು ಅಗತ್ಯಪಡಿಸಿದರೆ, ಮತ್ತೊಂದು ದ್ವಿಪ್ರತಿಯ ಹಿಂಬದಿಯ ಮೇಲೆ ಸಮನ್ ಸ್ವೀಕರಿಸಿರುವ ಬಗ್ಗೆ ಸಹಿ ಮಾಡತಕ್ಕದ್ದು.

*ವಿವರಣೆ.-* ಈ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ನೌಕರನು ಕುಟುಂಬದ ಸದಸ್ಯನಾಗಿರುವುದಿಲ್ಲ.

**67. ಈ ಹಿಂದೆ ಉಪಬಂಧಿಸಲಾದಂತೆ ಜಾರಿ ಮಾಡಲಾಗದಿದ್ದಾಗ ಪ್ರಕ್ರಿಯೆ.-** ಸೂಕ್ತ ಪ್ರಯತ್ನ ಮಾಡಿದಾಗ್ಯೂ, 64ನೇ ಪ್ರಕರಣ, 65ನೇ ಪ್ರಕರಣ ಅಥವಾ 66ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಸಮನ್ ಜಾರಿ ಮಾಡಲಾಗದಿದ್ದರೆ, ಜಾರಿ ಮಾಡುವ ಅಧಿಕಾರಿಯು ಸಮನಿನ ದ್ವಿಪ್ರತಿಗಳಲ್ಲೊಂದನ್ನು ಸಮನ್ ಮಾಡಲಾದ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಮನೆ ಅಥವಾ ಹೊರ ಮನೆಯ ಎದ್ದುಕಾಣುವ ಭಾಗಕ್ಕೆ ಅಂಟಿಸತಕ್ಕದ್ದು ಮತ್ತು ಆನಂತರ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಗಳನ್ನು ಮಾಡಿದ ತರುವಾಯ ಸಮನನ್ನು ಯುಕ್ತಬದ್ಧವಾಗಿ ಜಾರಿಮಾಡಲಾಗಿದೆಯೆಂದು

ಘೋಷಿಸಬಹುದು ಅಥವಾ ತಾನು ಸೂಕ್ತವೆಂದು ಪರ್ಯಾಲೋಚಿಸಬಹುದಾದಂಥ ರೀತಿಯಲ್ಲಿ ಹೊಸದಾಗಿ ಸಮನ್ ಜಾರಿ ಮಾಡಲು ಆದೇಶ ಮಾಡಬಹುದು.

**68. ಸರ್ಕಾರಿ ನೌಕರನಿಗೆ ಸಮನಿನ ಜಾರಿ.-** (1) ಸಮನ್ ಮಾಡಲಾಗಿರುವ ವ್ಯಕ್ತಿಯು ಸರ್ಕಾರದ ಸಕ್ರಿಯ ಸೇವೆಯಲ್ಲಿದ್ದಲ್ಲಿ, ಸಮನುಗಳನ್ನು ಹೊರಡಿಸುವ ನ್ಯಾಯಾಲಯವು ಅವನು ನಿಯೋಜಿತನಾಗಿರುವ ಕಚೇರಿಯ ಮುಖ್ಯಸ್ಥನಿಗೆ, ಸಾಮಾನ್ಯವಾಗಿ ಅದನ್ನು ದ್ವಿಪ್ರತಿಯಲ್ಲಿ ಕಳುಹಿಸತಕ್ಕದ್ದು ಮತ್ತು ಅಂಥ ಮುಖ್ಯಸ್ಥನು ಆನಂತರ 64ನೇ ಪ್ರಕರಣದಿಂದ ಉಪಬಂಧಿಸಲಾದ ರೀತಿಯಲ್ಲಿ ಸಮನನ್ನು ಜಾರಿ ಮಾಡಿಸತಕ್ಕದ್ದು ಮತ್ತು ಆತನು ಸಹಿ ಮಾಡಿ, ಈ ಪ್ರಕರಣವು ಅಗತ್ಯಪಡಿಸಿದ ಹಿಂಬರಹದೊಡನೆ ನ್ಯಾಯಾಲಯಕ್ಕೆ ಹಿಂತಿರುಗಿಸತಕ್ಕದ್ದು.

(2) ಅಂಥ ಸಹಿಯು ಯುಕ್ತ ಜಾರಿಯ ಬಗ್ಗೆ ಸಾಕ್ಷ್ಯವಾಗತಕ್ಕದ್ದು.

**69. ಸ್ಥಳೀಯ ಪರಿಮಿತಿಗಳ ಹೊರಗೆ ಸಮನ್ ಜಾರಿ.-** ನ್ಯಾಯಾಲಯವು ತಾನು ಹೊರಡಿಸಿದ ಸಮನನ್ನು ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯ ಹೊರಗಿನ ಯಾವುದೇ ಸ್ಥಳದಲ್ಲಿ ಜಾರಿ ಮಾಡತಕ್ಕದ್ದೆಂದು ಅಪೇಕ್ಷಿಸಿದಾಗ, ಯಾರ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಸಮನ್ ಮಾಡಲಾದ ವ್ಯಕ್ತಿಯು ವಾಸಿಸುವನೋ ಅಥವಾ ಇರುವನೋ, ಆ ಮ್ಯಾಜಿಸ್ಟ್ರೇಟನಿಗೆ, ಅಲ್ಲಿ ಅದನ್ನು ಜಾರಿ ಮಾಡುವುದಕ್ಕಾಗಿ ಅಂಥ ಸಮನನ್ನು ದ್ವಿಪ್ರತಿಯಲ್ಲಿ ಕಳುಹಿಸತಕ್ಕದ್ದು.

**70. ಅಂಥ ಸಂದರ್ಭಗಳಲ್ಲಿ ಮತ್ತು ಜಾರಿ ಮಾಡುವ ಅಧಿಕಾರಿಯು ಹಾಜರಿಲ್ಲದಿರುವಾಗ ಸಮನುಗಳ ಜಾರಿಯ ರುಜುವಾತು.-** (1) ನ್ಯಾಯಾಲಯದಿಂದ ಹೊರಡಿಸಲಾದ ಸಮನನ್ನು ಅದರ ಸ್ಥಳೀಯ ಅಧಿಕಾರವ್ಯಾಪ್ತಿಯ ಹೊರಗೆ ಜಾರಿ ಮಾಡಿದಲ್ಲಿ ಮತ್ತು ಸಮನನ್ನು ಜಾರಿ ಮಾಡಿದ ಅಧಿಕಾರಿಯು, ಮೊಕದ್ದಮೆಯ ವಿಚಾರಣೆಯಲ್ಲಿ ಹಾಜರಿರದಿದ್ದ ಯಾವುದೇ ಸಂದರ್ಭದಲ್ಲಿ, ಅಂಥ ಸಮನ್ ಜಾರಿಯಾಗಿದೆಯೆಂದು ಮ್ಯಾಜಿಸ್ಟ್ರೇಟನ ಮುಂದೆ ಮಾಡಲಾಗಿರುವಂತೆ ತಾತ್ಪರ್ಯವಾಗುವ ಪ್ರಮಾಣಪತ್ರವು ಮತ್ತು ಅದನ್ನು ಯಾರಿಗೆ ಒಪ್ಪಿಸಲಾಗಿದೆಯೋ ಅಥವಾ ನೀಡಲಾಗಿದೆಯೋ ಅಥವಾ ಕೊಡಲಾಗಿದೆಯೋ, ಆ ವ್ಯಕ್ತಿಯು (64ನೇ ಅಥವಾ 66ನೇ ಪ್ರಕರಣದಿಂದ ಉಪಬಂಧಿಸಲಾದ ರೀತಿಯಲ್ಲಿ) ಹಿಂಬರಹ ಮಾಡಿದ್ದಾನೆಂದು ತಾತ್ಪರ್ಯವಾಗುವ ಸಮನಿನ ದ್ವಿಪ್ರತಿಯು ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು ಮತ್ತು ಅದರಲ್ಲಿ ಮಾಡಲಾದ ಹೇಳಿಕೆಗಳನ್ನು, ತದ್ವಿರುದ್ಧವಾಗಿ ರುಜುವಾತಾದ ಹೊರತು ಅಥವಾ ಆಗುವವರೆಗೆ ಸರಿಯಾಗಿದೆಯೆಂದು ಭಾವಿಸತಕ್ಕದ್ದು.

(2) ಈ ಪ್ರಕರಣದಲ್ಲಿ ಹೇಳಲಾದ ಪ್ರಮಾಣಪತ್ರವನ್ನು ಸಮನಿನ ದ್ವಿಪ್ರತಿಗೆ ಲಗತ್ತಿಸಿ ನ್ಯಾಯಾಲಯಕ್ಕೆ ಹಿಂತಿರುಗಿಸಬಹುದು.

(3) 64 ರಿಂದ 71 ರವರೆಗಿನ (ಎರಡೂ ಸೇರಿ) ಪ್ರಕರಣಗಳ ಮೇರೆಗೆ ವಿದ್ಯುನ್ಮಾನ ಸಂಪರ್ಕದ ಮುಖಾಂತರ ಜಾರಿಗೊಳಿಸಿದ ಎಲ್ಲಾ ಸಮನುಗಳನ್ನು ಕ್ರಮಬದ್ಧವಾಗಿ ಜಾರಿಗೊಳಿಸಲಾಗಿದೆಯೆಂದು ಪರಿಗಣಿಸತಕ್ಕದ್ದು ಮತ್ತು ಅಂಥ ಸಮನುಗಳ ಒಂದು ಪ್ರತಿಯನ್ನು ದೃಢೀಕರಿಸಿ, ಸಮನ್ ಜಾರಿಗೊಳಿಸಿರುವ ಬಗೆಗಿನ ರುಜುವಾತಾಗಿ ಅದನ್ನು ಇಟ್ಟುಕೊಳ್ಳತಕ್ಕದ್ದು.

**71. ಸಾಕ್ಷಿದಾರನಿಗೆ ಸಮನಿನ ಜಾರಿ.-** (1) ಈ ಅಧ್ಯಾಯದ ಹಿಂದಿನ ಪ್ರಕರಣಗಳಲ್ಲಿ ಏನೇ ಇದ್ದರೂ, ಸಾಕ್ಷಿದಾರನಿಗೆ ಸಮನ್ ಹೊರಡಿಸುವ ನ್ಯಾಯಾಲಯವು ಅಂಥ ಸಮನುಗಳನ್ನು ಹೊರಡಿಸುವುದರ ಜೊತೆಜೊತೆಗೆ ಸಾಕ್ಷಿದಾರನು ಸಾಮಾನ್ಯವಾಗಿ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುವ ಅಥವಾ ಲಾಭಕ್ಕಾಗಿ ಸ್ವತಃ ಕೆಲಸ ಮಾಡುವ ಸ್ಥಳದ ವಿಳಾಸಕ್ಕೆ ವಿದ್ಯುನ್ಮಾನ ಸಂಪರ್ಕ ಅಥವಾ ನೋಂದಾಯಿತ ಅಂಚೆಯ ಮೂಲಕ, ಸಮನಿನ ಒಂದು ಪ್ರತಿಯನ್ನು ಜಾರಿ ಮಾಡಬೇಕೆಂದು ನಿರ್ದೇಶಿಸಬಹುದು.

(2) ಸಾಕ್ಷಿದಾರನು ಸಹಿ ಹಾಕಿದ್ದಾನೆಂದು ತಾತ್ಪರ್ಯವಾಗುವ ಸ್ವೀಕೃತಿಯನ್ನು ಅಥವಾ ಸಮನನ್ನು ತೆಗೆದುಕೊಳ್ಳಲು ನಿರಾಕರಿಸಿದನೆಂದು ಅಂಚೆ ನೌಕರನು ಮಾಡಿದ್ದಾನೆಂದು ತಾತ್ಪರ್ಯವಾಗುವ ಹಿಂಬರಹವನ್ನು ಸ್ವೀಕರಿಸಿದಾಗ ಅಥವಾ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ 70ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಿದ್ಯುನ್ಮಾನ ಸಂಪರ್ಕದ ಮೂಲಕ ಸಮನ್ ತಲುಪಿದ್ದರ ರುಜುವಾತಿನ ಮೇಲೆ, ಸಮನನ್ನು ಹೊರಡಿಸಿದ ನ್ಯಾಯಾಲಯವು ಸಮನುಗಳು ಯುಕ್ತವಾಗಿ ಜಾರಿ ಮಾಡಲಾಗಿದೆಯೆಂದು ಭಾವಿಸಬಹುದು.

***ಬಿ.- ದಸ್ತಗಿರಿಯ ವಾರಂಟ್***

**72. ದಸ್ತಗಿರಿಯ ವಾರಂಟಿನ ನಮೂನೆ ಮತ್ತು ಅವಧಿ.-** (1) ಈ ಸಂಹಿತೆಯ ಮೇರೆಗೆ ನ್ಯಾಯಾಲಯವು ಹೊರಡಿಸಿದ ಪ್ರತಿಯೊಂದು ದಸ್ತಗಿರಿಯ ವಾರಂಟ್ ಲಿಖಿತದಲ್ಲಿದ್ದು, ಅಂಥ ನ್ಯಾಯಾಲಯದ ಪೀಠಾಸೀನಾಧಿಕಾರಿಯು ಅದಕ್ಕೆ ಸಹಿ ಹಾಕತಕ್ಕದ್ದು ಮತ್ತು ನ್ಯಾಯಾಲಯದ ಮುದ್ರೆಯನ್ನು ಹೊಂದಿರತಕ್ಕದ್ದು.

(2) ಅಂಥ ಪ್ರತಿಯೊಂದು ವಾರಂಟ್, ಅದನ್ನು ಹೊರಡಿಸಿದ ನ್ಯಾಯಾಲಯವು ಅದನ್ನು ರದ್ದು ಮಾಡುವವರೆಗೆ ಅಥವಾ ಅದು ಕಾರ್ಯಗತವಾಗುವವರೆಗೆ ಜಾರಿಯಲ್ಲಿರತಕ್ಕದ್ದು.

**73. ಭದ್ರತೆ ತೆಗೆದುಕೊಳ್ಳಲು ನಿರ್ದೇಶಿಸುವ ಅಧಿಕಾರ.-** (1) ಯಾರೇ ವ್ಯಕ್ತಿಯ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸುವ ಯಾವುದೇ ನ್ಯಾಯಾಲಯವು, ಅಂಥ ವ್ಯಕ್ತಿಯು ನಿರ್ದಿಷ್ಟಪಡಿಸಿದ ಸಮಯದಲ್ಲಿ ಮತ್ತು ತದನಂತರ ನ್ಯಾಯಾಲಯವು ಅನ್ಯಥಾ ನಿರ್ದೇಶಿಸುವವರೆಗೆ ನ್ಯಾಯಾಲಯದ ಮುಂದೆ ತನ್ನ ಹಾಜರಾತಿಗಾಗಿ ಸಾಕಷ್ಟು ಜಾಮೀನುದಾರರೊಂದಿಗೆ ಜಾಮೀನು ಬಂಧಪತ್ರವನ್ನು ಬರೆದುಕೊಟ್ಟರೆ, ಆ ವಾರಂಟ್ ಜಾರಿಗೆ ನಿರ್ದೇಶಿತವಾಗಿರುವ ಅಧಿಕಾರಿಯು ಅಂಥ ಭದ್ರತೆಯನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ವ್ಯಕ್ತಿಯನ್ನು ಅಭಿರಕ್ಷೆಯಿಂದ ಬಿಡುಗಡೆ ಮಾಡತಕ್ಕದ್ದು ಎಂದು ತನ್ನ ವಿವೇಚನೆಯಿಂದ ವಾರಂಟಿನ ಮೇಲೆ ಹಿಂಬರಹದ ಮೂಲಕ ನಿರ್ದೇಶಿಸಬಹುದು.

(2) ಆ ಹಿಂಬರಹದಲ್ಲಿ,-

(ಎ) ಜಾಮೀನುದಾರರ ಸಂಖ್ಯೆ;

(ಬಿ) ಅವರು ಮತ್ತು ಯಾರ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸಲಾಯಿತೋ ಆ ವ್ಯಕ್ತಿಯು ಎಷ್ಟು ಮೊಬಲಗಿಗೆ ಅನುಕ್ರಮವಾಗಿ ಬದ್ಧನಾಗಿರುವರೋ ಆ ಮೊಬಲಗು;

(ಸಿ) ಅವನು ನ್ಯಾಯಾಲಯದ ಮುಂದೆ ಹಾಜರಾಗಬೇಕಾದ ಸಮಯ

- ಇವುಗಳನ್ನು ನಮೂದಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಭದ್ರತೆ ತೆಗೆದುಕೊಂಡಾಗ, ಆ ವಾರಂಟ್ ಜಾರಿಗೆ ನಿರ್ದೇಶಿತನಾಗಿರುವ ಅಧಿಕಾರಿಯು ಬಂಧಪತ್ರವನ್ನು ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು.

**74. ವಾರಂಟ್‌ಗಳು ಯಾರಿಗೆ ನಿರ್ದೇಶಿತವಾಗಬೇಕು.-** (1) ದಸ್ತಗಿರಿಯ ವಾರಂಟನ್ನು ಜಾರಿಗಾಗಿ ಸಾಮಾನ್ಯವಾಗಿ ಒಬ್ಬ ಅಥವಾ ಹೆಚ್ಚು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶಿಸತಕ್ಕದ್ದು, ಆದರೆ ಅಂಥ ವಾರಂಟನ್ನು ಹೊರಡಿಸುವ ನ್ಯಾಯಾಲಯವು, ಅದು ಕೂಡಲೇ ಜಾರಿಯಾಗುವುದು ಅವಶ್ಯಕವಾಗಿದ್ದರೆ ಮತ್ತು ಯಾವ ಪೊಲೀಸ್ ಅಧಿಕಾರಿಯೂ ಕೂಡಲೇ ಸಿಗದಿದ್ದರೆ, ಅದನ್ನು ಯಾರೇ ಇತರ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಅದನ್ನು ಜಾರಿ ಮಾಡತಕ್ಕದ್ದು.

(2) ಒಂದು ವಾರಂಟನ್ನು ಜಾರಿಗಾಗಿ ಒಬ್ಬನಿಗಿಂತ ಹೆಚ್ಚು ಅಧಿಕಾರಿಗಳಿಗೆ ಅಥವಾ ವ್ಯಕ್ತಿಗಳಿಗೆ ನಿರ್ದೇಶಿಸಿದ್ದರೆ ಅದನ್ನು ಎಲ್ಲರೂ ಅಥವಾ ಅವರಲ್ಲಿ ಒಬ್ಬನು ಅಥವಾ ಹೆಚ್ಚು ಮಂದಿ ಜಾರಿ ಮಾಡಬಹುದು.

**75. ವಾರಂಟನ್ನು ಯಾರೇ ವ್ಯಕ್ತಿಗೆ ನಿರ್ದೇಶಿಸಬಹುದು.-** (1) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು, ತಪ್ಪಿಸಿಕೊಂಡ ಯಾರೇ ನಿರ್ಣೀತ ಅಪರಾಧಿಯ, ಘೋಷಿತ ಅಪರಾಧಿಯ ಅಥವಾ ಜಾಮೀನೀಯವಲ್ಲದ ಅಪರಾಧದ ಆಪಾದಿತನಾದ ಮತ್ತು ದಸ್ತಗಿರಿಯನ್ನು ತಪ್ಪಿಸಿಕೊಳ್ಳುತ್ತಿರುವ ಯಾರೇ ವ್ಯಕ್ತಿಯ ದಸ್ತಗಿರಿಗಾಗಿ ವಾರಂಟನ್ನು ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯಲ್ಲಿರುವ ಯಾರೇ ವ್ಯಕ್ತಿಗೆ ಜಾರಿಗಾಗಿ ನಿರ್ದೇಶಿಸಬಹುದು.

(2) ಅಂಥ ವ್ಯಕ್ತಿಯು ವಾರಂಟನ್ನು ಪಡೆದ ಬಗ್ಗೆ ಸ್ವೀಕೃತಿಯನ್ನು ಲಿಖಿತದಲ್ಲಿ ನೀಡತಕ್ಕದ್ದು ಮತ್ತು ಯಾರ ದಸ್ತಗಿರಿಗಾಗಿ ಅದನ್ನು ಹೊರಡಿಸಲಾಗಿತ್ತೋ ಆ ವ್ಯಕ್ತಿಯು ತನ್ನ ವಶದಲ್ಲಿರುವ ಯಾವುದೇ ಭೂಮಿ ಅಥವಾ ಇತರ ಸ್ವತ್ತಿನಲ್ಲಿ ಇದ್ದರೆ ಅಥವಾ ಅವುಗಳನ್ನು ಪ್ರವೇಶಿಸಿದ್ದರೆ ಅದನ್ನು ಜಾರಿ ಮಾಡತಕ್ಕದ್ದು.

(3) ಯಾರ ವಿರುದ್ಧವಾಗಿ ಅಂಥ ವಾರಂಟನ್ನು ಹೊರಡಿಸಲಾಗಿದೆಯೋ ಆ ವ್ಯಕ್ತಿಯು ದಸ್ತಗಿರಿಯಾದರೆ ಅವನನ್ನು ಅತಿ ಸಮೀಪದ ಪೊಲೀಸ್ ಅಧಿಕಾರಿಗೆ ವಾರಂಟಿನೊಡನೆ ಒಪ್ಪಿಸತಕ್ಕದ್ದು ಮತ್ತು ಆ ಪೊಲೀಸ್ ಅಧಿಕಾರಿಯು, ಆ ವ್ಯಕ್ತಿಯನ್ನು 73ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ತೆಗೆದುಕೊಂಡ ಹೊರತು, ಮೊಕದ್ದಮೆಯ ಬಗ್ಗೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಕರೆದೊಯ್ಯುವಂತೆ ಮಾಡತಕ್ಕದ್ದು.

**76. ಪೊಲೀಸ್ ಅಧಿಕಾರಿಗೆ ನಿರ್ದೇಶಿತವಾದ ವಾರಂಟ್.-** ಯಾರೇ ಪೊಲೀಸ್ ಅಧಿಕಾರಿಗೆ ಜಾರಿಗಾಗಿ ನಿರ್ದೇಶಿತವಾದ ಒಂದು ವಾರಂಟನ್ನು ಅದರ ಜಾರಿಗೆ ನಿರ್ದೇಶಿತನಾದ ಅಥವಾ ಹಿಂಬರಹದ ಮೂಲಕ ಅದನ್ನು ಪಡೆದುಕೊಂಡ ಅಧಿಕಾರಿಯಿಂದ, ವಾರಂಟಿನ ಮೇಲೆ ಯಾರ ಹೆಸರನ್ನು ಹಿಂಬರಹ ಮಾಡಲಾಗಿದೆಯೋ ಆ ಪೊಲೀಸ್ ಅಧಿಕಾರಿಯೂ ಸಹ ಅದನ್ನು ಜಾರಿ ಮಾಡಬಹುದು.

**77. ವಾರಂಟಿನ ಸಾರಾಂಶವನ್ನು ತಿಳಿಸುವುದು.-** ದಸ್ತಗಿರಿಯ ವಾರಂಟನ್ನು ಜಾರಿ ಮಾಡುವ ಪೊಲೀಸ್ ಅಧಿಕಾರಿ ಅಥವಾ ಇತರ ವ್ಯಕ್ತಿಯು ಅದರ ಸಾರಾಂಶವನ್ನು, ದಸ್ತಗಿರಿಯಾಗಬೇಕಾದ ವ್ಯಕ್ತಿಗೆ ತಿಳಿಸತಕ್ಕದ್ದು ಮತ್ತು ಅವನು ಹಾಗೆ ಅಗತ್ಯಪಡಿಸಿದರೆ ಅವನಿಗೆ ವಾರಂಟನ್ನು ತೋರಿಸತಕ್ಕದ್ದು.

**78. ದಸ್ತಗಿರಿಯಾದ ವ್ಯಕ್ತಿಯನ್ನು ವಿಳಂಬವಿಲ್ಲದೆ ನ್ಯಾಯಾಲಯದ ಮುಂದೆ ಹಾಜರುಪಡಿಸತಕ್ಕದ್ದು.-** ದಸ್ತಗಿರಿಯ ವಾರಂಟನ್ನು ಜಾರಿ ಮಾಡುವ ಪೊಲೀಸ್ ಅಧಿಕಾರಿಯು ಅಥವಾ ಇತರ ವ್ಯಕ್ತಿಯು (ಭದ್ರತೆಯ ಬಗ್ಗೆ 73ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು) ಅನಾವಶ್ಯಕ ವಿಳಂಬವಿಲ್ಲದೆ ದಸ್ತಗಿರಿಯಾದ ವ್ಯಕ್ತಿಯನ್ನು ಯಾವ ನ್ಯಾಯಾಲಯದ ಮುಂದೆ ತಾನು ಹಾಜರುಪಡಿಸಬೇಕೆಂದು ಕಾನೂನು ಅಗತ್ಯಪಡಿಸಿದೆಯೋ ಆ ನ್ಯಾಯಾಲಯದ ಮುಂದೆ ಹಾಜರುಪಡಿಸತಕ್ಕದ್ದು:

ಪರಂತು, ದಸ್ತಗಿರಿಯ ಸ್ಥಳದಿಂದ ಮ್ಯಾಜಿಸ್ಟ್ರೇಟನ ನ್ಯಾಯಾಲಯದವರೆಗೆ ಪ್ರಯಾಣಕ್ಕಾಗಿ ಅವಶ್ಯಕವಾಗುವ ಸಮಯವನ್ನು ಬಿಟ್ಟು ಅಂಥ ವಿಳಂಬವು ಯಾವುದೇ ಸಂದರ್ಭದಲ್ಲೂ ಇಪ್ಪತ್ತನಾಲ್ಕು ಗಂಟೆಗಳನ್ನು ಮೀರತಕ್ಕದ್ದಲ್ಲ.

**79. ವಾರಂಟನ್ನು ಎಲ್ಲಿ ಜಾರಿಗೊಳಿಸಬಹುದು.-** ದಸ್ತಗಿರಿಯ ಒಂದು ವಾರಂಟನ್ನು ಭಾರತದಲ್ಲಿನ ಯಾವುದೇ ಪ್ರದೇಶದಲ್ಲಿ ಜಾರಿಗೊಳಿಸಬಹುದು.

**80. ಅಧಿಕಾರವ್ಯಾಪ್ತಿಯ ಹೊರಗೆ ಜಾರಿಗಾಗಿ ಕಳುಹಿಸಬೇಕಾದ ವಾರಂಟ್.-** (1) ವಾರಂಟನ್ನು, ಅದನ್ನು ಹೊರಡಿಸುವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯ ಹೊರಗೆ ಜಾರಿಗೊಳಿಸಬೇಕಾದಾಗ, ಅಂಥ ನ್ಯಾಯಾಲಯವು ವಾರಂಟನ್ನು

ತನ್ನ ಅಧಿಕಾರವ್ಯಾಪ್ತಿಯೊಳಗೆ ನಿರ್ದೇಶಿಸುವ ಬದಲು, ಅದನ್ನು ಯಾರ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಜಾರಿಗೊಳಿಸಬೇಕಾಗಿದೆಯೋ ಆ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ಅಥವಾ ಜಿಲ್ಲಾ ಪೊಲೀಸ್ ಅಧೀಕ್ಷಕನಿಗೆ ಅಥವಾ ಪೊಲೀಸ್ ಆಯುಕ್ತನಿಗೆ ಅದನ್ನು ಅಂಚೆಯ ಮೂಲಕ ಅಥವಾ ಬೇರೆ ರೀತಿಯಿಂದ ಕಳುಹಿಸಿಕೊಡಬಹುದು ಮತ್ತು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಪೊಲೀಸ್ ಅಧೀಕ್ಷಕ ಅಥವಾ ಆಯುಕ್ತನು ಅದರ ಮೇಲೆ ತನ್ನ ಹೆಸರನ್ನು ಹಿಂಬರಹ ಮಾಡತಕ್ಕದ್ದು ಮತ್ತು ಕಾರ್ಯಸಾಧ್ಯವಾದರೆ ಇದರಲ್ಲಿ ಇದಕ್ಕೆ ಮುಂಚೆ ಉಪಬಂಧಿಸಲಾದ ರೀತಿಯಲ್ಲಿ ಅದನ್ನು ಜಾರಿಯಾಗುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ವಾರಂಟನ್ನು ಹೊರಡಿಸುವ ನ್ಯಾಯಾಲಯವು, ದಸ್ತಗಿರಿಯಾಗಬೇಕಾದ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೇ ಅಥವಾ ಬೇಡವೇ ಎಂಬುದನ್ನು ತೀರ್ಮಾನಿಸಲು 83ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಲಯಕ್ಕೆ ಸಾಕಷ್ಟು ಅನುಕೂಲವಾಗುವಂಥ ಆ ವ್ಯಕ್ತಿಯ ಬಗೆಗಿನ ಮಾಹಿತಿಯ ಸಾರಾಂಶವನ್ನು ಮತ್ತು ದಸ್ತಾವೇಜುಗಳೇನಾದರೂ ಇದ್ದರೆ, ಅವುಗಳ ಸಮೇತ ವಾರಂಟಿನೊಡನೆ ಕಳುಹಿಸತಕ್ಕದ್ದು.

**81. ಅಧಿಕಾರವ್ಯಾಪ್ತಿಯ ಹೊರಗೆ ಜಾರಿ ಮಾಡಲು ಪೊಲೀಸ್ ಅಧಿಕಾರಿಗೆ ನಿರ್ದೇಶಿತವಾದ ವಾರಂಟ್.-** (1) ಪೊಲೀಸ್ ಅಧಿಕಾರಿಗೆ ನಿರ್ದೇಶಿತವಾದ ವಾರಂಟನ್ನು, ಅದನ್ನು ಹೊರಡಿಸುವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯ ಹೊರಗೆ ಜಾರಿ ಮಾಡಬೇಕಾಗಿರುವಲ್ಲಿ, ಯಾರ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಆ ವಾರಂಟ್ ಜಾರಿಯಾಗಬೇಕಾಗಿರುವುದೋ ಆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ಅಥವಾ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ದರ್ಜೆಗೆ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಗೆ, ಆತನು ಸಾಮಾನ್ಯ ಹಿಂಬರಹ ನೀಡಿ ಅದನ್ನು ತೆಗೆದುಕೊಳ್ಳತಕ್ಕದ್ದು.

(2) ಅಂಥ ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಅಧಿಕಾರಿಯು ಅದರ ಮೇಲೆ ತನ್ನ ಹೆಸರನ್ನು ಹಿಂಬರಹ ಮಾಡತಕ್ಕದ್ದು ಮತ್ತು ಅಂಥ ಹಿಂಬರಹವು ಯಾರಿಗೆ ವಾರಂಟನ್ನು ಜಾರಿಗೊಳಿಸುವುದಕ್ಕಾಗಿ ನಿರ್ದೇಶಿಸಲಾಗಿದೆಯೋ ಆ ಪೊಲೀಸ್ ಅಧಿಕಾರಿಗೆ ಸಾಕಷ್ಟು ಅಧಿಕಾರವನ್ನು ನೀಡುವಂಥದಾಗಿರತಕ್ಕದ್ದು ಮತ್ತು ಸ್ಥಳೀಯ ಪೊಲೀಸರು, ಹಾಗೆ ಅವಶ್ಯಕವಾದಲ್ಲಿ ಅಂಥ ವಾರಂಟನ್ನು ಜಾರಿಗೊಳಿಸುವಲ್ಲಿ ಅಂಥ ಅಧಿಕಾರಿಗೆ ಸಹಾಯ ಮಾಡತಕ್ಕದ್ದು.

(3) ಯಾರ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ವಾರಂಟನ್ನು ಜಾರಿಮಾಡಬೇಕಾಗಿದೆಯೋ ಅಂಥ ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಅಧಿಕಾರಿಯ ಹಿಂಬರಹವನ್ನು ಪಡೆಯುವಲ್ಲಿ ಉಂಟಾಗುವ ವಿಳಂಬವು ಅಂಥ ವಾರಂಟಿನ ಜಾರಿಗೆ ಅಡ್ಡಿಯನ್ನುಂಟು ಮಾಡುತ್ತದೆ ಎಂದು ನಂಬಲು ಕಾರಣವಿರುವಲ್ಲಿ, ಅದನ್ನು ಯಾರಿಗೆ ಜಾರಿಗಾಗಿ ನಿರ್ದೇಶಿಸಲಾಗಿದೆಯೋ ಆ ಪೊಲೀಸ್ ಅಧಿಕಾರಿಯು ಅಂಥ ಹಿಂಬರಹವಿಲ್ಲದೆಯೇ ಅದನ್ನು ಹೊರಡಿಸಿದ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯ ಹೊರಗೆ ಯಾವುದೇ ಸ್ಥಳದಲ್ಲಿ ಜಾರಿ ಮಾಡಬಹುದು.

**82. ಯಾರ ವಿರುದ್ಧವಾಗಿ ವಾರಂಟನ್ನು ಹೊರಡಿಸಲಾಗಿದೆಯೋ ಆ ವ್ಯಕ್ತಿಯ ದಸ್ತಗಿರಿ ನಂತರದ ಪ್ರಕ್ರಿಯೆ.-** (1) ದಸ್ತಗಿರಿಯ ವಾರಂಟನ್ನು, ಅದನ್ನು ಹೊರಡಿಸಲಾದ ಜಿಲ್ಲೆಯ ಹೊರಗೆ ಜಾರಿಮಾಡಿದ್ದಲ್ಲಿ, ವಾರಂಟನ್ನು ಹೊರಡಿಸಿದ ನ್ಯಾಯಾಲಯವು ದಸ್ತಗಿರಿಯಾದ ಸ್ಥಳದಿಂದ ಮೂವತ್ತು ಕಿಲೋಮೀಟರುಗಳೊಳಗೆ ಇದ್ದ ಹೊರತು ಅಥವಾ ಯಾರ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳ ಒಳಗೆ ದಸ್ತಗಿರಿಯನ್ನು ಮಾಡಲಾಗಿತ್ತೋ ಆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಪೊಲೀಸ್ ಅಧೀಕ್ಷಕ ಅಥವಾ ಪೊಲೀಸ್ ಆಯುಕ್ತನಿಗಿಂತ ಹತ್ತಿರದಲ್ಲಿದ್ದ ಹೊರತು ಅಥವಾ 73ನೇ ಪ್ರಕರಣದ

ಮೇರೆಗೆ ಭದ್ರತೆ ತೆಗೆದುಕೊಂಡಿದ್ದ ಹೊರತು ಅಂಥ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಅಧೀಕ್ಷಕ ಅಥವಾ ಆಯುಕ್ತನ ಮುಂದೆ ದಸ್ತಗಿರಿಯಾದ ವ್ಯಕ್ತಿಯನ್ನು ಕರೆದೊಯ್ಯತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಮೇಲೆ, ಪೊಲೀಸ್ ಅಧಿಕಾರಿಯು ಅಂಥ ದಸ್ತಗಿರಿಗೆ ಸಂಬಂಧಿಸಿದ ಮತ್ತು ಆ ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಸ್ಥಳಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೂಡಲೇ ಆ ಜಿಲ್ಲೆಯ ಗೊತ್ತುಪಡಿಸಲಾದ ಪೊಲೀಸ್ ಅಧಿಕಾರಿಗೆ ಹಾಗೂ ದಸ್ತಗಿರಿಯಾದ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಬೇರೆ ಜಿಲ್ಲೆಯ ಅಂಥ ಅಧಿಕಾರಿಗೆ ನೀಡತಕ್ಕದ್ದು.

**83. ದಸ್ತಗಿರಿಯಾದ ವ್ಯಕ್ತಿಯನ್ನು ಯಾರ ಮುಂದೆ ಕರೆತರಲಾಯಿತೋ ಆ ಮ್ಯಾಜಿಸ್ಟ್ರೇಟನ ಪ್ರಕ್ರಿಯೆ.-** (1) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಪೊಲೀಸ್ ಅಧೀಕ್ಷಕ ಅಥವಾ ಪೊಲೀಸ್ ಆಯುಕ್ತನಿಗೆ, ದಸ್ತಗಿರಿಯಾದ ವ್ಯಕ್ತಿಯು ವಾರಂಟನ್ನು ಹೊರಡಿಸಿದ ನ್ಯಾಯಾಲಯದಿಂದ ಉದ್ದೇಶಿತನಾದ ವ್ಯಕ್ತಿ ಎಂದು ಕಂಡುಬಂದಲ್ಲಿ, ಅಂಥ ನ್ಯಾಯಾಲಯಕ್ಕೆ ಅವನನ್ನು ಅಭಿರಕ್ಷೆಯಲ್ಲಿ ಕರೆದುಕೊಂಡು ಹೋಗುವಂತೆ ನಿರ್ದೇಶಿಸತಕ್ಕದ್ದು:

ಪರಂತು, ಅಪರಾಧವು ಜಾಮೀನೀಯವಾಗಿದ್ದರೆ ಮತ್ತು ಅಂಥ ವ್ಯಕ್ತಿಯು, ಅಂಥ ಮ್ಯಾಜಿಸ್ಟ್ರೇಟ್, ಜಿಲ್ಲಾ ಅಧೀಕ್ಷಕ ಅಥವಾ ಆಯುಕ್ತನಿಗೆ ತೃಪ್ತಿಯಾಗುವಂಥ ಜಾಮೀನು ಬಂಧಪತ್ರವನ್ನು ಕೊಡಲು ಸಿದ್ಧನಾಗಿದ್ದರೆ ಮತ್ತು ಇಚ್ಛೆಯುಳ್ಳವನಾಗಿದ್ದರೆ ಅಥವಾ ವಾರಂಟಿನ ಮೇಲೆ 73ನೇ ಪ್ರಕರಣದ ಮೇರೆಗೆ ಒಂದು ನಿರ್ದೇಶನವನ್ನು ಹಿಂಬರಹ ಮಾಡಲಾಗಿದ್ದರೆ ಮತ್ತು ಅಂಥ ವ್ಯಕ್ತಿಯು, ಅಂಥ ನಿರ್ದೇಶನದಿಂದ ಅಗತ್ಯಪಡಿಸಲಾದ ಭದ್ರತೆಯನ್ನು ಕೊಡಲು ಸಿದ್ಧನಾಗಿದ್ದರೆ ಮತ್ತು ಇಚ್ಛೆಯುಳ್ಳವನಾಗಿದ್ದರೆ, ಮ್ಯಾಜಿಸ್ಟ್ರೇಟ್, ಜಿಲ್ಲಾ ಅಧೀಕ್ಷಕ ಅಥವಾ ಆಯುಕ್ತನು ಸಂದರ್ಭಾನುಸಾರ ಅಂಥ ಜಾಮೀನು ಬಂಧಪತ್ರವನ್ನು ಅಥವಾ ಭದ್ರತೆಯನ್ನು ತೆಗೆದುಕೊಳ್ಳತಕ್ಕದ್ದು ಮತ್ತು ವಾರಂಟನ್ನು ಹೊರಡಿಸಿದ ನ್ಯಾಯಾಲಯಕ್ಕೆ ಆ ಬಂಧಪತ್ರವನ್ನು ಕಳುಹಿಸತಕ್ಕದ್ದು:

ಮತ್ತು ಪರಂತು, ಅಪರಾಧವು ಜಾಮೀನೀಯವಲ್ಲದುದಾಗಿದ್ದರೆ, ಯಾವ ಜಿಲ್ಲೆಯಲ್ಲಿ ದಸ್ತಗಿರಿಯನ್ನು ಮಾಡಲಾಯಿತೋ, ಆ ಜಿಲ್ಲೆಯ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು (480ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು) ಅಥವಾ ಸೆಷನ್ಸ್ ನ್ಯಾಯಾಧೀಶನು 80ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮಾಹಿತಿ ಮತ್ತು ದಸ್ತಾವೇಜುಗಳನ್ನು ಪರಿಗಣಿಸಿ, ಅಂಥ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದು ಕಾನೂನುಬದ್ಧವಾಗಿರತಕ್ಕದ್ದು.

(2) ಈ ಪ್ರಕರಣದಲ್ಲಿರುವುದಾವುದೂ 73ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ತೆಗೆದುಕೊಳ್ಳಲು ಪೊಲೀಸ್ ಅಧಿಕಾರಿಗೆ ಅಡ್ಡಿಪಡಿಸುವುದೆಂದು ಭಾವಿಸತಕ್ಕದ್ದಲ್ಲ.

***ಸಿ.- ಉದ್ಘೋಷಣೆ ಮತ್ತು ಜಪ್ತಿ***

**84. ತಲೆಮರೆಸಿಕೊಂಡಿರುವ ವ್ಯಕ್ತಿಗಾಗಿ ಉದ್ಘೋಷಣೆ.-** (1) ಯಾರ ವಿರುದ್ಧವಾಗಿ ವಾರಂಟನ್ನು ಹೊರಡಿಸಲಾಗಿದೆಯೋ ಆ ಯಾರೇ ವ್ಯಕ್ತಿಯು ಅಂಥ ವಾರಂಟ್ ಜಾರಿಗೊಳಿಸಲು ಸಾಧ್ಯವಾಗದಂತೆ ತಲೆಮರೆಸಿಕೊಂಡಿರುವನೆಂದು ಅಥವಾ ಬಚ್ಚಿಟ್ಟುಕೊಂಡಿರುವನೆಂದು (ಸಾಕ್ಷ್ಯವನ್ನು ತೆಗೆದುಕೊಂಡ ಮೇಲೆ ಅಥವಾ ಇಲ್ಲದೆ) ನಂಬಲು ಯಾವುದೇ ನ್ಯಾಯಾಲಯಕ್ಕೆ ಕಾರಣವಿದ್ದರೆ, ಅಂಥ ನ್ಯಾಯಾಲಯವು, ಉದ್ಘೋಷಣೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನಿರ್ದಿಷ್ಟ ಸ್ಥಳ ಮತ್ತು ಸಮಯದಲ್ಲಿ ಹಾಜರಾಗುವಂತೆ ಅಗತ್ಯಪಡಿಸುವ ಲಿಖಿತ ಉದ್ಘೋಷಣೆಯನ್ನು ಪ್ರಕಟಪಡಿಸಬಹುದು.

(2) ಉದ್ಘೋಷಣೆಯನ್ನು ಈ ಕೆಳಕಂಡಂತೆ ಪ್ರಕಟಿಸತಕ್ಕದ್ದು,-

(i) (ಎ) ಅದನ್ನು ಅಂಥ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಪಟ್ಟಣ ಅಥವಾ ಗ್ರಾಮದ ಮುಖ್ಯ ಸ್ಥಳದಲ್ಲಿ ಬಹಿರಂಗವಾಗಿ ಓದತಕ್ಕದ್ದು;

(ಬಿ) ಅದನ್ನು ಅಂಥ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಮನೆ ಅಥವಾ ಹೊರಮನೆಯಲ್ಲಿ ಎದ್ದು ಕಾಣುವ ಭಾಗಕ್ಕೆ ಅಥವಾ ಅಂಥ ಪಟ್ಟಣದ ಅಥವಾ ಗ್ರಾಮದ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು;

(ಸಿ) ಅದರ ಒಂದು ಪ್ರತಿಯನ್ನು ನ್ಯಾಯಾಲಯದ ಎದ್ದು ಕಾಣುವ ಭಾಗಕ್ಕೆ ಅಂಟಿಸತಕ್ಕದ್ದು;

(ii) ನ್ಯಾಯಾಲಯವು ಉಚಿತವೆಂದು ತಾನು ಭಾವಿಸಿದರೆ, ಉದ್ಘೋಷಣೆಯ ಒಂದು ಪ್ರತಿಯನ್ನು ಅಂಥ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಸ್ಥಳದಲ್ಲಿ ಪ್ರಸಾರದಲ್ಲಿರುವ ದಿನಪತ್ರಿಕೆಯಲ್ಲಿ ಪ್ರಕಟಪಡಿಸಲು ನಿರ್ದೇಶಿಸಬಹುದು.

(3) (2)ನೇ ಉಪಪ್ರಕರಣದ (i)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಉದ್ಘೋಷಣೆಯನ್ನು ನಿರ್ದಿಷ್ಟ ದಿನದಂದು ಯುಕ್ತವಾಗಿ ಪ್ರಕಟಿಸಲಾಗಿತ್ತು ಎಂಬ ಬಗ್ಗೆ ಉದ್ಘೋಷಣೆಯನ್ನು ಹೊರಡಿಸುವ ನ್ಯಾಯಾಲಯದ ಲಿಖಿತ ಹೇಳಿಕೆಯು ಈ ಪ್ರಕರಣದ ಅಗತ್ಯತೆಗಳನ್ನು ಪಾಲಿಸಲಾಗಿದೆ ಮತ್ತು ಉದ್ಘೋಷಣೆಯು ಅಂಥ ದಿನದಂದು ಪ್ರಕಟವಾಯಿತು ಎಂಬ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗತಕ್ಕದ್ದು.

(4) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಹತ್ತು ವರ್ಷಗಳು ಅಥವಾ ಹೆಚ್ಚಿನ ಕಾರಾವಾಸ ಅಥವಾ ಆಜೀವ ಕಾರಾವಾಸ ಅಥವಾ ಮರಣದಂಡನೆಯಿಂದ ದಂಡನೀಯವಾದ ಅಪರಾಧಗಳಿಗಾಗಿ ಆಪಾದಿತನಾದ ವ್ಯಕ್ತಿಗೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದ ಮೇರೆಗೆ ಉದ್ಘೋಷಣೆಯನ್ನು ಪ್ರಕಟಿಸಿದ್ದರೆ ಮತ್ತು ಅಂಥ ವ್ಯಕ್ತಿಯು ಉದ್ಘೋಷಣೆಯಲ್ಲಿ ಗೊತ್ತುಪಡಿಸಿದ ಸ್ಥಳದಲ್ಲಿ ಮತ್ತು ಸಮಯದಲ್ಲಿ ಹಾಜರಾಗಲು ವಿಫಲನಾದರೆ, ನ್ಯಾಯಾಲಯವು ಯುಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿ, ಅವನನ್ನು ಉದ್ಘೋಷಿತ ಅಪರಾಧಿ ಎಂದು ಉಚ್ಚರಿಸಬಹುದು ಮತ್ತು ಆ ಬಗ್ಗೆ ಘೋಷಣೆ ಮಾಡಬಹುದು.

(5) (2)ನೇ ಮತ್ತು (3)ನೇ ಉಪಪ್ರಕರಣದ ಉಪಬಂಧಗಳು, (1)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ಉದ್ಘೋಷಣೆಗೆ ಅನ್ವಯಿಸುವಂತೆಯೇ, (4)ನೇ ಉಪಪ್ರಕರಣದ ಮೇರೆಗೆ ನ್ಯಾಯಾಲಯವು ಹೊರಡಿಸಿದ ಘೋಷಣೆಗೂ ಅನ್ವಯವಾಗತಕ್ಕದ್ದು.

**85. ತಲೆಮರೆಸಿಕೊಂಡಿರುವ ವ್ಯಕ್ತಿಯ ಸ್ವತ್ತಿನ ಜಪ್ತಿ.-** (1) 84ನೇ ಪ್ರಕರಣದ ಮೇರೆಗೆ ಉದ್ಘೋಷಣೆಯನ್ನು ಹೊರಡಿಸುವ ನ್ಯಾಯಾಲಯವು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಉದ್ಘೋಷಣೆಯನ್ನು ಹೊರಡಿಸಿದ ತರುವಾಯ ಯಾವುದೇ ಸಮಯದಲ್ಲಿ ಉದ್ಘೋಷಿತ ವ್ಯಕ್ತಿಗೆ ಸೇರಿದ ಚರ ಅಥವಾ ಸ್ಥಿರ ಸ್ವತ್ತಿನ ಅಥವಾ ಅವೆರಡರ ಜಪ್ತಿಗಾಗಿ ಆದೇಶಿಸಬಹುದು:

ಪರಂತು, ಉದ್ಘೋಷಣೆಯನ್ನು ಹೊರಡಿಸುವ ಸಮಯದಲ್ಲಿ ನ್ಯಾಯಾಲಯಕ್ಕೆ ಯಾರ ಸಂಬಂಧದಲ್ಲಿ ಉದ್ಘೋಷಣೆಯನ್ನು ಹೊರಡಿಸಲಾಗುವುದೋ ಆ ವ್ಯಕ್ತಿಯು,-

(ಎ) ತನ್ನ ಸ್ವತ್ತಿನ ಪೂರ್ಣ ಅಥವಾ ಅದರ ಯಾವುದೇ ಭಾಗವನ್ನು ವಿಲೆ ಮಾಡುವ ಬಗ್ಗೆ; ಅಥವಾ

(ಬಿ) ತನ್ನ ಸ್ವತ್ತಿನ ಪೂರ್ಣ ಅಥವಾ ಯಾವುದೇ ಭಾಗವನ್ನು ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯಿಂದ ಹೊರಕ್ಕೆ ಸಾಗಿಸುವ ಬಗ್ಗೆ

- ಪ್ರಮಾಣಪತ್ರದಿಂದ ಅಥವಾ ಅನ್ಯಥಾ ಮನವರಿಕೆಯಾದಲ್ಲಿ ಅದು, ಉದ್ಘೋಷಣೆಯನ್ನು ಹೊರಡಿಸುವ ಸಮಯದಲ್ಲಿಯೇ ಸ್ವತ್ತಿನ ಜಪ್ತಿಗೆ ಆದೇಶಿಸಬಹುದು.

(2) ಅಂಥ ಆದೇಶವು, ಅದನ್ನು ಮಾಡಿದ ಜಿಲ್ಲೆಯೊಳಗೆ ಅಂಥ ವ್ಯಕ್ತಿಗೆ ಸೇರಿರುವ ಯಾವುದೇ ಸ್ವತ್ತಿನ ಜಪ್ತಿಯನ್ನು ಮಾಡಲು ಅಧಿಕಾರವನ್ನು ಕೊಡತಕ್ಕದ್ದು ಮತ್ತು ಅಂಥ ಜಿಲ್ಲೆಯ ಹೊರಗೆ ಅಂಥ ವ್ಯಕ್ತಿಗೆ ಇರುವ ಯಾವುದೇ ಸ್ವತ್ತನ್ನು ಅದು ಇರುವ ಜಿಲ್ಲಾ ಮ್ಯಾಜಿಸ್ಟ್ರೇಟನ ಹಿಂಬರಹದ ಮೇಲೆ ಜಪ್ತಿ ಮಾಡಲು ಅಧಿಕಾರ ಕೊಡತಕ್ಕದ್ದು.

(3) ಜಪ್ತಿ ಮಾಡಬೇಕೆಂದು ಆದೇಶಿಸಲಾದ ಸ್ವತ್ತು, ಋಣ ಅಥವಾ ಇತರ ಚರ ಸ್ವತ್ತು ಆಗಿದ್ದರೆ, ಈ ಪ್ರಕರಣದ ಮೇರೆಗೆ ಜಪ್ತಿಯನ್ನು,-

(ಎ) ವಶಕ್ಕೆ ತೆಗೆದುಕೊಳ್ಳುವ ಮೂಲಕ; ಅಥವಾ

(ಬಿ) ಒಬ್ಬ ರಿಸೀವರನನ್ನು ನೇಮಿಸುವುದರ ಮೂಲಕ; ಅಥವಾ

(ಸಿ) ಅಂಥ ಸ್ವತ್ತನ್ನು ಉದ್ಘೋಷಿತ ವ್ಯಕ್ತಿಗೆ ಅಥವಾ ಅವನ ಪರವಾಗಿ ಯಾರೊಬ್ಬರಿಗೂ ಕೊಡುವುದನ್ನು ತಡೆಹಿಡಿಯಲು ಲಿಖಿತ ಆದೇಶದ ಮೂಲಕ; ಅಥವಾ

(ಡಿ) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ಎಲ್ಲ ಅಥವಾ ಯಾವುದೇ ಎರಡು ವಿಧಾನಗಳ ಮೂಲಕ

- ಮಾಡತಕ್ಕದ್ದು.

(4) ಜಪ್ತಿ ಮಾಡಲು ಆದೇಶಿಸಲಾದ ಸ್ವತ್ತು ಸ್ಥಿರ ಸ್ವತ್ತಾಗಿದ್ದರೆ, ಈ ಪ್ರಕರಣದ ಮೇರೆಗಿನ ಜಪ್ತಿಯನ್ನು, ರಾಜ್ಯ ಸರ್ಕಾರಕ್ಕೆ ಭೂಕಂದಾಯ ಕೊಡುವ ಭೂಮಿಯಾಗಿದ್ದರೆ, ಆ ಭೂಮಿಯು ಇರುವ ಜಿಲ್ಲೆಯ ಕಲೆಕ್ಟರನ ಮೂಲಕ ಮಾಡತಕ್ಕದ್ದು ಮತ್ತು ಎಲ್ಲ ಇತರ ಸಂದರ್ಭಗಳಲ್ಲಿ,-

(ಎ) ಸ್ವಾಧೀನವನ್ನು ತೆಗೆದುಕೊಳ್ಳುವುದರ ಮೂಲಕ; ಅಥವಾ

(ಬಿ) ರಿಸೀವರನನ್ನು ನೇಮಿಸುವುದರ ಮೂಲಕ; ಅಥವಾ

(ಸಿ) ಉದ್ಘೋಷಿತ ವ್ಯಕ್ತಿಗೆ ಅಥವಾ ಅವನ ಪರವಾಗಿ ಯಾವೊಬ್ಬನಿಗೆ ಬಾಡಿಗೆ ಸಂದಾಯ ಅಥವಾ ಸ್ವತ್ತನ್ನು ಕೊಡುವುದನ್ನು ತಡೆಹಿಡಿಯಲು ಲಿಖಿತ ಆದೇಶದ ಮೂಲಕ; ಅಥವಾ

(ಡಿ) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ಎಲ್ಲ ಅಥವಾ ಯಾವುದೇ ಎರಡು ವಿಧಾನಗಳ ಮೂಲಕ

- ಜಪ್ತಿಯನ್ನು ಮಾಡತಕ್ಕದ್ದು.

(5) ಜಪ್ತಿ ಮಾಡಲು ಆದೇಶಿಸಲಾದ ಸ್ವತ್ತು, ಪಶು-ಸಂಪತ್ತು ಆಗಿರುವಲ್ಲಿ ಅಥವಾ ನಶಿಸಿಹೋಗುವ ವಸ್ತುಗಳನ್ನು ಒಳಗೊಂಡಿರುವಲ್ಲಿ ನ್ಯಾಯಾಲಯವು ವಿಹಿತವೆಂದು ತಾನು ಭಾವಿಸಿದರೆ, ಅದನ್ನು ತ್ವರಿತವಾಗಿ ಮಾರಾಟ ಮಾಡಲು ಅದು ಆದೇಶಿಸಬಹುದು ಮತ್ತು ಅಂಥ ಸಂದರ್ಭದಲ್ಲಿ ಮಾರಾಟದ ಉತ್ಪತ್ತಿಯು ನ್ಯಾಯಾಲಯದ ಆದೇಶಕ್ಕೊಳಪಟ್ಟಿರತಕ್ಕದ್ದು.

(6) ಈ ಪ್ರಕರಣದ ಮೇರೆಗೆ ನೇಮಕಗೊಂಡ ರಿಸೀವರನ ಅಧಿಕಾರಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ನೇಮಕಗೊಂಡ ರಿಸೀವರನ ಅಧಿಕಾರಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳೇ ಆಗಿರತಕ್ಕದ್ದು.

**86. ಉದ್ಘೋಷಿತ ವ್ಯಕ್ತಿಯ ಸ್ವತ್ತಿನ ಗುರುತಿಸುವಿಕೆ ಮತ್ತು ಜಪ್ತಿ.-** ನ್ಯಾಯಾಲಯವು ಪೊಲೀಸ್ ಅಧೀಕ್ಷಕ ಅಥವಾ ಪೊಲೀಸ್ ಆಯುಕ್ತರ ದರ್ಜೆಗೆ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಯ ಲಿಖಿತ ಕೋರಿಕೆಯ ಮೇಲೆ, ಅಧ್ಯಾಯ VIIIರಲ್ಲಿ ಉಪಬಂಧಿಸಲಾದ ಕಾರ್ಯವಿಧಾನದ ಅನುಸಾರವಾಗಿ ಉದ್ಘೋಷಿತ ವ್ಯಕ್ತಿಗೆ ಸೇರಿದ ಸ್ವತ್ತಿನ ಗುರುತಿಸುವಿಕೆ, ಜಪ್ತಿ ಮತ್ತು ಮುಟ್ಟುಗೋಲಿಗಾಗಿ ನ್ಯಾಯಾಲಯದಿಂದ ಅಥವಾ ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿನ ಪ್ರಾಧಿಕಾರದಿಂದ ನೆರವು ಕೋರುವ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು.

**87. ಜಪ್ತಿಯ ಬಗ್ಗೆ ಕ್ಲೇಮುಗಳು ಮತ್ತು ಆಕ್ಷೇಪಣೆಗಳು.-** (1) ಕ್ಲೇಮುದಾರನು ಅಥವಾ ಆಕ್ಷೇಪಕನು ಅಂಥ ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳವನೆಂಬ ಮತ್ತು ಅಂಥ ಹಿತಾಸಕ್ತಿಯು 85ನೇ ಪ್ರಕರಣದ ಮೇರೆಗೆ ಜಪ್ತಿಗೆ ಗುರಿಯಾಗತಕ್ಕದ್ದಲ್ಲವೆಂಬ ಕಾರಣದ ಮೇಲೆ ಉದ್ಘೋಷಿತ ವ್ಯಕ್ತಿಯಲ್ಲದ ಇತರ ಯಾರೇ ವ್ಯಕ್ತಿಯು ಅಂಥ ಜಪ್ತಿಯ ದಿನಾಂಕದಿಂದ ಆರು ತಿಂಗಳುಗಳೊಳಗೆ, 85ನೇ ಪ್ರಕರಣದ ಮೇರೆಗೆ ಜಪ್ತಿಯಾದ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ಲೇಮನ್ನು ಮಾಡಿದರೆ ಅಥವಾ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿದರೆ, ಆ ಕ್ಲೇಮು ಅಥವಾ ಆಕ್ಷೇಪಣೆಯನ್ನು ವಿಚಾರಣೆ ಮಾಡತಕ್ಕದ್ದು ಮತ್ತು ಪೂರ್ಣವಾಗಿ ಅಥವಾ ಭಾಗಶಃ ಅದನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು:

ಪರಂತು, ಈ ಉಪಪ್ರಕರಣದ ಮೂಲಕ ಅನುಮತಿಸಲಾದ ಅವಧಿಯೊಳಗೆ ಮಾಡಲಾದ ಯಾವುದೇ ಕ್ಲೇಮನ್ನು ಅಥವಾ ಸಲ್ಲಿಸಲಾದ ಯಾವುದೇ ಆಕ್ಷೇಪಣೆಯನ್ನು ಕ್ಲೇಮುದಾರನ ಅಥವಾ ಆಕ್ಷೇಪಕನ ಮರಣದ ಸಂದರ್ಭದಲ್ಲಿ, ಅವನ ಕಾನೂನುಸಮ್ಮತ ಪ್ರತಿನಿಧಿಯು ಮುಂದುವರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಕ್ಲೇಮು ಅಥವಾ ಆಕ್ಷೇಪಣೆಗಳನ್ನು ಜಪ್ತಿ ಆದೇಶ ಮಾಡಿದ ನ್ಯಾಯಾಲಯದಲ್ಲಿ ಅಥವಾ ಆ ಕ್ಲೇಮು ಅಥವಾ ಆಕ್ಷೇಪಣೆಗಳು 85ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಹಿಂಬರಹ ಮಾಡಲಾದ ಆದೇಶದ ಮೇರೆಗೆ ಜಪ್ತಿಯಾದ ಸ್ವತ್ತಿಗೆ ಸಂಬಂಧಿಸಿದ್ದಲ್ಲಿ, ಯಾವ ಜಿಲ್ಲೆಯಲ್ಲಿ ಜಪ್ತಿಯನ್ನು ಮಾಡಲಾಯಿತೋ ಆ ಜಿಲ್ಲೆಯ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯದಲ್ಲಿ ಮಾಡಬಹುದು ಅಥವಾ ಸಲ್ಲಿಸಬಹುದು.

(3) ಯಾವ ನ್ಯಾಯಾಲಯದಲ್ಲಿ ಅಂಥ ಪ್ರತಿಯೊಂದು ಕ್ಲೇಮು ಅಥವಾ ಆಕ್ಷೇಪಣೆಯನ್ನು ಮಾಡಲಾಯಿತೋ ಅಥವಾ ಸಲ್ಲಿಸಲಾಯಿತೋ ಆ ನ್ಯಾಯಾಲಯದಲ್ಲಿ ವಿಚಾರಣೆ ಮಾಡತಕ್ಕದ್ದು:

ಪರಂತು, ಅದನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯದಲ್ಲಿ ಮಾಡಿದರೆ ಅಥವಾ ಸಲ್ಲಿಸಿದರೆ, ಅವನು ಅದನ್ನು ತನಗೆ ಅಧೀನನಾದ ಯಾರೇ ಮ್ಯಾಜಿಸ್ಟ್ರೇಟನಿಗೆ ವಿಲೆಗಾಗಿ ವಹಿಸಿಕೊಡಬಹುದು.

(4) ಯಾರ ಕ್ಲೇಮನ್ನು ಅಥವಾ ಆಕ್ಷೇಪಣೆಯನ್ನು (1)ನೇ ಉಪಪ್ರಕರಣದ ಮೇರೆಗಿನ ಆದೇಶದಿಂದ ಪೂರ್ಣವಾಗಿ ಅಥವಾ ಭಾಗಶಃವಾಗಿ ತಿರಸ್ಕರಿಸಲಾಗಿದೆಯೋ ಆ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ವಿವಾದದಲ್ಲಿರುವ ಸ್ವತ್ತಿನ ಸಂಬಂಧದಲ್ಲಿ ತಾನು ಕ್ಲೇಮು ಮಾಡುವ ಹಕ್ಕನ್ನು ಸ್ಥಾಪಿಸಲು ದಾವೆಯನ್ನು ಹೂಡಬಹುದು, ಆದರೆ ಅಂಥ ದಾವೆಯು ಯಾವುದಾದರೂ ಇದ್ದರೆ ಅದರ ಫಲಿತಾಂಶಕ್ಕೆ ಒಳಪಟ್ಟು ಆದೇಶವು ನಿರ್ಣಾಯಕವಾಗಿರತಕ್ಕದ್ದು.

**88. ಜಪ್ತಿಯಾದ ಸ್ವತ್ತಿನ ಬಿಡುಗಡೆ, ಮಾರಾಟ ಮತ್ತು ವಾಪಸಾತಿ.-** (1) ಉದ್ಘೋಷಿತ ವ್ಯಕ್ತಿಯು ಉದ್ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಹಾಜರಾದರೆ ನ್ಯಾಯಾಲಯವು ಸ್ವತ್ತನ್ನು ಜಪ್ತಿಯಿಂದ ಬಿಡುಗಡೆ ಮಾಡುವ ಆದೇಶವನ್ನು ಮಾಡತಕ್ಕದ್ದು.

(2) ಉದ್ಘೋಷಿತ ವ್ಯಕ್ತಿಯು ಉದ್ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಹಾಜರಾಗದಿದ್ದರೆ ಜಪ್ತಿಯಾಗಿರುವ ಸ್ವತ್ತು ರಾಜ್ಯ ಸರ್ಕಾರದ ವಿಲೆಗೆ ಒಳಪಟ್ಟಿರತಕ್ಕದ್ದು, ಆದರೆ ಅದನ್ನು ಜಪ್ತಿಯ ದಿನಾಂಕದಿಂದ ಆರು ತಿಂಗಳು ಮುಕ್ತಾಯವಾಗುವವರೆಗೆ ಮತ್ತು 87ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಕ್ಲೇಮು ಅಥವಾ ಸಲ್ಲಿಸಲಾದ ಯಾವುದೇ ಆಕ್ಷೇಪಣೆಯು ಆ ಪ್ರಕರಣದ ಮೇರೆಗೆ ಇತ್ಯರ್ಥವಾಗುವವರೆಗೆ, ಅದು ಶೀಘ್ರ ಮತ್ತು ಸ್ವಾಭಾವಿಕ ಕ್ಷೀಣತೆಗೆ ಒಳಪಟ್ಟಿದ್ದ ಹೊರತು ಅಥವಾ ಮಾರಾಟವು ಮಾಲೀಕನ ಅನುಕೂಲಕ್ಕಾಗಿದೆಯೆಂದು ನ್ಯಾಯಾಲಯವು ಪರ್ಯಾಲೋಚಿಸಿದ ಹೊರತು ಮಾರಾಟ ಮಾಡತಕ್ಕದ್ದಲ್ಲ. ಈ ಎರಡರಲ್ಲಿ ಯಾವುದೇ ಸಂದರ್ಭದಲ್ಲೂ ನ್ಯಾಯಾಲಯವು ತಾನು ಸೂಕ್ತವೆಂದು ಪರಿಗಣಿಸುವಂತೆ ಮಾರಾಟ ಮಾಡಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಯಾರ ಸ್ವತ್ತು ರಾಜ್ಯ ಸರ್ಕಾರದ ವಿಲೆಯಲ್ಲಿದೆಯೋ ಅಥವಾ ಇದ್ದಿತೋ ಯಾರ ಆದೇಶದಿಂದ ಆ ಸ್ವತ್ತು ಜಪ್ತಿಯಾಗಿತ್ತೋ ಆ ನ್ಯಾಯಾಲಯ ಅಥವಾ ಯಾವುದಕ್ಕೆ ಅಂಥ ನ್ಯಾಯಾಲಯವು ಅಧೀನವಾಗಿದೆಯೋ ಆ ನ್ಯಾಯಾಲಯದ ಮುಂದೆ ಜಪ್ತಿಯ ದಿನಾಂಕದಿಂದ ಎರಡು ವರ್ಷಗಳೊಳಗೆ ಆ ವ್ಯಕ್ತಿಯು ತಾನಾಗಿಯೇ ಹಾಜರಾದರೆ ಅಥವಾ ದಸ್ತಗಿರಿ ಮಾಡಿ ಹಾಜರುಪಡಿಸಿದರೆ ಮತ್ತು ಅವನು ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿ ತಲೆಮರೆಸಿಕೊಂಡಿರಲಿಲ್ಲವೆಂದು ಅಥವಾ ತನ್ನನ್ನು ತಾನು ಬಚ್ಚಿಟ್ಟುಕೊಳ್ಳಲಿಲ್ಲವೆಂದು ಮತ್ತು ಉದ್ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ತಾನು ಹಾಜರಾಗಲು ಅನುಕೂಲವಾಗುವಂತೆ ಅದರ ತಿಳುವಳಿಕೆಯನ್ನು ಹೊಂದಿರಲಿಲ್ಲವೆಂದು ಅಂಥ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತು ಮಾಡಿದರೆ, ಅಂಥ ಸ್ವತ್ತನ್ನು ಅಥವಾ ಅದನ್ನು ಮಾರಾಟ ಮಾಡಿದ್ದರೆ, ಮಾರಾಟದ ನಿವ್ವಳ ಉತ್ಪತ್ತಿಯನ್ನು ಅಥವಾ ಭಾಗಶಃ ಮಾರಾಟ ಮಾಡಿದ್ದರೆ, ಮಾರಾಟದ ಉತ್ಪತ್ತಿಯನ್ನು ಮತ್ತು ಸ್ವತ್ತಿನ ಉಳಿದ ಭಾಗವನ್ನು ಜಪ್ತಿಯ ಪರಿಣಾಮವಾಗಿ ಉಂಟಾದ ಎಲ್ಲ ವೆಚ್ಚಗಳನ್ನು ತೀರಿಸಿಕೊಂಡ ನಂತರ ಅವನಿಗೆ ಕೊಡತಕ್ಕದ್ದು.

**89. ಜಪ್ತಿಯಾದ ಸ್ವತ್ತಿನ ವಾಪಸಾತಿಗಾಗಿ ಮಾಡಿದ ಅರ್ಜಿಯನ್ನು ತಿರಸ್ಕರಿಸುವ ಆದೇಶದ ವಿರುದ್ಧ ಅಪೀಲು.-** 88ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮತ್ತು ಸ್ವತ್ತನ್ನು ಅಥವಾ ಅದರ ಮಾರಾಟದ ಉತ್ಪತ್ತಿಯನ್ನು ನಿರಾಕರಿಸಿದ್ದರಿಂದ ಬಾಧಿತನಾದ ಯಾರೇ ವ್ಯಕ್ತಿಯು ಮೊದಲು ಹೇಳಲಾದ ನ್ಯಾಯಾಲಯದ ಶಿಕ್ಷೆಯ ಆದೇಶಗಳ ವಿರುದ್ಧ ಸಾಮಾನ್ಯವಾಗಿ ಅಪೀಲು ಸಲ್ಲಿಸಬಹುದಾದ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

***ಡಿ.- ಆದೇಶಿಕೆಗಳಿಗೆ ಸಂಬಂಧಿಸಿದ ಇತರ ನಿಯಮಗಳು***

**90. ಸಮನುಗಳ ಬದಲಾಗಿ ಅಥವಾ ಅವುಗಳ ಜೊತೆಗೆ ವಾರಂಟನ್ನು ಹೊರಡಿಸುವುದು.-** ನ್ಯಾಯಾಲಯವು, ಯಾರೇ ವ್ಯಕ್ತಿಯ ಹಾಜರಾತಿಗಾಗಿ ಸಮನುಗಳನ್ನು ಹೊರಡಿಸಲು ಈ ಸಂಹಿತೆಯ ಮೂಲಕ ಶಕ್ತಗೊಳಿಸಲಾದ ಯಾವುದೇ ಸಂದರ್ಭದಲ್ಲಿ, ಅದರ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ತರುವಾಯ,-

(ಎ) ಅಂಥ ಸಮನುಗಳನ್ನು ಹೊರಡಿಸುವ ಮೊದಲು ಅಥವಾ ಅದನ್ನು ಹೊರಡಿಸಿದ ತರುವಾಯ, ಆದರೆ ಅವನ ಹಾಜರಾತಿಗಾಗಿ ಗೊತ್ತುಪಡಿಸಿದ ಕಾಲಕ್ಕೆ ಮೊದಲು ಅವನು ತಲೆಮರೆಸಿಕೊಂಡಿದ್ದಾನೆಂದು ಅಥವಾ ಸಮನುಗಳಿಗೆ ಅಧೀನನಾಗಿ ವರ್ತಿಸುವುದಿಲ್ಲವೆಂದು ನ್ಯಾಯಾಲಯವು ನಂಬಲು ಕಾರಣವಿದ್ದರೆ; ಅಥವಾ

(ಬಿ) ಅವನು ಅಂಥ ಕಾಲದಲ್ಲಿ ಹಾಜರಾಗಲು ತಪ್ಪಿದರೆ ಮತ್ತು ಸಮನನ್ನು ಅದಕ್ಕನುಸಾರವಾಗಿ ಹಾಜರಾಗಲು ಲಭ್ಯವಾಗುವಂತೆ ಸಕಾಲದಲ್ಲಿ ಯುಕ್ತಬದ್ಧವಾಗಿ ಜಾರಿ ಮಾಡಲಾಗಿದೆಯೆಂದು ರುಜುವಾತಾದರೆ ಮತ್ತು ಅಂಥ ಗೈರುಹಾಜರಿಗೆ ಯಾವ ಯುಕ್ತ ಕಾರಣವನ್ನೂ ನೀಡದಿದ್ದರೆ

- ಅವನ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸಬಹುದು.

**91. ಹಾಜರಾತಿಗಾಗಿ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ತೆಗೆದುಕೊಳ್ಳುವ ಅಧಿಕಾರ.-** ಯಾವುದೇ ನ್ಯಾಯಾಲಯದಲ್ಲಿನ ಪೀಠಾಸೀನ ಅಧಿಕಾರಿಗೆ ಯಾವ ವ್ಯಕ್ತಿಯ ಹಾಜರಾತಿ ಅಥವಾ ದಸ್ತಗಿರಿಗಾಗಿ ಸಮನನ್ನು ಅಥವಾ ವಾರಂಟನ್ನು ಹೊರಡಿಸಲು ಅಧಿಕಾರವಿರುವುದೋ ಆ ವ್ಯಕ್ತಿಯು, ಅಂಥ ನ್ಯಾಯಾಲಯದಲ್ಲಿ ಹಾಜರಾದರೆ, ಅಂಥ ಅಧಿಕಾರಿಯು ಅಂಥ ವ್ಯಕ್ತಿಯನ್ನು ಅಂಥ ನ್ಯಾಯಾಲಯದಲ್ಲಿ ಅಥವಾ ಯಾವ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಅಧಿವಿಚಾರಣೆಗಾಗಿ ವರ್ಗಾವಣೆ ಮಾಡಬಹುದೋ ಆ ನ್ಯಾಯಾಲಯದಲ್ಲಿ ಅವನು ಹಾಜರಾಗಲು, ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಲು ಅಗತ್ಯಪಡಿಸಬಹುದು.

**92. ಹಾಜರಾತಿಗಾಗಿನ ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಉಲ್ಲಂಘನೆಗಾಗಿ ದಸ್ತಗಿರಿ.-** ನ್ಯಾಯಾಲಯದ ಮುಂದೆ ಹಾಜರಾಗಲು ಈ ಸಂಹಿತೆಯ ಮೇರೆಗೆ ತೆಗೆದುಕೊಂಡ ಯಾವುದೇ ಬಂಧಪತ್ರ ಅಥವಾ ಜಾಮೀನು ಬಂಧಪತ್ರಕ್ಕೆ ಬದ್ಧನಾದ ಯಾರೇ ವ್ಯಕ್ತಿಯು ಹಾಜರಾಗದಿದ್ದರೆ, ಆ ನ್ಯಾಯಾಲಯದ ಪೀಠಾಸೀನ ಅಧಿಕಾರಿಯು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಮತ್ತು ತನ್ನ ಮುಂದೆ ಹಾಜರುಪಡಿಸಲು ನಿರ್ದೇಶಿಸುವ ವಾರಂಟನ್ನು ಹೊರಡಿಸಬಹುದು.

**93. ಸಾಮಾನ್ಯವಾಗಿ ಸಮನುಗಳಿಗೆ ಮತ್ತು ದಸ್ತಗಿರಿಯ ವಾರಂಟ್‌ಗಳಿಗೆ ಅನ್ವಯವಾಗಬಹುದಾದ ಈ ಅಧ್ಯಾಯದ ಉಪಬಂಧಗಳು.-** ಸಮನುಗಳು ಮತ್ತು ವಾರಂಟ್‌ಗಳು ಮತ್ತು ಅವುಗಳ ಹೊರಡಿಸುವಿಕೆ, ಜಾರಿ ಮತ್ತು ಕಾರ್ಯಗತಗೊಳಿಸುವಿಕೆಗೆ ಸಂಬಂಧಿಸಿದ ಈ ಅಧ್ಯಾಯದ ಉಪಬಂಧಗಳು, ಸಾಧ್ಯವಾಗುವಷ್ಟರ ಮಟ್ಟಿಗೆ ಈ ಸಂಹಿತೆಯ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಸಮನಿಗೆ ಮತ್ತು ದಸ್ತಗಿರಿಯ ವಾರಂಟಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ VII

## ವಸ್ತುಗಳನ್ನು ಹಾಜರುಪಡಿಸಲು ಒತ್ತಾಯಿಸುವ ಆದೇಶಿಕೆಗಳು

### *ಎ.- ಹಾಜರುಪಡಿಸಲು ಸಮನುಗಳು*

**94. ದಸ್ತಾವೇಜು ಅಥವಾ ಇತರ ವಸ್ತುವನ್ನು ಹಾಜರುಪಡಿಸಲು ಸಮನ್.-** (1) ಈ ಸಂಹಿತೆಯ ಮೇರೆಗೆ ಯಾವುದೇ ನ್ಯಾಯಾಲಯದಿಂದ ಅಥವಾ ನ್ಯಾಯಾಲಯದ ಮುಂದೆ ಅಥವಾ ಅಧಿಕಾರಿಯಿಂದ ಅಥವಾ ಅವನ ಮುಂದೆ ನಡೆಯಬೇಕಾದ ಯಾವುದೇ ತನಿಖೆ, ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಳ ಉದ್ದೇಶಗಳಿಗಾಗಿ ಯಾವುದೇ ದಸ್ತಾವೇಜು, ಡಿಜಿಟಲ್ ಸಾಕ್ಷ್ಯ ಹೊಂದಿರಬಹುದಾದ ಸಂಪರ್ಕ ಸಾಧನಗಳನ್ನೊಳಗೊಂಡ ವಿದ್ಯುನ್ಮಾನ ಸಂಪರ್ಕ ಅಥವಾ ಇತರ ವಸ್ತುವನ್ನು ಹಾಜರುಪಡಿಸುವುದು ಅವಶ್ಯಕವೆಂದು ಅಥವಾ ಅಪೇಕ್ಷಣೀಯವೆಂದು ಯಾವುದೇ ನ್ಯಾಯಾಲಯವು ಅಥವಾ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಯಾರೇ ಅಧಿಕಾರಿಯು ಪರಿಗಣಿಸಿದರೆ, ಅಂಥ ದಸ್ತಾವೇಜು ಅಥವಾ ವಸ್ತು ಯಾರ ಸ್ವಾಧೀನಕ್ಕೆ ಅಥವಾ ಅಧಿಕಾರಕ್ಕೆ ಒಳಪಟ್ಟಿದೆಯೆಂದು ನಂಬಲಾಗಿದೆಯೋ ಆ ವ್ಯಕ್ತಿಗೆ ತಾನು ಹಾಜರಾಗಿ ಅದನ್ನು ಹಾಜರುಪಡಿಸುವಂತೆ ಅಥವಾ ಸಮನಿನಲ್ಲಿ ಅಥವಾ ಆದೇಶದಲ್ಲಿ ನಮೂದಿಸಲಾದ ಸಮಯ ಮತ್ತು ಸ್ಥಳದಲ್ಲಿ ಅದನ್ನು

ಹಾಜರುಪಡಿಸುವಂತೆ ಅಗತ್ಯಪಡಿಸಿ ಅಂಥ ನ್ಯಾಯಾಲಯವು ಸಮನನ್ನು ಹೊರಡಿಸಬಹುದು ಅಥವಾ ಅಂಥ ಅಧಿಕಾರಿಯು ಭೌತಿಕ ರೂಪದಲ್ಲಿ ಅಥವಾ ವಿದ್ಯುನ್ಮಾನ ರೂಪದಲ್ಲಿ ಲಿಖಿತ ಆದೇಶವನ್ನು ಹೊರಡಿಸಬಹುದು.

(2) ದಸ್ತಾವೇಜು ಅಥವಾ ಇತರ ವಸ್ತುವನ್ನು ಹಾಜರುಪಡಿಸಲು ಮಾತ್ರವೇ ಈ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ಯಾರೇ ವ್ಯಕ್ತಿಯನ್ನು, ಅವನು ಅಂಥ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸಲು ಖುದ್ದಾಗಿ ಹಾಜರಾಗುವ ಬದಲು ಅದನ್ನು ಹಾಜರುಪಡಿಸುವಂತೆ ಮಾಡಿದರೆ, ಆ ಕೋರಿಕೆಯನ್ನು ಪಾಲಿಸಲಾಗಿದೆ ಎಂದು ಭಾವಿಸತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ,-

(ಎ) ಭಾರತ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 129ನೇ ಮತ್ತು 130ನೇ ಪ್ರಕರಣಗಳಿಗೆ ಅಥವಾ ಬ್ಯಾಂಕರನ ಪುಸ್ತಕಗಳ ಸಾಕ್ಷ್ಯ ಅಧಿನಿಯಮ, 1891 (1891 ರ 13)ಕ್ಕೆ ಬಾಧಕವಾಗುವುದೆಂದು; ಅಥವಾ

(ಬಿ) ಅಂಚೆ ಪ್ರಾಧಿಕಾರದ ಅಭಿರಕ್ಷೆಯಲ್ಲಿರುವ ಪತ್ರ, ಅಂಚೆಕಾರ್ಡು ಅಥವಾ ಇತರ ದಸ್ತಾವೇಜು ಅಥವಾ ಯಾವುದೇ ಪಾರ್ಸಲ್ ಅಥವಾ ವಸ್ತುವಿಗೆ ಅನ್ವಯವಾಗುವುದೆಂದು

- ಭಾವಿಸತಕ್ಕದ್ದಲ್ಲ.

**95. ಪತ್ರಗಳ ಬಗ್ಗೆ ಪ್ರಕ್ರಿಯೆ.-** (1) ಜಿಲ್ಲಾ ಮ್ಯಾಜಿಸ್ಟ್ರೇಟನ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ, ಸೆಷನ್ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ, ಈ ಸಂಹಿತೆಯ ಮೇರೆಗಿನ ಯಾವುದೇ ತನಿಖೆ, ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಳ ಉದ್ದೇಶಕ್ಕಾಗಿ ಅಂಚೆ ಪ್ರಾಧಿಕಾರಿಯ ಅಭಿರಕ್ಷೆಯಲ್ಲಿರುವ ದಸ್ತಾವೇಜು, ಪಾರ್ಸಲ್ ಅಥವಾ ಇತರ ವಸ್ತುವು ಬೇಕಾಗಿದ್ದರೆ, ಅಂಥ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ನಿರ್ದೇಶಿಸುವಂಥ ವ್ಯಕ್ತಿಗೆ ಆ ದಸ್ತಾವೇಜು, ಪಾರ್ಸಲ್ ಅಥವಾ ವಸ್ತುವನ್ನು ಕೊಡಲು ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ಸಂದರ್ಭಾನುಸಾರ, ಅಂಚೆ ಪ್ರಾಧಿಕಾರಿಯನ್ನು ಅಗತ್ಯಪಡಿಸಬಹುದು.

(2) ಯಾರೇ ಕಾರ್ಯನಿರ್ವಾಹಕನ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟನ ಅಥವಾ ಯಾರೇ ಪೋಲೀಸ್ ಆಯುಕ್ತನ ಅಥವಾ ಜಿಲ್ಲಾ ಪೋಲೀಸ್ ಅಧೀಕ್ಷಕನ ಅಭಿಪ್ರಾಯದಲ್ಲಿ, ಯಾವುದೇ ಅಂಥ ಉದ್ದೇಶಕ್ಕಾಗಿ ಯಾವುದೇ ಅಂಥ ದಸ್ತಾವೇಜು, ಪಾರ್ಸಲ್ ಅಥವಾ ವಸ್ತುವು ಬೇಕಾಗಿದ್ದರೆ ಅವನು, ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಂದ ಅಥವಾ ನ್ಯಾಯಾಲಯದಿಂದ (1)ನೇ ಉಪಪ್ರಕರಣದ ಮೇರೆಗೆ ಆದೇಶವಾಗುವವರೆಗೆ ಅಂಥ ದಸ್ತಾವೇಜು, ಪಾರ್ಸಲ್ ಅಥವಾ ವಸ್ತುವಿಗಾಗಿ ಶೋಧನೆ ಮಾಡಿಸಲು ಮತ್ತು ಅದನ್ನು ತಡೆಹಿಡಿದಿಟ್ಟುಕೊಂಡಿರಲು ಅಂಚೆ ಪ್ರಾಧಿಕಾರಿಯನ್ನು ಅಗತ್ಯಪಡಿಸಬಹುದು.

*ಬಿ.- ಶೋಧನೆಯ-ವಾರಂಟ್*

**96. ಶೋಧನೆಯ-ವಾರಂಟನ್ನು ಯಾವಾಗ ಹೊರಡಿಸಬಹುದು.-** (1) (ಎ) ಯಾರಿಗೆ 94ನೇ ಪ್ರಕರಣದ ಮೇರೆಗಿನ ಒಂದು ಸಮನ್ ಅಥವಾ ಆದೇಶವನ್ನು ಅಥವಾ 95ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಕೋರಿಕೆಯನ್ನು ಮಾಡಲಾಗಿದೆಯೋ ಅಥವಾ ಮಾಡಬಹುದಾಗಿದೆಯೋ ಆ ವ್ಯಕ್ತಿಯು ಅಂಥ ಸಮಯ ಅಥವಾ ಕೋರಿಕೆಯ ಪ್ರಕಾರ ಅಗತ್ಯಪಡಿಸಲಾದಂತೆ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವುದಿಲ್ಲ ಅಥವಾ ಹಾಜರುಪಡಿಸಲಾರನೆಂದು ನಂಬಲು ಯಾವುದೇ ನ್ಯಾಯಾಲಯಕ್ಕೆ ಕಾರಣವಿರುವಲ್ಲಿ; ಅಥವಾ

(ಬಿ) ಅಂಥ ದಸ್ತಾವೇಜು ಅಥವಾ ವಸ್ತುವು ಯಾವ ವ್ಯಕ್ತಿಯ ಸ್ವಾಧೀನದಲ್ಲಿ ಇರುವುದೆಂದು ನ್ಯಾಯಾಲಯಕ್ಕೆ ಗೊತ್ತಿಲ್ಲದಿರುವಲ್ಲಿ; ಅಥವಾ

(ಸಿ) ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಳ ಉದ್ದೇಶಗಳು ಸಾಮಾನ್ಯ ಶೋಧನೆ ಅಥವಾ ಪರಿಶೀಲನೆಯಿಂದ ಸಫಲವಾಗುತ್ತವೆಂದು ನ್ಯಾಯಾಲಯವು ಪರ್ಯಾಲೋಚಿಸಿದರೆ

- ಅದು ಶೋಧನೆಯ-ವಾರಂಟನ್ನು ಹೊರಡಿಸಬಹುದು ಮತ್ತು ಅಂಥ ವಾರಂಟ್ ಜಾರಿಗೆ ನಿರ್ದೇಶಿತನಾದ ವ್ಯಕ್ತಿಯು ಅದಕ್ಕೆ ಮತ್ತು ಈ ಮುಂದಿನ ಉಪಬಂಧಗಳಿಗೆ ಅನುಸಾರವಾಗಿ ಶೋಧನೆ ಮಾಡಬಹುದು ಅಥವಾ ಪರಿಶೀಲನೆ ಮಾಡಬಹುದು.

(2) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಶೋಧನೆ ಮತ್ತು ಪರಿಶೀಲನೆಗೆ ಮಾತ್ರ ವ್ಯಾಪ್ತವಾಗತಕ್ಕ ನಿಶ್ಚಿತ ಸ್ಥಳ ಅಥವಾ ಅದರ ಭಾಗವನ್ನು ವಾರಂಟಿನಲ್ಲಿ ನಿರ್ದಿಷ್ಟಪಡಿಸಬಹುದು ಮತ್ತು ಅಂಥ ವಾರಂಟನ್ನು ಜಾರಿ ಮಾಡುವ ಅಧಿಕಾರ ಪಡೆದ ವ್ಯಕ್ತಿಯು ಹಾಗೆ ನಿರ್ದಿಷ್ಟಪಡಿಸಿದ ಸ್ಥಳ ಅಥವಾ ಅದರ ಭಾಗವನ್ನು ಮಾತ್ರ ಶೋಧನೆ ಅಥವಾ ಪರಿಶೀಲನೆ ಮಾಡತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ ಅಂಚೆ ಪ್ರಾಧಿಕಾರಿಯ ಅಭಿರಕ್ಷೆಯಲ್ಲಿರುವ ದಸ್ತಾವೇಜು, ಪಾರ್ಸಲ್ ಅಥವಾ ಇತರ ವಸ್ತುವಿಗಾಗಿ ಶೋಧನೆ ಮಾಡುವುದಕ್ಕಾಗಿ ವಾರಂಟನ್ನು ಕೊಡಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಲ್ಲದ ಯಾರೇ ಮ್ಯಾಜಿಸ್ಟ್ರೇಟನನ್ನು ಪ್ರಾಧಿಕೃತಗೊಳಿಸತಕ್ಕದ್ದಲ್ಲ.

**97. ಕಳವು ಮಾಡಿದ ಸ್ವತ್ತು, ಸೃಷ್ಟನೆ ಮಾಡಿದ ದಸ್ತಾವೇಜು, ಇತ್ಯಾದಿಗಳು ಇರುವುದೆಂದು ಸಂದೇಹಪಡಲಾದ ಸ್ಥಳದ ಶೋಧನೆ.-** (1) ಜಿಲ್ಲಾ ಮ್ಯಾಜಿಸ್ಟ್ರೇಟ್, ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗೆ ಮಾಹಿತಿ ದೊರೆತ ಮೇಲೆ ಮತ್ತು ಅವನು ಅವಶ್ಯವೆಂದು ಭಾವಿಸುವಂಥ ವಿಚಾರಣೆ ಮಾಡಿದ ತರುವಾಯ ಕಳವು ಮಾಡಿದ ಸ್ವತ್ತನ್ನು ಇಡಲು ಅಥವಾ ಮಾರಾಟ ಮಾಡಲು ಅಥವಾ ಈ ಪ್ರಕರಣವು ಅನ್ವಯವಾಗುವ ಯಾವುದೇ ಆಕ್ಷೇಪಣೀಯ ವಸ್ತುವನ್ನು ಇಡಲು, ಮಾರಾಟ ಮಾಡಲು ಅಥವಾ ಉತ್ಪಾದಿಸಲು ಯಾವುದೇ ಸ್ಥಳವನ್ನು ಉಪಯೋಗಿಸಲಾಗುತ್ತಿದೆಯೆಂದು ಅಥವಾ ಅಂಥ ಯಾವುದೇ ಆಕ್ಷೇಪಣೀಯ ವಸ್ತುವನ್ನು ಯಾವುದೇ ಸ್ಥಳದಲ್ಲಿ ಇಡಲಾಗಿದೆಯೆಂದು ನಂಬಲು ಕಾರಣವಿದ್ದರೆ, ಅವನು ವಾರಂಟಿನ ಮೂಲಕ ಕಾನ್ಸ್‌ಟೇಬಲ್ ದರ್ಜೆಗಿಂತ ಮೇಲಿನ ಯಾರೇ ಪೊಲೀಸ್ ಅಧಿಕಾರಿಯನ್ನು,-

(ಎ) ಅಗತ್ಯವಾಗಬಹುದಾದಂಥ ನೆರವಿನೊಂದಿಗೆ ಅಂಥ ಸ್ಥಳವನ್ನು ಪ್ರವೇಶಿಸಲು;

(ಬಿ) ವಾರಂಟಿನಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅದನ್ನು ಶೋಧನೆ ಮಾಡಲು;

(ಸಿ) ಅದರಲ್ಲಿ ಕಂಡುಬಂದ ಕಳವು ಮಾಡಿದ ಸ್ವತ್ತು ಅಥವಾ ಈ ಪ್ರಕರಣವು ಅನ್ವಯವಾಗುವ ಆಕ್ಷೇಪಣೀಯ ವಸ್ತುವೆಂದು ಅವನು ಸಕಾರಣವಾಗಿ ಶಂಕಿಸುವ ಯಾವುದೇ ಸ್ವತ್ತು ಅಥವಾ ವಸ್ತುವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು;

(ಡಿ) ಅಂಥ ಸ್ವತ್ತು ಅಥವಾ ವಸ್ತುವನ್ನು ಮ್ಯಾಜಿಸ್ಟ್ರೇಟನ ಮುಂದೆ ಕೊಂಡೊಯ್ಯಲು ಅಥವಾ ಅಪರಾಧಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಕರೆದೊಯ್ಯುವವರೆಗೆ, ಅದನ್ನು ಸ್ಥಳದಲ್ಲಿಯೇ ರಕ್ಷಿಸಲು ಅಥವಾ ಸುರಕ್ಷಿತ ಸ್ಥಳದಲ್ಲಿ ಇಡಲು;

(ಇ) ಸಂದರ್ಭಾನುಸಾರ ಕಳವು ಮಾಡಿದ ಸ್ವತ್ತು ಅಥವಾ ಈ ಪ್ರಕರಣವು ಅನ್ವಯವಾಗುವಂಥ ಆಕ್ಷೇಪಣೀಯ ವಸ್ತುವೆಂದು ತಿಳಿದಿರುವ ಅಥವಾ ಹಾಗೆ ಶಂಕಿಸಲು ಸೂಕ್ತ ಕಾರಣವಿರುವ ಯಾವುದೇ ಅಂಥ ಸ್ವತ್ತಿನ ಅಥವಾ ವಸ್ತುವಿನ

ಇಡುವಿಕೆ, ಮಾರಾಟ ಅಥವಾ ಉತ್ಪಾದನೆಯಲ್ಲಿ ಶಾಮೀಲಾಗಿದ್ದಾನೆಂದು ಅಂಥ ಸ್ಥಳದಲ್ಲಿ ಕಂಡುಬರುವ ಪ್ರತಿಯೊಬ್ಬ ವ್ಯಕ್ತಿಯನ್ನು ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಮ್ಯಾಜಿಸ್ಟ್ರೇಟನ ಮುಂದೆ ಕರೆದೊಯ್ಯಲು

- ಅಧಿಕೃತಗೊಳಿಸಬಹುದು.

(2) ಈ ಪ್ರಕರಣಕ್ಕೆ ಅನ್ವಯವಾಗುವ ಆಕ್ಷೇಪಣೀಯ ವಸ್ತುಗಳು ಇಂತಿವೆ,-

(ಎ) ಖೋಟಾ ನಾಣ್ಯ;

(ಬಿ) ನಾಣ್ಯ ತಯಾರಿಕೆ ಅಧಿನಿಯಮ, 2011 (2011ರ 11)ನ್ನು ಉಲ್ಲಂಘಿಸಿ ತಯಾರಿಸಲಾದ ಅಥವಾ ಸೀಮಾಸುಂಕ ಅಧಿನಿಯಮ, 1962 (1962ರ 52)ರ 11ನೇ ಪ್ರಕರಣದ ಮೇರೆಗೆ ಹೊರಡಿಸಿದ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿಸೂಚನೆಯನ್ನು ಉಲ್ಲಂಘಿಸಿ ಭಾರತಕ್ಕೆ ತರಲಾದ ಲೋಹದ ಚೂರುಗಳು;

(ಸಿ) ಖೋಟಾ ಕರೆನ್ಸಿ-ನೋಟು; ಖೋಟಾ ಸ್ಟಾಂಪುಗಳು;

(ಡಿ) ಸೃಷ್ಟನೆ ಮಾಡಿದ ದಸ್ತಾವೇಜುಗಳು;

(ಇ) ಖೋಟಾ ಮೊಹರುಗಳು;

(ಎಫ್) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 294ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಅಶ್ಲೀಲ ವಸ್ತುಗಳು;

(ಜಿ) (ಎ)ಯಿಂದ (ಎಫ್)ವರೆಗಿನ ಖಂಡಗಳಲ್ಲಿ ಹೇಳಲಾದ ಯಾವುವೇ ವಸ್ತುಗಳ ಉತ್ಪಾದನೆಗಾಗಿ ಉಪಯೋಗಿಸಲಾದ ಉಪಕರಣಗಳು ಅಥವಾ ಸಾಮಗ್ರಿಗಳು.

**98. ಕೆಲವು ಪ್ರಕಟಣೆಗಳು ಮುಟ್ಟುಗೋಲಾಗಿವೆಯೆಂದು ಘೋಷಿಸಲು ಮತ್ತು ಅವುಗಳಿಗಾಗಿ ಶೋಧನೆಯ-ವಾರಂಟ್‌ಗಳನ್ನು ಹೊರಡಿಸಲು ಅಧಿಕಾರ.-** (1) ಯಾವ ವಿಷಯದ ಪ್ರಕಟಣೆಯು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 152ನೇ ಪ್ರಕರಣ ಅಥವಾ 196ನೇ ಪ್ರಕರಣ ಅಥವಾ 197ನೇ ಪ್ರಕರಣ ಅಥವಾ 294ನೇ ಪ್ರಕರಣ ಅಥವಾ 295ನೇ ಪ್ರಕರಣ ಅಥವಾ 299ನೇ ಪ್ರಕರಣದ ಮೇರೆಗೆ ದಂಡನೀಯವಾಗಿದೆಯೋ ಆ ಯಾವುದೇ ವಿಷಯವನ್ನು, ಎಲ್ಲಾದರೂ ಮುದ್ರಿತವಾದ,-

(ಎ) ಯಾವುದೇ ವೃತ್ತಪತ್ರಿಕೆ ಅಥವಾ ಪುಸ್ತಕ; ಅಥವಾ

(ಬಿ) ಯಾವುದೇ ದಸ್ತಾವೇಜು

- ಒಳಗೊಂಡಿರುವುದಾಗಿ ರಾಜ್ಯ ಸರ್ಕಾರಕ್ಕೆ ಕಂಡುಬಂದರೆ, ಅದು ಅಧಿಸೂಚನೆಯ ಮೂಲಕ ತನ್ನ ಅಭಿಪ್ರಾಯಕ್ಕೆ ಇರುವ ಕಾರಣಗಳನ್ನು ನಮೂದಿಸಿ ಅಂಥ ವಿಷಯವನ್ನು ಒಳಗೊಂಡಿರುವ ವೃತ್ತಪತ್ರಿಕೆಯ ಸಂಚಿಕೆಯ ಪ್ರತಿಯೊಂದು ಪ್ರತಿಯನ್ನು ಮತ್ತು ಅಂಥ ಪುಸ್ತಕ ಅಥವಾ ಇತರ ದಸ್ತಾವೇಜಿನ ಪ್ರತಿಯೊಂದು ಪ್ರತಿಯನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೆಂದು ಘೋಷಿಸಬಹುದು ಮತ್ತು ಆನಂತರ ಅದು ಭಾರತದಲ್ಲಿ ಎಲ್ಲಿಯೇ ಕಂಡುಬಂದರೂ ಯಾರೇ ಪೊಲೀಸ್ ಅಧಿಕಾರಿಯು ಅದನ್ನು ಅಭಿಗ್ರಹಣ ಮಾಡಬಹುದು ಮತ್ತು ಯಾರೇ ಮ್ಯಾಜಿಸ್ಟ್ರೇಟನು ಅಂಥ ಪ್ರಕಟಣೆಯ ಯಾವುದೇ ಪ್ರತಿ ಅಥವಾ ಯಾವುದೇ ಅಂಥ ಪುಸ್ತಕ ಅಥವಾ ಇತರ ದಸ್ತಾವೇಜು ಇರುವ ಅಥವಾ ಇರುವುದೆಂದು

ಶಂಕಿತವಾದ ಯಾವುದೇ ಆವರಣಗಳಲ್ಲಿ ಪ್ರವೇಶಿಸಲು ಮತ್ತು ಅದನ್ನು ಶೋಧನೆ ಮಾಡಲು ಸಬ್-ಇನ್ಸ್‌ಪೆಕ್ಟರರ ದರ್ಜೆಗಿಂತ ಕಡಿಮೆಯಲ್ಲದ ಯಾರೇ ಪೊಲೀಸ್ ಅಧಿಕಾರಿಯನ್ನು ವಾರಂಟಿನ ಮೂಲಕ ಪ್ರಾಧಿಕೃತಗೊಳಿಸಬಹುದು.

(2) ಈ ಪ್ರಕರಣದಲ್ಲಿ ಮತ್ತು 99ನೇ ಪ್ರಕರಣದಲ್ಲಿ,-

(ಎ) ìವೃತ್ತಪತ್ರಿಕೆî ಮತ್ತು ìಪುಸ್ತಕî ಎಂಬ ಪದಗಳು ವೃತ್ತಪತ್ರಿಕೆ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1867 (1867 ರ 25)ರಲ್ಲಿರುವಂಥ ಅರ್ಥವನ್ನೇ ಹೊಂದಿರುತ್ತವೆ;

(ಬಿ) ìದಸ್ತಾವೇಜುî ಎಂಬ ಪದವು ಯಾವುದೇ ವರ್ಣಚಿತ್ರ, ರೇಖಾಚಿತ್ರ, ಛಾಯಾಚಿತ್ರ ಅಥವಾ ಇತರ ದೃಶ್ಯರೂಪಣವನ್ನೂ ಒಳಗೊಳ್ಳುತ್ತದೆ.

(3) ಈ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಅಥವಾ ತೆಗೆದುಕೊಳ್ಳಲಾದ ಯಾವುದೇ ಕ್ರಮವನ್ನು, 99ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಹೊರತು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**99. ಮುಟ್ಟುಗೋಲಿನ ಘೋಷಣೆಯನ್ನು ರದ್ದುಮಾಡಲು ಉಚ್ಚ ನ್ಯಾಯಾಲಯಕ್ಕೆ ಅರ್ಜಿ.-** (1) 98ನೇ ಪ್ರಕರಣದ ಮೇರೆಗೆ ಮುಟ್ಟುಗೋಲಿನ ಘೋಷಣೆಯನ್ನು ಮಾಡಲಾದ ಯಾವುದೇ ವೃತ್ತಪತ್ರಿಕೆ, ಪುಸ್ತಕ ಅಥವಾ ದಸ್ತಾವೇಜಿನ ಬಗ್ಗೆ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯು ಘೋಷಣೆಯನ್ನು ಮಾಡಲಾದ ವೃತ್ತಪತ್ರಿಕೆಯ ಸಂಚಿಕೆ ಅಥವಾ ಪುಸ್ತಕ ಅಥವಾ ಇತರ ದಸ್ತಾವೇಜು 98ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ವಿಷಯವನ್ನು ಒಳಗೊಂಡಿರಲಿಲ್ಲವೆಂಬ ಕಾರಣದ ಮೇಲೆ ಅಂಥ ಘೋಷಣೆಯನ್ನು ರದ್ದು ಮಾಡಲು, ಅಂಥ ಘೋಷಣೆಯು ಸರ್ಕಾರಿ ರಾಜಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಎರಡು ತಿಂಗಳ ಒಳಗೆ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(2) ಉಚ್ಚ ನ್ಯಾಯಾಲಯವು ಮೂರು ಅಥವಾ ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡಿರುವಲ್ಲಿ, ಮೂರು ನ್ಯಾಯಾಧೀಶರುಳ್ಳ ಉಚ್ಚ ನ್ಯಾಯಾಲಯದ ವಿಶೇಷ ಪೀಠವು ಪ್ರತಿಯೊಂದು ಅರ್ಜಿಯನ್ನು ವಿಚಾರಣೆ ಮಾಡತಕ್ಕದ್ದು ಮತ್ತು ನಿರ್ಣಯಿಸತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು ಮೂರಕ್ಕಿಂತ ಕಡಿಮೆ ನ್ಯಾಯಾಧೀಶರನ್ನೊಳಗೊಂಡಿರುವಲ್ಲಿ ಅಂಥ ವಿಶೇಷ ಪೀಠದಲ್ಲಿ ಆ ಉಚ್ಚ ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರು ಇರತಕ್ಕದ್ದು.

(3) ಯಾವುದೇ ವೃತ್ತಪತ್ರಿಕೆಗೆ ಸಂಬಂಧಿಸಿದಂತೆ ಅಂಥ ಯಾವುದೇ ಅರ್ಜಿಯನ್ನು ವಿಚಾರಣೆ ಮಾಡುವಲ್ಲಿ, ಮುಟ್ಟುಗೋಲಿನ ಘೋಷಣೆಯನ್ನು ಮಾಡಲಾಗಿರುವ ಅಂಥ ವೃತ್ತಪತ್ರಿಕೆಯಲ್ಲಿ, ವೃತ್ತಪತ್ರಿಕೆಯು ಒಳಗೊಂಡಿರುವ ಪದಗಳು, ಸಂಕೇತಗಳು ಅಥವಾ ದೃಶ್ಯರೂಪಣಗಳ ಸ್ವರೂಪ ಅಥವಾ ಪ್ರವೃತ್ತಿಯನ್ನು ರುಜುವಾತು ಮಾಡಲು ಅನುಕೂಲವಾಗುವಂತೆ ಅಂಥ ವೃತ್ತಪತ್ರಿಕೆಯ ಯಾವುದೇ ಪ್ರತಿಯನ್ನು ಸಾಕ್ಷ್ಯವಾಗಿ ಕೊಡಬಹುದು.

(4) ಅರ್ಜಿಯನ್ನು ಯಾವ ವೃತ್ತಪತ್ರಿಕೆಯ ಸಂಚಿಕೆ, ಪುಸ್ತಕ ಅಥವಾ ಇತರ ಯಾವ ದಸ್ತಾವೇಜಿನ ಸಂಬಂಧದಲ್ಲಿ ಸಲ್ಲಿಸಲಾಗಿದೆಯೋ ಅಂಥ ವೃತ್ತಪತ್ರಿಕೆಯ ಸಂಚಿಕೆ, ಪುಸ್ತಕ ಅಥವಾ ಇತರ ಯಾವುದೇ ದಸ್ತಾವೇಜು 98ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ವಿಷಯವನ್ನು ಒಳಗೊಂಡಿದೆಯೆಂಬುದಾಗಿ ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾಗದಿದ್ದರೆ ಅದು ಮುಟ್ಟುಗೋಲಿನ ಘೋಷಣೆಯನ್ನು ರದ್ದುಮಾಡತಕ್ಕದ್ದು.

(5) ವಿಶೇಷ ಪೀಠವು ಒಳಗೊಂಡಿರುವ ನ್ಯಾಯಾಧೀಶರ ನಡುವೆ ಭಿನ್ನಾಭಿಪ್ರಾಯವಿರುವಲ್ಲಿ, ತೀರ್ಮಾನವು, ಆ ನ್ಯಾಯಾಧೀಶರ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿರತಕ್ಕದ್ದು.

**100. ಅಕ್ರಮವಾಗಿ ಬಂಧಿಸಲಾದ ವ್ಯಕ್ತಿಗಳಿಗಾಗಿ ಶೋಧನೆ.-** ಬಂಧನವು ಅಪರಾಧವೆಂದು ಪರಿಗಣಿತವಾಗುವಂಥ ಸನ್ನಿವೇಶದಲ್ಲಿ ಯಾರೇ ವ್ಯಕ್ತಿಯು ಬಂಧಿತನಾಗಿದ್ದಾನೆಂದು ನಂಬಲು ಕಾರಣವಿದ್ದರೆ, ಯಾರೇ ಜಿಲ್ಲಾ ಮ್ಯಾಜಿಸ್ಟ್ರೇಟ್, ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಶೋಧನೆಯ-ವಾರಂಟನ್ನು ಹೊರಡಿಸಬಹುದು ಮತ್ತು ಅಂಥ ವಾರಂಟಿನಿಂದ ನಿರ್ದೇಶಿತನಾದ ವ್ಯಕ್ತಿಯು ಹಾಗೆ ಬಂಧಿಸಲಾದ ವ್ಯಕ್ತಿಗಾಗಿ ಶೋಧಿಸಬಹುದು ಮತ್ತು ಅಂಥ ಶೋಧನೆಯನ್ನು ಅದಕ್ಕನುಸಾರವಾಗಿ ಮಾಡತಕ್ಕದ್ದು ಮತ್ತು ಆ ವ್ಯಕ್ತಿಯು ಸಿಕ್ಕಿದರೆ, ಆತನನ್ನು ಆ ಕೂಡಲೇ ಮ್ಯಾಜಿಸ್ಟ್ರೇಟನ ಮುಂದೆ ಕರೆದೊಯ್ಯತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಆ ಪ್ರಕರಣದ ಸನ್ನಿವೇಶಕ್ಕೆ ಯುಕ್ತವೆನಿಸುವಂಥ ಆದೇಶವನ್ನು ಮಾಡತಕ್ಕದ್ದು.

**101. ಬಲಾತ್ ಅಪಹರಣಕ್ಕೊಳಗಾದ ಮಹಿಳೆಯ ಪುನರ್ವಶಕ್ಕೆ ಒತ್ತಾಯಪಡಿಸಲು ಅಧಿಕಾರ.-** ಯಾವುದೇ ಕಾನೂನುಬಾಹಿರ ಉದ್ದೇಶಕ್ಕಾಗಿ ಮಹಿಳೆ ಅಥವಾ ಹೆಣ್ಣು ಮಗುವನ್ನು ಬಲಾತ್ ಅಪಹರಿಸಲಾಗಿದೆ ಎಂದು ಅಥವಾ ಕಾನೂನುಬಾಹಿರವಾಗಿ ತಡೆಹಿಡಿದಿರಿಸಲಾಗಿದೆ ಎಂದು ಪ್ರಮಾಣ ಮಾಡಿ ಸಲ್ಲಿಸಲಾದ ದೂರಿನ ಮೇಲೆ, ಜಿಲ್ಲಾ ಮ್ಯಾಜಿಸ್ಟ್ರೇಟ್, ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು, ಅಂಥ ಮಹಿಳೆಯನ್ನು ಕೂಡಲೇ ಸ್ವತಂತ್ರಗೊಳಿಸಲು ಅಥವಾ ಅಂಥ ಹೆಣ್ಣು ಮಗುವನ್ನು ಆಕೆಯ ತಂದೆ-ತಾಯಿ, ಪಾಲಕನಿಗೆ ಅಥವಾ ಆ ಮಗುವಿನ ಕಾನೂನುಬದ್ಧವಾಗಿ ಹೊಣೆಗಾರಿಕೆಯನ್ನು ಹೊಂದಿದ್ದ ಇತರೆ ವ್ಯಕ್ತಿಯ ಪುನರ್ವಶಕ್ಕೆ ಒಪ್ಪಿಸಲು ಆದೇಶವನ್ನು ಮಾಡಬಹುದು ಮತ್ತು ಅವಶ್ಯಕವಾಗಬಹುದಾದಂಥ ಬಲವನ್ನು ಪ್ರಯೋಗಿಸಿ ಅಂಥ ಆದೇಶದ ಪಾಲನೆಗೆ ಒತ್ತಾಯ ಮಾಡಬಹುದು.

***ಸಿ.- ಶೋಧನೆಗಳಿಗೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು.***

**102. ಶೋಧನೆಯ-ವಾರಂಟ್‌ಗಳ ನಿರ್ದೇಶನ, ಇತ್ಯಾದಿ.-** 32, 72, 74, 76, 79, 80 ಮತ್ತು 81ನೇ ಪ್ರಕರಣಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ 96ನೇ ಪ್ರಕರಣ, 97ನೇ ಪ್ರಕರಣ, 98ನೇ ಪ್ರಕರಣ ಮತ್ತು 100ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಎಲ್ಲಾ ಶೋಧನೆಯ-ವಾರಂಟ್‌ಗಳಿಗೆ ಅನ್ವಯವಾಗತಕ್ಕದ್ದು.

**103. ಮುಚ್ಚಿದ ಸ್ಥಳದ ಸ್ವಾಧೀನ ಹೊಂದಿರುವ ವ್ಯಕ್ತಿಗಳು ಶೋಧನೆಗೆ ಅವಕಾಶ ಮಾಡಿಕೊಡುವುದು.-** (1) ಈ ಅಧ್ಯಾಯದ ಮೇರೆಗೆ ಶೋಧನೆ ಅಥವಾ ಪರಿಶೀಲನೆಗೆ ಗುರಿಯಾದ ಯಾವುದೇ ಸ್ಥಳವನ್ನು ಮುಚ್ಚಿರುವಲ್ಲಿ, ಅಂಥ ಸ್ಥಳದಲ್ಲಿ ವಾಸಿಸುತ್ತಿರುವ ಅಥವಾ ಅದರ ಸ್ವಾಧೀನವನ್ನು ಹೊಂದಿರುವ ಯಾರೇ ವ್ಯಕ್ತಿಯು ವಾರಂಟನ್ನು ಜಾರಿ ಮಾಡುವ ಅಧಿಕಾರಿ ಅಥವಾ ಇತರ ವ್ಯಕ್ತಿಯ ಕೋರಿಕೆಯ ಮೇಲೆ ಮತ್ತು ವಾರಂಟನ್ನು ಹಾಜರುಪಡಿಸಿದ ಮೇಲೆ ಅದರ ಅಬಾಧಿತ ಪ್ರವೇಶಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಮತ್ತು ಅದರಲ್ಲಿ ಶೋಧನೆ ಮಾಡಲು ಎಲ್ಲಾ ಯುಕ್ತ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(2) ಅಂಥ ಸ್ಥಳಕ್ಕೆ ಹಾಗೆ ಪ್ರವೇಶ ಪಡೆಯಲು ಸಾಧ್ಯವಾಗದಿದ್ದರೆ, ವಾರಂಟನ್ನು ಜಾರಿ ಮಾಡುವ ಅಧಿಕಾರಿ ಅಥವಾ ಇತರ ವ್ಯಕ್ತಿಯು 44ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಮುಂದುವರಿಯಬಹುದು.

(3) ಶೋಧನೆ ಮಾಡಬೇಕಾಗಿರುವ ಯಾವುದೇ ವಸ್ತುವನ್ನು ಅಂಥ ಸ್ಥಳದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿರುವ ಯಾರೇ ವ್ಯಕ್ತಿಯು ತನ್ನ ದೇಹದಲ್ಲಿ ಬಚ್ಚಿಟ್ಟಿರುವನೆಂದು ಸಕಾರಣ ಶಂಕೆಗೊಳಗಾಗಿರುವಲ್ಲಿ ಅಂಥ ವ್ಯಕ್ತಿಯನ್ನು ಶೋಧನೆ ಮಾಡಬಹುದು ಮತ್ತು ಅಂಥ ವ್ಯಕ್ತಿಯು ಮಹಿಳೆಯಾಗಿದ್ದರೆ, ಸಭ್ಯತೆಗೆ ಕಟ್ಟುನಿಟ್ಟಾದ ಗಮನಕೊಟ್ಟು ಮತ್ತೊಬ್ಬ ಮಹಿಳೆಯು ಶೋಧನೆ ಮಾಡತಕ್ಕದ್ದು.

(4) ಈ ಅಧ್ಯಾಯದ ಮೇರೆಗೆ ಶೋಧನೆಯನ್ನು ಮಾಡುವ ಮುನ್ನ, ಶೋಧನೆ ಮಾಡಬೇಕಾಗಿರುವ ಅಧಿಕಾರಿ ಅಥವಾ ಇತರ ವ್ಯಕ್ತಿಯು, ಶೋಧನೆ ಮಾಡಬೇಕಾದ ಸ್ಥಳವು ಇರುವ ಪ್ರದೇಶದ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು, ಸ್ವತಂತ್ರ ಮತ್ತು ಗಣ್ಯ ನಿವಾಸಿಗಳನ್ನು ಅಥವಾ ಸದರಿ ಪ್ರದೇಶದ ಅಂಥ ಯಾವ ನಿವಾಸಿಯೂ ಸಿಗದಿದ್ದರೆ ಅಥವಾ ಆ ಶೋಧನೆಗೆ ಸಾಕ್ಷಿಯಾಗಿರಲು ಇಚ್ಛಿಸದಿದ್ದರೆ, ಯವುದೇ ಇತರ ಪ್ರದೇಶದ ನಿವಾಸಿಗಳನ್ನು ಶೋಧನೆಯಲ್ಲಿ ಹಾಜರಾಗಿ ಸಾಕ್ಷ್ಯ ನೀಡಲು ಕರೆಯತಕ್ಕದ್ದು ಮತ್ತು ಹಾಗೆ ಮಾಡಲು ಅವರಿಗೆ ಅಥವಾ ಅವರಲ್ಲಿ ಯಾರಾದರೊಬ್ಬಗೆ ಲಿಖಿತ ಆದೇಶವನ್ನು ಕೊಡಬಹುದು.

(5) ಶೋಧನೆಯು ಅವರ ಸಮ್ಮುಖದಲ್ಲಿ ನಡೆಯತಕ್ಕದ್ದು ಮತ್ತು ಅಂಥ ಶೋಧನೆಯ ಕಾಲದಲ್ಲಿ ವಶಕ್ಕೆ ತೆಗೆದುಕೊಳ್ಳಲಾದ ಎಲ್ಲಾ ವಸ್ತುಗಳ ಮತ್ತು ಅವು ಅನುಕ್ರಮವಾಗಿ ಸಿಕ್ಕಿದ ಸ್ಥಳಗಳ ಪಟ್ಟಿಯನ್ನು ಅಂಥ ಅಧಿಕಾರಿ ಅಥವಾ ಇತರ ವ್ಯಕ್ತಿಯು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ಸಾಕ್ಷಿದಾರರು ಅದಕ್ಕೆ ಸಹಿ ಹಾಕತಕ್ಕದ್ದು, ಆದರೆ ಈ ಪ್ರಕರಣದ ಮೇರೆಗೆ ಶೋಧನೆಗೆ ಸಾಕ್ಷಿಯಾಗಿರುವ ಯಾವ ವ್ಯಕ್ತಿಯನ್ನೂ ನ್ಯಾಯಾಲಯದಲ್ಲಿ ಶೋಧನೆಯ ಸಾಕ್ಷಿಯಾಗಿ ಹಾಜರಾಗಲು, ಅದು ವಿಶೇಷವಾಗಿ ಸಮನ್ ಮಾಡಿದ ಹೊರತು ಅಗತ್ಯಪಡಿಸತಕ್ಕದ್ದಲ್ಲ.

(6) ಶೋಧನೆಯ ಪ್ರತಿಯೊಂದು ಸಂದರ್ಭದಲ್ಲೂ ಶೋಧನೆಗೊಳಗಾದ ಸ್ಥಳದ ಅಧಿಭೋಗದಾರನಿಗೆ ಅಥವಾ ಅವನ ಪರವಾಗಿ ಇತರ ವ್ಯಕ್ತಿಗೆ ಹಾಜರಾಗಲು ಅನುಮತಿ ಕೊಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಸಿದ್ಧಪಡಿಸಲಾದ ಮತ್ತು ಸದರಿ ಸಾಕ್ಷಿದಾರರು ಸಹಿ ಹಾಕಿದ ಪಟ್ಟಿಯ ಪ್ರತಿಯನ್ನು ಅಂಥ ಅಧಿಭೋಗದಾರನಿಗೆ ಅಥವಾ ಇತರ ವ್ಯಕ್ತಿಗೆ ಕೊಡತಕ್ಕದ್ದು.

(7) (3)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಶೋಧನೆ ಮಾಡಿದಾಗ ಸ್ವಾಧೀನಕ್ಕೆ ತೆಗೆದುಕೊಳ್ಳಲಾದ ಎಲ್ಲಾ ವಸ್ತುಗಳ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಅಂಥ ವ್ಯಕ್ತಿಗೆ ಕೊಡತಕ್ಕದ್ದು.

(8) ಈ ಪ್ರಕರಣದ ಮೇರೆಗೆ ಶೋಧನೆಯಲ್ಲಿ ಹಾಜರಾಗಲು ಮತ್ತು ಸಾಕ್ಷಿಯಾಗಲು ಲಿಖಿತದಲ್ಲಿ ಕೊಡಲಾದ ಅಥವಾ ನೀಡಲಾದ ಆದೇಶದ ಮೂಲಕ ಯಾರೇ ವ್ಯಕ್ತಿಗೆ ಕರೆಕೊಟ್ಟಾಗ ಆತನು ಯುಕ್ತ ಕಾರಣವಿಲ್ಲದೇ ಹಾಗೇ ಮಾಡಲು ನಿರಾಕರಿಸಿದರೆ ಅಥವಾ ನಿರ್ಲಕ್ಷಿಸಿದರೆ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 222ನೇ ಪ್ರಕರಣದ ಮೇರೆಗೆ ಆತನು ಅಪರಾಧವೆಸಗಿದ್ದಾನೆಂದು ಭಾವಿಸತಕ್ಕದ್ದು.

**104. ಅಧಿಕಾರವ್ಯಾಪ್ತಿಯ ಹೊರಗಡೆಯ ಶೋಧನೆಯಲ್ಲಿ ಸಿಕ್ಕಿದ ವಸ್ತುಗಳ ವಿಲೆ.-** ಶೋಧನೆಯ-ವಾರಂಟನ್ನು ಹೊರಡಿಸಿದ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯ ಹೊರಗಿನ ಯಾವುದೇ ಸ್ಥಳದಲ್ಲಿ ಅದನ್ನು ಜಾರಿ ಮಾಡುವಾಗ, ಯಾವ ವಸ್ತುವಿಗಾಗಿ ಶೋಧನೆ ನಡೆದಿದೆಯೋ ಆ ಯಾವುದೇ ವಸ್ತುಗಳು ಸಿಕ್ಕಿದರೆ, ಅಂಥ ವಸ್ತುಗಳನ್ನು ಈ ಮುಂದಿನ ಉಪಬಂಧಗಳ ಮೇರೆಗೆ ಸಿದ್ಧಪಡಿಸಲಾದ ಅವುಗಳ ಪಟ್ಟಿಯ ಸಹಿತವಾಗಿ ಆ ಕೂಡಲೇ ವಾರಂಟನ್ನು ಹೊರಡಿಸುವ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗತಕ್ಕದ್ದು, ಆದರೆ ಅಂಥ ಸ್ಥಳವು ಅದರ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಆ ನ್ಯಾಯಾಲಯಕ್ಕಿಂತ ಹತ್ತಿರವಿದ್ದ ಸಂದರ್ಭದಲ್ಲಿ ಆ ಪಟ್ಟಿ ಮತ್ತು ವಸ್ತುಗಳನ್ನು ಆ ಮ್ಯಾಜಿಸ್ಟ್ರೇಟನ ಮುಂದೆ ಕೂಡಲೇ ತೆಗೆದುಕೊಂಡು ಹೋಗತಕ್ಕದ್ದು ಮತ್ತು ಅಂಥ ಮ್ಯಾಜಿಸ್ಟ್ರೇಟನು ಅವುಗಳನ್ನು ಅಂಥ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಬೇಕೆಂದು ಹಾಗೆ ಮಾಡಲು ತದ್ವಿರುದ್ಧ ಕಾರಣವಿದ್ದ ಹೊರತು, ಪ್ರಾಧಿಕೃತಗೊಳಿಸುವ ಆದೇಶವನ್ನು ಮಾಡತಕ್ಕದ್ದು.

### *ಡಿ.- ಸಂಕೀರ್ಣ*

**105. ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳ ಮುಖಾಂತರ ಶೋಧನೆ ಮತ್ತು ಅಭಿಗ್ರಹಣ ಪ್ರಕ್ರಿಯೆಯನ್ನು ದಾಖಲಿಸುವುದು.-** ಈ ಅಧ್ಯಾಯ ಅಥವಾ 185ನೇ ಪ್ರಕರಣದ ಮೇರೆಗೆ ಸ್ಥಳದ ಶೋಧನೆ ನಡೆಸುವ ಅಥವಾ ಯಾವುದೇ ಸ್ವತ್ತು, ಸಾಮಗ್ರಿ ಅಥವಾ ವಸ್ತುವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು, ಅಂಥ ಶೋಧನೆ ಅಥವಾ ಅಭಿಗ್ರಹಣದ

ಕ್ರಮದಲ್ಲಿ ಅಭಿಗ್ರಹಿಸಲಾದ ಎಲ್ಲಾ ವಸ್ತುಗಳ ಪಟ್ಟಿ ಸಿದ್ಧಪಡಿಸುವಿಕೆ ಮತ್ತು ಸಾಕ್ಷಿದಾರರು ಅಂಥ ಪಟ್ಟಿಗೆ ಸಹಿ ಹಾಕುವುದೂ ಒಳಗೊಂಡಂತೆ ಆ ಪ್ರಕ್ರಿಯೆಯನ್ನು ಯಾವುದೇ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳು ಎಂದರೆ, ಆದ್ಯತೆಯಾಗಿ ಮೊಬೈಲ್ ಫೋನಿನಲ್ಲಿ ದಾಖಲಿಸತಕ್ಕದ್ದು ಹಾಗೂ ಪೊಲೀಸ್ ಅಧಿಕಾರಿಯು ವಿಳಂಬ ಮಾಡದೇ ಅಂಥ ದಾಖಲೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್, ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

**106. ಕೆಲವು ಸ್ವತ್ತನ್ನು ಅಭಿಗ್ರಹಣ ಮಾಡಲು ಪೊಲೀಸ್ ಅಧಿಕಾರಿಯ ಅಧಿಕಾರ.-** (1) ಕಳವಾಗಿದೆಯೆಂದು ಆಪಾದಿಸಬಹುದಾದ ಅಥವಾ ಶಂಕಿಸಬಹುದಾದ ಅಥವಾ ಯಾವುದೇ ಅಪರಾಧವು ನಡೆದ ಸಂದೇಹಕ್ಕೆ ಎಡೆಗೊಡುವ ಸನ್ನಿವೇಶಗಳಲ್ಲಿ ಕಂಡುಬರಬಹುದಾದ ಯಾವುದೇ ಸ್ವತ್ತನ್ನು ಯಾರೇ ಪೊಲೀಸ್ ಅಧಿಕಾರಿಯು ಅಭಿಗ್ರಹಿಸಬಹುದು.

(2) ಅಂಥ ಪೊಲೀಸ್ ಅಧಿಕಾರಿಯು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಅಧೀನನಾಗಿದ್ದರೆ, ಅಭಿಗ್ರಹಣದ ಬಗ್ಗೆ ಆ ಅಧಿಕಾರಿಗೆ ಆ ಕೂಡಲೇ ವರದಿ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಕಾರ್ಯನಿರ್ವಹಿಸುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು, ಅಭಿಗ್ರಹಣದ ಸಂಗತಿಯನ್ನು, ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನಿಗೆ ಆ ಕೂಡಲೇ ತಿಳಿಸತಕ್ಕದ್ದು ಮತ್ತು ಹಾಗೆ ಅಭಿಗ್ರಹಿಸಿದ ಸ್ವತ್ತನ್ನು ಸುಲಭವಾಗಿ ನ್ಯಾಯಾಲಯಕ್ಕೆ ಸಾಗಿಸಲು ಅನುಕೂಲ ಇಲ್ಲದಿದ್ದಾಗ ಅಥವಾ ಅಂಥ ಸ್ವತ್ತಿನ ಅಭಿರಕ್ಷೆಗೆ ಸೂಕ್ತ ಸ್ಥಳಾವಕಾಶವನ್ನು ದೊರಕಿಸಿಕೊಳ್ಳುವುದು ಕಷ್ಟಕರವಾದಾಗ ಅಥವಾ ತನಿಖೆಯ ಉದ್ದೇಶಕ್ಕಾಗಿ ಅದನ್ನು ಪೊಲೀಸರ ಅಭಿರಕ್ಷೆಯಲ್ಲಿ ಇಟ್ಟಿರುವುದನ್ನು ಮುಂದುವರೆಸುವುದು ಅವಶ್ಯಕವೆಂದು ಪರಿಗಣಿಸದಿದ್ದಾಗ ಯಾರೇ ವ್ಯಕ್ತಿಗೆ, ಆ ಸ್ವತ್ತನ್ನು ಅಗತ್ಯಪಡಿಸಿದಾಗಲೆಲ್ಲ ನ್ಯಾಯಾಲಯಕ್ಕೆ ತಾನು ಹಾಜರುಪಡಿಸುತ್ತೇನೆಂದು ಮತ್ತು ನ್ಯಾಯಾಲಯವು ಆ ಸ್ವತ್ತಿನ ವಿಲೆಗೆ ಸಂಬಂಧಿಸಿದಂತೆ ಮುಂದೆ ಮಾಡಬಹುದಾದ ಆದೇಶವನ್ನು ಪಾಲಿಸುತ್ತೇನೆಂದು ಆ ವ್ಯಕ್ತಿಯಿಂದ ಬಂಧಪತ್ರವನ್ನು ಬರೆಸಿಕೊಂಡು, ಆ ಸ್ವತ್ತನ್ನು ಅವನ ಅಭಿರಕ್ಷೆಗೆ ಕೊಡಬಹುದು:

ಪರಂತು, (1)ನೇ ಉಪಪ್ರಕರಣದ ಮೇರೆಗೆ ಅಭಿಗ್ರಹಣ ಮಾಡಲಾದ ಸ್ವತ್ತು ಕ್ಷಿಪ್ರವಾಗಿ ಮತ್ತು ಸ್ವಾಭಾವಿಕವಾಗಿ ಹಾಳಾಗುವ ಸ್ವರೂಪದ್ದಾಗಿದ್ದರೆ ಮತ್ತು ಅಂಥ ಸ್ವತ್ತಿಗೆ ಹಕ್ಕುಳ್ಳವನಾದ ವ್ಯಕ್ತಿಯು ಯಾರೆಂದು ತಿಳಿಯದಿರುವಾಗ ಅಥವಾ ಹಾಜರಿಲ್ಲದಿರುವಾಗ ಮತ್ತು ಆ ಸ್ವತ್ತಿನ ಮೌಲ್ಯವು ಐದುನೂರು ರೂಪಾಯಿಗಳಿಗಿಂತ ಕಡಿಮೆಯದ್ದಾಗಿದ್ದರೆ, ಪೊಲೀಸ್ ಅಧೀಕ್ಷಕನ ಆದೇಶದ ಮೇರೆಗೆ ಹರಾಜಿನ ಮೂಲಕ ಕೂಡಲೇ ಮಾರಾಟ ಮಾಡತಕ್ಕದ್ದು ಮತ್ತು ಸಾಧ್ಯವಿರುವಷ್ಟರಮಟ್ಟಿಗೆ ಆ ಮಾರಾಟದ ನಿವ್ವಳ ಉತ್ಪತ್ತಿಗೆ 503ನೇ ಮತ್ತು 504ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

**107. ಸ್ವತ್ತಿನ ಜಪ್ತಿ, ಮುಟ್ಟುಗೋಲು ಅಥವಾ ಸ್ವತ್ತಿನ ವಾಪಸಾತಿ.-** (1) ಕ್ರಿಮಿನಲ್ ಚಟುವಟಿಕೆಯ ಪರಿಣಾಮವಾಗಿ ಅಥವಾ ಯಾವುದೇ ಅಪರಾಧ ಕೃತ್ಯದಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಸ್ವತ್ತು ಪ್ರಾಪ್ತವಾಗಿದೆಯೆಂದು ಅಥವಾ ಪಡೆದುಕೊಳ್ಳಲಾಗಿದೆಯೆಂದು ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಯು ನಂಬಲು ಕಾರಣ ಹೊಂದಿದ್ದಲ್ಲಿ, ಆತನು ಪೊಲೀಸ್ ಅಧೀಕ್ಷಕ ಅಥವಾ ಪೊಲೀಸ್ ಆಯುಕ್ತರ ಅನುಮೋದನೆಯೊಂದಿಗೆ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಅಥವಾ ಅಧಿವಿಚಾರಣೆ ನಡೆಸಲು ಅಥವಾ ಮೊಕದ್ದಮೆಯನ್ನು ಅಧಿವಿಚಾರಿಸಲು ಅಧಿಕಾರವ್ಯಾಪ್ತಿಯನ್ನು ಚಲಾಯಿಸುವ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನಿಗೆ ಅಂಥ ಸ್ವತ್ತನ್ನು ಜಪ್ತಿ ಮಾಡುವುದಕ್ಕಾಗಿ ಅರ್ಜಿ ಹಾಕಬಹುದು.

(2) ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ಸಾಕ್ಷ್ಯವನ್ನು ತೆಗೆದುಕೊಳ್ಳುವ ಮುಂಚೆ ಅಥವಾ ನಂತರ, ಎಲ್ಲಾ ಅಂಥ ಅಥವಾ ಯಾವುವೇ ಸ್ವತ್ತುಗಳು ಅಪರಾಧ ಕೃತ್ಯದ ಉತ್ಪತ್ತಿಗಳಾಗಿದೆಯೆಂದು ನಂಬಲು ಕಾರಣ ಹೊಂದಿದ್ದರೆ, ಜಪ್ತಿ ಆದೇಶವನ್ನು

ಏಕೆ ಮಾಡಬಾರದೆಂದು ಹದಿನಾಲ್ಕು ದಿನಗಳ ಅವಧಿಯೊಳಗೆ ಕಾರಣವನ್ನು ತಿಳಿಸುವಂತೆ ಕಾರಣ ಕೇಳಿ ಆ ವ್ಯಕ್ತಿಗೆ ನೋಟೀಸನ್ನು ನೀಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಗೆ ನೀಡಿದ ನೋಟೀಸಿನಲ್ಲಿನ ಯಾವುದೇ ಸ್ವತ್ತನ್ನು ಅಂಥ ವ್ಯಕ್ತಿಯ ಪರವಾಗಿ ಬೇರೊಬ್ಬ ವ್ಯಕ್ತಿಯು ಹೊಂದಿದ್ದಾನೆಂದು ನಿರ್ದಿಷ್ಟಪಡಿಸಲಾಗಿದ್ದರೆ, ನೋಟೀಸಿನ ಒಂದು ಪ್ರತಿಯನ್ನು ಅಂಥ ಇತರೆ ವ್ಯಕ್ತಿಗೂ ಸಹ ಜಾರಿ ಮಾಡತಕ್ಕದ್ದು.

(4) ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು, (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಕಾರಣ ಕೇಳಿ ನೋಟೀಸಿಗೆ ನೀಡಿದ ವಿವರಣೆ ಯಾವುದಾದರೂ ಇದ್ದರೆ, ಅದನ್ನು ಮತ್ತು ಅಂಥ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟ್ ಮುಂದೆ ಲಭ್ಯವಿರುವ ಪ್ರಮುಖ ಸಂಗತಿಯನ್ನು ಪರ್ಯಾಲೋಚಿಸಿದ ನಂತರ ಹಾಗೂ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯ ಅಪರಾಧ ಕೃತ್ಯದ ಉತ್ಪತ್ತಿಯಲ್ಲಿ ದೊರೆತಿವೆಯೆಂದು ಕಂಡುಬಂದ ಆ ಸ್ವತ್ತುಗಳಿಗೆ ಸಂಬಂಧಿಸಿದಂತೆ ಜಪ್ತಿ ಆದೇಶವನ್ನು ಹೊರಡಿಸಬಹುದು:

ಪರಂತು, ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನ ಮುಂದೆ ಅಂಥ ವ್ಯಕ್ತಿಯು ಹಾಜರಾಗದಿದ್ದಲ್ಲಿ ಅಥವಾ ಅಂಥ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನ ಮುಂದೆ ಕಾರಣ ಕೇಳಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಹದಿನಾಲ್ಕು ದಿನಗಳ ಅವಧಿಯೊಳಗೆ ಆತನ ಮೊಕದ್ದಮೆಯನ್ನು ಪ್ರತಿನಿಧಿಸದಿದ್ದಲ್ಲಿ, ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ಏಕಪಕ್ಷೀಯವಾಗಿ ಆದೇಶವನ್ನು ಮಾಡಲು ಮುಂದುವರೆಯಬಹುದು.

(5) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ಸದರಿ ಉಪಪ್ರಕರಣದ ಮೇರೆಗೆ ನೋಟೀಸು ನೀಡಿಕೆಯು ಜಪ್ತಿ ಅಥವಾ ಅಭಿಗ್ರಹಣದ ಉದ್ದೇಶವು ವಿಫಲವಾಗುವುದೆಂದು ಅಭಿಪ್ರಾಯಪಟ್ಟರೆ, ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ನೇರವಾಗಿ ಅಂಥ ಸ್ವತ್ತಿನ ಜಪ್ತಿ ಅಥವಾ ಅಭಿಗ್ರಹಣಕ್ಕೆ ಏಕಪಕ್ಷೀಯವಾಗಿ ಮಧ್ಯಂತರ ಆದೇಶವನ್ನು ಹೊರಡಿಸಬಹುದು ಮತ್ತು (6)ನೇ ಉಪಪ್ರಕರಣದ ಮೇರೆಗೆ ಆದೇಶ ಹೊರಡಿಸುವವರೆಗೆ ಅಂಥ ಆದೇಶವು ಜಾರಿಯಲ್ಲಿರತಕ್ಕದ್ದು.

(6) ಜಪ್ತಿ ಮಾಡಿದ ಅಥವಾ ಅಭಿಗ್ರಹಿಸಿದ ಸ್ವತ್ತುಗಳು ಅಪರಾಧದ ಉತ್ಪತ್ತಿಗಳಾಗಿವೆ ಎಂದು ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ, ಅಂಥ ಅಪರಾಧದಿಂದ ಬಾಧಿತರಾದಂಥ ವ್ಯಕ್ತಿಗಳಿಗೆ ಅಂಥ ಅಪರಾಧದ ಉತ್ಪತ್ತಿಗಳನ್ನು ಪ್ರಮಾಣಾನುಸಾರ ವಿತರಿಸುವಂತೆ ಆದೇಶದ ಮೂಲಕ ನಿರ್ದೇಶಿಸತಕ್ಕದ್ದು.

(7) (6)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಸ್ವೀಕರಿಸಿದ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟನು ಅರವತ್ತು ದಿನಗಳ ಅವಧಿಯೊಳಗೆ ಸ್ವತಃ ತಾನೇ ಅಪರಾಧದ ಉತ್ಪತ್ತಿಗಳನ್ನು ವಿತರಿಸತಕ್ಕದ್ದು ಅಥವಾ ಅಂಥ ವಿತರಣೆಗಾಗಿ ತನಗೆ ಅಧೀನನಾದ ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸತಕ್ಕದ್ದು.

(8) ಅಂಥ ಉತ್ಪತ್ತಿಗಳನ್ನು ಸ್ವೀಕರಿಸಲು ಯಾರೇ ಕ್ಲೇಮುದಾರರು ಇಲ್ಲದಿದ್ದರೆ ಅಥವಾ ಕ್ಲೇಮುದಾರ ಇಲ್ಲವೆಂದು ಖಚಿತಪಡಿಸಿಕೊಂಡರೆ ಅಥವಾ ಕ್ಲೇಮುದಾರರಿಗೆ ಪೂರೈಸಿದ ನಂತರ ಯಾವುದೇ ಹೆಚ್ಚುವರಿ ಉತ್ಪತ್ತಿಗಳು ಇದ್ದರೆ ಅಂಥ ಅಪರಾಧದ ಉತ್ಪತ್ತಿಗಳನ್ನು ಕೂಡಲೇ ಸರ್ಕಾರಕ್ಕೆ ಮುಟ್ಟುಗೋಲು ಆಗತಕ್ಕದ್ದು.

**108. ಮ್ಯಾಜಿಸ್ಟ್ರೇಟನು ತನ್ನ ಸಮ್ಮುಖದಲ್ಲಿ ಶೋಧನೆಗೆ ನಿರ್ದೇಶಿಸಬಹುದು.-** ಯಾರೇ ಮ್ಯಾಜಿಸ್ಟ್ರೇಟನು, ತಾನು ಯಾವ ಸ್ಥಳದ ಶೋಧನೆಗಾಗಿ ಶೋಧನೆಯ-ವಾರಂಟನ್ನು ಹೊರಡಿಸಲು ಸಕ್ಷಮನಾಗಿರುವನೋ ಆ ಸ್ಥಳದ ಶೋಧನೆಯನ್ನು ತನ್ನ ಸಮ್ಮುಖದಲ್ಲಿ ಮಾಡಲು ನಿರ್ದೇಶಿಸಬಹುದು.

**109. ಹಾಜರುಪಡಿಸಲಾದ ದಸ್ತಾವೇಜು, ಇತ್ಯಾದಿಗಳನ್ನು ವಶಕ್ಕೆ ತೆಗೆದುಕೊಳ್ಳಲು ಅಧಿಕಾರ.-** ಯಾವುದೇ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಈ ಸಂಹಿತೆಯ ಮೇರೆಗೆ ಅದರ ಮುಂದೆ ಹಾಜರುಪಡಿಸಿದ ಯಾವುದೇ ದಸ್ತಾವೇಜು ಅಥವಾ ವಸ್ತುವನ್ನು ವಶಕ್ಕೆ ತೆಗೆದುಕೊಳ್ಳಬಹುದು.

**110. ಆದೇಶಿಕೆಗಳ ಬಗ್ಗೆ ಪರಸ್ಪರ ವ್ಯವಸ್ಥೆಗಳು.-** (1) ಈ ಸಂಹಿತೆಯು ವ್ಯಾಪ್ತವಾಗುವ (ಈ ಮುಂದೆ ಸದರಿ ಕ್ಷೇತ್ರಗಳು ಎಂದು ಈ ಪ್ರಕರಣದಲ್ಲಿ ಉಲ್ಲೇಖಿಸಲಾಗುವ) ರಾಜ್ಯಕ್ಷೇತ್ರಗಳಲ್ಲಿನ ನ್ಯಾಯಾಲಯವು,-

(ಎ) ಆಪಾದಿತ ವ್ಯಕ್ತಿಗೆ ಹೊರಡಿಸಿದ ಸಮನನ್ನು; ಅಥವಾ

(ಬಿ) ಆಪಾದಿತ ವ್ಯಕ್ತಿಯ ದಸ್ತಗಿರಿಗಾಗಿ ಹೊರಡಿಸಿದ ವಾರಂಟನ್ನು; ಅಥವಾ

(ಸಿ) ಯಾರೇ ವ್ಯಕ್ತಿಗೆ, ಅವನು ಹಾಜರಾಗಬೇಕೆಂದು ಮತ್ತು ದಸ್ತಾವೇಜು ಅಥವಾ ಇತರ ವಸ್ತುವನ್ನು ಹಾಜರುಪಡಿಸಬೇಕೆಂದು ಅಥವಾ ಅದನ್ನು ಹಾಜರು ಮಾಡಬೇಕೆಂದು ಅಗತ್ಯಪಡಿಸಿ ಹೊರಡಿಸಿದ ಸಮನನ್ನು; ಅಥವಾ

(ಡಿ) ಹೊರಡಿಸಿದ ಶೋಧನೆಯ-ವಾರಂಟನ್ನು,-

(i) ಭಾರತದಲ್ಲಿನ ಯಾವುದೇ ರಾಜ್ಯದಲ್ಲಿ ಅಥವಾ ಸದರಿ ರಾಜ್ಯಕ್ಷೇತ್ರಗಳ ಹೊರಗೆ ಅಥವಾ ಪ್ರದೇಶದಲ್ಲಿರುವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ಜಾರಿ ಮಾಡುವುದಕ್ಕಾಗಿ ಅಥವಾ ಅಮಲ್ಜಾರಿ ಮಾಡುವುದಕ್ಕಾಗಿ ಅದು ಅಂಥ ಸಮನನ್ನು ಅಥವಾ ವಾರಂಟನ್ನು ದ್ವಿಪ್ರತಿಯಲ್ಲಿ ಅಂಚೆ ಮೂಲಕ ಅಥವಾ ಅನ್ಯಥಾ ನ್ಯಾಯಾಲಯದ ಪೀಠಾಸೀನಾಧಿಕಾರಿಗೆ ಕಳುಹಿಸಬಹುದು ಮತ್ತು (ಎ) ಖಂಡ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಸಮನನ್ನು ಹಾಗೆ ಜಾರಿ ಮಾಡಲಾಗಿದ್ದರೆ, 70ನೇ ಪ್ರಕರಣದ ಉಪಬಂಧಗಳು, ಯಾವ ನ್ಯಾಯಾಲಯಕ್ಕೆ ಅಂಥ ಸಮನುಗಳನ್ನು ಕಳುಹಿಸಲಾಯಿತೋ, ಆ ನ್ಯಾಯಾಲಯದ ಪೀಠಾಸೀನಾಧಿಕಾರಿಯು ಸದರಿ ರಾಜ್ಯಕ್ಷೇತ್ರಗಳಲ್ಲಿ ಒಬ್ಬ ಮ್ಯಾಜಿಸ್ಟ್ರೇಟನಾಗಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ, ಹಾಗೇ ಅಂಥ ಸಮನುಗಳ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು;

(ii) ಭಾರತದ ಹೊರಗಿನ ಯಾವ ದೇಶದೊಡನೆ ಅಥವಾ ಪ್ರದೇಶದೊಡನೆ (ಇನ್ನು ಮುಂದೆ ಈ ಪ್ರಕರಣದಲ್ಲಿ ಕರಾರು ಮಾಡಿಕೊಳ್ಳುವ ರಾಷ್ಟ್ರ ಎಂದು ಉಲ್ಲೇಖಿಸಲಾಗುವ) ಕೇಂದ್ರ ಸರ್ಕಾರವು ಕ್ರಿಮಿನಲ್ ವಿಷಯಗಳಿಗೆ ಸಂಬಂಧಿಸಿದಂತೆ ಸಮನುಗಳನ್ನು ಅಥವಾ ವಾರಂಟ್‌ಗಳನ್ನು ಜಾರಿಗೊಳಿಸಲು ಅಥವಾ ಅಮಲ್ಜಾರಿಗೊಳಿಸಲು ವ್ಯವಸ್ಥೆಯನ್ನು ಮಾಡಿಕೊಂಡಿರುತ್ತದೆಯೋ, ಆ ದೇಶದಲ್ಲಿ ಅಥವಾ ಆ ಪ್ರದೇಶದಲ್ಲಿನ ಅಂಥ ನ್ಯಾಯಾಲಯಕ್ಕೆ, ನ್ಯಾಯಾಧೀಶನಿಗೆ ಅಥವಾ ಮ್ಯಾಜಿಸ್ಟ್ರೇಟನಿಗೆ ಅಂಥ ಸಮನುಗಳನ್ನು ಅಥವಾ ವಾರಂಟ್‌ಗಳನ್ನು ಈ ಬಗ್ಗೆ ಕೇಂದ್ರ ಸರ್ಕಾರವು ಪ್ರಕಟಣೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆಗಳಲ್ಲಿ, ದ್ವಿಪ್ರತಿಯಲ್ಲಿ ನಿರ್ದೇಶನ ನೀಡಿ ಅದು ಕಳುಹಿಸತಕ್ಕದ್ದು ಮತ್ತು ರವಾನೆ ಮಾಡುವ ಪ್ರಾಧಿಕಾರಕ್ಕೂ ಕಳುಹಿಸತಕ್ಕದ್ದು.

(2) ಸದರಿ ರಾಜ್ಯಕ್ಷೇತ್ರಗಳಲ್ಲಿರುವ ನ್ಯಾಯಾಲಯವು,-

(ಎ) ಆಪಾದಿತ ವ್ಯಕ್ತಿಗೆ ಹೊರಡಿಸಿದ ಸಮನನ್ನು; ಅಥವಾ

(ಬಿ) ಆಪಾದಿತ ವ್ಯಕ್ತಿಯ ದಸ್ತಗಿರಿಗಾಗಿ ಹೊರಡಿಸಿದ ವಾರಂಟನ್ನು; ಅಥವಾ

(ಸಿ) ಯಾರೇ ವ್ಯಕ್ತಿಗೆ ಅವನು ಹಾಜರಾಗಬೇಕೆಂದು ಮತ್ತು ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸಬೇಕೆಂದು ಅಥವಾ ಅದನ್ನು ಹಾಜರು ಮಾಡಬೇಕೆಂದು ಅಗತ್ಯಪಡಿಸಿ ಹೊರಡಿಸಿದ ಸಮನನ್ನು; ಅಥವಾ

(ಡಿ) ಹೊರಡಿಸಿದ ಶೋಧನೆಯ-ವಾರಂಟನ್ನು;

(I) ಭಾರತದಲ್ಲಿ ಯಾವುದೇ ರಾಜ್ಯದಲ್ಲಿರುವ ಅಥವಾ ಸದರಿ ರಾಜ್ಯಕ್ಷೇತ್ರಗಳ ಹೊರಗಿರುವ ಯಾವುದೇ ನ್ಯಾಯಾಲಯವು;

(II) ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿನ ನ್ಯಾಯಾಲಯ, ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು

- ಜಾರಿ ಮಾಡುವುದಕ್ಕಾಗಿ ಅಥವಾ ಅಮಲ್ಜಾರಿಗೊಳಿಸುವುದಕ್ಕಾಗಿ ಸ್ವೀಕರಿಸಿದರೆ ಅದನ್ನು ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯ ಪ್ರದೇಶದೊಳಗೆ ಜಾರಿ ಮಾಡುವುದಕ್ಕಾಗಿ ಅಥವಾ ಅಮಲ್ಜಾರಿಗೊಳಿಸುವುದಕ್ಕಾಗಿ, ಆ ರಾಜ್ಯಕ್ಷೇತ್ರಗಳಲ್ಲಿರುವ ಇನ್ನೊಂದು ನ್ಯಾಯಾಲಯವು ಕಳುಹಿಸಿದ್ದರೆ ಹೇಗೆ ಅವುಗಳನ್ನು ಸಮನುಗಳೆಂದು ಅಥವಾ ವಾರಂಟ್‌ಗಳೆಂದು ಜಾರಿ ಮಾಡಲಾಗುತ್ತಿತ್ತೋ ಅಥವಾ ಅಮಲ್ಜಾರಿಗೊಳಿಸಲಾಗುತ್ತಿತ್ತೋ ಹಾಗೆಯೇ ಜಾರಿ ಮಾಡಿಸತಕ್ಕದ್ದು ಅಥವಾ ಅಮಲ್ಜಾರಿಗೊಳಿಸತಕ್ಕದ್ದು.

(i) ದಸ್ತಗಿರಿಯ ವಾರಂಟನ್ನು ಅಮಲ್ಜಾರಿಗೊಳಿಸಲಾಗಿರುವಲ್ಲಿ ಸಾಧ್ಯವಾದಷ್ಟು ಮಟ್ಟಿಗೆ, 82ನೇ ಮತ್ತು 83ನೇ ಪ್ರಕರಣದಲ್ಲಿ ನಿಯಮಿಸಲಾದ ಪ್ರಕ್ರಿಯೆಗನುಸಾರವಾಗಿ ದಸ್ತಗಿರಿಯಾದ ವ್ಯಕ್ತಿಯೊಡನೆ ವ್ಯವಹರಿಸತಕ್ಕದ್ದು;

(ii) ಶೋಧನೆಯ-ವಾರಂಟನ್ನು ಅಮಲ್ಜಾರಿಗೊಳಿಸಲಾಗಿರುವಲ್ಲಿ, ಶೋಧನೆಯಲ್ಲಿ ಕಂಡುಬಂದ ವಸ್ತುಗಳನ್ನು ಕುರಿತು ಸಾಧ್ಯವಾದಷ್ಟು ಮಟ್ಟಿಗೆ, 104ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿ ಪ್ರಕ್ರಿಯೆಗನುಸಾರವಾಗಿ ವ್ಯವಹರಿಸತಕ್ಕದ್ದು:

ಪರಂತು, ಕರಾರು ಮಾಡಿಕೊಳ್ಳುವ ರಾಷ್ಟ್ರದಿಂದ ಸ್ವೀಕರಿಸಿದ ಸಮನುಗಳನ್ನು ಅಥವಾ ಶೋಧನೆಯ-ವಾರಂಟ್‌ಗಳನ್ನು ಅಮಲ್ಜಾರಿಗೊಳಿಸಿದ್ದರೆ, ಹಾಜರುಪಡಿಸಿರುವ ದಸ್ತಾವೇಜುಗಳನ್ನು ಅಥವಾ ಹಾಜರುಪಡಿಸಿದ ವಸ್ತುಗಳನ್ನು ಮತ್ತು ಶೋಧನೆಯಲ್ಲಿ ದೊರಕಿರುವ ವಸ್ತುಗಳನ್ನು, ಸಮನುಗಳನ್ನು ಹೊರಡಿಸಿದ ಅಥವಾ ಶೋಧನೆಯ-ವಾರಂಟನ್ನು ಹೊರಡಿಸಿದ ನ್ಯಾಯಾಲಯಕ್ಕೆ ಆ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯ ಮೂಲಕ ಕಳುಹಿಸಿಕೊಡತಕ್ಕದ್ದು.

## ಅಧ್ಯಾಯ VIII

## ಕೆಲವು ವಿಷಯಗಳಲ್ಲಿ ನೆರವಾಗುವುದಕ್ಕಾಗಿ ಪರಸ್ಪರ ವ್ಯವಸ್ಥೆಗಳು ಮತ್ತು ಸ್ವತ್ತಿನ ಜಪ್ತಿಗಾಗಿ ಮತ್ತು ಮುಟ್ಟುಗೋಲಿಗಾಗಿ ಪ್ರಕ್ರಿಯೆ

**111 ಪರಿಭಾಷೆಗಳು.-** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) 'ಕರಾರು ಮಾಡಿಕೊಳ್ಳುವ ರಾಷ್ಟ್ರ' ಎಂದರೆ, ಕೇಂದ್ರ ಸರ್ಕಾರವು ಭಾರತದ ಹೊರಗಿನ ಸಂಧಿಯ ಮುಖಾಂತರ ಅಥವಾ ಅನ್ಯಥಾ ಯಾವ ಇತರ ದೇಶದ ಅಥವಾ ಸ್ಥಳದ ಸರ್ಕಾರಕ್ಕೆ ವ್ಯವಸ್ಥೆಗಳನ್ನು ಮಾಡಿಕೊಂಡಿರುತ್ತದೆಯೋ ಆ ಯಾವುದೇ ದೇಶ ಅಥವಾ ಸ್ಥಳ;

(ಬಿ) ìಗುರುತಿಸುವುದುî ಎಂಬ ಪದವು, ಸ್ವತ್ತನ್ನು ಅಪರಾಧ ನಡೆದ ಸ್ಥಳದಿಂದ ಪಡೆಯಲಾಗಿತ್ತು ಅಥವಾ ಅಪರಾಧಕ್ಕೆ ಬಳಸಲಾಗಿತ್ತು ಎಂದು ರುಜುವಾತುಪಡಿಸುವುದನ್ನೂ ಒಳಗೊಳ್ಳುತ್ತದೆ;

(ಸಿ) ìಅಪರಾಧದ ಉತ್ಪತ್ತಿಗಳುî ಎಂದರೆ, ಯಾರೇ ವ್ಯಕ್ತಿಯು ಕ್ರಿಮಿನಲ್ ಕಾರ್ಯಚಟುವಟಿಕೆಗಳ (ಕರೆನ್ಸಿ ವರ್ಗಾವಣೆ ಮಾಡುವುದನ್ನೂ ಒಳಗೊಂಡ ಅಪರಾಧದ) ಪರಿಣಾಮವಾಗಿ, ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರಾಪ್ತವಾದ ಅಥವಾ ಪಡೆದುಕೊಂಡ ಯಾವುದೇ ಸ್ವತ್ತು ಅಥವಾ ಅಂಥ ಯಾವುದೇ ಸ್ವತ್ತಿನ ಮೌಲ್ಯ;

(ಡಿ) ìಸ್ವತ್ತುî ಎಂದರೆ, ಯಾವುದೇ ವರ್ಣನೆಯ, ಅದು ಭೌತಿಕವಾದದ್ದಾಗಿರಲಿ ಅಥವಾ ಭೌತಿಕವಲ್ಲದ್ದಾಗಿರಲಿ, ಚರ ಅಥವಾ ಸ್ಥಿರ, ಮೂರ್ತ ಅಥವಾ ಅಮೂರ್ತ ಸ್ವರೂಪದ್ದಾಗಿರಲಿ, ಅಂಥ ಸ್ವತ್ತು ಅಥವಾ ಆಸ್ತಿಗಳಿಗೆ ಇರುವ ಹಕ್ಕಿಗೆ ಅಥವಾ ಹಿತಾಸಕ್ತಿಗೆ ಪುರಾವೆ ಒದಗಿಸುವ ಪತ್ರಗಳು ಮತ್ತು ಲಿಖಿತಗಳು ಅಥವಾ ಅಪರಾಧವೆಸಗುವುದಕ್ಕೆ ಸಂಬಂಧಿಸಿದಂತೆ ಪ್ರಾಪ್ತವಾದ ಅಥವಾ ಪಡೆದುಕೊಂಡಂಥ ಸ್ವತ್ತು ಮತ್ತು ಆಸ್ತಿ ಮತ್ತು ಇದು ಅಪರಾಧದ ಉತ್ಪತ್ತಿಗಳ ಮೂಲಕ ಪಡೆದುಕೊಂಡ ಸ್ವತ್ತನ್ನೂ ಒಳಗೊಳ್ಳುತ್ತದೆ;

(ಇ) ìಪತ್ತೆ ಹಚ್ಚುವುದುî ಎಂದರೆ, ಸ್ವತ್ತಿನ ಸ್ವರೂಪವನ್ನು, ಮೂಲವನ್ನು, ವಿಲೇವಾರಿಯನ್ನು, ಸ್ವಾಧೀನತೆಯನ್ನು, ಹಕ್ಕನ್ನು ಅಥವಾ ಒಡೆತನವನ್ನು ನಿರ್ಧರಿಸುವುದು.

**112. ಭಾರತದ ಹೊರಗಿನ ದೇಶ ಅಥವಾ ಸ್ಥಳದಲ್ಲಿ ತನಿಖೆಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಕೋರಿಕೆ ಪತ್ರ.-** (1) ಅಪರಾಧದ ತನಿಖೆಯ ಕ್ರಮದಲ್ಲಿ, ತನಿಖಾಧಿಕಾರಿಯು ಅಥವಾ ತನಿಖಾಧಿಕಾರಿಯ ದರ್ಜೆಗಿಂತ ಮೇಲಿನ ಯಾರೇ ವರಿಷ್ಠಾಧಿಕಾರಿಯು, ಭಾರತದ ಹೊರಗಿನ ದೇಶ ಅಥವಾ ಸ್ಥಳದಲ್ಲಿ ಸಾಕ್ಷ್ಯವು ಲಭ್ಯವಾಗಬಹುದೆಂದು ಅರ್ಜಿಯನ್ನು ಸಲ್ಲಿಸಿದಲ್ಲಿ, ಯಾವುದೇ ಕ್ರಿಮಿನಲ್ ನ್ಯಾಯಾಲಯವು, ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳ ಬಗ್ಗೆ ತಿಳಿದಿರುವನೆಂದು ಭಾವಿಸಲಾಗುವ ಯಾರೇ ವ್ಯಕ್ತಿಯನ್ನು ಮೌಖಿಕವಾಗಿ ಪರೀಕ್ಷಿಸುವಂತೆ ಕೋರಿ ಮತ್ತು ಅಂಥ ಪರೀಕ್ಷಣಾ ಕ್ರಮದಲ್ಲಿ ನೀಡಿದ ಆತನ ಹೇಳಿಕೆಯನ್ನು ದಾಖಲಿಸುವಂತೆ ಕೋರಿ ಮತ್ತು ಮೊಕದ್ದಮೆಗೆ ಸಂಬಂಧಿಸಿದ ಆತನ ಸ್ವಾಧೀನದಲ್ಲಿರಬಹುದಾದ ಯಾವುದೇ ದಸ್ತಾವೇಜು ಅಥವಾ ವಸ್ತುವನ್ನು ಸಹ ಹಾಜರುಪಡಿಸಲು ಅಂಥ ವ್ಯಕ್ತಿ ಅಥವಾ ಯಾರೇ ಇತರ ವ್ಯಕ್ತಿಯನ್ನು ಅಗತ್ಯಪಡಿಸುವಂತೆ ಕೋರಿ ಮತ್ತು ಹಾಗೆ ಪಡೆದುಕೊಂಡ ಅಥವಾ ಸಂಗ್ರಹಿಸಿದ ಎಲ್ಲಾ ಸಾಕ್ಷ್ಯಗಳನ್ನು ಅಥವಾ ಅದರ ಅಧಿಪ್ರಮಾಣಿತ ಪ್ರತಿಗಳನ್ನು ಅಥವಾ ಹಾಗೆ ಸಂಗ್ರಹಿಸಿದ ವಸ್ತುಗಳನ್ನು, ಅಂಥ ಪತ್ರವನ್ನು ಹೊರಡಿಸಿದ ನ್ಯಾಯಾಲಯಕ್ಕೆ ಕಳುಹಿಸುವಂತೆ ಕೋರಿ, ಅಂಥ ಕೋರಿಕೆಯ ಬಗ್ಗೆ ವ್ಯವಹರಿಸುವುದಕ್ಕೆ ಸಕ್ಷಮವಾಗಿರುವ ಆ ದೇಶ ಅಥವಾ ಸ್ಥಳದಲ್ಲಿನ ನ್ಯಾಯಾಲಯ ಅಥವಾ ಪ್ರಾಧಿಕಾರಕ್ಕೆ ಕೋರಿಕೆ ಪತ್ರವನ್ನು ನೀಡಬಹುದು.

(2) ಕೋರಿಕೆ ಪತ್ರವನ್ನು ಕೇಂದ್ರ ಸರ್ಕಾರವು ಆ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ವಿಧಾನದಲ್ಲಿ ಕಳುಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ದಾಖಲಿಸಿಕೊಳ್ಳಲಾದ ಪ್ರತಿಯೊಂದು ಹೇಳಿಕೆ ಅಥವಾ ಸ್ವೀಕರಿಸಿದ ದಸ್ತಾವೇಜು ಅಥವಾ ವಸ್ತುವನ್ನು ಈ ಸಂಹಿತೆ ಮೇರೆಗೆ ನಡೆಸಿದ ತನಿಖೆಯ ಕ್ರಮದಲ್ಲಿ ಸಂಗ್ರಹಿಸಿದ ಸಾಕ್ಷ್ಯವೆಂದು ಭಾವಿಸತಕ್ಕದ್ದು.

**113. ಭಾರತದ ಹೊರಗಿನ ದೇಶ ಅಥವಾ ಸ್ಥಳದಿಂದ ಭಾರತದಲ್ಲಿ ತನಿಖೆಗಾಗಿ ನ್ಯಾಯಾಲಯ ಅಥವಾ ಪ್ರಾಧಿಕಾರಕ್ಕೆ ಕೋರಿಕೆ ಪತ್ರ.-** (1) ಭಾರತದ ಹೊರಗಿನ ದೇಶ ಅಥವಾ ಸ್ಥಳದಲ್ಲಿ ತನಿಖೆ ನಡೆಯುತ್ತಿರುವ ಅಪರಾಧಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಅಥವಾ ಯಾವುದೇ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವುದಕ್ಕಾಗಿ ಕೋರಿಕೆ ಪತ್ರವನ್ನು ಹೊರಡಿಸಲು ಸಕ್ಷಮವಾಗಿರುವ ಆ ದೇಶ ಅಥವಾ ಸ್ಥಳದಲ್ಲಿನ ನ್ಯಾಯಾಲಯ ಅಥವಾ ಪ್ರಾಧಿಕಾರದಿಂದ ಕೋರಿಕೆ ಪತ್ರವನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸಿದರೆ,-

(i) ಆ ಪತ್ರವನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಈ ಬಗ್ಗೆ ನೇಮಿಸಬಹುದಾದಂಥ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು, ಅವನು ಆನಂತರ ವ್ಯಕ್ತಿಗೆ ತನ್ನ ಮುಂದೆ ಹಾಜರಾಗುವಂತೆ ಸಮನನ್ನು ಮಾಡತಕ್ಕದ್ದು ಮತ್ತು ಆತನ ಹೇಳಿಕೆಯನ್ನು ದಾಖಲಿಸತಕ್ಕದ್ದು ಅಥವಾ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವಂತೆ ಮಾಡತಕ್ಕದ್ದು; ಅಥವಾ

(ii) ಆ ಪತ್ರವನ್ನು ತನಿಖೆಗಾಗಿ ಯಾರೇ ಪೋಲೀಸ್ ಅಧಿಕಾರಿಗೆ ಕಳುಹಿಸತಕ್ಕದ್ದು, ಆನಂತರ ಆತನು ಆ ಅಪರಾಧವು ಭಾರತದೊಳಗೆ ನಡೆದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಆ ಅಪರಾಧದ ತನಿಖೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಪಡೆದುಕೊಂಡ ಅಥವಾ ಸಂಗ್ರಹಿಸಲಾದ ಎಲ್ಲಾ ಸಾಕ್ಷ್ಯಗಳನ್ನು ಅಥವಾ ಅದರ ಅಧಿಪ್ರಮಾಣಿತ ಪ್ರತಿಗಳು ಅಥವಾ ಹಾಗೆ ಸಂಗ್ರಹಿಸಲಾದ ವಸ್ತುವನ್ನು, ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕೋರಿಕೆ ಪತ್ರವನ್ನು ಹೊರಡಿಸಿರುವ ನ್ಯಾಯಾಲಯ ಅಥವಾ ಪ್ರಾಧಿಕಾರಕ್ಕೆ ಕಳುಹಿಸುವುದಕ್ಕಾಗಿ ಸಂದರ್ಭಾನುಸಾರ ಮ್ಯಾಜಿಸ್ಟ್ರೇಟ್ ಅಥವಾ ಪೋಲೀಸ್ ಅಧಿಕಾರಿಯು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**114. ವ್ಯಕ್ತಿಗಳ ವರ್ಗಾವಣೆಯನ್ನು ಸುನಿಶ್ಚಿತಗೊಳಿಸುವಲ್ಲಿ ನೆರವು.-** (1) ಭಾರತದಲ್ಲಿನ ನ್ಯಾಯಾಲಯವು ಕ್ರಿಮಿನಲ್ ವಿಷಯಕ್ಕೆ ಸಂಬಂಧಪಟ್ಟಂತೆ ಯಾರೇ ವ್ಯಕ್ತಿಗೆ, ತನ್ನ ಮುಂದೆ ಹಾಜರಾಗಲು ಅಥವಾ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸಲು ತಾನು ಹೊರಡಿಸಿದ ದಸ್ತಗಿರಿ ವಾರಂಟನ್ನು, ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿರುವ ಯಾವುದೇ ಸ್ಥಳದಲ್ಲಿ ಜಾರಿಗೊಳಿಸತಕ್ಕದ್ದು ಎಂದು ಇಚ್ಛಿಸಿದಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಅಂಥ ನ್ಯಾಯಾಲಯಕ್ಕೆ, ನ್ಯಾಯಾಧೀಶನಿಗೆ ಅಥವಾ ಮ್ಯಾಜಿಸ್ಟ್ರೇಟನಿಗೆ ಅಂಥ ಪ್ರಾಧಿಕಾರದ ಮೂಲಕ ಅದನ್ನು ಜಾರಿಗೊಳಿಸಲು ಕಳುಹಿಸತಕ್ಕದ್ದು ಮತ್ತು ಸಂದರ್ಭಾನುಸಾರ ಆ ನ್ಯಾಯಾಲಯವು, ಆ ನ್ಯಾಯಾಧೀಶನು ಅಥವಾ ಆ ಮ್ಯಾಜಿಸ್ಟ್ರೇಟನು ಅದನ್ನು ಅಮಲ್ಜಾರಿ ಮಾಡಿಸತಕ್ಕದ್ದು.

(2) ಅಪರಾಧದ ತನಿಖೆಯ ಕಾಲದಲ್ಲಿ ಅಥವಾ ಯಾವುದೇ ವಿಚಾರಣೆಯ ಕಾಲದಲ್ಲಿ ತನಿಖಾಧಿಕಾರಿಯು ಅಥವಾ ಆ ತನಿಖಾಧಿಕಾರಿಯ ದರ್ಜೆಗಿಂತ ಮೇಲಿನ ಯಾರೇ ವರಿಷ್ಠಾಧಿಕಾರಿಯು, ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿನ ಯಾವುದೇ ಸ್ಥಳದಲ್ಲಿ ಇರುವ ವ್ಯಕ್ತಿಯ ಹಾಜರಾತಿಯು, ಅಂಥ ತನಿಖೆಗೆ ಅಥವಾ ವಿಚಾರಣೆಗೆ ಸಂಬಂಧಿಸಿದಂತೆ ಅಗತ್ಯವಾಗಿರುತ್ತದೆಂದು ಅರ್ಜಿಯನ್ನು ಸಲ್ಲಿಸಿದರೆ ಮತ್ತು ಅಂಥ ಹಾಜರಾತಿಯು ಅಗತ್ಯವಾಗಿರುತ್ತದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ, ಆ ವ್ಯಕ್ತಿಯ ವಿರುದ್ಧ ದ್ವಿಪ್ರತಿಯಲ್ಲಿ ವಾರಂಟನ್ನು ಅಥವಾ ಸಮನುಗಳನ್ನು ಹೊರಡಿಸಿ, ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಅಂಥ ನ್ಯಾಯಾಲಯಕ್ಕೆ, ನ್ಯಾಯಾಧೀಶನಿಗೆ ಅಥವಾ ಮ್ಯಾಜಿಸ್ಟ್ರೇಟನಿಗೆ ಅದನ್ನು ಜಾರಿಗೊಳಿಸಲು ಅಥವಾ ಅಮಲ್ಜಾರಿಗೊಳಿಸಲು ಕಳುಹಿಸತಕ್ಕದ್ದು.

(3) ಕರಾರು ಮಾಡಿಕೊಳ್ಳುವ ರಾಷ್ಟ್ರದ ನ್ಯಾಯಾಲಯವು, ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ಯಾರೇ ವ್ಯಕ್ತಿಯು ತನ್ನ ಮುಂದೆ ಅಥವಾ ಯಾವುದೇ ಇತರ ತನಿಖಾ ಏಜೆನ್ಸಿಯ ಮುಂದೆ ಹಾಜರಾಗಬೇಕೆಂದು ಅಥವಾ ಹಾಜರಾಗಿ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸಿ, ಆ ವ್ಯಕ್ತಿಯ ದಸ್ತಗಿರಿಗೆ ಹೊರಡಿಸಿದ್ದ ವಾರಂಟನ್ನು ಕ್ರಿಮಿನಲ್ ವಿಷಯಕ್ಕೆ ಸಂಬಂಧಿಸಿದಂತೆ ಭಾರತದಲ್ಲಿನ ನ್ಯಾಯಾಲಯವು ಸ್ವೀಕರಿಸಿದಾಗ, ಅದು ತನ್ನ ಸ್ಥಳೀಯ ಪರಿಮಿತಿಯಲ್ಲಿ ಜಾರಿಗೊಳಿಸಲು ಭಾರತದಲ್ಲಿನ ಇನ್ನೊಂದು ನ್ಯಾಯಾಲಯದಿಂದ ಸ್ವೀಕರಿಸಿದ್ದ ವಾರಂಟ್ ಆಗಿದ್ದರೆ ಹೇಗೋ ಹಾಗೇ ಅದನ್ನು ಜಾರಿಗೊಳಿಸತಕ್ಕದ್ದು.

(4) (3)ನೇ ಉಪಪ್ರಕರಣದ ಅನುಸಾರವಾಗಿ, ಕರಾರು ಮಾಡಿಕೊಳ್ಳುವ ರಾಷ್ಟ್ರಕ್ಕೆ ವರ್ಗಾವಣೆ ಮಾಡಿದ್ದ ವ್ಯಕ್ತಿಯು ಭಾರತದಲ್ಲಿನ ಕೈದಿಯಾಗಿದ್ದರೆ, ಭಾರತದಲ್ಲಿನ ನ್ಯಾಯಾಲಯವು ಅಥವಾ ಕೇಂದ್ರ ಸರ್ಕಾರವು ಯುಕ್ತವೆಂದು ಭಾವಿಸುವಂಥ ಷರತ್ತುಗಳನ್ನು ವಿಧಿಸಬಹುದು.

(5) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅನುಸಾರವಾಗಿ ಭಾರತಕ್ಕೆ ವರ್ಗಾಯಿಸಿದ ವ್ಯಕ್ತಿಯು ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿನ ಕೈದಿಯಾಗಿದ್ದರೆ, ಆ ಕೈದಿಯನ್ನು ಯಾವ ಷರತ್ತುಗಳಿಗೊಳಪಟ್ಟು ಭಾರತಕ್ಕೆ ವರ್ಗಾಯಿಸಲಾಗಿದೆಯೋ, ಆ ಷರತ್ತುಗಳನ್ನು ಪಾಲಿಸಲಾಗಿದೆ ಎಂಬುವುದನ್ನು ಭಾರತದಲ್ಲಿನ ನ್ಯಾಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅಂಥ ಕೈದಿಯನ್ನು ಕೇಂದ್ರ ಸರ್ಕಾರವು ಲಿಖಿತದಲ್ಲಿ ನಿರ್ದೇಶಿಸಬಹುದಾದ ಷರತ್ತುಗಳಿಗೆ ಒಳಪಟ್ಟು ಅಂಥ ಅಭಿರಕ್ಷೆಯಲ್ಲಿ ಇರಿಸತಕ್ಕದ್ದು.

**115. ಸ್ವತ್ತಿನ ಜಪ್ತಿ ಅಥವಾ ಮುಟ್ಟುಗೋಲು ಆದೇಶಗಳಿಗೆ ಸಂಬಂಧಿಸಿದಂತೆ ನೆರವು.-** (1) ಅಪರಾಧ ಮಾಡಿ ಯಾವುದೇ ಸ್ವತ್ತನ್ನು ಯಾರೇ ವ್ಯಕ್ತಿಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದೊರಕಿಸಿಕೊಂಡಿದ್ದಾನೆಂದು ಅಥವಾ ಪಡೆದುಕೊಂಡಿದ್ದಾನೆಂದು ನಂಬಲು ಭಾರತದಲ್ಲಿನ ನ್ಯಾಯಾಲಯಕ್ಕೆ ಸಮಂಜಸ ಆಧಾರಗಳಿದ್ದರೆ, ಅದು 116 ರಿಂದ 122 ರವರೆಗಿನ (ಎರಡೂ ಪ್ರಕರಣಗಳನ್ನು ಒಳಗೊಂಡು) ಪ್ರಕರಣಗಳ ಉಪಬಂಧಗಳ ಅನುಸಾರವಾಗಿ ಸೂಕ್ತವೆಂದು ಅದು ಭಾವಿಸಬಹುದಾದಂತೆ ಅಂಥ ಸ್ವತ್ತನ್ನು ಜಪ್ತಿಗೆ ಅಥವಾ ಮುಟ್ಟುಗೋಲಿಗೆ ಆದೇಶವನ್ನು ಮಾಡಬಹುದು.

(2) ನ್ಯಾಯಾಲಯವು (1)ನೇ ಉಪಪ್ರಕರಣದ ಮೇರೆಗೆ, ಯಾವುದೇ ಸ್ವತ್ತಿನ ಜಪ್ತಿಗೆ ಅಥವಾ ಮುಟ್ಟುಗೋಲಿಗೆ ಆದೇಶ ಮಾಡಿದ್ದರೆ ಮತ್ತು ಅಂಥ ಸ್ವತ್ತು ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿ ಇದೆ ಎಂದು ಸಂಶಯ ಇದ್ದರೆ, ಅಂಥ ಆದೇಶವನ್ನು ಜಾರಿಗೊಳಿಸುವಂತೆ ಕೋರಿಕೆ ಪತ್ರವನ್ನು ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿನ ನ್ಯಾಯಾಲಯಕ್ಕೆ ಅಥವಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(3) ಯಾರೇ ವ್ಯಕ್ತಿಯು, ಕರಾರು ಮಾಡಿಕೊಳ್ಳುವ ರಾಷ್ಟ್ರದಲ್ಲಿ ಮಾಡಿದ ಅಪರಾಧದಿಂದಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದೊರಕಿಸಿಕೊಂಡ ಅಥವಾ ಪಡೆದುಕೊಂಡ ಸ್ವತ್ತು ಭಾರತದಲ್ಲಿ ಇದ್ದರೆ, ಭಾರತದಲ್ಲಿ ಇರುವ ಆ ಸ್ವತ್ತನ್ನು ಜಪ್ತಿ ಮಾಡಲು ಅಥವಾ ಮುಟ್ಟುಗೋಲು ಹಾಕಿಕೊಳ್ಳಲು ಕರಾರು ಮಾಡಿಕೊಳ್ಳುವ ರಾಷ್ಟ್ರದ ನ್ಯಾಯಾಲಯದಿಂದ ಅಥವಾ ಪ್ರಾಧಿಕಾರದಿಂದ ಬಂದ ಕೋರಿಕೆ ಪತ್ರವನ್ನು ಕೇಂದ್ರ ಸರ್ಕಾರವು ಸ್ವೀಕರಿಸಿದ್ದಲ್ಲಿ, ಅದು ಅಂಥ ಕೋರಿಕೆ ಪತ್ರವನ್ನು ತಾನು ಸೂಕ್ತವೆಂದು ಭಾವಿಸುವಂತೆ, 116 ರಿಂದ 122 ರವರೆಗಿನ (ಎರಡೂ ಪ್ರಕರಣಗಳನ್ನು ಒಳಗೊಂಡು) ಪ್ರಕರಣಗಳ ಉಪಬಂಧಗಳ ಅನುಸಾರವಾಗಿ ಅಥವಾ ಸಂದರ್ಭಾನುಸಾರ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅನುಸಾರವಾಗಿ ಅಮಲ್ಜಾರಿಗೊಳಿಸಲು ನ್ಯಾಯಾಲಯಕ್ಕೆ ಕಳುಹಿಸಬಹುದು.

**116. ಕಾನೂನುಬಾಹಿರವಾಗಿ ಆರ್ಜಿಸಿದ ಸ್ವತ್ತನ್ನು ಗುರುತಿಸುವುದು.-** (1) (1)ನೇ ಉಪಪ್ರಕರಣದ ಮೇರೆಗೆ ಅಥವಾ 115ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಕೋರಿಕೆ ಪತ್ರವು ಸ್ವೀಕರಿಸಿದ ನಂತರ ನ್ಯಾಯಾಲಯವು, ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಗೆ ಅಂಥ ಸ್ವತ್ತನ್ನು ಪತ್ತೆ ಮಾಡಲು ಮತ್ತು ಗುರುತಿಸಲು ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಕ್ರಮಗಳು, ಯಾವುದೇ ವ್ಯಕ್ತಿಗೆ, ಸ್ಥಳಕ್ಕೆ, ಸ್ವತ್ತಿಗೆ, ಆಸ್ತಿಗೆ, ದಸ್ತಾವೇಜುಗಳಿಗೆ, ಯಾವುದೇ ಬ್ಯಾಂಕಿನಲ್ಲಿನ ಅಥವಾ ಸಾರ್ವಜನಿಕ ಹಣಕಾಸು ಸಂಸ್ಥೆಗಳಲ್ಲಿನ ಲೆಕ್ಕದ ಪುಸ್ತಕಗಳಿಗೆ ಅಥವಾ

ಯಾವುದೇ ಇತರ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆಯನ್ನು, ತನಿಖೆಯನ್ನು ಅಥವಾ ಸಮೀಕ್ಷೆಯನ್ನು ಒಳಗೊಳ್ಳಬಹುದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ವಿಚಾರಣೆಯನ್ನು, ತನಿಖೆಯನ್ನು ಅಥವಾ ಸಮೀಕ್ಷೆಯನ್ನು ಈ ಬಗ್ಗೆ ಸದರಿ ನ್ಯಾಯಾಲಯವು ಹೊರಡಿಸಿದಂಥ ನಿರ್ದೇಶನಗಳ ಅನುಸಾರವಾಗಿ (1)ನೇ ಉಪಪ್ರಕರಣದಲ್ಲಿ ಹೇಳಿರುವ ಅಧಿಕಾರಿಯು ನಡೆಸತಕ್ಕದ್ದು.

**117. ಸ್ವತ್ತಿನ ಅಭಿಗ್ರಹಣ ಅಥವಾ ಜಪ್ತಿ.-** (1) 116ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ಅಥವಾ ತನಿಖೆಯನ್ನು ನಡೆಸುತ್ತಿರುವ ಯಾರೇ ಅಧಿಕಾರಿಗೆ, ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಂಥ ವಿಚಾರಣೆಯನ್ನು ಅಥವಾ ತನಿಖೆಯನ್ನು ನಡೆಸಲಾಗುತ್ತಿದೆಯೋ, ಆ ಸ್ವತ್ತನ್ನು ಬಚ್ಚಿಡುವ, ವರ್ಗಾವಣೆ ಮಾಡುವ ಅಥವಾ ಆ ಸ್ವತ್ತನ್ನು ವಿಲೆ ಮಾಡುವ ಪರಿಣಾಮವನ್ನು ಉಂಟುಮಾಡುವ ರೀತಿಯಲ್ಲಿ ವ್ಯವಹರಿಸುವ ಸಂಭವವಿದೆಯೆಂದು ನಂಬಲು ಕಾರಣ ಇದ್ದರೆ, ಅವನು ಅಂಥ ಸ್ವತ್ತಿನ ಅಭಿಗ್ರಹಣಕ್ಕಾಗಿ ಆದೇಶ ಮಾಡಬಹುದು ಮತ್ತು ಆ ಸ್ವತ್ತಿನ ಅಭಿಗ್ರಹಣಕ್ಕೆ ಕಾರ್ಯಸಾಧ್ಯವಾಗದಿದ್ದರೆ, ಆ ಆದೇಶ ಮಾಡಿದ ಅಧಿಕಾರಿಯಿಂದ ಮುಂಚಿತವಾಗಿಯೇ ಅನುಮತಿ ಪಡೆಯದೆ ಅಂಥ ಸ್ವತ್ತನ್ನು ವರ್ಗಾವಣೆ ಮಾಡಬಾರದೆಂದು ಅಥವಾ ಅದರ ಬಗ್ಗೆ ಅನ್ಯಥಾ ವ್ಯವಹರಿಸಬಾರದು ಎಂದು ನಿರ್ದೇಶಿಸಿ, ಜಪ್ತಿ ಆದೇಶ ಮಾಡಬಹುದು ಮತ್ತು ಅಂಥ ಆದೇಶದ ಪ್ರತಿಯನ್ನು ಸಂಬಂಧಪಟ್ಟ ವ್ಯಕ್ತಿಗೆ ಜಾರಿ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವು, ಅದನ್ನು ಮಾಡಿದ ಮೂವತ್ತು ದಿನಗಳೊಳಗಾಗಿ ಸದರಿ ನ್ಯಾಯಾಲಯವು ಸ್ಥಿರೀಕರಿಸಿದ ಹೊರತು ಯಾವುದೇ ಪರಿಣಾಮವುಳ್ಳದ್ದಾಗತಕ್ಕದ್ದಲ್ಲ.

**118. ಈ ಅಧ್ಯಾಯದ ಮೇರೆಗೆ ಅಭಿಗ್ರಹಿಸಿದ ಅಥವಾ ಮುಟ್ಟುಗೋಲು ಹಾಕಿಕೊಂಡ ಸ್ವತ್ತುಗಳ ನಿರ್ವಹಣೆ.-** (1) ನ್ಯಾಯಾಲಯವು ಅಂಥ ಸ್ವತ್ತಿನ ಆಡಳಿತಗಾರನ ಪ್ರಕಾರ್ಯವನ್ನು ನಿರ್ವಹಿಸಲು ಸ್ವತ್ತು ಯಾವ ಪ್ರದೇಶದಲ್ಲಿ ಇದೆಯೋ ಆ ಪ್ರದೇಶದ ಜಿಲ್ಲಾ ಮ್ಯಾಜಿಸ್ಟ್ರೇಟನನ್ನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ನಾಮನಿರ್ದೇಶನ ಮಾಡಬಹುದಾದ ಇತರ ಯಾರೇ ಅಧಿಕಾರಿಯನ್ನು ಅಂಥ ಸ್ವತ್ತಿನ ಆಡಳಿತಗಾರನನ್ನಾಗಿ ನೇಮಕ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಆಡಳಿತಗಾರನು 117ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಥವಾ 120ನೇ ಪ್ರಕರಣದ ಮೇರೆಗೆ ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಆದೇಶವನ್ನು ಮಾಡಲಾಗಿದೆಯೋ, ಆ ಸ್ವತ್ತನ್ನು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಷರತ್ತುಗಳಿಗೆ ಒಳಪಟ್ಟು ಸ್ವೀಕರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(3) ಆಡಳಿತಾಧಿಕಾರಿಯು ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಆದ ಸ್ವತ್ತನ್ನು ವಿಲೆ ಮಾಡಲು, ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**119. ಸ್ವತ್ತಿನ ಮುಟ್ಟುಗೋಲಿಗೆ ನೋಟೀಸು.-** (1) 116ನೇ ಪ್ರಕರಣದ ಮೇರೆಗೆ ವಿಚಾರಣೆಯ, ತನಿಖೆಯ ಅಥವಾ ಸಮೀಕ್ಷೆಯ ಪರಿಣಾಮದಿಂದಾಗಿ, ಆ ಎಲ್ಲ ಸ್ವತ್ತು ಅಥವಾ ಅದರ ಭಾಗವು, ಅಪರಾಧದ ಉತ್ಪತ್ತಿ ಎಂದು ನಂಬಲು ನ್ಯಾಯಾಲಯಕ್ಕೆ ಕಾರಣವಿದ್ದರೆ, ಅಂಥ ವ್ಯಕ್ತಿಗೆ (ಇದರಲ್ಲಿ ಇನ್ನು ಮುಂದೆ ಆತನನ್ನು ಬಾಧಿತ ವ್ಯಕ್ತಿಯೆಂದು ಉಲ್ಲೇಖಿಸಲಾಗಿದೆ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೂವತ್ತು ದಿನಗಳೊಳಗಾಗಿ, ಅಂಥ ಸ್ವತ್ತನ್ನು ಆತನು ಯಾವ ಆದಾಯದ ಮೂಲದಿಂದ ಅಥವಾ ಯಾವ ರೀತಿಯಲ್ಲಿ ಗಳಿಸಿರುವನೋ ಅಂಥ ಆದಾಯದ ಮೂಲವನ್ನು, ಗಳಿಕೆಗಳನ್ನು ಅಥವಾ ಆಸ್ತಿಗಳನ್ನು ತಿಳಿಸಲು

ಮತ್ತು ಆತನು ಆಧರಿಸಿರುವ ಸಾಕ್ಷ್ಯವನ್ನು ಮತ್ತು ಇತರ ಸುಸಂಬದ್ಧ ಮಾಹಿತಿಯನ್ನು ಮತ್ತು ವಿವರಗಳನ್ನು ಮತ್ತು ಆ ಎಲ್ಲ ಅಥವಾ ಅದರಲ್ಲಿ ಯಾವುದೇ ಸ್ವತ್ತನ್ನು ಸಂದರ್ಭಾನುಸಾರ, ಅವು ಅಪರಾಧದ ಉತ್ಪತ್ತಿ ಎಂದು ಯಾಕೆ ಘೋಷಿಸಬಾರದು ಮತ್ತು ಕೇಂದ್ರ ಸರ್ಕಾರಕ್ಕೆ ಯಾಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬ ಬಗ್ಗೆ ಕಾರಣ ತೋರಿಸಲು ನ್ಯಾಯಾಲಯವು ಆತನಿಗೆ ನೋಟೀಸನ್ನು ಜಾರಿಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಗೆ ಕೊಟ್ಟ ನೋಟೀಸಿನಲ್ಲಿ ಯಾವುದೇ ಸ್ವತ್ತನ್ನು ಅಂಥ ವ್ಯಕ್ತಿಯ ಪರವಾಗಿ ಇತರ ಯಾರೇ ವ್ಯಕ್ತಿಯು ಧಾರಣ ಮಾಡಿರುವನೆಂದು ನಿರ್ದಿಷ್ಟಪಡಿಸಿದ್ದರೆ, ನೋಟೀಸಿನ ಪ್ರತಿಯನ್ನು ಅಂಥ ಆ ಇತರ ವ್ಯಕ್ತಿಗೂ ಜಾರಿಗೊಳಿಸತಕ್ಕದ್ದು.

**120. ಕೆಲವು ಪ್ರಕರಣಗಳಲ್ಲಿ ಸ್ವತ್ತಿನ ಮುಟ್ಟುಗೋಲು.-** (1) ಕಾರಣ ಕೇಳಿ 119ನೇ ಪ್ರಕರಣದ ಮೇರೆಗೆ ಹೊರಡಿಸಲಾದ ನೋಟೀಸಿಗೆ ಯಾವುದಾದರೂ ವಿವರಣೆಯನ್ನು ಕೊಟ್ಟಿದ್ದರೆ, ಅದನ್ನು ಮತ್ತು ತನ್ನ ಮುಂದೆ ಲಭ್ಯವಿರುವ ವಿಷಯಗಳನ್ನು ಪರ್ಯಾಲೋಚಿಸಿ ಮತ್ತು ಬಾಧಿತ ವ್ಯಕ್ತಿಗೆ (ಮತ್ತು ಬಾಧಿತ ವ್ಯಕ್ತಿಯು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತನ್ನು ಬೇರೊಬ್ಬನ ಮೂಲಕ ಧಾರಣ ಮಾಡಿದ್ದರೆ ಆ ಬೇರೊಬ್ಬ ವ್ಯಕ್ತಿಗೆ) ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ನಂತರ, ಆದೇಶ ಮೂಲಕ ಎಲ್ಲ ಅಥವಾ ಯಾವುದೇ ಪ್ರಶ್ನಿತ ಸ್ವತ್ತುಗಳು ಅಥವಾ ಅವುಗಳಲ್ಲಿ ಯಾವುದಾದರೂ ಅಪರಾಧದ ಉತ್ಪತ್ತಿಗಳಾಗಿವೆಯೇ ಎಂಬ ಬಗ್ಗೆ ನಿರ್ಣಯವನ್ನು ದಾಖಲಿಸತಕ್ಕದ್ದು:

ಪರಂತು, ಬಾಧಿತ ವ್ಯಕ್ತಿಯು (ಮತ್ತು ಬಾಧಿತ ವ್ಯಕ್ತಿಯು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತನ್ನು ಬೇರೊಬ್ಬನ ಮೂಲಕ ಧಾರಣ ಮಾಡಿದ್ದರೆ ಆ ಬೇರೊಬ್ಬ ವ್ಯಕ್ತಿಯು ಸಹ) ನ್ಯಾಯಾಲಯದ ಮುಂದೆ ಹಾಜರಾಗದಿದ್ದರೆ ಅಥವಾ ಕಾರಣ ಕೇಳಿ ಹೊರಡಿಸಲಾದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೂವತ್ತು ದಿನಗಳ ಅವಧಿಯೊಳಗೆ ತನ್ನ ಮೊಕದ್ದಮೆಯನ್ನು ಪ್ರತಿನಿಧಿಸದಿದ್ದರೆ, ನ್ಯಾಯಾಲಯವು ತನ್ನ ಮುಂದೆ ಲಭ್ಯವಿದ್ದ ಸಾಕ್ಷ್ಯದ ಆಧಾರದ ಮೇಲೆ ಈ ಪ್ರಕರಣದ ಮೇರೆಗೆ ಏಕಪಕ್ಷೀಯ ನಿರ್ಣಯವನ್ನು ದಾಖಲಿಸಲು ಮುಂದುವರಿಯಬಹುದು.

(2) ಕಾರಣ ಕೇಳುವ ನೋಟೀಸಿನಲ್ಲಿ ಉಲ್ಲೇಖಿಸಿರುವ ಕೆಲವು ಸ್ವತ್ತುಗಳು ಅಪರಾಧದ ಉತ್ಪತ್ತಿಗಳೆಂದು ನ್ಯಾಯಾಲಯಕ್ಕೆ ಮನದಟ್ಟಾದಲ್ಲಿ, ಆದರೆ ಅಂಥ ಸ್ವತ್ತುಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗದಿದ್ದಾಗ, ನ್ಯಾಯಾಲಯವು, ಸರಿಯಾದ ನಿರ್ಣಯಕ್ಕೆ ಬಂದು, ಯಾವ ಸ್ವತ್ತುಗಳು ಅಪರಾಧದ ಉತ್ಪತ್ತಿಗಳೆಂದು ನಿರ್ದಿಷ್ಟಪಡಿಸುವುದು ನ್ಯಾಯಾಲಯಕ್ಕೆ ಕಾನೂನುಸಮ್ಮತವಾದುದಾಗಿರತಕ್ಕದ್ದು ಮತ್ತು ತದನುಸಾರವಾಗಿ (1)ನೇ ಉಪಪ್ರಕರಣದ ಮೇರೆಗೆ ಆ ನಿರ್ಣಯವನ್ನು ದಾಖಲಿಸತಕ್ಕದ್ದು.

(3) ಯಾವುದೇ ಸ್ವತ್ತು ಅಪರಾಧದ ಉತ್ಪತ್ತಿ ಎಂದು, ಈ ಪ್ರಕರಣದ ಮೇರೆಗೆ ನ್ಯಾಯಾಲಯವು ನಿರ್ಣಯವನ್ನು ದಾಖಲಿಸಿದ್ದಾಗ, ಅಂಥ ಸ್ವತ್ತು ಎಲ್ಲ ಋಣಭಾರಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಕಂಪನಿಯಲ್ಲಿಯ ಯಾವುದೇ ಷೇರುಗಳು ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲಾಗಿದ್ದರೆ, ಆಗ ಕಂಪನಿ ಅಧಿನಿಯಮ, 2013 (2013ರ 18)ರಲ್ಲಿ ಅಥವಾ ಕಂಪನಿಯ ಸ್ಥಾಪನಾ ನಿಯಮಾವಳಿಗಳಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಅಂಥ ಷೇರುಗಳ ವರ್ಗಾವಣೆ ಪಡೆದಿದೆ ಎಂದು ಕೂಡಲೇ ನೋಂದಣಿ ಮಾಡಿಕೊಳ್ಳತಕ್ಕದ್ದು.

**121. ಮುಟ್ಟುಗೋಲಿಗೆ ಬದಲಾಗಿ ಜುಲ್ಮಾನೆ.-** (1) 120ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತು ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲಾಗಿದೆಯೆಂದು ನ್ಯಾಯಾಲಯವು ಘೋಷಿಸಿದರೆ ಮತ್ತು ಅಂಥ ಸ್ವತ್ತಿನ ಕೇವಲ ಒಂದು ಭಾಗದ ಮೂಲವನ್ನು ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತು ಮಾಡದಿರುವ ಸಂದರ್ಭದಲ್ಲಿ, ಮುಟ್ಟುಗೋಲಿಗೆ ಬದಲಿಯಾಗಿ, ಅಂಥ ಭಾಗದ ಮಾರುಕಟ್ಟೆ ಮೌಲ್ಯಕ್ಕೆ ಸಮನಾದ ಜುಲ್ಮಾನೆಯನ್ನು ಸಂದಾಯ ಮಾಡುವ ಆಯ್ಕೆಯ ಸ್ವಾತಂತ್ರ್ಯ ನೀಡಿ ಅದನ್ನು ಸಂದಾಯ ಮಾಡುವಂತೆ ಬಾಧಿತ ವ್ಯಕ್ತಿಗೆ, ನ್ಯಾಯಾಲಯವು ಆದೇಶ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಜುಲ್ಮಾನೆಯನ್ನು ವಿಧಿಸಿ ಆದೇಶ ಮಾಡುವುದಕ್ಕೂ ಮುಂಚೆ, ಬಾಧಿತ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(3) ಬಾಧಿತ ವ್ಯಕ್ತಿಯು (1)ನೇ ಉಪಪ್ರಕರಣದ ಮೇರೆಗೆ ಸಂದಾಯಮಾಡಬೇಕಾದ ಜುಲ್ಮಾನೆಯನ್ನು ಈ ಬಗ್ಗೆ ಅನುಮತಿಸಲಾಗಿರುವ ಅವಧಿಯೊಳಗೆ ಸಂದಾಯ ಮಾಡಿದ್ದಲ್ಲಿ, ನ್ಯಾಯಾಲಯವು ಆದೇಶದ ಮೂಲಕ 120ನೇ ಪ್ರಕರಣದ ಮೇರೆಗಿನ ಮುಟ್ಟುಗೋಲಿನ ಘೋಷಣೆಯನ್ನು ರದ್ದುಪಡಿಸಬಹುದು ಮತ್ತು ತದನಂತರ ಅಂಥ ಸ್ವತ್ತನ್ನು ವಿಮೋಚಿತವಾಗತಕ್ಕದ್ದು.

**122. ಕೆಲವೊಂದು ವರ್ಗಾವಣೆಗಳು ಅಸಿಂಧು ಮತ್ತು ಅನೂರ್ಜಿತವಾಗುವುದು.-** 117ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆದೇಶ ಮಾಡಿದ ನಂತರ ಅಥವಾ 119ನೇ ಪ್ರಕರಣದ ಮೇರೆಗೆ ನೋಟೀಸನ್ನು ಹೊರಡಿಸಿದ ನಂತರ, ಅಂಥ ಆದೇಶದಲ್ಲಿ ಅಥವಾ ನೋಟೀಸಿನಲ್ಲಿ ಉಲ್ಲೇಖಿಸಿರುವ ಯಾವುದೇ ಸ್ವತ್ತನ್ನು ಯಾವುದೇ ವಿಧಾನದಲ್ಲಿ ವರ್ಗಾವಣೆ ಮಾಡಿದ್ದಲ್ಲಿ, ಅಂಥ ವರ್ಗಾವಣೆಯನ್ನು ಈ ಅಧ್ಯಾಯದ ಮೇರೆಗಿನ ಯಾವುದೇ ವ್ಯವಹರಣೆಗಳ ಉದ್ದೇಶಗಳಿಗಾಗಿ ನಿರ್ಲಕ್ಷಿಸತಕ್ಕದ್ದು ಮತ್ತು ಅಂಥ ಸ್ವತ್ತನ್ನು ಆ ನಂತರ 120ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲಾಗಿದ್ದರೆ, ಆಗ, ಅಂಥ ಸ್ವತ್ತಿನ ವರ್ಗಾವಣೆಯು ಅಸಿಂಧುವಾದುದೆಂದು ಮತ್ತು ಅನೂರ್ಜಿತವಾದುದೆಂದು ಭಾವಿಸತಕ್ಕದ್ದು.

**123. ಕೋರಿಕೆ ಪತ್ರಕ್ಕೆ ಸಂಬಂಧಿಸಿದ ಪ್ರಕ್ರಿಯೆ.-** ಕೇಂದ್ರ ಸರ್ಕಾರವು, ಈ ಅಧ್ಯಾಯದ ಮೇರೆಗೆ ಕರಾರು ಮಾಡಿಕೊಳ್ಳುವ ರಾಷ್ಟ್ರದಿಂದ ಸ್ವೀಕರಿಸಿದ ಪ್ರತಿಯೊಂದು ಕೋರಿಕೆ ಪತ್ರವನ್ನು, ಸಮನುಗಳನ್ನು ಅಥವಾ ವಾರಂಟನ್ನು ಮತ್ತು ಅದಕ್ಕೆ ಕಳುಹಿಸಬೇಕಾದ ಪ್ರತಿಯೊಂದು ಕೋರಿಕೆ ಪತ್ರವನ್ನು, ಸಮನುಗಳನ್ನು ಅಥವಾ ವಾರಂಟನ್ನು ಸಂದರ್ಭಾನುಸಾರ ಕರಾರು ಮಾಡಿಕೊಳ್ಳುವ ರಾಷ್ಟ್ರಕ್ಕೆ ಅಥವಾ ಭಾರತದಲ್ಲಿನ ಸಂಬಂಧಪಟ್ಟ ನ್ಯಾಯಾಲಯಕ್ಕೆ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಕಳುಹಿಸತಕ್ಕದ್ದು.

**124. ಈ ಅಧ್ಯಾಯದ ಅನ್ವಯ.-** ಕರಾರು ಮಾಡಿಕೊಳ್ಳುವ ಯಾವ ರಾಷ್ಟ್ರದೊಂದಿಗೆ ಪರಸ್ಪರ ವ್ಯವಸ್ಥೆ ಮಾಡಿಕೊಳ್ಳಲಾಗಿದೆಯೋ, ಆ ರಾಷ್ಟ್ರಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದ ಅನ್ವಯವು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದಂಥ ಷರತ್ತುಗಳಿಗೆ, ವಿನಾಯಿತಿಗಳಿಗೆ ಅಥವಾ ಅರ್ಹತೆಗಳಿಗೆ ಒಳಪಟ್ಟಿರತಕ್ಕದ್ದು ಎಂದು ನಿರ್ದೇಶಿಸಬಹುದು.

## ಅಧ್ಯಾಯ IX

### ಶಾಂತಿಪಾಲನೆಗಾಗಿ ಮತ್ತು ಸದ್ವರ್ತನೆಗಾಗಿ ಭದ್ರತೆ

**125. ಅಪರಾಧ ನಿರ್ಣಯವಾದ ಬಳಿಕ ಶಾಂತಿಪಾಲನೆಗಾಗಿ ಭದ್ರತೆ.-** (1) ಸೆಷನ್ ನ್ಯಾಯಾಲಯವು ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯವು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಪರಾಧಗಳಲ್ಲಿ ಯಾವುದೇ ಅಪರಾಧದ ಬಗ್ಗೆ ಅಥವಾ ಅಂಥ ಅಪರಾಧದ ದುಷ್ಪ್ರೇರಣೆಯ ಬಗ್ಗೆ ಯಾರೇ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದರೆ ಮತ್ತು ಶಾಂತಿಪಾಲನೆಗಾಗಿ ಆ ವ್ಯಕ್ತಿಯಿಂದ ಭದ್ರತೆ ತೆಗೆದುಕೊಳ್ಳುವುದು ಅವಶ್ಯಕವೆಂದು ಅಭಿಪ್ರಾಯಪಟ್ಟರೆ ನ್ಯಾಯಾಲಯವು ಅಂಥ ವ್ಯಕ್ತಿಗೆ ಶಿಕ್ಷೆಯ ಆದೇಶ ಮಾಡುವ ಸಮಯದಲ್ಲಿ, ಮೂರು ವರ್ಷಗಳಿಗೆ ಮೀರದ ಅವಧಿಯವರೆಗೆ ಶಾಂತಿಪಾಲನೆ ಮಾಡಲು ತಾನು ಸೂಕ್ತವೆಂದು ಭಾವಿಸುವಂಥ ಬಂಧಪತ್ರವನ್ನು ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡುವಂತೆ ಆದೇಶಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಪರಾಧಗಳು ಈ ಕೆಳಗಿನಂತಿವೆ,-

(ಎ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ XIನೇ ಅಧ್ಯಾಯದ 193ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ 196ನೇ ಪ್ರಕರಣ ಅಥವಾ 197ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಹೊರತುಪಡಿಸಿ, ಆ ಸಂಹಿತೆಯ ಆ ಅಧ್ಯಾಯದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ;

(ಬಿ) ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗಿಸುವುದನ್ನು ಅಥವಾ ಕೇಡುಂಟು ಮಾಡುವುದನ್ನು ಒಳಗೊಂಡಿರುವ ಅಥವಾ ಅವು ಸೇರಿರುವ ಯಾವುದೇ ಅಪರಾಧ;

(ಸಿ) ಆಪರಾಧಿಕ ಭಯೋತ್ಪಾದನೆಯ ಯಾವುದೇ ಅಪರಾಧ;

(ಡಿ) ಶಾಂತಿ ಭಂಗವನ್ನು ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಅಥವಾ ಮಾಡುವ ಸಂಭವವಿದೆಯೆಂದು ತಿಳಿಯಲಾದ ಇತರ ಯಾವುದೇ ಅಪರಾಧ.

(3) ಅಪರಾಧ ನಿರ್ಣಯವು ಅಪೀಲಿನಲ್ಲಿ ಅಥವಾ ಅನ್ಯಥಾ ರದ್ದಾದರೆ, ಹಾಗೆ ಬರೆದುಕೊಟ್ಟ ಬಂಧಪತ್ರ ಅಥವಾ ಜಾಮೀನು ಬಂಧಪತ್ರ ಶೂನ್ಯವಾಗತಕ್ಕದ್ದು.

(4) ಅಪೀಲು ನ್ಯಾಯಾಲಯವು ಅಥವಾ ತನ್ನ ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸುವ ನ್ಯಾಯಾಲಯವು, ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡಬಹುದು.

**126. ಇತರ ಸಂದರ್ಭಗಳಲ್ಲಿ ಶಾಂತಿಪಾಲನೆಗಾಗಿ ಭದ್ರತೆ.-** (1) ಯಾರೇ ವ್ಯಕ್ತಿಯು, ಶಾಂತಿಭಂಗ ಮಾಡುವ ಅಥವಾ ಸಾರ್ವಜನಿಕ ನೆಮ್ಮದಿಯನ್ನು ಕದಡುವ ಸಂಭವವಿದೆಯೆಂದು ಅಥವಾ ಶಾಂತಿಭಂಗದಲ್ಲಿ ಅಥವಾ ಸಾರ್ವಜನಿಕ ನೆಮ್ಮದಿಗೆ ತೊಂದರೆಯುಂಟು ಮಾಡುವುದರಲ್ಲಿ ಪರಿಣಮಿಸಬಹುದಾದ ಯಾವುದೇ ಅಕ್ರಮ ಕೃತ್ಯವನ್ನು ಮಾಡುವ ಸಂಭವವಿದೆಯೆಂದು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ತಿಳಿದುಬಂದರೆ ಮತ್ತು ಆ ಬಗ್ಗೆ ಕ್ರಮ ಕೈಗೊಳ್ಳಲು ಸಾಕಷ್ಟು ಕಾರಣವಿದೆಯೆಂದು ಅವನು ಅಭಿಪ್ರಾಯಪಟ್ಟರೆ, ಅವನು ತಾನು ಸೂಕ್ತವೆಂದು ಭಾವಿಸುವ, ಆದರೆ ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ಶಾಂತಿಪಾಲನೆಗಾಗಿ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡುವಂತೆ ಅವನಿಗೆ ಏಕೆ ಆದೇಶಿಸಬಾರದೆಂಬುದಕ್ಕೆ ಕಾರಣ ತೋರಿಸಲು ಅಂಥ ವ್ಯಕ್ತಿಯನ್ನು ಈ ಮುಂದೆ ಉಪಬಂಧಿಸಿದ ರೀತಿಯಲ್ಲಿ ಅಗತ್ಯಪಡಿಸಬಹುದು.

(2) ಶಾಂತಿಭಂಗ ಅಥವಾ ಕ್ಷೋಭೆಯು ಉಂಟಾಗಬಹುದೆಂದು ಶಂಕಿಸಲಾಗಿರುವ ಸ್ಥಳವು ಯಾರ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಬರುತ್ತದೆಯೋ ಆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಾಗಲಿ ಅಥವಾ ಅಂಥ ಅಧಿಕಾರವ್ಯಾಪ್ತಿಯ ಹೊರಗೆ ಶಾಂತಿಭಂಗವನ್ನು ಮಾಡುವ ಅಥವಾ ಸಾರ್ವಜನಿಕ ನೆಮ್ಮದಿಗೆ ಆತಂಕವನ್ನುಂಟು ಮಾಡುವ ಅಥವಾ ಮೇಲೆ ಹೇಳಿದಂಥ ಯಾವುದೇ ಅಕ್ರಮ ಕೃತ್ಯವನ್ನು ಮಾಡುವ ಸಂಭವವಿರುವ ವ್ಯಕ್ತಿಯು ಯಾರ ಅಧಿಕಾರವ್ಯಾಪ್ತಿಯೊಳಗೆ ವಾಸಿಸುತ್ತಿರುವನೋ ಆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಾಗಲಿ, ಈ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ನಡೆಸಬಹುದು.

**127. ಕೆಲವು ವಿಷಯಗಳನ್ನು ಪ್ರಸಾರ ಮಾಡುವ ವ್ಯಕ್ತಿಗಳಿಂದ ಸದ್ವರ್ತನೆಗಾಗಿ ಭದ್ರತೆ.-** (1) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಇರುವ ಯಾರೇ ವ್ಯಕ್ತಿಯು, ಅಂಥ ಅಧಿಕಾರವ್ಯಾಪ್ತಿಯ ಒಳಗೆ ಅಥವಾ ಹೊರಗೆ,-

(i) ಮೌಖಿಕವಾಗಿಯಾಗಲಿ ಅಥವಾ ಲಿಖಿತದಲ್ಲಾಗಲಿ ಅಥವಾ ಇತರ ಯಾವುದೇ ರೀತಿಯಲ್ಲಾಗಲಿ,-

(ಎ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 152ನೇ ಪ್ರಕರಣ ಅಥವಾ 196ನೇ ಪ್ರಕರಣ ಅಥವಾ 197ನೇ ಪ್ರಕರಣ ಅಥವಾ 299ನೇ ಪ್ರಕರಣದ ಮೇರೆಗೆ ಯಾವ ವಿಷಯದ ಪ್ರಕಟಣೆಯು ದಂಡನೀಯವಾಗಿರುವುದೋ ಆ ಯಾವುದೇ ವಿಷಯವನ್ನು; ಅಥವಾ

(ಬಿ) ತನ್ನ ಪದೀಯ ಕರ್ತವ್ಯಗಳ ನಿರ್ವಹಣೆಯಲ್ಲಿ ಕೆಲಸ ಮಾಡುವ ಅಥವಾ ಮಾಡುತ್ತಿದ್ದಾನೆಂದು ತಾತ್ಪರ್ಯವಾಗುವ ನ್ಯಾಯಾಧೀಶರಿಗೆ ಸಂಬಂಧಿಸಿದ ಮತ್ತು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಮೇರೆಗೆ ಆಪರಾಧಿಕ ಭಯೋತ್ಪಾದನೆ ಅಥವಾ ಮಾನಹಾನಿ ಎಂದು ಪರಿಗಣಿತವಾಗುವ ಯಾವುದೇ ವಿಷಯವನ್ನು

- ಉದ್ದೇಶಪೂರ್ವಕವಾಗಿ ಪ್ರಸಾರ ಮಾಡುವನೆಂದು ಅಥವಾ ಪ್ರಸಾರ ಮಾಡಲು ಪ್ರಯತ್ನಿಸುವನೆಂದು ಅಥವಾ ಪ್ರಸಾರಕ್ಕೆ ದುಷ್ಪ್ರೇರಣೆ ಮಾಡುವನೆಂದು;

(ii) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 294ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಯಾವುದೇ ಅಶ್ಲೀಲ ವಿಷಯವನ್ನು ಸಿದ್ಧಪಡಿಸುವನೆಂದು, ಉತ್ಪಾದಿಸುವನೆಂದು, ಪ್ರಕಟಿಸುವನೆಂದು, ಮಾರಾಟಕ್ಕಿಡುವನೆಂದು, ಆಮದು ಮಾಡಿಕೊಳ್ಳುವನೆಂದು, ರಫ್ತು ಮಾಡುವನೆಂದು, ಸಾಗಿಸುವನೆಂದು, ಮಾರಾಟ ಮಾಡುವವನೆಂದು, ಬಾಡಿಗೆಗೆ ಕೊಡುವನೆಂದು, ಹಂಚುವನೆಂದು, ಬಹಿರಂಗವಾಗಿ ಪ್ರದರ್ಶಿಸುವನೆಂದು ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರಸಾರಕ್ಕೆ ತರುವನೆಂದು

- ಮಾಹಿತಿ ಬಂದಾಗ ಮತ್ತು ಆ ಬಗ್ಗೆ ಕ್ರಮ ಜರುಗಿಸಲು ಸಾಕಷ್ಟು ಆಧಾರವಿದೆಯೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಟ್ಟಾಗ, ಅವನು ಈ ಮುಂದೆ ಉಪಬಂಧಿಸಿದ ರೀತಿಯಲ್ಲಿ ತಾನು ಸೂಕ್ತವೆಂದು ಭಾವಿಸುವ ಆದರೆ ಒಂದು ವರ್ಷಕ್ಕೆ ಮೀರದ ಅವಧಿಗೆ ಅವನ ಸದ್ವರ್ತನೆಯ ಬಗ್ಗೆ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡುವಂತೆ ಅವನನ್ನು ಏಕೆ ಆದೇಶಿಸಬಾರದೆಂಬುದಕ್ಕೆ ಕಾರಣ ತೋರಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(2) ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯ ಆದೇಶದ ಮೂಲಕ ಅಥವಾ ಪ್ರಾಧಿಕಾರದ ಮೇರೆಗೆ ಹೊರತು, ವೃತ್ತಪತ್ರಿಕೆ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1867 (1867

ರ 25)ರಲ್ಲಿ ಹೇಳಲಾದ ನಿಯಮಗಳ ಮೇರೆಗೆ ನೋಂದಾಯಿತವಾದ ಮತ್ತು ಅದಕ್ಕೆ ಅನುಸಾರವಾಗಿ ಸಂಪಾದಿತವಾದ, ಮುದ್ರಿತವಾದ ಮತ್ತು ಪ್ರಕಟಿತವಾದ ಯಾವುದೇ ಪ್ರಕಟಣೆಯ ಸಂಪಾದಕ, ಮಾಲೀಕ, ಮುದ್ರಕ ಅಥವಾ ಪ್ರಕಾಶಕನ ವಿರುದ್ಧ ಅಂಥ ಪ್ರಕಟಣೆಯು ಒಳಗೊಂಡಿರುವ ಯಾವುದೇ ವಿಷಯದ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

**128. ಶಂಕಿತ ವ್ಯಕ್ತಿಗಳಿಂದ ಸದ್ವರ್ತನೆಗಾಗಿ ಭದ್ರತೆ.-** ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಒಬ್ಬ ವ್ಯಕ್ತಿಯು ತನ್ನ ಇರುವಿಕೆಯನ್ನು ಮರೆಮಾಚಲು ಮುನ್ನೆಚ್ಚರಿಕೆ ತೆಗೆದುಕೊಳ್ಳುತ್ತಿದ್ದಾನೆಂದು ಮತ್ತು ಸಂಜ್ಞೇಯ ಅಪರಾಧವನ್ನು ಮಾಡುವ ದೃಷ್ಟಿಯಿಂದ ಅವನು ಹಾಗೆ ಮಾಡುತ್ತಿದ್ದಾನೆಂದು ನಂಬಲು ಕಾರಣವಿರುವ ಮಾಹಿತಿಯು ತಿಳಿದು ಬಂದಾಗ, ಮ್ಯಾಜಿಸ್ಟ್ರೇಟನು ಈ ಮುಂದೆ ಉಪಬಂಧಿಸಿದ ರೀತಿಯಲ್ಲಿ ತಾನು ಸೂಕ್ತವೆಂದು ಭಾವಿಸುವ, ಆದರೆ ಒಂದು ವರ್ಷವನ್ನು ಮೀರದ ಅವಧಿಗೆ ಅವನ ಸದ್ವರ್ತನೆಯ ಬಗ್ಗೆ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡುವಂತೆ ಅವನನ್ನು ಏಕೆ ಆದೇಶಿಸಬಾರದೆಂಬುದಕ್ಕೆ ಕಾರಣ ತೋರಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

**129. ರೂಢಿಗತ ಅಪರಾಧಿಗಳಿಂದ ಸದ್ವರ್ತನೆಗಾಗಿ ಭದ್ರತೆ.-** ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ,-

(ಎ) ರೂಢಿಗತ ಸುಲಿಗೆಗಾರ, ಮನೆಗಳ್ಳ, ಕಳ್ಳ ಅಥವಾ ಸುಳ್ಳು ಪತ್ರ ಸೃಷ್ಟನೆಗಾರ; ಅಥವಾ

(ಬಿ) ಕಳವು ಮಾಡಿರುವ ಸ್ವತ್ತೆಂದು ತಿಳಿದೂ ಕಳವು ಮಾಡಿದ ಸ್ವತ್ತನ್ನು ರೂಢಿಗತವಾಗಿ ಸ್ವೀಕರಿಸುವ; ಅಥವಾ

(ಸಿ) ರೂಢಿಗತವಾಗಿ ಕಳ್ಳರನ್ನು ಸಂರಕ್ಷಿಸುವ ಅಥವಾ ಆಶ್ರಯ ನೀಡುವ ಅಥವಾ ಕಳವು ಮಾಡಿದ ಸ್ವತ್ತನ್ನು ಬಚ್ಚಿಡಲು ಅಥವಾ ವಿಲೆ ಮಾಡಲು ಸಹಾಯ ಮಾಡುವ; ಅಥವಾ

(ಡಿ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಅಧ್ಯಾಯ Xರ ಮೇರೆಗೆ ಅಥವಾ ಆ ಸಂಹಿತೆಯ 178ನೇ ಪ್ರಕರಣ, 179ನೇ ಪ್ರಕರಣ, 180ನೇ ಪ್ರಕರಣ ಅಥವಾ 181ನೇ ಪ್ರಕರಣದ ಮೇರೆಗೆ ದಂಡನೀಯವಾದ ರೂಢಿಗತವಾಗಿ ಅಪಹರಣ, ಬಲಾತ್ ಅಪಹರಣ, ಬಲಾದ್ಗ್ರಹಣ, ವಂಚನೆ ಅಥವಾ ಕೇಡು ಅಥವಾ ಯಾವುದೇ ಅಪರಾಧವನ್ನು ಮಾಡುವ ಅಥವಾ ಮಾಡಲು ಪ್ರಯತ್ನಿಸುವ ಅಥವಾ ಮಾಡಲು ದುಷ್ಪ್ರೇರಿಸುವ; ಅಥವಾ

(ಇ) ರೂಢಿಗತವಾಗಿ ಶಾಂತಿಭಂಗವನ್ನು ಒಳಗೊಂಡ ಅಪರಾಧಗಳನ್ನು ಮಾಡುವ ಅಥವಾ ಮಾಡಲು ಪ್ರಯತ್ನಿಸುವ ಅಥವಾ ಮಾಡಲು ದುಷ್ಪ್ರೇರಿಸುವ; ಅಥವಾ

(ಎಫ್) ರೂಢಿಗತವಾಗಿ,-

(i) ಯಾವುದೇ ಅಪರಾಧವನ್ನು ಈ ಕೆಳಗಿನ ಒಂದು ಅಥವಾ ಹೆಚ್ಚಿನ ಅಧಿನಿಯಮಗಳ ಮೇರೆಗೆ, ಎಂದರೆ:-

(ಎ) ಔಷಧಿಗಳ ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, 1940 (1940 ರ 23);

(ಬಿ) ವಿದೇಶಿಯರ ಅಧಿನಿಯಮ, 1946 (1946 ರ 31)

(ಸಿ) ನೌಕರರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952ರ 19)

(ಡಿ) ಅವಶ್ಯಕ ಸರಕುಗಳ ಅಧಿನಿಯಮ, 1955 (1955 ರ 10);

(ಇ) ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955 (1955ರ 22)

(ಎಫ್) ಸೀಮಾಶುಲ್ಕ ಅಧಿನಿಯಮ, 1962 (1962 ರ 52);

(ಜಿ) ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಅಧಿನಿಯಮ, 2006 (2006ರ 34); ಅಥವಾ

(ii) ಅಧಿಕ ಸಂಗ್ರಹಣೆ ಅಥವಾ ಅಧಿಕ ಲಾಭ ಸಂಪಾದನೆ ಅಥವಾ ಆಹಾರ ಅಥವಾ ಔಷಧಗಳ ಕಲಬೆರಕೆ ಅಥವಾ ಭ್ರಷ್ಟಾಚಾರದ ತಡೆಹಿಡಿಯುವಿಕೆಯನ್ನು ಉಪಬಂಧಿಸುವ ಇತರ ಯಾವುದೇ ಕಾನೂನಿನ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡುವ ಅಥವಾ ಮಾಡಲು ಪ್ರಯತ್ನಿಸುವ ಅಥವಾ ಮಾಡಲು ದುಷ್ಪ್ರೇರಿಸುವ; ಅಥವಾ

(ಜಿ) ಅವನು ಭದ್ರತೆಯಿಲ್ಲದೆ ಸ್ವತಂತ್ರನಾಗಿರುವುದು ಸಮುದಾಯಕ್ಕೆ ಅನರ್ಥಕಾರಿಯೂ ಮತ್ತು ಅಪಾಯಕಾರಿಯೂ ಆದ ವ್ಯಕ್ತಿಯಾಗಿರುವನೆಂದು ತಿಳಿದು ಬಂದರೆ

- ಅಂಥ ಮ್ಯಾಜಿಸ್ಟ್ರೇಟನು, ಈ ಮುಂದೆ ಉಪಬಂಧಿಸಿದ ರೀತಿಯಲ್ಲಿ, ತಾನು ಸೂಕ್ತವೆಂದು ಭಾವಿಸುವ ಆದರೆ ಮೂರು ವರ್ಷಗಳಿಗೆ ಮೀರದ ಅವಧಿಗೆ ಅವನ ಸದ್ವರ್ತನೆಗಾಗಿ ಜಾಮೀನು ಬಂಧಪತ್ರವನ್ನು ಬರೆದು ಕೊಡುವಂತೆ ಅವನಿಗೆ ಏಕೆ ಆದೇಶಿಸಬಾರದೆಂಬುದಕ್ಕೆ ಕಾರಣ ತೋರಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

**130. ಆದೇಶ ಮಾಡುವುದು.-** 126ನೇ ಪ್ರಕರಣ, 127ನೇ ಪ್ರಕರಣ, 128ನೇ ಪ್ರಕರಣ ಅಥವಾ 129ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸುವ ಮ್ಯಾಜಿಸ್ಟ್ರೇಟನು ಅಂಥ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಕಾರಣ ತೋರಿಸಬೇಕೆಂದು ಅಗತ್ಯಪಡಿಸುವುದು ಅವಶ್ಯಕವೆಂದು ಭಾವಿಸಿದಾಗ ತನಗೆ ತಿಳಿದು ಬಂದ ಆ ಸುದ್ದಿಯ ಸಾರಾಂಶ, ಬರೆದುಕೊಡಬೇಕಾದ ಬಂಧಪತ್ರದ ಮೊಬಲಗು, ಅದು ಜಾರಿಯಲ್ಲಿರಬೇಕಾದ ಅವಧಿಯನ್ನು ಮತ್ತು ಜಾಮೀನುದಾರರ ಪರ್ಯಾಪ್ತತೆ ಮತ್ತು ಅರ್ಹತೆಯನ್ನು ಪರಿಗಣಿಸಿದ ನಂತರ ಜಾಮೀನುದಾರರ ಸಂಖ್ಯೆಯನ್ನು ತಿಳಿಸುವ ಒಂದು ಲಿಖಿತದಲ್ಲಿ ಆದೇಶವನ್ನು ಮಾಡತಕ್ಕದ್ದು.

**131. ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿಯ ಸಂಬಂಧದಲ್ಲಿ ಪ್ರಕ್ರಿಯೆ.-** ಅಂಥ ಆದೇಶವನ್ನು ಯಾವ ವ್ಯಕ್ತಿಯ ಸಂಬಂಧದಲ್ಲಿ ಮಾಡಲಾಯಿತೋ ಅವನು ನ್ಯಾಯಾಲಯದಲ್ಲಿ ಹಾಜರಿದ್ದರೆ, ಆ ಆದೇಶವನ್ನು ಅವನಿಗೆ ಓದಿ ಹೇಳತಕ್ಕದ್ದು ಅಥವಾ ಅವನು ಹಾಗೆ ಅಪೇಕ್ಷಿಸಿದರೆ ಅದರ ಸಾರಾಂಶವನ್ನು ಅವನಿಗೆ ವಿವರಿಸತಕ್ಕದ್ದು.

**132. ಹಾಗೆ ಹಾಜರಿರದ ವ್ಯಕ್ತಿಯ ಸಂಬಂಧದಲ್ಲಿ ಸಮನುಗಳು ಅಥವಾ ವಾರಂಟ್.-** ಅಂಥ ವ್ಯಕ್ತಿಯು ನ್ಯಾಯಾಲಯದಲ್ಲಿ ಹಾಜರಿರದಿದ್ದರೆ, ಮ್ಯಾಜಿಸ್ಟ್ರೇಟನು ಅವನಿಗೆ ಹಾಜರಾಗಲು ಅಗತ್ಯಪಡಿಸುವ ಸಮನನ್ನು ಹೊರಡಿಸತಕ್ಕದ್ದು ಅಥವಾ ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ, ಯಾರ ಅಭಿರಕ್ಷೆಯಲ್ಲಿ ಅವನಿರುವನೋ ಆ ಅಧಿಕಾರಿಗೆ ಅವನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನಿರ್ದೇಶಿಸಿ ವಾರಂಟನ್ನು ಹೊರಡಿಸತಕ್ಕದ್ದು:

ಪರಂತು, ಪೊಲೀಸ್ ಅಧಿಕಾರಿಯ ವರದಿಯ ಮೇಲೆ ಅಥವಾ ಇತರ ಮಾಹಿತಿಯ ಮೇಲೆ (ಮ್ಯಾಜಿಸ್ಟ್ರೇಟನು ಆ ವರದಿ ಅಥವಾ ಮಾಹಿತಿಯ ಸಾರಾಂಶವನ್ನು ದಾಖಲಿಸತಕ್ಕದ್ದು) ಶಾಂತಿಭಂಗವುಂಟು ಮಾಡುತ್ತಾನೆಂದು ಭಯಪಡಲು ಕಾರಣವಿದೆಯೆಂದು ಮತ್ತು ಅಂಥ ವ್ಯಕ್ತಿಯನ್ನು ಕೂಡಲೇ ದಸ್ತಗಿರಿ ಮಾಡುವುದರಿಂದಲ್ಲದೆ ಅನ್ಯಥಾ ಅಂಥ ಶಾಂತಿಭಂಗವನ್ನು

ತಪ್ಪಿಸಲು ಸಾಧ್ಯವಿಲ್ಲವೆಂದು ಕಂಡುಬಂದರೆ, ಆ ಮ್ಯಾಜಿಸ್ಟ್ರೇಟನು ಅವನ ದಸ್ತಗಿರಿಗಾಗಿ ಯಾವುದೇ ಸಮಯದಲ್ಲಿ ವಾರಂಟನ್ನು ಹೊರಡಿಸಬಹುದು.

**133. ಸಮನ್ ಅಥವಾ ವಾರಂಟಿನ ಜೊತೆಯಲ್ಲಿ ಆದೇಶದ ಪ್ರತಿ ಇರುವುದು.-** 132ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಸಮನ್ ಅಥವಾ ವಾರಂಟಿನ ಜೊತೆಯಲ್ಲಿ 130ನೇ ಪ್ರಕರಣದ ಮೇರೆಗೆ ಮಾಡಲಾದ ಆದೇಶದ ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ಅದರ ಮೇರೆಗೆ ಜಾರಿಮಾಡಲಾದ ಅಥವಾ ದಸ್ತಗಿರಿಯಾದ ವ್ಯಕ್ತಿಗೆ ಅಂಥ ಸಮನ್ ಅಥವಾ ವಾರಂಟನ್ನು ಜಾರಿ ಮಾಡುವ ಅಥವಾ ಅಮಲ್ಜಾರಿ ಮಾಡುವ ಅಧಿಕಾರಿಯು ಅಂಥ ಪ್ರತಿಯನ್ನು ಕೊಡತಕ್ಕದ್ದು.

**134. ಖುದ್ದು ಹಾಜರಾತಿಗೆ ವಿನಾಯಿತಿ ಕೊಡುವ ಅಧಿಕಾರ.-** ಮ್ಯಾಜಿಸ್ಟ್ರೇಟನು, ತನಗೆ ಸಾಕಷ್ಟು ಕಾರಣ ಕಂಡುಬಂದರೆ, ಶಾಂತಿಪಾಲನೆಗಾಗಿ ಅಥವಾ ಸದ್ವರ್ತನೆಗಾಗಿ ಬಂಧಪತ್ರವನ್ನು ಬರೆದುಕೊಡಲು ಏಕೆ ಆದೇಶಿಸಬಾರದೆಂಬುದಕ್ಕೆ ಕಾರಣ ತೋರಿಸಬೇಕೆಂದು ಕೇಳಲಾದ ಯಾರೇ ವ್ಯಕ್ತಿಯ ಖುದ್ದು ಹಾಜರಾತಿಗೆ ವಿನಾಯಿತಿ ಕೊಡಬಹುದು ಮತ್ತು ನ್ಯಾಯವಾದಿಯ ಮೂಲಕ ಅವನು ಹಾಜರಾಗಲು ಅನುಮತಿಸಬಹುದು.

**135. ಮಾಹಿತಿಯ ಸತ್ಯತೆಯ ಸಂಬಂಧದಲ್ಲಿ ವಿಚಾರಣೆ.-** (1) ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿಗೆ 130ನೇ ಪ್ರಕರಣದ ಮೇರೆಗಿನ ಒಂದು ಆದೇಶವನ್ನು 131ನೇ ಪ್ರಕರಣದ ಮೇರೆಗೆ ಓದಿ ಹೇಳಲಾಗಿದ್ದರೆ ಅಥವಾ ವಿವರಿಸಲಾಗಿದ್ದರೆ ಅಥವಾ 132ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಸಮನ್ ಅಥವಾ ವಾರಂಟಿನ ಪಾಲನೆಯಲ್ಲಿ ಅಥವಾ ಅಮಲ್ಜಾರಿಯಲ್ಲಿ ಮ್ಯಾಜಿಸ್ಟ್ರೇಟನ ಮುಂದೆ ಯಾರೇ ವ್ಯಕ್ತಿಯು ಹಾಜರಾದರೆ ಅಥವಾ ಅವನನ್ನು ಹಾಜರುಪಡಿಸಿದರೆ, ಮ್ಯಾಜಿಸ್ಟ್ರೇಟನು, ಯಾವ ಮಾಹಿತಿಯ ಮೇಲೆ ಕ್ರಮ ಕೈಗೊಳ್ಳಲಾಗಿದೆಯೋ ಆ ಮಾಹಿತಿಯ ಸತ್ಯಾಂಶದ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಅವಶ್ಯಕವೆನಿಸಬಹುದಾದಂಥ ಮತ್ತಷ್ಟು ಸಾಕ್ಷ್ಯಗಳನ್ನು ಪಡೆಯತಕ್ಕದ್ದು.

(2) ಸಮನ್ ಮೊಕದ್ದಮೆಗಳಲ್ಲಿ ಅಧಿವಿಚಾರಣೆಯನ್ನು ನಡೆಸುವುದಕ್ಕಾಗಿ ಮತ್ತು ಸಾಕ್ಷ್ಯವನ್ನು ದಾಖಲಿಸುವುದಕ್ಕಾಗಿ, ಈ ಮುಂದೆ ನಿಯಮಿಸಲಾದ ರೀತಿಯಲ್ಲಿ, ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಅಂಥ ವಿಚಾರಣೆಯನ್ನು ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ವಿಚಾರಣೆಯು ಪ್ರಾರಂಭವಾದ ತರುವಾಯ ಮತ್ತು ಅದು ಮುಕ್ತಾಯವಾಗುವ ಮುನ್ನ ಶಾಂತಿಭಂಗವನ್ನು ಅಥವಾ ಸಾರ್ವಜನಿಕ ನೆಮ್ಮದಿ ಕದಡುವುದನ್ನು ಅಥವಾ ಯಾವುದೇ ಅಪರಾಧ ಮಾಡುವುದನ್ನು ತಡೆಹಿಡಿಯುವುದಕ್ಕಾಗಿ ಅಥವಾ ಸಾರ್ವಜನಿಕ ಸುರಕ್ಷತೆಗಾಗಿ, ಕೂಡಲೇ ಕ್ರಮಕೈಗೊಳ್ಳುವುದು ಅವಶ್ಯಕವೆಂದು ಮ್ಯಾಜಿಸ್ಟ್ರೇಟನು ಪರ್ಯಾಲೋಚಿಸಿದರೆ, ಅವನ ವಿಚಾರಣೆಯು ಮುಗಿಯುವವರೆಗೆ ಶಾಂತಿಪಾಲನೆಗಾಗಿ ಅಥವಾ ಸದ್ವರ್ತನೆಗಾಗಿ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಲು 130ನೇ ಪ್ರಕರಣದ ಮೇರೆಗೆ ಆದೇಶ ಮಾಡಲಾದ ವ್ಯಕ್ತಿಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ನಿರ್ದೇಶಿಸಬಹುದು ಮತ್ತು ಅಂಥ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡುವವರೆಗೆ ಅಥವಾ ಬರೆದುಕೊಡಲು ತಪ್ಪಿದ್ದಲ್ಲಿ ವಿಚಾರಣೆಯು ಮುಗಿಯುವವರೆಗೆ ಅವನನ್ನು ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಬಹುದು:

ಪರಂತು,-

(ಎ) 127, 128 ಅಥವಾ 129ನೇ ಪ್ರಕರಣದ ಮೇರೆಗೆ ಯಾರ ವಿರುದ್ಧ ಕ್ರಮ ಕೈಗೊಳ್ಳಲಾಗಿಲ್ಲವೋ ಆ ವ್ಯಕ್ತಿಯನ್ನು ಸದ್ವರ್ತನೆಗಾಗಿ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಬೇಕೆಂದು ನಿರ್ದೇಶಿಸತಕ್ಕದ್ದು;

(ಬಿ) ಅಂಥ ಬಂಧಪತ್ರದ ಮೊಬಲಗಿನ ಬಗ್ಗೆ ಅಥವಾ ಜಾಮೀನುದಾರರನ್ನು ಒದಗಿಸುವ ಬಗ್ಗೆ, ಅವರ ಸಂಖ್ಯೆಯ ಬಗ್ಗೆ ಅಥವಾ ಅವರ ಹೊಣೆಗಾರಿಕೆಯ ಆರ್ಥಿಕ ಮಿತಿಯ ಬಗ್ಗೆ ಇರುವ ಷರತ್ತುಗಳು, 130ನೇ ಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಲಾದವುಗಳಿಗಿಂತ ಹೆಚ್ಚು ಹೊಣೆಯುಳ್ಳವುಗಳಾಗಿರತಕ್ಕದ್ದಲ್ಲ.

(4) ಈ ಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು, ರೂಢಿಗತ ಅಪರಾಧಿ ಎಂಬ ಸಂಗತಿಯನ್ನು ಅಥವಾ ಭದ್ರತೆಯಿಲ್ಲದೇ ಅವನು ಸ್ವತಂತ್ರನಾಗಿರುವುದು ಸಮುದಾಯಕ್ಕೆ ಅಪಾಯಕರವೆನಿಸುವಷ್ಟು ಅವನು ಅನರ್ಥಕಾರಿಯೂ ಮತ್ತು ಅಪಾಯಕಾರಿಯೂ ಆಗಿರುವನೆಂಬ ಸಂಗತಿಯನ್ನು, ಜನಸಾಮಾನ್ಯರಲ್ಲಿ ಆತನ ಬಗ್ಗೆ ಇರುವ ಭಾವನೆಯ ಅಥವಾ ಅನ್ಯ ರೀತಿಯ ಸಾಕ್ಷ್ಯದಿಂದ ರುಜುವಾತು ಮಾಡಬಹುದು.

(5) ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ವಿಚಾರಣೆಯಲ್ಲಿರುವ ವಿಷಯಕ್ಕೆ ಸಂಬಂಧಪಟ್ಟಿರುವಲ್ಲಿ, ಮ್ಯಾಜಿಸ್ಟ್ರೇಟನು ನ್ಯಾಯಸಮ್ಮತ ಎಂದು ಭಾವಿಸುವಂಥ ಅಥವಾ ಪ್ರತ್ಯೇಕ ವಿಚಾರಣೆಗಳಲ್ಲಿ ಅವರೊಡನೆ ವ್ಯವಹರಿಸಬಹುದು.

(6) ಈ ಪ್ರಕರಣದ ಮೇರೆಗಿನ ವಿಚಾರಣೆಯನ್ನು, ಅದು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು ಮತ್ತು ಅಂಥ ವಿಚಾರಣೆಯು ಹಾಗೆ ಪೂರ್ಣಗೊಳ್ಳದಿದ್ದರೆ, ಲಿಖಿತದಲ್ಲಿ ದಾಖಲಿಸಲಾಗುವ ವಿಶೇಷ ಕಾರಣಗಳಿಗಾಗಿ ಮ್ಯಾಜಿಸ್ಟ್ರೇಟನು ಅನ್ಯಥಾ ನಿರ್ದೇಶಿಸಿದ ಹೊರತು, ಸದರಿ ಅವಧಿಯು ಮುಕ್ತಾಯವಾದ ಮೇಲೆ ಈ ಅಧ್ಯಾಯದ ಮೇರೆಗಿನ ವ್ಯವಹರಣೆಗಳು ಕೊನೆಗೊಳ್ಳತಕ್ಕದ್ದು:

ಪರಂತು, ಅಂಥ ವಿಚಾರಣೆಯು ಇತ್ಯರ್ಥದಲ್ಲಿರುವಾಗ ಯಾರೇ ವ್ಯಕ್ತಿಯನ್ನು ತಡೆಹಿಡಿದಿರಿಸಲಾಗಿದ್ದರೆ, ಅಂಥ ತಡೆಹಿಡಿದಿರಿಸಿದ ಆರು ತಿಂಗಳ ಅವಧಿಯು ಮುಕ್ತಾಯವಾಗುವ ಮೊದಲೇ ಆ ವ್ಯಕ್ತಿಯ ವಿರುದ್ಧವಾದ ವ್ಯವಹರಣೆಗಳು ಕೊನೆಗೊಳ್ಳದಿದ್ದ ಪಕ್ಷದಲ್ಲಿ, ಆ ಅವಧಿಯು ಮುಕ್ತಾಯವಾಗುವ ದಿನದಂದು ಆ ವ್ಯವಹರಣೆಗಳು ಕೊನೆಗೊಂಡಿವೆ ಎಂದಾಗತಕ್ಕದ್ದು.

(7) (6)ನೇ ಉಪಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ಮುಂದುವರಿಸಲು ಅನುಮತಿಸುವ ಯಾವುದೇ ನಿರ್ದೇಶನವನ್ನು ಮಾಡಲಾಗಿರುವಲ್ಲಿ, ಬಾಧಿತ ಪಕ್ಷಕಾರನು ಸಲ್ಲಿಸಿದ ಅರ್ಜಿಯ ಮೇಲೆ, ಆ ನಿರ್ದೇಶನವು ಯಾವುದೇ ವಿಶೇಷ ಕಾರಣದ ಮೇಲೆ ಆಧಾರಿತವಾಗಿಲ್ಲವೆಂದು ಅಥವಾ ಅದು ವ್ಯತಿರಿಕ್ತವಾದುದೆಂದು ಸೆಷನ್ಸ್ ನ್ಯಾಯಾಧೀಶನಿಗೆ ಮನದಟ್ಟಾದರೆ, ಅವನು ಅಂಥ ನಿರ್ದೇಶನವನ್ನು ರದ್ದುಗೊಳಿಸಬಹುದು.

**136. ಭದ್ರತೆ ನೀಡಲು ಆದೇಶ.-** ಅಂಥ ವಿಚಾರಣೆಯಾದ ಮೇಲೆ, ಸಂದರ್ಭಾನುಸಾರ ಶಾಂತಿಪಾಲನೆಗಾಗಿ ಅಥವಾ ಸದ್ವರ್ತನೆಗಾಗಿ, ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ವಿಚಾರಣೆಗೊಳಪಟ್ಟ ವ್ಯಕ್ತಿಯು ಬರೆದುಕೊಡುವುದು ಅವಶ್ಯಕವೆಂದು ರುಜುವಾತಾದರೆ, ಮ್ಯಾಜಿಸ್ಟ್ರೇಟನು ಅದಕ್ಕನುಸಾರವಾಗಿ ಒಂದು ಆದೇಶವನ್ನು ಮಾಡತಕ್ಕದ್ದು:

ಪರಂತು,-

(ಎ) 130ನೇ ಪ್ರಕರಣದ ಮೇರೆಗೆ ಮಾಡಲಾದ ಆದೇಶದಲ್ಲಿ ನಿರ್ದಿಷ್ಟಪಡಿಸಲಾದುದಕ್ಕಿಂತ ಭಿನ್ನ ಸ್ವರೂಪದ ಅಥವಾ ಹೆಚ್ಚಿನ ಮೊಬಲಗಿನ ಅಥವಾ ಹೆಚ್ಚಿನ ಅವಧಿಯ ಭದ್ರತೆಯನ್ನು ನೀಡಲು ಯಾರೇ ವ್ಯಕ್ತಿಗೂ ಆದೇಶಿಸತಕ್ಕದ್ದಲ್ಲ;

(ಬಿ) ಮೊಕದ್ದಮೆಯ ವಿದ್ಯಮಾನಗಳಿಗೆ ತಕ್ಕ ಗಮನಕೊಟ್ಟು ಪ್ರತಿಯೊಂದು ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಮೊಬಲಗನ್ನು ನಿಗದಿ ಮಾಡತಕ್ಕದ್ದು ಮತ್ತು ಅದು ಮಿತಿಮೀರತಕ್ಕದ್ದಲ್ಲ;

(ಸಿ) ವಿಚಾರಣೆಗೊಳಪಟ್ಟ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದರೆ, ಬಂಧಪತ್ರವನ್ನು ಅವನ ಜಾಮೀನುದಾರರು ಬರೆದುಕೊಡತಕ್ಕದ್ದು.

**137. ಆಪಾದಿತನ ವಿಮೋಚನೆ.-** 135ನೇ ಪ್ರಕರಣದ ಮೇರೆಗೆ ವಿಚಾರಣೆಯಾದ ಮೇಲೆ, ಸಂದರ್ಭಾನುಸಾರ, ಶಾಂತಿ ಅಥವಾ ಸದ್ವರ್ತನೆಗಾಗಿ ವಿಚಾರಣೆಗೊಳಪಟ್ಟ ವ್ಯಕ್ತಿಯು ಒಂದು ಬಂಧಪತ್ರವನ್ನು ಬರೆದುಕೊಡುವುದು ಅವಶ್ಯಕವೆಂದು ರುಜುವಾತಾಗದಿದ್ದರೆ, ಮ್ಯಾಜಿಸ್ಟ್ರೇಟನು ಆ ಬಗ್ಗೆ ದಾಖಲೆಯಲ್ಲಿ ನಮೂದಿಸತಕ್ಕದ್ದು ಮತ್ತು ವಿಚಾರಣೆಯ ಉದ್ದೇಶಗಳಿಗಾಗಿ ಮಾತ್ರ ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಅಥವಾ ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿಲ್ಲದಿದ್ದರೆ ಅವನನ್ನು ವಿಮೋಚನೆಗೊಳಿಸತಕ್ಕದ್ದು.

**138. ಭದ್ರತೆಯು ಅಗತ್ಯವಾದ ಅವಧಿಯ ಪ್ರಾರಂಭ.-** (1) 125ನೇ ಅಥವಾ 136ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ಅಗತ್ಯಪಡಿಸುವ ಆದೇಶವನ್ನು ಯಾವ ವ್ಯಕ್ತಿಯ ಸಂಬಂಧದಲ್ಲಿ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು ಅಂಥ ಆದೇಶವನ್ನು ಮಾಡಿದ ಸಮಯದಲ್ಲಿ ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ ಅಥವಾ ಕಾರಾವಾಸದ ಶಿಕ್ಷೆಯನ್ನು ಅನುಭವಿಸುತ್ತಿದ್ದರೆ, ಅಂಥ ಭದ್ರತೆಯನ್ನು ಅಗತ್ಯಗೊಳಿಸಿದ ಅವಧಿಯು ಅಂಥ ಶಿಕ್ಷೆಯು ಮುಕ್ತಾಯವಾದ ತರುವಾಯ ಪ್ರಾರಂಭವಾಗತಕ್ಕದ್ದು.

(2) ಇತರ ಸಂದರ್ಭಗಳಲ್ಲಿ, ಮ್ಯಾಜಿಸ್ಟ್ರೇಟನು ಸಾಕಷ್ಟು ಕಾರಣಗಳಿಗಾಗಿ ಆನಂತರದ ದಿನಾಂಕವನ್ನು ಗೊತ್ತುಪಡಿಸಿದ ಹೊರತು, ಅಂಥ ಆದೇಶದ ದಿನಾಂಕದಂದು ಅಂಥ ಅವಧಿಯು ಪ್ರಾರಂಭವಾಗತಕ್ಕದ್ದು.

**139. ಬಂಧಪತ್ರದ ಒಳಾಂಶಗಳು.-** ಅಂಥ ಯಾರೇ ವ್ಯಕ್ತಿಯು ಬರೆದುಕೊಡಬೇಕಾದ ಬಂಧಪತ್ರ ಅಥವಾ ಜಾಮೀನು ಬಂಧಪತ್ರ, ಸಂದರ್ಭಾನುಸಾರ, ಶಾಂತಿಪಾಲನೆ ಮಾಡಲು ಅಥವಾ ಸದ್ವರ್ತನೆಯವನಾಗಿರಲು ಅವನನ್ನು ಬದ್ಧಗೊಳಿಸತಕ್ಕದ್ದು ಮತ್ತು ಸದ್ವರ್ತನೆಯ ಸಂದರ್ಭದಲ್ಲಿ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡುವುದು ಅಥವಾ ಮಾಡಲು ಪ್ರಯತ್ನಿಸುವುದು ಅಥವಾ ಮಾಡಲು ದುಷ್ಪ್ರೇರಿಸುವುದು, ಎಲ್ಲೇ ಮಾಡಿದ್ದರೂ, ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಉಲ್ಲಂಘನೆಯಾಗುತ್ತದೆ.

**140. ಜಾಮೀನನ್ನು ತಿರಸ್ಕರಿಸಲು ಅಧಿಕಾರ.-** (1) ಯಾರೇ ಜಾಮೀನುದಾರನನ್ನು, ಅಂಥ ಜಾಮೀನುದಾರನು ಜಾಮೀನು ಬಂಧಪತ್ರದ ಉದ್ದೇಶಗಳಿಗಾಗಿ ಅನರ್ಹ ವ್ಯಕ್ತಿಯೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟನು, ಆ ವ್ಯಕ್ತಿಯು ನೀಡಿದ ಯಾವುದೇ ಜಾಮೀನನ್ನು ಅಂಗೀಕರಿಸಲು ನಿರಾಕರಿಸಬಹುದು ಅಥವಾ ಈ ಅಧ್ಯಾಯದ ಮೇರೆಗೆ ತಾನು ಅಥವಾ ತನ್ನ ಪೂರ್ವಾಧಿಕಾರಿಯು ಈ ಹಿಂದೆ ಅಂಗೀಕರಿಸಿದ ಜಾಮೀನನ್ನು ತಿರಸ್ಕರಿಸಬಹುದು:

ಪರಂತು, ಅಂಥ ಯಾವುದೇ ಜಾಮೀನನ್ನು ಹಾಗೆ ಅಂಗೀಕರಿಸಲು ನಿರಾಕರಿಸುವ ಅಥವಾ ತಿರಸ್ಕರಿಸುವ ಮುಂಚೆ, ಮ್ಯಾಜಿಸ್ಟ್ರೇಟನು ಆ ಜಾಮೀನುದಾರನ ಅರ್ಹತೆಯ ಬಗ್ಗೆ ಆತನು ಪ್ರಮಾಣ ಮಾಡಿಸಿ ತಾನೇ ವಿಚಾರಣೆಯನ್ನು ನಡೆಸತಕ್ಕದ್ದು ಅಥವಾ ತನಗೆ ಅಧೀನನಾಗಿರುವ ಮ್ಯಾಜಿಸ್ಟ್ರೇಟನು ಅಂಥ ವಿಚಾರಣೆಯನ್ನು ನಡೆಸುವಂತೆ ಮತ್ತು ಆ ಬಗ್ಗೆ ವರದಿಯನ್ನು ಕಳುಹಿಸಿಕೊಡುವಂತೆ ಮಾಡತಕ್ಕದ್ದು.

(2) ಅಂಥ ಮ್ಯಾಜಿಸ್ಟ್ರೇಟನು, ವಿಚಾರಣೆಯನ್ನು ನಡೆಸುವ ಮುನ್ನ, ಜಾಮೀನುದಾರನಿಗೆ ಮತ್ತು ಜಾಮೀನು ಕೊಡುವ ವ್ಯಕ್ತಿಗೆ ಯುಕ್ತವಾದ ನೋಟೀಸನ್ನು ನೀಡತಕ್ಕದ್ದು ಮತ್ತು ವಿಚಾರಣೆಯನ್ನು ನಡೆಸುವಾಗ, ತನ್ನ ಮುಂದೆ ಒದಗಿಸಲಾದ ಸಾಕ್ಷ್ಯದ ಸಾರಾಂಶವನ್ನು ದಾಖಲಿಸತಕ್ಕದ್ದು.

(3) ಮ್ಯಾಜಿಸ್ಟ್ರೇಟನು, ತನ್ನ ಮುಂದೆ ಅಥವಾ (1)ನೇ ಉಪಪ್ರಕರಣದ ಮೇರೆಗೆ ಪ್ರತಿನಿಯೋಜಿಸಲಾದ ಮ್ಯಾಜಿಸ್ಟ್ರೇಟನ ಮುಂದೆ ಹಾಗೆ ಒದಗಿಸಲಾದ ಸಾಕ್ಷ್ಯವನ್ನು ಮತ್ತು ಅಂಥ ಮ್ಯಾಜಿಸ್ಟ್ರೇಟನ ವರದಿಯನ್ನು (ಇದ್ದಲ್ಲಿ) ಪರ್ಯಾಲೋಚಿಸಿದ ತರುವಾಯ, ಜಾಮೀನು ಬಂಧಪತ್ರದ ಉದ್ದೇಶಗಳಿಗಾಗಿ ಜಾಮೀನುದಾರನು ಅನರ್ಹ ವ್ಯಕ್ತಿಯೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅಂಥ ಯಾವುದೇ ಜಾಮೀನನ್ನು ಸಂದರ್ಭಾನುಸಾರ ಅಂಗೀಕರಿಸಲು ನಿರಾಕರಿಸುವ ಅಥವಾ ತಿರಸ್ಕರಿಸುವ ಆದೇಶವನ್ನು ಮಾಡತಕ್ಕದ್ದು ಮತ್ತು ಹಾಗೆ ಮಾಡಲು ಇದ್ದ ಕಾರಣಗಳನ್ನು ದಾಖಲಿಸತಕ್ಕದ್ದು:

ಪರಂತು, ಹಿಂದೆ ಅಂಗೀಕರಿಸಲಾಗಿದ್ದ ಯಾವುದೇ ಜಾಮೀನನ್ನು ನಿರಾಕರಿಸುವ ಯಾವುದೇ ಆದೇಶವನ್ನು ಮಾಡುವ ಮುನ್ನ ಮ್ಯಾಜಿಸ್ಟ್ರೇಟನು ತನಗೆ ಸೂಕ್ತವೆನಿಸುವಂತೆ ಸಮನ್ ಅಥವಾ ವಾರಂಟನ್ನು ಹೊರಡಿಸತಕ್ಕದ್ದು ಮತ್ತು ಯಾರಿಗೋಸ್ಕರ ಜಾಮೀನುದಾರನು ಬದ್ಧನಾಗಿರುವನೋ ಆತನನ್ನು ತನ್ನ ಮುಂದೆ ಹಾಜರಾಗುವಂತೆ ಅಥವಾ ಅವನನ್ನು ಹಾಜರುಪಡಿಸುವಂತೆ ಮಾಡತಕ್ಕದ್ದು.

**141 ಭದ್ರತೆ ನೀಡಲು ತಪ್ಪಿದ್ದಲ್ಲಿ ಕಾರಾವಾಸ.-** (1) (ಎ) 125ನೇ ಪ್ರಕರಣ ಅಥವಾ 136ನೇ ಪ್ರಕರಣದ ಮೇರೆಗೆ ಭದ್ರತೆ ಕೊಡಲು ಆದೇಶಿತನಾದ ಯಾರೇ ವ್ಯಕ್ತಿಯು, ಯಾವ ಅವಧಿಗಾಗಿ ಅಂಥ ಭದ್ರತೆಯನ್ನು ನೀಡಬೇಕಾಗಿರುವುದೋ ಆ ಅವಧಿಯ ಪ್ರಾರಂಭವಾಗುವ ದಿನಾಂಕದಂದು ಅಥವಾ ಅದಕ್ಕೆ ಮುನ್ನ ಅಂಥ ಭದ್ರತೆಯನ್ನು ನೀಡದಿದ್ದರೆ ಈ ಮುಂದೆ ಹೇಳಲಾದ ಸಂದರ್ಭದ ಹೊರತು, ಆತನನ್ನು ಕಾರಾವಾಸ ಶಿಕ್ಷೆಗೆ ಗುರಿ ಮಾಡತಕ್ಕದ್ದು ಅಥವಾ ಅವನು ಈಗಾಗಲೇ ಕಾರಾಗೃಹದಲ್ಲಿ ಇದ್ದರೆ ಅಂಥ ಅವಧಿಯು ಮುಗಿಯುವವರೆಗೆ ಅಥವಾ ಭದ್ರತೆಯನ್ನು ಅಗತ್ಯಪಡಿಸಿ ಆದೇಶ ಮಾಡಿದ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನಿಗೆ ಅಂಥ ಅವಧಿಯೊಳಗಾಗಿ ಭದ್ರತೆಯನ್ನು ನೀಡುವವರೆಗೆ ಅವನನ್ನು ಕಾರಾವಾಸದಲ್ಲಿ ಇಡತಕ್ಕದ್ದು;

(ಬಿ) 136ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಆದೇಶದ ಅನುಸರಣೆಯಲ್ಲಿ ಯಾರೇ ವ್ಯಕ್ತಿಯು ಶಾಂತಿಪಾಲನೆ ಮಾಡುವುದಕ್ಕಾಗಿ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಟ್ಟ ತರುವಾಯ, ಅವನು ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಉಲ್ಲಂಘನೆಯನ್ನು ಮಾಡಿರುವನೆಂದು ಅಂಥ ಮ್ಯಾಜಿಸ್ಟ್ರೇಟನಿಗೆ ಅಥವಾ ಅವನ ಪದದ-ಉತ್ತರಾಧಿಕಾರಿಗೆ ಮನದಟ್ಟಾಗುವಂತೆ ರುಜುವಾತಾದರೆ, ಅಂಥ ಮ್ಯಾಜಿಸ್ಟ್ರೇಟನು ಅಥವಾ ಅವನ ಪದದ-ಉತ್ತರಾಧಿಕಾರಿಯು, ಅಂಥ ರುಜುವಾತಿನ ಕಾರಣಗಳನ್ನು ದಾಖಲಿಸಿದ ತರುವಾಯ, ಆ ವ್ಯಕ್ತಿಯನ್ನು ದಸ್ತಗಿರಿ ಮಾಡುವಂತೆ ಮತ್ತು ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಅವಧಿಯು ಮುಗಿಯುವವರೆಗೆ ಅವನನ್ನು ಕಾರಾವಾಸದಲ್ಲಿ ತಡೆಹಿಡಿದಿರಿಸುವಂತೆ ಆದೇಶಿಸಬಹುದು ಮತ್ತು ಕಾನೂನಿಗನುಸಾರವಾಗಿ ಸದರಿ ವ್ಯಕ್ತಿಯು ಗುರಿಯಾಗಬಹುದಾದ ಯಾವುದೇ ಇತರ ದಂಡನೆಗೆ ಅಥವಾ ಮುಟ್ಟುಗೋಲಿಗೆ ಅಂಥ ಆದೇಶವು ಪ್ರತಿಕೂಲವಾಗಿರತಕ್ಕದ್ದಲ್ಲ.

(2) ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಭದ್ರತೆ ಕೊಡಲು ಅಂಥ ವ್ಯಕ್ತಿಗೆ ಮ್ಯಾಜಿಸ್ಟ್ರೇಟನು ಆದೇಶಿಸಿದಾಗ ಹಿಂದೆ ಹೇಳಿದಂತೆ ಅಂಥ ಜಾಮೀನನ್ನು ಆ ವ್ಯಕ್ತಿಯು ಕೊಡದಿದ್ದರೆ, ಸೆಷನ್ಸ್ ನ್ಯಾಯಾಧೀಶನ ಆದೇಶವಾಗುವವರೆಗೆ ಅವನನ್ನು ಕಾರಾವಾಸದಲ್ಲಿ ತಡೆಹಿಡಿದಿಡತಕ್ಕದ್ದೆಂದು ನಿರ್ದೇಶಿಸುವ ವಾರಂಟನ್ನು ಹೊರಡಿಸತಕ್ಕದ್ದು ಮತ್ತು ವ್ಯವಹರಣೆಗಳನ್ನು ಅನುಕೂಲವಾದಷ್ಟು ಬೇಗನೆ, ಅಂಥ ನ್ಯಾಯಾಲಯದ ಮುಂದೆ ಇಡತಕ್ಕದ್ದು.

(3) ಅಂಥ ವ್ಯವಹರಣೆಗಳನ್ನು ಪರೀಕ್ಷಿಸಿದ ನಂತರ ಮತ್ತು ಅವಶ್ಯಕವೆಂದು ತಾನು ಭಾವಿಸುವಂಥ ಮತ್ತಷ್ಟು ಮಾಹಿತಿ ಅಥವಾ ಸಾಕ್ಷ್ಯವನ್ನು ಮ್ಯಾಜಿಸ್ಟ್ರೇಟನಿಂದ ಪಡೆದ ತರುವಾಯ ಮತ್ತು ವಿಚಾರಣೆಗಾಗಿ ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲು

ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಅಂಥ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಆ ಮೊಕದ್ದಮೆಯಲ್ಲಿ ಮಾಡಬಹುದು:

ಪರಂತು, ಭದ್ರತೆ ಕೊಡಲು ತಪ್ಪಿದ್ದಕ್ಕಾಗಿ ಯಾರೇ ವ್ಯಕ್ತಿಯನ್ನು ಕಾರಾವಾಸದಲ್ಲಿರಿಸುವ ಅವಧಿಯು (ಯಾವುದಾದರೂ ಇದ್ದರೆ) ಮೂರು ವರ್ಷಗಳಿಗೆ ಮೀರತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ಒಂದೇ ವ್ಯವಹರಣೆಯಲ್ಲಿ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಭದ್ರತೆ ಕೊಡಬೇಕೆಂದು ಅಗತ್ಯಪಡಿಸಿದ್ದರೆ ಮತ್ತು ಅದರಲ್ಲಿ ಯಾರೊಬ್ಬರ ಬಗೆಗಿನ ವ್ಯವಹರಣೆಗಳನ್ನು (2)ನೇ ಉಪಪ್ರಕರಣದ ಮೇರೆಗೆ ಸೆಷನ್ಸ್ ನ್ಯಾಯಾಧೀಶನಿಗೆ ಉಲ್ಲೇಖಿಸಲಾಗಿದ್ದರೆ, ಅಂಥ ಉಲ್ಲೇಖವು ಭದ್ರತೆ ಕೊಡಲು ಆದೇಶಿತರಾದಂಥ ವ್ಯಕ್ತಿಗಳಲ್ಲಿ ಯಾರೊಬ್ಬರ ಮೊಕದ್ದಮೆಯನ್ನೂ ಸಹ ಒಳಗೊಳ್ಳತಕ್ಕದ್ದು ಮತ್ತು ಆ ಸಂದರ್ಭದಲ್ಲಿ (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳು ಅಂಥ ಇತರ ವ್ಯಕ್ತಿಯ ಮೊಕದ್ದಮೆಗೂ ಅನ್ವಯಿಸತಕ್ಕದ್ದು, ಆದರೆ ಅವನನ್ನು ಕಾರಾವಾಸದಲ್ಲಿರಿಸಬೇಕಾದ ಅವಧಿಯು (ಏನಾದರೂ ಇದ್ದರೆ) ಭದ್ರತೆ ಕೊಡಲು ಆದೇಶಿತವಾದ ಅವಧಿಯನ್ನು ಮೀರತಕ್ಕದ್ದಲ್ಲ.

(5) ಸೆಷನ್ಸ್ ನ್ಯಾಯಾಧೀಶನು (2)ನೇ ಅಥವಾ (4)ನೇ ಉಪಪ್ರಕರಣದ ಮೇರೆಗೆ ತನಗೆ ಕಳುಹಿಸಲಾದ ಯಾವುದೇ ವ್ಯವಹರಣೆಗಳನ್ನು ಅಪರ ಸೆಷನ್ಸ್ ನ್ಯಾಯಾಧೀಶನಿಗೆ ತನ್ನ ವಿವೇಚನಾನುಸಾರ ವರ್ಗಾಯಿಸಬಹುದು ಮತ್ತು ಅಂಥ ವರ್ಗಾವಣೆಯಾದ ಮೇಲೆ ಅಂಥ ಅಪರ ಸೆಷನ್ಸ್ ನ್ಯಾಯಾಧೀಶನು, ಅಂಥ ವ್ಯವಹರಣೆಗಳ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಸೆಷನ್ಸ್ ನ್ಯಾಯಾಧೀಶನ ಅಧಿಕಾರಗಳನ್ನು ಚಲಾಯಿಸಬಹುದು.

(6) ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಭದ್ರತೆಯನ್ನು ನೀಡಲಾಗಿದ್ದರೆ, ಆದೇಶ ನೀಡಿದ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನಿಗೆ ಆ ವಿಷಯವನ್ನು ಕೂಡಲೇ ಅವನು ತಿಳಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯದ ಅಥವಾ ಮ್ಯಾಜಿಸ್ಟ್ರೇಟನ ಆದೇಶಗಳನ್ನು ನಿರೀಕ್ಷಿಸತಕ್ಕದ್ದು.

(7) ಶಾಂತಿಪಾಲನೆಗಾಗಿ ಭದ್ರತೆ ಕೊಡಲು ತಪ್ಪಿದ್ದಕ್ಕೆ ವಿಧಿಸಲಾಗಿದ್ದ ಕಾರಾವಾಸವು ಸಾದಾ ಕಾರಾವಾಸವಾಗಿರತಕ್ಕದ್ದು.

(8) ಸದ್ವರ್ತನೆಗಾಗಿ ಭದ್ರತೆ ಕೊಡಲು ತಪ್ಪಿದ್ದಕ್ಕೆ ವಿಧಿಸಲಾಗುವ ಕಾರಾವಾಸವು, 127ನೇ ಪ್ರಕರಣದ ಮೇರೆಗೆ ಆ ಕ್ರಮವನ್ನು ಜರುಗಿಸಲಾಗಿರುವಲ್ಲಿ ಸಾದಾ ಕಾರಾವಾಸವಾಗಿರತಕ್ಕದ್ದು ಮತ್ತು 128ನೇ ಅಥವಾ 129ನೇ ಪ್ರಕರಣದ ಮೇರೆಗೆ ಕ್ರಮ ಜರುಗಿಸಲಾಗಿರುವಲ್ಲಿ, ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ಪ್ರತಿಯೊಂದು ಮೊಕದ್ದಮೆಯಲ್ಲಿ ನಿರ್ದೇಶಿಸುವಂತೆ, ಅದು ಕಠಿಣ ಅಥವಾ ಸಾದಾ ಕಾರಾವಾಸವಾಗಿರತಕ್ಕದ್ದು.

**142. ಭದ್ರತೆ ನೀಡಲು ತಪ್ಪಿದ್ದಕ್ಕಾಗಿ ಕಾರಾವಾಸಕ್ಕೊಳಗಾಗಿರುವ ವ್ಯಕ್ತಿಗಳನ್ನು ಬಿಡುಗಡೆ ಮಾಡಲು ಅಧಿಕಾರ.-** (1) 136ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಮಾಡಿದ ಆದೇಶದ ಸಂದರ್ಭದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಇತರ ಯಾವುದೇ ಸಂದರ್ಭದಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು, ಈ ಅಧ್ಯಾಯದ ಮೇರೆಗೆ ಭದ್ರತೆ ನೀಡಲು ತಪ್ಪಿದ್ದಕ್ಕಾಗಿ ಕಾರಾವಾಸಕ್ಕೊಳಗಾಗಿರುವ ಯಾರೇ ವ್ಯಕ್ತಿಯು, ಜನ ಸಮುದಾಯಕ್ಕೆ ಅಥವಾ ಇತರ ಯಾರೇ ವ್ಯಕ್ತಿಗೆ ಅಪಾಯಕಾರಿಯಾಗಿಲ್ಲವೆಂದು ಬಿಡುಗಡೆ ಮಾಡಬಹುದೆಂದು ಅಭಿಪ್ರಾಯಪಟ್ಟರೆ, ಅವನು ಅಂಥ ವ್ಯಕ್ತಿಯನ್ನು ಬಿಡುಗಡೆ ಮಾಡಲು ಆದೇಶಿಸಬಹುದು.

(2) ಈ ಅಧ್ಯಾಯದ ಮೇರೆಗೆ ಭದ್ರತೆ ನೀಡಲು ತಪ್ಪಿದ್ದಕ್ಕಾಗಿ ಯಾರೇ ವ್ಯಕ್ತಿಯು ಕಾರಾವಾಸಕ್ಕೊಳಗಾಗಿದ್ದರೆ, ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು ಅಥವಾ ಅಂಥ ಆದೇಶವನ್ನು ಯಾವ ಇತರ ನ್ಯಾಯಾಲಯ

ಮಾಡಿದೆಯೋ ಆ ನ್ಯಾಯಾಲಯವು, 136ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಆದೇಶ ಹೊರಡಿಸಿದ್ದರೆ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಇತರ ಯಾವುದೇ ಸಂದರ್ಭದಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು, ಭದ್ರತೆಯ ಮೊಬಲಗನ್ನು ಅಥವಾ ಜಾಮೀನುದಾರರ ಸಂಖ್ಯೆಯನ್ನು ಅಥವಾ ಅಗತ್ಯಪಡಿಸಲಾದ ಭದ್ರತೆಯ ಅವಧಿಯನ್ನು ಕಡಿಮೆ ಮಾಡುವ ಆದೇಶವನ್ನು ಮಾಡಬಹುದು.

(3) (1)ನೇ ಉಪಪ್ರಕರಣದ ಮೇರೆಗಿನ ಆದೇಶವು ಅಂಥ ವ್ಯಕ್ತಿಯನ್ನು ಷರತ್ತುಗಳಿಲ್ಲದೆಯೇ ಅಥವಾ ಅಂಥ ವ್ಯಕ್ತಿಯು ಅಂಗೀಕರಿಸುವ ಯಾವುದೇ ಷರತ್ತುಗಳ ಮೇಲೆ ಬಿಡುಗಡೆ ಮಾಡಲು ನಿರ್ದೇಶಿಸಬಹುದು:

ಪರಂತು, ಯಾವ ಅವಧಿಗಾಗಿ ಭದ್ರತೆಯನ್ನು ನೀಡಲು ಅಂಥ ವ್ಯಕ್ತಿಗೆ ಆದೇಶಿಸಲಾಗಿದೆಯೋ ಅಂಥ ಅವಧಿಯು ಮುಕ್ತಾಯವಾದಾಗ ವಿಧಿಸಲಾದ ಯಾವುದೇ ಷರತ್ತು ಜಾರಿಯಲ್ಲಿರುವುದು ಕೊನೆಗೊಳ್ಳತಕ್ಕದ್ದು.

(4) ಯಾವ ಷರತ್ತುಗಳ ಮೇಲೆ ಷರತ್ತುಬದ್ಧವಾಗಿ ಬಿಡುಗಡೆ ಮಾಡಬಹುದೋ ಆ ಷರತ್ತುಗಳನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದು.

(5) ಯಾವ ಷರತ್ತಿನ ಮೇಲೆ ಯಾರೇ ವ್ಯಕ್ತಿಯನ್ನು ಬಿಡುಗಡೆ ಮಾಡಲಾಯಿತೋ ಆ ಯಾವುದೇ ಷರತ್ತನ್ನು ಪಾಲಿಸಿಲ್ಲವೆಂದು 136ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಮಾಡಿದ ಬಿಡುಗಡೆಯ ಆದೇಶದ ಸಂದರ್ಭದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಯಾವುದೇ ಇತರ ಸಂದರ್ಭದಲ್ಲಿ ಯಾರು ಬಿಡುಗಡೆಯ ಆದೇಶವನ್ನು ಮಾಡಿದ್ದಾರೋ ಆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಆತನ ಉತ್ತರಾಧಿಕಾರಿಯು ಅಭಿಪ್ರಾಯಪಟ್ಟರೆ, ಅವನು ಅದನ್ನು ರದ್ದುಗೊಳಿಸಬಹುದು.

(6) ಷರತ್ತುಬದ್ಧ ಬಿಡುಗಡೆಯ ಆದೇಶವು (5)ನೇ ಉಪಪ್ರಕರಣದ ಮೇರೆಗೆ ರದ್ದಾದಾಗ, ಯಾರೇ ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಮತ್ತು ಆನಂತರ 136ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಮಾಡಿದ ಆದೇಶದ ಸಂದರ್ಭದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಇತರ ಯಾವುದೇ ಸಂದರ್ಭದಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಮುಂದೆ ಅವನನ್ನು ಹಾಜರುಪಡಿಸತಕ್ಕದ್ದು.

(7) ಯಾವ ಅವಧಿಗಾಗಿ ಅಂಥ ವ್ಯಕ್ತಿಯನ್ನು ಮೊದಲೇ ಬಂಧನದಲ್ಲಿಡಲಾಗಿತ್ತೋ ಅಥವಾ ತಡೆಹಿಡಿದಿಡಲು ಆದೇಶಿಸಲಾಗಿತ್ತೋ ಆ ಅವಧಿಯ ಉಳಿದ ಭಾಗಕ್ಕಾಗಿ, (ಬಿಡುಗಡೆಯ ಷರತ್ತುಗಳ ಭಂಗದ ದಿನಾಂಕ ಮತ್ತು ಅಂಥ ಷರತ್ತುಬದ್ಧ ಬಿಡುಗಡೆಯಾಗದಿದ್ದರೆ, ಬಿಡುಗಡೆಯಾಗಲು ಅವನಿಗೆ ಹಕ್ಕಿರಬಹುದಾಗಿದ್ದ ದಿನಾಂಕಗಳ ನಡುವಣ ಅವಧಿಗೆ ಸಮನಾದ ಅವಧಿ ಎಂದು ಆ ಉಳಿದ ಅವಧಿಯನ್ನು ಭಾವಿಸಲಾಗಿದೆ) ಮೂಲ ಆದೇಶದ ನಿಬಂಧನೆಗಳಿಗನುಸಾರವಾಗಿ ಅವನು ಭದ್ರತೆಯನ್ನು ಕೊಟ್ಟ ಹೊರತು, 136ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಮಾಡಿದ ಆದೇಶದ ಸಂದರ್ಭದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಇತರ ಯಾವುದೇ ಸಂದರ್ಭದಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಂಥ ವ್ಯಕ್ತಿಯನ್ನು ಉಳಿದ ಅವಧಿಗಾಗಿ ಕಾರಾವಾಸಕ್ಕೆ ಕಳುಹಿಸಬಹುದು.

(8) ಆದೇಶವನ್ನು ಮಾಡಿದ ನ್ಯಾಯಾಲಯಕ್ಕೆ ಅಥವಾ ಮ್ಯಾಜಿಸ್ಟ್ರೇಟನಿಗೆ ಅಥವಾ ಅವರ ಉತ್ತರಾಧಿಕಾರಿಗೆ ಸದರಿ ಉಳಿದ ಅವಧಿಗಾಗಿನ ಮೂಲ ಆದೇಶದ ನಿಬಂಧನೆಗಳಿಗನುಸಾರವಾಗಿ ಭದ್ರತೆ ಕೊಟ್ಟ ಮೇಲೆ, (7)ನೇ ಉಪಪ್ರಕರಣದ ಮೇರೆಗೆ ಕಾರಾವಾಸಕ್ಕೆ ಕಳುಹಿಸಲಾದ ವ್ಯಕ್ತಿಯನ್ನು 141ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಯಾವುದೇ ಸಮಯದಲ್ಲಿ ಬಿಡುಗಡೆ ಮಾಡತಕ್ಕದ್ದು.

(9) ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು ಯಾವುದೇ ಸಮಯದಲ್ಲಿ, ಲಿಖಿತದಲ್ಲಿ ಸಾಕಷ್ಟು ಕಾರಣಗಳನ್ನು ದಾಖಲಿಸಿ, ತಾನು ಮಾಡಿದ ಯಾವುದೇ ಆದೇಶದ ಮೂಲಕ ಈ ಅಧ್ಯಾಯದ ಮೇರೆಗೆ ಶಾಂತಿಪಾಲನೆ ಅಥವಾ ಸದ್ವರ್ತನೆಗಾಗಿ ಬರೆದುಕೊಡಲಾದ ಯಾವುದೇ ಬಂಧಪತ್ರವನ್ನು ರದ್ದುಗೊಳಿಸಬಹುದು ಮತ್ತು 136ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಮಾಡಿದ ಆದೇಶದ ಸಂದರ್ಭದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಇತರ ಯಾವುದೇ ಸಂದರ್ಭದಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ತನ್ನ ಆದೇಶದ ಮೇರೆಗೆ ಅಥವಾ ತನ್ನ ಜಿಲ್ಲೆಯಲ್ಲಿರುವ ಇತರ ಯಾವುದೇ ನ್ಯಾಯಾಲಯದ ಆದೇಶದ ಮೇರೆಗೆ ಅಂಥ ಬಂಧಪತ್ರವನ್ನು ಬರೆದುಕೊಡಲಾಗಿದ್ದರೆ, ಅದನ್ನು ಹಾಗೆ ರದ್ದುಗೊಳಿಸಬಹುದು.

(10) ಇತರ ವ್ಯಕ್ತಿಯ ಶಾಂತಿಯುತ ನಡತೆ ಅಥವಾ ಸದ್ವರ್ತನೆಗಾಗಿ ಈ ಅಧ್ಯಾಯದ ಮೇರೆಗೆ ಒಂದು ಬಂಧಪತ್ರವನ್ನು ಬರೆದುಕೊಡಲು ಆದೇಶಿತನಾದ ಯಾರೇ ಜಾಮೀನುದಾರನು, ಅಂಥ ಆದೇಶವನ್ನು ಮಾಡಿದ ನ್ಯಾಯಾಲಯಕ್ಕೆ ಬಂಧಪತ್ರವನ್ನು ರದ್ದುಗೊಳಿಸಲು ಯಾವುದೇ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಂಥ ಅರ್ಜಿಯ ಮೇಲೆ, ನ್ಯಾಯಾಲಯವು, ಯಾರಿಗೋಸ್ಕರ ಅಂಥ ಜಾಮೀನುದಾರನು ಬದ್ಧನಾಗಿರುವನೋ ಆ ವ್ಯಕ್ತಿಯು ತನ್ನ ಮುಂದೆ ಹಾಜರಾಗಲು ಅಥವಾ ಅವನನ್ನು ಹಾಜರುಪಡಿಸಲು ಅಗತ್ಯಪಡಿಸಿ ತನಗೆ ಸೂಕ್ತವೆನಿಸುವಂಥ ಸಮನ್ ಅಥವಾ ವಾರಂಟನ್ನು ಹೊರಡಿಸತಕ್ಕದ್ದು.

**143. ಬಂಧಪತ್ರದ ಉಳಿದ ಅವಧಿಗಾಗಿ ಭದ್ರತೆ.-** (1) 140ನೇ ಪ್ರಕರಣದ (3)ನೇ ಉಪಪ್ರಕರಣದ ಪರಂತುಕದ ಮೇರೆಗೆ ಅಥವಾ 142ನೇ ಪ್ರಕರಣದ (10)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ಹಾಜರಾತಿಗಾಗಿ ಸಮನ್ ಅಥವಾ ವಾರಂಟನ್ನು ಹೊರಡಿಸಲಾಯಿತೋ ಆ ವ್ಯಕ್ತಿಯು ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ ಹಾಜರಾದರೆ ಅಥವಾ ಹಾಜರುಪಡಿಸಿದರೆ, ಆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಅಂಥ ವ್ಯಕ್ತಿಯು ಬರೆದುಕೊಟ್ಟ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ರದ್ದುಗೊಳಿಸತಕ್ಕದ್ದು ಮತ್ತು ಅಂಥ ಬಂಧಪತ್ರದ ಉಳಿದ ಅವಧಿಗಾಗಿ ಮೂಲ ಭದ್ರತೆಯಂಥದೇ ಆದ ಹೊಸ ಭದ್ರತೆಯನ್ನು ಕೊಡಬೇಕೆಂದು ಅಂಥ ವ್ಯಕ್ತಿಗೆ ಆದೇಶಿಸತಕ್ಕದ್ದು.

(2) ಅಂಥ ಪ್ರತಿಯೊಂದು ಆದೇಶವನ್ನು 139 ರಿಂದ 142ರವರೆಗಿನ ಪ್ರಕರಣಗಳ (ಎರಡೂ ಪ್ರಕರಣಗಳೂ ಸೇರಿದಂತೆ) ಉದ್ದೇಶಗಳಿಗಾಗಿ, ಸಂದರ್ಭಾನುಸಾರ 125ನೇ ಅಥವಾ 136ನೇ ಪ್ರಕರಣದ ಮೇರೆಗೆ ಮಾಡಲಾದ ಆದೇಶವೆಂದು ಭಾವಿಸತಕ್ಕದ್ದು.

## ಅಧ್ಯಾಯ X

## ಪತ್ನಿ, ಮಕ್ಕಳ ಮತ್ತು ತಂದೆತಾಯಿಗಳ ಜೀವನಾಂಶಕ್ಕಾಗಿ ಆದೇಶ

**144. ಪತ್ನಿ, ಮಕ್ಕಳು ಮತ್ತು ತಂದೆತಾಯಿಗಳ ಜೀವನಾಂಶಕ್ಕಾಗಿ ಆದೇಶ.-** (1) ಸಾಕಷ್ಟು ಸಂಪಾದನೆಯಿರುವ ಯಾರೇ ವ್ಯಕ್ತಿಯು,-

(ಎ) ತನ್ನ ಜೀವನ ನಿರ್ವಹಣೆಗೆ ಅಸಮರ್ಥಳಾದ ಪತ್ನಿಯ; ಅಥವಾ

(ಬಿ) ತನ್ನ ಜೀವನ ನಿರ್ವಹಣೆಗೆ ಅಸಮರ್ಥವಾದ ಔರಸ ಅಥವಾ ಜಾರಜ, ವಿವಾಹಿತ ಅಥವಾ ಅವಿವಾಹಿತವಾದ ಮಗುವಿನ; ಅಥವಾ

(ಸಿ) ತನ್ನ ಔರಸ ಅಥವಾ ಜಾರಜ (ಅವಿವಾಹಿತ ಪುತ್ರಿ) ಪ್ರಾಪ್ತ ವಯಸ್ಕ ಮಗುವು ಯಾವುದೇ ದೈಹಿಕ ಅಥವಾ ಮಾನಸಿಕ ವಿಕಲತೆ ಅಥವಾ ಕ್ಷತಿಯ ಕಾರಣದಿಂದಾಗಿ ತನ್ನ ಜೀವನ ನಿರ್ವಹಣೆಗೆ ಅಸಮರ್ಥವಾಗಿರುವ ಅಂಥ ಮಗುವಿನ; ಅಥವಾ

(ಡಿ) ತನ್ನ ಜೀವನ ನಿರ್ವಹಣೆಗೆ ಅಸಮರ್ಥರಾದ, ತನ್ನ ತಂದೆ ಅಥವಾ ತಾಯಿಯ

- ಜೀವನ ನಿರ್ವಹಣೆಯನ್ನು ನಿರ್ಲಕ್ಷ್ಯ ಮಾಡಿದರೆ ಅಥವಾ ನಿರಾಕರಿಸಿದರೆ, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಅಂಥ ನಿರ್ಲಕ್ಷ್ಯ ಅಥವಾ ನಿರಾಕರಣೆಯು ರುಜುವಾತಾದ ಮೇಲೆ, ಅಂಥ ವ್ಯಕ್ತಿಗೆ, ಆತನ ಪತ್ನಿ ಅಥವಾ ಅಂಥ ಮಗು, ತಂದೆ ಅಥವಾ ತಾಯಿಯ ಜೀವನ ನಿರ್ವಹಣೆಗಾಗಿ, ಅಂಥ ಮ್ಯಾಜಿಸ್ಟ್ರೇಟನು ಸೂಕ್ತವೆಂದು ಭಾವಿಸುವಂತೆ ಮಾಸಿಕ ದರದಲ್ಲಿ ಮಾಸಿಕ ಭತ್ಯೆಯನ್ನು ನೀಡಬೇಕೆಂದು ಮತ್ತು ಮ್ಯಾಜಿಸ್ಟ್ರೇಟನು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಅದನ್ನು ಸಂದಾಯ ಮಾಡಬೇಕೆಂದು ಆದೇಶಿಸಬಹುದು:

ಪರಂತು, ಮ್ಯಾಜಿಸ್ಟ್ರೇಟನು, (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಹೆಣ್ಣು ಮಗುವಿನ ತಂದೆಗೆ, ಅವಳಿಗೆ ವಿವಾಹವಾಗಿದ್ದು ಅಂಥ ಹೆಣ್ಣು ಮಗುವಿನ ಪತಿಯು ಸಾಕಷ್ಟು ಸಂಪಾದನೆಯನ್ನು ಹೊಂದಿಲ್ಲವೆಂದು ಅವನಿಗೆ ಮನದಟ್ಟಾದರೆ, ಅಂಥ ಭತ್ಯೆಯನ್ನು ಅವಳು ಪ್ರಾಪ್ತವಯಸ್ಕಳಾಗುವವರೆಗೆ ಕೊಡಲು ಆದೇಶಿಸಬಹುದು:

ಮತ್ತು ಪರಂತು, ಮ್ಯಾಜಿಸ್ಟ್ರೇಟನು, ಈ ಉಪಪ್ರಕರಣದ ಮೇರೆಗೆ ಜೀವನಾಂಶಕ್ಕಾಗಿ ಮಾಸಿಕ ಭತ್ಯೆಗೆ ಸಂಬಂಧಿಸಿರುವ ವ್ಯವಹರಣೆಯು ಇತ್ಯರ್ಥದಲ್ಲಿರುವಾಗ, ಅಂಥ ವ್ಯಕ್ತಿಯು ತನ್ನ ಪತ್ನಿಯ ಅಥವಾ ಅಂಥ ಮಗುವಿನ, ತಂದೆ ಅಥವಾ ತಾಯಿಯ ಮಧ್ಯಂತರ ಜೀವನಾಂಶಕ್ಕಾಗಿ ಮಾಸಿಕ ಭತ್ಯೆಯನ್ನು ನೀಡುವಂತೆ ಮತ್ತು ಮ್ಯಾಜಿಸ್ಟ್ರೇಟನು ಸೂಕ್ತವೆಂದು ಪರಿಗಣಿಸುವಂಥ ವ್ಯವಹರಣೆಯ ವೆಚ್ಚಗಳನ್ನು ಮ್ಯಾಜಿಸ್ಟ್ರೇಟನು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಸಂದಾಯ ಮಾಡುವಂತೆ ಆದೇಶಿಸಬಹುದು:

ಮತ್ತೂ ಪರಂತು, ಎರಡನೇ ಪರಂತುಕದ ಮೇರೆಗೆ ಮಧ್ಯಂತರ ಜೀವನಾಂಶಕ್ಕಾಗಿನ ಮತ್ತು ವ್ಯವಹರಣೆಯ ವೆಚ್ಚಗಳಿಗಾಗಿನ ಅರ್ಜಿಯನ್ನು ಸಾಧ್ಯವಾದಷ್ಟು ಬೇಗನೆ, ಅಂಥ ವ್ಯಕ್ತಿಗೆ ಅರ್ಜಿಯ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ವಿಲೆ ಮಾಡತಕ್ಕದ್ದು.

*ವಿವರಣೆ.*- ಈ ಅಧ್ಯಾಯದ ಉದ್ದೇಶಗಳಿಗಾಗಿ, "ಪತ್ನಿ" ಎಂಬ ಪದವು ಪತಿಯಿಂದ ವಿವಾಹ ವಿಚ್ಛೇದಿತಳಾಗಿರುವ ಅಥವಾ ವಿವಾಹ ವಿಚ್ಛೇದನ ಪಡೆದಿರುವ ಮತ್ತು ಪುನರ್ವಿವಾಹವಾಗದಿರುವ ಮಹಿಳೆಯನ್ನು ಒಳಗೊಳ್ಳುತ್ತದೆ.

(2) ಜೀವನಾಂಶಕ್ಕಾಗಿ ಅಥವಾ ಮಧ್ಯಂತರ ಜೀವನಾಂಶಕ್ಕಾಗಿ ಮತ್ತು ವ್ಯವಹರಣೆಯ ವೆಚ್ಚಕ್ಕಾಗಿನ ಭತ್ಯೆ, ಯಾವುದೇ ಭತ್ಯೆಯನ್ನು, ಆದೇಶದ ದಿನಾಂಕದಿಂದ ಅಥವಾ ಹಾಗೆ ಆದೇಶಿಸಲಾದಲ್ಲಿ ಸಂದರ್ಭಾನುಸಾರ ಜೀವನಾಂಶಕ್ಕಾಗಿ ಅಥವಾ ಮಧ್ಯಂತರ ಜೀವನಾಂಶಕ್ಕಾಗಿ ಮತ್ತು ವ್ಯವಹರಣೆಯ ವೆಚ್ಚಕ್ಕಾಗಿ ಅರ್ಜಿ ಸಲ್ಲಿಸಿದ್ದ ದಿನಾಂಕದಿಂದ ಸಂದಾಯ ಮಾಡತಕ್ಕದ್ದು.

(3) ಹಾಗೆ ಆದೇಶಿತನಾದ ಯಾರೇ ವ್ಯಕ್ತಿಯು ಸಾಕಷ್ಟು ಕಾರಣವಿಲ್ಲದೆ ಆದೇಶವನ್ನು ಪಾಲಿಸಲು ತಪ್ಪಿದರೆ, ಯಾರೇ ಅಂಥ ಮ್ಯಾಜಿಸ್ಟ್ರೇಟನು, ಆ ಆದೇಶದ ಪ್ರತಿಯೊಂದು ಉಲ್ಲಂಘನೆಗಾಗಿ ಸಂದಾಯವಾಗಬೇಕಾದ ಮೊಬಲಗನ್ನು ವಸೂಲು ಮಾಡುವುದಕ್ಕಾಗಿ ಜುಲ್ಮಾನೆಯನ್ನು ವಸೂಲು ಮಾಡಲು ಉಪಬಂಧಿಸಲಾದ ರೀತಿಯಲ್ಲಿ ವಾರಂಟನ್ನು ಹೊರಡಿಸಬಹುದು ಮತ್ತು ವಾರಂಟಿನ ಜಾರಿಯ ನಂತರ ಸಂದಾಯವಾಗದೆ ಉಳಿದಿರುವ ಪ್ರತಿ ತಿಂಗಳಿನ ಜೀವನಾಂಶದ ಅಥವಾ ಮಧ್ಯಂತರ ಜೀವನಾಂಶದ ಪೂರ್ಣ ಭತ್ಯೆಗಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಮತ್ತು ಸಂದರ್ಭಾನುಸಾರ ವ್ಯವಹರಣೆಯ

ವೆಚ್ಚಕ್ಕಾಗಿ ಒಂದು ತಿಂಗಳವರೆಗಿನ ಅಥವಾ ಸಂದಾಯವನ್ನು ಬೇಗ ಮಾಡಿದರೆ ಅಲ್ಲಿಯವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಗೆ ಅಂಥ ವ್ಯಕ್ತಿಗೆ ಆದೇಶವನ್ನು ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಯಾವುದೇ ಮೊಬಲಗಿನ ವಸೂಲಿಗಾಗಿ, ಅದು ಬಾಕಿಯಾದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅಂಥ ಮೊಬಲಗನ್ನು ವಸೂಲು ಮಾಡಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಹೊರತು, ಯಾವ ವಾರಂಟನ್ನೂ ಹೊರಡಿಸತಕ್ಕದ್ದಲ್ಲ:

ಮತ್ತು ಪರಂತು, ಅಂಥ ವ್ಯಕ್ತಿಯು ತನ್ನೊಡನೆ ವಾಸಿಸಬೇಕೆಂಬ ಷರತ್ತಿನ ಮೇಲೆ ತನ್ನ ಪತ್ನಿಯ ಜೀವನಾಂಶಕ್ಕೆ ಒಪ್ಪಿಕೊಂಡರೆ ಮತ್ತು ಅವಳು ಅವನೊಡನೆ ವಾಸಿಸಲು ನಿರಾಕರಿಸಿದರೆ ಅಂಥ ಮ್ಯಾಜಿಸ್ಟ್ರೇಟನು, ಅವಳು ಮಾಡಿದ ನಿರಾಕರಣೆಯ ಯಾವುದೇ ಕಾರಣವನ್ನು ಪರ್ಯಾಲೋಚಿಸಬಹುದು ಮತ್ತು ಹಾಗೆ ವ್ಯಕ್ತಿಯು ಹೇಳಿದ್ದರೂ ಈ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಹಾಗೆ ಮಾಡುವುದಕ್ಕೆ ನ್ಯಾಯೋಚಿತ ಕಾರಣವಿದೆಯೆಂದು ಮನದಟ್ಟಾದರೆ, ಆದೇಶವನ್ನು ಮಾಡಬಹುದು.

*ವಿವರಣೆ.-* ಒಬ್ಬ ಪತಿಯು ಇನ್ನೊಬ್ಬ ಸ್ತ್ರೀಯ ಜೊತೆ ವಿವಾಹವಾಗಿದ್ದರೆ ಅಥವಾ ಒಬ್ಬಳನ್ನು ಇಟ್ಟುಕೊಂಡಿದ್ದರೆ, ಅವನ ಪತ್ನಿಯು ಅವನೊಡನೆ ಜೀವಿಸಲು ನಿರಾಕರಿಸಿದುದಕ್ಕೆ ಅದನ್ನು ನ್ಯಾಯೋಚಿತ ಕಾರಣವೆಂಬುದಾಗಿ ಭಾವಿಸತಕ್ಕದ್ದು.

(4) ಪತ್ನಿಯು ವ್ಯಭಿಚಾರದಲ್ಲಿ ಜೀವಿಸುತ್ತಿದ್ದರೆ ಅಥವಾ ಯಾವುದೇ ಸಾಕಷ್ಟು ಕಾರಣವಿಲ್ಲದೆ ಅವಳು ತನ್ನ ಪತಿಯೊಡನೆ ಜೀವಿಸಲು ನಿರಾಕರಿಸಿದರೆ ಅಥವಾ ಅವರು ಪರಸ್ಪರ ಒಪ್ಪಿಗೆ ಮೂಲಕ ಪ್ರತ್ಯೇಕವಾಗಿ ಜೀವಿಸುತ್ತಿದ್ದರೆ, ಆಕೆಯು ತನ್ನ ಪತಿಯಿಂದ ಸಂದರ್ಭಾನುಸಾರ ಜೀವನಾಂಶಕ್ಕಾಗಿ ಅಥವಾ ಮಧ್ಯಂತರ ಜೀವನಾಂಶಕ್ಕಾಗಿ ಮತ್ತು ವ್ಯವಹರಣೆಯ ವೆಚ್ಚಕ್ಕಾಗಿ ಭತ್ಯೆಯನ್ನು ಪಡೆಯಲು ಹಕ್ಕುಳ್ಳವಳಾಗಿರತಕ್ಕದ್ದಲ್ಲ.

(5) ಯಾರ ಪರವಾಗಿ ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡಲಾಯಿತೋ, ಆ ಯಾರೇ ಪತ್ನಿಯು ವ್ಯಭಿಚಾರದಲ್ಲಿ ಜೀವಿಸುತ್ತಿರುವಳೆಂಬ ಅಥವಾ ಸಾಕಷ್ಟು ಕಾರಣವಿಲ್ಲದೆ ಅವಳು ತನ್ನ ಪತಿಯೊಡನೆ ಜೀವಿಸಲು ನಿರಾಕರಿಸುತ್ತಿರುವಳೆಂಬ ಅಥವಾ ಅವರು ಪರಸ್ಪರ ಒಪ್ಪಿಗೆಯ ಮೂಲಕ ಪ್ರತ್ಯೇಕವಾಗಿ ಜೀವಿಸುತ್ತಿರುವರೆಂಬ ರುಜುವಾತಿನ ಮೇಲೆ ಮ್ಯಾಜಿಸ್ಟ್ರೇಟನು ಆದೇಶವನ್ನು ರದ್ದು ಮಾಡತಕ್ಕದ್ದು.

**145. ಪ್ರಕ್ರಿಯೆ.-** (1) ಯಾರೇ ವ್ಯಕ್ತಿಯ ವಿರುದ್ಧ,-

(ಎ) ಅವನು ಇರುವ; ಅಥವಾ

(ಬಿ) ಅವನು ಅಥವಾ ಅವನ ಪತ್ನಿಯು ವಾಸಿಸುವ; ಅಥವಾ

(ಸಿ) ಅವನು ಸಂದರ್ಭಾನುಸಾರ, ತನ್ನ ಪತ್ನಿಯೊಡನೆ ಅಥವಾ ಜಾರಜ ಮಗುವಿನ ತಾಯಿಯೊಡನೆ ಕೊನೆಯಲ್ಲಿ ವಾಸಿಸಿದ; ಅಥವಾ

(ಡಿ) ಅವನ ತಂದೆ ಅಥವಾ ತಾಯಿ ವಾಸಿಸುವ

- ಯಾವುದೇ ಜಿಲ್ಲೆಯಲ್ಲಿ 144ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ನಡೆಸಬಹುದು.

(2) ಯಾರ ವಿರುದ್ಧವಾಗಿ ಜೀವನಾಂಶದ ಸಂದಾಯಕ್ಕಾಗಿ ಆದೇಶವನ್ನು ಮಾಡಲು ಪ್ರಸ್ತಾಪಿಸಲಾಗಿದೆಯೋ ಆ ವ್ಯಕ್ತಿಯ ಸಮ್ಮುಖದಲ್ಲಿ ಅಥವಾ ಅವನು ಖುದ್ದು ಹಾಜರಾಗುವುದನ್ನು ಮನ್ನಾ ಮಾಡಿದ್ದರೆ ಅವನ ನ್ಯಾಯವಾದಿಯ

ಸಮ್ಮುಖದಲ್ಲಿ ಅಂಥ ವ್ಯವಹರಣೆಗಳಲ್ಲಿನ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಸಮನ್-ಮೊಕದ್ದಮೆಗಳಿಗಾಗಿ ನಿಯಮಿಸಲಾದ ರೀತಿಯಲ್ಲಿ ಅವುಗಳನ್ನು ದಾಖಲಿಸತಕ್ಕದ್ದು:

ಪರಂತು, ಜೀವನಾಂಶದ ಸಂದಾಯಕ್ಕಾಗಿ ಯಾರ ವಿರುದ್ಧ ಆದೇಶವನ್ನು ಮಾಡಲು ಪ್ರಸ್ತಾಪಿಸಲಾಗಿದೆಯೋ ಆ ವ್ಯಕ್ತಿಯು ಜಾರಿಯನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದಾನೆಂದು ಅಥವಾ ನ್ಯಾಯಾಲಯದಲ್ಲಿ ಹಾಜರಾಗಲು ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ಮಾಡುತ್ತಿದ್ದಾನೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಆತನು ಏಕಪಕ್ಷೀಯವಾಗಿ ಮೊಕದ್ದಮೆಯನ್ನು ವಿಚಾರಣೆ ಮಾಡಲು ಮತ್ತು ನಿರ್ಧರಿಸಲು ಮುಂದುವರಿಯಬಹುದು ಮತ್ತು ಹಾಗೆ ಮಾಡಲಾದ ಯಾವುದೇ ಆದೇಶವನ್ನು, ಆದೇಶದ ದಿನಾಂಕದಿಂದ ಮೂರು ತಿಂಗಳೊಳಗೆ ಮಾಡಿದ ಅರ್ಜಿಯಲ್ಲಿ ತೋರಿಸಿದ ಉಚಿತ ಕಾರಣಕ್ಕಾಗಿ, ಮ್ಯಾಜಿಸ್ಟ್ರೇಟನು ನ್ಯಾಯೋಚಿತ ಮತ್ತು ಸೂಕ್ತವೆಂದು ಭಾವಿಸುವಂಥ ಖರ್ಚುಗಳನ್ನು ಎದುರು ಪಕ್ಷಕಾರನಿಗೆ ಸಂದಾಯ ಮಾಡಬೇಕೆನ್ನುವ ನಿಬಂಧನೆಯನ್ನು ಒಳಗೊಂಡಂತೆ ಅಂಥ ನಿಬಂಧನೆಗೆ ಒಳಪಟ್ಟು ರದ್ದು ಮಾಡಬಹುದು.

(3) ನ್ಯಾಯಾಲಯವು, 144ನೇ ಪ್ರಕರಣದ ಮೇರೆಗಿನ ಅರ್ಜಿಗಳೊಂದಿಗೆ ವ್ಯವಹರಿಸುತ್ತಿರುವಲ್ಲಿ ಖರ್ಚುಗಳಿಗೆ ಸಂಬಂಧಿಸಿದಂತೆ ನ್ಯಾಯೋಚಿತವಾದಂಥ ಆದೇಶವನ್ನು ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

**146. ಭತ್ಯೆಯಲ್ಲಿ ಬದಲಾವಣೆ.-** (1) 144ನೇ ಪ್ರಕರಣದ ಮೇರೆಗೆ ಜೀವನಾಂಶಕ್ಕಾಗಿ ಅಥವಾ ಸಂದರ್ಭಾನುಸಾರ, ಮಧ್ಯಂತರ ಜೀವನಾಂಶಕ್ಕಾಗಿ ಮಾಸಿಕ ಭತ್ಯೆಯನ್ನು ಪಡೆಯುತ್ತಿರುವ ಯಾರೇ ವ್ಯಕ್ತಿಯ ಅಥವಾ ತನ್ನ ಪತ್ನಿ, ಮಗು, ತಂದೆ ಅಥವಾ ತಾಯಿಗೆ ಜೀವನಾಂಶಕ್ಕಾಗಿ ಅಥವಾ ಮಧ್ಯಂತರ ಜೀವನಾಂಶಕ್ಕಾಗಿ ಮಾಸಿಕ ಭತ್ಯೆಯನ್ನು ಸಂದಾಯ ಮಾಡುವಂತೆ ಅದೇ ಪ್ರಕರಣದ ಮೇರೆಗೆ ಆದೇಶಿತನಾದ ಯಾರೇ ವ್ಯಕ್ತಿಯ ಸ್ಥಿತಿಗತಿಗಳಲ್ಲಿ ಆದ ಬದಲಾವಣೆಯು ರುಜುವಾತಾದ ಮೇಲೆ, ಮ್ಯಾಜಿಸ್ಟ್ರೇಟನು ಜೀವನಾಂಶ ಅಥವಾ ಮಧ್ಯಂತರ ಜೀವನಾಂಶಕ್ಕಾಗಿ ನೀಡುವ ಭತ್ಯೆಯಲ್ಲಿ ಸೂಕ್ತವೆಂದು ಭಾವಿಸುವಂಥ ಬದಲಾವಣೆಯನ್ನು ಮಾಡಬಹುದು.

(2) ಸಕ್ಷಮ ಸಿವಿಲ್ ನ್ಯಾಯಾಲಯದ ಯಾವುದೇ ತೀರ್ಮಾನದ ಪರಿಣಾಮವಾಗಿ 144ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ರದ್ದುಗೊಳಿಸಬೇಕು ಅಥವಾ ಬದಲಾವಣೆ ಮಾಡಬೇಕು ಎಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅವರು ಅದಕ್ಕನುಸಾರವಾಗಿ, ಸಂದರ್ಭಾನುಸಾರ, ಆ ಆದೇಶವನ್ನು ರದ್ದುಗೊಳಿಸತಕ್ಕದ್ದು ಅಥವಾ ಬದಲಾವಣೆ ಮಾಡತಕ್ಕದ್ದು.

(3) ತನ್ನ ಪತಿಯಿಂದ ವಿವಾಹ ವಿಚ್ಛೇದಿತಳಾದ ಅಥವಾ ವಿವಾಹ ವಿಚ್ಛೇದನ ಪಡೆದ ಮಹಿಳೆಯ ಪರವಾಗಿ 144ನೇ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡಿರುವಲ್ಲಿ, ಮ್ಯಾಜಿಸ್ಟ್ರೇಟನಿಗೆ,-

(ಎ) ಅಂಥ ವಿವಾಹ ವಿಚ್ಛೇದನದ ದಿನಾಂಕದ ಆನಂತರ ಆ ಮಹಿಳೆಯು ಪುನರ್ವಿವಾಹವಾಗಿದ್ದಾಳೆಂದು ಮನದಟ್ಟಾದರೆ, ಅವನು ಅವಳ ಪುನರ್ವಿವಾಹದ ದಿನಾಂಕದಿಂದ ಅಂಥ ಆದೇಶವನ್ನು ರದ್ದುಗೊಳಿಸತಕ್ಕದ್ದು;

(ಬಿ) ಮಹಿಳೆಯು ತನ್ನ ಪತಿಯಿಂದ ವಿವಾಹ ವಿಚ್ಛೇದಿತಳಾಗಿರುವಳೆಂದು ಮತ್ತು ತರುವಾಯ ಆ ಪಕ್ಷಕಾರನಿಗೆ ಅನ್ವಯವಾಗುವ ಯಾವುದೇ ರೂಢಿಗತ ಅಥವಾ ವೈಯಕ್ತಿಕ ಕಾನೂನಿನ ಮೇರೆಗೆ ಅಂಥ ವಿವಾಹ ವಿಚ್ಛೇದನವಾದ ನಂತರ ಸಂದಾಯವಾಗತಕ್ಕ ಪೂರ್ಣ ಮೊಬಲಗನ್ನು ಸದರಿ ಆದೇಶದ ದಿನಾಂಕದ ಮೊದಲು ಅಥವಾ ತರುವಾಯ ಅವಳು ಪಡೆದಿರುವಳೆಂದು ಮನದಟ್ಟಾದರೆ, ಅವನು,-

(i) ಅಂಥ ಆದೇಶಕ್ಕೆ ಮೊದಲು, ಅಂಥ ಮೊಬಲಗನ್ನು ಸಂದಾಯ ಮಾಡಿರುವ ಸಂದರ್ಭದಲ್ಲಿ, ಅಂಥ ಆದೇಶವನ್ನು ಮಾಡಲಾದ ದಿನಾಂಕದಿಂದ;

(ii) ಯಾವುದೇ ಇತರ ಸಂದರ್ಭದಲ್ಲಿ, ಪತಿಯು ಪತ್ನಿಗೆ ಜೀವನಾಂಶವನ್ನು ವಾಸ್ತವವಾಗಿ ಸಂದಾಯ ಮಾಡಿರುವ ಅವಧಿಯೇನಾದರೂ ಇದ್ದರೆ ಅದರ ಮುಕ್ತಾಯದ ದಿನಾಂಕದಿಂದ

- ಅಂಥ ಆದೇಶವನ್ನು ರದ್ದುಗೊಳಿಸತಕ್ಕದ್ದು.

(ಸಿ) ಮಹಿಳೆಯು ತನ್ನ ಪತಿಯಿಂದ ವಿವಾಹ ವಿಚ್ಛೇದನ ಪಡೆದಿರುವಳೆಂದು ಮತ್ತು ಅವಳು ತನ್ನ ವಿವಾಹ ವಿಚ್ಛೇದನದ ಅನಂತರ ಸಂದರ್ಭಾನುಸಾರ ಜೀವನಾಂಶದ ಅಥವಾ ಮಧ್ಯಂತರ ಜೀವನಾಂಶದ ಬಗೆಗಿನ ತನ್ನ ಹಕ್ಕುಗಳನ್ನು ಸ್ವಯಿಚ್ಛೆಯಿಂದ ಬಿಟ್ಟುಕೊಟ್ಟಿರುವಳೆಂದು ಮನದಟ್ಟಾದರೆ, ಬಿಟ್ಟುಕೊಟ್ಟ ದಿನಾಂಕದಿಂದ ಆ ಆದೇಶವನ್ನು ಅವನು ರದ್ದುಗೊಳಿಸತಕ್ಕದ್ದು.

(4) 144ನೇ ಪ್ರಕರಣದ ಮೇರೆಗೆ ಜೀವನಾಂಶಕ್ಕಾಗಿ ಮತ್ತು ಮಧ್ಯಂತರ ಜೀವನಾಂಶಕ್ಕಾಗಿ ಅಥವಾ ಅದರಲ್ಲಿ ಯಾವುದಾದರೂ ಒಂದಕ್ಕಾಗಿ ಮಾಸಿಕ ಭತ್ಯೆಯನ್ನು ಯಾರಿಗೆ ಸಂದಾಯ ಮಾಡಬೇಕೆಂದು ಆದೇಶಿಸಲಾಗಿದೆಯೋ ಆ ಯಾರೇ ವ್ಯಕ್ತಿಯ ಪರವಾಗಿ ಯಾವುದೇ ಜೀವನಾಂಶ ಅಥವಾ ವಧು-ವರದಕ್ಷಿಣೆ ವಸೂಲಿಗಾಗಿ ಯಾವುದೇ ಡಿಕ್ರಿಯನ್ನು ಮಾಡುವ ಸಮಯದಲ್ಲಿ, ಸದರಿ ಆದೇಶದ ಅನುಸಾರವಾಗಿ ಜೀವನಾಂಶಕ್ಕಾಗಿ ಮತ್ತು ಸಂದರ್ಭಾನುಸಾರ ಮಧ್ಯಂತರ ಜೀವನಾಂಶಕ್ಕಾಗಿ ಅಥವಾ ಅದರಲ್ಲಿ ಯಾವುದಾದರೂ ಒಂದಕ್ಕಾಗಿ ಮಾಸಿಕ ಭತ್ಯೆಯಾಗಿ ಅಂಥ ವ್ಯಕ್ತಿಗೆ ಸಂದಾಯ ಮಾಡಿರುವ ಅಥವಾ ಅಂಥ ವ್ಯಕ್ತಿಯು ವಸೂಲು ಮಾಡಿಕೊಂಡಿರುವ ಮೊಬಲಗನ್ನು ಸಿವಿಲ್ ನ್ಯಾಯಾಲಯವು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

**147. ಜೀವನಾಂಶ ಆದೇಶದ ಜಾರಿ.-** ಸಂದರ್ಭಾನುಸಾರ ಜೀವನಾಂಶದ ಅಥವಾ ಮಧ್ಯಂತರ ಜೀವನಾಂಶದ ಮತ್ತು ವ್ಯವಹರಣೆಯ ವೆಚ್ಚದ ಆದೇಶದ ಪ್ರತಿಯನ್ನು ಯಾರ ಪರವಾಗಿ ಅದನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಅವನ ಪೋಷಕರು ಯಾರಾದರೂ ಇದ್ದರೆ ಅವರಿಗೆ ಅಥವಾ ಯಾರಿಗೆ ಸಂದರ್ಭಾನುಸಾರ, ಜೀವನಾಂಶಕ್ಕಾಗಿ ಅಥವಾ ಮಧ್ಯಂತರ ಜೀವನಾಂಶಕ್ಕಾಗಿ ಮತ್ತು ವ್ಯವಹರಣೆಯ ವೆಚ್ಚಕ್ಕಾಗಿ ಭತ್ಯೆಯನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಗೆ ಉಚಿತವಾಗಿ ಕೊಡತಕ್ಕದ್ದು ಮತ್ತು ಅಂಥ ಆದೇಶವನ್ನು ಯಾರ ವಿರುದ್ಧವಾಗಿ ಮಾಡಲಾಗಿದೆಯೋ ಆ ವ್ಯಕ್ತಿಯು ಇರಬಹುದಾದ ಯಾವುದೇ ಸ್ಥಳದಲ್ಲಿನ ಯಾರೇ ಮ್ಯಾಜಿಸ್ಟ್ರೇಟನು, ಪಕ್ಷಕಾರರ ಗುರುತಿನ ಬಗ್ಗೆ ಮತ್ತು ಬಾಕಿಯಿರುವ ಭತ್ಯೆಯನ್ನು ಅಥವಾ ಸಂದರ್ಭಾನುಸಾರ, ವೆಚ್ಚವನ್ನು ಸಂದಾಯ ಮಾಡದಿರುವ ಬಗ್ಗೆ ಅಂಥ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅದನ್ನು ಜಾರಿಮಾಡಬಹುದು.

## ಅಧ್ಯಾಯ XI

## ಸಾರ್ವಜನಿಕ ಸುವ್ಯವಸ್ಥೆ ಮತ್ತು ನೆಮ್ಮದಿ ಕಾಪಾಡುವಿಕೆ

### *ಎ.- ಕಾನೂನುಬಾಹಿರ ಕೂಟಗಳು*

**148. ನಾಗರಿಕ ಬಲವನ್ನುಪಯೋಗಿಸಿ ಕೂಟವನ್ನು ಚದುರಿಸುವುದು.-** (1) ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಅಥವಾ ಅಂಥ ಅಧಿಕಾರಿಯ

ಗೈರುಹಾಜರಿಯಲ್ಲಿ, ಸಬ್-ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಯಾರೇ ಪೊಲೀಸ್ ಅಧಿಕಾರಿಯು, ಯಾವುದೇ ಕಾನೂನುಬಾಹಿರ ಕೂಟಕ್ಕೆ ಅಥವಾ ಸಾರ್ವಜನಿಕ ಶಾಂತಿಗೆ ತೊಂದರೆಯುಂಟು ಮಾಡುವ ಸಂಭವವಿರುವ ಐದು ಅಥವಾ ಹೆಚ್ಚು ವ್ಯಕ್ತಿಗಳ ಕೂಟಕ್ಕೆ ಚದುರುವಂತೆ ಆಜ್ಞೆ ಹೊರಡಿಸಬಹುದು ಮತ್ತು ಆನಂತರ ತದನುಸಾರವಾಗಿ ಚದುರುವುದು ಅಂಥ ಕೂಟದ ಸದಸ್ಯರ ಕರ್ತವ್ಯವಾಗಿರತಕ್ಕದ್ದು.

(2) ಹಾಗೆ ಆಜ್ಞೆ ಹೊರಡಿಸಿದ ಮೇಲೆ ಅಂಥ ಯಾವುದೇ ಕೂಟವು ಚದುರದಿದ್ದರೆ ಅಥವಾ ಹಾಗೆ ಆಜ್ಞೆ ಹೊರಡಿಸದೆ ಚದುರದಿರುವ ನಿರ್ಧಾರವನ್ನು ತೋರಿಸುವಂಥ ರೀತಿಯಲ್ಲಿ ಕೂಟವು ವರ್ತಿಸಿದರೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸ್ ಅಧಿಕಾರಿಯು, ಅಂಥ ಕೂಟವನ್ನು ಬಲಪ್ರಯೋಗದಿಂದ ಚದುರಿಸಲು ಕಾರ್ಯಪ್ರವೃತ್ತನಾಗಬಹುದು ಮತ್ತು ಅಂಥ ಕೂಟವನ್ನು ಚದುರಿಸುವ ಉದ್ದೇಶಕ್ಕಾಗಿ ಮತ್ತು ಅವಶ್ಯಕವಾದಲ್ಲಿ, ಅಂಥ ಕೂಟವನ್ನು ಚದುರಿಸುವ ಸಲುವಾಗಿ ಅಥವಾ ಅದಕ್ಕೆ ಸೇರಿರುವ ವ್ಯಕ್ತಿಗಳನ್ನು ಕಾನೂನಿಗನುಸಾರವಾಗಿ ದಂಡಿಸುವುದಕ್ಕೋಸ್ಕರ ದಸ್ತಗಿರಿ ಮಾಡಲು ಮತ್ತು ಬಂಧಿಸಲು ಸಶಸ್ತ್ರ ಬಲಗಳ ಅಧಿಕಾರಿಯಾಗಿರದ ಅಥವಾ ಸದಸ್ಯನಾಗಿರದ ಮತ್ತು ಹಾಗೆ ಕಾರ್ಯಶೀಲನಾಗಿರುವ ಯಾರೇ ಪುರುಷನ ಸಹಾಯವನ್ನು ಅಗತ್ಯಪಡಿಸಬಹುದು.

**149. ಕೂಟವನ್ನು ಚದುರಿಸಲು ಸಶಸ್ತ್ರ ಬಲಗಳ ಬಳಕೆ.-** (1) 148ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಕೂಟವು ಅನ್ಯಥಾ ರೀತಿಯಲ್ಲಿ ಚದುರದಿದ್ದರೆ ಮತ್ತು ಸಾರ್ವಜನಿಕ ಭದ್ರತೆಗಾಗಿ ಅದನ್ನು ಚದುರಿಸಲೇಬೇಕಾದುದು ಅವಶ್ಯವಾದರೆ, ಹಾಜರಿರುವ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಆತನಿಂದ ಅಧಿಕೃತನಾದ ಯಾರೇ ಇತರ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಸಶಸ್ತ್ರ ಬಲಗಳ ಮೂಲಕ ಅದನ್ನು ಚದುರಿಸುವಂತೆ ಮಾಡಬಹುದು.

(2) ಅಂಥ ಮ್ಯಾಜಿಸ್ಟ್ರೇಟನು, ಸಶಸ್ತ್ರ ಬಲಗಳಿಗೆ ಸೇರಿರುವ ವ್ಯಕ್ತಿಗಳ ಯಾವುದೇ ಸಮೂಹದ ಮೇಲೆ ಅಧಿಕಾರ ಹೊಂದಿರುವ ಯಾರೇ ಅಧಿಕಾರಿಯನ್ನು, ಆತನ ಅಧೀನದಲ್ಲಿರುವ ಸಶಸ್ತ್ರ ಬಲದ ನೆರವಿನೊಂದಿಗೆ ಕೂಟವನ್ನು ಚದುರಿಸಲು ಮತ್ತು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ನಿರ್ದೇಶಿಸಬಹುದಾದಂತೆ ಅದಕ್ಕೆ ಸೇರಿದ ವ್ಯಕ್ತಿಗಳನ್ನು ದಸ್ತಗಿರಿ ಮಾಡಲು ಮತ್ತು ಬಂಧಿಸಲು ಅಥವಾ ಕೂಟವನ್ನು ಚದುರಿಸುವುದಕ್ಕೋಸ್ಕರ ಅಥವಾ ಕಾನೂನಿಗನುಸಾರವಾಗಿ ಅವರನ್ನು ದಂಡಿಸುವುದಕ್ಕೋಸ್ಕರ ಅವಶ್ಯವಾಗಬಹುದಾದಂತೆ ಅದಕ್ಕೆ ಸೇರಿದಂಥ ವ್ಯಕ್ತಿಗಳನ್ನು ದಸ್ತಗಿರಿ ಮಾಡಲು ಮತ್ತು ಬಂಧಿಸಲು ಅಗತ್ಯಪಡಿಸಬಹುದು.

(3) ಸಶಸ್ತ್ರ ಬಲಗಳ ಅಂಥ ಪ್ರತಿಯೊಬ್ಬ ಅಧಿಕಾರಿಯು ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಅಂಥ ಕೋರಿಕೆಯನ್ನು ಪಾಲಿಸತಕ್ಕದ್ದು, ಆದರೆ ಹಾಗೆ ಮಾಡುವಲ್ಲಿ ಆದಷ್ಟು ಕಡಿಮೆ ಬಲವನ್ನು ಉಪಯೋಗಿಸತಕ್ಕದ್ದು ಮತ್ತು ಕೂಟವನ್ನು ಚದುರಿಸುವುದಕ್ಕಾಗಿ ಮತ್ತು ಅಂಥ ವ್ಯಕ್ತಿಗಳನ್ನು ದಸ್ತಗಿರಿ ಮಾಡಲು ಮತ್ತು ತಡೆಹಿಡಿದಿಡಲು ಸಂಗತವಾಗುವಷ್ಟರ ಮಟ್ಟಿಗೆ ಅಂಥ ವ್ಯಕ್ತಿಗೆ ಮತ್ತು ಸ್ವತ್ತಿಗೆ ಕಡಿಮೆ ಕ್ಷತಿಯಾಗುವಂತೆ ನೋಡಿಕೊಳ್ಳತಕ್ಕದ್ದು.

**150. ಕೂಟವನ್ನು ಚದುರಿಸಲು ಸಶಸ್ತ್ರ ಬಲದ ಕೆಲವು ಅಧಿಕಾರಿಗಳ ಅಧಿಕಾರ.-** ಯಾವುದೇ ಅಂಥ ಕೂಟದಿಂದ ಸಾರ್ವಜನಿಕ ಭದ್ರತೆಗೆ ಸ್ಪಷ್ಟವಾಗಿ ಅಪಾಯ ಉಂಟಾದಾಗ ಮತ್ತು ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನೊಂದಿಗೆ ಸಂಪರ್ಕ ಪಡೆಯಲು ಸಾಧ್ಯವಾಗದಿದ್ದಾಗ, ಸಶಸ್ತ್ರ ಬಲಗಳ ಯಾರೇ ಕಮಿಷನ್ಡ್ ಅಥವಾ ಗೆಜೆಟೆಡ್ ಅಧಿಕಾರಿಯು ತನ್ನ ಅಧೀನದಲ್ಲಿರುವ ಸಶಸ್ತ್ರ ಬಲಗಳ ನೆರವಿನೊಂದಿಗೆ ಅಂಥ ಕೂಟವನ್ನು ಚದುರಿಸಬಹುದು ಮತ್ತು ಅಂಥ ಕೂಟವನ್ನು

ಚದುರಿಸುವುದಕ್ಕೋಸ್ಕರ ಅಥವಾ ಕಾನೂನಿಗನುಸಾರವಾಗಿ ಅವರನ್ನು ದಂಡಿಸುವುದಕ್ಕೋಸ್ಕರ ಅದಕ್ಕೆ ಸೇರಿದ ವ್ಯಕ್ತಿಗಳನ್ನು ದಸ್ತಗಿರಿ ಮಾಡಬಹುದು ಮತ್ತು ಬಂಧಿಸಬಹುದು, ಆದರೆ, ಈ ಪ್ರಕರಣದ ಮೇರೆಗೆ ಅವನು ಕಾರ್ಯಶೀಲನಾಗಿರುವಾಗ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನೊಂದಿಗೆ ಸಂಪರ್ಕ ಹೊಂದಲು ಅವನಿಗೆ ಸಾಧ್ಯವಾದರೆ ಅವನು ಹಾಗೆ ಮಾಡತಕ್ಕದ್ದು ಮತ್ತು ಆನಂತರ ಅಂಥ ಕಾರ್ಯಗಳನ್ನು ಮುಂದುವರಿಸತಕ್ಕದ್ದೇ ಅಥವಾ ಬೇಡವೇ ಎಂಬ ಬಗ್ಗೆ ಮ್ಯಾಜಿಸ್ಟ್ರೇಟನ ಅನುದೇಶಗಳನ್ನು ಪಾಲಿಸತಕ್ಕದ್ದು.

**151. ಪ್ರಕರಣ 148, 149 ಮತ್ತು 150ರ ಮೇರೆಗೆ ಮಾಡಲಾದ ಕಾರ್ಯಗಳಿಗಾಗಿ ಪ್ರಾಸಿಕ್ಯೂಷನ್‌ಗೆ ರಕ್ಷಣೆ.-** (1) 148, 149 ಅಥವಾ 150ನೇ ಪ್ರಕರಣದ ಮೇರೆಗೆ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಪ್ರಾಸಿಕ್ಯೂಷನನ್ನು,-

(ಎ) ಅಂಥ ವ್ಯಕ್ತಿಯು ಸಶಸ್ತ್ರ ಬಲದ ಅಧಿಕಾರಿ ಅಥವಾ ಸದಸ್ಯನಾಗಿರುವಲ್ಲಿ, ಕೇಂದ್ರ ಸರ್ಕಾರದ ಮಂಜೂರಾತಿಯಿದ್ದ ಹೊರತು;

(ಬಿ) ಇತರ ಯಾವುದೇ ಸಂದರ್ಭದಲ್ಲಿ, ರಾಜ್ಯ ಸರ್ಕಾರದ ಮಂಜೂರಾತಿಯಿದ್ದ ಹೊರತು

- ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ.

(2) (ಎ) ಸದರಿ ಪ್ರಕರಣಗಳಲ್ಲಿ ಯಾವುದರ ಮೇರೆಗಾದರೂ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸ್ ಅಧಿಕಾರಿಯು;

(ಬಿ) 148 ಅಥವಾ 149ನೇ ಪ್ರಕರಣದ ಮೇರೆಗೆ ಕೋರಿಕೆಯ ಅನುಸಾರವಾಗಿ ಸದ್ಭಾವನೆಯಿಂದ ಯಾವುದೇ ಕಾರ್ಯವನ್ನು ಮಾಡುವ ಯಾರೇ ವ್ಯಕ್ತಿಯು;

(ಸಿ) 150ನೇ ಪ್ರಕರಣದ ಮೇರೆಗೆ ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ಸಶಸ್ತ್ರ ಬಲದ ಯಾರೇ ಅಧಿಕಾರಿಯು;

(ಡಿ) ತಾನು ಪಾಲಿಸಲು ಬದ್ಧನಾಗಿರುವ ಆದೇಶಕ್ಕೆ ವಿಧೇಯನಾಗಿ ಯಾವುದೇ ಕಾರ್ಯವನ್ನು ಮಾಡುವ ಸಶಸ್ತ್ರ ಬಲದ ಯಾರೇ ಸದಸ್ಯನು

- ಆ ಮೂಲಕ ಅಪರಾಧವನ್ನು ಮಾಡಿರುವನೆಂದು ಭಾವಿಸತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿ ಮತ್ತು ಈ ಅಧ್ಯಾಯದ ಹಿಂದಿನ ಪ್ರಕರಣಗಳಲ್ಲಿ,-

(ಎ) "ಸಶಸ್ತ್ರ ಬಲಗಳು" ಎಂದರೆ, ಭೂದಳಗಳಾಗಿ ಕಾರ್ಯನಿರ್ವಹಿಸುವ ಭೂ ಸೇನೆ, ನೌಕಾಸೇನೆ ಮತ್ತು ವಾಯು ಸೇನೆಗಳು ಮತ್ತು ಈ ಪದಾವಳಿಯು ಹಾಗೆ ಕಾರ್ಯನಿರ್ವಹಿಸುವ ಕೇಂದ್ರದ ಇತರ ಸಶಸ್ತ್ರ ಬಲಗಳನ್ನು ಒಳಗೊಳ್ಳುತ್ತದೆ;

(ಬಿ) ಸಶಸ್ತ್ರ ಬಲಗಳಿಗೆ ಸಂಬಂಧಿಸಿದಂತೆ "ಅಧಿಕಾರಿ" ಎಂದರೆ, ಕಮಿಷನ್ಡ್, ಗೆಜೆಟೆಡ್ ಅಥವಾ ಸಶಸ್ತ್ರ ಬಲದಲ್ಲಿ ಅಧಿಕಾರಿಯಾಗಿ ವೇತನ ಪಡೆಯುವ ಅಧಿಕಾರಿ ಮತ್ತು ಆ ಪದವು ಕಿರಿಯ ಕಮಿಷನ್ಡ್ ಅಧಿಕಾರಿ, ವಾರಂಟ್ ಅಧಿಕಾರಿ, ಸಣ್ಣ ಅಧಿಕಾರಿ, ನಾನ್-ಕಮಿಷನ್ಡ್ ಅಧಿಕಾರಿ ಮತ್ತು ನಾನ್-ಗೆಜೆಟೆಡ್ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಸಿ) ಸಶಸ್ತ್ರ ಬಲಗಳಿಗೆ ಸಂಬಂಧಿಸಿದಂತೆ "ಸದಸ್ಯ" ಎಂದರೆ, ಸಶಸ್ತ್ರ ಬಲದಲ್ಲಿರುವ, ಆದರೆ ಅಧಿಕಾರಿಯಲ್ಲದ ಇತರ ವ್ಯಕ್ತಿ.

*ಬಿ.- ಸಾರ್ವಜನಿಕ ಉಪದ್ರವಗಳು*

**152. ಉಪದ್ರವದ ನಿವಾರಣೆಗಾಗಿ ಷರತ್ತುಬದ್ಧ ಆದೇಶ.-** (1) ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಉಪವಿಭಾಗದ ಮ್ಯಾಜಿಸ್ಟ್ರೇಟನು ಅಥವಾ ರಾಜ್ಯ ಸರ್ಕಾರದಿಂದ ಈ ಬಗ್ಗೆ ವಿಶೇಷವಾಗಿ ಅಧಿಕಾರ ಪಡೆದ ಇತರ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು, ಪೊಲೀಸ್ ಅಧಿಕಾರಿಯ ವರದಿಯನ್ನು ಅಥವಾ ಇತರ ಮಾಹಿತಿಯನ್ನು ಪಡೆದ ಮೇಲೆ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಸಾಕ್ಷ್ಯವನ್ನು (ಯಾವುದಾದರೂ ಇದ್ದರೆ) ತೆಗೆದುಕೊಂಡ ಮೇಲೆ,-

(ಎ) ಸಾರ್ವಜನಿಕರು ಕಾನೂನುಬದ್ಧವಾಗಿ ಉಪಯೋಗಿಸುವ ಅಥವಾ ಉಪಯೋಗಿಸಬಹುದಾದ ಯಾವುದೇ ಸಾರ್ವಜನಿಕ ಸ್ಥಳದಿಂದ ಅಥವಾ ಯಾವುದೇ ದಾರಿ, ನದಿ ಅಥವಾ ನಾಲೆಯಿಂದ ಯಾವುದೇ ಕಾನೂನುಬಾಹಿರ ಅಡಚಣೆ ಅಥವಾ ಉಪದ್ರವವನ್ನು ನಿವಾರಿಸತಕ್ಕದ್ದೆಂದು; ಅಥವಾ

(ಬಿ) ಯಾವುದೇ ವ್ಯಾಪಾರ ಅಥವಾ ವೃತ್ತಿಯನ್ನು ನಡೆಸುವುದು ಅಥವಾ ಯಾವುದೇ ಸರಕು ಅಥವಾ ವಾಣಿಜ್ಯ ಸರಕುಗಳನ್ನು ಇಟ್ಟುಕೊಳ್ಳುವುದು ಜನಸಮುದಾಯದ ಆರೋಗ್ಯ ಅಥವಾ ದೈಹಿಕ ಸುಖಕ್ಕೆ ಹಾನಿಕರವಾದುದೆಂದು ಮತ್ತು ಅದರ ಪರಿಣಾಮವಾಗಿ ಅಂಥ ವ್ಯಾಪಾರ ಅಥವಾ ವೃತ್ತಿಯನ್ನು ನಿಷೇಧಿಸತಕ್ಕದ್ದು ಅಥವಾ ನಿಯಂತ್ರಿಸತಕ್ಕದ್ದೆಂದು ಅಥವಾ ಅಂಥ ಸರಕು ಅಥವಾ ವಾಣಿಜ್ಯ ಸರಕುಗಳನ್ನು ಸಾಗಿಸತಕ್ಕದ್ದೆಂದು ಅಥವಾ ಅದನ್ನು ಇಟ್ಟುಕೊಳ್ಳುವುದನ್ನು ನಿಯಂತ್ರಿಸತಕ್ಕದ್ದೆಂದು; ಅಥವಾ

(ಸಿ) ಬೆಂಕಿ ಹೊತ್ತಿಕೊಳ್ಳುವ ಅಥವಾ ಸ್ಫೋಟಗೊಳ್ಳುವ ಸಂಭವವಿರುವ ಯಾವುದೇ ಕಟ್ಟಡದ ನಿರ್ಮಾಣವನ್ನು ಅಥವಾ ಯಾವುದೇ ಪದಾರ್ಥದ ವಿಲೆಯನ್ನು ತಡೆಹಿಡಿಯತಕ್ಕದ್ದೆಂದು ಅಥವಾ ನಿಲ್ಲಿಸತಕ್ಕದ್ದೆಂದು; ಅಥವಾ

(ಡಿ) ಯಾವುದೇ ಕಟ್ಟಡ, ಡೇರೆ ಅಥವಾ ನಿರ್ಮಾಣವು ಅಥವಾ ಯಾವುದೇ ಮರವು ಬೀಳುವ ಮತ್ತು ಅದರಿಂದ ನೆರೆಹೊರೆಯಲ್ಲಿ ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಹಾದುಹೋಗುತ್ತಿರುವ ವ್ಯಕ್ತಿಗಳಿಗೆ ಕ್ಷತಿಯುಂಟುಮಾಡುವ ಸಂಭವವಿರುವಂಥ ಸ್ಥಿತಿಯಲ್ಲಿದ್ದು ಮತ್ತು ಅದರ ಪರಿಣಾಮವಾಗಿ ಅಂಥ ಕಟ್ಟಡ, ಡೇರೆ ಅಥವಾ ನಿರ್ಮಾಣವನ್ನು ತೆಗೆದುಹಾಕುವುದು, ದುರಸ್ತಿ ಮಾಡುವುದು ಅಥವಾ ಊರೆ ಕೊಡುವುದು ಅಥವಾ ಅಂಥ ಮರವನ್ನು ತೆಗೆದುಹಾಕುವುದು ಅಥವಾ ಅದಕ್ಕೆ ಊರೆ ಕೊಡುವುದು ಅವಶ್ಯಕವೆಂದು; ಅಥವಾ

(ಇ) ಸಾರ್ವಜನಿಕರಿಗೆ ಉಂಟಾಗುವ ಅಪಾಯವನ್ನು ತಡೆಹಿಡಿಯುವಂಥ ರೀತಿಯಲ್ಲಿ ಇರುವ, ಅಂಥ ಯಾವುದೇ ಮಾರ್ಗ ಅಥವಾ ಸಾರ್ವಜನಿಕ ಸ್ಥಳದ ಪಕ್ಕದಲ್ಲಿರುವ ಯಾವುದೇ ಕೆರೆಗೆ, ಬಾವಿಗೆ ಅಥವಾ ಗುಂಡಿಗಳಿಗೆ ಬೇಲಿ ಹಾಕತಕ್ಕದ್ದೆಂದು; ಅಥವಾ

(ಎಫ್) ಯಾವುದೇ ಅಪಾಯಕರವಾದ ಪ್ರಾಣಿಯನ್ನು ನಾಶಗೊಳಿಸತಕ್ಕದ್ದು, ಬಂಧಿಸತಕ್ಕದ್ದು ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದೆಂದು

- ಪರ್ಯಾಲೋಚಿಸಿದರೆ, ಅಂಥ ಮ್ಯಾಜಿಸ್ಟ್ರೇಟನು ಅಂಥ ಅಡಚಣೆ ಅಥವಾ ಉಪದ್ರವವನ್ನುಂಟು ಮಾಡುವ ಅಥವಾ ಅಂಥ ವ್ಯಾಪಾರ ಅಥವಾ ವೃತ್ತಿಯನ್ನು ನಡೆಸುತ್ತಿರುವ ಅಥವಾ ಅಂಥ ಸರಕು ಅಥವಾ ವಾಣಿಜ್ಯ ಸರಕನ್ನು ಇಟ್ಟುಕೊಂಡಿರುವ ಅಥವಾ ಅಂಥ ಕಟ್ಟಡ, ಡೇರೆ, ನಿರ್ಮಾಣ, ಪದಾರ್ಥ, ಕೆರೆ, ಬಾವಿ ಅಥವಾ ಗುಂಡಿಯ ಒಡೆತನವನ್ನು ಹೊಂದಿರುವ ಅಥವಾ

ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಅಥವಾ ನಿಯಂತ್ರಿಸುವ ಅಥವಾ ಅಂಥ ಪ್ರಾಣಿ ಅಥವಾ ಮರದ ಒಡೆತನ ಹೊಂದಿರುವ ಅಥವಾ ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಗೆ, ಆದೇಶದಲ್ಲಿ ಗೊತ್ತುಪಡಿಸಿರುವ ಸಮಯದೊಳಗಾಗಿ,-

(i) ಅಂಥ ಅಡಚಣೆ ಅಥವಾ ಉಪದ್ರವವನ್ನು ನಿವಾರಿಸಲು; ಅಥವಾ

(ii) ಅಂಥ ವ್ಯಾಪಾರ ಅಥವಾ ವೃತ್ತಿಯನ್ನು ನಡೆಸುವುದನ್ನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಬಿಟ್ಟುಬಿಡಲು ಅಥವಾ ಸ್ಥಳಾಂತರಿಸಲು ಅಥವಾ ನಿಯಂತ್ರಿಸಲು ಅಥವಾ ಅಂಥ ಸರಕುಗಳನ್ನು ಅಥವಾ ವಾಣಿಜ್ಯ ಸರಕುಗಳನ್ನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಸಾಗಿಸಲು ಅಥವಾ ಅದನ್ನು ಇಟ್ಟುಕೊಳ್ಳುವುದನ್ನು ನಿಯಂತ್ರಿಸಲು; ಅಥವಾ

(iii) ಅಂಥ ಕಟ್ಟಡದ ನಿರ್ಮಾಣವನ್ನು ತಡೆಹಿಡಿಯಲು ಅಥವಾ ನಿಲ್ಲಿಸಲು ಅಥವಾ ಅಂಥ ಪದಾರ್ಥದ ವಿಲೆಯ ರೀತಿಯನ್ನು ಬದಲಾಯಿಸಲು; ಅಥವಾ

(iv) ಅಂಥ ಕಟ್ಟಡ, ಡೇರೆ ಅಥವಾ ನಿರ್ಮಾಣವನ್ನು ತೆಗೆದುಹಾಕಲು, ದುರಸ್ತಿ ಮಾಡಲು ಅಥವಾ ಅವಕ್ಕೆ ಊರೆ ಕೊಡಲು ಅಥವಾ ಅಂಥ ಮರಗಳನ್ನು ತೆಗೆದುಹಾಕಲು ಅಥವಾ ಅವಕ್ಕೆ ಊರೆ ಕೊಡಲು; ಅಥವಾ

(v) ಅಂಥ ಕೆರೆ, ಬಾವಿ ಅಥವಾ ಗುಂಡಿಗಳಿಗೆ ಬೇಲಿ ಹಾಕಲು; ಅಥವಾ

(vi) ಸದರಿ ಆದೇಶದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಅಂಥ ಅಪಾಯಕಾರಿ ಪ್ರಾಣಿಯನ್ನು ನಾಶಗೊಳಿಸಲು, ಬಂಧಿಸಲು ಅಥವಾ ವಿಲೆ ಮಾಡಲು

- ಅಥವಾ ಅವರು ಹಾಗೆ ಮಾಡಲು ಆಕ್ಷೇಪಿಸಿದರೆ, ತನ್ನ ಮುಂದೆ ಅಥವಾ ತನಗೆ ಅಧೀನನಾಗಿರುವ ಇತರ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನ ಮುಂದೆ ಆದೇಶದಲ್ಲಿ ಗೊತ್ತುಪಡಿಸಲಾದ ಸಮಯ ಹಾಗೂ ಸ್ಥಳದಲ್ಲಿ ಹಾಜರಾಗಲು ಮತ್ತು ಆದೇಶವನ್ನು ಏಕೆ ಅಂತಿಮಗೊಳಿಸಬಾರದೆಂಬುದಕ್ಕೆ, ಇದರಲ್ಲಿ ಈ ಮುಂದೆ ಉಪಬಂಧಿಸಿದ ರೀತಿಯಲ್ಲಿ, ಕಾರಣ ತೋರಿಸುವಂತೆ ಷರತ್ತುಬದ್ಧ ಆದೇಶವನ್ನು ಮಾಡಬಹುದು.

(2) ಈ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಯುಕ್ತವಾಗಿ ಮಾಡಿದ ಯಾವುದೇ ಆದೇಶವನ್ನು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

*ವಿವರಣೆ.-* "ಸಾರ್ವಜನಿಕ ಸ್ಥಳ" ಎಂಬುದು ರಾಜ್ಯಕ್ಕೆ ಸೇರಿದ ಸ್ವತ್ತು, ಶಿಬಿರಾಂಗಣಗಳು ಮತ್ತು ನೈರ್ಮಲ್ಯ ಅಥವಾ ಮನೋರಂಜಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳದೇ ಇರುವ ಮೈದಾನಗಳನ್ನು ಸಹ ಒಳಗೊಳ್ಳುತ್ತದೆ.

**153. ಆದೇಶದ ಜಾರಿ ಅಥವಾ ಅಧಿಸೂಚನೆ.-** (1) ಆದೇಶವನ್ನು ಯಾರ ವಿರುದ್ಧ ಮಾಡಲಾಗಿದೆಯೋ ಆ ವ್ಯಕ್ತಿಗೆ ಜಾರಿ ಮಾಡಲು ಕಾರ್ಯಸಾಧ್ಯವಾಗಿದ್ದರೆ, ಇದರಲ್ಲಿ ಸಮನುಗಳ ಜಾರಿಗಾಗಿ ಉಪಬಂಧಿಸಲಾದ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು.

(2) ಅಂಥ ಆದೇಶವನ್ನು ಹಾಗೆ ಜಾರಿಗೊಳಿಸಲು ಆಗದಿದ್ದರೆ, ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸಿದ ಉದ್ಘೋಷಣೆಯ ಮೂಲಕ ಅದನ್ನು ಅಧಿಸೂಚಿಸತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ಮಾಹಿತಿಯನ್ನು ತಿಳಿಸಲು ಅತ್ಯಂತ ಯೋಗ್ಯವಾಗಿರಬಹುದಾದಂಥ ಸ್ಥಳ ಅಥವಾ ಸ್ಥಳಗಳಲ್ಲಿ ಅದರ ಪ್ರತಿಯನ್ನು ಅಂಟಿಸತಕ್ಕದ್ದು.

**154. ಆದೇಶವನ್ನು ಯಾವ ವ್ಯಕ್ತಿಗೆ ಸಂಬೋಧಿಸಲಾಗಿದೆಯೋ, ಆ ವ್ಯಕ್ತಿಯು ಆದೇಶವನ್ನು ಪಾಲಿಸುವುದು ಅಥವಾ ಕಾರಣವನ್ನು ತೋರಿಸುವುದು.-** ಯಾರ ವಿರುದ್ಧ ಅಂಥ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು,-

(ಎ) ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಸಮಯದೊಳಗಾಗಿ ಹಾಗೂ ರೀತಿಯಲ್ಲಿ ಅದರಲ್ಲಿ ನಿರ್ದೇಶಿತವಾದ ಕಾರ್ಯವನ್ನು ನಿರ್ವಹಿಸತಕ್ಕದ್ದು; ಅಥವಾ

(ಬಿ) ಅಂಥ ಆದೇಶಕ್ಕನುಸಾರವಾಗಿ ಹಾಜರಾಗತಕ್ಕದ್ದು ಮತ್ತು ಅದರ ವಿರುದ್ಧ ಕಾರಣ ತೋರಿಸತಕ್ಕದ್ದು ಮತ್ತು ಅಂಥ ಹಾಜರಾತಿ ಅಥವಾ ಸುನಾವಣೆಯನ್ನು ಆಡಿಯೋ-ವೀಡಿಯೋ ಕಾನ್ಫರೆನ್ಸ್ ಮುಖಾಂತರ ಮಾಡುವುದಕ್ಕೆ ಅನುಮತಿಸಬಹುದು.

**155. 154ನೇ ಪ್ರಕರಣವನ್ನು ಪಾಲಿಸಲು ತಪ್ಪಿದ್ದಕ್ಕಾಗಿ ದಂಡ.-** ಯಾವ ವ್ಯಕ್ತಿಯ ವಿರುದ್ಧ 154ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಅಂಥ ಕಾರ್ಯವನ್ನು ನಿರ್ವಹಿಸದಿದ್ದರೆ ಅಥವಾ ಹಾಜರಾಗದಿದ್ದರೆ ಮತ್ತು ಕಾರಣ ತೋರಿಸದಿದ್ದರೆ, ಅವನು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 223ನೇ ಪ್ರಕರಣದಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಲಾದ ದಂಡಕ್ಕೆ ಗುರಿಯಾಗತಕ್ಕದ್ದು ಮತ್ತು ಆ ಆದೇಶವನ್ನು ಅಂತಿಮಗೊಳಿಸತಕ್ಕದ್ದು.

**156. ಸಾರ್ವಜನಿಕ ಹಕ್ಕಿನ ಆಸ್ತಿತ್ವವನ್ನು ನಿರಾಕರಿಸಿದ್ದಲ್ಲಿ ಪ್ರಕ್ರಿಯೆ.-** (1) ಯಾವುದೇ ದಾರಿ, ನದಿ, ನಾಲೆ ಅಥವಾ ಸ್ಥಳದ ಬಳಕೆಯಲ್ಲಿ ಸಾರ್ವಜನಿಕರಿಗೆ ಆಗುವ ಅಡಚಣೆಯನ್ನು, ಉಪದ್ರವವನ್ನು ಅಥವಾ ಅಪಾಯವನ್ನು ತಡೆಗಟ್ಟುವ ಉದ್ದೇಶಕ್ಕಾಗಿ 152ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿದ್ದಲ್ಲಿ, ಮ್ಯಾಜಿಸ್ಟ್ರೇಟನು, ಯಾರ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ತನ್ನ ಮುಂದೆ ಹಾಜರಾದ ಮೇಲೆ ಆತನನ್ನು ಆ ದಾರಿ, ನದಿ, ನಾಲೆ ಅಥವಾ ಸ್ಥಳದ ಸಂಬಂಧದಲ್ಲಿನ ಯಾವುದೇ ಸಾರ್ವಜನಿಕ ಹಕ್ಕಿನ ಅಸ್ತಿತ್ವವನ್ನು ನಿರಾಕರಿಸಲಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳತಕ್ಕದ್ದು ಮತ್ತು ಆತನು ಹಾಗೆ ನಿರಾಕರಿಸಿದರೆ, ಮ್ಯಾಜಿಸ್ಟ್ರೇಟನು 157ನೇ ಪ್ರಕರಣದ ಮೇರೆಗೆ ಮುಂದುವರಿಯುವ ಮುನ್ನ, ಆ ವಿಷಯದಲ್ಲಿ ವಿಚಾರಣೆ ನಡೆಸತಕ್ಕದ್ದು.

(2) ಅಂಥ ವಿಚಾರಣೆಯಲ್ಲಿ ಅಂಥ ನಿರಾಕರಣೆಯನ್ನು ಪುಷ್ಟೀಕರಿಸುವ ಯಾವುದೇ ನಂಬಲರ್ಹ ಸಾಕ್ಷ್ಯವಿದೆಯೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಸಕ್ಷಮ ನ್ಯಾಯಾಲಯವು ಅಂಥ ಹಕ್ಕಿನ ಅಸ್ತಿತ್ವದ ವಿಷಯವನ್ನು ನಿರ್ಧರಿಸುವವರೆಗೆ ಅವನು ವ್ಯವಹರಣೆಗಳನ್ನು ನಿಲ್ಲಿಸತಕ್ಕದ್ದು ಮತ್ತು ಅಂಥ ಸಾಕ್ಷ್ಯವಿಲ್ಲವೆಂದು ಅವನಿಗೆ ಕಂಡುಬಂದರೆ, ಅವನು 157ನೇ ಪ್ರಕರಣದಲ್ಲಿ ಹೇಳಲಾದಂತೆ ಮುಂದುವರಿಯತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಪ್ರಶ್ನಿಸಲಾದ, ಅದರಲ್ಲಿ ಉಲ್ಲೇಖಿಸಲಾದ ಸ್ವರೂಪದ ಸಾರ್ವಜನಿಕ ಹಕ್ಕಿನ ಅಸ್ತಿತ್ವವನ್ನು ನಿರಾಕರಿಸಲು ತಪ್ಪಿದ ಅಥವಾ ಅಂಥ ನಿರಾಕರಣೆಯನ್ನು ಮಾಡಿದ ಮೇಲೆ ಅದನ್ನು ಪುಷ್ಟೀಕರಿಸಲು ನಂಬಲರ್ಹವಾದ ಸಾಕ್ಷ್ಯವನ್ನೊದಗಿಸಲು ತಪ್ಪಿದ ವ್ಯಕ್ತಿಗೆ ತರುವಾಯದ ವ್ಯವಹರಣೆಗಳಲ್ಲಿ ಅಂಥ ನಿರಾಕರಣೆಯನ್ನು ಮಾಡಲು ಅನುಮತಿ ಕೊಡತಕ್ಕದ್ದಲ್ಲ.

**157. 152ನೇ ಪ್ರಕರಣದ ಮೇರೆಗೆ ಯಾರ ವಿರುದ್ಧ ಆದೇಶ ಮಾಡಲಾಗಿದೆಯೋ ಆ ವ್ಯಕ್ತಿಯು ಹಾಜರಾಗಿ ಕಾರಣ ತೋರಿಸುವ ಪ್ರಕ್ರಿಯೆ.-** (1) 152ನೇ ಪ್ರಕರಣದ ಮೇರೆಗೆ ಯಾರ ವಿರುದ್ಧ ಆದೇಶ ಮಾಡಲಾಗಿದೆಯೋ ಆ ವ್ಯಕ್ತಿಯು ಆದೇಶದ ವಿರುದ್ಧ ಹಾಜರಾಗಿ ಕಾರಣ ತೋರಿಸಿದರೆ, ಮ್ಯಾಜಿಸ್ಟ್ರೇಟನು ಸಮನ್-ಮೊಕದ್ದಮೆಗಳ ರೀತಿಯಲ್ಲಿಯೇ ಈ ವಿಷಯದಲ್ಲಿ ಸಾಕ್ಷ್ಯ ತೆಗೆದುಕೊಳ್ಳತಕ್ಕದ್ದು.

(2) ಆದೇಶವು ಮೂಲದಲ್ಲಿ ಮಾಡಲಾಗಿರುವಂತೆ ಅಥವಾ ಅವಶ್ಯಕವೆಂದು ತಾನು ಪರ್ಯಾಲೋಚಿಸುವಂಥ ಮಾರ್ಪಾಟುಗಳಿಗೊಳಪಟ್ಟು ಯುಕ್ತವಾಗಿದೆ ಮತ್ತು ಸರಿಯಾಗಿದೆಯೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದಲ್ಲಿ, ಆ ಆದೇಶವನ್ನು ಸಂದರ್ಭಾನುಸಾರ ಮಾರ್ಪಾಟಿಲ್ಲದೆ ಅಥವಾ ಅಂಥ ಮಾರ್ಪಾಟಿನೊಂದಿಗೆ ಅಂತಿಮಗೊಳಿಸತಕ್ಕದ್ದು.

(3) ಮ್ಯಾಜಿಸ್ಟ್ರೇಟನಿಗೆ ಹಾಗೆ ಮನದಟ್ಟಾಗದಿದ್ದರೆ, ಆ ಮೊಕದ್ದಮೆಯಲ್ಲಿ ಹೆಚ್ಚಿನ ವ್ಯವಹರಣೆಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಈ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ತೊಂಬತ್ತು ದಿನಗಳ ಅವಧಿಯೊಳಗೆ ಆದಷ್ಟು ಬೇಗನೆ ಮುಕ್ತಾಯಗೊಳಿಸತಕ್ಕದ್ದು, ಆದರೆ ಆ ಅವಧಿಯನ್ನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಒಂದು ನೂರಾ ಇಪ್ಪತ್ತು ದಿನಗಳಿಗೆ ವಿಸ್ತರಿಸಬಹುದು.

**158. ಸ್ಥಳೀಯ ತನಿಖೆ ಮತ್ತು ತಜ್ಞನ ವಿಚಾರಣೆಗೆ ನಿರ್ದೇಶಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.-** 156ನೇ ಅಥವಾ 157ನೇ ಪ್ರಕರಣದ ಮೇರೆಗೆ ವಿಚಾರಣೆಯ ಉದ್ದೇಶಗಳಿಗಾಗಿ ಮ್ಯಾಜಿಸ್ಟ್ರೇಟನು,-

(ಎ) ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಯು ಸ್ಥಳೀಯ ತನಿಖೆ ಮಾಡುವಂತೆ ನಿರ್ದೇಶಿಸಬಹುದು; ಅಥವಾ

(ಬಿ) ತಜ್ಞನನ್ನು ಸಮನ್ ಮಾಡಿ ವಿಚಾರಣೆ ಮಾಡಬಹುದು.

**159. ಲಿಖಿತ ಸೂಚನೆ, ಇತ್ಯಾದಿಗಳನ್ನು ಒದಗಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.-** (1) 158ನೇ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಗೆ ಸ್ಥಳೀಯ ತನಿಖೆ ಮಾಡಬೇಕೆಂದು ಮ್ಯಾಜಿಸ್ಟ್ರೇಟನು ನಿರ್ದೇಶಿಸಿದ್ದಲ್ಲಿ, ಮ್ಯಾಜಿಸ್ಟ್ರೇಟನು,-

(ಎ) ಅಂಥ ವ್ಯಕ್ತಿಗೆ ಮಾರ್ಗದರ್ಶನಕ್ಕಾಗಿ ಅಗತ್ಯವೆನಿಸಬಹುದಾದಂಥ ಲಿಖಿತ ಸೂಚನೆಗಳನ್ನು ಒದಗಿಸಬಹುದು;

(ಬಿ) ಸ್ಥಳೀಯ ತನಿಖೆಗೆ ಅವಶ್ಯವಾದ ಪೂರ್ಣ ವೆಚ್ಚಗಳನ್ನು ಅಥವಾ ಅದರ ಯಾವುದೇ ಭಾಗವನ್ನು ಯಾರು ಸಂದಾಯ ಮಾಡತಕ್ಕದ್ದೆಂಬುದನ್ನು ಘೋಷಿಸಬಹುದು.

(2) ಅಂಥ ವ್ಯಕ್ತಿಯ ವರದಿಯನ್ನು ಮೊಕದ್ದಮೆಯಲ್ಲಿ ಸಾಕ್ಷ್ಯವಾಗಿ ಓದಬಹುದು.

(3) 158ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಒಬ್ಬ ತಜ್ಞನನ್ನು ಸಮನ್ ಮಾಡಿ ವಿಚಾರಣೆ ಮಾಡಿದಾಗ, ಹಾಗೆ ಸಮನ್ ಮಾಡಿ ವಿಚಾರಣೆ ಮಾಡುವ ಬಗೆಗಿನ ವೆಚ್ಚಗಳನ್ನು ಯಾರು ಸಂದಾಯ ಮಾಡತಕ್ಕದ್ದೆಂಬುದನ್ನು ಮ್ಯಾಜಿಸ್ಟ್ರೇಟನು ನಿರ್ದೇಶಿಸಬಹುದು.

**160. ಆದೇಶವನ್ನು ಅಂತಿಮಗೊಳಿಸುವ ಕುರಿತ ಪ್ರಕ್ರಿಯೆ ಮತ್ತು ಅವಿಧೇಯತೆಯ ಪರಿಣಾಮಗಳು.-** (1) 155ನೇ ಅಥವಾ 157ನೇ ಪ್ರಕರಣದ ಮೇರೆಗೆ ಆದೇಶವನ್ನು ಅಂತಿಮಗೊಳಿಸಲಾಗಿರುವಲ್ಲಿ, ಯಾರ ವಿರುದ್ಧ ಆದೇಶ ಮಾಡಲಾಗಿದೆಯೋ ಆ ವ್ಯಕ್ತಿಗೆ ಮ್ಯಾಜಿಸ್ಟ್ರೇಟನು ಅದರ ನೋಟೀಸನ್ನು ನೀಡತಕ್ಕದ್ದು ಮತ್ತು ನೋಟೀಸಿನಲ್ಲಿ ನಿಗದಿಪಡಿಸಲಾದ ಸಮಯದೊಳಗೆ ಆದೇಶದ ಮೂಲಕ ನಿರ್ದೇಶಿಸಲಾದ ಕಾರ್ಯವನ್ನು ನಿರ್ವಹಿಸಲು ಅಗತ್ಯಪಡಿಸತಕ್ಕದ್ದು ಮತ್ತು ಅವಿಧೇಯತೆಯ ಸಂದರ್ಭದಲ್ಲಿ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 223ನೇ ಪ್ರಕರಣದ ಮೂಲಕ ಉಪಬಂಧಿಸಲಾದ ದಂಡಕ್ಕೆ ಅವನು ಗುರಿಯಾಗತಕ್ಕದ್ದೆಂದು ಅವನಿಗೆ ತಿಳಿಸತಕ್ಕದ್ದು.

(2) ನಿಗದಿಪಡಿಸಿದ ಸಮಯದೊಳಗಾಗಿ ಅಂಥ ಕಾರ್ಯವು ಆಗದಿದ್ದರೆ, ಮ್ಯಾಜಿಸ್ಟ್ರೇಟನು ಅದನ್ನು ಮಾಡಿಸಬಹುದು ಮತ್ತು ಅದಕ್ಕೆ ತಗುಲಿದ ವೆಚ್ಚವನ್ನು ತನ್ನ ಆದೇಶದ ಮೇರೆಗೆ ತೆಗೆದುಹಾಕಲಾದ ಯಾವುದೇ ಕಟ್ಟಡ, ಸರಕುಗಳ ಅಥವಾ ಇತರ ಸ್ವತ್ತಿನ ಮಾರಾಟದಿಂದ ಅಥವಾ ಅಂಥ ಮ್ಯಾಜಿಸ್ಟ್ರೇಟನ ಸ್ಥಳೀಯ ಅಧಿಕಾರವ್ಯಾಪ್ತಿಯ ಒಳಗಿರುವ ಅಥವಾ ಹೊರಗಿರುವ ಅಂಥ ವ್ಯಕ್ತಿಯ ಯಾವುದೇ ಚರಸ್ವತ್ತಿನ ಜಪ್ತಿ ಮತ್ತು ಮಾರಾಟದಿಂದ ವಸೂಲು ಮಾಡಬಹುದು ಮತ್ತು ಅಂಥ ಇತರ ಸ್ವತ್ತು ಅಂಥ ಅಧಿಕಾರವ್ಯಾಪ್ತಿಯ ಹೊರಗಿದ್ದರೆ, ಯಾರ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಜಪ್ತಿಯಾಗುವ ಸ್ವತ್ತು ಇದೆಯೋ ಆ ಮ್ಯಾಜಿಸ್ಟ್ರೇಟನಿಂದ ಹಿಂಬರಹ ಹೊಂದಿದ ಮೇಲೆ ಅದರ ಜಪ್ತಿ ಹಾಗೂ ಮಾರಾಟವನ್ನು ಆದೇಶವು ಅಧಿಕೃತಗೊಳಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ ಯಾವ ದಾವೆಯನ್ನೂ ಹೂಡತಕ್ಕದ್ದಲ್ಲ.

**161. ವಿಚಾರಣೆಯಾಗುವವರೆಗೆ ನಿರ್ಬಂಧಕಾಜ್ಞೆ.-** (1) 152ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಮ್ಯಾಜಿಸ್ಟ್ರೇಟನು, ಸಾರ್ವಜನಿಕರಿಗೆ ಉಂಟಾಗಬಹುದಾದ ಸನ್ನಿಹಿತ ಅಪಾಯವನ್ನು ಅಥವಾ ತೀವ್ರ ಸ್ವರೂಪದ ಕ್ಷತಿಯನ್ನು ತಪ್ಪಿಸಲು ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕೆಂದು ಪರ್ಯಾಲೋಚಿಸಿದರೆ, ಅಂಥ ಅಪಾಯವನ್ನು ಅಥವಾ ಕ್ಷತಿಯನ್ನು ನಿವಾರಿಸಲು ಅಥವಾ ತಪ್ಪಿಸಲು ಅಗತ್ಯವಾಗಿರುವಂತೆ, ಆ ವಿಷಯವು ತೀರ್ಮಾನವಾಗುವವರೆಗೂ ಯಾರ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಂಥ ನಿರ್ಬಂಧಕಾಜ್ಞೆಯನ್ನು ಹೊರಡಿಸಬಹುದು.

(2) ಅಂಥ ನಿರ್ಬಂಧಕಾಜ್ಞೆಯನ್ನು ಕೂಡಲೇ ಪಾಲಿಸಲು ಅಂಥ ವ್ಯಕ್ತಿಯು ತಪ್ಪಿದ್ದಲ್ಲಿ, ಮ್ಯಾಜಿಸ್ಟ್ರೇಟನು ಅಂಥ ಅಪಾಯವನ್ನು ನಿವಾರಿಸಲು ಅಥವಾ ಅಂಥ ಕ್ಷತಿಯನ್ನು ತಪ್ಪಿಸಲು ತಾನು ಸೂಕ್ತವೆಂದು ಭಾವಿಸುವಂಥ ಕ್ರಮಗಳನ್ನು ತಾನೇ ಕೈಗೊಳ್ಳಬಹುದು ಅಥವಾ ಕೈಗೊಳ್ಳುವಂತೆ ಮಾಡಬಹುದು.

(3) ಈ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಯಾವ ದಾವೆಯನ್ನೂ ಹೂಡತಕ್ಕದ್ದಲ್ಲ.

**162. ಮ್ಯಾಜಿಸ್ಟ್ರೇಟನು ಸಾರ್ವಜನಿಕ ಉಪದ್ರವದ ಪುನರಾವರ್ತನೆ ಅಥವಾ ಮುಂದುವರಿಕೆಯನ್ನು ನಿಷೇಧಿಸಬಹುದು.-** ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಉಪವಿಭಾಗದ ಮ್ಯಾಜಿಸ್ಟ್ರೇಟನು ಅಥವಾ ರಾಜ್ಯ ಸರ್ಕಾರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಈ ಬಗ್ಗೆ ಅಧಿಕೃತಗೊಳಿಸಿದ ಇತರ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸ್ ಉಪ-ಆಯುಕ್ತನು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರಲ್ಲಿ ಅಥವಾ ಯಾವುದೇ ವಿಶೇಷ ಅಥವಾ ಸ್ಥಳೀಯ ಕಾನೂನಿನಲ್ಲಿ ಪರಿಭಾಷಿಸಿದಂತೆ ಸಾರ್ವಜನಿಕ ಉಪದ್ರವವನ್ನು ಪುನರಾವರ್ತನೆಗೊಳಿಸದಿರಲು ಅಥವಾ ಮುಂದುವರಿಸದಿರಲು ಯಾರೇ ವ್ಯಕ್ತಿಗೆ ಆದೇಶಿಸಬಹುದು.

***ಸಿ.- ಉಪದ್ರವದ ಅಥವಾ ಶಂಕಿತ ಅಪಾಯದ ಜರೂರು ಸಂದರ್ಭಗಳು***

**163. ಉಪದ್ರವದ ಅಥವಾ ಶಂಕಿತ ಅಪಾಯದ ಜರೂರು ಸಂದರ್ಭಗಳಲ್ಲಿ ಆದೇಶ ಹೊರಡಿಸುವ ಅಧಿಕಾರ.-** (1) ಜಿಲ್ಲಾ ಮ್ಯಾಜಿಸ್ಟ್ರೇಟನು, ಉಪವಿಭಾಗದ ಮ್ಯಾಜಿಸ್ಟ್ರೇಟನು ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ವಿಶೇಷವಾಗಿ ಅಧಿಕೃತಗೊಳಿಸಿದ ಇತರೆ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು, ಈ ಪ್ರಕರಣದ ಮೇರೆಗೆ ಕ್ರಮ ಜರುಗಿಸಲು ಸಾಕಷ್ಟು ಕಾರಣವಿದೆಯೆಂದು ಮತ್ತು ಕೂಡಲೇ ತಡೆಹಿಡಿಯುವುದು ಅಥವಾ ತುರ್ತು ಪರಿಹಾರೋಪಾಯವು ಅಪೇಕ್ಷಣೀಯವಾಗಿದೆಯೆಂದು ಅಭಿಪ್ರಾಯಪಡುವ ಸಂದರ್ಭಗಳಲ್ಲಿ, ಅಂಥ ಮ್ಯಾಜಿಸ್ಟ್ರೇಟನು ಕಾನೂನುಬದ್ಧವಾಗಿ ನಿಯೋಜಿತನಾದ ಯಾರೇ ವ್ಯಕ್ತಿಗೆ ಆಗುವ ಅಡಚಣೆ, ಕಿರುಕುಳ ಅಥವಾ ಕ್ಷತಿಯನ್ನು ಅಥವಾ ಮನುಷ್ಯನ ಜೀವಕ್ಕೆ, ಆರೋಗ್ಯಕ್ಕೆ

ಅಥವಾ ಸಂರಕ್ಷಣೆಗೆ ಉಂಟಾಗುವ ಅಪಾಯವನ್ನು, ಸಾರ್ವಜನಿಕ ನೆಮ್ಮದಿಗೆ ತೊಂದರೆಯಾಗುವುದನ್ನು ಅಥವಾ ದೊಂಬಿಯನ್ನು ಅಥವಾ ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಟವನ್ನು, ತನ್ನ ನಿರ್ದೇಶನದಿಂದಾಗಿ ತಡೆಹಿಡಿಯುವ ಸಂಭವವಿದೆಯೆಂದು ಅಥವಾ ಅವುಗಳನ್ನು ತಡೆಯಲು ನೆರವಾಗುವುದೆಂದು ಪರ್ಯಾಲೋಚಿಸಿದರೆ, ಆ ಸಂದರ್ಭದ ಮುಖ್ಯ ಸಂಗತಿಗಳನ್ನು ಉಲ್ಲೇಖಿಸುವ ಮತ್ತು 153ನೇ ಪ್ರಕರಣದಲ್ಲಿ ಉಪಬಂಧಿತವಾದ ರೀತಿಯಲ್ಲಿ ಜಾರಿಗೊಳಿಸಲಾದ ಲಿಖಿತ ಆದೇಶದ ಮೂಲಕ, ಯಾರೇ ವ್ಯಕ್ತಿಯು ನಿರ್ದಿಷ್ಟ ಕೃತ್ಯವನ್ನು ಮಾಡದಿರುವಂತೆ ಅಥವಾ ಅವನ ಸ್ವಾಧೀನದಲ್ಲಿರುವ ಅಥವಾ ಅವನ ನಿರ್ವಹಣೆಯಲ್ಲಿರುವ ನಿರ್ದಿಷ್ಟ ಸ್ವತ್ತಿನ ಬಗ್ಗೆ ನಿರ್ದಿಷ್ಟ ವ್ಯವಸ್ಥೆ ಮಾಡುವಂತೆ ಆ ಮ್ಯಾಜಿಸ್ಟ್ರೇಟನು, ಆ ಯಾರೇ ವ್ಯಕ್ತಿಗೆ ಅಂಥ ನಿರ್ದೇಶನವನ್ನು ಮಾಡಬಹುದು.

(2) ತುರ್ತು ಪರಿಸ್ಥಿತಿಯ ಸಂದರ್ಭಗಳಲ್ಲಿ ಅಥವಾ ಆದೇಶಿತ ವ್ಯಕ್ತಿಯ ಮೇಲೆ ನೋಟೀಸನ್ನು ಸಕಾಲದಲ್ಲಿ ಜಾರಿಗೊಳಿಸಲು ಅವಕಾಶವಿರದ ಪರಿಸ್ಥಿತಿಯಿರುವ ಸಂದರ್ಭಗಳಲ್ಲಿ, ಈ ಪ್ರಕರಣದ ಮೇರೆಗಿನ ಆದೇಶವನ್ನು ಏಕಪಕ್ಷೀಯವಾಗಿ ಮಾಡಬಹುದು.

(3) ನಿರ್ದಿಷ್ಟ ವ್ಯಕ್ತಿಗೆ ಅಥವಾ ನಿರ್ದಿಷ್ಟ ಸ್ಥಳ ಅಥವಾ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿಗಳಿಗೆ ಅಥವಾ ನಿರ್ದಿಷ್ಟ ಸ್ಥಳ ಅಥವಾ ಪ್ರದೇಶಕ್ಕೆ ಪದೇ ಪದೇ ಬರುವ ಅಥವಾ ಭೇಟಿ ನೀಡುವ ಸಾರ್ವಜನಿಕರಿಗೆ ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡಬಹುದು.

(4) ಈ ಪ್ರಕರಣದ ಮೇರೆಗೆ ಯಾವುದೇ ಆದೇಶವು, ಅದನ್ನು ಮಾಡಿದಂದಿನಿಂದ ಎರಡು ತಿಂಗಳಿಗಿಂತ ಹೆಚ್ಚಾಗಿ ಜಾರಿಯಲ್ಲಿರತಕ್ಕದ್ದಲ್ಲ:

ಪರಂತು, ಮನುಷ್ಯನ ಜೀವ, ಆರೋಗ್ಯ ಅಥವಾ ಸುರಕ್ಷತೆಗೆ ಉಂಟಾಗುವ ಅಪಾಯವನ್ನು ತಡೆಯುವುದಕ್ಕಾಗಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ದೊಂಬಿಯನ್ನು ಅಥವಾ ಹೊಡೆದಾಟವನ್ನು ತಡೆಯುವುದಕ್ಕಾಗಿ, ಹಾಗೆ ಮಾಡುವುದು ಅವಶ್ಯವೆಂದು ರಾಜ್ಯ ಸರ್ಕಾರವು ಪರ್ಯಾಲೋಚಿಸಿದರೆ, ಅದು ಅಧಿಸೂಚನೆಯ ಮೂಲಕ ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಅವಧಿಗಾಗಿ ಈ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಮಾಡಿದ ಆದೇಶವು ಜಾರಿಯಲ್ಲಿರತಕ್ಕದ್ದೆಂದು ನಿರ್ದೇಶಿಸಬಹುದು, ಆದರೆ ಅಂಥ ಹೆಚ್ಚಿನ ಅವಧಿಯು, ಅಂಥ ನಿರ್ದೇಶನವಿಲ್ಲದಿದ್ದರೆ ಮ್ಯಾಜಿಸ್ಟ್ರೇಟನು ಮಾಡಿದ ಅಂಥ ಆದೇಶವು ಯಾವ ದಿನಾಂಕದಂದು ಮುಕ್ತಾಯವಾಗುತ್ತಿತ್ತೋ ಆ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ ಮೀರತಕ್ಕದ್ದಲ್ಲ.

(5) ಯಾರೇ ಮ್ಯಾಜಿಸ್ಟ್ರೇಟನು ತಾನಾಗಿಯೇ ಅಥವಾ ಯಾರೇ ಬಾಧಿತ ವ್ಯಕ್ತಿಯ ಅರ್ಜಿಯ ಮೇಲೆ, ತಾನು ಅಥವಾ ತನಗೆ ಅಧೀನನಾಗಿರುವ ಯಾರೇ ಮ್ಯಾಜಿಸ್ಟ್ರೇಟನು ಅಥವಾ ತನ್ನ ಪೂರ್ವಾಧಿಕಾರಿಯು ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.

(6) ರಾಜ್ಯ ಸರ್ಕಾರವು ತಾನಾಗಿಯೇ ಅಥವಾ ಯಾರೇ ಬಾಧಿತ ವ್ಯಕ್ತಿಯ ಅರ್ಜಿಯ ಮೇಲೆ, (4)ನೇ ಉಪಪ್ರಕರಣದ ಪರಂತುಕದ ಮೇರೆಗೆ ತಾನು ಮಾಡಿದ ಯಾವುದೇ ಆದೇಶವನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.

(7) (5)ನೇ ಅಥವಾ (6)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸುವಲ್ಲಿ, ಸಂದರ್ಭಾನುಸಾರ ಮ್ಯಾಜಿಸ್ಟ್ರೇಟನು ಅಥವಾ ರಾಜ್ಯ ಸರ್ಕಾರವು ಅರ್ಜಿದಾರರಿಗೆ ತನ್ನ ಮುಂದೆ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಹಾಜರಾಗಲು ಮತ್ತು ಆದೇಶದ ವಿರುದ್ಧ ಕಾರಣ ತೋರಿಸಲು ಆದಷ್ಟು ಬೇಗ ಅವಕಾಶವನ್ನು ಕೊಡತಕ್ಕದ್ದು ಮತ್ತು

ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನು ಅಥವಾ ರಾಜ್ಯ ಸರ್ಕಾರವು ಅರ್ಜಿಯನ್ನು ಪೂರ್ಣವಾಗಿ ಅಥವಾ ಭಾಗಶಃ ತಿರಸ್ಕರಿಸಿದರೆ, ಅವನು ಅಥವಾ ಅದು ಹಾಗೆ ಮಾಡಲು ಇರುವ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

***ಡಿ.- ಸ್ಥಿರಸ್ವತ್ತಿನ ಬಗ್ಗೆ ವಿವಾದಗಳು***

**164. ಭೂಮಿ ಅಥವಾ ಜಲಕ್ಕೆ ಸಂಬಂಧಿಸಿದ ವಿವಾದವು ಶಾಂತಿ ಭಂಗವನ್ನುಂಟು ಮಾಡುವ ಸಂಭವವಿರುವಲ್ಲಿ ಪ್ರಕ್ರಿಯೆ.-** (1) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ, ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಇರುವ ಯಾವುದೇ ಭೂಮಿ ಅಥವಾ ಜಲ ಅಥವಾ ಅವುಗಳ ಎಲ್ಲೆಗಳಿಗೆ ಸಂಬಂಧಿಸಿದ ವಿಷಯವು ಶಾಂತಿ ಭಂಗ ಉಂಟುಮಾಡುವ ಸಂಭವವಿರುವ ಯಾವುದೇ ವಿವಾದವು ಇರುವುದೆಂದು ಪೊಲೀಸ್ ಅಧಿಕಾರಿಯ ವರದಿಯಿಂದ ಅಥವಾ ಇತರ ಮಾಹಿತಿಯಿಂದ ಮನದಟ್ಟಾದರೆ, ಅವನು ತನಗೆ ಹಾಗೆ ಮನದಟ್ಟಾಗಲು ಇರುವ ಕಾರಣಗಳನ್ನು ತಿಳಿಸಿ, ಅಂಥ ವಿವಾದಕ್ಕೆ ಸಂಬಂಧಿಸಿದ ಪಕ್ಷಕಾರರಿಗೆ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ನಿರ್ದಿಷ್ಟ ದಿನಾಂಕ ಹಾಗೂ ಸಮಯದಲ್ಲಿ ತನ್ನ ನ್ಯಾಯಾಲಯದಲ್ಲಿ ಹಾಜರಾಗಲು ಅಗತ್ಯಪಡಿಸುವ ಮತ್ತು ವಿವಾದಿತ ವಸ್ತುವಿನ ವಾಸ್ತವಿಕ ಸ್ವಾಧೀನದ ಸಂಗತಿಗೆ ಸಂಬಂಧಪಟ್ಟ ಅವರವರ ಕ್ಲೇಮುಗಳನ್ನು ಕುರಿತು ಲಿಖಿತ ಹೇಳಿಕೆಗಳನ್ನು ದಾಖಲಿಸುವಂತೆ ಲಿಖಿತದಲ್ಲಿ ಆದೇಶವನ್ನು ಮಾಡತಕ್ಕದ್ದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ "ಭೂಮಿ ಅಥವಾ ಜಲ" ಎಂಬ ಪದಾವಳಿಯು, ಕಟ್ಟಡಗಳು, ಮಾರುಕಟ್ಟೆಗಳು, ಮೀನುಗಾರಿಕೆ, ಬೆಳೆಗಳು ಅಥವಾ ಇತರ ಭೂಉತ್ಪನ್ನಗಳು ಮತ್ತು ಅಂಥ ಯಾವುದೇ ಸ್ವತ್ತಿನಿಂದ ಬರುವ ಬಾಡಿಗೆ ಅಥವಾ ಲಾಭಗಳನ್ನು ಒಳಗೊಳ್ಳುತ್ತದೆ.

(3) ಮ್ಯಾಜಿಸ್ಟ್ರೇಟನು ನಿರ್ದೇಶಿಸಬಹುದಾದಂತೆ ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಮನ್ ಜಾರಿ ಮಾಡುವುದಕ್ಕಾಗಿ ಈ ಸಂಹಿತೆಯ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಆದೇಶದ ಪ್ರತಿಯನ್ನು ಜಾರಿ ಮಾಡತಕ್ಕದ್ದು ಮತ್ತು ವಿವಾದದ ವಿಷಯದಲ್ಲಿ ಅಥವಾ ಹತ್ತಿರದ ಎದ್ದುಕಾಣುವ ಸ್ಥಳದಲ್ಲಿ ಕನಿಷ್ಠಪಕ್ಷ ಒಂದು ಪ್ರತಿಯನ್ನು ಅಂಟಿಸುವ ಮೂಲಕ ಪ್ರಕಟಿಸತಕ್ಕದ್ದು.

(4) ಮ್ಯಾಜಿಸ್ಟ್ರೇಟನು ವಿವಾದದ ವಿಷಯದ ಸ್ವಾಧೀನತೆ ಹಕ್ಕಿನ ಯಾರೇ ಪಕ್ಷಕಾರರ ಗುಣಾವಗುಣಗಳನ್ನು ಅಥವಾ ಕ್ಲೇಮುಗಳನ್ನು ಪರಾಮರ್ಶಿಸದೆ ಹಾಗೆ ದಾಖಲು ಮಾಡಿದ ಹೇಳಿಕೆಗಳನ್ನು ಪರಿಶೀಲಿಸತಕ್ಕದ್ದು. ಪಕ್ಷಕಾರರನ್ನು ವಿಚಾರಣೆ ಮಾಡತಕ್ಕದ್ದು, ಅವರು ಹಾಜರುಪಡಿಸಬಹುದಾದಂಥ ಎಲ್ಲ ಸಾಕ್ಷ್ಯಗಳನ್ನು ಸ್ವೀಕರಿಸತಕ್ಕದ್ದು, ಅವಶ್ಯವೆಂದು ತಾನು ಭಾವಿಸುವಂಥ ಮತ್ತಷ್ಟು ಸಾಕ್ಷ್ಯವೇನಾದರೂ ಇದ್ದರೆ ಅದನ್ನು ಪಡೆಯತಕ್ಕದ್ದು ಮತ್ತು ಸಾಧ್ಯವಾದರೆ, (1)ನೇ ಉಪಪ್ರಕರಣದ ಮೇರೆಗೆ ತಾನು ಮಾಡಿದ ಆದೇಶದ ದಿನಾಂಕದಂದು ವಿವಾದಿತ ವಿಷಯದ ಸ್ವಾಧೀನತೆಯನ್ನು ಯಾರೇ ಪಕ್ಷಕಾರನು ಹೊಂದಿದ್ದರೇ ಮತ್ತು ಪಕ್ಷಕಾರರಲ್ಲಿ ಯಾರು ಸ್ವಾಧೀನತೆಯನ್ನು ಹೊಂದಿದ್ದರು ಎಂಬುದನ್ನು ತೀರ್ಮಾನಿಸತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟನು ಪೊಲೀಸ್ ಅಧಿಕಾರಿಯ ವರದಿಯನ್ನು ಅಥವಾ ಇತರ ಮಾಹಿತಿಯನ್ನು ಸ್ವೀಕರಿಸಿದ ದಿನಾಂಕಕ್ಕೆ ನಿಕಟಪೂರ್ವದ ಎರಡು ತಿಂಗಳೊಳಗೆ ಅಥವಾ ಆ ದಿನಾಂಕದ ತರುವಾಯ ಮತ್ತು (1)ನೇ ಉಪಪ್ರಕರಣದ ಮೇರೆಗಿನ ಅವನ ಆದೇಶದ ದಿನಾಂಕಕ್ಕೆ ಮುಂಚೆ ಯಾರೇ ಪಕ್ಷಕಾರನ ಸ್ವಾಧೀನತೆಯನ್ನು ಬಲವಂತವಾಗಿ ಮತ್ತು ಅಕ್ರಮವಾಗಿ ತಪ್ಪಿಸಲಾಗಿದೆಯೆಂದು ಆತನಿಗೆ ಕಂಡುಬಂದರೆ, ಹಾಗೆ ಯಾರ ಸ್ವಾಧೀನತೆಯನ್ನು ತಪ್ಪಿಸಲಾಗಿದೆಯೋ ಆ ಪಕ್ಷಕಾರನು (1)ನೇ ಉಪಪ್ರಕರಣದ ಮೇರೆಗೆ ತಾನು ಮಾಡಿದ ಆದೇಶದ ದಿನಾಂಕದಂದು ಅವನು ಅದರ ಸ್ವಾಧೀನತೆಯಲ್ಲಿ ಇದ್ದನೆಂದು ಪರಿಗಣಿಸಬಹುದು.

(5) ಈ ಪ್ರಕರಣದಲ್ಲಿರುವುದು ಯಾವುದೂ, ಹಿಂದೆ ಹೇಳಲಾದಂಥ ಯಾವುದೇ ವಿವಾದವು ಇಲ್ಲ ಅಥವಾ ಇರಲಿಲ್ಲವೆಂದು ತೋರಿಸುವುದಕ್ಕೆ ಹಾಗೆ ಹಾಜರಾಗಬೇಕೆಂದು ಅಗತ್ಯಪಡಿಸಲಾದ ಯಾರೇ ಪಕ್ಷಕಾರನನ್ನು ಅಥವಾ

ಹಿತಾಸಕ್ತಿಯುಳ್ಳ ಇತರ ಯಾರೇ ವ್ಯಕ್ತಿಯನ್ನು ಅಡ್ಡಿಪಡಿಸತಕ್ಕದ್ದಲ್ಲ ಮತ್ತು ಅಂಥ ಸಂದರ್ಭದಲ್ಲಿ ಮ್ಯಾಜಿಸ್ಟ್ರೇಟನು ತನ್ನ ಸದರಿ ಆದೇಶವನ್ನು ರದ್ದುಗೊಳಿಸತಕ್ಕದ್ದು ಮತ್ತು ಆ ಬಗೆಗಿನ ಎಲ್ಲ ಮುಂದಿನ ವ್ಯವಹರಣೆಗಳನ್ನು ತಡೆಯತಕ್ಕದ್ದು, ಆದರೆ ಅಂಥ ರದ್ಧತಿಗೆ ಒಳಪಟ್ಟು, (1)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಆದೇಶವು ಅಂತಿಮವಾಗಿರತಕ್ಕದ್ದು.

(6) (ಎ) ಸದರಿ ಸ್ವತ್ತಿನ ಸ್ವಾಧೀನವನ್ನು ಪಕ್ಷಕಾರರಲ್ಲಿ ಒಬ್ಬನು ಹೊಂದಿದ್ದನೆಂದು ಅಥವಾ (4)ನೇ ಉಪಪ್ರಕರಣದ ಪರಂತುಕದ ಮೇರೆಗೆ ಹೊಂದಿರುವುದಾಗಿ ಪರಿಗಣಿಸಬೇಕೆಂದು ಮ್ಯಾಜಿಸ್ಟ್ರೇಟನು ತೀರ್ಮಾನಿಸಿದರೆ, ಕಾನೂನಿನ ಯುಕ್ತ ಕ್ರಮದಿಂದ ಅಂಥ ಪಕ್ಷಕಾರನನ್ನು ಅಲ್ಲಿಂದ ಹೊರದೂಡಲಾಗುವವರೆಗೆ ಅವನು ಅದರ ಸ್ವಾಧೀನಕ್ಕೆ ಹಕ್ಕುಳ್ಳವನಾಗಿರತಕ್ಕದ್ದೆಂದು ಘೋಷಿಸುವ ಮತ್ತು ಅಂಥ ಹೊರದೂಡುವಿಕೆಯವರೆಗೆ ಅಂಥ ಸ್ವಾಧೀನದ ಬಗೆಗಿನ ತೊಂದರೆಗಳನ್ನು ನಿಷೇಧಿಸುವ ಆದೇಶವನ್ನು ಹೊರಡಿಸತಕ್ಕದ್ದು ಮತ್ತು (4)ನೇ ಉಪಪ್ರಕರಣದ ಪರಂತುಕದ ಮೇರೆಗೆ ಅವರು ಕ್ರಮ ಜರುಗಿಸುವಾಗ ಬಲವಂತವಾಗಿ ಮತ್ತು ಅಕ್ರಮವಾಗಿ ಸ್ವಾಧೀನತೆಯನ್ನು ತಪ್ಪಿಸಲ್ಪಟ್ಟ ಪಕ್ಷಕಾರನಿಗೆ ಸ್ವಾಧೀನತೆಯನ್ನು ಪುನಃ ಕೊಡಿಸಬಹುದು.

(ಬಿ) ಈ ಉಪಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು (3)ನೇ ಉಪಪ್ರಕರಣದಲ್ಲಿ ನಿರೂಪಿಸಲಾದ ರೀತಿಯಲ್ಲಿ ಜಾರಿ ಮಾಡತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು.

(7) ಯಾವುದೇ ಅಂಥ ವ್ಯವಹರಣೆಯ ಯಾರೇ ಪಕ್ಷಕಾರನು ಮೃತಪಟ್ಟರೆ ಮ್ಯಾಜಿಸ್ಟ್ರೇಟನು ಮೃತನಾದ ಪಕ್ಷಕಾರನ ಕಾನೂನುಸಮ್ಮತ ಪ್ರತಿನಿಧಿಯನ್ನು ವ್ಯವಹರಣೆಯ ಪಕ್ಷಕಾರನಾಗುವಂತೆ ಮಾಡಬಹುದು ಮತ್ತು ಆನಂತರ ವಿಚಾರಣೆಯನ್ನು ಮುಂದುವರಿಸತಕ್ಕದ್ದು ಮತ್ತು ಇಂಥ ವ್ಯವಹರಣೆಯ ಉದ್ದೇಶಗಳಿಗಾಗಿ ಮೃತನಾದ ಪಕ್ಷಕಾರನ ಕಾನೂನುಸಮ್ಮತ ಪ್ರತಿನಿಧಿಯು ಯಾರು ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಮೃತನಾದ ಪಕ್ಷಕಾರನ ಪ್ರತಿನಿಧಿಗಳೆಂದು ಕ್ಲೇಮು ಮಾಡುವ ಎಲ್ಲ ವ್ಯಕ್ತಿಗಳನ್ನು ಅದರ ಪಕ್ಷಕಾರರನ್ನಾಗಿ ಮಾಡತಕ್ಕದ್ದು.

(8) ಮ್ಯಾಜಿಸ್ಟ್ರೇಟನು ತನ್ನ ಮುಂದೆ ಇತ್ಯರ್ಥವಾಗದೆ ಇರುವ ಈ ಪ್ರಕರಣದ ಮೇರೆಗಿನ ವ್ಯವಹರಣೆಯಲ್ಲಿ ವಿವಾದದ ವಿಷಯವಾಗಿರುವ ಯಾವುದೇ ಬೆಳೆ ಅಥವಾ ಸ್ವತ್ತಿನ ಇತರ ಉತ್ಪನ್ನವು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ಹಾಳಾಗುವುದಕ್ಕೆ ಒಳಪಟ್ಟಿದೆ ಎಂದು ಅಭಿಪ್ರಾಯಪಟ್ಟರೆ, ಅವನು ಅಂಥ ಸ್ವತ್ತಿನ ಸೂಕ್ತ ಅಭಿರಕ್ಷೆಗೆ ಅಥವಾ ಮಾರಾಟಕ್ಕೆ ಆದೇಶ ಮಾಡಬಹುದು ಮತ್ತು ವಿಚಾರಣೆಯು ಪೂರ್ಣವಾದ ಮೇಲೆ ಅಂಥ ಸ್ವತ್ತಿನ ವಿಲೆಯ ಅಥವಾ ಅದರ ಮಾರಾಟದ ಉತ್ಪನ್ನದ ಬಗ್ಗೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು.

(9) ಮ್ಯಾಜಿಸ್ಟ್ರೇಟನು, ತಾನು ಸೂಕ್ತವೆಂದು ಭಾವಿಸಿದರೆ, ಈ ಪ್ರಕರಣದ ಮೇರೆಗಿನ ವ್ಯವಹರಣೆಗಳ ಯಾವುದೇ ಹಂತದಲ್ಲಿ, ಯಾರೇ ಪಕ್ಷಕಾರನ ಅರ್ಜಿಯ ಮೇಲೆ, ಯಾರೇ ಸಾಕ್ಷಿಯು ಹಾಜರಾಗುವಂತೆ ಅಥವಾ ಯಾವುದೇ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವಂತೆ ನಿರ್ದೇಶಿಸಿ ಸಮನನ್ನು ಹೊರಡಿಸಬಹುದು.

(10) ಈ ಪ್ರಕರಣದಲ್ಲಿರುವುದು ಯಾವುದೂ, 126ನೇ ಪ್ರಕರಣದ ಮೇರೆಗೆ ಕ್ರಮ ಜರುಗಿಸುವ ಬಗ್ಗೆ ಇರುವ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಅಲ್ಪೀಕರಿಸುತ್ತದೆಂದು ಭಾವಿಸತಕ್ಕದ್ದಲ್ಲ.

**165. ವಿವಾದದ ವಿಷಯವನ್ನು ಜಪ್ತಿ ಮಾಡುವ ಮತ್ತು ರಿಸೀವರನನ್ನು ನೇಮಕ ಮಾಡುವ ಅಧಿಕಾರ.-** (1) ಮ್ಯಾಜಿಸ್ಟ್ರೇಟನು, 164ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿದ ತರುವಾಯ ಯಾವುದೇ ಸಮಯದಲ್ಲಿ ಮೊಕದ್ದಮೆಯು ತುರ್ತು ಸ್ವರೂಪದೆಂದು ಪರ್ಯಾಲೋಚಿಸಿದರೆ ಅಥವಾ 164ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಅಂಥ ಸ್ವಾಧೀನವನ್ನು ಯಾರೇ ಪಕ್ಷಕಾರನು ಆಗ ಹೊಂದಿಲ್ಲವೆಂದು ಅವನು ತೀರ್ಮಾನಿಸಿದರೆ

ಅಥವಾ ಆಗ ಯಾವ ಪಕ್ಷಕಾರನು ವಿವಾದದ ವಿಷಯದ ಅಂಥ ಸ್ವಾಧೀನತೆಯನ್ನು ಹೊಂದಿದ್ದನೆಂಬ ಬಗ್ಗೆ ಮನದಟ್ಟು ಮಾಡಿಕೊಳ್ಳಲು ಅವನಿಗೆ ಸಾಧ್ಯವಾಗದಿದ್ದರೆ, ಆ ಪಕ್ಷಕಾರರಲ್ಲಿ ಯಾವ ವ್ಯಕ್ತಿಗೆ ಅದರ ಸ್ವಾಧೀನತೆಯನ್ನು ಹೊಂದುವ ಹಕ್ಕು ಇದೆಯೆಂಬುದನ್ನು ಸಕ್ಷಮ ನ್ಯಾಯಾಲಯವು ನಿರ್ಧರಿಸುವವರೆಗೆ ಅವನು ವಿವಾದಿತ ಸ್ವತ್ತನ್ನು ಜಪ್ತಿ ಮಾಡಬಹುದು:

ಪರಂತು, ವಿವಾದದ ವಿಷಯಕ್ಕೆ ಸಂಬಂಧಿಸಿದಂತೆ ಇನ್ನು ಮುಂದೆ ಶಾಂತಿ ಭಂಗ ಉಂಟಾಗುವ ಸಂಭವವಿಲ್ಲವೆಂದು ಅಂಥ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಯಾವುದೇ ಸಮಯದಲ್ಲಿ ಜಪ್ತಿ ಆದೇಶವನ್ನು ಹಿಂಪಡೆಯಬಹುದು.

(2) ಮ್ಯಾಜಿಸ್ಟ್ರೇಟನು ವಿವಾದದ ವಿಷಯವನ್ನು ಜಪ್ತಿ ಮಾಡಿದಾಗ, ಯಾವುದೇ ಸಿವಿಲ್ ನ್ಯಾಯಾಲಯವು ಅಂಥ ವಿವಾದದ ವಿಷಯಕ್ಕೆ ಸಂಬಂಧಿಸಿದಂತೆ ರಿಸೀವರನನ್ನು ನೇಮಿಸಿರದಿದ್ದರೆ, ಅವರು ಆ ಸ್ವತ್ತನ್ನು ನೋಡಿಕೊಳ್ಳುವುದಕ್ಕಾಗಿ ತನಗೆ ಯುಕ್ತವೆಂದು ತೋರುವಂಥ ಏರ್ಪಾಟುಗಳನ್ನು ಮಾಡಬಹುದು ಅಥವಾ ಸೂಕ್ತವೆಂದು ಭಾವಿಸಿದರೆ ಅದಕ್ಕೆ ಒಬ್ಬ ರಿಸೀವರನನ್ನು ನೇಮಿಸಬಹುದು. ಆ ರಿಸೀವರನು ಮ್ಯಾಜಿಸ್ಟ್ರೇಟನ ನಿಯಂತ್ರಣಕ್ಕೊಳಪಟ್ಟು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5)ರ ಮೇರೆಗೆ ನೇಮಕಗೊಂಡ ರಿಸೀವರನ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು:

ಪರಂತು, ತರುವಾಯ ಸಿವಿಲ್ ನ್ಯಾಯಾಲಯವು ವಿವಾದದ ವಿಷಯದ ಸಂಬಂಧದಲ್ಲಿ ರಿಸೀವರನನ್ನು ನೇಮಿಸಿದಾಗ, ಮ್ಯಾಜಿಸ್ಟ್ರೇಟನು,-

(ಎ) ಸಿವಿಲ್ ನ್ಯಾಯಾಲಯದಿಂದ ನೇಮಕಗೊಂಡ ರಿಸೀವರನಿಗೆ ವಿವಾದಿತ ವಿಷಯದ ಸ್ವಾಧೀನತೆಯನ್ನು ಒಪ್ಪಿಸಿಕೊಡಬೇಕೆಂದು ತಾನು ನೇಮಿಸಿದ ರಿಸೀವರನಿಗೆ ಆದೇಶಿಸತಕ್ಕದ್ದು ಮತ್ತು ಆ ತರುವಾಯ ತಾನು ನೇಮಿಸಿದ ರಿಸೀವರನನ್ನು ವಿಮುಕ್ತಿಗೊಳಿಸತಕ್ಕದ್ದು;

(ಬಿ) ನ್ಯಾಯೋಚಿತವಾಗಬಹುದಾದಂಥ ಇತರ ಪ್ರಾಸಂಗಿಕ ಅಥವಾ ಆನುಷಂಗಿಕ ಆದೇಶಗಳನ್ನು ಮಾಡಬಹುದು.

**166. ಭೂಮಿ ಅಥವಾ ಜಲದ ಬಳಕೆಯ ಹಕ್ಕಿಗೆ ಸಂಬಂಧಿಸಿದ ವಿವಾದ.-** (1) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ, ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಇರುವ ಯಾವುದೇ ಭೂಮಿ ಅಥವಾ ಜಲದ ಬಳಕೆಯ ಬಗ್ಗೆ ಇರಬಹುದಾದ ಯಾವುದೇ ಹೇಳಿರುವ ಹಕ್ಕಿನ ಸಂಬಂಧದಲ್ಲಿ, ಆ ಹಕ್ಕಿನ ಅನುಭೋಗದ ಅಥವಾ ಅನ್ಯಥಾ ಕ್ಲೇಮು ಮಾಡಲ್ಪಟ್ಟಿರಲಿ ಅಥವಾ ಇಲ್ಲದಿರಲಿ, ಶಾಂತಿ ಭಂಗ ಉಂಟುಮಾಡುವ ಸಂಭವವಿರುವ ಯಾವುದೇ ವಿವಾದವು ಇರುವುದೆಂದು ಪೊಲೀಸ್ ಅಧಿಕಾರಿಯ ವರದಿಯಿಂದ ಅಥವಾ ಇತರ ಮಾಹಿತಿಯಿಂದ ಮನದಟ್ಟಾದರೆ, ಅವನು ತನಗೆ ಹಾಗೆ ಮನದಟ್ಟಾಗಲು ಇರುವ ಕಾರಣಗಳನ್ನು ತಿಳಿಸಿ, ಅಂಥ ವಿವಾದಕ್ಕೆ ಸಂಬಂಧಿಸಿದ ಪಕ್ಷಕಾರರಿಗೆ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ನಿರ್ದಿಷ್ಟ ದಿನಾಂಕ ಹಾಗೂ ಸಮಯದಲ್ಲಿ ತನ್ನ ನ್ಯಾಯಾಲಯದಲ್ಲಿ ಹಾಜರಾಗಲು ಅಗತ್ಯಪಡಿಸುವ ಮತ್ತು ವಿವಾದಿತ ವಸ್ತುವಿನ ವಾಸ್ತವಿಕ ಸ್ವಾಧೀನದ ಸಂಗತಿಗೆ ಸಂಬಂಧಪಟ್ಟ ಅವರವರ ಕ್ಲೇಮುಗಳನ್ನು ಕುರಿತು ಲಿಖಿತ ಹೇಳಿಕೆಗಳನ್ನು ದಾಖಲಿಸುವಂತೆ ಲಿಖಿತದಲ್ಲಿ ಆದೇಶವನ್ನು ಮಾಡತಕ್ಕದ್ದು.

*ವಿವರಣೆ.-* ಈ ಪ್ರಕರಣದ ಉದ್ದೇಶಗಳಿಗಾಗಿ, �означ"ಭೂಮಿ ಅಥವಾ ಜಲ" ಎಂಬ ಪದಾವಳಿಯು 164ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು.

(2) ಮ್ಯಾಜಿಸ್ಟ್ರೇಟನು, ಹಾಗೆ ದಾಖಲು ಮಾಡಿದ ಹೇಳಿಕೆಗಳನ್ನು ಪರಿಶೀಲಿಸತಕ್ಕದ್ದು, ಪಕ್ಷಕಾರರನ್ನು ವಿಚಾರಣೆ ಮಾಡತಕ್ಕದ್ದು, ಅವರು ಅನುಕ್ರಮವಾಗಿ ಹಾಜರುಪಡಿಸಬಹುದಾದಂಥ ಎಲ್ಲ ಸಾಕ್ಷ್ಯಗಳನ್ನು ಸ್ವೀಕರಿಸತಕ್ಕದ್ದು, ಅಂಥ ಸಾಕ್ಷ್ಯದ ಪರಿಣಾಮವನ್ನು ಪರ್ಯಾಲೋಚಿಸತಕ್ಕದ್ದು, ಅವಶ್ಯವೆಂದು ತಾನು ಭಾವಿಸುವಂಥ ಮತ್ತಷ್ಟು ಸಾಕ್ಷ್ಯವೇನಾದರೂ ಇದ್ದರೆ, ಅದನ್ನು ಪಡೆಯತಕ್ಕದ್ದು ಮತ್ತು ಸಾಧ್ಯವಾದರೆ, ಅಂಥ ಹಕ್ಕು ಇದೆಯೇ ಎಂಬುದನ್ನು ತೀರ್ಮಾನಿಸತಕ್ಕದ್ದು ಮತ್ತು 164ನೇ ಪ್ರಕರಣದ ಉಪಬಂಧಗಳು, ಆದಷ್ಟು ಮಟ್ಟಿಗೆ, ಅಂಥ ವಿಚಾರಣೆಗೆ ಅನ್ವಯವಾಗತಕ್ಕದ್ದು.

(3) ಅಂಥ ಹಕ್ಕುಗಳು ಇರುವುವೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅವನು ಯುಕ್ತ ಸಂದರ್ಭದಲ್ಲಿ ಅಂಥ ಯಾವುದೇ ಹಕ್ಕನ್ನು ಚಲಾಯಿಸುವುದಕ್ಕೆ ಇರುವ ಯಾವುದೇ ಅಡ್ಡಿಯ ನಿವಾರಣೆಗಾಗಿನ ಆದೇಶವನ್ನೂ ಒಳಗೊಂಡಂತೆ, ಅಂಥ ಯಾವುದೇ ಹಕ್ಕಿನ ಚಲಾವಣೆಯಲ್ಲಿ ಯಾವುದೇ ಹಸ್ತಕ್ಷೇಪವನ್ನು ನಿಷೇಧಿಸಿ ಆದೇಶವನ್ನು ಮಾಡಬಹುದು:

ಪರಂತು, ವರ್ಷದ ಎಲ್ಲಾ ಕಾಲಗಳಲ್ಲೂ ಆ ಹಕ್ಕನ್ನು ಚಲಾಯಿಸಬಹುದಾಗಿದ್ದಲ್ಲಿ, ವಿಚಾರಣೆ ನಡೆಸುವುದಕ್ಕೆ ಎಡೆಮಾಡಿಕೊಟ್ಟ ಪೊಲೀಸ್ ಅಧಿಕಾರಿಯ ವರದಿಯನ್ನು ಅಥವಾ ಇತರ ಮಾಹಿತಿಯನ್ನು (1)ನೇ ಉಪಪ್ರಕರಣದ ಮೇರೆಗೆ ಪಡೆದ ನಿಕಟಪೂರ್ವದ ಮೂರು ತಿಂಗಳೊಳಗೆ ಅಂಥ ಹಕ್ಕನ್ನು ಚಲಾಯಿಸಲಾಗಿದ್ದ ಹೊರತು ಅಥವಾ ನಿರ್ದಿಷ್ಟ ಕಾಲಗಳಲ್ಲಿ ಅಥವಾ ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಹಕ್ಕನ್ನು ಚಲಾಯಿಸಬಹುದಾಗಿದ್ದಲ್ಲಿ, ಅಂಥ ವರದಿ ಅಥವಾ ಮಾಹಿತಿಯನ್ನು ಪಡೆಯುವ ಮುನ್ನ ಅಂಥ ಕಾಲಗಳಲ್ಲಿ ಕೊನೆಯ ಸಲ ಅಥವಾ ಅಂಥ ಸಂದರ್ಭಗಳಲ್ಲಿ ಕೊನೆಯ ಸಲ ಆ ಹಕ್ಕನ್ನು ಚಲಾಯಿಸಿದ್ದ ಹೊರತು, ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(4) 164ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾರಂಭಿಸಲಾದ ಯಾವುದೇ ವ್ಯವಹರಣೆಗಳಲ್ಲಿನ ವಿವಾದವು ಭೂಮಿಯ ಅಥವಾ ಜಲದ ಬಳಕೆಯ ಸಂಬಂಧದಲ್ಲಿ ಇರಬಹುದಾದ ಹಕ್ಕನ್ನು ಕುರಿತಾದುದೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅವನು ತನ್ನ ಕಾರಣಗಳನ್ನು ದಾಖಲಿಸಿದ ತರುವಾಯ (1)ನೇ ಉಪಪ್ರಕರಣದ ಮೇರೆಗೆ ವ್ಯವಹರಣೆಗಳು ಪ್ರಾರಂಭಿಸಲ್ಪಟ್ಟಿದ್ದರೆ ಹೇಗೋ ಹಾಗೆ ಆ ವ್ಯವಹರಣೆಗಳನ್ನು ಮುಂದುವರಿಸತಕ್ಕದ್ದು ಮತ್ತು (1)ನೇ ಉಪಪ್ರಕರಣದ ಮೇರೆಗೆ ಪ್ರಾರಂಭಿಸಲಾದ ಯಾವುದೇ ವ್ಯವಹರಣೆಗಳಲ್ಲಿನ ವಿವಾದವು 164ನೇ ಪ್ರಕರಣದ ಮೇರೆಗೆ ವ್ಯವಹರಿಸಬೇಕೆಂಬುದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದಾಗ, ಅವನು ತನ್ನ ಕಾರಣಗಳನ್ನು ದಾಖಲಿಸಿದ ತರುವಾಯ, 164ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿದ್ದರೆ ಹೇಗೋ ಹಾಗೆ ಅವುಗಳನ್ನು ಮುಂದುವರಿಸತಕ್ಕದ್ದು.

**167. ಸ್ಥಳೀಯ ವಿಚಾರಣೆ.-** (1) 164, 165 ಅಥವಾ 166ನೇ ಪ್ರಕರಣಗಳ ಉದ್ದೇಶಗಳಿಗಾಗಿ ಸ್ಥಳೀಯ ವಿಚಾರಣೆಯು ಅವಶ್ಯವಾದಾಗಲೆಲ್ಲಾ, ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಉಪವಿಭಾಗದ ಮ್ಯಾಜಿಸ್ಟ್ರೇಟನು ತನಗೆ ಅಧೀನನಾಗಿರುವ ಯಾರೇ ಮ್ಯಾಜಿಸ್ಟ್ರೇಟನನ್ನು ವಿಚಾರಣೆ ನಡೆಸಲು ಪ್ರತಿನಿಯೋಜಿಸಬಹುದು ಮತ್ತು ಅವನ ಮಾರ್ಗದರ್ಶನಕ್ಕಾಗಿ ಅಗತ್ಯವೆನಿಸಬಹುದಾದಂಥ ಲಿಖಿತ ಸೂಚನೆಗಳನ್ನು ನೀಡಬಹುದು ಮತ್ತು ವಿಚಾರಣೆಯ ಅವಶ್ಯಕ ವೆಚ್ಚಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಯಾರು ಸಂದಾಯ ಮಾಡತಕ್ಕದ್ದೆಂಬುದನ್ನು ಘೋಷಿಸಬಹುದು.

(2) ಹಾಗೆ ಪ್ರತಿನಿಯೋಜಿತನಾದ ವ್ಯಕ್ತಿಯ ವರದಿಯನ್ನು ಮೊಕದ್ದಮೆಯಲ್ಲಿ ಸಾಕ್ಷ್ಯವಾಗಿ ಓದಬಹುದು.

(3) 164ನೇ ಪ್ರಕರಣ, 165ನೇ ಪ್ರಕರಣ ಅಥವಾ 166ನೇ ಪ್ರಕರಣದ ಮೇರೆಗೆ ವ್ಯವಹರಣೆಗಾಗಿ ಯಾರೇ ಪಕ್ಷಕಾರನು ಭರಿಸಿರುವ ಯಾವುದೇ ಖರ್ಚುಗಳನ್ನು ತೀರ್ಮಾನ ಮಾಡುವ ಮ್ಯಾಜಿಸ್ಟ್ರೇಟನು, ವ್ಯವಹರಣೆಯ ಪಕ್ಷಕಾರನು ಅಥವಾ ಅದಕ್ಕೆ ಸಂಬಂಧಿಸಿದ ಇತರ ಯಾವ ಪಕ್ಷಕಾರನು ಪೂರ್ಣವಾಗಿ ಅಥವಾ ಭಾಗಶಃ ಅಥವಾ ಯಾವ ಅನುಪಾತದಲ್ಲಿ ಖರ್ಚನ್ನು ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ಖರ್ಚುಗಳು ನ್ಯಾಯಾಲಯವು ಯುಕ್ತವೆಂದು

ಪರ್ಯಾಲೋಚಿಸಬಹುದಾದ, ಸಾಕ್ಷಿದಾರರ ಸಂಬಂಧದಲ್ಲಿ ವಹಿಸಲಾದ ಯಾವುದೇ ಖರ್ಚುಗಳನ್ನು ಮತ್ತು ನ್ಯಾಯವಾದಿಗಳ ಫೀಜುಗಳನ್ನು ಒಳಗೊಂಡಿರಬಹುದು.

## ಅಧ್ಯಾಯ XII

## ಪೊಲೀಸರಿಂದ ಪ್ರತಿಬಂಧಕ ಕ್ರಮ

**168. ಸಂಜ್ಞೇಯ ಅಪರಾಧಗಳನ್ನು ಪೊಲೀಸರು ತಡೆಯುವುದು.-** ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು, ಯಾವುದೇ ಸಂಜ್ಞೇಯ ಅಪರಾಧ ಮಾಡುವುದನ್ನು ತಪ್ಪಿಸುವ ಉದ್ದೇಶಕ್ಕಾಗಿ ಮಧ್ಯೆ ಪ್ರವೇಶ ಮಾಡಬಹುದು ಮತ್ತು ಅವನಿಗೆ ಸಾಮರ್ಥ್ಯವಿರುವಷ್ಟರ ಮಟ್ಟಿಗೆ ಅದನ್ನು ತಡೆಹಿಡಿಯತಕ್ಕದ್ದು.

**169. ಸಂಜ್ಞೇಯ ಅಪರಾಧಗಳನ್ನು ಮಾಡುವ ಸಂಚಿನ ಬಗ್ಗೆ ಮಾಹಿತಿ.-** ಯಾವುದೇ ಸಂಜ್ಞೇಯ ಅಪರಾಧವನ್ನು ಮಾಡುವ ಸಂಚಿನ ಮಾಹಿತಿಯನ್ನು ಪಡೆಯುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು, ಅಂಥ ಮಾಹಿತಿಯನ್ನು ತಾನು ಯಾರಿಗೆ ಅಧೀನನಾಗಿರುವನೋ ಆ ಪೊಲೀಸ್ ಅಧಿಕಾರಿಗೆ ಮತ್ತು ಅಂಥ ಯಾವುದೇ ಅಪರಾಧ ಮಾಡುವುದನ್ನು ತಪ್ಪಿಸುವುದು ಅಥವಾ ಗಮನಿಸುವುದು ಯಾರ ಕರ್ತವ್ಯವಾಗಿದೆಯೋ ಆ ಯಾರೇ ಇತರ ಅಧಿಕಾರಿಗೆ ತಿಳಿಸತಕ್ಕದ್ದು.

**170. ಸಂಜ್ಞೇಯ ಅಪರಾಧ ಮಾಡುವುದನ್ನು ತಡೆಯಲು ದಸ್ತಗಿರಿ.-** (1) ಯಾವುದೇ ಸಂಜ್ಞೇಯ ಅಪರಾಧ ಮಾಡುವ ಸಂಚನ್ನು ತಿಳಿದಿರುವ ಪೊಲೀಸ್ ಅಧಿಕಾರಿಯು, ಸಂಚು ಮಾಡುತ್ತಿರುವ ವ್ಯಕ್ತಿಯು ಅಪರಾಧ ಮಾಡುವುದನ್ನು ಅನ್ಯಥಾ ಪ್ರತಿಬಂಧಿಸಲಾಗುವುದಿಲ್ಲವೆಂದು ಅಂಥ ಅಧಿಕಾರಿಗೆ ಕಂಡುಬಂದರೆ, ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆಯೇ ಮತ್ತು ವಾರಂಟಿಲ್ಲದೆಯೇ ದಸ್ತಗಿರಿ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ದಸ್ತಗಿರಿಯಾದ ಯಾರೇ ವ್ಯಕ್ತಿಯನ್ನು, ಈ ಸಂಹಿತೆಯ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಯಾವುದೇ ಇತರ ಉಪಬಂಧಗಳ ಮೇರೆಗೆ ಹೆಚ್ಚಿನ ಅವಧಿಯ ತಡೆಹಿಡಿದಿರಿಸಲು ಅಗತ್ಯಪಡಿಸಿರುವ ಅಥವಾ ಅಧಿಕೃತಪಡಿಸಲಾದ ಹೊರತು, ಅವನ ದಸ್ತಗಿರಿಯ ಸಮಯದಿಂದ ಇಪ್ಪತ್ನಾಲ್ಕು ಗಂಟೆಗಳಿಗಿಂತ ಹೆಚ್ಚಿನ ಅವಧಿಯವರೆಗೆ ಅಭಿರಕ್ಷೆಯಲ್ಲಿ ತಡೆಹಿಡಿದಿಡತಕ್ಕದ್ದಲ್ಲ.

**171. ಸಾರ್ವಜನಿಕ ಸ್ವತ್ತಿಗೆ ಉಂಟಾಗುವ ಕ್ಷತಿಯನ್ನು ತಡೆಯುವುದು.-** ಪೊಲೀಸ್ ಅಧಿಕಾರಿಯು, ಸ್ವಂತ ಅಧಿಕಾರದ ಮೇಲೆ ಯಾವುದೇ ಸಾರ್ವಜನಿಕ ಚರ ಅಥವಾ ಸ್ಥಿರ ಸ್ವತ್ತಿಗೆ ತನ್ನ ದೃಷ್ಟಿಯಲ್ಲಿ ಕ್ಷತಿಯನ್ನುಂಟು ಮಾಡುವ ಯಾವುದೇ ಪ್ರಯತ್ನವನ್ನು ಅಥವಾ ಯಾವುದೇ ಸಾರ್ವಜನಿಕ ಭೂಮಿಯ ಎಲ್ಲೆ ಗುರುತು ಅಥವಾ ನೀರ ಮೇಲೆ ತೇಲುವ ಬುರುಡೆ ಅಥವಾ ಇತರ ಗುರುತಿನ ಸ್ಥಳಾಂತರಣ ಅಥವಾ ಕ್ಷತಿಯನ್ನು ತಪ್ಪಿಸಲು ಮಧ್ಯಪ್ರವೇಶ ಮಾಡಬಹುದು.

**172. ವ್ಯಕ್ತಿಗಳು ಪೊಲೀಸರ ಕಾನೂನುಬದ್ಧ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರುವುದು.-** (1) ಈ ಅಧ್ಯಾಯದ ಮೇರೆಗೆ ಪೊಲೀಸ್ ಅಧಿಕಾರಿಯು ತನ್ನ ಯಾವುದೇ ಕರ್ತವ್ಯವನ್ನು ನೆರವೇರಿಸುವಲ್ಲಿ ನೀಡಿದ ಕಾನೂನುಬದ್ಧ ನಿರ್ದೇಶನಗಳಿಗೆ ಎಲ್ಲಾ ವ್ಯಕ್ತಿಗಳು ಬದ್ಧರಾಗಿರತಕ್ಕದ್ದು.

(2) ಪೊಲೀಸ್ ಅಧಿಕಾರಿಯು (1)ನೇ ಉಪಪ್ರಕರಣದ ಮೇರೆಗೆ ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ವಿರೋಧಿಸುವ, ನಿರಾಕರಿಸುವ, ತಿರಸ್ಕರಿಸುವ ಅಥವಾ ಅಗೌರವ ನೀಡುವ ಯಾರೇ ವ್ಯಕ್ತಿಯನ್ನು ಆತನು ತಡೆಹಿಡಿದಿಡಬಹುದು ಅಥವಾ ಅಲ್ಲಿಂದ ಹೊರಹಾಕಬಹುದು ಮತ್ತು ಅಂಥ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಬಹುದು ಅಥವಾ ಸಣ್ಣಪುಟ್ಟ ಪ್ರಕರಣಗಳಲ್ಲಾದರೆ ಆದಷ್ಟು ಬೇಗನೆ ಆತನನ್ನು ಇಪ್ಪತ್ನಾಲ್ಕು ಗಂಟೆಯ ಅವಧಿಯೊಳಗೆ ಬಿಡುಗಡೆ ಮಾಡಬಹುದು.

## ಅಧ್ಯಾಯ XIII

### ಪೊಲೀಸರಿಗೆ ಮಾಹಿತಿ ಮತ್ತು ಅವರ ತನಿಖೆಯ ಅಧಿಕಾರಗಳು

**173. ಸಂಜ್ಞೇಯ ಮೊಕದ್ದಮೆಗಳಲ್ಲಿ ಮಾಹಿತಿ.-** (1) ಸಂಜ್ಞೇಯ ಅಪರಾಧ ಮಾಡುವುದಕ್ಕೆ ಸಂಬಂಧಿಸಿದ ಪ್ರತಿಯೊಂದು ಮಾಹಿತಿಯನ್ನು, ಆ ಅಪರಾಧ ನಡೆದ ಪ್ರದೇಶವನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ, ಮೌಖಿಕವಾಗಿ ಅಥವಾ ವಿದ್ಯುನ್ಮಾನ ಸಂವಹನದ ಮೂಲಕ ನೀಡಬಹುದು ಮತ್ತು ಆ ಮಾಹಿತಿಯನ್ನು,-

(i) ಮೌಖಿಕವಾಗಿ ನೀಡಿದರೆ, ಅದನ್ನು ಆತನು ಅಥವಾ ಆತನ ನಿರ್ದೇಶನದ ಮೇರೆಗೆ ಬರವಣಿಗೆಗೆ ಇಳಿಸತಕ್ಕದ್ದು ಮತ್ತು ಮಾಹಿತಿದಾರನಿಗೆ ಓದಿಹೇಳತಕ್ಕದ್ದು ಮತ್ತು ಲಿಖಿತದಲ್ಲಿ ಕೊಡಲಾದ ಅಥವಾ ಮೇಲೆ ಹೇಳಿದಂತೆ ಬರವಣಿಗೆಗೆ ಇಳಿಸಲಾದ ಅಂಥ ಪ್ರತಿಯೊಂದು ಮಾಹಿತಿಗೂ ಅದನ್ನು ಕೊಡುವ ವ್ಯಕ್ತಿಯು ಸಹಿ ಮಾಡತಕ್ಕದ್ದು;

(ii) ವಿದ್ಯುನ್ಮಾನ ಸಂವಹನದ ಮೂಲಕ ನೀಡಿದರೆ, ಅದನ್ನು ಆತನು ದಾಖಲಿಸತಕ್ಕದ್ದು ಮತ್ತು ಅದಕ್ಕೆ ಅದನ್ನು ನೀಡಿದ ವ್ಯಕ್ತಿಯಿಂದ ಮೂರು ದಿನಗಳೊಳಗೆ ಸಹಿ ಪಡೆಯತಕ್ಕದ್ದು.

ಮತ್ತು ಅದರ ಸಾರಾಂಶವನ್ನು ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿಯಮಗಳ ಮೂಲಕ ಈ ಬಗ್ಗೆ ನಿಯಮಿಸಬಹುದಾದ ನಮೂನೆಯಲ್ಲಿ ಅಂಥ ಅಧಿಕಾರಿಯು ಇಟ್ಟಿರುವ ಪುಸ್ತಕದಲ್ಲಿ ನಮೂದಿಸತಕ್ಕದ್ದು:

ಪರಂತು, ಯಾವ ಮಹಿಳೆಯ ವಿರುದ್ಧ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ, 71ನೇ ಪ್ರಕರಣ, 74ನೇ ಪ್ರಕರಣ, 75ನೇ ಪ್ರಕರಣ, 76ನೇ ಪ್ರಕರಣ, 77ನೇ ಪ್ರಕರಣ, 78ನೇ ಪ್ರಕರಣ, 79ನೇ ಪ್ರಕರಣ ಅಥವಾ 124ನೇ ಪ್ರಕರಣದ ಮೇರೆಗೆ ಅಪರಾಧ ಎಸಗಲಾಗಿದೆಯೆಂದು ಅಥವಾ ಎಸಗಲು ಪ್ರಯತ್ನಿಸಲಾಗಿದೆಯೆಂದು ಆರೋಪ ಮಾಡಲಾಗಿದೆಯೋ ಆ ಮಹಿಳೆಯು ಮಾಹಿತಿಯನ್ನು ನೀಡಿದ್ದರೆ, ಒಬ್ಬ ಮಹಿಳಾ ಪೊಲೀಸ್ ಅಧಿಕಾರಿಯು ಅಥವಾ ಯಾರೇ ಮಹಿಳಾ ಅಧಿಕಾರಿಯು ಅಂಥ ಮಾಹಿತಿಯನ್ನು ದಾಖಲು ಮಾಡತಕ್ಕದ್ದು:

ಮತ್ತು ಪರಂತು,-

(ಎ) ಯಾವ ವ್ಯಕ್ತಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ, 2023(2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ, 71ನೇ ಪ್ರಕರಣ, 74ನೇ ಪ್ರಕರಣ, 75ನೇ ಪ್ರಕರಣ, 76ನೇ ಪ್ರಕರಣ, 77ನೇ ಪ್ರಕರಣ, 78ನೇ ಪ್ರಕರಣ, 79ನೇ ಪ್ರಕರಣ ಅಥವಾ 124ನೇ ಪ್ರಕರಣದ ಮೇರೆಗೆ ಅಪರಾಧ ಎಸಗಲಾಗಿದೆಯೆಂದು ಅಥವಾ ಎಸಗಲು ಪ್ರಯತ್ನಿಸಲಾಗಿದೆಯೆಂದು ಆರೋಪ ಮಾಡಲಾಗಿದೆಯೋ, ಆ ವ್ಯಕ್ತಿಯು ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಮಾನಸಿಕ ಅಥವಾ ದೈಹಿಕ ವಿಕಲಚೇತನ ವ್ಯಕ್ತಿಯಾಗಿದ್ದರೆ, ಆಗ ಪೊಲೀಸ್ ಅಧಿಕಾರಿಯು ಆ ಅಪರಾಧವನ್ನು ವರದಿ ಮಾಡಬಯಸುವ ವ್ಯಕ್ತಿಯ ಮನೆಯಲ್ಲಿಯೇ ಅಥವಾ ಆ ವ್ಯಕ್ತಿಯ ಆಯ್ಕೆಯ ಅನುಕೂಲಕರ ಸ್ಥಳದಲ್ಲಿ ಸಂದರ್ಭಾನುಸಾರ ದುಭಾಷಿಯ ಅಥವಾ ವಿಶೇಷ ಬೋಧಕನ ಸಮಕ್ಷಮದಲ್ಲಿ ಅಂಥ ಮಾಹಿತಿಯನ್ನು ದಾಖಲು ಮಾಡತಕ್ಕದ್ದು;

(ಬಿ) ಅಂಥ ಮಾಹಿತಿಯನ್ನು ದಾಖಲು ಮಾಡುವುದನ್ನು ವೀಡಿಯೋಗ್ರಾಫ್ ಮಾಡತಕ್ಕದ್ದು;

(ಸಿ) ಪೊಲೀಸ್ ಅಧಿಕಾರಿಯು, ಸಾಧ್ಯವಾದಷ್ಟು ಬೇಗನೆ 183ನೇ ಪ್ರಕರಣದ (6)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಮ್ಯಾಜಿಸ್ಟ್ರೇಟನು ದಾಖಲು ಮಾಡಿದ ಆ ವ್ಯಕ್ತಿಯ ಹೇಳಿಕೆಯನ್ನು ಪಡೆಯತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ದಾಖಲಿಸಲಾದ ಮಾಹಿತಿಯ ಪ್ರತಿಯನ್ನು ಮಾಹಿತಿದಾರನಿಗೆ ಅಥವಾ ಸಂತ್ರಸ್ತನಿಗೆ ಕೂಡಲೇ ಉಚಿತವಾಗಿ ನೀಡತಕ್ಕದ್ದು.

(3) 175ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ, ಮೂರು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಆದರೆ ಏಳು ವರ್ಷಗಳಿಗಿಂತ ಕಡಿಮೆ ಅವಧಿಗೆ ದಂಡನೀಯವಾದ ಯಾವುದೇ ಸಂಜ್ಞೇಯ ಅಪರಾಧ ನಡೆದಿರುವುದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಪೊಲೀಸ್ ಉಪ-ಅಧೀಕ್ಷಕ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿಯಿಂದ ಪೂರ್ವಾನುಮತಿ ಪಡೆದು, ಆ ಅಪರಾಧದ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿ,-

(i) ಹದಿನಾಲ್ಕು ದಿನಗಳ ಅವಧಿಯೊಳಗೆ, ಆ ವಿಷಯದಲ್ಲಿ ಮುಂದುವರೆಯುವುದಕ್ಕಾಗಿ ಅದು ಮೇಲ್ನೋಟಕ್ಕೆ ಮುಂದುವರೆಯಬಹುದಾದ ಪ್ರಕರಣವೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಪ್ರಾಥಮಿಕ ವಿಚಾರಣೆಯನ್ನು ನಡೆಸಬಹುದು; ಅಥವಾ

(ii) ಅದು ಮೇಲ್ನೋಟಕ್ಕೆ ಮಹತ್ವದ ಪ್ರಕರಣವೆಂದು ಕಂಡುಬಂದರೆ, ತನಿಖೆ ನಡೆಸಲು ಮುಂದಾಗಬಹುದು.

(4) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮಾಹಿತಿಯನ್ನು ದಾಖಲಿಸಲು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ನಿರಾಕರಿಸಿದ್ದರಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಮಾಹಿತಿಯ ಸಾರಾಂಶವನ್ನು ಲಿಖಿತದಲ್ಲಿ ಮತ್ತು ಅಂಚೆಯ ಮೂಲಕ ಸಂಬಂಧಿಸಿದ ಪೊಲೀಸ್ ಅಧೀಕ್ಷಕನಿಗೆ ಕಳುಹಿಸಬಹುದು. ಅಂಥ ಮಾಹಿತಿಯು ಒಂದು ಸಂಜ್ಞೇಯ ಅಪರಾಧ ಮಾಡುವುದನ್ನು ಬಹಿರಂಗಪಡಿಸುತ್ತದೆಂದು ಅವನಿಗೆ ಮನದಟ್ಟಾದರೆ, ಆತನು ಈ ಸಂಹಿತೆಯಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಮೊಕದ್ದಮೆಯನ್ನು ಖುದ್ದಾಗಿ ತನಿಖೆ ಮಾಡತಕ್ಕದ್ದು ಅಥವಾ ತನಗೆ ಅಧೀನನಾಗಿರುವ ಯಾರೇ ಪೊಲೀಸ್ ಅಧಿಕಾರಿಯು ತನಿಖೆ ಮಾಡುವಂತೆ ನಿರ್ದೇಶಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಆ ಅಪರಾಧಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು. ತಪ್ಪಿದಲ್ಲಿ ಅಂಥ ಬಾಧಿತ ವ್ಯಕ್ತಿಯು ಮ್ಯಾಜಿಸ್ಟ್ರೇಟನಿಗೆ ಮನವಿಯನ್ನು ಸಲ್ಲಿಸಬಹುದು.

**174. ಸಂಜ್ಞೇಯವಲ್ಲದ ಮೊಕದ್ದಮೆಗಳ ಬಗ್ಗೆ ಮಾಹಿತಿ ಮತ್ತು ಅಂಥ ಮೊಕದ್ದಮೆಗಳ ತನಿಖೆ.-** (1) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಅಂಥ ಠಾಣೆಯ ಪರಿಮಿತಿಗಳೊಳಗೆ ಸಂಜ್ಞೇಯವಲ್ಲದ ಅಪರಾಧವು ನಡೆಯುವ ಬಗ್ಗೆ ಮಾಹಿತಿಯನ್ನು ಕೊಟ್ಟಾಗ, ಈ ಬಗ್ಗೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ಅಧಿಕಾರಿಯು ಇಡುವ ಪುಸ್ತಕದಲ್ಲಿ ಅವನು ಮಾಹಿತಿಯ ಸಾರಾಂಶವನ್ನು ದಾಖಲಿಸತಕ್ಕದ್ದು ಅಥವಾ ದಾಖಲಿಸುವಂತೆ ಮಾಡತಕ್ಕದ್ದು ಮತ್ತು,-

(i) ಮಾಹಿತಿದಾರನನ್ನು ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು;

(ii) ಅಂಥ ಎಲ್ಲಾ ಪ್ರಕರಣಗಳ ದಿನವಹಿ ದಿನಚರಿ ವರದಿಯನ್ನು ಪಾಕ್ಷಿಕವಾಗಿ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

(2) ಯಾರೇ ಪೊಲೀಸ್ ಅಧಿಕಾರಿಯು ಸಂಜ್ಞೇಯವಲ್ಲದ ಮೊಕದ್ದಮೆಯನ್ನು, ಅಂಥ ಮೊಕದ್ದಮೆಯನ್ನು ವಿಚಾರಣೆ ಮಾಡಲು ಅಥವಾ ಅಧಿವಿಚಾರಣೆಗೆ ಗುರಿಪಡಿಸಲು ಅಧಿಕಾರ ಹೊಂದಿರುವ ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ, ತನಿಖೆ ಮಾಡತಕ್ಕದ್ದಲ್ಲ.

(3) ಅಂಥ ಆದೇಶವನ್ನು ಪಡೆಯುವ ಯಾರೇ ಪೊಲೀಸ್ ಅಧಿಕಾರಿಯು, ತನಿಖೆಯ ಬಗ್ಗೆ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಸಂಜ್ಞೇಯ ಮೊಕದ್ದಮೆಯಲ್ಲಿ ಚಲಾಯಿಸಬಹುದಾದಂಥವೇ ಅಧಿಕಾರಗಳನ್ನು (ವಾರಂಟಿಲ್ಲದೆ ದಸ್ತಗಿರಿ ಮಾಡುವ ಅಧಿಕಾರವನ್ನು ಹೊರತುಪಡಿಸಿ) ಚಲಾಯಿಸಬಹುದು.

(4) ಮೊಕದ್ದಮೆಯು, ಎರಡು ಅಥವಾ ಹೆಚ್ಚಿನ ಅಪರಾಧಗಳಿಗೆ ಸಂಬಂಧಿಸಿದ್ದು ಅವುಗಳಲ್ಲಿ ಕನಿಷ್ಠ ಪಕ್ಷ ಒಂದಾದರೂ ಸಂಜ್ಞೇಯವಾಗಿರುವಲ್ಲಿ, ಇತರ ಅಪರಾಧಗಳು ಸಂಜ್ಞೇಯವಲ್ಲದಾಗಿದ್ದಾಗ್ಯೂ ಆ ಮೊಕದ್ದಮೆಯನ್ನು ಸಂಜ್ಞೇಯ ಮೊಕದ್ದಮೆಯೆಂದು ಭಾವಿಸತಕ್ಕದ್ದು.

**175. ಸಂಜ್ಞೇಯ ಮೊಕದ್ದಮೆಯನ್ನು ತನಿಖೆ ಮಾಡಲು ಪೊಲೀಸ್ ಅಧಿಕಾರಿಯ ಅಧಿಕಾರ.-** (1) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಯಾರೇ ಅಧಿಕಾರಿಯು ಅಂಥ ಠಾಣೆಯ ಪರಿಮಿತಿಗಳೊಳಗಿನ ಸ್ಥಳೀಯ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯವು ಅಧ್ಯಾಯ XIVರ ಉಪಬಂಧಗಳ ಮೇರೆಗೆ ಯಾವುದನ್ನು ವಿಚಾರಣೆ ಮಾಡಲು ಅಥವಾ ಅಧಿವಿಚಾರಣೆ ಮಾಡಲು ಅಧಿಕಾರ ಹೊಂದಿರುವುದೋ ಆ ಯಾವುದೇ ಸಂಜ್ಞೇಯ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ ತನಿಖೆ ಮಾಡಬಹುದು:

ಪರಂತು, ಅಪರಾಧದ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿ ಪೊಲೀಸ್ ಅಧೀಕ್ಷಕನು ಮೊಕದ್ದಮೆಯನ್ನು ತನಿಖೆ ಮಾಡುವಂತೆ ಪೊಲೀಸ್ ಉಪ-ಅಧೀಕ್ಷಕನನ್ನು ಅಗತ್ಯಪಡಿಸಬಹುದು.

(2) ಅಂಥ ಯಾವುದೇ ಮೊಕದ್ದಮೆಯಲ್ಲಿ ಪೊಲೀಸ್ ಅಧಿಕಾರಿಯ ವ್ಯವಹರಣೆಗಳನ್ನು, ಈ ಪ್ರಕರಣದ ಮೇರೆಗೆ ತನಿಖೆ ಮಾಡಲು ಅಂಥ ಅಧಿಕಾರಿಯು ಅಧಿಕಾರ ಹೊಂದಿಲ್ಲ ಎಂಬ ಕಾರಣದ ಮೇಲೆ ಯಾವುದೇ ಹಂತದಲ್ಲೂ ಪ್ರಶ್ನಿಸತಕ್ಕದ್ದಲ್ಲ.

(3) 210ನೇ ಪ್ರಕರಣದ ಮೇರೆಗೆ ಅಧಿಕಾರ ಹೊಂದಿದ ಯಾರೇ ಮ್ಯಾಜಿಸ್ಟ್ರೇಟನು, 173ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಫಿಡಾವಿಟ್ಟಿನೊಂದಿಗೆ ಸಲ್ಲಿಸಲಾದ ಅರ್ಜಿಯನ್ನು ಪರ್ಯಾಲೋಚಿಸಿದ ನಂತರ ಮತ್ತು ತಾನು ಅಗತ್ಯವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ನಂತರ ಪೊಲೀಸ್ ಅಧಿಕಾರಿಯು ಈ ಸಂಬಂಧದಲ್ಲಿ ನಿವೇದನೆ ಮಾಡಿದ ತರುವಾಯ ಮೇಲೆ ಹೇಳಲಾದಂಥ ತನಿಖೆಗೆ ಆದೇಶಿಸಬಹುದು.

(4) 210ನೇ ಪ್ರಕರಣದ ಮೇರೆಗೆ ಅಧಿಕಾರ ಹೊಂದಿದ ಯಾರೇ ಮ್ಯಾಜಿಸ್ಟ್ರೇಟನು, ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸುವ ಕ್ರಮದಲ್ಲಿ ಉದ್ಭವಿಸಿದ ಸರ್ಕಾರಿ ನೌಕರನ ವಿರುದ್ಧದ ದೂರನ್ನು ಸ್ವೀಕರಿಸಿದ ನಂತರ,-

(ಎ) ತನ್ನ ವರಿಷ್ಠಾಧಿಕಾರಿಯಿಂದ ಘಟನೆಯ ಸಂಗತಿಗಳು ಮತ್ತು ಪರಿಸ್ಥಿತಿಗಳನ್ನೊಳಗೊಂಡ ವರದಿಯನ್ನು ಸ್ವೀಕರಿಸುವುದಕ್ಕೊಳಪಟ್ಟು; ಮತ್ತು

(ಬಿ) ಹಾಗೆ ಆಪಾದಿಸಲಾದ ಘಟನೆಗೆ ಕಾರಣವಾದ ಪರಿಸ್ಥಿತಿಯ ಬಗ್ಗೆ ಸರ್ಕಾರಿ ನೌಕರನು ಮಾಡಿಕೊಂಡ ಸಮರ್ಥನೆಗಳನ್ನು ಪರಿಗಣಿಸಿದ ನಂತರ

- ತನಿಖೆಗೆ ಆದೇಶಿಸಬಹುದು.

**176. ತನಿಖೆಗೆ ಸಂಬಂಧಿಸಿದ ಪ್ರಕ್ರಿಯೆ.-** (1) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ತಾನು ಪಡೆದ ಮಾಹಿತಿಯ ಮೇಲೆ ಅಥವಾ ಅನ್ಯಥಾ 175ನೇ ಪ್ರಕರಣದ ಮೇರೆಗೆ ಯಾವುದನ್ನು ತನಿಖೆ ಮಾಡಲು ತನಗೆ ಅಧಿಕಾರ ನೀಡಲಾಗಿದೆಯೋ, ಆ ಅಪರಾಧ ನಡೆದಿದೆಯೆಂದು ಶಂಕಿಸಲು ಕಾರಣವಿದ್ದರೆ, ಆತನು ಪೊಲೀಸ್ ವರದಿಯ ಮೇಲೆ ಅಂಥ ಅಪರಾಧವನ್ನು ಗಮನಕ್ಕೆ ತೆಗೆದುಕೊಳ್ಳಲು ಅಧಿಕಾರ ಹೊಂದಿರುವ ಮ್ಯಾಜಿಸ್ಟ್ರೇಟನಿಗೆ, ಅದರ ವರದಿಯನ್ನು ಕೂಡಲೇ ಕಳುಹಿಸತಕ್ಕದ್ದು ಮತ್ತು ಮೊಕದ್ದಮೆಯ ಸತ್ಯಾಂಶಗಳನ್ನು ಮತ್ತು ಸನ್ನಿವೇಶಗಳನ್ನು ತನಿಖೆ ಮಾಡಲು ಮತ್ತು ಅವಶ್ಯಕವಾದರೆ, ಅಪರಾಧಿಯ ಪತ್ತೆಗಾಗಿ ಮತ್ತು ದಸ್ತಗಿರಿಗಾಗಿ ಕ್ರಮಗಳನ್ನು ತೆಗೆದುಕೊಳ್ಳಲು ಆ ಸ್ಥಳಕ್ಕೆ ತಾನೇ ಖುದ್ದಾಗಿ ಹೋಗತಕ್ಕದ್ದು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿಯಮಿಸಬಹುದಾದಂಥ ದರ್ಜೆಗಿಂತ ಕಡಿಮೆ ದರ್ಜೆಯಾಗಿರದ ತನ್ನ ಅಧೀನ ಅಧಿಕಾರಿಗಳಲ್ಲಿ ಒಬ್ಬನನ್ನು ಕಳುಹಿಸತಕ್ಕದ್ದು:

ಪರಂತು,-

(ಎ) ಯಾವುದೇ ಅಂಥ ಅಪರಾಧವು ನಡೆದ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧವಾಗಿ ಅವನನ್ನು ಹೆಸರಿಸಿ ಮಾಹಿತಿ ಕೊಟ್ಟಿರುವಲ್ಲಿ ಮತ್ತು ಮೊಕದ್ದಮೆಯು ತೀವ್ರ ಸ್ವರೂಪದ್ದಾಗಿರದಿದ್ದರೆ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಸ್ಥಳದಲ್ಲೇ ತನಿಖೆಯನ್ನು ಮಾಡಲು ಖುದ್ದಾಗಿ ಹೋಗುವ ಅಥವಾ ಒಬ್ಬ ಅಧೀನ ಅಧಿಕಾರಿಯನ್ನು ಕಳುಹಿಸುವ ಅಗತ್ಯವಿರುವುದಿಲ್ಲ.

(ಬಿ) ತನಿಖೆಯನ್ನು ಮಾಡುವುದಕ್ಕೆ ಸಾಕಷ್ಟು ಕಾರಣಗಳು ಇರುವುದಿಲ್ಲವೆಂದು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಕಂಡುಬಂದರೆ, ಅವನು ಮೊಕದ್ದಮೆಯನ್ನು ತನಿಖೆ ಮಾಡತಕ್ಕದ್ದಲ್ಲ:

ಮತ್ತು ಪರಂತು, ಅತ್ಯಾಚಾರದ ಅಪರಾಧಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಯ ಹೇಳಿಕೆಯನ್ನು ಸಂತ್ರಸ್ತೆಯ ವಾಸದ ಮನೆಯಲ್ಲಿ ಅಥವಾ ಆಕೆ ಆಯ್ಕೆ ಮಾಡಿದ ಸ್ಥಳದಲ್ಲಿ ಮತ್ತು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಸಂತ್ರಸ್ತೆಯ ತಂದೆ ತಾಯಂದಿರ ಅಥವಾ ಆಕೆಯ ಪಾಲಕರ ಅಥವಾ ಹತ್ತಿರದ ಸಂಬಂಧಿಕರ ಅಥವಾ ಸ್ಥಳೀಯ ಸಾಮಾಜಿಕ ಕಾರ್ಯಕರ್ತನ ಸಮ್ಮುಖದಲ್ಲಿ ಮಹಿಳಾ ಪೊಲೀಸ್ ಅಧಿಕಾರಿಯು ದಾಖಲು ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ಹೇಳಿಕೆಯನ್ನು ಮೊಬೈಲ್ ಫೋನು ಸೇರಿದಂತೆ ಯಾವುದೇ ಶ್ರವ್ಯ-ದೃಶ್ಯ ವಿದ್ಯುನ್ಮಾನ ವಿಧಾನಗಳ ಮುಖಾಂತರವೂ ಸಹ ದಾಖಲಿಸಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೊದಲನೇ ಪರಂತುಕದ (ಎ) ಮತ್ತು (ಬಿ) ಖಂಡಗಳಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಮೊಕದ್ದಮೆಗಳಲ್ಲಿ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಆ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದುದನ್ನು ಸಂಪೂರ್ಣವಾಗಿ ಪಾಲಿಸದಿರುವ ಕಾರಣಗಳನ್ನು ತನ್ನ ವರದಿಯಲ್ಲಿ ತಿಳಿಸತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನಿಗೆ ದೈನಂದಿನ ದಿನಚರಿ ವರದಿಯನ್ನು ಪಾಕ್ಷಿಕವಾಗಿ ಕಳುಹಿಸತಕ್ಕದ್ದು ಮತ್ತು ಸದರಿ ಪರಂತುಕದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಮೊಕದ್ದಮೆಯಲ್ಲಿ ಅಧಿಕಾರಿಯು, ಮಾಹಿತಿದಾರನು ಯಾರಾದರೂ ಇದ್ದರೆ, ಅವನಿಗೆ ಕೂಡಲೇ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು.

(3) ಏಳು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳಿಗೆ ದಂಡನೀಯವಾದ ಅಪರಾಧ ನಡೆದಿರುವುದಕ್ಕೆ ಸಂಬಂಧಿಸಿದ ಪ್ರತಿಯೊಂದು ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಈ ಸಂಬಂಧ ರಾಜ್ಯ ಸರ್ಕಾರವು ಐದು ವರ್ಷಗಳ ಅವಧಿಯೊಳಗೆ ಅಧಿಸೂಚಿಸಿರಬಹುದಾದಂಥ ದಿನಾಂಕದಿಂದ ಅಪರಾಧದಲ್ಲಿ ವಿಧಿವಿಜ್ಞಾನ ಸಾಕ್ಷ್ಯವನ್ನು ಸಂಗ್ರಹಿಸಲು ಅಪರಾಧ ನಡೆದ ಜಾಗಕ್ಕೆ ವಿಧಿವಿಜ್ಞಾನ ತಜ್ಞರು ಭೇಟಿಯಾಗುವಂತೆ ಮಾಡತಕ್ಕದ್ದು

ಹಾಗೂ ಆ ಪ್ರಕ್ರಿಯೆಯನ್ನು ಮೊಬೈಲ್ ಫೋನು ಅಥವಾ ಯಾವುದೇ ಇತರ ವಿದ್ಯುನ್ಮಾನ ಸಾಧನದ ಮೂಲಕ ವೀಡಿಯೋಗ್ರಫಿ ಕೂಡ ಮಾಡಿಸತಕ್ಕದ್ದು:

ಪರಂತು, ಯಾವುದೇ ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ವಿಧಿವಿಜ್ಞಾನ ಸೌಲಭ್ಯ ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು, ಆ ವಿಷಯಕ್ಕೆ ಸಂಬಂಧಿಸಿದಂತೆ ಅಂಥ ಸೌಲಭ್ಯವನ್ನು ರಾಜ್ಯದಲ್ಲಿ ಅಭಿವೃದ್ಧಿಪಡಿಸುವವರೆಗೆ ಅಥವಾ ವ್ಯವಸ್ಥೆಗೊಳಿಸುವವರೆಗೆ ಇತರೆ ಯಾವುದೇ ರಾಜ್ಯದ ಅಂಥ ಸೌಲಭ್ಯವನ್ನು ಬಳಕೆಮಾಡಿಕೊಳ್ಳುವುದಕ್ಕೆ ಅಧಿಸೂಚಿಸತಕ್ಕದ್ದು.

**177. ವರದಿ ಸಲ್ಲಿಸುವ ಬಗೆ.-** (1) 176ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನಿಗೆ ಕಳುಹಿಸಲಾಗುವ ಪ್ರತಿಯೊಂದು ವರದಿಯನ್ನು, ರಾಜ್ಯ ಸರ್ಕಾರವು ಹಾಗೆ ನಿರ್ದೇಶಿಸಿದರೆ, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ನೇಮಕ ಮಾಡಬಹುದಾದಂಥ ವರಿಷ್ಠ ಅಧಿಕಾರಿಯ ಮೂಲಕ ಕಳುಹಿಸತಕ್ಕದ್ದು.

(2) ಅಂಥ ವರಿಷ್ಠ ಅಧಿಕಾರಿಯು, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ತಾನು ಸೂಕ್ತವೆಂದು ಭಾವಿಸುವಂಥ ಸೂಚನೆಗಳನ್ನು ನೀಡಬಹುದು ಮತ್ತು ಅಂಥ ವರದಿ ಕುರಿತ ಅಂಥ ಸೂಚನೆಗಳನ್ನು ದಾಖಲಿಸಿದ ತರುವಾಯ ವಿಳಂಬವಿಲ್ಲದೆಯೆ ಅದನ್ನು ಮ್ಯಾಜಿಸ್ಟ್ರೇಟನಿಗೆ ರವಾನಿಸತಕ್ಕದ್ದು.

**178. ತನಿಖೆ ಅಥವಾ ಪ್ರಾರಂಭಿಕ ವಿಚಾರಣೆಯನ್ನು ನಡೆಸುವ ಅಧಿಕಾರ.-** ಮ್ಯಾಜಿಸ್ಟ್ರೇಟನು, 176ನೇ ಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ ತನಿಖೆಗೆ ನಿರ್ದೇಶಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸಿದರೆ ಈ ಸಂಹಿತೆಯಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಮೊಕದ್ದಮೆಯ ಪ್ರಾರಂಭಿಕ ವಿಚಾರಣೆಯನ್ನು ನಡೆಸಲು ಅಥವಾ ಅನ್ಯಥಾ ವಿಲೆ ಮಾಡಲು ಕೂಡಲೇ ಮುಂದುವರೆಯಬಹುದು ಅಥವಾ ತನಗೆ ಅಧೀನನಾಗಿರುವ ಯಾರೇ ಮ್ಯಾಜಿಸ್ಟ್ರೇಟನನ್ನು ಮುಂದುವರೆಸುವುದಕ್ಕಾಗಿ ಪ್ರತಿನಿಯೋಜಿಸಬಹುದು.

**179. ಸಾಕ್ಷಿದಾರರ ಹಾಜರಾತಿಯನ್ನು ಅಗತ್ಯಪಡಿಸಲು ಪೊಲೀಸ್ ಅಧಿಕಾರಿಯ ಅಧಿಕಾರ.-** (1) ಈ ಅಧ್ಯಾಯದ ಮೇರೆಗೆ ತನಿಖೆಯನ್ನು ಮಾಡುವ ಯಾರೇ ಪೊಲೀಸ್ ಅಧಿಕಾರಿಯು, ತನ್ನ ಠಾಣೆಯ ಅಥವಾ ಅದಕ್ಕೆ ಲಗತ್ತಾಗಿರುವ ಯಾವುದೇ ಠಾಣೆಯ ಪರಿಮಿತಿಗಳೊಳಗೆ ತನಗೆ ಬಂದ ಮಾಹಿತಿಯ ಪ್ರಕಾರ ಅಥವಾ ಅನ್ಯಥಾ ಆ ಮೊಕದ್ದಮೆಯ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ತಿಳಿದಿರುವನೆಂದು ಕಂಡುಬರುವ ಯಾರೇ ವ್ಯಕ್ತಿಯು, ತನ್ನ ಮುಂದೆ ಹಾಜರಾಗುವಂತೆ ಲಿಖಿತ ಆದೇಶದ ಮೂಲಕ ಅಗತ್ಯಪಡಿಸಬಹುದು ಮತ್ತು ಅಂಥ ವ್ಯಕ್ತಿಯು ಹಾಗೆ ಅಗತ್ಯಪಡಿಸಲಾದಂತೆ ಹಾಜರಾಗತಕ್ಕದ್ದು:

ಪರಂತು, ಹದಿನೈದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಥವಾ ಅರವತ್ತು ವರ್ಷಗಳಿಗಿಂತಲೂ ಹೆಚ್ಚು ವಯಸ್ಸಿನ ಯಾರೇ ಪುರುಷನನ್ನು ಅಥವಾ ಮಹಿಳೆಯನ್ನು ಅಥವಾ ಮಾನಸಿಕ ಅಥವಾ ದೈಹಿಕ ಅಂಗವಿಕಲ ವ್ಯಕ್ತಿಯನ್ನು ಅಥವಾ ಗಂಭೀರ ಖಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯನ್ನು, ಆ ಪುರುಷ ಅಥವಾ ಮಹಿಳೆಯು ವಾಸ ಮಾಡುತ್ತಿರುವ ಸ್ಥಳವಲ್ಲದ ಇತರ ಯಾವುದೇ ಸ್ಥಳದಲ್ಲಿ ಹಾಜರಾಗುವಂತೆ ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಅಂಥ ವ್ಯಕ್ತಿಯು ಆ ಪೊಲೀಸ್ ಠಾಣೆಯಲ್ಲಿಯೇ ಹಾಜರಾಗಲು ಇಚ್ಛಿಸಿದರೆ, ಆ ವ್ಯಕ್ತಿಯು ಹಾಗೆ ಹಾಜರಾಗಲು ಅನುಮತಿಸಬಹುದು.

(2) ರಾಜ್ಯ ಸರ್ಕಾರವು, ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ (1)ನೇ ಉಪಪ್ರಕರಣದ ಮೇರೆಗೆ ತನ್ನ ನಿವಾಸವಲ್ಲದ ಯಾವುದೇ ಸ್ಥಳದಲ್ಲಿ ಹಾಜರಾಗುವ ಪ್ರತಿಯೊಬ್ಬ ವ್ಯಕ್ತಿಯ ಯುಕ್ತ ವೆಚ್ಚಗಳನ್ನು ಪೊಲೀಸ್ ಅಧಿಕಾರಿಯು ಸಂದಾಯ ಮಾಡಲು ಉಪಬಂಧವನ್ನು ಕಲ್ಪಿಸಬಹುದು.

**180. ಪೊಲೀಸರಿಂದ ಸಾಕ್ಷಿದಾರರ ವಿಚಾರಣೆ.-** (1) ಈ ಅಧ್ಯಾಯದ ಮೇರೆಗೆ ತನಿಖೆಯನ್ನು ಮಾಡುವ ಯಾರೇ ಪೊಲೀಸ್ ಅಧಿಕಾರಿಯು ಅಥವಾ ಆತನ ಕೋರಿಕೆಯ ಮೇರೆಗೆ ಕಾರ್ಯನಿರ್ವಹಿಸುವ ಮತ್ತು ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ನಿಯಮಿಸಿದ ಅಂಥ ದರ್ಜೆಗಿಂತ ಕಡಿಮೆಯಲ್ಲದ ಯಾರೇ ಪೊಲೀಸ್ ಅಧಿಕಾರಿಯು ಮೊಕದ್ದಮೆಯ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ತಿಳಿದಿರಬಹುದಾದ ಯಾರೇ ವ್ಯಕ್ತಿಯನ್ನು ಮೌಖಿಕವಾಗಿ ವಿಚಾರಣೆ ಮಾಡಬಹುದು.

(2) ಕ್ರಿಮಿನಲ್ ಆಪಾದನೆಗೆ ಅಥವಾ ದಂಡಕ್ಕೆ ಅಥವಾ ಮುಟ್ಟುಗೋಲಿಗೆ ಗುರಿಪಡಿಸುವ ಸ್ವರೂಪದ ಉತ್ತರಗಳನ್ನು ಕೊಡಬೇಕಾಗಿರುವ ಪ್ರಶ್ನೆಗಳನ್ನು ಬಿಟ್ಟು, ಆ ಮೊಕದ್ದಮೆಗೆ ಸಂಬಂಧಿಸಿದಂತೆ, ಅಂಥ ಅಧಿಕಾರಿಯು ಹಾಕುವ ಎಲ್ಲ ಪ್ರಶ್ನೆಗಳಿಗೂ ನೈಜವಾಗಿ ಉತ್ತರಿಸಲು ಆ ವ್ಯಕ್ತಿಯು ಬದ್ಧನಾಗಿರತಕ್ಕದ್ದು.

(3) ಪೊಲೀಸ್ ಅಧಿಕಾರಿಯು ಈ ಪ್ರಕರಣದ ಮೇರೆಗಿನ ವಿಚಾರಣೆಯಲ್ಲಿ ತನಗೆ ನೀಡಲಾದ ಯಾವುದೇ ಹೇಳಿಕೆಯನ್ನು ಲಿಖಿತದಲ್ಲಿ ದಾಖಲಿಸಬಹುದು ಮತ್ತು ಆತನು ಹಾಗೆ ಮಾಡಿದರೆ, ಯಾರ ಹೇಳಿಕೆಯನ್ನು ತಾನು ದಾಖಲಿಸುವನೋ, ಆ ಪ್ರತಿಯೊಬ್ಬ ವ್ಯಕ್ತಿಯ ಹೇಳಿಕೆಯನ್ನು ಪ್ರತ್ಯೇಕವಾಗಿ ಮತ್ತು ಸತ್ಯವಾಗಿ ದಾಖಲಿಸತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ನೀಡಿದ ಹೇಳಿಕೆಯನ್ನು ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕವೂ ಸಹ ದಾಖಲು ಮಾಡಿಕೊಳ್ಳಬಹುದು:

ಮತ್ತು ಪರಂತು, ಯಾವ ಮಹಿಳೆಯ ವಿರುದ್ಧ, ಆಕೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ, 71ನೇ ಪ್ರಕರಣ, 74ನೇ ಪ್ರಕರಣ, 75ನೇ ಪ್ರಕರಣ, 76ನೇ ಪ್ರಕರಣ, 77ನೇ ಪ್ರಕರಣ, 78ನೇ ಪ್ರಕರಣ, 79ನೇ ಪ್ರಕರಣ ಅಥವಾ 124ನೇ ಪ್ರಕರಣದ ಮೇರೆಗಿನ ಅಪರಾಧವನ್ನು ಎಸಗಿದ್ದಾಳೆಂದು ಆರೋಪ ಮಾಡಲಾಗಿದೆಯೋ, ಆ ಮಹಿಳೆಯ ಹೇಳಿಕೆಯನ್ನು ಒಬ್ಬ ಮಹಿಳಾ ಪೊಲೀಸ್ ಅಧಿಕಾರಿಯು ಅಥವಾ ಯಾರೇ ಮಹಿಳಾ ಅಧಿಕಾರಿಯು ದಾಖಲು ಮಾಡಿಕೊಳ್ಳತಕ್ಕದ್ದು.

**181. ಪೊಲೀಸರಿಗೆ ಕೊಡುವ ಹೇಳಿಕೆಗಳು ಮತ್ತು ಆ ಹೇಳಿಕೆಗಳ ಬಳಕೆ.-** (1) ಈ ಅಧ್ಯಾಯದ ಮೇರೆಗಿನ ತನಿಖೆಯಲ್ಲಿ ಯಾರೇ ವ್ಯಕ್ತಿಯು ಪೊಲೀಸ್ ಅಧಿಕಾರಿಗೆ ಕೊಟ್ಟ ಯಾವುದೇ ಹೇಳಿಕೆಯನ್ನು, ಲಿಖಿತಕ್ಕೆ ಇಳಿಸಿದರೆ, ಅದನ್ನು ಕೊಟ್ಟ ವ್ಯಕ್ತಿಯು ಅದಕ್ಕೆ ಸಹಿ ಮಾಡತಕ್ಕದ್ದಲ್ಲ. ಪೊಲೀಸ್ ದಿನಚರಿಯಲ್ಲಿ ಅಥವಾ ಬೇರೆಯದರಲ್ಲಿ ಇರುವ ಅಂಥ ಯಾವುದೇ ಹೇಳಿಕೆಯನ್ನು ಅಥವಾ ಅದರ ಯಾವುದೇ ದಾಖಲೆಯನ್ನು ಅಥವಾ ಅಂಥ ಹೇಳಿಕೆಯ ಅಥವಾ ದಾಖಲೆಯ ಯಾವುದೇ ಭಾಗವನ್ನು, ಅಂಥ ಹೇಳಿಕೆಯನ್ನು ಮಾಡಿದ ಸಮಯದಲ್ಲಿ ತನಿಖೆಯಲ್ಲಿರುವ ಯಾವುದೇ ಅಪರಾಧದ ಸಂಬಂಧದಲ್ಲಿನ ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ಇನ್ನು ಮುಂದೆ ಉಪಬಂಧಿಸಲಾದದ್ದನ್ನುಳಿದು ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ:

ಪರಂತು, ಯಾರ ಹೇಳಿಕೆಯನ್ನು ಈ ಹಿಂದೆ ಹೇಳಿದಂತೆ ಲಿಖಿತಕ್ಕೆ ಇಳಿಸಲಾಗಿದೆಯೋ ಆ ಯಾರೇ ಸಾಕ್ಷಿಯನ್ನು ಅಂಥ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ಪ್ರಾಸಿಕ್ಯೂಷನ್ ಪರವಾಗಿ ಕರೆದಾಗ, ಅವನ ಹೇಳಿಕೆಯ ಯಾವುದೇ ಭಾಗವನ್ನು, ಅದು ಯುಕ್ತಬದ್ಧವಾಗಿ ರುಜುವಾತಾದರೆ, ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 148ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಅಂಥ ವ್ಯಕ್ತಿಯ ಹೇಳಿಕೆಯಲ್ಲಿರುವ ವ್ಯತಿರಿಕ್ತತೆಯನ್ನು ತೋರಿಸಲು ಆಪಾದಿತನು ಮತ್ತು ನ್ಯಾಯಾಲಯದ ಅನುಮತಿಯೊಡನೆ ಪ್ರಾಸಿಕ್ಯೂಷನ್‌ರವರು ಅದನ್ನು ಉಪಯೋಗಿಸಬಹುದು ಮತ್ತು ಅಂಥ ಹೇಳಿಕೆಯ

ಯಾವುದೇ ಭಾಗವನ್ನು ಹಾಗೆ ಉಪಯೋಗಿಸಿದಾಗ ಅದರ ಯಾವುದೇ ಭಾಗವನ್ನು ಅಂಥ ಸಾಕ್ಷಿಯ ಪುನರ್ವಿಚಾರಣೆಯಲ್ಲೂ ಸಹ ಉಪಯೋಗಿಸಬಹುದು. ಆದರೆ, ಅವನ ಪಾಟೀ-ಸವಾಲಿನಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯವನ್ನು ವಿವರಿಸುವ ಉದ್ದೇಶಕ್ಕಾಗಿ ಮಾತ್ರವೇ ಅದನ್ನು ಉಪಯೋಗಿಸಬಹುದು.

(2) ಈ ಪ್ರಕರಣದಲ್ಲಿರುವುದು ಯಾವುದೂ, ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 26ನೇ ಪ್ರಕರಣದ (ಎ) ಖಂಡದ ಉಪಬಂಧಗಳ ವ್ಯಾಪ್ತಿಯಲ್ಲಿ ಬರುವ ಯಾವುದೇ ಹೇಳಿಕೆಗೆ ಅನ್ವಯವಾಗುವುದೆಂದು ಅಥವಾ ಆ ಅಧಿನಿಯಮದ 23ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದ ಉಪಬಂಧಗಳ ಮೇಲೆ ಪರಿಣಾಮಕಾರಿಯಾಗುತ್ತದೆಂದು ಭಾವಿಸತಕ್ಕದ್ದಲ್ಲ.

*ವಿವರಣೆ.-* (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಹೇಳಿಕೆಯಲ್ಲಿ ಸಂಗತಿ ಅಥವಾ ಸನ್ನಿವೇಶವನ್ನು ತಿಳಿಸದಿರುವ, ಒಂದು ಲೋಪವು, ಅಂಥ ಲೋಪವು ಉಂಟಾಗಿರುವ ಸಂದರ್ಭವನ್ನು ಗಮನಿಸಿ, ಮಹತ್ವದ್ದಾಗಿ ಮತ್ತು ಅನ್ಯಥಾ ಸುಸಂಬದ್ಧವಾಗಿ ಕಂಡುಬಂದರೆ, ಅದು ವ್ಯತಿರಿಕ್ತವಾದುದು ಎಂದೆನಿಸಬಹುದು ಮತ್ತು ಆ ನಿರ್ದಿಷ್ಟ ಸಂದರ್ಭದಲ್ಲಿ ಯಾವುದೇ ಲೋಪವು ವ್ಯತಿರಿಕ್ತವಾದುದೇ ಅಥವಾ ಅಲ್ಲವೇ ಎಂಬ ಸಂಗತಿಯ ಪ್ರಶ್ನೆಯಾಗಿರತಕ್ಕದ್ದು.

**182. ಪ್ರೇರೇಪಣೆ ಮಾಡದಿರುವುದು.-** (1) ಯಾರೇ ಪೊಲೀಸ್ ಅಧಿಕಾರಿಯು ಅಥವಾ ಆ ಕಾರ್ಯನಿರ್ವಹಿಸುತ್ತಿರುವ ಯಾರೇ ಇತರ ವ್ಯಕ್ತಿಯು, ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 22ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ಪ್ರೇರೇಪಣೆ ಅಥವಾ ಭೀತಿಯನ್ನು ಉಂಟು ಮಾಡತಕ್ಕದ್ದಲ್ಲ ಅಥವಾ ಆಶ್ವಾಸನೆಯನ್ನು ಕೊಡತಕ್ಕದ್ದಲ್ಲ.

(2) ಆದರೆ ಯಾರೇ ಪೊಲೀಸ್ ಅಧಿಕಾರಿಯು ಅಥವಾ ಇತರ ವ್ಯಕ್ತಿಯು ಈ ಅಧ್ಯಾಯದ ಮೇರೆಗೆ ಯಾವುದೇ ತನಿಖೆಯನ್ನು ಮಾಡುತ್ತಿರುವಾಗ, ಯಾವುದೇ ಎಚ್ಚರಿಕೆಯ ಮೂಲಕ ಅಥವಾ ಅನ್ಯಥಾ ಯಾರೇ ವ್ಯಕ್ತಿಯು ತನ್ನ ಸ್ವಂತ ಇಚ್ಛೆಯಿಂದ ನೀಡಲಿರುವ ಯಾವುದೇ ಹೇಳಿಕೆಯನ್ನು ಪ್ರತಿಬಂಧಿಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ 183ನೇ ಪ್ರಕರಣದ (4)ನೇ ಉಪಪ್ರಕರಣದ ಉಪಬಂಧಗಳ ಮೇಲೆ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

**183. ತಪ್ಪೊಪ್ಪಿಗೆಗಳನ್ನು ಮತ್ತು ಹೇಳಿಕೆಗಳನ್ನು ದಾಖಲಿಸುವುದು.-** (1) ಯಾವುದೇ ಅಪರಾಧವು ನಡೆದಿರುವ ಬಗ್ಗೆ ಮಾಹಿತಿಯು ಯಾವ ಜಿಲ್ಲೆಯಲ್ಲಿ ನೋಂದಣಿಯಾಗಿದೆಯೋ ಆ ಜಿಲ್ಲೆಯ ಯಾರೇ ಮ್ಯಾಜಿಸ್ಟ್ರೇಟನು, ಆ ಮೊಕದ್ದಮೆಯು ತನ್ನ ಅಧಿಕಾರವ್ಯಾಪ್ತಿಯಲ್ಲಿರಲಿ ಅಥವಾ ಇಲ್ಲದಿರಲಿ, ಈ ಅಧ್ಯಾಯದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ತನಿಖೆ ನಡೆಯುತ್ತಿರುವಾಗ ಅಥವಾ ಆನಂತರದ ಯಾವುದೇ ಸಮಯದಲ್ಲಿ, ಆದರೆ ವಿಚಾರಣೆ ಅಥವಾ ಅಧಿವಿಚಾರಣೆ ಪ್ರಾರಂಭವಾಗುವುದಕ್ಕೆ ಮುಂಚೆ, ತನಗೆ ಕೊಟ್ಟ ಯಾವುದೇ ತಪ್ಪೊಪ್ಪಿಗೆ ಅಥವಾ ಹೇಳಿಕೆಯನ್ನು ದಾಖಲಿಸಬಹುದು:

ಪರಂತು, ಈ ಪ್ರಕರಣದ ಮೇರೆಗೆ ನೀಡಿದ ಯಾವುದೇ ತಪ್ಪೊಪ್ಪಿಗೆಯನ್ನು ಅಥವಾ ಹೇಳಿಕೆಯನ್ನು, ಅಪರಾಧದ ಆಪಾದಿತ ವ್ಯಕ್ತಿಯ ನ್ಯಾಯವಾದಿಯ ಸಮಕ್ಷಮದಲ್ಲಿ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕವೂ ಸಹ ದಾಖಲು ಮಾಡಿಕೊಳ್ಳಬಹುದು:

ಮತ್ತು ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವ ಪೊಲೀಸ್ ಅಧಿಕಾರಿಗೆ ಮ್ಯಾಜಿಸ್ಟ್ರೇಟನ ಯಾವುದೇ ಅಧಿಕಾರವನ್ನು ಪ್ರದಾನ ಮಾಡಲಾಗಿದೆಯೋ ಆ ಪೊಲೀಸ್ ಅಧಿಕಾರಿಯು ಯಾವುದೇ ತಪ್ಪೊಪ್ಪಿಗೆಯನ್ನೂ ದಾಖಲಿಸತಕ್ಕದ್ದಲ್ಲ.

(2) ಮ್ಯಾಜಿಸ್ಟ್ರೇಟನು, ಅಂಥ ಯಾವುದೇ ತಪ್ಪೊಪ್ಪಿಗೆಯನ್ನು ದಾಖಲಿಸುವ ಮೊದಲು ಅದನ್ನು ಕೊಡುವ ವ್ಯಕ್ತಿಗೆ, ಅವನು ತಪ್ಪೊಪ್ಪಿಗೆಯನ್ನು ಕೊಡಲು ಬದ್ಧನಾಗಿಲ್ಲವೆಂದು ಮತ್ತು ಅವನು ಹಾಗೆ ಮಾಡಿದಲ್ಲಿ ಅದನ್ನು ಅವನ ವಿರುದ್ಧವಾಗಿ ಸಾಕ್ಷ್ಯದಂತೆ ಉಪಯೋಗಿಸಬಹುದೆಂದು ವಿವರಿಸತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಅಂಥ ಯಾವುದೇ ತಪ್ಪೊಪ್ಪಿಗೆಯನ್ನು ಕೊಡುವ ವ್ಯಕ್ತಿಯನ್ನು ಪ್ರಶ್ನಿಸಿದ ಮೇಲೆ ಅವನು ಅದನ್ನು ಸ್ವಇಚ್ಛೆಯಿಂದ ಕೊಡುತ್ತಿದ್ದಾನೆಂದು ನಂಬಲು ಕಾರಣವಿದ್ದ ಹೊರತು ಅದನ್ನು ದಾಖಲಿಸತಕ್ಕದ್ದಲ್ಲ.

(3) ತಪ್ಪೊಪ್ಪಿಗೆಯನ್ನು ದಾಖಲಿಸುವ ಮೊದಲು ಯಾವುದೇ ಸಮಯದಲ್ಲಿ, ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗುವ ವ್ಯಕ್ತಿಯು, ತಾನು ತಪ್ಪೊಪ್ಪಿಗೆಯನ್ನು ಕೊಡಲು ಇಚ್ಛಿಸುತ್ತಿಲ್ಲವೆಂಬುದಾಗಿ ತಿಳಿಸಿದರೆ, ಮ್ಯಾಜಿಸ್ಟ್ರೇಟನು ಅಂಥ ವ್ಯಕ್ತಿಯನ್ನು ಪೊಲೀಸ್ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(4) ಯಾವುದೇ ಅಂಥ ತಪ್ಪೊಪ್ಪಿಗೆಯನ್ನು, ಆಪಾದಿತನಾದ ವ್ಯಕ್ತಿಯ ವಿಚಾರಣೆಯನ್ನು ದಾಖಲಿಸಲು 316ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ದಾಖಲಿಸತಕ್ಕದ್ದು ಮತ್ತು ತಪ್ಪೊಪ್ಪಿಗೆಯನ್ನು ಕೊಡುವ ವ್ಯಕ್ತಿಯು ಅದಕ್ಕೆ ಸಹಿ ಮಾಡತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಅಂಥ ದಾಖಲೆಯ ಕೊನೆಯಲ್ಲಿ ಕೆಳಕಂಡಂತೆ ಒಂದು ಟಿಪ್ಪಣಿ ಮಾಡತಕ್ಕದ್ದು:-

> "ನಾನು, ..................(ಹೆಸರು) ಎಂಬುವರಿಗೆ ಅವನು ಒಂದು ತಪ್ಪೊಪ್ಪಿಗೆಯನ್ನು ಕೊಡಲು ಬದ್ಧನಲ್ಲವೆಂದು ಮತ್ತು ಅವನು ಹಾಗೆ ಕೊಟ್ಟಲ್ಲಿ ಅವನು ಕೊಡಬಹುದಾದ ಯಾವುದೇ ತಪ್ಪೊಪ್ಪಿಗೆಯನ್ನು ಅವನ ವಿರುದ್ಧ ಸಾಕ್ಷ್ಯವನ್ನಾಗಿ ಉಪಯೋಗಿಸಬಹುದೆಂದು ವಿವರಿಸಿದ್ದೇನೆ ಮತ್ತು ಈ ತಪ್ಪೊಪ್ಪಿಗೆಯನ್ನು ಸ್ವಯಿಚ್ಛೆಯಿಂದ ಮಾಡಲಾಗಿದೆಯೆಂದು ನಾನು ನಂಬುತ್ತೇನೆ. ಇದನ್ನು ನನ್ನ ಸಮ್ಮುಖದಲ್ಲಿ ಮತ್ತು ನನಗೆ ಕೇಳಿಸುವಂತೆ ತೆಗೆದುಕೊಳ್ಳಲಾಗಿದೆ ಮತ್ತು ಅದನ್ನು ಕೊಟ್ಟ ವ್ಯಕ್ತಿಗೆ ಓದಿ ಹೇಳಲಾಗಿದೆ ಮತ್ತು ಸರಿಯಾಗಿದೆಯೆಂದು ಅವನು ಒಪ್ಪಿದ್ದಾನೆ ಮತ್ತು ಅವನು ಕೊಟ್ಟ ಹೇಳಿಕೆಯ ಪೂರ್ಣವಾದ ಮತ್ತು ಸತ್ಯವಾದ ಎಲ್ಲ ವಿಷಯಗಳನ್ನೂ ಇದು ಒಳಗೊಂಡಿದೆ.
>
> (ಸಹಿ) ಎ.ಬಿ.
>
> ಮ್ಯಾಜಿಸ್ಟ್ರೇಟ್"

(5) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ (ತಪ್ಪೊಪ್ಪಿಗೆಯಲ್ಲದ) ಯಾವುದೇ ಹೇಳಿಕೆಯನ್ನು, ಸಾಕ್ಷ್ಯವನ್ನು ದಾಖಲಿಸಿಕೊಳ್ಳುವುದಕ್ಕಾಗಿ ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವಂಥ ರೀತಿಯಲ್ಲಿ, ಮೊಕದ್ದಮೆಯ ಸನ್ನಿವೇಶಗಳಿಗೆ, ಅತ್ಯುತ್ತಮವಾಗಿ ಹೊಂದಿಕೊಳ್ಳುತ್ತದೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಟ್ಟರೆ ಆ ರೀತಿಯಲ್ಲಿ ದಾಖಲಿಸತಕ್ಕದ್ದು ಮತ್ತು ಯಾವ ವ್ಯಕ್ತಿಯ ಹೇಳಿಕೆಯನ್ನು ಹಾಗೆ ದಾಖಲಿಸಲಾಯಿತೋ ಆ ವ್ಯಕ್ತಿಗೆ ಪ್ರಮಾಣವನ್ನು ಮಾಡಿಸಲು ಮ್ಯಾಜಿಸ್ಟ್ರೇಟನು ಅಧಿಕಾರ ಹೊಂದಿರತಕ್ಕದ್ದು.

(6) (ಎ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ, 71ನೇ ಪ್ರಕರಣ, 74ನೇ ಪ್ರಕರಣ, 75ನೇ ಪ್ರಕರಣ, 76ನೇ ಪ್ರಕರಣ, 77ನೇ ಪ್ರಕರಣ, 78ನೇ ಪ್ರಕರಣ, 79ನೇ ಪ್ರಕರಣ ಅಥವಾ 124ನೇ ಪ್ರಕರಣದ ಮೇರೆಗೆ ದಂಡನೀಯವಾದ ಮೊಕದ್ದಮೆಗಳಲ್ಲಿ (5)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಯಾರ ವಿರುದ್ಧ ಅಪರಾಧವನ್ನು

ಎಸಗಲಾಗಿದೆಯೋ ಆ ವ್ಯಕ್ತಿಯ ಹೇಳಿಕೆಯನ್ನು ಅಂಥ ಅಪರಾಧ ಮಾಡಿರುವುದನ್ನು ಪೊಲೀಸರ ಗಮನಕ್ಕೆ ತಂದ ಕೂಡಲೇ ನ್ಯಾಯಿಕ ಮ್ಯಾಜಿಸ್ಟ್ರೇಟನು ದಾಖಲಿಸತಕ್ಕದ್ದು:

ಪರಂತು, ಅಂಥ ಹೇಳಿಕೆಯನ್ನು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಮಹಿಳಾ ಮ್ಯಾಜಿಸ್ಟ್ರೇಟ್ ದಾಖಲಿಸಿಕೊಳ್ಳತಕ್ಕದ್ದು ಮತ್ತು ಆಕೆಯ ಅನುಪಸ್ಥಿತಿಯಲ್ಲಿ ಪುರುಷ ಮ್ಯಾಜಿಸ್ಟ್ರೇಟನು ಒಬ್ಬ ಮಹಿಳೆಯ ಉಪಸ್ಥಿತಿಯಲ್ಲಿ ದಾಖಲಿಸಿಕೊಳ್ಳತಕ್ಕದ್ದು:

ಮತ್ತು ಪರಂತು, ಹತ್ತು ಅಥವಾ ಹೆಚ್ಚು ವರ್ಷಗಳಿಗೆ ಕಾರಾವಾಸ ಶಿಕ್ಷೆಯಿಂದ ಅಥವಾ ಆಜೀವ ಕಾರಾವಾಸ ಅಥವಾ ಮರಣದಂಡನೆ ಶಿಕ್ಷೆಯಿಂದ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದ ಮೊಕದ್ದಮೆಗಳಲ್ಲಿ, ಮ್ಯಾಜಿಸ್ಟ್ರೇಟನು ತನ್ನ ಮುಂದೆ ಪೊಲೀಸ್ ಅಧಿಕಾರಿಯು ಕರೆದುತಂದ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಳ್ಳತಕ್ಕದ್ದು:

ಮತ್ತೂ ಪರಂತು, ಹೇಳಿಕೆಯನ್ನು ನೀಡುವ ವ್ಯಕ್ತಿಯು ಒಂದು ವೇಳೆ ದೈಹಿಕವಾಗಿ ಅಥವಾ ಮಾನಸಿಕವಾಗಿ, ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ವಿಕಲಚೇತನನಾಗಿದ್ದರೆ, ಮ್ಯಾಜಿಸ್ಟ್ರೇಟನು ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವಾಗ ದುಭಾಷಿಯ ಅಥವಾ ವಿಶೇಷ ಬೋಧಕನ ನೆರವನ್ನು ಪಡೆಯತಕ್ಕದ್ದು:

ಪರಂತು ಅಲ್ಲದೆ, ಹೇಳಿಕೆಯನ್ನು ನೀಡುವ ವ್ಯಕ್ತಿಯು, ಒಂದು ವೇಳೆ ದೈಹಿಕವಾಗಿ ಅಥವಾ ಮಾನಸಿಕವಾಗಿ, ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ವಿಕಲಚೇತನನಾಗಿದ್ದಾಗ, ಆ ವ್ಯಕ್ತಿಯ ಹೇಳಿಕೆಯನ್ನು ದುಭಾಷಿಯ ಅಥವಾ ವಿಶೇಷ ಬೋಧಕನ ಸಹಾಯದಿಂದ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳ ಮುಖಾಂತರ ಅದರಲ್ಲೂ ಮುಖ್ಯವಾಗಿ ಮೊಬೈಲ್ ಫೋನ್ ಮುಖಾಂತರ ದಾಖಲು ಮಾಡಿಕೊಳ್ಳತಕ್ಕದ್ದು.

(ಬಿ) (ಎ) ಖಂಡದ ಮೇರೆಗೆ ದಾಖಲಿಸಿಕೊಂಡಿರುವ, ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ, ಮಾನಸಿಕವಾಗಿ ಅಥವಾ ದೈಹಿಕವಾಗಿ ವಿಕಲಚೇತನನಾಗಿರುವ ವ್ಯಕ್ತಿಯ ಹೇಳಿಕೆಯನ್ನು, ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 142ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಮುಖ್ಯ ವಿಚಾರಣೆಯಾಗಿ ಪರಿಗಣಿಸದೇ ಹೇಳಿಕೆಯಾಗಿ ಪರಿಗಣಿಸತಕ್ಕದ್ದು ಮತ್ತು ಹೇಳಿಕೆದಾರನಿಗೆ ಅಧಿವಿಚಾರಣೆಯ ಸಮಯದಲ್ಲಿ ಹೇಳಿಕೆಯನ್ನು ದಾಖಲು ಮಾಡುವುದು ಅಗತ್ಯವಿರದೇ ಅಂಥ ಹೇಳಿಕೆ ಕುರಿತು ಪಾಟೀಸವಾಲು ಮಾಡಬಹುದು.

(7) ಈ ಪ್ರಕರಣದ ಮೇರೆಗೆ ತಪ್ಪೊಪ್ಪಿಗೆಯನ್ನು ಅಥವಾ ಹೇಳಿಕೆಯನ್ನು ದಾಖಲಿಸುವ ಮ್ಯಾಜಿಸ್ಟ್ರೇಟನು, ಅದನ್ನು, ಮೊಕದ್ದಮೆಯನ್ನು ನ್ಯಾಯಿಕ ವಿಚಾರಣೆ ಮಾಡುವ ಅಥವಾ ಅಧಿವಿಚಾರಣೆ ಮಾಡುವ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

**184. ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯ ವೈದ್ಯಕೀಯ ಪರೀಕ್ಷೆ.-** (1) ಅತ್ಯಾಚಾರದ ಅಪರಾಧವು ಅಥವಾ ಅತ್ಯಾಚಾರಕ್ಕೆ ಪ್ರಯತ್ನ ಮಾಡಿದ ಅಪರಾಧವು ತನಿಖೆಯ ಹಂತದಲ್ಲಿರುವಾಗ, ಯಾವ ಮಹಿಳೆಯನ್ನು ಅತ್ಯಾಚಾರ ಮಾಡಲಾಗಿದೆಯೆಂದು ಅಥವಾ ಅತ್ಯಾಚಾರಕ್ಕೆ ಪ್ರಯತ್ನ ಮಾಡಲಾಗಿದೆಯೆಂದು ಆಪಾದಿಸಲಾಗಿದೆಯೋ ಆ ಮಹಿಳೆಯ ದೇಹವನ್ನು ವೈದ್ಯಕೀಯ ತಜ್ಞರಿಂದ ಪರೀಕ್ಷೆ ಮಾಡಿಸಲು ಪ್ರಸ್ತಾಪಿಸಿದಾಗ, ಅಂಥ ಪರೀಕ್ಷೆಯನ್ನು ಸರ್ಕಾರವು ನಡೆಸುತ್ತಿರುವ ಅಥವಾ ಸ್ಥಳೀಯ ಪ್ರಾಧಿಕಾರವು ನಡೆಸುತ್ತಿರುವ ಆಸ್ಪತ್ರೆಯಲ್ಲಿ ನಿಯೋಜಿತನಾಗಿರುವ ನೋಂದಾಯಿತ ವೈದ್ಯವೃತ್ತಿಗನಿಂದ ಮತ್ತು ಅಂಥ ವೈದ್ಯನು ಲಭ್ಯವಿಲ್ಲದಿರುವಾಗ ಇತರ ಯಾರೇ ನೋಂದಾಯಿತ ವೈದ್ಯವೃತ್ತಿಗನಿಂದ ಅಂಥ ಮಹಿಳೆಯ ಸಮ್ಮತಿ ಪಡೆದು ಅಥವಾ ಆಕೆಯ ಪರವಾಗಿ ಸಮ್ಮತಿಯನ್ನು ನೀಡಲು ಸಕ್ಷಮನಾದ ವ್ಯಕ್ತಿಯ ಸಮ್ಮತಿ ಪಡೆದು ಪರೀಕ್ಷೆ ಮಾಡಿಸತಕ್ಕದ್ದು ಮತ್ತು ಅಂಥ ಅಪರಾಧವು

ಘಟಿಸಿದುದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸ್ವೀಕರಿಸಿದ ಇಪ್ಪತ್ನಾಲ್ಕು ಗಂಟೆಯೊಳಗೆ ಅಂಥ ಮಹಿಳೆಯನ್ನು ಅಂಥ ವೈದ್ಯರ ಬಳಿಗೆ ಕಳುಹಿಸತಕ್ಕದ್ದು.

(2) ಅಂಥ ಮಹಿಳೆಯನ್ನು, ಯಾವ ನೋಂದಾಯಿತ ವೈದ್ಯವೃತ್ತಿಗನ ಬಳಿಗೆ ಕಳುಹಿಸಲಾಗಿದೆಯೋ ಆ ವೈದ್ಯನು, ಯಾವುದೇ ವಿಳಂಬ ಮಾಡದೆ ಆಕೆಯ ದೇಹವನ್ನು ಪರೀಕ್ಷಿಸತಕ್ಕದ್ದು ಮತ್ತು ಕೆಳಗೆ ಹೇಳಿರುವ ವಿವರಗಳನ್ನೊಳಗೊಂಡ ವರದಿಯನ್ನು ತಯಾರಿಸತಕ್ಕದ್ದು, ಎಂದರೆ:-

(i) ಆ ಮಹಿಳೆಯ ಮತ್ತು ಆ ಮಹಿಳೆಯನ್ನು ಕರೆದುಕೊಂಡು ಬಂದ ವ್ಯಕ್ತಿಯ ಹೆಸರು ಮತ್ತು ವಿಳಾಸ;

(ii) ಮಹಿಳೆಯ ವಯಸ್ಸು;

(iii) ಡಿ.ಎನ್.ಎ. ಪರೀಕ್ಷೆಗಾಗಿ ಆಕೆಯ ದೇಹದಿಂದ ತೆಗೆದುಕೊಂಡ ವಸ್ತುವಿನ ವರ್ಣನೆ;

(iv) ಆ ಮಹಿಳೆಯ ದೇಹದ ಮೇಲೆ ಗಾಯದ ಗುರುತುಗಳೇನಾದರೂ ಇದ್ದರೆ, ಆ ಗಾಯಗಳ ಗುರುತುಗಳು;

(v) ಮಹಿಳೆಯ ಸಾಮಾನ್ಯ ಮಾನಸಿಕ ಸ್ಥಿತಿ; ಮತ್ತು

(vi) ಸಮಂಜಸ ವಿವರದೊಂದಿಗೆ ಇತರ ಮುಖ್ಯ ವಿವರಗಳು.

(3) ಪ್ರತಿಯೊಂದು ನಿರ್ಣಯಕ್ಕೂ ಇರುವ ಕಾರಣಗಳನ್ನೂ ವರದಿಯಲ್ಲಿ ಸ್ಪಷ್ಟವಾಗಿ ಹೇಳಿರತಕ್ಕದ್ದು.

(4) ಅಂಥ ಪರೀಕ್ಷೆಗಾಗಿ ಆ ಮಹಿಳೆಯ ಅಥವಾ ಆ ಮಹಿಳೆಯ ಪರವಾಗಿ ಸಮ್ಮತಿ ನೀಡಲು ಸಕ್ಷಮವಾದ ವ್ಯಕ್ತಿಯ ಸಮ್ಮತಿಯನ್ನು ಪಡೆದುಕೊಳ್ಳಲಾಗಿತ್ತು ಎಂಬುವುದನ್ನು ವರದಿಯಲ್ಲಿ ನಿರ್ದಿಷ್ಟವಾಗಿ ಹೇಳಿರತಕ್ಕದ್ದು.

(5) ಪರೀಕ್ಷೆಯನ್ನು ಪ್ರಾರಂಭಿಸಿದ ಮತ್ತು ಮುಕ್ತಾಯಗೊಳಿಸಿದ ಖಚಿತ ಸಮಯವನ್ನು ವರದಿಯಲ್ಲಿ ಸಹ ನಮೂದಿಸತಕ್ಕದ್ದು.

(6) ನೋಂದಾಯಿತ ವೈದ್ಯವೃತ್ತಿಗನು ಯಾವುದೇ ವಿಳಂಬ ಮಾಡದೆ ಆ ವರದಿಯನ್ನು ತನಿಖಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಆ ತನಿಖಾಧಿಕಾರಿಯು ಆ ವರದಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 193ನೇ ಪ್ರಕರಣದ (6)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿರುವ ದಾಖಲೆಗಳ ಭಾಗವಾಗಿ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

(7) ಸಂಬಂಧಿಸಿದ ಮಹಿಳೆಯ ಅಥವಾ ಆಕೆಯ ಪರವಾಗಿ ಸಮ್ಮತಿ ನೀಡಲು ಸಕ್ಷಮವಾದ ವ್ಯಕ್ತಿಯ ಸಮ್ಮತಿ ಇಲ್ಲದೆ ಮಾಡಿದ ಯಾವುದೇ ಪರೀಕ್ಷೆಯನ್ನು ಈ ಪ್ರಕರಣದಲ್ಲಿರುವ ಯಾವುದೂ, ಕಾನೂನುಸಮ್ಮತಗೊಳಿಸುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

*ವಿವರಣೆ.*- ಈ ಪ್ರಕರಣದ ಉದ್ದೇಶಗಳಿಗಾಗಿ ìಪರೀಕ್ಷೆî ಮತ್ತು ìನೋಂದಾಯಿತ ವೈದ್ಯವೃತ್ತಿಗî ಎಂಬ ಪದಗಳಿಗೆ 51ನೇ ಪ್ರಕರಣದಲ್ಲಿ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

**185. ಪೊಲೀಸ್ ಅಧಿಕಾರಿಯಿಂದ ಶೋಧನೆ.-** (1) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಅಥವಾ ತನಿಖೆಯನ್ನು ಮಾಡುವ ಪೊಲೀಸ್ ಅಧಿಕಾರಿಗೆ ತಾನು ಯಾವ ಅಪರಾಧವನ್ನು ತನಿಖೆ ಮಾಡಲು ಅಧಿಕಾರ ಉಳ್ಳವನಾಗಿರುವನೋ ಆ ಯಾವುದೇ ಅಪರಾಧವನ್ನು ತನಿಖೆ ಮಾಡುವ ಉದ್ದೇಶಗಳಿಗಾಗಿ, ಅವಶ್ಯಕವಾದ ಯಾವುದೇ ವಸ್ತುವು, ಅವನು ಯಾವ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವನೋ ಆ ಪೊಲೀಸ್ ಠಾಣೆಯ ಅಥವಾ ಅವನು

ಯಾವ ಪೊಲೀಸ್ ಠಾಣೆಗೆ ಸೇರಿರುವನೋ ಆ ಪೊಲೀಸ್ ಠಾಣೆಯ ಸರಹದ್ದುಗಳಲ್ಲಿರುವ ಯಾವುದೇ ಸ್ಥಳದಲ್ಲಿ ಸಿಗಬಹುದೆಂದು ಆ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅಂಥ ವಸ್ತುವನ್ನು ಅನುಚಿತ ವಿಳಂಬವಿಲ್ಲದೆಯೆ ಅನ್ಯಥಾ ಪಡೆಯಲು ಸಾಧ್ಯವಾಗದೆಂದು ನಂಬಲು ಯುಕ್ತ ಕಾರಣಗಳಿವೆ ಎಂದು ಅಂಥ ಅಧಿಕಾರಿಯು ತನ್ನ ನಂಬಿಕೆಗೆ ಇರುವ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮತ್ತು ಶೋಧನೆ ಮಾಡಬೇಕಾಗಿರುವ ವಸ್ತುವಿನ ಬಗ್ಗೆ, ಹಾಗೆ ಲಿಖಿತದಲ್ಲಿ ಸಾಧ್ಯವಾಗುವಷ್ಟರ ಮಟ್ಟಿಗೆ ನಿರ್ದಿಷ್ಟಪಡಿಸಿದ ಆನಂತರ, ಅಂಥ ಠಾಣೆಯ ಸರಹದ್ದುಗಳ ಒಳಗಿರುವ ಯಾವುದೇ ಸ್ಥಳದಲ್ಲಿ ಅಂಥ ವಸ್ತುವಿಗಾಗಿ ಶೋಧನೆ ಮಾಡಬಹುದು ಅಥವಾ ಶೋಧನೆ ಮಾಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಕ್ರಮ ಜರುಗಿಸುವ ಪೊಲೀಸ್ ಅಧಿಕಾರಿಯು, ಕಾರ್ಯಸಾಧ್ಯವಾದರೆ ಶೋಧನೆಯನ್ನು ಖುದ್ದಾಗಿ ನಡೆಸತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ನಡೆಸಿದ ಶೋಧನೆಯನ್ನು ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳ ಮುಖಾಂತರ ಅದರಲ್ಲೂ ಮುಖ್ಯವಾಗಿ ಮೊಬೈಲ್ ಫೋನು ಮುಖಾಂತರ ದಾಖಲು ಮಾಡಿಕೊಳ್ಳತಕ್ಕದ್ದು.

(3) ಆ ಅಧಿಕಾರಿಯು ಖುದ್ದಾಗಿ ಶೋಧನೆಯನ್ನು ನಡೆಸಲು ಅಸಮರ್ಥನಾದರೆ ಮತ್ತು ಶೋಧನೆಯನ್ನು ಮಾಡಲು ಸಕ್ಷಮನಾದ ಯಾರೇ ವ್ಯಕ್ತಿಯೂ ಆ ಸಮಯದಲ್ಲಿ ಇರದಿದ್ದರೆ, ಶೋಧನೆ ಮಾಡಲು ತನಗಿರುವ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ತನಗೆ ಅಧೀನನಾಗಿರುವ ಯಾರೇ ಅಧಿಕಾರಿಯನ್ನು ಶೋಧನೆ ಮಾಡಲು ಅಗತ್ಯಪಡಿಸಬಹುದು ಮತ್ತು ಆ ಅಧಿಕಾರಿಯು ಅಂಥ ಅಧೀನ ಅಧಿಕಾರಿಗೆ ಶೋಧನೆ ಮಾಡಬೇಕಾದ ಸ್ಥಳವನ್ನು ಮತ್ತು ಸಾಧ್ಯವಾಗುವಷ್ಟರ ಮಟ್ಟಿಗೆ, ಶೋಧನೆ ಮಾಡಬೇಕಾಗಿರುವ ವಸ್ತುವನ್ನು ನಿರ್ದಿಷ್ಟಪಡಿಸಿರುವ ಲಿಖಿತ ಆದೇಶವನ್ನು ನೀಡತಕ್ಕದ್ದು ಮತ್ತು ಅಂಥ ಅಧೀನ ಅಧಿಕಾರಿಯು ಆ ನಂತರ, ಆ ಸ್ಥಳದಲ್ಲಿ ಆ ವಸ್ತುವಿಗಾಗಿ ಶೋಧನೆ ಮಾಡಬಹುದು.

(4) ಶೋಧನೆಯ-ವಾರಂಟ್‌ಗಳಿಗೆ ಸಂಬಂಧಿಸಿದ ಈ ಸಂಹಿತೆಯ ಉಪಬಂಧಗಳು ಮತ್ತು ಶೋಧನೆಗಳಿಗೆ ಸಂಬಂಧಿಸಿದ 103ನೇ ಪ್ರಕರಣದಲ್ಲಿ ಇರುವ ಸಾಮಾನ್ಯ ಉಪಬಂಧಗಳು, ಸಾಧ್ಯವಾಗಬಹುದಾದ ಮಟ್ಟಿಗೆ, ಈ ಪ್ರಕರಣದ ಮೇರೆಗೆ ಮಾಡುವ ಶೋಧನೆಗೆ ಅನ್ವಯವಾಗತಕ್ಕದ್ದು.

(5) (1)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಮೇರೆಗೆ ದಾಖಲೆಯ ಪ್ರತಿಗಳನ್ನು, ಆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಅಧಿಕಾರವುಳ್ಳ ತೀರ ಹತ್ತಿರದ ಮ್ಯಾಜಿಸ್ಟ್ರೇಟನಿಗೆ ಕೂಡಲೇ, ಆದರೆ ನಲವತ್ತೆಂಟು ಗಂಟೆಗಳನ್ನು ಮೀರದಂಥ ಅವಧಿಯಲ್ಲಿ ಕಳುಹಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಶೋಧನೆ ಮಾಡಿದ ಸ್ಥಳದ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಅವನು ಅರ್ಜಿ ಸಲ್ಲಿಸಿದರೆ ಉಚಿತವಾಗಿ ಒದಗಿಸತಕ್ಕದ್ದು.

**186. ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಶೋಧನೆಯ-ವಾರಂಟನ್ನು ಹೊರಡಿಸಬೇಕೆಂದು ಇನ್ನೊಬ್ಬನನ್ನು ಯಾವಾಗ ಅಗತ್ಯಪಡಿಸಬಹುದು.-** (1) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಅಥವಾ ತನಿಖೆಯನ್ನು ಮಾಡುವ ಸಬ್-ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆ ದರ್ಜೆಯಲ್ಲಿರದ ಪೊಲೀಸ್ ಅಧಿಕಾರಿಯು, ಅದೇ ಜಿಲ್ಲೆಯಲ್ಲಿನ ಅಥವಾ ಬೇರೆ ಜಿಲ್ಲೆಯಲ್ಲಿನ ಮತ್ತೊಂದು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯನ್ನು, ಅವನ ಠಾಣೆಯ ಸರಹದ್ದುಗಳೊಳಗಿರುವ, ತಾನು ಯಾವ ಸಂದರ್ಭದಲ್ಲಿ ಸ್ಥಳದಲ್ಲಿ ಶೋಧನೆ ಮಾಡಿಸಬಹುದಿತ್ತೋ ಆ ಯಾವುದೇ ಸ್ಥಳದಲ್ಲಿ ಶೋಧನೆ ಮಾಡಿಸಲು ಅಗತ್ಯಪಡಿಸಬಹುದು.

(2) ಅಂಥ ಅಧಿಕಾರಿಯು, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ತನ್ನನ್ನು ಹಾಗೆ ಅಗತ್ಯಪಡಿಸಿದ ತರುವಾಯ, 185ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು ಮತ್ತು ವಸ್ತುವೇನಾದರೂ ದೊರೆತರೆ, ಅದನ್ನು ಯಾವ ಅಧಿಕಾರಿಯ ವಿನಂತಿಯ ಮೇರೆಗೆ ಶೋಧನೆಯನ್ನು ಮಾಡಲಾಗಿತ್ತೋ ಆ ಅಧಿಕಾರಿಗೆ ರವಾನಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಶೋಧನೆಯನ್ನು ಮಾಡಿಸಲು ಮತ್ತೊಂದು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯನ್ನು ಅಗತ್ಯಪಡಿಸುವುದರಲ್ಲಿ ಉಂಟಾದ ವಿಳಂಬವು, ಅಪರಾಧ ಮಾಡಿರುವುದರ ಬಗೆಗಿನ ಸಾಕ್ಷ್ಯವನ್ನು ಬಚ್ಚಿಡಲು ಅಥವಾ ನಾಶಪಡಿಸಲು ಅವಕಾಶ ಮಾಡಿಕೊಡುವುದೆಂದು ನಂಬಲು ಕಾರಣವಿದ್ದರೆ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಪೊಲೀಸ್ ಅಧಿಕಾರಿಯು ಅಥವಾ ಈ ಅಧ್ಯಾಯದ ಮೇರೆಗೆ ತನಿಖೆಯನ್ನು ಮಾಡುವ ಪೊಲೀಸ್ ಅಧಿಕಾರಿಯು, 185ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಮತ್ತೊಂದು ಪೊಲೀಸ್ ಠಾಣೆಯ ಸರಹದ್ದುಗಳೊಳಗಿರುವ ಯಾವುದೇ ಸ್ಥಳವನ್ನು, ಅಂಥ ಸ್ಥಳವು, ತನ್ನ ಪೊಲೀಸ್ ಠಾಣೆಯ ಸರಹದ್ದುಗಳೊಳಗೆ ಇದ್ದಿದ್ದರೆ ಹೇಗೆ ಶೋಧನೆ ಮಾಡಲಾಗುತ್ತಿತ್ತೋ ಅಥವಾ ಮಾಡಿಸಲಾಗುತ್ತಿತ್ತೋ ಹಾಗೆಯೇ ಶೋಧನೆ ಮಾಡುವುದು ಅಥವಾ ಶೋಧನೆ ಮಾಡಿಸುವುದು ಕಾನೂನುಬದ್ಧವಾಗಿರತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಶೋಧನೆಯನ್ನು ಮಾಡುವ ಯಾರೇ ಅಧಿಕಾರಿಯು ಅಂಥ ಸ್ಥಳವು ಯಾವ ಪೊಲೀಸ್ ಠಾಣೆಯ ಸರಹದ್ದುಗಳೊಳಗೆ ಇದೆಯೋ ಆ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಆ ಶೋಧನೆಯ ಬಗೆಗಿನ ನೋಟೀಸನ್ನು ಕೂಡಲೇ ಕಳುಹಿಸತಕ್ಕದ್ದು ಮತ್ತು ಅಂಥ ನೋಟೀಸಿನೊಂದಿಗೆ 103ನೇ ಪ್ರಕರಣದ ಮೇರೆಗೆ ಸಿದ್ಧಗೊಳಿಸಲಾದ ಯಾವುದಾದರೂ ಪಟ್ಟಿ ಇದ್ದರೆ ಅದರ ಪ್ರತಿಯನ್ನು ಸಹ ಕಳುಹಿಸತಕ್ಕದ್ದು ಮತ್ತು ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಅಧಿಕಾರವುಳ್ಳ ತೀರ ಹತ್ತಿರದ ಮ್ಯಾಜಿಸ್ಟ್ರೇಟನಿಗೆ, 185ನೇ ಪ್ರಕರಣದ (1)ನೇ ಮತ್ತು (3)ನೇ ಉಪಪ್ರಕರಣಗಳಲ್ಲಿ ಉಲ್ಲೇಖಿಸಿರುವ ದಾಖಲೆಗಳ ಪ್ರತಿಗಳನ್ನು ಕಳುಹಿಸತಕ್ಕದ್ದು.

(5) (4)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನಿಗೆ ಕಳುಹಿಸಿದ ಯಾವುದೇ ದಾಖಲೆಯ ಪ್ರತಿಯನ್ನು ಶೋಧನೆ ಮಾಡಿದ ಸ್ಥಳದ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಅವನು ಅರ್ಜಿಯನ್ನು ಸಲ್ಲಿಸಿದರೆ, ಉಚಿತವಾಗಿ ಒದಗಿಸತಕ್ಕದ್ದು.

**187. ತನಿಖೆಯನ್ನು ಇಪ್ಪತ್ನಾಲ್ಕು ಗಂಟೆಗಳೊಳಗೆ ಪೂರ್ಣಗೊಳಿಸದಿರುವಾಗ ಪ್ರಕ್ರಿಯೆ.-** (1) ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡಿ ಮತ್ತು ತಡೆಹಿಡಿದಿರಿಸಿ ಅಭಿರಕ್ಷೆಯಲ್ಲಿಟ್ಟಾಗ ಮತ್ತು 58ನೇ ಪ್ರಕರಣದ ಮೂಲಕ ನಿಗದಿಪಡಿಸಿರುವ ಇಪ್ಪತ್ನಾಲ್ಕು ಗಂಟೆಗಳ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸಲು ಆಗುದಿಲ್ಲವೆಂದು ಕಂಡುಬಂದಾಗ ಮತ್ತು ಆಪಾದನೆಯು ಅಥವಾ ಮಾಹಿತಿಯು ಆಧಾರಪೂರ್ವಕವಾದುದೆಂದು ನಂಬಲು ಕಾರಣಗಳಿದ್ದರೆ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಅಥವಾ ತನಿಖೆಯನ್ನು ಮಾಡುವ ಪೊಲೀಸ್ ಅಧಿಕಾರಿಯು, ಸಬ್-ಇನ್ಸ್‌ಪೆಕ್ಟರ್‌ನ ದರ್ಜೆಗಿಂತ ಕಡಿಮೆ ದರ್ಜೆಯವನಾಗಿರದಿದ್ದರೆ, ಡೈರಿಯಲ್ಲಿನ ನಮೂದುಗಳ ಒಂದು ಪ್ರತಿಯನ್ನು ಮೊಕದ್ದಮೆಗೆ ಸಂಬಂಧಿಸಿದಂತೆ ಈ ಮುಂದೆ ನಿರ್ದಿಷ್ಟಪಡಿಸಲಾದ ಹತ್ತಿರದ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಕೂಡಲೇ ರವಾನಿಸತಕ್ಕದ್ದು ಮತ್ತು ಅದೇ ಸಮಯದಲ್ಲಿ ಆಪಾದಿತನನ್ನು ಅಂಥ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಆಪಾದಿತ ವ್ಯಕ್ತಿಯನ್ನು ಯಾವ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು, ಮೊಕದ್ದಮೆಯ ಅಧಿವಿಚಾರಣೆ ಮಾಡಲು ಅವನಿಗೆ ಅಧಿಕಾರವ್ಯಾಪ್ತಿ ಇರಲಿ ಅಥವಾ ಇಲ್ಲದಿರಲಿ, ಅಂಥ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಲ್ಲವೇ ಅಥವಾ ಆತನ ಜಾಮೀನನ್ನು ರದ್ದುಪಡಿಸಲಾಗಿದೆಯೇ ಎಂಬುದನ್ನು ಪರಿಗಣನೆಗೆ ತೆಗೆದುಕೊಂಡ ನಂತರ, ಕಾಲಕಾಲಕ್ಕೆ ಅಂಥ ಮ್ಯಾಜಿಸ್ಟ್ರೇಟನು ಸೂಕ್ತವೆಂದು ಭಾವಿಸುವಂತೆ (3)ನೇ

ಉಪಪ್ರಕರಣದಲ್ಲಿ ಉಪಬಂಧಿಸಿದಂತೆ ಸಂದರ್ಭಾನುಸಾರ ಅರವತ್ತು ದಿನಗಳ ಅಥವಾ ತೊಂಬತ್ತು ದಿನಗಳ ತಡೆಹಿಡಿದಿರಿಸಿದ ಅವಧಿಯ ಪೈಕಿ ಆರಂಭದ ನಲವತ್ತು ದಿನಗಳ ಅಥವಾ ಅರವತ್ತು ದಿನಗಳ ಯಾವುದೇ ಅವಧಿಯ ಯಾವುದೇ ಸಮಯದಲ್ಲಿ ಒಟ್ಟಾರೆಯಾಗಿ ಅಥವಾ ಭಾಗಶಃವಾಗಿ ಹದಿನೈದು ದಿನಗಳಿಗೆ ಮೀರದ ಅವಧಿಯವರೆಗೆ ಆಪಾದಿತನನ್ನು ಅಂಥ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಲು ಅಧಿಕೃತಗೊಳಿಸಬಹುದು ಮತ್ತು ಮೊಕದ್ದಮೆಯ ವಿಚಾರಣೆ ಮಾಡಲು ಅಥವಾ ಅದನ್ನು ಅಧಿವಿಚಾರಣೆಗೆ ಒಪ್ಪಿಸಲು ಅಧಿಕಾರವ್ಯಾಪ್ತಿ ಅವನಿಗೆ ಇರದಿದ್ದರೆ ಮತ್ತು ಮತ್ತಷ್ಟು ಕಾಲ ತಡೆಹಿಡಿದಿರಿಸುವುದು ಅನಾವಶ್ಯಕವೆಂದು ಪರಿಗಣಿಸಿದರೆ, ಅವನು ಆಪಾದಿತ ವ್ಯಕ್ತಿಯನ್ನು ಅಂಥ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸಿಕೊಡಲು ಆದೇಶಿಸಬಹುದು.

(3) ಆಪಾದಿತನನ್ನು ಹದಿನೈದು ದಿನಗಳಿಗೂ ಮೀರಿ ತಡೆಹಿಡಿದಿರಿಸಲು ಸಾಕಷ್ಟು ಕಾರಣಗಳು ಇವೆ ಎಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಹದಿನೈದು ದಿನಗಳ ಅವಧಿಗೂ ಮೀರಿ ಆಪಾದಿತನನ್ನು ತಡೆಹಿಡಿದಿರಿಸಲು ಅಧಿಕೃತಗೊಳಿಸಬಹುದು, ಆದರೆ ಈ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿರುವ ಆಪಾದಿತ ವ್ಯಕ್ತಿಯನ್ನು,-

(i) ತನಿಖೆಯು ಮರಣ, ಆಜೀವ ಕಾರಾವಾಸ ಅಥವಾ ಹತ್ತು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕೆ ಸಂಬಂಧಪಟ್ಟಿದ್ದರೆ ತೊಂಭತ್ತು ದಿನಗಳನ್ನೂ ಮೀರುವ;

(ii) ತನಿಖೆಯು ಇತರೆ ಯಾವುದೇ ಅಪರಾಧಕ್ಕೆ ಸಂಬಂಧಪಟ್ಟಿದ್ದರೆ ಅರವತ್ತು ದಿನಗಳನ್ನು ಮೀರುವ

- ಒಟ್ಟು ಅವಧಿಯವರೆಗೆ ಬಂಧನದಲ್ಲಿರಿಸಲು ಯಾರೇ ಮ್ಯಾಜಿಸ್ಟ್ರೇಟನು ಅಧಿಕೃತಗೊಳಿಸತಕ್ಕದ್ದಲ್ಲ ಮತ್ತು ಸಂದರ್ಭಾನುಸಾರ, ಆ ತೊಂಭತ್ತು ದಿನಗಳು ಅಥವಾ ಆ ಅರವತ್ತು ದಿನಗಳ ಸದರಿ ಅವಧಿಯು ಮುಕ್ತಾಯವಾದ ಮೇಲೆ, ಆಪಾದಿತ ವ್ಯಕ್ತಿಯನ್ನು, ಅವನು ಜಾಮೀನನ್ನು ಒದಗಿಸಲು ಸಿದ್ಧನಿದ್ದರೆ ಮತ್ತು ಅದನ್ನು ಒದಗಿಸಿದರೆ, ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು ಮತ್ತು ಈ ಉಪಪ್ರಕರಣದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾದ ಪ್ರತಿಯೊಬ್ಬ ವ್ಯಕ್ತಿಯನ್ನು XXXVನೇ ಅಧ್ಯಾಯದ ಉಪಬಂಧಗಳ ಮೇರೆಗೆ, ಆ ಅಧ್ಯಾಯದ ಉದ್ದೇಶಗಳಿಗಾಗಿ ಹಾಗೆ ಬಿಡುಗಡೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(4) ಯಾರೇ ಮ್ಯಾಜಿಸ್ಟ್ರೇಟನು, ಈ ಪ್ರಕರಣದ ಮೇರೆಗೆ ಪೊಲೀಸ್ ಅಭಿರಕ್ಷೆಯಲ್ಲಿರುವ ಆಪಾದಿತನನ್ನು ಮೊದಲನೆಯ ಬಾರಿಗೆ ತನ್ನ ಮುಂದೆ ಹಾಜರುಪಡಿಸಿದ್ದ ಹೊರತು ಮತ್ತು ಆ ತರುವಾಯ ಆಪಾದಿತನು ಪೊಲೀಸರ ಅಭಿರಕ್ಷೆಯಲ್ಲಿರುವವರೆಗೆ ಪ್ರತಿ ಸಾರಿಯೂ ಆತನ ಮುಂದೆ ಖುದ್ದಾಗಿ ಹಾಜರುಪಡಿಸಿದ್ದ ಹೊರತು, ಆಪಾದಿತನನ್ನು ಪೊಲೀಸ್ ಅಭಿರಕ್ಷೆಯಲ್ಲಿ ಬಂಧಿಸಿಡಲು ಅಧಿಕೃತಗೊಳಿಸತಕ್ಕದ್ದಲ್ಲ, ಆದರೆ ಮ್ಯಾಜಿಸ್ಟ್ರೇಟನ ಮುಂದೆ ಆಪಾದಿತನನ್ನು ಖುದ್ದಾಗಿ ಅಥವಾ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳ ಮುಖಾಂತರ ಹಾಜರುಪಡಿಸಿದ ಮೇಲೆ, ಅವನು ಆಪಾದಿತನ ನ್ಯಾಯಾಂಗ ಅಭಿರಕ್ಷೆಯಲ್ಲಿನ ಬಂಧನವನ್ನು ಇನ್ನಷ್ಟು ವಿಸ್ತರಿಸಬಹುದು.

(5) ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನಿಗೆ ಈ ಬಗ್ಗೆ ಉಚ್ಚ ನ್ಯಾಯಾಲಯವು ವಿಶೇಷವಾಗಿ ಅಧಿಕಾರ ಕೊಟ್ಟಿರದಿದ್ದರೆ, ಅವನು ಪೊಲೀಸ್ ಅಭಿರಕ್ಷೆಯಲ್ಲಿನ ಬಂಧನವನ್ನು ಅಧಿಕೃತಗೊಳಿಸತಕ್ಕದ್ದಲ್ಲ.

*ವಿವರಣೆ I.-* ಸಂದೇಹಗಳ ನಿವಾರಣೆಗಾಗಿ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗಿದ್ದಾಗ್ಯೂ, ಆಪಾದಿತನು ಜಾಮೀನು ಒದಗಿಸುವವರೆಗೆ, ಅವನನ್ನು ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

*ವಿವರಣೆ II*.- (4)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಆಪಾದಿತ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಲಾಗಿತ್ತೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಸಂದರ್ಭಾನುಸಾರ, ಆಪಾದಿತ ವ್ಯಕ್ತಿಯ ಬಂಧನವನ್ನು ಅಧಿಕೃತಗೊಳಿಸುವ ಆದೇಶದ ಮೇಲೆ ಮ್ಯಾಜಿಸ್ಟ್ರೇಟನು ಸಹಿ ಮಾಡುವ ಮೂಲಕ ಅಥವಾ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳ ಮುಖಾಂತರ ಆಪಾದಿತ ವ್ಯಕ್ತಿಯನ್ನು ಹಾಜರುಪಡಿಸುವುದಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟನು ಪ್ರಮಾಣೀಕೃತ ಆದೇಶದ ಮೂಲಕ ಆಪಾದಿತ ವ್ಯಕ್ತಿಯ ಹಾಜರುಪಡಿಸುವಿಕೆಯನ್ನು ರುಜುವಾತುಪಡಿಸಬಹುದು:

ಪರಂತು, ಹದಿನೆಂಟು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಹಿಳೆಯ ಸಂದರ್ಭದಲ್ಲಿ ಅವಳನ್ನು ರಿಮಾಂಡ್ ಹೋಮ್ ಅಥವಾ ಮನ್ನಣೆ ಪಡೆದ ಸಾಮಾಜಿಕ ಸಂಸ್ಥೆಯ ಅಭಿರಕ್ಷೆಯಲ್ಲಿಡಲು ಅಧಿಕೃತಗೊಳಿಸತಕ್ಕದ್ದು:

ಮತ್ತು ಪರಂತು, ಯಾರೇ ವ್ಯಕ್ತಿಯನ್ನು ಪೊಲೀಸ್ ಅಭಿರಕ್ಷೆಯಡಿಯಲ್ಲಿ ಪೊಲೀಸ್ ಠಾಣೆಯಲ್ಲಿ ಅಥವಾ ನ್ಯಾಯಾಂಗ ಅಭಿರಕ್ಷೆಯಡಿಯಲ್ಲಿ ಬಂದೀಖಾನೆಯಲ್ಲಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಬಂದೀಖಾನೆಯೆಂದು ಘೋಷಿಸಲಾದ ಸ್ಥಳದಲ್ಲಿ ಹೊರತು ಬೇರೆಡೆ ತಡೆಹಿಡಿದಿರಿಸತಕ್ಕದ್ದಲ್ಲ.

(6) (1)ನೇ ಉಪಪ್ರಕರಣದಿಂದ (5)ನೇ ಉಪಪ್ರಕರಣದವರೆಗೆ ಏನೇ ಒಳಗೊಂಡಿದ್ದರೂ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಅಥವಾ ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಯು ಸಬ್-ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆ ದರ್ಜೆಯವನಾಗಿರದಿದ್ದರೆ, ಮ್ಯಾಜಿಸ್ಟ್ರೇಟನು ಲಭ್ಯವಿಲ್ಲದಿರುವಲ್ಲಿ, ಸಮೀಪದ ಯಾವ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಪ್ರದಾನ ಮಾಡಲಾಗಿದೆಯೋ ಆ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ, ಮೊಕದ್ದಮೆಗೆ ಸಂಬಂಧಿಸಿದ ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ದಿನಚರಿಯಲ್ಲಿ ಬರೆದಿರುವ ನಮೂದಿನ ಒಂದು ಪ್ರತಿಯನ್ನು ರವಾನಿಸಬಹುದು, ಅದೇ ಸಮಯದಲ್ಲಿ ಆಪಾದಿತನನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನ ಬಳಿ ಕಳುಹಿಸತಕ್ಕದ್ದು ಮತ್ತು ಆ ತರುವಾಯ ಅಂಥ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಒಟ್ಟಾರೆಯಾಗಿ ಏಳು ದಿನಗಳಿಗೆ ಮೀರದ ಅವಧಿಗಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಅಭಿರಕ್ಷೆಯಲ್ಲಿ ಆಪಾದಿತ ವ್ಯಕ್ತಿಯನ್ನು ಬಂಧಿಸಿಡಲು ಅಧಿಕೃತಗೊಳಿಸಬಹುದು ಮತ್ತು ಹಾಗೆ ಅಧಿಕೃತಗೊಳಿಸಿದ ಬಂಧನದ ಅವಧಿಯು ಮುಕ್ತಾಯವಾದ ಮೇಲೆ, ಆಪಾದಿತ ವ್ಯಕ್ತಿಯನ್ನು ಇನ್ನೂ ಹೆಚ್ಚು ಕಾಲ ಬಂಧಿಸಿಡಲು ಆದೇಶವನ್ನು ಮಾಡಲು ಸಕ್ಷಮನಾದ ಮ್ಯಾಜಿಸ್ಟ್ರೇಟನು ಆ ಬಗ್ಗೆ ಆದೇಶವನ್ನು ಮಾಡಿದ್ದ ಹೊರತು, ಆಪಾದಿತ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ಇನ್ನೂ ಹೆಚ್ಚು ಕಾಲದವರೆಗೆ ತಡೆಹಿಡಿದಿರಿಸಲು ಆದೇಶವನ್ನು ಮಾಡಿದ್ದರೆ, ಈ ಉಪಪ್ರಕರಣದ ಮೇರೆಗೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಮಾಡಿದ ಆ ಆದೇಶಗಳ ಮೇರೆಗೆ, ಆಪಾದಿತ ವ್ಯಕ್ತಿಯನ್ನು ಅಭಿರಕ್ಷೆಯಲ್ಲಿ ಬಂಧಿಸಿ ಇಟ್ಟಂಥ ಅವಧಿಯನ್ನು (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಲೆಕ್ಕ ಹಾಕುವಾಗ ಗಣನೆಗೆ ತೆಗೆದುಕೊಳ್ಳತಕ್ಕದ್ದು:

ಪರಂತು, ಮೇಲೆ ಹೇಳಿರುವ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು, ಸಂದರ್ಭಾನುಸಾರ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಅಥವಾ ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಯು ತನಗೆ ರವಾನಿಸಿದ್ದಂಥ ಮೊಕದ್ದಮೆಗೆ ಸಂಬಂಧಪಟ್ಟ, ದಿನಚರಿಯಲ್ಲಿನ ನಮೂದುಗಳ ಪ್ರತಿಯೊಂದಿಗೆ ಮೊಕದ್ದಮೆಯ ದಾಖಲೆಗಳನ್ನು ಹತ್ತಿರದ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ವರ್ಗಾಯಿಸತಕ್ಕದ್ದು.

(7) ಪೊಲೀಸರ ಅಭಿರಕ್ಷೆಯಲ್ಲಿ ಬಂಧಿಸಿರುವುದನ್ನು ಈ ಪ್ರಕರಣದ ಮೇರೆಗೆ ಅಧಿಕೃತಗೊಳಿಸುವ ಮ್ಯಾಜಿಸ್ಟ್ರೇಟನು ಹಾಗೆ ಮಾಡಲು ತನಗಿರುವ ಕಾರಣಗಳನ್ನು ದಾಖಲಿಸತಕ್ಕದ್ದು.

(8) ಅಂಥ ಆದೇಶವನ್ನು ಮಾಡುವ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಲ್ಲದ ಯಾರೇ ಮ್ಯಾಜಿಸ್ಟ್ರೇಟನು, ತನ್ನ ಆದೇಶದ ಒಂದು ಪ್ರತಿಯನ್ನು, ಅದನ್ನು ಮಾಡಲು ತನಗಿರುವ ಕಾರಣಗಳೊಂದಿಗೆ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

(9) ಮ್ಯಾಜಿಸ್ಟ್ರೇಟನಿಂದ ಸಮನ್-ಮೊಕದ್ದಮೆಯಂತೆ ವಿಚಾರಣೆಯಾಗಬಹುದಾದಂಥ ಯಾವುದೇ ಮೊಕದ್ದಮೆಯಲ್ಲಿ, ಆಪಾದಿತನನ್ನು ದಸ್ತಗಿರಿ ಮಾಡಿದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ತನಿಖೆ ಮುಗಿಯದಿದ್ದರೆ, ತನಿಖೆಯನ್ನು ಮಾಡುವ ಅಧಿಕಾರಿಯು ವಿಶೇಷ ಕಾರಣಗಳಿಗಾಗಿ ಮತ್ತು ನ್ಯಾಯದ ಹಿತದೃಷ್ಟಿಯಿಂದ ಆರು ತಿಂಗಳ ಅವಧಿಗೆ ಮೀರಿ ತನಿಖೆಯನ್ನು ಮುಂದುವರಿಸುವುದು ಅವಶ್ಯಕವೆಂಬುದಾಗಿ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದ ಹೊರತು, ಮ್ಯಾಜಿಸ್ಟ್ರೇಟನು ಅಪರಾಧದ ಬಗ್ಗೆ ಹೆಚ್ಚಿನ ತನಿಖೆಯನ್ನು ಸ್ಥಗಿತಗೊಳಿಸುವ ಆದೇಶವನ್ನು ಮಾಡತಕ್ಕದ್ದು.

(10) (9)ನೇ ಉಪಪ್ರಕರಣದ ಮೇರೆಗೆ ಅಪರಾಧದ ಹೆಚ್ಚಿನ ತನಿಖೆಯನ್ನು ಸ್ಥಗಿತಗೊಳಿಸಲು ಯಾವುದೇ ಆದೇಶವನ್ನು ಮಾಡಿದ್ದಲ್ಲಿ, ತನಗೆ ಅರ್ಜಿ ಸಲ್ಲಿಸಿದಾಗ ಅಥವಾ ಅನ್ಯಥಾ, ಅಪರಾಧದ ಬಗ್ಗೆ ತನಿಖೆಯನ್ನು ಮುಂದುವರಿಸತಕ್ಕದ್ದೆಂದು ಸೆಷನ್ಸ್ ನ್ಯಾಯಾಧೀಶನಿಗೆ ಮನದಟ್ಟಾದರೆ, ಅವನು (9)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶವನ್ನು ತೆರವು ಮಾಡಬಹುದು ಮತ್ತು ಜಾಮೀನು ಮತ್ತು ಇತರ ವಿಷಯಗಳ ಬಗ್ಗೆ ತಾನು ನಿರ್ದಿಷ್ಟಪಡಿಸಬಹುದಾದಂಥ ನಿರ್ದೇಶನಗಳಿಗೊಳಪಟ್ಟು ಅಪರಾಧದ ಬಗ್ಗೆ ಮಾಡಬೇಕಾದ ಹೆಚ್ಚಿನ ತನಿಖೆ ಮಾಡುವಂತೆ ನಿರ್ದೇಶಿಸಬಹುದು.

**188. ಅಧೀನ ಪೊಲೀಸ್ ಅಧಿಕಾರಿಯಿಂದ ತನಿಖಾ ವರದಿ.-** ಈ ಅಧ್ಯಾಯದ ಮೇರೆಗೆ ಯಾರೇ ಅಧೀನ ಅಧಿಕಾರಿಯು ಯಾವುದೇ ತನಿಖೆಯನ್ನು ಮಾಡಿರುವಾಗ, ಅವನು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಅಂಥ ತನಿಖೆಯ ಫಲಿತಾಂಶವನ್ನು ವರದಿ ಮಾಡತಕ್ಕದ್ದು.

**189. ಸಾಕ್ಷ್ಯದ ಕೊರತೆಯಿರುವಾಗ ಆಪಾದಿತನ ಬಿಡುಗಡೆ.-** ಈ ಅಧ್ಯಾಯದ ಮೇರೆಗಿನ ತನಿಖೆಯಲ್ಲಿ ಆಪಾದಿತನನ್ನು ಮ್ಯಾಜಿಸ್ಟ್ರೇಟನ ಬಳಿ ಕಳುಹಿಸುವುದನ್ನು ಸಮರ್ಥಿಸಲು ಸಾಕಷ್ಟು ಸಾಕ್ಷ್ಯ ಇಲ್ಲವೆಂದು ಅಥವಾ ಸಂಶಯಪಡಲು ಯುಕ್ತ ಕಾರಣವಿಲ್ಲವೆಂಬುದಾಗಿ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಕಂಡುಬಂದರೆ, ಅಂಥ ಅಧಿಕಾರಿಯು, ಅಂಥ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ ಪೊಲೀಸ್ ವರದಿಯ ಮೇಲೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಮತ್ತು ಆಪಾದಿತನ ಅಧಿವಿಚಾರಣೆ ಮಾಡಲು ಅಥವಾ ಅಧಿವಿಚಾರಣೆಗೆ ಆತನನ್ನು ಒಪ್ಪಿಸಲು ಅಧಿಕಾರವುಳ್ಳ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗುವಂತೆ ಅಂಥ ಆಪಾದಿತನನ್ನು ಅಗತ್ಯಪಡಿಸಿದರೆ ಮತ್ತು ಅಗತ್ಯಪಡಿಸಿದಾಗ ಹಾಜರಾಗುತ್ತೇನೆಂದು ಅಂಥ ಅಧಿಕಾರಿಯು ನಿರ್ದೇಶಿಸಬಹುದಾದಂಥ ಬಂಧಪತ್ರವನ್ನು ಅಥವಾ ಜಾಮೀನು ಬಂಧಪತ್ರವನ್ನು ಅಂಥ ಆಪಾದಿತನು ಬರೆದುಕೊಟ್ಟ ನಂತರ ಅವನನ್ನು ಬಿಡುಗಡೆ ಮಾಡತಕ್ಕದ್ದು.

**190. ಸಾಕಷ್ಟು ಸಾಕ್ಷ್ಯವಿದ್ದಾಗ ಮ್ಯಾಜಿಸ್ಟ್ರೇಟನಿಗೆ ಕಳುಹಿಸಬೇಕಾದ ಮೊಕದ್ದಮೆಗಳು.-** (1) ಈ ಅಧ್ಯಾಯದ ಮೇರೆಗಿನ ತನಿಖೆಯಲ್ಲಿ ಮೇಲೆ ಹೇಳಿದಂತೆ ಸಾಕಷ್ಟು ಸಾಕ್ಷ್ಯವು ಇದೆಯೆಂದು ಅಥವಾ ಯುಕ್ತ ಕಾರಣವಿದೆಯೆಂಬುದಾಗಿ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಕಂಡುಬಂದರೆ, ಅಂಥ ಅಧಿಕಾರಿಯು, ಪೊಲೀಸ್ ವರದಿಯ ಮೇಲೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಮತ್ತು ಆಪಾದಿತನನ್ನು ಅಧಿವಿಚಾರಣೆ ಮಾಡಲು ಅಥವಾ ಅಧಿವಿಚಾರಣೆಗೆ ಒಪ್ಪಿಸಲು ಅಧಿಕಾರವುಳ್ಳ ಮ್ಯಾಜಿಸ್ಟ್ರೇಟನ ಬಳಿಗೆ ಅಭಿರಕ್ಷೆಯಲ್ಲಿರುವ ಆ ಆಪಾದಿತನನ್ನು ಕಳುಹಿಸತಕ್ಕದ್ದು ಅಥವಾ ಅಪರಾಧವು ಜಾಮೀನೀಯವಾದುದಾಗಿದ್ದರೆ ಮತ್ತು ಆಪಾದಿತನು ಭದ್ರತೆ ಕೊಡಲು ಸಮರ್ಥನಾಗಿದ್ದರೆ, ನಿಗದಿತ ದಿನಾಂಕದಂದು ಅಂಥ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗುತ್ತೇನೆಂದು ಮತ್ತು ಅನ್ಯಥಾ ನಿರ್ದೇಶಿತನಾಗುವವರೆಗೆ, ಅಂಥ ಮ್ಯಾಜಿಸ್ಟ್ರೇಟನ ಮುಂದೆ ದಿನನಿತ್ಯವೂ ಹಾಜರಾಗುತ್ತೇನೆಂದು ಅವನಿಂದ ಭದ್ರತೆಯನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಆಪಾದಿತನು ಅಭಿರಕ್ಷೆಯಲ್ಲಿಲ್ಲದಿದ್ದರೆ, ಪೊಲೀಸ್ ಅಧಿಕಾರಿಯು ಅಂಥ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸುವುದಕ್ಕಾಗಿ ಆತನಿಂದ ಭದ್ರತೆಯನ್ನು ಪಡೆದುಕೊಳ್ಳತಕ್ಕದ್ದು ಮತ್ತು ಅಂಥ ವರದಿಯನ್ನು ಯಾರಿಗೆ ಕಳುಹಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು ಆಪಾದಿತನನ್ನು ಅಭಿರಕ್ಷೆಗೆ ತೆಗೆದುಕೊಂಡಿಲ್ಲ ಎಂಬ ಕಾರಣದ ಮೇಲೆ ಅದನ್ನು ಅಂಗೀಕರಿಸಲು ನಿರಾಕರಿಸತಕ್ಕದ್ದಲ್ಲ.

(2) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಈ ಪ್ರಕರಣದ ಮೇರೆಗೆ ಆಪಾದಿತನನ್ನು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಿದಾಗ ಅಥವಾ ಅಂಥ ಮ್ಯಾಜಿಸ್ಟ್ರೇಟನ ಮುಂದೆ ಆತನ ಹಾಜರಾತಿಗಾಗಿ ಭದ್ರತೆಯನ್ನು ಪಡೆದುಕೊಂಡಾಗ, ಮ್ಯಾಜಿಸ್ಟ್ರೇಟನ ಮುಂದೆ ಅವಶ್ಯಕವಾಗಿ ಹಾಜರುಪಡಿಸಬೇಕಾಗಿರುವ ಯಾವುದೇ ಆಯುಧವನ್ನು ಅಥವಾ ಇತರ ವಸ್ತುವನ್ನು ಅಂಥ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು ಮತ್ತು ದೂರುದಾರನನ್ನು (ಯಾರಾದರೂ ಇದ್ದರೆ) ಮತ್ತು ಮೊಕದ್ದಮೆಯ ಸಂಗತಿ ಮತ್ತು ಸನ್ನಿವೇಶಗಳನ್ನು ತಿಳಿದಿರುವರೆಂದು ಅಂಥ ಅಧಿಕಾರಿಗೆ ಕಂಡುಬರುವ ಮತ್ತು ಅವಶ್ಯವೆಂದು ತಾನು ಭಾವಿಸಬಹುದಾದಷ್ಟು ವ್ಯಕ್ತಿಗಳನ್ನು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗಲು ಮತ್ತು ಆಪಾದಿತನ ವಿರುದ್ಧದ ಆಪಾದನೆಯ ವಿಷಯದಲ್ಲಿ (ಸಂದರ್ಭಾನುಸಾರ) ಪ್ರಾಸಿಕ್ಯೂಟ್ ಮಾಡಲು ಅಥವಾ ಸಾಕ್ಷ್ಯವನ್ನು ನೀಡಲು ಬಂಧಪತ್ರವನ್ನು ಬರೆದುಕೊಡುವಂತೆ ಅಗತ್ಯಪಡಿಸತಕ್ಕದ್ದು.

(3) ಬಂಧಪತ್ರದಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯವನ್ನು ನಮೂದಿಸಿದ್ದರೆ ಅಂಥ ನ್ಯಾಯಾಲಯವು, ಆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ವಿಚಾರಣೆಗಾಗಿ ಅಥವಾ ಅಧಿವಿಚಾರಣೆಗಾಗಿ ಮೊಕದ್ದಮೆಯನ್ನು ಯಾವ ನ್ಯಾಯಾಲಯಕ್ಕೆ ಒಪ್ಪಿಸಿರುವನೋ ಆ ಯಾವುದೇ ನ್ಯಾಯಾಲಯವನ್ನು ಒಳಗೊಂಡಿರುತ್ತದೆಂದು ಭಾವಿಸತಕ್ಕದ್ದು, ಪರಂತು, ಹಾಗೆ ಒಪ್ಪಿಸುವಿಕೆಯ ಬಗ್ಗೆ ಯುಕ್ತ ನೋಟೀಸನ್ನು ಅಂಥ ದೂರುದಾರನಿಗೆ ಅಥವಾ ವ್ಯಕ್ತಿಗಳಿಗೆ ನೀಡತಕ್ಕದ್ದು.

(4) ಯಾವ ಅಧಿಕಾರಿಯ ಸಮ್ಮುಖದಲ್ಲಿ ಬಂಧಪತ್ರವನ್ನು ಬರೆದುಕೊಡಲಾಯಿತೋ ಆ ಅಧಿಕಾರಿಯು, ಅದನ್ನು ಬರೆದುಕೊಟ್ಟ ವ್ಯಕ್ತಿಗಳ ಪೈಕಿ ಯಾರಾದರೊಬ್ಬನಿಗೆ ಅದರ ಒಂದು ಪ್ರತಿಯನ್ನು ನೀಡತಕ್ಕದ್ದು ಮತ್ತು ಆನಂತರ ಮೂಲ ಪ್ರತಿಯನ್ನು ತನ್ನ ವರದಿಯೊಂದಿಗೆ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

**191. ಪೊಲೀಸ್ ಅಧಿಕಾರಿಯ ಜೊತೆಯಲ್ಲಿ ಹೋಗಲು ದೂರುದಾರನನ್ನು ಮತ್ತು ಸಾಕ್ಷಿದಾರರನ್ನು ಅಗತ್ಯಪಡಿಸದಿರುವುದು ಮತ್ತು ನಿರ್ಬಂಧಕ್ಕೆ ಒಳಪಡಿಸದಿರುವುದು.-** ಯಾರೇ ದೂರುದಾರನನ್ನು ಅಥವಾ ಸಾಕ್ಷಿದಾರನನ್ನು, ಯಾವುದೇ ನ್ಯಾಯಾಲಯಕ್ಕೆ ಹೋಗುವಾಗ, ಪೊಲೀಸ್ ಅಧಿಕಾರಿಯ ಜೊತೆಯಲ್ಲಿ ಹೋಗಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅನಾವಶ್ಯಕವಾದ ನಿರ್ಬಂಧಕ್ಕೆ ಅಥವಾ ಅನಾನುಕೂಲಕ್ಕೆ ಒಳಪಡಿಸತಕ್ಕದ್ದಲ್ಲ ಅಥವಾ ಅವನ ಹಾಜರಾತಿಗಾಗಿ ಅವನ ಸ್ವಂತ ಬಂಧಪತ್ರವನ್ನು ಹೊರತುಪಡಿಸಿ ಇತರ ಯಾವುದೇ ಭದ್ರತೆಯನ್ನು ನೀಡಲು ಅಗತ್ಯಪಡಿಸತಕ್ಕದ್ದಲ್ಲ:

ಪರಂತು, ಯಾರೇ ದೂರುದಾರನು ಅಥವಾ ಸಾಕ್ಷಿದಾರನು, 190ನೇ ಪ್ರಕರಣದಲ್ಲಿ ನಿರ್ದೇಶಿಸಿದಂತೆ ಹಾಜರಾಗಲು ಅಥವಾ ಬಂಧಪತ್ರವನ್ನು ಬರೆದು ಕೊಡಲು ನಿರಾಕರಿಸಿದರೆ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಅಂಥ ಬಂಧಪತ್ರವನ್ನು ದೂರುದಾರನು ಅಥವಾ ಸಾಕ್ಷಿದಾರನು ಬರೆದು ಕೊಡುವವರೆಗೆ ಅಥವಾ ಮೊಕದ್ದಮೆಯ ವಿಚಾರಣೆಯು ಪೂರ್ಣವಾಗುವವರೆಗೆ ಅವನನ್ನು ಯಾವ ಮ್ಯಾಜಿಸ್ಟ್ರೇಟನು ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಬಹುದೋ ಆ ಮ್ಯಾಜಿಸ್ಟ್ರೇಟನ ಬಳಿಗೆ ಅಭಿರಕ್ಷೆಯಲ್ಲಿ ಕಳುಹಿಸಬಹುದು.

**192. ತನಿಖೆಯಾಗುತ್ತಿರುವಾಗ ವ್ಯವಹರಣೆಗಳ ದಿನಚರಿ.-** (1) ಈ ಅಧ್ಯಾಯದ ಮೇರೆಗೆ ತನಿಖೆಯನ್ನು ಮಾಡುವ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು, ತನಗೆ ಮಾಹಿತಿಯು ತಿಳಿದ ಸಮಯ, ತಾನು ತನಿಖೆಯನ್ನು ಪ್ರಾರಂಭಿಸಿದ ಮತ್ತು

ಪೂರ್ಣಗೊಳಿಸಿದ ಸಮಯ, ತಾನು ಸಂದರ್ಶಿಸಿದ ಸ್ಥಳ ಅಥವಾ ಸ್ಥಳಗಳು ಮತ್ತು ತನ್ನ ತನಿಖೆಯಿಂದ ತಿಳಿದುಕೊಂಡ ಸನ್ನಿವೇಶಗಳ ವಿವರಣೆ, ಇವೆಲ್ಲವನ್ನೂ ಒಳಗೊಂಡಿರುವ ತನ್ನ ತನಿಖಾ ವ್ಯವಹರಣೆಗಳನ್ನು ದಿನಚರಿಯಲ್ಲಿ ಪ್ರತಿದಿನವೂ ನಮೂದಿಸತಕ್ಕದ್ದು.

(2) 180ನೇ ಪ್ರಕರಣದ ಮೇರೆಗೆ ತನಿಖೆಯ ಅವಧಿಯಲ್ಲಿ ದಾಖಲು ಮಾಡಲಾದ ಸಾಕ್ಷಿದಾರರ ಹೇಳಿಕೆಗಳನ್ನು ಮೊಕದ್ದಮೆಯ ದಿನಚರಿ (ಕೇಸ್ ಡೈರಿ)ಯಲ್ಲಿ ನಮೂದಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ದಿನಚರಿಯು ಸಂಪುಟದ ರೂಪದಲ್ಲಿರತಕ್ಕದ್ದು ಮತ್ತು ಕ್ರಮಬದ್ಧವಾಗಿ ಪುಟಗಳ ಸಂಖ್ಯೆಯನ್ನು ನೀಡತಕ್ಕದ್ದು.

(4) ಯಾವುದೇ ಕ್ರಿಮಿನಲ್ ನ್ಯಾಯಾಲಯವು, ಅಂಥ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಅಥವಾ ಅಧಿವಿಚಾರಣೆಯಲ್ಲಿರುವ ಮೊಕದ್ದಮೆಗೆ ಸಂಬಂಧಿಸಿದ ಪೊಲೀಸ್ ದಿನಚರಿಗಳನ್ನು (ಡೈರಿ) ತರಿಸಿಕೊಳ್ಳಬಹುದು ಮತ್ತು ಅಂಥ ದಿನಚರಿಗಳನ್ನು ಆ ಮೊಕದ್ದಮೆಯ ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿ ಸಹಾಯ ಪಡೆಯಲು ಉಪಯೋಗಿಸಬಹುದು, ಆದರೆ ಸಾಕ್ಷ್ಯವಾಗಿ ಉಪಯೋಗಿಸತಕ್ಕದ್ದಲ್ಲ.

(5) ಆಪಾದಿತನಿಗಾಗಲಿ ಅಥವಾ ಅವನ ಏಜೆಂಟರಿಗಾಗಲಿ ಅಂಥ ದಿನಚರಿಗಳನ್ನು ತರಿಸಿಕೊಳ್ಳಲು ಹಕ್ಕು ಇರತಕ್ಕದ್ದಲ್ಲ ಅಥವಾ ಅವುಗಳನ್ನು ನ್ಯಾಯಾಲಯವು ನೋಡಿದೆಯೆಂಬ ಕಾರಣಕ್ಕಾಗಿ ಮಾತ್ರವೇ ಅವುಗಳನ್ನು ನೋಡಲು ಅವನಿಗೆ ಅಥವಾ ಅವರಿಗೆ ಹಕ್ಕು ಇರತಕ್ಕದ್ದಲ್ಲ, ಆದರೆ, ಪೊಲೀಸ್ ಅಧಿಕಾರಿಯು, ಅವುಗಳ ಬಗ್ಗೆ ತನ್ನ ನೆನಪಿನಲ್ಲಿರುವುದನ್ನು ಪುನರ್ ಮನನ ಮಾಡಿಕೊಳ್ಳಲು ಅವುಗಳನ್ನು ಬಳಸಿದರೆ ಅಥವಾ ನ್ಯಾಯಾಲಯವು, ಅಂಥ ಪೊಲೀಸ್ ಅಧಿಕಾರಿಯ ವ್ಯತಿರಿಕ್ತತೆಯನ್ನು ತೋರಿಸುವ ಉದ್ದೇಶಕ್ಕಾಗಿ ಅವುಗಳನ್ನು ಬಳಸಿದರೆ, ಸಂದರ್ಭಾನುಸಾರ, ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 148ನೇ ಪ್ರಕರಣದ ಅಥವಾ 164ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

**193. ತನಿಖೆಯು ಪೂರ್ಣಗೊಂಡ ತರುವಾಯ ಪೊಲೀಸ್ ಅಧಿಕಾರಿಯ ವರದಿ.-** (1) ಈ ಅಧ್ಯಾಯದ ಮೇರೆಗಿನ ಪ್ರತಿಯೊಂದು ತನಿಖೆಯನ್ನು ಅನಾವಶ್ಯಕ ವಿಳಂಬವಿಲ್ಲದೆಯೇ ಪೂರ್ಣಗೊಳಿಸತಕ್ಕದ್ದು.

(2) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64, 65, 66, 67, 68, 70, 71ನೇ ಪ್ರಕರಣಗಳ ಮೇರೆಗಿನ ಅಥವಾ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ, 2012 (2012ರ 32)ರ 4, 6, 8ನೇ ಪ್ರಕರಣಗಳ ಅಥವಾ 10ನೇ ಪ್ರಕರಣದ ಮೇರೆಗಿನ ಅಪರಾಧಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯ ಪ್ರಭಾರದಲ್ಲಿದ್ದ ಅಧಿಕಾರಿಯು ಆ ಬಗ್ಗೆ ಮಾಹಿತಿಯನ್ನು ದಾಖಲಿಸಿಕೊಂಡ ದಿನಾಂಕದಿಂದ ಎರಡು ತಿಂಗಳುಗಳ ಒಳಗಾಗಿ ತನಿಖೆಯನ್ನು ಪೂರ್ಣಗೊಳಿಸತಕ್ಕದ್ದು.

(3) (i) ತನಿಖೆ ಪೂರ್ಣಗೊಂಡ ಕೂಡಲೇ, ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಪೊಲೀಸ್ ವರದಿಯ ಮೇಲೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಅಧಿಕಾರವುಳ್ಳ ಮ್ಯಾಜಿಸ್ಟ್ರೇಟನಿಗೆ,-

(ಎ) ಪಕ್ಷಕಾರರ ಹೆಸರುಗಳು;

(ಬಿ) ಮಾಹಿತಿಯ ಸ್ವರೂಪ;

(ಸಿ) ಮೊಕದ್ದಮೆಯ ಸನ್ನಿವೇಶಗಳನ್ನು ತಿಳಿದಿರುವರೆಂದು ಕಂಡುಬರುವ ವ್ಯಕ್ತಿಗಳ ಹೆಸರುಗಳು;

(ಡಿ) ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಕಂಡುಬರುತ್ತಿದೆಯೇ, ಹಾಗಿದ್ದರೆ ಯಾರಿಂದ;

(ಇ) ಆಪಾದಿತನನ್ನು ದಸ್ತಗಿರಿ ಮಾಡಲಾಗಿದೆಯೇ;

(ಎಫ್) ಆಪಾದಿತನನ್ನು ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಮೇಲೆ ಬಿಡುಗಡೆ ಮಾಡಲಾಗಿದೆಯೇ;

(ಜಿ) ಆಪಾದಿತನನ್ನು 190ನೇ ಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿ ಕಳುಹಿಸಲಾಗಿದೆಯೇ;

(ಹೆಚ್) ತನಿಖೆಯು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64, 65, 66, 67, 68, 70 ಅಥವಾ 71ನೇ ಪ್ರಕರಣದ ಮೇರೆಗಿನ ಅಪರಾಧಕ್ಕೆ ಸಂಬಂಧಿಸಿದ್ದಲ್ಲಿ, ಮಹಿಳೆಯ ವೈದ್ಯಕೀಯ ಪರೀಕ್ಷೆಯ ವರದಿಯನ್ನು ಲಗತ್ತಿಸಲಾಗಿದೆಯೇ ಎಂಬುದನ್ನು;

(ಐ) ವಿದ್ಯುನ್ಮಾನ ಸಾಧನವಾಗಿದ್ದ ಸಂದರ್ಭದಲ್ಲಿ, ಅಭಿರಕ್ಷೆಯ ಅನುಕ್ರಮಣಿಕೆಯನ್ನು

- ತಿಳಿಸುವ ವರದಿಯನ್ನು, ವಿದ್ಯುನ್ಮಾನ ಸಂವಹನದ ಮುಖಾಂತರವೂ ಸೇರಿದಂತೆ ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಕಳುಹಿಸತಕ್ಕದ್ದು.

(ii) ಪೊಲೀಸ್ ಅಧಿಕಾರಿಯು, ತೊಂಬತ್ತು ದಿನಗಳ ಅವಧಿಯೊಳಗೆ, ಮಾಹಿತಿದಾರನಿಗೆ ಅಥವಾ ಸಂತ್ರಸ್ತ ವ್ಯಕ್ತಿಗೆ ವಿದ್ಯುನ್ಮಾನ ಸಂವಹನದ ಮುಖಾಂತರವೂ ಸೇರಿದಂತೆ ಯಾವುದೇ ಸಾಧನಗಳ ಮೂಲಕ ತನಿಖೆಯ ಪ್ರಗತಿಯ ಬಗ್ಗೆ ಮಾಹಿತಿಯನ್ನು ತಿಳಿಸತಕ್ಕದ್ದು;

(iii) ಪೊಲೀಸ್ ಅಧಿಕಾರಿಯು, ಅಪರಾಧವು ನಡೆದ ಬಗ್ಗೆ ಮೊದಲು ಮಾಹಿತಿಯನ್ನು ಯಾರಾದರೂ ಕೊಟ್ಟಿದ್ದರೆ, ಆ ವ್ಯಕ್ತಿಗೆ ತಾನು ಕೈಗೊಂಡ ಕ್ರಮವನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ತಿಳಿಸತಕ್ಕದ್ದು.

(4) 177ನೇ ಪ್ರಕರಣದ ಮೇರೆಗೆ ಒಬ್ಬ ವರಿಷ್ಠ ಪೊಲೀಸ್ ಅಧಿಕಾರಿಯು ನೇಮಕವಾಗಿರುವಲ್ಲಿ, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹಾಗೇ ನಿರ್ದೇಶಿಸುವ ಯಾವುದೇ ಸಂದರ್ಭದಲ್ಲಿ, ಅಂಥ ಅಧಿಕಾರಿಯ ಮುಖಾಂತರ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಅವನು ಮ್ಯಾಜಿಸ್ಟ್ರೇಟನಿಂದ ಆದೇಶಗಳು ಆಗುವವರೆಗೆ ಮತ್ತಷ್ಟು ತನಿಖೆ ಮಾಡಲು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ನಿರ್ದೇಶಿಸಬಹುದು.

(5) ಆಪಾದಿತನು ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಮೇಲೆ ಬಿಡುಗಡೆ ಮಾಡಲಾಗಿದೆಯೆಂಬುದಾಗಿ ಈ ಪ್ರಕರಣದ ಮೇರೆಗೆ ಕಳುಹಿಸಲಾದ ವರದಿಯಿಂದ ಕಂಡುಬಂದಾಗ, ಮ್ಯಾಜಿಸ್ಟ್ರೇಟನು ಅಂಥ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ವಿಮೋಚನೆ ಮಾಡಲು ಅಥವಾ ಅನ್ಯಥಾ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು.

(6) 190ನೇ ಪ್ರಕರಣದಲ್ಲಿ ಅನ್ವಯವಾಗುವಂಥ ಮೊಕದ್ದಮೆಯ ಬಗ್ಗೆ ಅಂಥ ವರದಿಯು ಇರುವಲ್ಲಿ, ಪೊಲೀಸ್ ಅಧಿಕಾರಿಯು ಮ್ಯಾಜಿಸ್ಟ್ರೇಟನಿಗೆ ವರದಿಯ ಜೊತೆಗೆ,-

(ಎ) ತನಿಖೆಯ ಸಮಯದಲ್ಲಿ, ಮ್ಯಾಜಿಸ್ಟ್ರೇಟನಿಗೆ ಈಗಾಗಲೇ ಕಳುಹಿಸಲಾದವುಗಳನ್ನುಳಿದು ಪ್ರಾಸಿಕ್ಯೂಷನ್ ಅವಲಂಬಿಸಲು ಉದ್ದೇಶಿಸಿರುವ ಎಲ್ಲಾ ದಸ್ತಾವೇಜುಗಳನ್ನು ಅಥವಾ ಅವುಗಳ ಸುಸಂಬದ್ಧ ಉದ್ಧೃತ ಭಾಗಗಳನ್ನು;

(ಬಿ) 180ನೇ ಪ್ರಕರಣದ ಮೇರೆಗೆ ದಾಖಲಿಸಲಾಗಿದ್ದು ಪ್ರಾಸಿಕ್ಯೂಷನ್ ತನ್ನ ಸಾಕ್ಷಿಗಳನ್ನಾಗಿ ಪರೀಕ್ಷೆ ಮಾಡಲು ಉದ್ದೇಶಿರುವ ಎಲ್ಲಾ ವ್ಯಕ್ತಿಗಳ ಹೇಳಿಕೆಗಳನ್ನು

- ಕಳುಹಿಸತಕ್ಕದ್ದು.

(7) ಅಂಥ ಯಾವುದೇ ಹೇಳಿಕೆಯ ಯಾವುದೇ ಭಾಗವು ವ್ಯವಹರಣೆಗಳ ವಸ್ತು ವಿಷಯಕ್ಕೆ ಸುಸಂಬದ್ಧವಾಗಿಲ್ಲವೆಂದು ಅಥವಾ ಅದನ್ನು ಆಪಾದಿತನಿಗೆ ಬಹಿರಂಗಪಡಿಸುವುದು ನ್ಯಾಯದ ಹಿತದೃಷ್ಟಿಯಿಂದ ಅಗತ್ಯವಿಲ್ಲವೆಂದು ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಯುಕ್ತವಲ್ಲವೆಂದು ಪೊಲೀಸ್ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅವನು ಹೇಳಿಕೆಯ ಆ ಭಾಗವನ್ನು ಸೂಚಿಸತಕ್ಕದ್ದು ಮತ್ತು ಆಪಾದಿತನಿಗೆ ಕೊಡಬೇಕಾದ ಪ್ರತಿಗಳಿಂದ ಆ ಭಾಗವನ್ನು ಬಿಟ್ಟುಬಿಡಲು ಮ್ಯಾಜಿಸ್ಟ್ರೇಟನಿಗೆ ಮನವಿ ಮಾಡಿಕೊಳ್ಳುವ ಮತ್ತು ಹಾಗೆ ಮನವಿ ಮಾಡಿಕೊಳ್ಳಲು ಅವನಿಗಿರುವ ಕಾರಣಗಳನ್ನು ತಿಳಿಸುವ ಟಿಪ್ಪಣಿಯನ್ನು ಲಗತ್ತಿಸತಕ್ಕದ್ದು.

(8) (7)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಒಳಪಟ್ಟು, ಮೊಕದ್ದಮೆಯನ್ನು ತನಿಖೆ ಮಾಡುವ ಪೊಲೀಸ್ ಅಧಿಕಾರಿಯು 230ನೇ ಪ್ರಕರಣದ ಮೇರೆಗೆ ಅಗತ್ಯವಿರುವಷ್ಟು ಸಂಖ್ಯೆಯ ಪೊಲೀಸ್ ವರದಿ ಪ್ರತಿಗಳನ್ನು ಹಾಗೂ ಮ್ಯಾಜಿಸ್ಟ್ರೇಟರಿಗೆ ಯುಕ್ತವಾಗಿ ಸೂಚಿಸಿದ ಇತರ ಎಲ್ಲಾ ದಸ್ತಾವೇಜುಗಳ ಪ್ರತಿಗಳನ್ನು ಆಪಾದಿತನಿಗೂ ಸಹ ಒದಗಿಸತಕ್ಕದ್ದು:

ಪರಂತು, ವಿದ್ಯುನ್ಮಾನ ಸಂವಹನದ ಮೂಲಕ ವರದಿ ಮತ್ತು ಇತರೆ ದಸ್ತಾವೇಜುಗಳನ್ನು ಒದಗಿಸಿದರೆ, ಅದನ್ನು ಯುಕ್ತವಾಗಿ ಒದಗಿಸಲಾಗಿದೆಯೆಂದು ಪರಿಗಣಿಸತಕ್ಕದ್ದು.

(9) ಈ ಪ್ರಕರಣದಲ್ಲಿರುವುದು ಯಾವುದೂ, (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವಂಥ ವರದಿಯನ್ನು ಮ್ಯಾಜಿಸ್ಟ್ರೇಟನಿಗೆ ಕಳುಹಿಸಿದ ನಂತರ, ಅಪರಾಧದ ಸಂಬಂಧದಲ್ಲಿ ಮತ್ತಷ್ಟು ತನಿಖೆ ಮಾಡದಂತೆ ತಡೆಯುತ್ತದೆಂದು ಭಾವಿಸತಕ್ಕದ್ದಲ್ಲ ಮತ್ತು ಅಂಥ ತನಿಖೆ ನಂತರ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಮತ್ತಷ್ಟು ಮೌಖಿಕ ಅಥವಾ ಲಿಖಿತ ಸಾಕ್ಷ್ಯವನ್ನು ಪಡೆದಲ್ಲಿ ಅವನು, ನಿಯಮಿಸಿದ ನಮೂನೆಯಲ್ಲಿ ಅಂಥ ಸಾಕ್ಷ್ಯಕ್ಕೆ ಸಂಬಂಧಿಸಿದ ಹೆಚ್ಚಿನ ವರದಿಯನ್ನು ಅಥವಾ ವರದಿಗಳನ್ನು ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು ಮತ್ತು (3)ರಿಂದ (8)ರವರೆಗಿನ ಉಪಪ್ರಕರಣಗಳ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ, ಅವು (3)ನೇ ಉಪಪ್ರಕರಣದ ಮೇರೆಗೆ ಕಳುಹಿಸಿದ ವರದಿಗೆ ಅನ್ವಯವಾಗುವ ಹಾಗೆಯೇ ಅಂಥ ವರದಿಗೂ ಅಥವಾ ವರದಿಗಳಿಗೂ ಅನ್ವಯವಾಗತಕ್ಕದ್ದು:

ಪರಂತು, ಅಧಿವಿಚಾರಣೆಯ ಅವಧಿಯಲ್ಲಿ ಮಾಡುವ ಹೆಚ್ಚುವರಿ ತನಿಖೆಯನ್ನು ಮೊಕದ್ದಮೆಯನ್ನು ಅಧಿವಿಚಾರಣೆ ಮಾಡುವ ನ್ಯಾಯಾಲಯದ ಅನುಮತಿ ಪಡೆದು ನಡೆಸಬಹುದು ಮತ್ತು ಅದನ್ನು ತೊಂಬತ್ತು ದಿನಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು ಹಾಗೂ ಆ ಅವಧಿಯನ್ನು ನ್ಯಾಯಾಲಯದ ಅನುಮತಿ ಪಡೆದು ವಿಸ್ತರಿಸಲೂಬಹುದು.

**194. ಆತ್ಮಹತ್ಯೆ, ಇತ್ಯಾದಿಗಳ ಬಗ್ಗೆ ಪೊಲೀಸ್ ವಿಚಾರಣೆ ಮತ್ತು ವರದಿ.-** (1) ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ವಿಶೇಷವಾಗಿ, ಯಾವ ಇತರ ಪೊಲೀಸ್ ಅಧಿಕಾರಿಗೆ ಅಧಿಕಾರ ಕೊಡಲಾಗಿದೆಯೋ, ಆ ಪೊಲೀಸ್ ಅಧಿಕಾರಿಗೆ, ಒಬ್ಬ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಅಥವಾ ಮತ್ತೊಬ್ಬನಿಂದ ಅಥವಾ ಪ್ರಾಣಿಯಿಂದ ಅಥವಾ ಯಂತ್ರದಿಂದ ಅಥವಾ ಅಪಘಾತದಿಂದ ಕೊಲ್ಲಲ್ಪಟ್ಟಿದ್ದಾನೆಂದು ಅಥವಾ ಇತರ ಯಾರೇ ವ್ಯಕ್ತಿಯು ಅಪರಾಧ ಮಾಡಿರುವನೆಂದು ಯುಕ್ತ ಸಂಶಯಕ್ಕೆ ಆಸ್ಪದ ಕೊಡುವಂಥ ಸನ್ನಿವೇಶಗಳಲ್ಲಿ, ಆ ವ್ಯಕ್ತಿಯು ಮೃತನಾಗಿದ್ದಾನೆ ಎಂಬ ಮಾಹಿತಿಯು ದೊರೆತಾಗ, ಆ ಪೊಲೀಸ್ ಅಧಿಕಾರಿಯು, ಶವ ಪಂಚನಾಮೆಯನ್ನು ನಡೆಸಲು ಅಧಿಕಾರವುಳ್ಳ ತೀರ ಹತ್ತಿರದ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ಅದರ ಮಾಹಿತಿಯನ್ನು ತಿಳಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮದಿಂದ ಅಥವಾ ಜಿಲ್ಲಾ ಅಥವಾ ಉಪವಿಭಾಗ ಮ್ಯಾಜಿಸ್ಟ್ರೇಟನ ಯಾವುದೇ ಸಾಮಾನ್ಯ

ಅಥವಾ ವಿಶೇಷ ಆದೇಶದಿಂದ ಅನ್ಯಥಾ ನಿರ್ದೇಶಿತನಾದ ಹೊರತು, ಆ ಪೊಲೀಸ್ ಅಧಿಕಾರಿಯ ಮೃತನ ದೇಹವು ಇರುವ ಸ್ಥಳಕ್ಕೆ ಹೋಗತಕ್ಕದ್ದು ಮತ್ತು ಅಲ್ಲಿ ನೆರೆಹೊರೆಯ ಇಬ್ಬರು ಅಥವಾ ಹೆಚ್ಚು ಜನ ಗಣ್ಯ ನಿವಾಸಿಗಳ ಸಮ್ಮುಖದಲ್ಲಿ ತನಿಖೆಯನ್ನು ಮಾಡತಕ್ಕದ್ದು ಮತ್ತು ದೇಹದ ಮೇಲೆ ಕಂಡುಬರಬಹುದಾದಂಥ ಗಾಯಗಳು, ಮೂಳೆಮುರಿತಗಳು, ಪರಚುಗಾಯಗಳು ಮತ್ತು ಕ್ಷತಿಯ ಇತರ ಗುರುತುಗಳನ್ನು ವಿವರಿಸುವ ಮತ್ತು ಯಾವ ರೀತಿಯಲ್ಲಿ ಅಥವಾ ಯಾವ ಆಯುಧದಿಂದ ಅಥವಾ ಸಾಧನ (ಇದ್ದರೆ)ದಿಂದ ಅಂಥ ಗುರುತುಗಳನ್ನು ಮಾಡಲಾಗಿದೆ ಎಂದು ಕಂಡುಬರುತ್ತದೆ ಎಂಬುದನ್ನು ತಿಳಿಸುವ ಮೇಲು ನೋಟಕ್ಕೆ ಕಾಣಬರುವ ಮರಣದ ಕಾರಣದ ವರದಿಯನ್ನು ಬರೆಯತಕ್ಕದ್ದು.

(2) ಅಂಥ ಪೊಲೀಸ್ ಅಧಿಕಾರಿಯು ಮತ್ತು ಇತರ ವ್ಯಕ್ತಿಗಳು ಅಥವಾ ಆ ವರದಿಗೆ ವರದಿಯಲ್ಲಿರುವುದಕ್ಕೆ ಸಹಮತಿಸುವಷ್ಟು ವ್ಯಕ್ತಿಗಳು ಸಹಿ ಹಾಕತಕ್ಕದ್ದು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಅಥವಾ ಉಪವಿಭಾಗ ಮ್ಯಾಜಿಸ್ಟ್ರೇಟನಿಗೆ ಅದನ್ನು ಇಪ್ಪತ್ನಾಲ್ಕು ಗಂಟೆಗಳೊಳಗೆ ಕಳುಹಿಸತಕ್ಕದ್ದು.

(3) (i) ಮೊಕದ್ದಮೆಯು, ಮಹಿಳೆಯು ವಿವಾಹವಾದ ಏಳು ವರ್ಷದೊಳಗೆ ಆ ಮಹಿಳೆಯ ಆತ್ಮಹತ್ಯೆ ಮಾಡಿಕೊಂಡಿರುವುದು ಒಳಗೊಂಡಿರುವಾಗ; ಅಥವಾ

(ii) ಮೊಕದ್ದಮೆಯು, ಅಂಥ ಮಹಿಳೆಗೆ ಸಂಬಂಧಪಟ್ಟಂತೆ, ಇತರೆ ಕೆಲವು ವ್ಯಕ್ತಿಗಳು ಅಪರಾಧ ಮಾಡಿದ್ದಾರೆಂದು ಯುಕ್ತ ಸಂದೇಹ ಉದ್ಭವಿಸುವ ಯಾವುದೇ ಸಂದರ್ಭಗಳಲ್ಲಿ, ಅವಳು ವಿವಾಹವಾದ ಏಳು ವರ್ಷಗಳೊಳಗೆ, ಆ ಮಹಿಳೆಯ ಮರಣ ಹೊಂದಿರುವುದು ಸಂಬಂಧಿಸಿರುವಾಗ; ಅಥವಾ

(iii) ಮೊಕದ್ದಮೆಯು, ಮಹಿಳೆಯು ವಿವಾಹದ ಏಳು ವರ್ಷಗಳೊಳಗೆ, ಅವಳ ಮರಣಕ್ಕೆ ಸಂಬಂಧಪಟ್ಟಿರುವಾಗ ಮತ್ತು ಈ ಸಂಬಂಧವಾಗಿ ಆ ಮಹಿಳೆಯ ಯಾರೇ ಸಂಬಂಧಿಕನು ಕೋರಿಕೆ ಸಲ್ಲಿಸಿರುವಾಗ; ಅಥವಾ

(iv) ಮರಣದ ಕಾರಣದ ಬಗ್ಗೆ ಯಾವುದೇ ಸಂದೇಹವಿದ್ದಾಗ; ಅಥವಾ

(v) ಇತರೆ ಯಾವುದೇ ಕಾರಣಗಳಿಗಾಗಿ ಪೊಲೀಸ್ ಅಧಿಕಾರಿಯು ಹಾಗೆ ಮಾಡುವುದು ಯುಕ್ತವೆಂದು ಭಾವಿಸಿದಾಗ

- ರಸ್ತೆಯಲ್ಲಿಯೇ ದೇಹವು ಕೊಳೆತು ಹೋಗಿ ಅದರ ಪರೀಕ್ಷೆಯು ನಿರುಪಯುಕ್ತವಾಗುವ ಸಂಭವವಿಲ್ಲದ ಹವಾಮಾನದ ಪರಿಸ್ಥಿತಿ ಇದ್ದರೆ ಮತ್ತು ತೀರ ಹತ್ತಿರದ ಸಿವಿಲ್ ಸರ್ಜನ್ ಬಳಿಗೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ನೇಮಕಗೊಂಡ ಅರ್ಹ ವೈದ್ಯನ ಬಳಿಗೆ ಆ ದೇಹವನ್ನು ಪರೀಕ್ಷೆ ಮಾಡುವುದಕ್ಕಾಗಿ ಕಳುಹಿಸಲು ಅವಕಾಶವಿರುವಷ್ಟು ದೂರವಿದ್ದರೆ, ರಾಜ್ಯ ಸರ್ಕಾರವು, ಈ ಬಗ್ಗೆ ನಿಯಮಿಸಬಹುದಾದ ನಿಯಮಗಳಿಗೊಳಪಟ್ಟು ಅವನು ಕಳುಹಿಸತಕ್ಕದ್ದು.

(4) ಯಾರೇ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಮತ್ತು ರಾಜ್ಯ ಸರ್ಕಾರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ, ಈ ಬಗ್ಗೆ ವಿಶೇಷವಾಗಿ ಅಧಿಕಾರ ನೀಡಲಾಗಿದೆಯೋ ಆ ಯಾರೇ ಇತರ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಶವ ಪಂಚನಾಮೆ ನಡೆಸಲು ಅಧಿಕಾರ ಹೊಂದಿರುತ್ತಾನೆ.

**195. ವ್ಯಕ್ತಿಗಳನ್ನು ಸಮನ್ ಮಾಡಲು ಅಧಿಕಾರ.-** (1) 194ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿಯು ಸದರಿ ತನಿಖೆಯ ಉದ್ದೇಶಕ್ಕಾಗಿ, ಮೇಲೆ ಹೇಳಿದಂತೆ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನು ಮತ್ತು ಮೊಕದ್ದಮೆಯ ಸಂಗತಿಗಳನ್ನು ತಿಳಿದಿರುವನೆಂದು ಕಂಡುಬರುವಂಥ ಇತರ ಯಾರೇ ವ್ಯಕ್ತಿಯನ್ನು ಲಿಖಿತ ಆದೇಶದ ಮೂಲಕ

ಸಮನ್ ಮಾಡಬಹುದು ಮತ್ತು ಹಾಗೆ ಸಮನ್ ಮಾಡಲಾದ ಪ್ರತಿಯೊಬ್ಬ ವ್ಯಕ್ತಿಯು ಹಾಜರಾಗಲು ಮತ್ತು ಕ್ರಿಮಿನಲ್ ಆಪಾದನೆಗೆ ಅಥವಾ ದಂಡಕ್ಕೆ ಅಥವಾ ಮುಟ್ಟುಗೋಲಿಗೆ ಆತನನ್ನು ಗುರಿಪಡಿಸುವ ಸ್ವರೂಪದ ಉತ್ತರಗಳನ್ನು ಕೊಡಬೇಕಾದ ಪ್ರಶ್ನೆಗಳನ್ನು ಬಿಟ್ಟು ಇತರ ಎಲ್ಲಾ ಪ್ರಶ್ನೆಗಳಿಗೆ ಸತ್ಯವಾಗಿ ಉತ್ತರಿಸಲು ಬದ್ಧನಾಗಿರತಕ್ಕದ್ದು:

ಪರಂತು, ಹದಿನೈದು ವರ್ಷಗಳಿಗಿಂತ ಕಡಿಮೆಯಿರುವ ಅಥವಾ ಅರವತ್ತು ವರ್ಷಗಳಿಂತ ಮೇಲ್ಪಟ್ಟಿರುವ ಯಾರೇ ಪುರುಷ ಅಥವಾ ಮಹಿಳೆ ಅಥವಾ ಮಾನಸಿಕವಾಗಿ ಅಥವಾ ದೈಹಿಕವಾಗಿ ಅಶಕ್ತವಾಗಿರುವ ವ್ಯಕ್ತಿ ಅಥವಾ ಗಂಭೀರ ಖಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯನ್ನು ಅಂಥ ವ್ಯಕ್ತಿಯು ವಾಸಮಾಡುತ್ತಿರುವ ಸ್ಥಳದ ಹೊರತಾಗಿ ಬೇರೆ ಯಾವುದೇ ಸ್ಥಳಕ್ಕೆ ಹಾಜರಾಗುವಂತೆ ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಅಂಥ ವ್ಯಕ್ತಿಯು ಪೊಲೀಸ್ ಠಾಣೆಗೆ ಹಾಜರಾಗಿ ಉತ್ತರಿಸಲು ಇಚ್ಛಿಪಟ್ಟರೆ ಅಂಥ ವ್ಯಕ್ತಿಗೆ ಹಾಗೆ ಮಾಡಲು ಅನುಮತಿಸಬಹುದು.

(2) 190ನೇ ಪ್ರಕರಣವು ಅನ್ವಯವಾಗುವ ಸಂಜ್ಞೇಯ ಅಪರಾಧವು ಸಂಗತಿಗಳಿಂದ ಕಂಡುಬರದಿದ್ದರೆ, ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಅಂಥ ವ್ಯಕ್ತಿಗಳಿಗೆ ಪೊಲೀಸ್ ಅಧಿಕಾರಿಯು ಅಗತ್ಯಪಡಿಸತಕ್ಕದ್ದಲ್ಲ.

**196. ಮರಣದ ಕಾರಣದ ಬಗ್ಗೆ ಮ್ಯಾಜಿಸ್ಟ್ರೇಟನಿಂದ ವಿಚಾರಣೆ.-** (1) ಮೊಕದ್ದಮೆಯು, 194ನೇ ಪ್ರಕರಣದ (3)ನೇ ಉಪಪ್ರಕರಣದ (i)ನೇ ಖಂಡ ಅಥವಾ (ii)ನೇ ಖಂಡದಲ್ಲಿ ಉಲ್ಲೇಖಿಸಿರುವ ಸ್ವರೂಪದ್ದಾಗಿದ್ದಾಗ, ಶವ ಪಂಚನಾಮೆಯನ್ನು ನಡೆಸಲು ಅಧಿಕಾರವುಳ್ಳ ತೀರ ಹತ್ತಿರದ ಮ್ಯಾಜಿಸ್ಟ್ರೇಟನು, ಪೊಲೀಸ್ ಅಧಿಕಾರಿಯು ನಡೆಸುತ್ತಿರುವ ತನಿಖೆಯ ಬದಲಿಗೆ ಅಥವಾ ಆ ತನಿಖೆಯ ಜೊತೆಗೆ ಮರಣದ ಕಾರಣದ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು 194ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಹೇಳಿರುವ ಯಾವುದೇ ಇತರ ಮೊಕದ್ದಮೆಯಲ್ಲಿ ಹಾಗೆ ಅಧಿಕಾರವುಳ್ಳ ಯಾರೇ ಮ್ಯಾಜಿಸ್ಟ್ರೇಟನು ಮತ್ತು ಅವನು ಹಾಗೆ ಮಾಡಿದರೆ, ಅಪರಾಧದ ವಿಚಾರಣೆಯನ್ನು ನಡೆಸುವುದಕ್ಕಾಗಿ, ಅವನು ಹೊಂದಿರಬಹುದಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಯಾರೇ ವ್ಯಕ್ತಿಯು ಅಥವಾ ಮಹಿಳೆಯು, ಪೊಲೀಸ್ ಅಭಿರಕ್ಷೆಯಲ್ಲಿದ್ದಾಗ ಅಥವಾ ಈ ಸಂಹಿತೆಯ ಮೇರೆಗೆ ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಾಲಯವು ಅಧಿಕೃತಗೊಳಿಸಿದ ಇತರ ಯಾವುದೇ ಅಭಿರಕ್ಷೆಯಲ್ಲಿದ್ದಾಗ,-

(ಎ) ಮರಣ ಹೊಂದಿದರೆ ಅಥವಾ ಕಾಣೆಯಾದರೆ; ಅಥವಾ

(ಬಿ) ಆ ಮಹಿಳೆಯ ಮೇಲೆ ಅತ್ಯಾಚಾರ ನಡೆಸಲಾಗಿದೆಯೆಂದು ಆರೋಪಿಸಲಾಗಿದ್ದರೆ

- ಪೊಲೀಸರು ನಡೆಸುತ್ತಿರುವ ವಿಚಾರಣೆ ಅಥವಾ ತನಿಖೆಯ ಜೊತೆಗೆ, ಯಾವ ಮ್ಯಾಜಿಸ್ಟ್ರೇಟನ ಸ್ಥಳೀಯ ಅಧಿಕಾರವ್ಯಾಪ್ತಿಯಲ್ಲಿ ಆ ಅಪರಾಧವು ಘಟಿಸಿದೆಯೋ ಆ ಮ್ಯಾಜಿಸ್ಟ್ರೇಟನು ವಿಚಾರಣೆಯನ್ನು ನಡೆಸತಕ್ಕದ್ದು.

(3) ಅಂಥ ವಿಚಾರಣೆಯನ್ನು ನಡೆಸುವ ಮ್ಯಾಜಿಸ್ಟ್ರೇಟನು ಅದರ ಸಂಬಂಧದಲ್ಲಿ ಅವನು ತೆಗೆದುಕೊಂಡ ಸಾಕ್ಷ್ಯವನ್ನು ಈ ಮುಂದೆ ನಿಯಮಿಸಲಾದ ಯಾವುದೇ ರೀತಿಯಲ್ಲಿ ಮೊಕದ್ದಮೆಯ ಸನ್ನಿವೇಶಗಳಿಗನುಸಾರವಾಗಿ ದಾಖಲಿಸತಕ್ಕದ್ದು.

(4) ಈ ಮೊದಲೇ ಹೂಳಲಾಗಿದ್ದ ಯಾರೇ ವ್ಯಕ್ತಿಯ ಮೃತದೇಹವನ್ನು ಮರಣದ ಕಾರಣವನ್ನು ಕಂಡುಹಿಡಿಯುವುದಕ್ಕಾಗಿ ಪರೀಕ್ಷೆಯನ್ನು ಮಾಡುವುದು ವಿಹಿತವೆಂದು ಅಂಥ ಮ್ಯಾಜಿಸ್ಟ್ರೇಟನು ಭಾವಿಸಿದರೆ, ಅವನು ಆ ದೇಹವನ್ನು ಸಮಾಧಿಯಿಂದ ಹೊರತೆಗೆಯಿಸಬಹುದು ಮತ್ತು ಪರೀಕ್ಷೆ ಮಾಡಿಸಬಹುದು.

(5) ಈ ಪ್ರಕರಣದ ಮೇರೆಗೆ ವಿಚಾರಣೆಯನ್ನು ಮಾಡಬೇಕಾಗಿದ್ದರೆ, ಮ್ಯಾಜಿಸ್ಟ್ರೇಟನು, ಸಾಧ್ಯವಾದರೆ, ಯಾರ ಹೆಸರುಗಳು ಮತ್ತು ವಿಳಾಸಗಳು ತಿಳಿದಿವೆಯೋ ಆ ಮೃತನ ಸಂಬಂಧಿಗಳಿಗೆ ತಿಳಿಸತಕ್ಕದ್ದು ಮತ್ತು ವಿಚಾರಣೆಯಲ್ಲಿ ಅವರು ಹಾಜರಿರಲು ಅವಕಾಶ ಕೊಡತಕ್ಕದ್ದು.

(6) (2)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ಅಥವಾ ತನಿಖೆಯನ್ನು ನಡೆಸುತ್ತಿರುವ, ಮ್ಯಾಜಿಸ್ಟ್ರೇಟನು ಅಥವಾ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸ್ ಅಧಿಕಾರಿಯು, ವ್ಯಕ್ತಿಯು ಮೃತಪಟ್ಟ ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಆತನ ಮೃತದೇಹವನ್ನು ಪರೀಕ್ಷೆಗಾಗಿ ಸಮೀಪದ ಸಿವಿಲ್ ಸರ್ಜನ್‌ಗೆ ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ನೇಮಿಸಿದ ಇತರ ಅರ್ಹ ವೈದ್ಯಕೀಯ ವ್ಯಕ್ತಿಯ ಬಳಿಗೆ ಕಳುಹಿಸತಕ್ಕದ್ದು, ಹಾಗೆ ಮಾಡಲು ಸಾಧ್ಯವಾಗದಿದ್ದಾಗ ಆ ಬಗ್ಗೆ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸತಕ್ಕದ್ದು.

*ವಿವರಣೆ.*- ಈ ಪ್ರಕರಣದಲ್ಲಿ ‘ಸಂಬಂಧಿ’ ಎಂದರೆ, ತಂದೆತಾಯಿಗಳು, ಮಕ್ಕಳು, ಅಣ್ಣತಮ್ಮಂದಿರು, ಅಕ್ಕತಂಗಿಯರು ಮತ್ತು ಪತಿ ಅಥವಾ ಪತ್ನಿ.

## ಅಧ್ಯಾಯ XIV

### ವಿಚಾರಣೆಗಳಲ್ಲಿ ಹಾಗೂ ಅಧಿವಿಚಾರಣೆಗಳಲ್ಲಿ ಕ್ರಿಮಿನಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿ

**197. ವಿಚಾರಣೆ ಹಾಗೂ ಅಧಿವಿಚಾರಣೆಯ ಸಾಮಾನ್ಯ ಸ್ಥಳ.-** ಸಾಮಾನ್ಯವಾಗಿ ಪ್ರತಿಯೊಂದು ಅಪರಾಧವನ್ನು, ಅದು ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಘಟಿಸಿದೆಯೋ ಆ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದು ಮತ್ತು ಅಧಿವಿಚಾರಣೆ ಮಾಡತಕ್ಕದ್ದು.

**198. ವಿಚಾರಣೆ ಅಥವಾ ಅಧಿವಿಚಾರಣೆಯ ಸ್ಥಳ.-** (ಎ) ಹಲವು ಸ್ಥಳೀಯ ಪ್ರದೇಶಗಳ ಪೈಕಿ ಯಾವುದರಲ್ಲಿ ಅಪರಾಧವು ನಡೆಯಿತೆಂಬುದು ಅನಿಶ್ಚಿತವಾಗಿರುವಾಗ; ಅಥವಾ

(ಬಿ) ಭಾಗಶಃ ಒಂದು ಸ್ಥಳೀಯ ಪ್ರದೇಶದಲ್ಲಿ ಮತ್ತು ಭಾಗಶಃ ಇನ್ನೊಂದು ಸ್ಥಳೀಯ ಪ್ರದೇಶದಲ್ಲಿ ಅಪರಾಧವು ನಡೆದಿದ್ದರೆ; ಅಥವಾ

(ಸಿ) ಅಪರಾಧವು ಒಂದೇ ಸ್ಥಳದಲ್ಲಿ ಮುಂದುವರೆದಿದ್ದಲ್ಲಿ, ಒಂದಕ್ಕಿಂತ ಹೆಚ್ಚು ಸ್ಥಳೀಯ ಪ್ರದೇಶದಲ್ಲಿ ಅದು ಘಟಿಸುವುದು ಮುಂದುವರೆದಿದ್ದಲ್ಲಿ; ಅಥವಾ

(ಡಿ) ಅಪರಾಧವು ಬೇರೆ ಬೇರೆ ಸ್ಥಳೀಯ ಪ್ರದೇಶಗಳಲ್ಲಿ ನಡೆದ ವಿವಿಧ ಕೃತ್ಯಗಳನ್ನು ಒಳಗೊಂಡಿದ್ದರೆ

- ಅದನ್ನು ಅಂಥ ಯಾವುದೇ ಸ್ಥಳೀಯ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

**199. ಕೃತ್ಯವು ನಡೆದ ಅಥವಾ ಪರಿಣಾಮವು ಸಂಭವಿಸಿದ ಸ್ಥಳದಲ್ಲಿ ಅಪರಾಧದ ಅಧಿವಿಚಾರಣೆ.-** ಯಾವುದೇ ಕಾರ್ಯವನ್ನು ಮಾಡಿದ ಕಾರಣಕ್ಕಾಗಿ ಮತ್ತು ಯಾವುದೇ ಪರಿಣಾಮವು ಸಂಭವಿಸಿದ ಕಾರಣಕ್ಕಾಗಿ, ಯಾವುದೇ ಕೃತ್ಯವು

ಅಪರಾಧವೆಂದಾದಾಗ, ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಅಂಥದ್ದು ನಡೆಯಿತೋ ಅಥವಾ ಅಂಥ ಪರಿಣಾಮ ಸಂಭವಿಸಿತೋ ಆ ನ್ಯಾಯಾಲಯವು ಆ ಅಪರಾಧದ ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

**200. ಇತರ ಅಪರಾಧಕ್ಕೆ ಸಂಬಂಧಿಸಿದ ಕಾರಣದಿಂದ ಕೃತ್ಯವು ಅಪರಾಧವೆಂದಾದಾಗ ವಿಚಾರಣೆಯ ಸ್ಥಳ.-** ಒಂದು ಕೃತ್ಯವು ಅಪರಾಧವಾಗಿರುವ ಅಥವಾ ಅದನ್ನು ಮಾಡುವ ವ್ಯಕ್ತಿಯು ಒಂದು ಅಪರಾಧವನ್ನು ಮಾಡಲು ಸಮರ್ಥನಾಗಿದ್ದರೆ, ಅದು ಒಂದು ಅಪರಾಧವಾಗುವ ಇನ್ನೊಂದು ಕೃತ್ಯಕ್ಕೆ ಸಂಬಂಧಿಸಿದ ಕಾರಣದಿಂದ ಅಪರಾಧವಾಗಿರುವಾಗ, ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಆ ಯಾವುದೇ ಕೃತ್ಯವನ್ನು ಮಾಡಲಾಯಿತೋ ಆ ನ್ಯಾಯಾಲಯವು ಮೊದಲು ಹೇಳಿದ ಅಪರಾಧವನ್ನು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

**201. ಕೆಲವು ಅಪರಾಧಗಳ ಸಂದರ್ಭದಲ್ಲಿ ವಿಚಾರಣೆಯ ಸ್ಥಳ.-** (1) ದರೋಡೆಕೋರನಾಗಿರುವ ಅಥವಾ ದರೋಡೆಕೋರನು ಮಾಡಿರುವ ಕೊಲೆಯ, ದರೋಡೆಯ, ಕೊಲೆ ಸಹಿತ ದರೋಡೆಯ, ದರೋಡೆಕಾರರ ಗುಂಪಿಗೆ ಸೇರಿರುವ ಅಥವಾ ಅಭಿರಕ್ಷೆಯಿಂದ ತಪ್ಪಿಸಿಕೊಂಡಿರುವ ಯಾವುದೇ ಅಪರಾಧವನ್ನು, ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಆ ಅಪರಾಧವು ನಡೆಯಿತೋ ಅಥವಾ ಆಪಾದಿತ ವ್ಯಕ್ತಿಯು ಸಿಕ್ಕಿದನೋ, ಆ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

(2) ವ್ಯಕ್ತಿಯ ಅಪಹರಣ ಅಥವಾ ಬಲಾತ್ ಅಪಹರಣದ ಯಾವುದೇ ಅಪರಾಧವನ್ನು ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಮಾಡಲಾಯಿತೋ ಅಥವಾ ಸಾಗಿಸಲಾಯಿತೋ ಅಥವಾ ಬಚ್ಚಿಡಲಾಯಿತೋ ಅಥವಾ ತಡೆಹಿಡಿದಿರಿಸಿಕೊಳ್ಳಲಾಯಿತೋ, ಆ ನ್ಯಾಯಾಲಯವು ಆ ಯಾವುದೇ ಅಪರಾಧವನ್ನು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

(3) ಕಳ್ಳತನ, ಬಲಾದ್ಗ್ರಹಣದ ಅಥವಾ ಸುಲಿಗೆಯ ಯಾವುದೇ ಅಪರಾಧವನ್ನು ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಮಾಡಲಾಯಿತೋ, ಆ ಅಪರಾಧವನ್ನು ಅಥವಾ ಕಳ್ಳತನದ ಅಪರಾಧ ಮಾಡಿದ ಯಾರೇ ವ್ಯಕ್ತಿಯು ಆ ಅಪರಾಧದ ವಸ್ತುವಾಗಿರುವ ಕಳವು ಮಾಡಿದ ಸ್ವತ್ತನ್ನು ಹೊಂದಿದ್ದ ಅಥವಾ ಅದು ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದೂ ಅಥವಾ ಹಾಗೆ ನಂಬಲು ಕಾರಣವಿದ್ದೂ ಅಂಥ ಸ್ವತ್ತನ್ನು ಪಡೆದಿದ್ದ ಅಥವಾ ಇಟ್ಟುಕೊಂಡಿದ್ದ ಯಾರೇ ವ್ಯಕ್ತಿಯ ಅಪರಾಧವನ್ನು ಆ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

(4) ಆಪರಾಧಿಕ ದುರ್ವಿನಿಯೋಗದ ಅಥವಾ ಆಪರಾಧಿಕ ನಂಬಿಕೆ ದ್ರೋಹದ ಯಾವುದೇ ಅಪರಾಧವನ್ನು ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಆಪಾದಿತ ವ್ಯಕ್ತಿಯು ಆ ಅಪರಾಧ ಮಾಡಿದನೋ ಅಥವಾ ಅಪರಾಧದ ವಿಷಯವಾದ ಸ್ವತ್ತಿನ ಯಾವುದೇ ಭಾಗವನ್ನು ಪಡೆದನೋ ಅಥವಾ ಇಟ್ಟುಕೊಂಡನೋ ಅಥವಾ ಅದನ್ನು ಹಿಂದಿರುಗಿಸಲು ಅಥವಾ ಅದಕ್ಕೆ ಲೆಕ್ಕ ಕೊಡಲು ಆತನನ್ನು ಅಗತ್ಯಪಡಿಸಲಾಯಿತೋ ಆ ಬಗ್ಗೆ ಅವನನ್ನು ಆ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

(5) ಕಳವು ಮಾಡಿದ ಸ್ವತ್ತಿನ ಸ್ವಾಧೀನ ಹೊಂದಿರುವುದನ್ನು ಒಳಗೊಳ್ಳುವ ಯಾವುದೇ ಅಪರಾಧವನ್ನು, ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಆ ಅಪರಾಧ ನಡೆಯಿತೋ, ಕಳವು ಮಾಡಿದ ಸ್ವತ್ತೆಂದು ತಿಳಿದೂ ಅಥವಾ ಹಾಗೆ ನಂಬಲು ಕಾರಣವಿದ್ದೂ ಅದನ್ನು ಪಡೆದ ಅಥವಾ ಇಟ್ಟುಕೊಂಡ ವ್ಯಕ್ತಿಯು ಆ ಕಳವು ಮಾಡಿದ ಸ್ವತ್ತನ್ನು ಹೊಂದಿದ್ದಾನೋ ಆ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

**202. ವಿದ್ಯುನ್ಮಾನ ಸಂವಹನ ಸಾಧನಗಳು, ಪತ್ರಗಳು, ಇತ್ಯಾದಿಗಳ ಮೂಲಕ ಮಾಡಲಾದ ಅಪರಾಧಗಳು.-** (1) ವಿದ್ಯುನ್ಮಾನ ಸಂವಹನ ಸಾಧನಗಳು ಅಥವಾ ಪತ್ರಗಳು ಅಥವಾ ದೂರ ಸಂವಹನ ಸಂದೇಶಗಳ ಮೂಲಕ ವಂಚನೆಯನ್ನು ಒಳಗೊಳ್ಳುವ ಯಾವುದೇ ಅಪರಾಧವನ್ನು, ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಅಂಥ ವಿದ್ಯುನ್ಮಾನ ಸಂವಹನಗಳ ಅಥವಾ ಪತ್ರಗಳನ್ನು ಹಾಗೂ ಸಂದೇಶಗಳನ್ನು ಕಳುಹಿಸಲಾಯಿತೋ ಅಥವಾ ಪಡೆಯಲಾಯಿತೋ ಆ ಯಾವುದೇ ನ್ಯಾಯಾಲಯವು, ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು ಮತ್ತು ವಂಚನೆಯ ಅಪರಾಧವನ್ನು ಮತ್ತು ಸ್ವತ್ತನ್ನು ಕೊಡಲು ಅಪ್ರಾಮಾಣಿಕವಾಗಿ ಪ್ರೇರಣೆ ಮಾಡುವ ಯಾವುದೇ ಅಪರಾಧವನ್ನು, ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ, ವಂಚಿತ ವ್ಯಕ್ತಿಯು ಸ್ವತ್ತನ್ನು ಕೊಟ್ಟನೋ ಅಥವಾ ಆಪಾದಿತ ವ್ಯಕ್ತಿಯು ಪಡೆದನೋ ಆ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

(2) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 82ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಆ ಅಪರಾಧವು ನಡೆಯಿತೋ ಅಥವಾ ಅಪರಾಧಿಯು, ಮೊದಲು ಮದುವೆಯಾಗಿದ್ದ ಪತ್ನಿಯೊಂದಿಗೆ ಅಥವಾ ಪತಿಯೊಂದಿಗೆ ವಾಸಿಸಿದ್ದನೋ/ ವಾಸಿಸಿದ್ದಳೋ ಅಥವಾ ಮೊದಲು ವಿವಾಹವಾಗಿದ್ದ ಪತ್ನಿಯು, ಅಪರಾಧವನ್ನು ಮಾಡಿದ ತರುವಾಯ ಖಾಯಂ ನಿವಾಸವನ್ನು ಹೊಂದಿದ್ದಳೋ, ಆ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

**203. ಪ್ರಯಾಣ ಅಥವಾ ಸಮುದ್ರಯಾನ ಮಾಡುವಾಗ ನಡೆದ ಅಪರಾಧ.-** ಪ್ರಯಾಣ ಅಥವಾ ಸಮುದ್ರಯಾನ ಮಾಡುತ್ತಿರುವಾಗ, ಯಾರೇ ವ್ಯಕ್ತಿಯು ಮಾಡಿದ ಅಥವಾ ವ್ಯಕ್ತಿಯ ವಿರುದ್ಧ ಮಾಡಲಾದ ಅಥವಾ ಯಾವುದೇ ವಸ್ತುವಿನ ಸಂಬಂಧದಲ್ಲಿ ಮಾಡಿದ ಅಪರಾಧವನ್ನು, ಆ ವ್ಯಕ್ತಿಯು ಅಥವಾ ಆ ವಸ್ತುವು ಪ್ರಯಾಣ ಮಾಡುತ್ತಿರುವಾಗ ಅಥವಾ ಸಮುದ್ರಯಾನ ಮಾಡುತ್ತಿರುವಾಗ ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯ ಮುಖಾಂತರ ಅಥವಾ ಅದರೊಳಗೆ ಆ ವ್ಯಕ್ತಿಯು ಪ್ರವೇಶಿಸಿದನೋ ಅಥವಾ ಆ ವಸ್ತುವು ಪ್ರವೇಶಿಸಿತೋ ಆ ನ್ಯಾಯಾಲಯವು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

**204. ಒಟ್ಟಿಗೆ ವಿಚಾರಣೆಯಾಗಬಹುದಾದ ಅಪರಾಧಗಳ ಅಧಿವಿಚಾರಣೆಯ ಸ್ಥಳ.-** ಈ ಮುಂದೆ ಹೇಳಿರುವ ಅಪರಾಧಗಳಲ್ಲಿ ಯಾವುವೇ ಅಪರಾಧಗಳನ್ನು ವಿಚಾರಣೆ ಮಾಡಲು ಅಥವಾ ಅಧಿವಿಚಾರಣೆ ಮಾಡಲು ಸಕ್ಷಮವಾಗಿರುವ ನ್ಯಾಯಾಲಯವು,-

(ಎ) ಯಾರೇ ವ್ಯಕ್ತಿಯು ಮಾಡಿದ ಅಪರಾಧಗಳು ಆ ಪ್ರತಿಯೊಂದು ಅಪರಾಧದ ಬಗ್ಗೆ ಆರೋಪ ಹೊರಿಸಬಹುದಾದಂಥ ಅಪರಾಧಗಳಾಗಿದ್ದರೆ 242ನೇ ಪ್ರಕರಣದ, 243ನೇ ಪ್ರಕರಣದ ಅಥವಾ 244ನೇ ಪ್ರಕರಣದ ಉಪಬಂಧಗಳ ಮೇರೆಗೆ ಒಂದೇ ಸಲ ಅಧಿವಿಚಾರಣೆ ಮಾಡಬಹುದಾದಂಥ ಅಪರಾಧಗಳಾಗಿದ್ದರೆ; ಅಥವಾ

(ಬಿ) ಹಲವು ವ್ಯಕ್ತಿಗಳು ಮಾಡಿರುವ ಅಪರಾಧವು ಅಥವಾ ಅಪರಾಧಗಳು 246ನೇ ಪ್ರಕರಣದ ಉಪಬಂಧಗಳ ಮೇರೆಗೆ ಅವರ ಮೇಲೆ ಒಟ್ಟಿಗೆ ಆರೋಪಿಸಬಹುದಾದಂಥ ಮತ್ತು ಒಟ್ಟಿಗೆ ಅಧಿವಿಚಾರಣೆ ಮಾಡಬಹುದಾದಂಥ ಅಪರಾಧಗಳಾಗಿದ್ದರೆ

- ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆ ಮಾಡಬಹುದು.

**205. ಬೇರೆ ಬೇರೆ ಸೆಷನ್ಸ್ ವಿಭಾಗಗಳಲ್ಲಿ ಮೊಕದ್ದಮೆಗಳ ಅಧಿವಿಚಾರಣೆಗೆ ಆದೇಶ ಮಾಡಲು ಅಧಿಕಾರ.-** ಈ ಅಧ್ಯಾಯದ ಹಿಂದಿನ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು ಯಾವುದೇ ಜಿಲ್ಲೆಯಲ್ಲಿ ಅಧಿವಿಚಾರಣೆಗೆ

ಒಪ್ಪಿಸಲಾದ ಯಾವುದೇ ಮೊಕದ್ದಮೆಗಳನ್ನು ಅಥವಾ ಮೊಕದ್ದಮೆಗಳ ವರ್ಗಗಳನ್ನು ಯಾವುದೇ ಸೆಷನ್ಸ್ ವಿಭಾಗದಲ್ಲಿ ಅಧಿವಿಚಾರಣೆ ಮಾಡಬಹುದೆಂದು ನಿರ್ದೇಶಿಸಬಹುದು:

ಪರಂತು, ಅಂಥ ನಿರ್ದೇಶನವು ಸಂವಿಧಾನದ ಅಥವಾ ಈ ಸಂಹಿತೆಯ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಉಚ್ಚ ನ್ಯಾಯಾಲಯವು ಅಥವಾ ಸರ್ವೋಚ್ಚ ನ್ಯಾಯಾಲಯವು ಈ ಹಿಂದೆ ನೀಡಿರುವ ಯಾವುದೇ ನಿರ್ದೇಶನಕ್ಕೆ ವಿರುದ್ಧವಾಗಿರತಕ್ಕದ್ದಲ್ಲ.

**206. ಯಾವ ಜಿಲ್ಲೆಯಲ್ಲಿ ವಿಚಾರಣೆ ಅಥವಾ ಅಧಿವಿಚಾರಣೆಯಾಗಬೇಕೆಂಬ ಬಗ್ಗೆ ಸಂಶಯದ ಸಂದರ್ಭದಲ್ಲಿ ಅದನ್ನು ಉಚ್ಚ ನ್ಯಾಯಾಲಯವು ನಿರ್ಧರಿಸುವುದು.-** ಎರಡು ಅಥವಾ ಹೆಚ್ಚು ನ್ಯಾಯಾಲಯಗಳು ಒಂದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡಿದ್ದರೆ ಮತ್ತು ಆ ಅಪರಾಧವನ್ನು ಅವುಗಳಲ್ಲಿ ಯಾವ ನ್ಯಾಯಾಲಯವು ವಿಚಾರಣೆ ಮಾಡಬೇಕು ಅಥವಾ ಅಧಿವಿಚಾರಣೆ ಮಾಡಬೇಕು ಎಂಬ ಬಗ್ಗೆ ಪ್ರಶ್ನೆ ಉದ್ಭವಿಸಿದರೆ, ಆ ಪ್ರಶ್ನೆಯನ್ನು,-

(ಎ) ಆ ನ್ಯಾಯಾಲಯಗಳು ಒಂದೇ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿದ್ದರೆ, ಉಚ್ಚ ನ್ಯಾಯಾಲಯವು;

(ಬಿ) ಆ ನ್ಯಾಯಾಲಯಗಳು ಒಂದೇ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರದಿದ್ದರೆ, ಯಾವ ಉಚ್ಚ ನ್ಯಾಯಾಲಯದ ಅಪೀಲು ಕ್ರಿಮಿನಲ್ ಅಧಿಕಾರವ್ಯಾಪ್ತಿಯ ಸ್ಥಳೀಯ ಸರಹದ್ದುಗಳ ಒಳಗೆ ವ್ಯವಹರಣೆಗಳು ಮೊದಲು ಪ್ರಾರಂಭವಾದುವೋ ಆ ಉಚ್ಚ ನ್ಯಾಯಾಲಯವು

- ತೀರ್ಮಾನಿಸತಕ್ಕದ್ದು ಮತ್ತು ಆನಂತರ ಆ ಅಪರಾಧದ ಸಂಬಂಧದಲ್ಲಿ ಇತರ ಎಲ್ಲ ವ್ಯವಹರಣೆಗಳನ್ನು ಮುಂದುವರಿಸತಕ್ಕದ್ದಲ್ಲ.

**207. ಸ್ಥಳೀಯ ಅಧಿಕಾರವ್ಯಾಪ್ತಿಯ ಹೊರಗೆ ಮಾಡಲಾದ ಅಪರಾಧಕ್ಕೆ ಸಮನ್ ಅಥವಾ ವಾರಂಟ್ ಹೊರಡಿಸಲು ಅಧಿಕಾರ.-** (1) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು, ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಯಲ್ಲಿರುವ ಯಾರೇ ವ್ಯಕ್ತಿಯು, 197ರಿಂದ 205ರವರೆಗಿನ (ಎರಡೂ ಪ್ರಕರಣಗಳು ಸೇರಿದಂತೆ) ಪ್ರಕರಣಗಳ ಉಪಬಂಧಗಳ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ತನ್ನ ಅಂಥ ಅಧಿಕಾರವ್ಯಾಪ್ತಿಯೊಳಗೆ ವಿಚಾರಣೆ ಮಾಡಲು ಅಥವಾ ಅಧಿವಿಚಾರಣೆ ಮಾಡಲು ಸಾಧ್ಯವಿಲ್ಲದ, ಆದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಭಾರತದಲ್ಲಿ ಅಧಿವಿಚಾರಣೆ ಮಾಡಬಹುದಾದ ಅಪರಾಧವನ್ನು (ಭಾರತದ ಒಳಗೆ ಅಥವಾ ಹೊರಗಡೆ) ಅಂಥ ಅಧಿಕಾರವ್ಯಾಪ್ತಿಯ ಹೊರಗೆ ಮಾಡಿರುವನೆಂದು ನಂಬಲು ಕಾರಣವಿದ್ದರೆ, ಆ ಮ್ಯಾಜಿಸ್ಟ್ರೇಟನು, ಅದು ಅಂಥ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಮಾಡಿದ್ದಿದ್ದರೆ, ಆ ಅಪರಾಧದ ವಿಚಾರಣೆ ಮಾಡಲಾಗುತ್ತಿತ್ತೋ ಹಾಗೆಯೇ ವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಯನ್ನು ಈ ಹಿಂದೆ ಉಪಬಂಧಿಸಿದ ರೀತಿಯಲ್ಲಿ ತನ್ನ ಮುಂದೆ ಹಾಜರಾಗಲು ಒತ್ತಾಯಪಡಿಸಬಹುದು ಮತ್ತು ಅಂಥ ಅಪರಾಧದ ವಿಚಾರಣೆ ಮಾಡಲು ಅಥವಾ ಅಧಿವಿಚಾರಣೆ ಮಾಡಲು ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟನ ಬಳಿಗೆ ಅಂಥ ವ್ಯಕ್ತಿಯನ್ನು ಕಳುಹಿಸಬಹುದು ಅಥವಾ ಅಂಥ ಅಪರಾಧವು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಲ್ಲದಿದ್ದರೆ ಮತ್ತು ಈ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಮ್ಯಾಜಿಸ್ಟ್ರೇಟನಿಗೆ ಒಪ್ಪಿಕೊಳ್ಳುವಂಥ ಜಾಮೀನನ್ನು ವ್ಯಕ್ತಿಯು ಕೊಡಲು ಸಿದ್ಧನಾಗಿದ್ದರೆ ಮತ್ತು ಇಚ್ಛೆಯುಳ್ಳವನಾಗಿದ್ದರೆ, ಅಂಥ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಆ ವ್ಯಕ್ತಿಯು ಹಾಜರಾಗಲು, ಆ ವ್ಯಕ್ತಿಯಿಂದ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ತೆಗೆದುಕೊಳ್ಳಬಹುದು.

(2) ಅಂಥ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಒಬ್ಬನಿಗಿಂತ ಹೆಚ್ಚಿನ ಮ್ಯಾಜಿಸ್ಟ್ರೇಟರಿದ್ದಾಗ, ಅವರಲ್ಲಿ ಯಾವ ಮ್ಯಾಜಿಸ್ಟ್ರೇಟನ ಬಳಿಗೆ ಅಂಥ ವ್ಯಕ್ತಿಯನ್ನು ಕಳುಹಿಸತಕ್ಕದ್ದು ಅಥವಾ ಅಂಥ ವ್ಯಕ್ತಿಯು ಯಾವ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗಲು ಬದ್ಧನಾಗಿರತಕ್ಕದ್ದು ಎಂಬ ಬಗ್ಗೆ, ಈ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾಗದಿದ್ದರೆ, ಅವನು ಈ ಬಗ್ಗೆ ಉಚ್ಚ ನ್ಯಾಯಾಲಯದ ಆದೇಶಗಳಿಗಾಗಿ ವರದಿ ಮಾಡತಕ್ಕದ್ದು.

**208. ಭಾರತದ ಹೊರಗೆ ಮಾಡಿದ ಅಪರಾಧ.-** ಭಾರತದ ಹೊರಗೆ,-

(ಎ) ಭಾರತದ ನಾಗರಿಕನು ಮಧ್ಯ ಸಮುದ್ರದಲ್ಲಿ ಅಥವಾ ಬೇರೆಡೆಯಲ್ಲಿ; ಅಥವಾ

(ಬಿ) ಭಾರತದ ನಾಗರಿಕನಾಗಿರದ ಯಾರೇ ವ್ಯಕ್ತಿಯು, ಭಾರತದಲ್ಲಿ ನೋಂದಾಯಿತವಾದ ಯಾವುದೇ ಹಡಗಿನಲ್ಲಿ ಅಥವಾ ವಿಮಾನದಲ್ಲಿ

- ಅಂಥ ಅಪರಾಧವನ್ನು ಮಾಡಿದಾಗ, ಭಾರತದ ಯಾವ ಸ್ಥಳದಲ್ಲಿ ಅವನು ಸಿಗುವನೋ ಅಥವಾ ಭಾರತದ ಯಾವ ಸ್ಥಳದಲ್ಲಿ ಆ ಅಪರಾಧವು ದಾಖಲಾಗಿದೆಯೋ ಆ ಯಾವುದೇ ಸ್ಥಳದಲ್ಲಿ ಅದನ್ನು ಮಾಡಿದ್ದರೆ ಹೇಗೆ ವ್ಯವಹರಿಸಲಾಗುತ್ತಿತ್ತೋ ಹಾಗೆ ವ್ಯವಹರಿಸಬಹುದು:

ಪರಂತು, ಈ ಅಧ್ಯಾಯದ ಹಿಂದಿನ ಯಾವುದೇ ಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರದಿಂದ ಮುಂಚಿತವಾಗಿ ಅನುಮತಿ ಪಡೆಯದೆಯೇ ಭಾರತದಲ್ಲಿ ಅಂಥ ಯಾವುದೇ ಅಪರಾಧದ ವಿಚಾರಣೆ ಮಾಡತಕ್ಕದ್ದಲ್ಲ ಅಥವಾ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**209. ಭಾರತದ ಹೊರಗೆ ಮಾಡಿದ ಅಪರಾಧಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯ ಪಡೆಯುವುದು.-** ಭಾರತದ ಹೊರಗಿನ ಪ್ರದೇಶದಲ್ಲಿ ಮಾಡಲಾಗಿದೆಯೆಂದು ಆರೋಪಿತವಾದ ಯಾವುದೇ ಅಪರಾಧವನ್ನು, 208ನೇ ಪ್ರಕರಣದ ಉಪಬಂಧಗಳ ಮೇರೆಗೆ ವಿಚಾರಣೆ ಮಾಡಿದರೆ ಅಥವಾ ಅಧಿವಿಚಾರಣೆ ಮಾಡಿದರೆ, ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಿದರೆ, ಆ ಪ್ರದೇಶದಲ್ಲಿ ಇರುವ ಅಥವಾ ಅದಕ್ಕೆ ನ್ಯಾಯಿಕ ಅಧಿಕಾರಿಯಾಗಿರುವವನ ಮುಂದೆ ಅಥವಾ ಆ ಪ್ರದೇಶದಲ್ಲಿ ಇರುವ ಅಥವಾ ಅದಕ್ಕೆ ಭಾರತದ ರಾಜತಾಂತ್ರಿಕ ಪ್ರತಿನಿಧಿಯಾಗಿರುವವನ ಅಥವಾ ಕಾನ್ಸುಲರ್ ಪ್ರತಿನಿಧಿಯಾಗಿರುವವನ ಮುಂದೆ ಕೊಟ್ಟ ಹೇಳಿಕೆಗಳ ಅಥವಾ ಒದಗಿಸಲಾದ ನಿಶಾನೆ ಹಾಕಿದ ವಸ್ತುಗಳ ಪ್ರತಿಗಳನ್ನು, ಭೌತಿಕ ರೂಪದಲ್ಲಾಗಲೀ ಅಥವಾ ವಿದ್ಯುನ್ಮಾನ ರೂಪದಲ್ಲಾಗಲೀ ಯಾವ ಮೊಕದ್ದಮೆಯಲ್ಲಿ ಅಂಥ ವಿಚಾರಣೆ ಮಾಡುತ್ತಿರುವ ಅಥವಾ ಅಧಿವಿಚಾರಣೆ ಮಾಡುತ್ತಿರುವ ನ್ಯಾಯಾಲಯವು ಅಂಥ ಹೇಳಿಕೆಗಳಿಗೆ ಅಥವಾ ನಿಶಾನೆ ಹಾಕಿದ ವಸ್ತುಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸಾಕ್ಷ್ಯ ತೆಗೆದುಕೊಳ್ಳಲು ಕಾರ್ಯಾಜ್ಞೆ ಹೊರಡಿಸಬಹುದೋ ಆ ಯಾವುದೇ ಮೊಕದ್ದಮೆಯಲ್ಲಿ, ಅಂಥ ನ್ಯಾಯಾಲಯವು ಸಾಕ್ಷ್ಯಗಳನ್ನಾಗಿ ಸ್ವೀಕರಿಸತಕ್ಕದ್ದೆಂದು ನಿರ್ದೇಶಿಸಬಹುದು.

## ಅಧ್ಯಾಯ XV

## ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಅಗತ್ಯವಾದ ಷರತ್ತುಗಳು

**210. ಮ್ಯಾಜಿಸ್ಟ್ರೇಟರಿಂದ ಅಪರಾಧಗಳ ಸಂಜ್ಞೇಯತೆ.-** (1) ಈ ಅಧ್ಯಾಯದ ಉಪಬಂಧಗಳಿಗೊಳಪಟ್ಟು, ಯಾರೇ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಮತ್ತು (2)ನೇ ಉಪಪ್ರಕರಣದ ಮೇರೆಗೆ ಈ ಬಗ್ಗೆ ವಿಶೇಷವಾಗಿ ಅಧಿಕಾರವುಳ್ಳ ಯಾರೇ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು ಯಾವುದೇ ಅಪರಾಧವನ್ನು,-

(ಎ) ಯಾವುದೇ ವಿಶೇಷ ಕಾನೂನಿನ ಮೇರೆಗೆ ಅಧಿಕೃತಗೊಳಿಸಿದ ವ್ಯಕ್ತಿಯು ಸಲ್ಲಿಸಿದ ಯಾವುದೇ ದೂರನ್ನು ಒಳಗೊಂಡಂತೆ, ಅಂಥ ಅಪರಾಧವು ಒಳಗೊಂಡಿರುವ ಸಂಗತಿಗಳ ಬಗ್ಗೆ ದೂರನ್ನು ಸ್ವೀಕರಿಸಿದ ಮೇಲೆ;

(ಬಿ) ಅಂಥ ಸಂಗತಿಗಳನ್ನು ಕುರಿತು ಪೊಲೀಸರು ವರದಿಯನ್ನು (ವಿದ್ಯುನ್ಮಾನ ವಿಧಾನವೂ ಒಳಗೊಂಡಂತೆ ಯಾವುದೇ ವಿಧಾನದಲ್ಲಿ ಸಲ್ಲಿಸಿರುವ) ಸಲ್ಲಿಸಿದ ಮೇಲೆ;

(ಸಿ) ಪೊಲೀಸ್ ಅಧಿಕಾರಿಯಲ್ಲದ ಯಾರೇ ಇತರ ವ್ಯಕ್ತಿಯಿಂದ ಮಾಹಿತಿಯು ಬಂದಾಗ ಅಥವಾ ಅಂಥ ಅಪರಾಧವನ್ನು ಮಾಡಲಾಗಿದೆಯೆಂಬ ಅವನ ಸ್ವಂತ ತಿಳುವಳಿಕೆಯ ಮೇಲೆ

- ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(2) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು, ವಿಚಾರಣೆ ಮಾಡಲು ಅಥವಾ ಅಧಿವಿಚಾರಣೆ ಮಾಡಲು ತಾನು ಸಕ್ಷಮನಾಗಿರುವಂಥ ಯಾರೇ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನಿಗೆ ಅಂಥ ಅಪರಾಧಗಳನ್ನು (1)ನೇ ಉಪಪ್ರಕರಣದ ಮೇರೆಗೆ ಸಂಜ್ಞಾನಕ್ಕೆ ತೆಗೆದುಕೊಳ್ಳಲು ಅಧಿಕಾರ ನೀಡಬಹುದು.

**211. ಆಪಾದಿತನ ಅರ್ಜಿಯ ಮೇಲೆ ವರ್ಗಾವಣೆ.-** ಯಾರೇ ಮ್ಯಾಜಿಸ್ಟ್ರೇಟನು 210ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡಾಗ, ಯಾವುದೇ ಸಾಕ್ಷ್ಯವನ್ನು ತೆಗೆದುಕೊಳ್ಳುವ ಮುನ್ನ, ಇನ್ನೊಬ್ಬ ಮ್ಯಾಜಿಸ್ಟ್ರೇಟನಿಂದ ಮೊಕದ್ದಮೆಯ ವಿಚಾರಣೆ ಮಾಡಿಸಿಕೊಳ್ಳಲು ಅಥವಾ ಅಧಿವಿಚಾರಣೆ ಮಾಡಿಸಿಕೊಳ್ಳಲು ಆಪಾದಿತನಿಗೆ ಹಕ್ಕಿದೆಯೆಂದು ಅವನಿಗೆ ತಿಳಿಸತಕ್ಕದ್ದು ಮತ್ತು ಆಪಾದಿತನು ಅಥವಾ ಒಬ್ಬರಿಗಿಂತ ಹೆಚ್ಚು ಆಪಾದಿತರಿದ್ದರೆ, ಅವರಲ್ಲಿ ಯಾರಾದರೂ, ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನ ಮುಂದೆ ಮುಂದಿನ ವ್ಯವಹರಣೆಗಳ ಬಗ್ಗೆ ಆಕ್ಷೇಪಿಸಿದರೆ, ಈ ಬಗ್ಗೆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ನಿರ್ದಿಷ್ಟಪಡಿಸಬಹುದಾದಂಥ ಇತರ ಮ್ಯಾಜಿಸ್ಟ್ರೇಟನಿಗೆ ಮೊಕದ್ದಮೆಯನ್ನು ವರ್ಗಾಯಿಸತಕ್ಕದ್ದು.

**212. ಮ್ಯಾಜಿಸ್ಟ್ರೇಟರಿಗೆ ಮೊಕದ್ದಮೆಗಳನ್ನು ವಹಿಸಿಕೊಡುವುದು.-** (1) ಯಾರೇ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು, ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡ ತರುವಾಯ, ತನಗೆ ಅಧೀನನಾಗಿರುವ ಯಾರೇ ಸಕ್ಷಮ ಮ್ಯಾಜಿಸ್ಟ್ರೇಟನಿಗೆ ಮೊಕದ್ದಮೆಯನ್ನು ವಿಚಾರಣೆಗಾಗಿ ಅಥವಾ ಅಧಿವಿಚಾರಣೆಗಾಗಿ ವಹಿಸಿಕೊಡಬಹುದು.

(2) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಂದ ಈ ಬಗ್ಗೆ ಅಧಿಕಾರ ಪಡೆದಿರುವ ಯಾರೇ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು, ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡ ತರುವಾಯ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸಕ್ಷಮ ಮ್ಯಾಜಿಸ್ಟ್ರೇಟನಿಗೆ ಮೊಕದ್ದಮೆಯನ್ನು ವಿಚಾರಣೆಗಾಗಿ ಅಥವಾ ಅಧಿವಿಚಾರಣೆಗಾಗಿ ವಹಿಸಿಕೊಡಬಹುದು ಮತ್ತು ಆ ಬಳಿಕ ಅಂಥ ಮ್ಯಾಜಿಸ್ಟ್ರೇಟನು ವಿಚಾರಣೆ ಮಾಡಬಹುದು ಅಥವಾ ಅಧಿವಿಚಾರಣೆಯನ್ನು ಮಾಡಬಹುದು.

**213. ಸೆಷನ್ ನ್ಯಾಯಾಲಯದಿಂದ ಅಪರಾಧಗಳ ಸಂಜ್ಞೇಯತೆ.-** ಈ ಸಂಹಿತೆಯ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, ಯಾವುದೇ ಸೆಷನ್ ನ್ಯಾಯಾಲಯವು, ಈ ಸಂಹಿತೆಯ ಮೇರೆಗೆ, ಮ್ಯಾಜಿಸ್ಟ್ರೇಟನು ಸೆಷನ್ ನ್ಯಾಯಾಲಯಕ್ಕೆ ಆ ಮೊಕದ್ದಮೆಯನ್ನು ಒಪ್ಪಿಸಿದ್ದ ಹೊರತು, ಮೂಲ ಅಧಿಕಾರವಾಪ್ತಿಯುಳ್ಳ ನ್ಯಾಯಾಲಯದಂತೆ ಯಾವುದೇ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**214. ಅಪರ ಸೆಷನ್ಸ್ ನ್ಯಾಯಾಧೀಶರು ತಮಗೆ ವಹಿಸಿದ ಮೊಕದ್ದಮೆಗಳ ಅಧಿವಿಚಾರಣೆ ಮಾಡುವುದು.-** ಅಪರ ಸೆಷನ್ಸ್ ನ್ಯಾಯಾಧೀಶನು, ವಿಭಾಗ ಸೆಷನ್ಸ್ ನ್ಯಾಯಾಧೀಶನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿವಿಚಾರಣೆಗಾಗಿ ತನಗೆ ವಹಿಸಿಕೊಟ್ಟ ಅಥವಾ ಉಚ್ಚ ನ್ಯಾಯಾಲಯವು ವಿಶೇಷ ಆದೇಶದ ಮೂಲಕ ಅಧಿವಿಚಾರಣೆ ಮಾಡಲು ತನಗೆ ನಿರ್ದೇಶಿಸಬಹುದಾದ ಮೊಕದ್ದಮೆಗಳ ಅಧಿವಿಚಾರಣೆ ಮಾಡತಕ್ಕದ್ದು.

**215. ಲೋಕ ನೌಕರರ ಕಾನೂನುಬದ್ಧ ಪ್ರಾಧಿಕಾರದ ನಿಂದನೆಗಾಗಿ, ಸಾರ್ವಜನಿಕ ನ್ಯಾಯಕ್ಕೆ ವಿರುದ್ಧವಾದ ಅಪರಾಧಗಳಿಗಾಗಿ ಮತ್ತು ಸಾಕ್ಷ್ಯವಾಗಿ ನೀಡಿದ ದಸ್ತಾವೇಜುಗಳಿಗೆ ಸಂಬಂಧಿಸಿದ ಅಪರಾಧಗಳಿಗಾಗಿ ಪ್ರಾಸಿಕ್ಯೂಷನ್.-** (1) ಯಾವುದೇ ನ್ಯಾಯಾಲಯವು,-

(ಎ) (i) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 206 ರಿಂದ 223 ರವರೆಗಿನ (ಎರಡೂ ಪ್ರಕರಣಗಳು ಸೇರಿದಂತೆ ಆದರೆ 209ನೇ ಪ್ರಕರಣವನ್ನು ಹೊರತುಪಡಿಸಿ) ಪ್ರಕರಣಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು; ಅಥವಾ

(ii) ಅಂಥ ಅಪರಾಧವನ್ನು ಮಾಡಲು ದುಷ್ಪ್ರೇರಣೆ ಮಾಡುವ ಅಥವಾ ಅಂಥ ಅಪರಾಧವನ್ನು ಮಾಡುವ ಪ್ರಯತ್ನವನ್ನು; ಅಥವಾ

(iii) ಅಂಥ ಅಪರಾಧವನ್ನು ಮಾಡುವ ಬಗೆಗಿನ ಯಾವುದೇ ಆಪರಾಧಿಕ ಒಳಸಂಚಿನ ಬಗ್ಗೆ

- ಸಂಬಂಧಪಟ್ಟ ಲೋಕ ನೌಕರನು ಅಥವಾ ಯಾವ ಇತರ ಲೋಕ ನೌಕರನಿಗೆ ಅವನು ಆಡಳಿತಾತ್ಮಕವಾಗಿ ಅಧೀನನಾಗಿರುವನೋ ಆ ಇತರ ಯಾರೇ ಲೋಕ ನೌಕರನು ಅಥವಾ ಸಂಬಂಧಪಟ್ಟ ಲೋಕ ನೌಕರನಿಂದ ಹಾಗೆ ಮಾಡಲು ಅಧಿಕೃತಗೊಂಡ ಯಾರೇ ಇತರ ಲೋಕ ನೌಕರನು ಲಿಖಿತದಲ್ಲಿ ದೂರು ಕೊಟ್ಟಿದ್ದ ಹೊರತು;

(ಬಿ) (i) ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿದಾಗ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 229 ರಿಂದ 233ರ ವರೆಗಿನ ಪ್ರಕರಣಗಳು (ಎರಡೂ ಪ್ರಕರಣಗಳು ಸೇರಿದಂತೆ), 236, 237, 242 ರಿಂದ 248ರ ವರೆಗಿನ ಪ್ರಕರಣಗಳು (ಎರಡೂ ಪ್ರಕರಣಗಳು ಸೇರಿದಂತೆ) ಮತ್ತು 267ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧವನ್ನು; ಅಥವಾ

(ii) ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸಿದ ಅಥವಾ ನೀಡಿದ ದಸ್ತಾವೇಜಿನ ಬಗ್ಗೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿದಾಗ, ಸದರಿ ಸಂಹಿತೆಯ 336ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ವಿವರಿಸಿರುವ ಅಥವಾ 340ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ 342ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು; ಅಥವಾ

(iii) ಉಪಖಂಡ (i)ರಲ್ಲಿ ಅಥವಾ ಉಪಖಂಡ (ii)ರಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅಪರಾಧವನ್ನು ಮಾಡುವ ಬಗ್ಗೆ ಯಾವುದೇ ಆಪರಾಧಿಕ ಒಳಸಂಚನ್ನು ಅಥವಾ ಮಾಡುವ ಪ್ರಯತ್ನವನ್ನು ಅಥವಾ ದುಷ್ಪ್ರೇರಣೆಯನ್ನು

- ಆ ನ್ಯಾಯಾಲಯವು ಅಥವಾ ಆ ನ್ಯಾಯಾಲಯವು ಈ ಬಗ್ಗೆ ಲಿಖಿತದಲ್ಲಿ ಯಾವ ಅಧಿಕಾರಿಗೆ ಅಧಿಕಾರ ಕೊಟ್ಟಿದೆಯೋ ಆ ನ್ಯಾಯಾಲಯದ ಅಧಿಕಾರಿಯು ಅಥವಾ ಆ ನ್ಯಾಯಾಲಯವು ಯಾವ ನ್ಯಾಯಾಲಯಕ್ಕೆ ಅಧೀನವಾಗಿರುವುದೋ ಆ ಇತರ ನ್ಯಾಯಾಲಯವು ಲಿಖಿತದಲ್ಲಿ ದೂರನ್ನು ಸಲ್ಲಿಸಿದ್ದ ಹೊರತು

- ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಒಬ್ಬ ಲೋಕ ನೌಕರನು ದೂರನ್ನು ಸಲ್ಲಿಸಿದ ಅಥವಾ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಅವನು ದೂರು ಸಲ್ಲಿಸಲು ಅಧಿಕೃತಗೊಳಿಸಿದ ಇತರ ಯಾರೇ ಲೋಕ ನೌಕರನು ದೂರನ್ನು ಸಲ್ಲಿಸಿದ್ದಲ್ಲಿ, ಯಾರಿಗೆ ಅವನು ಆಡಳಿತಾತ್ಮಕವಾಗಿ ಅಧೀನನಾಗಿರುವನೋ ಆ ಯಾರೇ ಪ್ರಾಧಿಕಾರಿಯು ಅಥವಾ ಅಂಥ ಲೋಕ ನೌಕರನನ್ನು ಅಧಿಕೃತಗೊಳಿಸಿದ ಯಾರೇ ಪ್ರಾಧಿಕಾರಿಯು ದೂರನ್ನು ವಾಪಸು ಪಡೆಯಲು ಆದೇಶ ಮಾಡಬಹುದು ಮತ್ತು ಅಂಥ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಕಳುಹಿಸಬಹುದು ಮತ್ತು ನ್ಯಾಯಾಲಯವು ಅಂಥ ಆದೇಶದ ಪ್ರತಿಯನ್ನು ಸ್ವೀಕರಿಸಿದ ಆನಂತರ ಆ ದೂರಿನ ಮೇಲೆ ಯಾವ ಮುಂದಿನ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ:

ಪರಂತು, ಮೊದಲಿನ ನ್ಯಾಯಾಲಯದಲ್ಲಿ ಅಧಿವಿಚಾರಣೆಯು ಮುಗಿದಿದ್ದರೆ, ಹಾಗೆ ವಾಪಸು ಪಡೆಯಲು ಆದೇಶ ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ನ್ಯಾಯಾಲಯ" ಎಂದರೆ, ಸಿವಿಲ್, ರೆವಿನ್ಯೂ ಅಥವಾ ಕ್ರಿಮಿನಲ್ ನ್ಯಾಯಾಲಯ ಮತ್ತು ಕೇಂದ್ರ ಅಥವಾ ರಾಜ್ಯ ಅಧಿನಿಯಮದ ಮೇರೆಗೆ ಅಥವಾ ಅದರ ಮೂಲಕ ರಚಿತವಾದ ನ್ಯಾಯಾಧಿಕರಣವನ್ನು, ಈ ಪ್ರಕರಣದ ಉದ್ದೇಶಗಳಿಗಾಗಿ, ಆ ಅಧಿನಿಯಮದ ಮೂಲಕ ನ್ಯಾಯಾಲಯವೆಂದು ಘೋಷಿತವಾಗಿದ್ದರೆ ಆ ನ್ಯಾಯಾಧಿಕರಣವನ್ನು ಒಳಗೊಳ್ಳುತ್ತದೆ.

(4) (1)ನೇ ಉಪಪ್ರಕರಣದ (ಬಿ) ಖಂಡದ ಉದ್ದೇಶಗಳಿಗಾಗಿ, ಯಾವುದೇ ನ್ಯಾಯಾಲಯವನ್ನು, ಆ ನ್ಯಾಯಾಲಯದ ಡಿಕ್ರಿಗಳ ಅಥವಾ ಶಿಕ್ಷೆಯ ಆದೇಶಗಳ ಬಗ್ಗೆ ಅಪೀಲು ಯಾವ ನ್ಯಾಯಾಲಯಕ್ಕೆ ಸಾಮಾನ್ಯವಾಗಿ ಅಪೀಲುಗಳನ್ನು ಸಲ್ಲಿಸಬಹುದೋ, ಆ ಅಪೀಲು ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು ಅಥವಾ ಯಾವ ಸಿವಿಲ್ ನ್ಯಾಯಾಲಯದ ಡಿಕ್ರಿಗಳ ಬಗ್ಗೆ ಸಾಮಾನ್ಯವಾಗಿ ಯಾವುದೇ ಅಪೀಲು ಸಲ್ಲಿಸಲು ಅವಕಾಶ ಇರುವುದಿಲ್ಲವೋ ಆ ಸಿವಿಲ್ ನ್ಯಾಯಾಲಯವು ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಇರುವುದೋ, ಆ ಪ್ರಧಾನ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು:

ಪರಂತು,-

(ಎ) ಒಂದಕ್ಕಿಂತ ಹೆಚ್ಚು ಅಪೀಲು ನ್ಯಾಯಾಲಯಗಳಿಗೆ ಅಪೀಲು ಸಲ್ಲಿಸಲು ಅವಕಾಶ ಇದ್ದರೆ, ಕಡಿಮೆ ಅಧಿಕಾರವ್ಯಾಪ್ತಿಯುಳ್ಳ ಅಪೀಲು ನ್ಯಾಯಾಲಯಕ್ಕೆ ಅಂಥ ನ್ಯಾಯಾಲಯವು ಅಧೀನವಾಗಿರುವುದೆಂದು ಭಾವಿಸತಕ್ಕದ್ದು;

(ಬಿ) ಸಿವಿಲ್ ನ್ಯಾಯಾಲಯಕ್ಕೆ ಮತ್ತು ರೆವಿನ್ಯೂ ನ್ಯಾಯಾಲಯಕ್ಕೂ ಅಪೀಲು ಸಲ್ಲಿಸಲು ಅವಕಾಶ ಇದ್ದರೆ, ಯಾವುದಕ್ಕೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಲಾಗಿದೆಯೋ ಆ ಮೊಕದ್ದಮೆಯ ಅಥವಾ ವ್ಯವಹರಣೆಯ ಸ್ವರೂಪಕ್ಕೆ ಅನುಸಾರವಾಗಿ ಅಂಥ ನ್ಯಾಯಾಲಯವು ಸಿವಿಲ್ ಅಥವಾ ರೆವಿನ್ಯೂ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು.

**216. ಬೆದರಿಕೆ, ಇತ್ಯಾದಿಗಳ ಸಂದರ್ಭಗಳಲ್ಲಿ, ಸಾಕ್ಷಿದಾರರಿಗೆ ಸಂಬಂಧಿಸಿದ ಪ್ರಕ್ರಿಯೆ.-** ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 232ನೇ ಪ್ರಕರಣದ ಮೇರೆಗಿನ ಅಪರಾಧಕ್ಕೆ ಸಂಬಂಧಿಸಿದಂತೆ ಸಾಕ್ಷಿದಾರನು ಅಥವಾ ಇತರ ಯಾರೇ ವ್ಯಕ್ತಿಯು ದೂರನ್ನು ಸಲ್ಲಿಸಬಹುದು.

**217. ರಾಜ್ಯದ ವಿರುದ್ಧ ಅಪರಾಧಗಳಿಗಾಗಿ ಮತ್ತು ಅಂಥ ಅಪರಾಧವನ್ನು ಮಾಡುವ ಆಪರಾಧಿಕ ಒಳಸಂಚಿಗಾಗಿ ಪ್ರಾಸಿಕ್ಯೂಷನ್.-** (1) ಯಾವುದೇ ನ್ಯಾಯಾಲಯವು,-

(ಎ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ VIIನೇ ಅಧ್ಯಾಯ ಅಥವಾ 196ನೇ ಪ್ರಕರಣ, 299ನೇ ಪ್ರಕರಣ ಅಥವಾ 353ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು; ಅಥವಾ

(ಬಿ) ಅಂಥ ಅಪರಾಧವನ್ನು ಮಾಡುವ ಆಪರಾಧಿಕ ಒಳಸಂಚನ್ನು; ಅಥವಾ

(ಸಿ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 47ನೇ ಪ್ರಕರಣದಲ್ಲಿ ವಿವರಿಸಿರುವಂಥ ಯಾವುದೇ ಅಂಥ ದುಷ್ಪ್ರೇರಣೆಯನ್ನು

- ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಪೂರ್ವ ಮಂಜೂರಾತಿ ಪಡೆದಿದ್ದ ಹೊರತು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯವು,-

(ಎ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 197ನೇ ಪ್ರಕರಣ ಅಥವಾ 353ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು; ಅಥವಾ

(ಬಿ)ಅಂಥ ಅಪರಾಧವನ್ನು ಮಾಡುವುದಕ್ಕೆ ಆಪರಾಧಿಕ ಒಳಸಂಚನ್ನು

- ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ಮರಣದಂಡನೆ, ಆಜೀವ ಕಾರಾವಾಸ ಅಥವಾ ಎರಡು ವರ್ಷಗಳ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡುವ ಆಪರಾಧಿಕ ಒಳಸಂಚನ್ನು ಹೊರತುಪಡಿಸಿ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 61ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಆಪರಾಧಿಕ ಒಳಸಂಚಿನ ಅಪರಾಧವನ್ನು, ಆ ವ್ಯವಹರಣೆಗಳನ್ನು ಪ್ರಾರಂಭಿಸಲು, ರಾಜ್ಯ ಸರ್ಕಾರದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನ ಲಿಖಿತ ಒಪ್ಪಿಗೆ ಇದ್ದ ಹೊರತು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಅದು 215ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವ ಆಪರಾಧಿಕ ಒಳಸಂಚಾಗಿದ್ದರೆ, ಅಂಥ ಯಾವುದೇ ಒಪ್ಪಿಗೆಯು ಅವಶ್ಯಕವಾಗಿರತಕ್ಕದ್ದಲ್ಲ.

(4) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮಂಜೂರಾತಿ ನೀಡುವುದಕ್ಕೂ ಮುಂಚೆ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟನು, (2)ನೇ ಉಪಪ್ರಕರಣದ ಮೇರೆಗೆ ಮಂಜೂರಾತಿ ನೀಡುವುದಕ್ಕೂ ಮುಂಚೆ ಮತ್ತು ರಾಜ್ಯ ಸರ್ಕಾರವು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು (3)ನೇ ಉಪಪ್ರಕರಣದ

ಮೇರೆಗೆ ಒಪ್ಪಿಗೆ ಕೊಡುವುದಕ್ಕೂ ಮುಂಚೆ, ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆ ಅಲ್ಲದ ಪೊಲೀಸ್ ಅಧಿಕಾರಿಯಿಂದ ಪ್ರಾರಂಭಿಕ ತನಿಖೆಗೆ ಆದೇಶ ನೀಡಬಹುದು; ಆ ಸಂದರ್ಭದಲ್ಲಿ ಅಂಥ ಪೊಲೀಸ್ ಅಧಿಕಾರಿಯು, 174ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

**218. ನ್ಯಾಯಾಧೀಶರ ಮತ್ತು ಲೋಕ ನೌಕರರ ಮೇಲೆ ಪ್ರಾಸಿಕ್ಯೂಷನ್.-** (1) ಸರ್ಕಾರದ ಮಂಜೂರಾತಿಯ ಮೂಲಕವಲ್ಲದೆ ಅಥವಾ ಮಂಜೂರಾತಿ ಪಡೆದಲ್ಲದೆ ಯಾರನ್ನು ಅವನ ಹುದ್ದೆಯಿಂದ ತೆಗೆದುಹಾಕಲಾಗುವುದಿಲ್ಲವೋ ಆ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟ್ ಅಥವಾ ಲೋಕ ನೌಕರನಾಗಿರುವ ಅಥವಾ ಆಗಿದ್ದ ಯಾರೇ ವ್ಯಕ್ತಿಯು, ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವಾಗ ಅವನು ಮಾಡಿದ್ದಾನೆಂದು ಆರೋಪಿಸಿರುವ ಯಾವುದೇ ಅಪರಾಧದ ಆಪಾದಿತನಾದಾಗ, ಲೋಕಪಾಲ ಮತ್ತು ಲೋಕಾಯುಕ್ತ ಅಧಿನಿಯಮ, 2013 (2014 ರ 1) ರಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು,-

(ಎ) ವ್ಯಕ್ತಿಯು ಒಕ್ಕೂಟದ ವ್ಯವಹಾರಗಳಿಗೆ ಸಂಬಂಧಿಸಿದಂತೆ, ಸಂದರ್ಭಾನುಸಾರ, ನಿಯೋಜಿತನಾಗಿದ್ದರೆ ಅಥವಾ ಆರೋಪಿತವಾದ ಅಪರಾಧವನ್ನು ಮಾಡುವ ಸಮಯದಲ್ಲಿ ನಿಯೋಜಿತನಾಗಿದ್ದರೆ, ಕೇಂದ್ರ ಸರ್ಕಾರದಿಂದ;

(ಬಿ) ವ್ಯಕ್ತಿಯು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ, ಸಂದರ್ಭಾನುಸಾರ, ನಿಯೋಜಿತನಾಗಿದ್ದರೆ ಅಥವಾ ಆರೋಪಿತವಾದ ಅಪರಾಧವನ್ನು ಮಾಡುವ ಸಮಯದಲ್ಲಿ ನಿಯೋಜಿತನಾಗಿದ್ದರೆ, ರಾಜ್ಯ ಸರ್ಕಾರದಿಂದ ಮುಂಚಿತವಾಗಿಯೇ ಮಂಜೂರಾತಿ ಪಡೆದಿದ್ದ ಹೊರತು

- ಯಾವುದೇ ನ್ಯಾಯಾಲಯವು ಅಂಥ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಸಂವಿಧಾನದ 356ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಹೊರಡಿಸಿರುವ ಉದ್ಘೋಷಣೆಯು ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಅವಧಿಯಲ್ಲಿ, (ಬಿ) ಖಂಡದಲ್ಲಿ ಹೇಳಿರುವ ಆಪಾದಿಸಲಾಗಿರುವ ಅಪರಾಧವನ್ನು ವ್ಯಕ್ತಿಯು ಮಾಡಿದ್ದರೆ, ಆಗ, (ಬಿ) ಖಂಡದಲ್ಲಿ ಉಲ್ಲೇಖಿಸಿರುವ "ರಾಜ್ಯ ಸರ್ಕಾರ" ಎಂಬ ಪದಾವಳಿಯ ಬದಲಿಗೆ, "ಕೇಂದ್ರ ಸರ್ಕಾರ" ಎಂಬ ಪದಾವಳಿಯನ್ನು ಪ್ರತ್ಯಾಯೋಜಿಸಿದ್ದರೆ ಹೇಗೆ ಅನ್ವಯವಾಗುತ್ತಿತ್ತೋ ಹಾಗೆ ಅನ್ವಯವಾಗತಕ್ಕದ್ದು:

ಮತ್ತು ಪರಂತು, ಅಂಥ ಸರ್ಕಾರವು, ಮಂಜೂರಾತಿಗಾಗಿನ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ನೂರಾ ಇಪ್ಪತ್ತು ದಿನಗಳ ಅವಧಿಯೊಳಗೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಅದು ಹಾಗೆ ಮಾಡಲು ತಪ್ಪಿದ ಸಂದರ್ಭದಲ್ಲಿ ಆ ಮಂಜೂರಾತಿಯನ್ನು ಆ ಸರ್ಕಾರವು ನೀಡಿದೆಯೆಂದು ಭಾವಿಸತಕ್ಕದ್ದು:

ಮತ್ತೂ ಪರಂತು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ, 71ನೇ ಪ್ರಕರಣ, 74ನೇ ಪ್ರಕರಣ, 75ನೇ ಪ್ರಕರಣ, 76ನೇ ಪ್ರಕರಣ, 77ನೇ ಪ್ರಕರಣ, 78ನೇ ಪ್ರಕರಣ, 79ನೇ ಪ್ರಕರಣ, 143ನೇ ಪ್ರಕರಣ, 199ನೇ ಪ್ರಕರಣ ಅಥವಾ 200ನೇ ಪ್ರಕರಣದ ಮೇರೆಗೆ ಎಸಗಲಾಗಿದೆಯೆಂದು ಆಪಾದಿಸಲಾದ ಯಾವುದೇ ಅಪರಾಧದ ಆರೋಪಿಯಾದ ಲೋಕ ನೌಕರನ ಸಂದರ್ಭದಲ್ಲಿ ಯಾವುದೇ ಮಂಜೂರಾತಿಯ ಅಗತ್ಯವಿರತಕ್ಕದ್ದಲ್ಲ.

(2) ಒಕ್ಕೂಟದ ಸಶಸ್ತ್ರಬಲದ ಯಾರೇ ಸದಸ್ಯನು ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವಾಗ ಮಾಡಿದ್ದಾನೆಂದು ಆರೋಪಿತವಾದ ಯಾವುದೇ ಅಪರಾಧವನ್ನು,

ಕೇಂದ್ರ ಸರ್ಕಾರದಿಂದ ಪೂರ್ವ ಮಂಜೂರಾತಿ ಪಡೆದಿದ್ದ ಹೊರತು, ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವ ಹೊಣೆಯನ್ನು ಸಶಸ್ತ್ರ ಪಡೆಗಳ ಸದಸ್ಯರ ವರ್ಗಕ್ಕೆ ಅಥವಾ ವಿಭಾಗಗಳಿಗೆ ವಹಿಸಲಾಗಿದ್ದರೆ, ಅವರು ಎಲ್ಲೇ ಸೇವೆ ಸಲ್ಲಿಸುತ್ತಿದ್ದರೂ, (2)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆನಂತರ ಆ ಉಪಪ್ರಕರಣದ ಉಪಬಂಧಗಳು, ಅದರಲ್ಲಿ ಬರುವ "ಕೇಂದ್ರ ಸರ್ಕಾರ" ಎಂಬ ಪದಾವಳಿಗೆ ಬದಲಾಗಿ, "ರಾಜ್ಯ ಸರ್ಕಾರ" ಎಂಬ ಪದಾವಳಿಯು ಪ್ರತ್ಯಾಯೋಜಿಸಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆಯೇ ಅನ್ವಯವಾಗತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಭಾರತದ ಸಂವಿಧಾನದ 356ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಹೊರಡಿಸಿದ ಉದ್ಘೋಷಣೆಯು ಜಾರಿಯಲ್ಲಿರುವಾಗ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಹೊಣೆಯನ್ನು ಕೇಂದ್ರದ ಸಶಸ್ತ್ರಪಡೆಯ ಯಾರೇ ಸದಸ್ಯನಿಗೆ ವಹಿಸಿದ್ದಾಗ, ಅವನು, ತನ್ನ ಪದೀಯ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವೆನೆಂದು ತಾತ್ಪರ್ಯವಾಗುವಾಗ, ಮಾಡಿದ್ದಾನೆಂದು ಆಪಾದಿಸಲಾಗಿರುವ ಅಪರಾಧವನ್ನು ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆಯೇ ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(5) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಅಂಥ ನ್ಯಾಯಾಧೀಶನ, ಮ್ಯಾಜಿಸ್ಟ್ರೇಟ್‌ನ ಅಥವಾ ಲೋಕ ನೌಕರನ ಬಗ್ಗೆ ಪ್ರಾಸಿಕ್ಯೂಷನನ್ನು ಯಾರಿಂದ, ಯಾವ ರೀತಿಯಲ್ಲಿ ಮತ್ತು ಯಾವ ಅಪರಾಧಕ್ಕಾಗಿ ಅಥವಾ ಅಪರಾಧಗಳಿಗಾಗಿ ನಡೆಸತಕ್ಕದ್ದು ಎಂದು ನಿರ್ಧರಿಸಬಹುದು ಮತ್ತು ಯಾವ ನ್ಯಾಯಾಲಯದ ಮುಂದೆ ಅಧಿವಿಚಾರಣೆಯು ನಡೆಯಬೇಕೆಂಬುದನ್ನು ನಿರ್ದಿಷ್ಟಪಡಿಸಬಹುದು.

**219. ವಿವಾಹಕ್ಕೆ ಸಂಬಂಧಿಸಿದ ಅಪರಾಧಗಳಿಗಾಗಿ ಪ್ರಾಸಿಕ್ಯೂಷನ್.-** (1) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 81 ರಿಂದ 84ನೇ ವರೆಗಿನ (ಎರಡೂ ಪ್ರಕರಣಗಳು ಸೇರಿದಂತೆ) ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧದಿಂದ ಬಾಧಿತನಾದ ವ್ಯಕ್ತಿಯು ದೂರನ್ನು ಸಲ್ಲಿಸಿದ್ದ ಹೊರತು ದಂಡನೀಯವಾದ ಆ ಅಪರಾಧವನ್ನು, ಯಾವುದೇ ನ್ಯಾಯಾಲಯವು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು,-

(ಎ) ಅಂಥ ವ್ಯಕ್ತಿಯು, ಮಗುವಾಗಿದ್ದರೆ ಅಥವಾ ಮಾನಸಿಕ ಅಸ್ವಸ್ಥನಾಗಿದ್ದರೆ ಅಥವಾ ಹೆಚ್ಚಿನ ನೆರವಿನ ಅಗತ್ಯವಿರುವ ಬೌದ್ಧಿಕ ವಿಕಲತೆವುಳ್ಳವನಾಗಿದ್ದರೆ ಅಥವಾ ಕಾಯಿಲೆ ಅಥವಾ ದೌರ್ಬಲ್ಯದಿಂದ ದೂರನ್ನು ನೀಡಲು ಅಶಕ್ತನಾಗಿದ್ದರೆ ಅಥವಾ ಸ್ಥಳೀಯ ರೂಢಿ ಹಾಗೂ ನಡವಳಿಕೆಗಳಿಗನುಸಾರವಾಗಿ ಬಹಿರಂಗವಾಗಿ ಕಾಣಿಸಿಕೊಳ್ಳಲು ಒತ್ತಾಯಪಡಿಸಬಾರದ ಮಹಿಳೆಯಾಗಿದ್ದರೆ, ಅವನ ಅಥವಾ ಅವಳ ಪರವಾಗಿ ಇತರ ಯಾರೇ ವ್ಯಕ್ತಿಯು, ನ್ಯಾಯಾಲಯದ ಅನುಮತಿ ಪಡೆದು ದೂರನ್ನು ಸಲ್ಲಿಸಬಹುದು;

(ಬಿ) ಅಂಥ ವ್ಯಕ್ತಿಯು ಪತಿಯಾಗಿದ್ದು, ಒಕ್ಕೂಟದ ಯಾವುದೇ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವನೇ ಖುದ್ದಾಗಿ ದೂರು ಸಲ್ಲಿಸುವುದಕ್ಕಾಗಿ ಗೈರುಹಾಜರಿಯ ಅನುಮತಿಯನ್ನು ಪಡೆಯಲು ಸಾಧ್ಯವಾಗದಂಥ

ಪರಿಸ್ಥಿತಿಗಳಿದ್ದವೆಂದು, ಅವನ ಕಮಾಂಡಿಂಗ್ ಆಫೀಸರ್‌ರವರು ಪ್ರಮಾಣೀಕರಿಸಿದರೆ, (4)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ, ಅಂಥ ಪತಿಯಿಂದ ಅಧಿಕಾರ ಪಡೆದಿರುವ ಇನ್ನೊಬ್ಬ ವ್ಯಕ್ತಿಯು ಅವನ ಪರವಾಗಿ ದೂರನ್ನು ಸಲ್ಲಿಸಬಹುದು;

(ಸಿ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 82ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದಿಂದ ಬಾಧಿತ ವ್ಯಕ್ತಿಯು ಪತ್ನಿಯಾಗಿದ್ದರೆ, ಅವಳ ಪರವಾಗಿ ಆಕೆಯ ತಂದೆ, ತಾಯಿ, ಸೋದರ, ಸೋದರಿ, ಪುತ್ರ ಅಥವಾ ಪುತ್ರಿ ಅಥವಾ ಆಕೆಯ ತಂದೆಯ ಅಥವಾ ತಾಯಿಯ ಸೋದರ ಅಥವಾ ಸೋದರಿಯು ಅಥವಾ ನ್ಯಾಯಾಲಯದಿಂದ ಅನುಮತಿ ಪಡೆದು ರಕ್ತಸಂಬಂಧದಿಂದಾಗಿ, ವಿವಾಹದಿಂದಾಗಿ ಅಥವಾ ದತ್ತಕದಿಂದಾಗಿ ಅವಳ ಸಂಬಂಧಿಕನಾದ ಯಾರೇ ಇತರ ವ್ಯಕ್ತಿಯು ದೂರನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಆ ಮಹಿಳೆಯ ಪತಿಯಲ್ಲದ ಇತರ ಯಾರೇ ವ್ಯಕ್ತಿಯು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 84ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದಿಂದ ಬಾಧಿತನಾಗಿದ್ದಾನೆಂದು ಭಾವಿಸತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಪರಂತುಕದ (ಎ) ಖಂಡದಲ್ಲಿ ಬರುವ ಯಾವುದೇ ಸಂದರ್ಭದಲ್ಲಿ, ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಯ ಪರವಾಗಿ ಅಥವಾ ಅಪ್ರಾಪ್ತ ವಯಸ್ಕನ ಅಥವಾ ಮಾನಸಿಕ ಅಸ್ವಸ್ಥ ವ್ಯಕ್ತಿಯ ದೈಹಿಕ ಪೋಷಕನೆಂದು ಸಕ್ಷಮ ಪ್ರಾಧಿಕಾರಿಯಿಂದ ನೇಮಕವಾಗಿರದ ಅಥವಾ ಘೋಷಿತನಾಗಿರದ ವ್ಯಕ್ತಿಯು ಮಾನಸಿಕ ಅಸ್ವಸ್ಥ ವ್ಯಕ್ತಿಯ ಪರವಾಗಿ, ದೂರನ್ನು ಸಲ್ಲಿಸಲು ಉದ್ಯುಕ್ತನಾದರೆ ಮತ್ತು ಹಾಗೆ ನೇಮಕವಾದ ಅಥವಾ ಘೋಷಿತನಾದ ಪೋಷಕನಿರುವನೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಅನುಮತಿಗಾಗಿ ಅರ್ಜಿಯನ್ನು ಮಂಜೂರು ಮಾಡುವುದಕ್ಕೆ ಮುಂಚೆ ಅಂಥ ಪೋಷಕನಿಗೆ ನೋಟೀಸು ನೀಡತಕ್ಕದ್ದು ಮತ್ತು ಅಹವಾಲು ಹೇಳಿಕೊಳ್ಳಲು ಅವನಿಗೆ ಯುಕ್ತವಾದ ಅವಕಾಶವನ್ನು ಕೊಡತಕ್ಕದ್ದು.

(4) (1)ನೇ ಉಪಪ್ರಕರಣದ ಪರಂತುಕದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಅಧಿಕಾರ ನೀಡಿಕೆಯು ಲಿಖಿತದಲ್ಲಿರತಕ್ಕದ್ದು, ಅದಕ್ಕೆ ಪತಿಯು ಸಹಿ ಹಾಕಿರತಕ್ಕದ್ದು ಅಥವಾ ಅನ್ಯಥಾ ದೃಢೀಕರಿಸಿರತಕ್ಕದ್ದು, ಯಾವ ಆಪಾದನೆಗಳ ಆಧಾರದ ಮೇಲೆ ದೂರು ಸಲ್ಲಿಸಲಾಗುತ್ತಿದೆಯೋ ಆ ಆಪಾದನೆಗಳನ್ನು ತನಗೆ ತಿಳಿಸಲಾಗಿದೆ ಎಂಬ ಬಗೆಗಿನ ಒಂದು ಹೇಳಿಕೆಯನ್ನು ಒಳಗೊಂಡಿರತಕ್ಕದ್ದು, ಆ ಹೇಳಿಕೆಗೆ ಕಮಾಂಡಿಂಗ್ ಆಫೀಸರ್‌ರವರ ಮೇಲು ಸಹಿಯನ್ನು ಹಾಕಿರತಕ್ಕದ್ದು ಮತ್ತು ಖುದ್ದಾಗಿ ದೂರನ್ನು ಸಲ್ಲಿಸುವ ಉದ್ದೇಶಕ್ಕಾಗಿ, ಪತಿಗೆ ಗೈರುಹಾಜರಿಯ ರಜೆಯನ್ನು ತತ್ಕಾಲದಲ್ಲಿ ನೀಡಲು ಸಾಧ್ಯವಿಲ್ಲವೆಂಬ ಬಗ್ಗೆ ಆ ಅಧಿಕಾರಿಯು ಸಹಿ ಮಾಡಿದ ಒಂದು ಪ್ರಮಾಣಪತ್ರವು ಅದರೊಂದಿಗೆ ಇರತಕ್ಕದ್ದು.

(5) ಅದು ಅಂಥ ಅಧಿಕಾರ ಪತ್ರವೆಂದು ತಾತ್ಪರ್ಯವಾಗುವ ಮತ್ತು (4)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿರುವ ಯಾವುದೇ ದಸ್ತಾವೇಜು ಮತ್ತು ಆ ಉಪಪ್ರಕರಣದ ಮೇರೆಗೆ ಅಗತ್ಯವಾದ ಪ್ರಮಾಣಪತ್ರವೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜು, ತದ್ವಿರುದ್ಧವಾಗಿ ರುಜುವಾತಾದ ಹೊರತು, ನೈಜವಾದುದೆಂದು ಪೂರ್ವಭಾವನೆ ಮಾಡತಕ್ಕದ್ದು ಮತ್ತು ಅದನ್ನು ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದು.

(6) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣದ ಮೇರೆಗಿನ ಅಪರಾಧವು ವ್ಯಕ್ತಿಯು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾದ ತನ್ನ ಪತ್ನಿಯೊಂದಿಗೆ ಲೈಂಗಿಕ ಸಂಭೋಗ ಮಾಡಿದ್ದಕ್ಕೆ ಸಂಬಂಧಿಸಿದ್ದರೆ

ಆ ಅಪರಾಧವು ನಡೆದ ದಿನಾಂಕದಿಂದ ಒಂದು ವರ್ಷಕ್ಕಿಂತ ಹೆಚ್ಚು ಕಾಲವಾಗಿದ್ದರೆ, ಯಾವುದೇ ನ್ಯಾಯಾಲಯವು, ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(7) ಈ ಪ್ರಕರಣದ ಉಪಬಂಧಗಳು, ಅಪರಾಧಕ್ಕೆ ಅನ್ವಯವಾಗುವಂತೆಯೇ ಅಪರಾಧದ ದುಷ್ಪ್ರೇರಣೆಗೂ ಅಥವಾ ಅದನ್ನು ಮಾಡುವ ಪ್ರಯತ್ನಕ್ಕೂ ಅನ್ವಯವಾಗುತ್ತವೆ.

**220. ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 85ನೇ ಪ್ರಕರಣದ ಮೇರೆಗಿನ ಅಪರಾಧಗಳ ಮೇಲೆ ಪ್ರಾಸಿಕ್ಯೂಷನ್.-** ಯಾವುದೇ ನ್ಯಾಯಾಲಯವು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 85ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಯಾವ ಸಂಗತಿಗಳಿಂದಾಗಿ ಅದು ಅಂಥ ಅಪರಾಧವೆಂದಾಗುತ್ತದೆ, ಆ ಸಂಗತಿಗಳ ಪೊಲೀಸ್ ವರದಿ ಬಂದ ಮೇಲೆ ಅಥವಾ ಆ ಅಪರಾಧದಿಂದ ಬಾಧಿತನಾದ ವ್ಯಕ್ತಿಯು ಅಥವಾ ಅವಳ ತಂದೆ, ತಾಯಿ, ಸಹೋದರ, ಸಹೋದರಿ ಅಥವಾ ಅವಳ ತಂದೆಯ ಅಥವಾ ತಾಯಿಯ ಸಹೋದರ ಅಥವಾ ಸಹೋದರಿಯ ಅಥವಾ ನ್ಯಾಯಾಲಯದ ಅನುಮತಿ ಪಡೆದು, ರಕ್ತಸಂಬಂಧದಿಂದಾಗಿ, ವಿವಾಹದಿಂದಾಗಿ ಅಥವಾ ದತ್ತಕದಿಂದಾಗಿ ಅವಳ ಸಂಬಂಧಿಕನಾದ ಯಾರೇ ಇತರೆ ವ್ಯಕ್ತಿಯು ದೂರನ್ನು ಸಲ್ಲಿಸಿದ್ದ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**221. ಅಪರಾಧದ ಸಂಜ್ಞೇಯತೆ.-** ವೈವಾಹಿಕ ಸಂಬಂಧದಲ್ಲಿರುವ ವ್ಯಕ್ತಿಗಳು, ಪತ್ನಿಯು ತನ್ನ ಪತಿಯ ವಿರುದ್ಧ ದೂರು ಸಲ್ಲಿಸಿದಾಗ ಅದರಲ್ಲಿ ಹೇಳಿರುವ ಸಂಗತಿಗಳು, ಅಪರಾಧವಾಗುತ್ತವೆಂದು ಮೇಲ್ನೋಟಕ್ಕೆ ಮನವರಿಕೆಯಾದ ಹೊರತು, ಯಾವುದೇ ನ್ಯಾಯಾಲಯವು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 67ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**222. ಮಾನಹಾನಿಗಾಗಿ ಪ್ರಾಸಿಕ್ಯೂಷನ್.-** (1) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 356ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಆ ಅಪರಾಧದಿಂದ ಬಾಧಿತನಾದ ಬೇರೆ ಯಾರೇ ವ್ಯಕ್ತಿಯು ದೂರನ್ನು ಸಲ್ಲಿಸಿದ್ದ ಹೊರತು ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಅಂಥ ವ್ಯಕ್ತಿಯು ಮಗುವಾಗಿದ್ದರೆ ಅಥವಾ ಮಾನಸಿಕ ಅಸ್ವಸ್ಥನಾಗಿದ್ದರೆ ಅಥವಾ ಬೌದ್ಧಿಕ ವಿಕಲತೆಯುಳ್ಳವನಾಗಿದ್ದರೆ ಅಥವಾ ಕಾಯಿಲೆಯಿಂದಾಗಿ ಅಥವಾ ದೌರ್ಬಲ್ಯದಿಂದಾಗಿ ದೂರನ್ನು ಸಲ್ಲಿಸಲು ಅಶಕ್ತನಾಗಿದ್ದರೆ ಅಥವಾ ಮಹಿಳೆಯನ್ನು ಸ್ಥಳೀಯ ರೂಢಿಗಳಿಗೆ ಹಾಗೂ ನಡವಳಿಕೆಗಳಿಗನುಸಾರವಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಒತ್ತಾಯಪಡಿಸಲಾಗದಿದ್ದರೆ, ನ್ಯಾಯಾಲಯದ ಅನುಮತಿ ಪಡೆದು ಇತರ ಯಾರೇ ವ್ಯಕ್ತಿಯು ಅವನ ಅಥವಾ ಅವಳ ಪರವಾಗಿ ದೂರನ್ನು ಸಲ್ಲಿಸಬಹುದು.

(2) ಈ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ, ಯಾವ ವ್ಯಕ್ತಿಯ ಮೇಲೆ ಅಪರಾಧವನ್ನೆಸಗಲಾಗಿದೆಯೋ, ಆ ವ್ಯಕ್ತಿಯು, ಭಾರತದ ರಾಷ್ಟ್ರಪತಿ, ಭಾರತದ ಉಪ-ರಾಷ್ಟ್ರಪತಿ, ರಾಜ್ಯದ ರಾಜ್ಯಪಾಲ, ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಒಕ್ಕೂಟದ ಅಥವಾ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಮಂತ್ರಿ ಆಗಿದ್ದರೆ ಅಥವಾ ಒಕ್ಕೂಟದ ಅಥವಾ ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ನಿಯೋಜಿತನಾಗಿದ್ದ ಇತರ ಯಾರೇ ಲೋಕ ನೌಕರನ ವಿರುದ್ಧ, ಅವನು ತನ್ನ ಸಾರ್ವಜನಿಕ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಅವನ ನಡತೆಗೆ ಸಂಬಂಧಪಟ್ಟಂತೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 356ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ಎಸಗಲಾಗಿದೆಯೆಂದು ಆಪಾದಿಸಿದಾಗ, ಸೆಷನ್ ನ್ಯಾಯಾಲಯವು, ತನಗೆ ಆ ಮೊಕದ್ದಮೆಯನ್ನು ಒಪ್ಪಿಸಿರದಿದ್ದರೂ, ಪಬ್ಲಿಕ್ ಪ್ರಾಸಿಕ್ಯೂಟರನು ಲಿಖಿತದಲ್ಲಿ ದೂರನ್ನು ಸಲ್ಲಿಸಿದ ಮೇಲೆ ಅಂಥ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ದೂರಿನಲ್ಲಿ ಆರೋಪಿಸಿರುವ ಅಪರಾಧವನ್ನಾಗಿಸುವ ಸಂಗತಿಗಳನ್ನು, ಅಂಥ ಅಪರಾಧದ ಸ್ವರೂಪವನ್ನು ಮತ್ತು ಆಪಾದಿತನಿಗೆ ಅವನು ಮಾಡಿದ್ದಾನೆಂದು ಆಪಾದಿಸಲಾಗಿರುವ ಅಪರಾಧದ ಬಗ್ಗೆ ನೋಟೀಸು ನೀಡಲು ಯುಕ್ತವಾಗಿ ಪರ್ಯಾಪ್ತವಾಗಿರದ ಇತರ ವಿವರಗಳನ್ನು ನಿರೂಪಿಸತಕ್ಕದ್ದು.

(4) ಪಬ್ಲಿಕ್ ಪ್ರಾಸಿಕ್ಯೂಟರನು,-

(ಎ) (i) ವ್ಯಕ್ತಿಯು ಪ್ರಸ್ತುತ ರಾಜ್ಯದ ರಾಜ್ಯಪಾಲನಾಗಿದ್ದರೆ ಅಥವಾ ಈ ಮೊದಲೇ ರಾಜ್ಯಪಾಲನಾಗಿದ್ದಿದ್ದರೆ ಅಥವಾ ಪ್ರಸ್ತುತ ರಾಜ್ಯ ಸರ್ಕಾರದ ಮಂತ್ರಿಯಾಗಿದ್ದರೆ ಅಥವಾ ಈ ಮೊದಲೇ ಮಂತ್ರಿಯಾಗಿದ್ದಿದ್ದರೆ;

(ii) ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ನಿಯೋಜಿತನಾದ ಇತರ ಯಾರೇ ಲೋಕನೌಕರನಾಗಿದ್ದರೆ

- ಆ ರಾಜ್ಯ ಸರ್ಕಾರದಿಂದ

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಕೇಂದ್ರ ಸರ್ಕಾರದಿಂದ

- ಪೂರ್ವ ಮಂಜೂರಾತಿ ಪಡೆದ ಹೊರತು, (2)ನೇ ಉಪಪ್ರಕರಣದ ಮೇರೆಗಿನ ಯಾವುದೇ ದೂರನ್ನು ಸಲ್ಲಿಸತಕ್ಕದ್ದಲ್ಲ.

(5) ಅಪರಾಧವು ಯಾವ ದಿನಾಂಕದಂದು ನಡೆಯಿತೆಂದು ಆಪಾದಿಸಲಾಗಿದೆಯೋ ಆ ದಿನಾಂಕದಿಂದ ಆರು ತಿಂಗಳೊಳಗಾಗಿ ದೂರನ್ನು ಸಲ್ಲಿಸಿದ್ದ ಹೊರತು, ಯಾವುದೇ ಸೆಷನ್ ನ್ಯಾಯಾಲಯವು (2)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(6) ಈ ಪ್ರಕರಣದಲ್ಲಿರುವುದು ಯಾವುದೂ, ಅಪರಾಧವು ಯಾವ ವ್ಯಕ್ತಿಯ ವಿರುದ್ಧ ನಡೆದಿದೆಯೆಂದು ಆಪಾದಿಸಲಾಗಿದೆಯೋ ಆ ವ್ಯಕ್ತಿಯು ಆ ಅಪರಾಧಕ್ಕೆ ಸಂಬಂಧಪಟ್ಟಂತೆ ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಮುಂದೆ ಆ ಅಪರಾಧಕ್ಕೆ ಸಂಬಂಧಪಟ್ಟಂತೆ ದೂರು ಸಲ್ಲಿಸುವ ಹಕ್ಕನ್ನು ಬಾಧಿಸತಕ್ಕದ್ದಲ್ಲ ಅಥವಾ ಅಂಥ ದೂರಿನ ಮೇಲೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಅಂಥ ಮ್ಯಾಜಿಸ್ಟ್ರೇಟನ ಅಧಿಕಾರವನ್ನು ಬಾಧಿಸತಕ್ಕದ್ದಲ್ಲ.

## ಅಧ್ಯಾಯ XVI

## ಮ್ಯಾಜಿಸ್ಟ್ರೇಟರಿಗೆ ದೂರುಗಳು

**223. ದೂರುದಾರನ ಪರೀಕ್ಷೆ.-** (1) ದೂರು ಬಂದ ಮೇಲೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನು, ದೂರುದಾರನನ್ನು ಮತ್ತು ಯಾರಾದರೂ ಸಾಕ್ಷಿದಾರರು ಇದ್ದರೆ ಅವರನ್ನು, ಪ್ರಮಾಣ ಮಾಡಿಸಿ ಪರೀಕ್ಷಿಸತಕ್ಕದ್ದು ಮತ್ತು ಅಂಥ ಪರೀಕ್ಷೆಯ ಸಾರಾಂಶವನ್ನು ಬರೆದಿಡತಕ್ಕದ್ದು ಮತ್ತು ಅದಕ್ಕೆ ದೂರುದಾರನು ಮತ್ತು ಸಾಕ್ಷಿದಾರನು ಹಾಗೂ ಮ್ಯಾಜಿಸ್ಟ್ರೇಟನು ಸಹ ಸಹಿ ಹಾಕತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟನು, ಆಪಾದಿತನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡದೆ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ:

ಮತ್ತು ಪರಂತು, ದೂರನ್ನು ಲಿಖಿತದಲ್ಲಿ ಸಲ್ಲಿಸಿದಾಗ,-

(ಎ) ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಅಥವಾ ನಿರ್ವಹಿಸುತ್ತಿರುವುದಾಗಿ ತಾತ್ಪರ್ಯವಾಗುವ ಲೋಕ ನೌಕರನು ಅಥವಾ ನ್ಯಾಯಾಲಯವು ದೂರನ್ನು ಸಲ್ಲಿಸಿದ್ದರೆ; ಅಥವಾ

(ಬಿ) ಮ್ಯಾಜಿಸ್ಟ್ರೇಟನು 212ನೇ ಪ್ರಕರಣದ ಮೇರೆಗೆ ಇನ್ನೊಬ್ಬ ಮ್ಯಾಜಿಸ್ಟ್ರೇಟನಿಗೆ ವಿಚಾರಣೆಗಾಗಿ ಅಥವಾ ಅಧಿವಿಚಾರಣೆಗಾಗಿ ಮೊಕದ್ದಮೆಯನ್ನು ವಹಿಸಿಕೊಟ್ಟಿದ್ದರೆ

- ಆ ಮ್ಯಾಜಿಸ್ಟ್ರೇಟನು ಆ ದೂರುದಾರನನ್ನು ಮತ್ತು ಸಾಕ್ಷಿದಾರರನ್ನು ಪರೀಕ್ಷಿಸುವ ಅಗತ್ಯವಿಲ್ಲ:

ಮತ್ತೂ ಪರಂತು, ಮ್ಯಾಜಿಸ್ಟ್ರೇಟನು ದೂರುದಾರನನ್ನು ಮತ್ತು ಸಾಕ್ಷಿದಾರರನ್ನು ಪರೀಕ್ಷಿಸಿದ ತರುವಾಯ 212ನೇ ಪ್ರಕರಣದ ಮೇರೆಗೆ ಇನ್ನೊಬ್ಬ ಮ್ಯಾಜಿಸ್ಟ್ರೇಟನಿಗೆ ಮೊಕದ್ದಮೆಯನ್ನು ವಹಿಸಿಕೊಟ್ಟಿದ್ದರೆ ಆ ಇನ್ನೊಬ್ಬ ಮ್ಯಾಜಿಸ್ಟ್ರೇಟನು ಅವರನ್ನು ಪುನರ್ ಪರಿಶೀಲಿಸುವ ಅಗತ್ಯವಿಲ್ಲ.

(2) ಲೋಕ ನೌಕರನು ತನ್ನ ಪದೀಯ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಮಾಡಲಾಗಿದೆಯೆಂದು ಆಪಾದಿಸಲಾದ ಯಾವುದೇ ಅಪರಾಧಕ್ಕಾಗಿ ಆತನ ವಿರುದ್ಧ ಸಲ್ಲಿಸಿದ ದೂರಿನ ಮೇಲೆ, ಮ್ಯಾಜಿಸ್ಟ್ರೇಟನು,-

(ಎ) ಹಾಗೆ ಆಪಾದಿಸಲಾದ ಘಟನೆಗೆ ಕಾರಣವಾದ ಪರಿಸ್ಥಿತಿಗಳನ್ನು ಸಮರ್ಥಿಸಿಕೊಳ್ಳಲು ಅಂಥ ಲೋಕ ನೌಕರನಿಗೆ ಒಂದು ಅವಕಾಶವನ್ನು ನೀಡಿದ ಹೊರತು; ಮತ್ತು

(ಬಿ) ಅಂಥ ಲೋಕ ನೌಕರನ ಮೇಲಾಧಿಕಾರಿಯಿಂದ ಆ ಘಟನೆಯ ವಾಸ್ತವ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಒಳಗೊಂಡ ಒಂದು ವರದಿಯನ್ನು ಪಡೆದುಕೊಂಡ ಹೊರತು

- ಆ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**224. ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಸಕ್ಷಮನಲ್ಲದ ಮ್ಯಾಜಿಸ್ಟ್ರೇಟನಿಂದ ಪ್ರಕ್ರಿಯೆ.-** ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಸಕ್ಷಮನಲ್ಲದ ಮ್ಯಾಜಿಸ್ಟ್ರೇಟನಿಗೆ ದೂರನ್ನು ನೀಡಿದ್ದರೆ, ಅವನು,-

(ಎ) ಆ ದೂರು ಲಿಖಿತದಲ್ಲಿದ್ದರೆ ಅದನ್ನು ಸೂಕ್ತ ನ್ಯಾಯಾಲಯಕ್ಕೆ ಸಲ್ಲಿಸಬೇಕೆಂಬ ಹಿಂಬರಹದೊಂದಿಗೆ ಹಿಂತಿರುಗಿಸತಕ್ಕದ್ದು;

(ಬಿ) ಆ ದೂರು ಲಿಖಿತದಲ್ಲಿರದಿದ್ದರೆ, ದೂರುದಾರನು ಸೂಕ್ತ ನ್ಯಾಯಾಲಯಕ್ಕೆ ಹೋಗುವಂತೆ ನಿರ್ದೇಶಿಸತಕ್ಕದ್ದು.

**225. ಆದೇಶಿಕೆಗಳನ್ನು ಹೊರಡಿಸುವುದನ್ನು ಮುಂದೂಡುವುದು.-** (1) ಯಾರೇ ಮ್ಯಾಜಿಸ್ಟ್ರೇಟನು, ಯಾವ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ತಾನು ಅಧಿಕೃತನಾಗಿರುವನೋ ಅಥವಾ 212ನೇ ಪ್ರಕರಣದ ಮೇರೆಗೆ ಯಾವ ಅಪರಾಧವನ್ನು ತನಗೆ ವಹಿಸಿಕೊಡಲಾಗಿದೆಯೋ ಆ ಅಪರಾಧದ ಕುರಿತು ದೂರು ತಲುಪಿದ ಮೇಲೆ ತಾನು ಸೂಕ್ತವೆಂದು ಭಾವಿಸಿದರೆ ಮತ್ತು ತಾನು ಯಾವ ಪ್ರದೇಶದಲ್ಲಿ ತನ್ನ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತಿರುವನೋ ಆ ಪ್ರದೇಶದ ಹೊರಗೆ ಆಪಾದಿತನು ವಾಸಿಸುತ್ತಿದ್ದ ಸಂದರ್ಭದಲ್ಲಿ, ಆಪಾದಿತನ ವಿರುದ್ಧ ಆದೇಶಿಕೆಯನ್ನು ಹೊರಡಿಸುವುದನ್ನು ಮುಂದೂಡತಕ್ಕದ್ದು ಮತ್ತು ವ್ಯವಹರಣೆಗೆ ಸಾಕಷ್ಟು ಆಧಾರವಿದೆಯೇ ಅಥವಾ ಇಲ್ಲವೆ ಎಂದು ನಿರ್ಧರಿಸುವ ಉದ್ದೇಶಕ್ಕಾಗಿ ತಾನೇ ಆ ಮೊಕದ್ದಮೆಯನ್ನು ವಿಚಾರಣೆ ಮಾಡಬಹುದು ಅಥವಾ ಪೊಲೀಸ್ ಅಧಿಕಾರಿಯು ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಇತರ ವ್ಯಕ್ತಿಯ ಮೂಲಕ ತನಿಖೆಯನ್ನು ಮಾಡಿಸುವಂತೆ ನಿರ್ದೇಶಿಸಬಹುದು:

ಪರಂತು,-

(ಎ) ಯಾವ ಅಪರಾಧದ ಬಗ್ಗೆ ದೂರು ನೀಡಲಾಗಿದೆಯೋ, ಆ ಅಪರಾಧವು ಸೆಷನ್ ನ್ಯಾಯಾಲಯದಿಂದ ಮಾತ್ರ ಅಧಿವಿಚಾರಣೆಯಾಗಬೇಕಾದುದೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದಾಗ; ಅಥವಾ

(ಬಿ) ನ್ಯಾಯಾಲಯವೇ ದೂರನ್ನು ಸಲ್ಲಿಸದಿದ್ದಾಗ, ದೂರುದಾರನು ಮತ್ತು ಸಾಕ್ಷಿದಾರರು (ಯಾರಾದರೂ) ಹಾಜರಿದ್ದರೆ ಅವರನ್ನು 223ನೇ ಪ್ರಕರಣದ ಮೇರೆಗೆ ಪ್ರಮಾಣ ಮಾಡಿಸಿ ವಿಚಾರಣೆ ಮಾಡಿದ ಹೊರತು

- ತನಿಖೆಗಾಗಿ ಅಂಥ ಯಾವುದೇ ನಿರ್ದೇಶನವನ್ನು ನೀಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ವಿಚಾರಣೆಯಲ್ಲಿ, ಮ್ಯಾಜಿಸ್ಟ್ರೇಟನು ತಾನು ಸೂಕ್ತವೆಂದು ಭಾವಿಸಿದರೆ, ಪ್ರಮಾಣ ಮಾಡಿಸಿ ಸಾಕ್ಷಿದಾರರ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು:

ಪರಂತು, ಯಾವ ಅಪರಾಧದ ಬಗ್ಗೆ ದೂರು ನೀಡಲಾಗಿದೆಯೋ ಆ ಅಪರಾಧವು ಸೆಷನ್ ನ್ಯಾಯಾಲಯದಿಂದ ಮಾತ್ರ ಅಧಿವಿಚಾರಣೆಯಾಗಬೇಕಾದುದೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅವನು ದೂರುದಾರನಿಗೆ ತನ್ನ ಎಲ್ಲ ಸಾಕ್ಷಿದಾರರನ್ನು ಹಾಜರುಪಡಿಸಲು ತಿಳಿಸತಕ್ಕದ್ದು ಮತ್ತು ಪ್ರಮಾಣ ಮಾಡಿಸಿ ಅವರನ್ನು ಪರೀಕ್ಷಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ತನಿಖೆಯನ್ನು ಪೊಲೀಸ್ ಅಧಿಕಾರಿಯಲ್ಲದ ಇತರ ವ್ಯಕ್ತಿಯು ಮಾಡಿದರೆ, ಅವನು, ಆ ತನಿಖೆ ಮಾಡುವುದಕ್ಕಾಗಿ ವಾರಂಟ್ ಇಲ್ಲದೆ ದಸ್ತಗಿರಿ ಮಾಡುವ ಅಧಿಕಾರವನ್ನು ಹೊರತುಪಡಿಸಿ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಈ ಸಂಹಿತೆಯ ಮೂಲಕ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

**226. ದೂರಿನ ವಜಾ.-** ದೂರುದಾರನು ಮತ್ತು ಸಾಕ್ಷಿದಾರರು ಪ್ರಮಾಣ ಮಾಡಿ ನೀಡಿದ ಹೇಳಿಕೆಗಳನ್ನು (ಯಾವುವಾದರೂ ಇದ್ದರೆ) ಮತ್ತು 225ನೇ ಪ್ರಕರಣದ ಮೇರೆಗಿನ ವಿಚಾರಣೆಯ ಅಥವಾ ತನಿಖೆಯ ಫಲಿತಾಂಶವನ್ನು (ಯಾವುದಾದರೂ ಇದ್ದರೆ) ಅದನ್ನು ಪರ್ಯಾಲೋಚಿಸಿದ ತರುವಾಯ, ಮ್ಯಾಜಿಸ್ಟ್ರೇಟನು ವ್ಯವಹರಣೆಗೆ ಸಾಕಷ್ಟು ಆಧಾರವಿಲ್ಲವೆಂದು ಅಭಿಪ್ರಾಯಪಟ್ಟರೆ, ಅವನು ದೂರನ್ನು ವಜಾ ಮಾಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಮೊಕದ್ದಮೆಯಲ್ಲಿ ಅವನು ಹಾಗೆ ಮಾಡಲು ತನಗಿರುವ ಕಾರಣಗಳನ್ನು ಸಂಕ್ಷಿಪ್ತವಾಗಿ ದಾಖಲಿಸತಕ್ಕದ್ದು.

## ಅಧ್ಯಾಯ XVII

## ಮ್ಯಾಜಿಸ್ಟ್ರೇಟರ ಮುಂದೆ ವ್ಯವಹರಣೆಗಳ ಪ್ರಾರಂಭ

**227. ಆದೇಶಿಕೆಯನ್ನು ಹೊರಡಿಸುವುದು.-** (1) ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನು ವ್ಯವಹರಣೆಯನ್ನು ಮುಂದುವರಿಸಲು ಸಾಕಷ್ಟು ಆಧಾರವಿದೆಯೆಂದು ಅಭಿಪ್ರಾಯಪಟ್ಟರೆ ಮತ್ತು ಮೊಕದ್ದಮೆಯು,-

(ಎ) ಸಮನ್ ಮೊಕದ್ದಮೆಯೆಂಬುದು ಕಂಡುಬಂದರೆ, ಆಪಾದಿತನ ಹಾಜರಾತಿಗಾಗಿ ಅವನು ಸಮನನ್ನು ಹೊರಡಿಸತಕ್ಕದ್ದು; ಅಥವಾ

(ಬಿ) ವಾರಂಟ್ ಮೊಕದ್ದಮೆಯೆಂಬುದು ಕಂಡುಬಂದರೆ, ಅಂಥ ಮ್ಯಾಜಿಸ್ಟ್ರೇಟನ ಅಥವಾ (ಅವನಿಗೆ ಅಧಿಕಾರವ್ಯಾಪ್ತಿಯು ಇರದಿದ್ದರೆ) ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಒಂದು ನಿಶ್ಚಿತ ಸಮಯದಲ್ಲಿ ಆಪಾದಿತನನ್ನು ಕರೆತರಲು ಅಥವಾ ಹಾಜರುಪಡಿಸಲು ಅವನು ವಾರಂಟನ್ನು ಅಥವಾ ಸೂಕ್ತವೆಂದು ಅವನು ಭಾವಿಸಿದರೆ ಸಮನನ್ನು ಹೊರಡಿಸಬಹುದು:

ಪರಂತು, ಸಮನುಗಳು ಅಥವಾ ವಾರಂಟುಗಳನ್ನು ವಿದ್ಯುನ್ಮಾನ ಸಾಧನಗಳ ಮುಖಾಂತರ ಸಹ ಹೊರಡಿಸಬಹುದು.

(2) ಪ್ರಾಸಿಕ್ಯೂಷನ್ ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸುವವರೆಗೆ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸಮನನ್ನು ಅಥವಾ ವಾರಂಟನ್ನು ಆಪಾದಿತನ ವಿರುದ್ಧ ಹೊರಡಿಸತಕ್ಕದ್ದಲ್ಲ.

(3) ಲಿಖಿತದಲ್ಲಿ ಸಲ್ಲಿಸಿದ ದೂರಿನ ಬಗ್ಗೆ ಹೂಡಲಾದ ವ್ಯವಹರಣೆಯಲ್ಲಿ, (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಸಮನ್‌ಗೆ ಅಥವಾ ವಾರಂಟಿಗೆ ಆ ದೂರಿನ ಒಂದು ಪ್ರತಿಯನ್ನು ಲಗತ್ತಿಸತಕ್ಕದ್ದು.

(4) ಪ್ರಕ್ರಿಯೆ ಆರಂಭಿಸಲು ಯಾವುದೇ ಆದೇಶವನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಹೊರಡಿಸುವುದಕ್ಕಾಗಿ, ಪ್ರಕ್ರಿಯಾ ಶುಲ್ಕ ಅಥವಾ ಇತರ ಶುಲ್ಕ ಸಂದಾಯವಾಗಬೇಕಾದಾಗ ಅಂಥ ಶುಲ್ಕವು ಸಂದಾಯವಾಗುವವರೆಗೆ ಅಂಥ ಯಾವ ಆದೇಶಿಕೆಯನ್ನೂ ಹೊರಡಿಸತಕ್ಕದ್ದಲ್ಲ ಮತ್ತು ಅಂಥ ಫೀಜನ್ನು ಯುಕ್ತ ಸಮಯದೊಳಗೆ ಸಂದಾಯ ಮಾಡದಿದ್ದರೆ, ಮ್ಯಾಜಿಸ್ಟ್ರೇಟನು ದೂರನ್ನು ವಜಾ ಮಾಡಬಹುದು.

(5) ಈ ಪ್ರಕರಣದಲ್ಲಿರುವುದು ಯಾವುದೂ, 90ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

**228. ಮ್ಯಾಜಿಸ್ಟ್ರೇಟನು ಆಪಾದಿತನ ಖುದ್ದು ಹಾಜರಾತಿಯನ್ನು ಮನ್ನಾ ಮಾಡಬಹುದು.-** (1) ಮ್ಯಾಜಿಸ್ಟ್ರೇಟನು ಸಮನನ್ನು ಹೊರಡಿಸಿದಾಗ, ಆಪಾದಿತನ ಖುದ್ದು ಹಾಜರಾತಿಯನ್ನು ಮನ್ನಾ ಮಾಡಲು ಅವನಿಗೆ ಕಾರಣವಿದ್ದರೆ, ಅವನು ಆಪಾದಿತನ ಖುದ್ದು ಹಾಜರಾತಿಯನ್ನು ಮನ್ನಾ ಮಾಡಬಹುದು ಮತ್ತು ತನ್ನ ನ್ಯಾಯವಾದಿಯ ಮೂಲಕ ಹಾಜರಾಗಲು ಆಪಾದಿತನಿಗೆ ಅನುಮತಿ ನೀಡಬಹುದು.

(2) ಆದರೆ ಮೊಕದ್ದಮೆಯನ್ನು ವಿಚಾರಣೆ ಮಾಡುವ ಅಥವಾ ಅಧಿವಿಚಾರಣೆ ಮಾಡುವ ಮ್ಯಾಜಿಸ್ಟ್ರೇಟನು, ವ್ಯವಹರಣೆಗಳ ಯಾವುದೇ ಹಂತದಲ್ಲಿ, ತನ್ನ ವಿವೇಚನಾನುಸಾರ, ಅಪರಾಧಿಯ ಖುದ್ದು ಹಾಜರಾತಿಗೆ ನಿರ್ದೇಶಿಸಬಹುದು ಮತ್ತು ಅವಶ್ಯವಾದರೆ, ಈ ಹಿಂದೆ ಉಪಬಂಧಿಸಲಾದ ರೀತಿಯಲ್ಲಿ ಹಾಗೆ ಹಾಜರಾಗುವಂತೆ ಒತ್ತಾಯಪಡಿಸಬಹುದು.

**229. ಲಘು ಅಪರಾಧದ ಮೊಕದ್ದಮೆಗಳಲ್ಲಿ ವಿಶೇಷ ಸಮನುಗಳು.-** (1) ಲಘು ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನು ಮೊಕದ್ದಮೆಯನ್ನು 283ನೇ ಅಥವಾ 284ನೇ ಪ್ರಕರಣದ ಮೇರೆಗೆ ಸಂಕ್ಷೇಪವಾಗಿ ಇತ್ಯರ್ಥಗೊಳಿಸಬಹುದೆಂದು ಅಭಿಪ್ರಾಯಪಟ್ಟರೆ, ಮ್ಯಾಜಿಸ್ಟ್ರೇಟನು ತದ್ವಿರುದ್ಧ ಅಭಿಪ್ರಾಯವನ್ನು ಹೊಂದಿದ್ದರೆ, ಆ ಬಗ್ಗೆ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ್ದ ಹೊರತು, ಆಪಾದಿತನಿಗೆ ಒಂದು ನಿರ್ದಿಷ್ಟಪಡಿಸಿದ ದಿನಾಂಕದಂದು ಮ್ಯಾಜಿಸ್ಟ್ರೇಟನ ಮುಂದೆ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಹಾಜರಾಗಲು ಅಥವಾ ಅವನು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗದೆ ದೋಷಾರೋಪವನ್ನು ಒಪ್ಪಿಕೊಳ್ಳಲು ಇಚ್ಛಿಸಿದರೆ, ಲಿಖಿತದಲ್ಲಿ ತನ್ನ ಒಪ್ಪಿಗೆಯನ್ನು ಮತ್ತು ಸಮನಿನಲ್ಲಿ ನಿರ್ದಿಷ್ಟಪಡಿಸಿದ ಜುಲ್ಮಾನೆಯ ಮೊಬಲಗನ್ನು ಅಂಚೆಯ ಮೂಲಕ ಅಥವಾ ಸಂದೇಶವಾಹಕನ ಮೂಲಕ ಮ್ಯಾಜಿಸ್ಟ್ರೇಟನಿಗೆ ನಿರ್ದಿಷ್ಟ ದಿನಾಂಕಕ್ಕೆ ಮುಂಚೆ ರವಾನಿಸಲು ಅಥವಾ ಅವನು ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಹಾಜರಾಗಲು ಮತ್ತು ಅಂಥ ನ್ಯಾಯವಾದಿಯ ಮೂಲಕ ದೋಷಾರೋಪವನ್ನು ಒಪ್ಪಿಕೊಳ್ಳಲು ಇಚ್ಛಿಸಿದರೆ, ತನ್ನ ಪರವಾಗಿ ಆರೋಪವನ್ನು ಒಪ್ಪಿಕೊಳ್ಳುವಂತೆ ಮತ್ತು ಜುಲ್ಮಾನೆಯನ್ನು ಸಂದಾಯ ಮಾಡುವಂತೆ ನ್ಯಾಯವಾದಿಗೆ ಅಧಿಕಾರ ನೀಡಬಹುದೆಂದು ಆಪಾದಿತನನ್ನು ಅಗತ್ಯಪಡಿಸಿರುವ ಸಮನನ್ನು ಅವನಿಗೆ ಹೊರಡಿಸಬಹುದು:

ಪರಂತು, ಅಂಥ ಸಮನಿನಲ್ಲಿ ನಿರ್ದಿಷ್ಟಪಡಿಸಿರುವ ಜುಲ್ಮಾನೆಯ ಮೊಬಲಗು ಐದು ಸಾವಿರ ರೂಪಾಯಿಗಳಿಗೆ ಮೀರತಕ್ಕದ್ದಲ್ಲ.

(2) ಈ ಪ್ರಕರಣದ ಉದ್ದೇಶಗಳಿಗಾಗಿ, "ಲಘು ಅಪರಾಧ" ಎಂದರೆ, ಐದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಮಾತ್ರ ದಂಡನೀಯವಾದ ಯಾವುದೇ ಅಪರಾಧ; ಆದರೆ ಮೋಟಾರು ವಾಹನಗಳ ಅಧಿನಿಯಮ, 1988 (1988 ರ 59)ರ ಮೇರೆಗೆ ಅಥವಾ ತಪ್ಪನ್ನು ಒಪ್ಪಿಕೊಂಡಿದ್ದರೆ ಆಪಾದಿತ ವ್ಯಕ್ತಿಯ ಅನುಪಸ್ಥಿತಿಯಲ್ಲಿ ಅಪರಾಧ ನಿರ್ಣಯಿಸುವುದಕ್ಕೆ ಉಪಬಂಧಿಸಿರುವ ಯಾವುದೇ ಇತರ ಕಾನೂನಿನ ಮೇರೆಗೆ ಹಾಗೆ ದಂಡನೀಯವಾಗುವ ಯಾವುದೇ ಅಪರಾಧವು ಲಘು ಅಪರಾಧದಲ್ಲಿ ಒಳಗೊಳ್ಳುವುದಿಲ್ಲ.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, 359ನೇ ಪ್ರಕರಣದ ಮೇರೆಗಿನ ರಾಜಿ ಮಾಡಿಕೊಳ್ಳಬಹುದಾದಂಥ ಯಾವುದೇ ಅಪರಾಧಕ್ಕೆ ಅಥವಾ ಮೂರು ತಿಂಗಳಿಗೆ ಮೀರದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾದ ಯಾವುದೇ ಅಪರಾಧಕ್ಕೆ ಸಂಬಂಧಪಟ್ಟಂತೆ, ಮೊಕದ್ದಮೆಯ ಸಂಗತಿಗಳನ್ನು ಮತ್ತು ಸಂದರ್ಭ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡಾಗ, ಜುಲ್ಮಾನೆಯನ್ನು ಮಾತ್ರ ವಿಧಿಸಿದರೆ ನ್ಯಾಯೋದ್ದೇಶ ಈಡೇರಿದಂತಾಗುತ್ತದೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಟ್ಟರೆ, (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಯಾರೇ ಮ್ಯಾಜಿಸ್ಟ್ರೇಟನಿಗೆ ವಿಶೇಷವಾಗಿ ಅಧಿಕಾರ ನೀಡಬಹುದು.

**230. ಆಪಾದಿತನಿಗೆ ಪೊಲೀಸ್ ವರದಿಯ ಮತ್ತು ಇತರ ದಸ್ತಾವೇಜುಗಳ ಪ್ರತಿಗಳನ್ನು ಒದಗಿಸುವುದು.-** ಪೊಲೀಸ್ ವರದಿಯ ಮೇಲೆ ವ್ಯವಹರಣೆಯನ್ನು ಹೂಡಿರುವ ಯಾವುದೇ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟನು ಆಪಾದಿತನನ್ನು ಹಾಜರುಪಡಿಸಿದ ಅಥವಾ ಅವನು ಹಾಜರಾದ ದಿನಾಂಕದಿಂದ ಹದಿನಾಲ್ಕು ದಿನಗಳನ್ನು ಮೀರದಂತೆ ವಿಳಂಬವಿಲ್ಲದೆ, ಆಪಾದಿತನಿಗೆ ಅಥವಾ ಸಂತ್ರಸ್ತನಿಗೆ (ನ್ಯಾಯವಾದಿಯ ಮೂಲಕ ಪ್ರತಿನಿಧಿಸಿದರೆ) ಉಚಿತವಾಗಿ,-

(i) ಪೊಲೀಸ್ ವರದಿಯ;

(ii) 173ನೇ ಪ್ರಕರಣದ ಮೇರೆಗೆ ದಾಖಲಿಸಿಕೊಂಡ ಪ್ರಥಮ ಮಾಹಿತಿ ವರದಿಯ;

(iii) 193ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಪೊಲೀಸ್ ಅಧಿಕಾರಿಯು ಹೊರತುಪಡಿಸಲು ಕೋರಿರುವ ಯಾವುದೇ ಭಾಗವನ್ನು ಹೊರತುಪಡಿಸಿ, ಅದರ ಸಾಕ್ಷಿದಾರರನ್ನಾಗಿ ಪರೀಕ್ಷಿಸಲು ಪ್ರಾಸಿಕ್ಯೂಷನ್ ಉದ್ದೇಶಿಸಿರುವ 180ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ದಾಖಲಿಸಿಕೊಂಡ ಎಲ್ಲಾ ವ್ಯಕ್ತಿಗಳ ಹೇಳಿಕೆಗಳು;

(iv) 183ನೇ ಪ್ರಕರಣದ ಮೇರೆಗೆ ದಾಖಲಿಸಿಕೊಂಡ ತಪ್ಪೊಪ್ಪಿಗೆಗಳು ಮತ್ತು ಹೇಳಿಕೆಗಳು ಯಾವುವಾದರೂ ಇದ್ದರೆ, ಅವುಗಳ;

(v) 193ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಪೊಲೀಸ್ ವರದಿಯೊಡನೆ ಮ್ಯಾಜಿಸ್ಟ್ರೇಟನಿಗೆ ಕಳುಹಿಸಲಾದ ಯಾವುದೇ ಇತರ ದಸ್ತಾವೇಜು ಅಥವಾ ಅದರ ಸುಸಂಬದ್ಧ ಉದ್ಧೃತ ಭಾಗದ

- ಪ್ರತಿಗಳನ್ನು ಒದಗಿಸತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟನು (iii)ನೇ ಖಂಡದಲ್ಲಿ ಉಲ್ಲೇಖಿಸಿರುವ ಹೇಳಿಕೆಯ ಅಂಥ ಯಾವುದೇ ಭಾಗವನ್ನು ಪರಿಶೀಲಿಸಿದ ನಂತರ ಮತ್ತು ಆ ಕೋರಿಕೆಗಾಗಿ ಪೊಲೀಸ್ ಅಧಿಕಾರಿಯು ಕೊಟ್ಟ ಕಾರಣಗಳನ್ನು ಪರಿಗಣಿಸಿದ ನಂತರ,

ಹೇಳಿಕೆಯ ಆ ಭಾಗದ ಅಥವಾ ಮ್ಯಾಜಿಸ್ಟ್ರೇಟನು ಯುಕ್ತವೆಂದು ಭಾವಿಸುವಂಥ ಅದರ ಭಾಗದ ಒಂದು ಪ್ರತಿಯನ್ನು ಆಪಾದಿತನಿಗೆ ಒದಗಿಸತಕ್ಕದ್ದೆಂದು ನಿರ್ದೇಶಿಸಬಹುದು:

ಮತ್ತು ಪರಂತು, ಅಂಥ ಯಾವುದೇ ದಸ್ತಾವೇಜು ಬಹಳ ದೊಡ್ಡ ಪ್ರಮಾಣದ್ದಾಗಿದೆ ಎಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ ಅವನು ಆಪಾದಿತನಿಗೆ ಮತ್ತು ಸಂತ್ರಸ್ತನಿಗೆ (ನ್ಯಾಯವಾದಿಯ ಮೂಲಕ ಪ್ರತಿನಿಧಿಸಿದ್ದರೆ) ಅದರ ಒಂದು ಪ್ರತಿಯನ್ನು ಒದಗಿಸುವ ಬದಲು ಅದನ್ನು ವಿದ್ಯುನ್ಮಾನ ಸಾಧನಗಳ ಮುಖಾಂತರ ಒದಗಿಸಬಹುದು ಅಥವಾ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಅದನ್ನು ಪರಿಶೀಲಿಸಲು ಮಾತ್ರ ಅವಕಾಶ ಕೊಡಲಾಗುವುದೆಂದು ಆಪಾದಿತನಿಗೆ ನಿರ್ದೇಶಿಸತಕ್ಕದ್ದು:

ಮತ್ತೂ ಪರಂತು, ವಿದ್ಯುನ್ಮಾನ ರೂಪದಲ್ಲಿ ದಸ್ತಾವೇಜುಗಳನ್ನು ಒದಗಿಸಲಾಗಿದ್ದರೆ, ಅದನ್ನು ಯುಕ್ತವಾಗಿ ಒದಗಿಸಲಾಗಿದೆಯೆಂದು ಪರಿಗಣಿಸತಕ್ಕದ್ದು.

**231. ಸೆಷನ್ ನ್ಯಾಯಾಲಯವು ಅಧಿವಿಚಾರಣೆ ಮಾಡುವ ಇತರ ಮೊಕದ್ದಮೆಗಳಲ್ಲಿ ಹೇಳಿಕೆಗಳ ಮತ್ತು ದಸ್ತಾವೇಜುಗಳ ಪ್ರತಿಗಳನ್ನು ಆಪಾದಿತನಿಗೆ ಒದಗಿಸುವುದು.-** ಪೊಲೀಸ್ ವರದಿಯ ಮೇಲಲ್ಲದೆ ಅನ್ಯಥಾ ಹೂಡಲಾದ ಮೊಕದ್ದಮೆಯಲ್ಲಿ 227ನೇ ಪ್ರಕರಣದ ಮೇರೆಗೆ ಕ್ರಮ ಜರುಗಿಸಲು ಆದೇಶಿಕೆಯನ್ನು ಹೊರಡಿಸುವ ಮ್ಯಾಜಿಸ್ಟ್ರೇಟನಿಗೆ, ಅಪರಾಧವನ್ನು ಸೆಷನ್ ನ್ಯಾಯಾಲಯ ಮಾತ್ರ ಅಧಿವಿಚಾರಣೆ ಮಾಡಬಹುದಾಗಿದೆಯೆಂದು ಕಂಡುಬಂದಲ್ಲಿ, ಮ್ಯಾಜಿಸ್ಟ್ರೇಟನು ಕೂಡಲೇ,-

(i) ಮ್ಯಾಜಿಸ್ಟ್ರೇಟನು ಪರೀಕ್ಷಿಸಿದ ಎಲ್ಲಾ ವ್ಯಕ್ತಿಗಳ 223ನೇ ಪ್ರಕರಣ ಅಥವಾ 225ನೇ ಪ್ರಕರಣದ ಮೇರೆಗೆ ದಾಖಲಿಸಿಕೊಂಡ ಹೇಳಿಕೆಗಳು;

(ii) 180ನೇ ಪ್ರಕರಣ ಅಥವಾ 183ನೇ ಪ್ರಕರಣದ ಮೇರೆಗೆ ದಾಖಲಿಸಿಕೊಂಡ ಹೇಳಿಕೆಗಳ ಮತ್ತು ತಪ್ಪೊಪ್ಪಿಗೆಗಳು ಯಾವುದಾದರೂ ಇದ್ದರೆ, ಅವುಗಳ;

(iii) ಪ್ರಾಸಿಕ್ಯೂಷನ್ ಅವಲಂಬಿಸಲು ಉದ್ದೇಶಿಸಿದ ಮತ್ತು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಲಾದ ದಸ್ತಾವೇಜುಗಳು

- ಇವುಗಳ ಪ್ರತಿಯನ್ನು ಆಪಾದಿತನಿಗೆ ಉಚಿತವಾಗಿ ಒದಗಿಸತಕ್ಕದ್ದು:

ಪರಂತು, ಅಂಥ ಯಾವುದೇ ದಸ್ತಾವೇಜು ಬಹಳ ದೊಡ್ಡ ಪ್ರಮಾಣದ್ದಾಗಿದೆ ಎಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಆಪಾದಿತನಿಗೆ ಅದರ ಒಂದು ಪ್ರತಿಯನ್ನು ಒದಗಿಸುವ ಬದಲು ಅದನ್ನು ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ನ್ಯಾಯಾಲಯದಲ್ಲಿ ಪರಿಶೀಲಿಸಲು ಮಾತ್ರ ಅವಕಾಶ ಕೊಡಲಾಗುವುದೆಂದು ಆಪಾದಿತನಿಗೆ ನಿರ್ದೇಶಿಸತಕ್ಕದ್ದು:

ಮತ್ತು ಪರಂತು, ವಿದ್ಯುನ್ಮಾನ ರೂಪದಲ್ಲಿ ದಸ್ತಾವೇಜುಗಳನ್ನು ಒದಗಿಸಲಾಗಿದ್ದರೆ, ಅದನ್ನು ಯುಕ್ತವಾಗಿ ಒದಗಿಸಲಾಗಿದೆಯೆಂದು ಪರಿಗಣಿಸತಕ್ಕದ್ದು.

**232. ಅಪರಾಧವು ಸೆಷನ್ ನ್ಯಾಯಾಲಯದಿಂದ ಮಾತ್ರ ಅಧಿವಿಚಾರಣೆಯಾಗಬೇಕಾದಾಗ ಮೊಕದ್ದಮೆಯನ್ನು ಅದಕ್ಕೆ ಒಪ್ಪಿಸುವುದು.-** ಪೊಲೀಸ್ ವರದಿಯ ಮೇಲೆ ಅಥವಾ ಅನ್ಯಥಾ ಹೂಡಲಾದ ಮೊಕದ್ದಮೆಯಲ್ಲಿ ಆಪಾದಿತನು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾದರೆ ಅಥವಾ ಕರೆತಂದರೆ ಮತ್ತು ಅಪರಾಧವು ಸೆಷನ್ ನ್ಯಾಯಾಲಯದಿಂದ ಮಾತ್ರ ಅಧಿವಿಚಾರಣೆಯಾಗಬೇಕೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅವನು,-

(ಎ) 230ನೇ ಪ್ರಕರಣದ ಅಥವಾ 231ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಿದ ತರುವಾಯ, ಸೆಷನ್ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಒಪ್ಪಿಸತಕ್ಕದ್ದು ಮತ್ತು ಜಾಮೀನಿಗೆ ಸಂಬಂಧಪಟ್ಟ ಈ ಸಂಹಿತೆಯ ಉಪಬಂಧಗಳಿಗೆ ಒಳಪಟ್ಟು, ಹಾಗೆ ಒಪ್ಪಿಸುವವರೆಗೆ ಆಪಾದಿತನನ್ನು ಅಭಿರಕ್ಷೆಗೆ ಒಪ್ಪಿಸತಕ್ಕದ್ದು;

(ಬಿ) ಜಾಮೀನಿಗೆ ಸಂಬಂಧಿಸಿದ ಈ ಸಂಹಿತೆಯ ಉಪಬಂಧಗಳಿಗೊಳಪಟ್ಟು, ಅಧಿವಿಚಾರಣೆಯ ಅವಧಿಯಲ್ಲಿ ಮತ್ತು ಅದು ಮುಗಿಯುವವರೆಗೆ ಆಪಾದಿತನನ್ನು ಅಭಿರಕ್ಷೆಗೆ ಕಳುಹಿಸತಕ್ಕದ್ದು;

(ಸಿ) ಮೊಕದ್ದಮೆಗೆ ಸಂಬಂಧಿಸಿದಂತೆ ಯಾವುವಾದರೂ ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ಹಾಗೂ ವಸ್ತುಗಳನ್ನು ಸಾಕ್ಷ್ಯದಲ್ಲಿ ಹಾಜರುಪಡಿಸಬೇಕಾಗಿದ್ದರೆ, ಅವುಗಳನ್ನು ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು;

(ಡಿ) ಮೊಕದ್ದಮೆಯನ್ನು ಸೆಷನ್ ನ್ಯಾಯಾಲಯಕ್ಕೆ ಒಪ್ಪಿಸಿದ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ತಿಳಿಸತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ಸಂಜ್ಞೇಯತೆಗೆ ತೆಗೆದುಕೊಂಡ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು ಮತ್ತು ಅಂಥ ಅವಧಿಯನ್ನು ಮ್ಯಾಜಿಸ್ಟ್ರೇಟನು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಒಂದು ನೂರಾ ಎಂಬತ್ತು ದಿನಗಳನ್ನು ಮೀರದ ಅವಧಿಗೆ ವಿಸ್ತರಿಸಬಹುದು:

ಮತ್ತು ಪರಂತು, ಸೆಷನ್ ನ್ಯಾಯಾಲಯವು ಅಧಿವಿಚಾರಣೆ ಮಾಡಬಹುದಾದ ಮೊಕದ್ದಮೆಯಲ್ಲಿ ಆಪಾದಿತನು ಅಥವಾ ಸಂತ್ರಸ್ತನು ಅಥವಾ ಅಂಥ ವ್ಯಕ್ತಿಯಿಂದ ಅಧಿಕೃತಗೊಂಡ ಯಾರೇ ವ್ಯಕ್ತಿಯು ಮ್ಯಾಜಿಸ್ಟ್ರೇಟನ ಮುಂದೆ ಸಲ್ಲಿಸಿದ ಯಾವುದೇ ಅರ್ಜಿಯನ್ನು, ಮೊಕದ್ದಮೆಯನ್ನು ನಡೆಸುವುದಕ್ಕೆ ಬದ್ಧವಾದ ಸೆಷನ್ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು.

**233. ದೂರು ಮೊಕದ್ದಮೆಯಿದ್ದಾಗ ಮತ್ತು ಅದೇ ಅಪರಾಧದ ಬಗ್ಗೆ ಪೊಲೀಸ್ ತನಿಖೆ ನಡೆಯುತ್ತಿರುವಾಗ ಅನುಸರಿಸಬೇಕಾದ ಪ್ರಕ್ರಿಯೆ.-** (1) ಪೊಲೀಸ್ ವರದಿಯ ಮೇಲಲ್ಲದೆ ಅನ್ಯಥಾ ಹೂಡಲಾದ ಮೊಕದ್ದಮೆಯಲ್ಲಿ (ಈ ಮುಂದೆ ದೂರಿನ ಮೇಲಿನ ಮೊಕದ್ದಮೆಯೆಂದು ಉಲ್ಲೇಖಿಸಲಾಗಿದೆ) ಮ್ಯಾಜಿಸ್ಟ್ರೇಟನಿಂದ ವಿಚಾರಣೆ ಅಥವಾ ಅಧಿವಿಚಾರಣೆಯು ನಡೆಯುತ್ತಿರುವಾಗ ತಾನು ಮಾಡುತ್ತಿರುವ ವಿಚಾರಣೆಯ ಅಥವಾ ಅಧಿವಿಚಾರಣೆಯ ವಿಷಯವಾಗಿರುವ ಅಪರಾಧಕ್ಕೆ ಸಂಬಂಧಿಸಿದಂತೆ ಪೊಲೀಸ್ ತನಿಖೆಯು ನಡೆಯುತ್ತಿದೆಯೆಂದು ಅವನಿಗೆ ಕಂಡುಬಂದಾಗ ಅವನು ಅಂಥ ವಿಚಾರಣೆ ಅಥವಾ ಅಧಿವಿಚಾರಣೆಯ ವ್ಯವಹರಣೆಗಳನ್ನು ನಿಲ್ಲಿಸತಕ್ಕದ್ದು ಮತ್ತು ತನಿಖೆಯನ್ನು ನಡೆಸುತ್ತಿರುವ ಪೊಲೀಸ್ ಅಧಿಕಾರಿಯಿಂದ ಆ ವಿಷಯದ ಬಗ್ಗೆ ವರದಿಯನ್ನು ತರಿಸಿಕೊಳ್ಳತಕ್ಕದ್ದು.

(2) 193ನೇ ಪ್ರಕರಣದ ಮೇರೆಗೆ ತನಿಖೆ ಮಾಡಿದ ಪೊಲೀಸ್ ಅಧಿಕಾರಿಯು ವರದಿಯನ್ನು ಸಲ್ಲಿಸಿದ್ದರೆ ಮತ್ತು ಅಂಥ ವರದಿಯ ಮೇಲೆ ಮ್ಯಾಜಿಸ್ಟ್ರೇಟನು ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡು, ದೂರಿನ ಮೊಕದ್ದಮೆಯಲ್ಲಿ ಆಪಾದಿತನಾದ ಯಾರೇ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಂಡರೆ, ಮ್ಯಾಜಿಸ್ಟ್ರೇಟನು ದೂರಿನ ಮೊಕದ್ದಮೆಯನ್ನು ಮತ್ತು ಪೊಲೀಸ್ ವರದಿಯಿಂದ ಉದ್ಭವಿಸುವ ಮೊಕದ್ದಮೆಯನ್ನು, ಅವೆರಡನ್ನೂ ಪೊಲೀಸ್ ವರದಿಯ ಮೇಲೆ ಹೂಡಲಾಗಿದ್ದರೆ ಹೇಗೋ ಹಾಗೆ ವಿಚಾರಣೆ ಅಥವಾ ಅಧಿವಿಚಾರಣೆ ಮಾಡತಕ್ಕದ್ದು.

(3) ಪೊಲೀಸ್ ವರದಿಯು ದೂರಿನ ಮೊಕದ್ದಮೆಯಲ್ಲಿನ ಯಾರೇ ಆಪಾದಿತನಿಗೆ ಸಂಬಂಧಿಸಿರದಿದ್ದರೆ ಅಥವಾ ಮ್ಯಾಜಿಸ್ಟ್ರೇಟನು ಪೊಲೀಸ್ ವರದಿಯ ಮೇಲೆ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳದಿದ್ದರೆ, ಅವನು ತಾನು

ನಿಲ್ಲಿಸಿದ್ದ ವಿಚಾರಣೆಯನ್ನು ಅಥವಾ ಅಧಿವಿಚಾರಣೆಯನ್ನು ಈ ಸಂಹಿತೆಯ ಉಪಬಂಧಗಳಿಗನುಸಾರವಾಗಿ ಮುಂದುವರಿಸತಕ್ಕದ್ದು.

## ಅಧ್ಯಾಯ XVIII

## ಆರೋಪ

### *ಎ.- ಆರೋಪಗಳ ನಮೂನೆ*

**234. ಆರೋಪದ ಒಳಾಂಶಗಳು.-** (1) ಈ ಸಂಹಿತೆಯ ಮೇರೆಗಿನ ಪ್ರತಿಯೊಂದು ಆರೋಪದಲ್ಲೂ, ಆಪಾದಿತನ ಮೇಲೆ ಯಾವ ಅಪರಾಧದ ಬಗ್ಗೆ ಆರೋಪ ಹೊರಿಸಲಾಗಿದೆಯೋ ಆ ಅಪರಾಧದ ಬಗ್ಗೆ ನಿರೂಪಿಸತಕ್ಕದ್ದು.

(2) ಯಾವುದೇ ಕೃತ್ಯವನ್ನು ಅಪರಾಧವೆಂದು ಪರಿಗಣಿಸುವ ಕಾನೂನಿನಲ್ಲಿ ಆ ಅಪರಾಧಕ್ಕೆ ಯಾವುದೇ ನಿರ್ದಿಷ್ಟ ಹೆಸರನ್ನು ಕೊಟ್ಟಿದ್ದರೆ, ಆ ಅಪರಾಧವನ್ನು ಅದೇ ಹೆಸರಿನಿಂದಲೇ ಆರೋಪದಲ್ಲಿ ವಿವರಿಸಬಹುದು.

(3) ಯಾವುದೇ ಕೃತ್ಯವನ್ನು ಅಪರಾಧವೆಂದು ಪರಿಗಣಿಸುವ ಕಾನೂನು ಆ ಅಪರಾಧಕ್ಕೆ ನಿರ್ದಿಷ್ಟ ಹೆಸರನ್ನು ಕೊಟ್ಟಿರದಿದ್ದರೆ, ಆಪಾದಿತನ ಮೇಲೆ ಆರೋಪಿಸಿರುವ ವಿಷಯವನ್ನು ಅವನು ತಿಳಿದುಕೊಳ್ಳುವಷ್ಟರ ಮಟ್ಟಿಗೆ ಅಪರಾಧದ ವಿವರಣೆಯನ್ನು ತಿಳಿಸತಕ್ಕದ್ದು.

(4) ಯಾವ ಕಾನೂನಿಗೆ ಅಥವಾ ಆ ಕಾನೂನಿನ ಯಾವ ಪ್ರಕರಣಗಳ ವಿರುದ್ಧವಾಗಿ ಅಪರಾಧವನ್ನು ಮಾಡಲಾಗಿದೆಯೆಂದು ಹೇಳಲಾಗಿದೆಯೋ ಆ ಕಾನೂನನ್ನು ಮತ್ತು ಆ ಕಾನೂನಿನ ಪ್ರಕರಣವನ್ನು ಆರೋಪದಲ್ಲಿ ನಮೂದಿಸತಕ್ಕದ್ದು.

(5) ಆರೋಪವನ್ನು ಹೊರಿಸಲಾಗಿದೆಯೆಂಬ ಸಂಗತಿಯು, ಆರೋಪಿಸಿರುವುದು ಅಪರಾಧವೆಂದಾಗಲು ಕಾನೂನಿನಲ್ಲಿ ಅಗತ್ಯಪಡಿಸಿದ ಪ್ರತಿಯೊಂದು ಷರತ್ತನ್ನು ಆ ನಿರ್ದಿಷ್ಟ ಮೊಕದ್ದಮೆಯಲ್ಲಿ ಈಡೇರಿಸಲಾಗಿದೆಯೆಂಬ ಹೇಳಿಕೆಗೆ ಸಮಾನವಾದುದಾಗಿರುತ್ತದೆ.

(6) ನ್ಯಾಯಾಲಯದ ಭಾಷೆಯಲ್ಲಿ ಆರೋಪವನ್ನು ಬರೆಯತಕ್ಕದ್ದು.

(7) ಆಪಾದಿತನು ಈ ಹಿಂದೆ ಯಾವುದೇ ಅಪರಾಧದ ತಪ್ಪಿತಸ್ಥನೆಂದು ನಿರ್ಣೀತನಾಗಿದ್ದರೆ, ಅಂಥ ಹಿಂದಿನ ನಿರ್ಣಯದಿಂದಾಗಿ, ಆ ತರುವಾಯದ ಅಪರಾಧಕ್ಕಾಗಿ ಹೆಚ್ಚಿನ ದಂಡನೆಗೆ ಅಥವಾ ಬೇರೆ ರೀತಿಯ ದಂಡನೆಗೆ ಗುರಿಯಾಗಬೇಕಾಗಿದ್ದರೆ ಮತ್ತು ಆ ತರುವಾಯದ ಅಪರಾಧಕ್ಕಾಗಿ, ಯಾವ ದಂಡನೆಯನ್ನು ವಿಧಿಸುವುದು ಸೂಕ್ತವೆಂದು ನ್ಯಾಯಾಲಯವು ಭಾವಿಸುತ್ತದೋ ಆ ದಂಡನೆಯ ಉದ್ದೇಶಕ್ಕಾಗಿ, ಅಂಥ ಹಿಂದಿನ ನಿರ್ಣಯವನ್ನು ರುಜುವಾತು ಮಾಡಲು ಉದ್ದೇಶಿಸಿದರೆ ಹಿಂದಿನ ಅಪರಾಧ ನಿರ್ಣಯದ ಸಂಗತಿಯನ್ನು, ದಿನಾಂಕವನ್ನು ಮತ್ತು ಸ್ಥಳವನ್ನು ಆರೋಪದಲ್ಲಿ ತಿಳಿಸತಕ್ಕದ್ದು ಮತ್ತು ಅಂಥ ಹೇಳಿಕೆಯನ್ನು ಸೇರಿಸದೆ ಕೈಬಿಟ್ಟಿದ್ದರೆ, ಶಿಕ್ಷೆ ವಿಧಿಸುವ ಮುನ್ನ ಯಾವುದೇ ಸಮಯದಲ್ಲಿ ನ್ಯಾಯಾಲಯವು ಅದನ್ನು ಸೇರಿಸಬಹುದು.

*ದೃಷ್ಟಾಂತಗಳು*

(ಎ) 'ಬಿ'ಯನ್ನು ಕೊಲೆ ಮಾಡಿದ್ದಾನೆಂದು 'ಎ' ಯ ಮೇಲೆ ಆರೋಪ ಹೊರಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 100 ಮತ್ತು 101ನೇ ಪ್ರಕರಣಗಳಲ್ಲಿ ಕೊಟ್ಟಿರುವ ಕೊಲೆಯ ಪರಿಭಾಷೆಯ ವ್ಯಾಪ್ತಿಗೆ ಸೇರುತ್ತದೆಯೆಂಬ; ಸದರಿ ಸಂಹಿತೆಯ ಸಾಮಾನ್ಯ ಅಪವಾದಗಳ ವ್ಯಾಪ್ತಿಗೆ ಇದು ಸೇರುವುದಿಲ್ಲವೆಂಬ; 101ನೇ ಪ್ರಕರಣದ ಐದು ಅಪವಾದಗಳಲ್ಲಿ

ಯಾವುದರ ವ್ಯಾಪ್ತಿಗೂ ಸೇರುವುದಿಲ್ಲವೆಂಬ ಅಥವಾ ಅದು ಅಪವಾದ 1ರ ವ್ಯಾಪ್ತಿಗೆ ಸೇರಿದರೂ ಅದಕ್ಕೆ ಆ ಅಪವಾದದ ಕೆಳಗೆ ಇರುವ ಮೂರು ಪರಂತುಕಗಳಲ್ಲಿ ಒಂದು ಅಥವಾ ಮತ್ತೊಂದು ಅನ್ವಯವಾಗುತ್ತದೆ ಎಂಬ ಹೇಳಿಕೆಗೆ ಸಮಾನವಾಗಿರುತ್ತದೆ.

(ಬಿ) ಓ/ಯು ಗುಂಡು ಹಾರಿಸುವ ಉಪಕರಣದಿಂದ 'ಬಿ' ಎಂಬಾತನಿಗೆ ತೀವ್ರ ಗಾಯವನ್ನು ಸ್ವಇಚ್ಛೆಯಿಂದ ಉಂಟು ಮಾಡಿದ್ದಾನೆಂದು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 118ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಓ/ ಮೇಲೆ ಆರೋಪ ಹೊರಿಸಲಾಗಿದೆ. ಇದು, ಸದರಿ ಸಂಹಿತೆಯ 122ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಅದಕ್ಕಾಗಿ ಉಪಬಂಧ ಕಲ್ಪಿಸಿಲ್ಲವೆಂಬ ಮತ್ತು ಸಾಮಾನ್ಯ ಅಪವಾದಗಳು ಅದಕ್ಕೆ ಅನ್ವಯವಾಗುವುದಿಲ್ಲ ಎಂಬ ಹೇಳಿಕೆಗೆ ಸಮಾನವಾಗಿರುತ್ತದೆ.

(ಸಿ) ಕೊಲೆ, ವಂಚನೆ, ಕಳವು, ಬಲಾದ್ಗ್ರಹಣ ಅಥವಾ ಆಪರಾಧಿಕ ಭಯೋತ್ಪಾದನೆಗಾಗಿ ಅಥವಾ ಸುಳ್ಳು ಸ್ವತ್ತು ಗುರುತಿನ ಬಳಕೆಗಾಗಿ 'ಎ' ಯ ಮೇಲೆ ಆರೋಪ ಹೊರಿಸಲಾಗಿದೆ. 'ಎ' ಯು ಕೊಲೆ ಅಥವಾ ವಂಚನೆ ಅಥವಾ ಕಳವು ಅಥವಾ ಬಲಾದ್ಗ್ರಹಣ ಅಥವಾ ಆಪರಾಧಿಕ ಭಯೋತ್ಪಾದನೆ ಮಾಡಿದ್ದಾನೆಂದು ಅಥವಾ ಸುಳ್ಳು ಸ್ವತ್ತು ಗುರುತನ್ನು ಬಳಕೆ ಮಾಡಿದ್ದಾನೆಂದು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರಲ್ಲಿ ಹೇಳಿರುವ ಅಪರಾಧಗಳ ಪರಿಭಾಷೆಗಳಿಗೆ ಉಲ್ಲೇಖ ಮಾಡದೆಯೇ, ಆ ಆರೋಪದಲ್ಲಿ ತಿಳಿಸಬಹುದು; ಆದರೆ, ಯಾವ ಪ್ರಕರಣಗಳ ಮೇರೆಗೆ ಆ ಅಪರಾಧವು ದಂಡನೀಯವಾಗುವುದೋ ಆ ಪ್ರಕರಣಗಳನ್ನು ಪ್ರತಿಯೊಂದು ಸಂದರ್ಭದಲ್ಲಿಯೂ ಆ ಆರೋಪದಲ್ಲಿ ಉಲ್ಲೇಖಿಸತಕ್ಕದ್ದು.

(ಡಿ) ಲೋಕ ನೌಕರನು ತನಗಿರುವ ಕಾನೂನುಬದ್ಧ ಅಧಿಕಾರದಿಂದಾಗಿ, ಮಾರಾಟಕ್ಕಾಗಿ ಇಟ್ಟ ಸ್ವತ್ತಿನ ಮಾರಾಟಕ್ಕೆ ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಿದ್ದಕ್ಕಾಗಿ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 219ನೇ ಪ್ರಕರಣದ ಮೇರೆಗೆ 'ಎ' ಯ ಮೇಲೆ ಆರೋಪ ಹೊರಿಸಲಾಗಿದೆ, ಆ ಆರೋಪವು ಆ ಪದಗಳಲ್ಲಿಯೇ ಇರತಕ್ಕದ್ದು.

**235. ಕಾಲ, ಸ್ಥಳ ಮತ್ತು ವ್ಯಕ್ತಿಗೆ ಸಂಬಂಧಿಸಿದ ವಿವರಗಳು.-** (1) ಆರೋಪಿಸಿರುವ ಅಪರಾಧದ ಕಾಲ ಮತ್ತು ಸ್ಥಳದ ಸಂಬಂಧದಲ್ಲಿ ಮತ್ತು ಯಾರೇ ವ್ಯಕ್ತಿಯ (ಇದ್ದರೆ) ವಿರುದ್ಧ ಅಥವಾ ಯಾವ ವಸ್ತುವಿನ ಸಂಬಂಧದಲ್ಲಿ (ಇದ್ದರೆ) ಆ ಅಪರಾಧವನ್ನು ಮಾಡಲಾಯಿತೋ ಆ ವ್ಯಕ್ತಿಯ ಅಥವಾ ಸ್ಥಳದ ಬಗೆಗಿನ ವಿವರಗಳು, ಅವು ಆಪಾದಿತನು ಆರೋಪಿತನಾಗಿರುವ ವಿಷಯದ ಬಗ್ಗೆ ತಿಳಿವಳಿಕೆ ಕೊಡಲು ಯುಕ್ತವಾಗಿ ಸಾಕಾಗುವಷ್ಟರ ಮಟ್ಟಿಗೆ ಆರೋಪದಲ್ಲಿ ಇರತಕ್ಕದ್ದು.

(2) ಆಪಾದಿತನ ಮೇಲೆ ಆಪರಾಧಿಕ ನಂಬಿಕೆ ದ್ರೋಹಕ್ಕಾಗಿ ಅಥವಾ ಹಣದ ಅಥವಾ ಇತರ ಚರಸ್ವತ್ತಿನ ಅಪ್ರಾಮಾಣಿಕ ದುರ್ವಿನಿಯೋಗಕ್ಕಾಗಿ ಆರೋಪ ಹೊರಿಸಿದ್ದರೆ ಯಾವ ಹಣದ ಅಥವಾ ಚರ ಸ್ವತ್ತಿನ ಬಗ್ಗೆ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಲಾಗಿದೆಯೋ ಸಂದರ್ಭಾನುಸಾರ, ಅದರ ಬಗೆಗಿನ ಒಟ್ಟು ಮೊತ್ತವನ್ನು ನಿರ್ದಿಷ್ಟವಾಗಿ ಹೇಳಿದರೆ ಅಥವಾ ಚರಸ್ವತ್ತನ್ನು ವಿವರಿಸಿದರೆ ಮತ್ತು ನಿರ್ದಿಷ್ಟ ಬಾಬುಗಳನ್ನು ಅಥವಾ ನಿಖರ ದಿನಾಂಕಗಳನ್ನು ನಿರ್ದಿಷ್ಟವಾಗಿ ಹೇಳದೆ, ಯಾವ ದಿನಾಂಕಗಳ ನಡುವಿನ ಅವಧಿಯಲ್ಲಿ ಆ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪ ಹೊರಿಸಲಾಗಿದೆಯೋ ಆ ದಿನಾಂಕಗಳನ್ನು ನಿರ್ದಿಷ್ಟಪಡಿಸುವುದು ಪರ್ಯಾಪ್ತವಾಗಿರತಕ್ಕದ್ದು ಮತ್ತು ಹಾಗೆ ರೂಪಿತವಾದ ಆರೋಪವನ್ನು 242ನೇ ಪ್ರಕರಣದ ಅರ್ಥದಲ್ಲಿ ಅಪರಾಧದ ಆರೋಪವೆಂದು ಭಾವಿಸತಕ್ಕದ್ದು:

ಪರಂತು, ಅಂಥ ಮೊದಲನೆಯ ಮತ್ತು ಕೊನೆಯ ದಿನಾಂಕಗಳ ನಡುವಣ ಅವಧಿಯು ಒಂದು ವರ್ಷವನ್ನು ಮೀರತಕ್ಕದ್ದಲ್ಲ.

**236. ಅಪರಾಧವನ್ನು ಮಾಡಿದ ರೀತಿಯನ್ನು ಯಾವಾಗ ನಿರೂಪಿಸಬೇಕು.-** ಆಪಾದಿತನಿಗೆ ಅವನು ಯಾವುದಕ್ಕಾಗಿ ಆರೋಪಿತನಾಗಿರುವನೋ ಆ ವಿಷಯದ ಬಗ್ಗೆ ಸಾಕಷ್ಟು ತಿಳುವಳಿಕೆಯನ್ನು 234 ಮತ್ತು 235ನೇ ಪ್ರಕರಣಗಳಲ್ಲಿ

ನಮೂದಿಸಲಾದ ವಿವರಗಳನ್ನು ಕೊಡುವುದಿಲ್ಲವೆನಿಸುವಂಥ ಸ್ವರೂಪದ ಮೊಕದ್ದಮೆಯಾಗಿದ್ದರೆ, ಆರೋಪಿತ ಅಪರಾಧವನ್ನು ಮಾಡಿದ ರೀತಿಯ ವಿವರಗಳೂ ಸಹ, ಆ ಉದ್ದೇಶಕ್ಕಾಗಿ ಸಾಕಾಗುವಷ್ಟರಮಟ್ಟಿಗೆ ಆರೋಪದಲ್ಲಿ ಒಳಗೊಂಡಿರತಕ್ಕದ್ದು.

*ದೃಷ್ಟಾಂತಗಳು*

(ಎ) 'ಎ'ಯು ಒಂದು ನಿರ್ದಿಷ್ಟ ವಸ್ತುವನ್ನು ಒಂದು ನಿರ್ದಿಷ್ಟ ಕಾಲದಲ್ಲಿ ಮತ್ತು ಸ್ಥಳದಲ್ಲಿ ಕಳವು ಮಾಡಿದ್ದಕ್ಕಾಗಿ ಆಪಾದಿತನಾಗಿದ್ದಾನೆ. ಕಳವು ಮಾಡಿದ ರೀತಿಯನ್ನು ಆರೋಪದಲ್ಲಿ ನಿರೂಪಿಸುವ ಅಗತ್ಯವಿಲ್ಲ.

(ಬಿ) 'ಎ'ಯು ನಿರ್ದಿಷ್ಟ ಕಾಲದಲ್ಲಿ ಮತ್ತು ಸ್ಥಳದಲ್ಲಿ 'ಬಿ'ಗೆ ವಂಚನೆ ಮಾಡಿದ್ದಕ್ಕಾಗಿ ಆಪಾದಿತನಾಗಿದ್ದಾನೆ. 'ಎ'ಯು 'ಬಿ' ಗೆ ಯಾವ ರೀತಿಯಲ್ಲಿ ವಂಚನೆ ಮಾಡಿದ್ದಾನೆಂಬುದನ್ನು ಆರೋಪದಲ್ಲಿ ನಿರೂಪಿಸತಕ್ಕದ್ದು.

(ಸಿ) 'ಎ'ಯು ಒಂದು ನಿರ್ದಿಷ್ಟ ಸ್ಥಳದಲ್ಲಿ ಮತ್ತು ಒಂದು ನಿರ್ದಿಷ್ಟ ಕಾಲದಲ್ಲಿ ಸುಳ್ಳು ಸಾಕ್ಷ್ಯ ನೀಡಿದುದಕ್ಕಾಗಿ ಆಪಾದಿತನಾಗಿದ್ದಾನೆ. 'ಎ'ಯು ನೀಡಿದ ಸಾಕ್ಷ್ಯದಲ್ಲಿ ಸುಳ್ಳೆಂದು ಆರೋಪಿಸಿರುವ ಭಾಗವನ್ನು ಆರೋಪದಲ್ಲಿ ನಿರೂಪಿಸತಕ್ಕದ್ದು.

(ಡಿ) 'ಎ'ಯು ಒಂದು ನಿರ್ದಿಷ್ಟ ಸ್ಥಳದಲ್ಲಿ ಮತ್ತು ಒಂದು ನಿರ್ದಿಷ್ಟ ಕಾಲದಲ್ಲಿ 'ಬಿ' ಎಂಬ ಲೋಕನೌಕರನಿಗೆ ಅವನು ತನ್ನ ಸಾರ್ವಜನಿಕ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವಾಗ ಅಡ್ಡಿಪಡಿಸಿದನೆಂದು ಆಪಾದಿತನಾಗಿದ್ದಾನೆ. 'ಎ' ಎಂಬಾತನು ಯಾವ ರೀತಿಯಲ್ಲಿ 'ಬಿ'ಗೆ, ಅವನು ಅವನ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವಾಗ ಅಡ್ಡಿಪಡಿಸಿದನೆಂಬುದನ್ನು ಆರೋಪದಲ್ಲಿ ನಿರೂಪಿಸತಕ್ಕದ್ದು.

(ಇ) 'ಎ'ಯು ಒಂದು ನಿರ್ದಿಷ್ಟ ಸ್ಥಳದಲ್ಲಿ ಮತ್ತು ಒಂದು ನಿರ್ದಿಷ್ಟ ಕಾಲದಲ್ಲಿ 'ಬಿ'ಯನ್ನು ಕೊಲೆ ಮಾಡಿದನೆಂದು ಆಪಾದಿತನಾಗಿದ್ದಾನೆ. 'ಎ'ಯು ಯಾವ ರೀತಿಯಲ್ಲಿ 'ಬಿ'ಯನ್ನು ಕೊಲೆ ಮಾಡಿದನೆಂಬುದನ್ನು ಆರೋಪದಲ್ಲಿ ನಿರೂಪಿಸುವ ಅಗತ್ಯವಿಲ್ಲ.

(ಎಫ್) 'ಎ'ಯು 'ಬಿ'ಯನ್ನು ದಂಡನೆಯಿಂದ ತಪ್ಪಿಸುವ ಸಲುವಾಗಿ ಕಾನೂನಿನ ನಿರ್ದೇಶನಕ್ಕೆ ಅವಿಧೇಯತೆ ತೋರಿದ್ದಾನೆಂದು ಆಪಾದಿತನಾಗಿದ್ದಾನೆ. ಆರೋಪಿಸಿರುವ ಅವಿಧೇಯತೆಯನ್ನು ಮತ್ತು ಉಲ್ಲಂಘಿಸಿದ ಕಾನೂನನ್ನು ಆರೋಪದಲ್ಲಿ ನಿರೂಪಿಸತಕ್ಕದ್ದು.

**237. ಯಾವ ಕಾನೂನಿನ ಮೇರೆಗೆ ಅಪರಾಧವು ದಂಡನೀಯವಾಗುವುದೋ ಆ ಕಾನೂನಿನ ಅರ್ಥದಲ್ಲಿಯೇ ಆರೋಪದಲ್ಲಿನ ಪದಗಳ ಅರ್ಥವನ್ನು ಗ್ರಹಿಸುವುದು.-** ಅಪರಾಧವನ್ನು ವರ್ಣಿಸುವಾಗ ಪ್ರತಿಯೊಂದು ಆರೋಪದಲ್ಲಿ ಬಳಸಿರುವ ಪದಗಳನ್ನು ಅಂಥ ಅಪರಾಧವು ಯಾವ ಕಾನೂನಿನ ಮೇರೆಗೆ ದಂಡನೀಯವಾಗುವುದೋ ಆ ಕಾನೂನಿನಲ್ಲಿ ಅನುಕ್ರಮವಾಗಿ ಅವುಗಳಿಗೆ ಕೊಟ್ಟಿರುವ ಅರ್ಥದಲ್ಲಿಯೇ ಬಳಸಲಾಗಿದೆಯೆಂದು ಭಾವಿಸತಕ್ಕದ್ದು.

**238. ತಪ್ಪುಗಳ ಪರಿಣಾಮ.-** ಅಪರಾಧವನ್ನು ಅಥವಾ ಆರೋಪದಲ್ಲಿ ತಿಳಿಸಬೇಕೆಂದು ಅಗತ್ಯಪಡಿಸಿರುವ ವಿವರಗಳನ್ನು ತಿಳಿಸುವಾಗ ಆದ ಯಾವುದೇ ತಪ್ಪನ್ನು ಮತ್ತು ಆ ಅಪರಾಧವನ್ನು ಅಥವಾ ಆ ವಿವರಗಳನ್ನು ತಿಳಿಸುವುದರಲ್ಲಿ ಆದ ಲೋಪವನ್ನು ಅಂಥ ತಪ್ಪು ಅಥವಾ ಲೋಪವು ಆಪಾದಿತನನ್ನು ವಾಸ್ತವವಾಗಿ ದಾರಿ ತಪ್ಪಿಸಿದ ಹೊರತು ಮತ್ತು ಅದು ನ್ಯಾಯ ವಿಫಲತೆಗೆ ಅನುವು ಮಾಡಿಕೊಟ್ಟಿದ್ದ ಹೊರತು, ಮೊಕದ್ದಮೆಯ ಯಾವುದೇ ಹಂತದಲ್ಲಿ ಮುಖ್ಯವೆಂದು ಪರಿಗಣಿಸತಕ್ಕದ್ದಲ್ಲ.

*ದೃಷ್ಟಾಂತಗಳು*

(ಎ) 'ಎ'ನ ಮೇಲೆ ಅವನು "ಖೋಟಾ ನಾಣ್ಯವು ಅವನ ಸ್ವಾಧೀನಕ್ಕೆ ಬಂದಾಗ ಅದು ಖೋಟಾ ಎಂದು ತಿಳಿದಿದ್ದೂ ಆ ನಾಣ್ಯವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದನು" ಎಂದು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 180ನೇ ಪ್ರಕರಣದ ಮೇರೆಗೆ ಆರೋಪ ಹೊರಿಸಲಾಗಿದೆ. ಆರೋಪದಲ್ಲಿ ‟ಮೋಸದಿಂದ‟ ಎಂಬ ಪದವನ್ನು ಬಿಟ್ಟುಬಿಡಲಾಗಿದೆ. ಆ ಪದವನ್ನು ಬಿಟ್ಟುಬಿಟ್ಟಿರುವುದರಿಂದಾಗಿ 'ಎ'ಗೆ ವಾಸ್ತವವಾಗಿ ತಪ್ಪು ಭಾವನೆ ಉಂಟಾಗಿದೆ ಎಂದು ಕಂಡುಬಂದ ಹೊರತು ಆ ತಪ್ಪನ್ನು ಮುಖ್ಯವೆಂದು ಪರಿಗಣಿಸತಕ್ಕದ್ದಲ್ಲ.

(ಬಿ) 'ಎ'ನು 'ಬಿ'ಗೆ ವಂಚನೆ ಮಾಡಿದ್ದಾನೆಂದು 'ಎ'ಯ ಮೇಲೆ ಆರೋಪ ಹೊರಿಸಲಾಗಿದೆ ಮತ್ತು ಆತನು 'ಬಿ'ಯನ್ನು ವಂಚಿಸಿದ ರೀತಿಯನ್ನು ಆರೋಪದಲ್ಲಿ ನಿರೂಪಿಸಿಲ್ಲ ಅಥವಾ ತಪ್ಪಾಗಿ ನಿರೂಪಿಸಲಾಗಿದೆ. 'ಎ'ನು ಸ್ವತಃ ತಾನೇ ವಾದ ಮಂಡಿಸುತ್ತಾನೆ. ಸಾಕ್ಷಿದಾರರನ್ನು ಕರೆಸುತ್ತಾನೆ ಮತ್ತು ಆ ವ್ಯವಹಾರದ ಬಗ್ಗೆ ತನ್ನದೇ ವಿವರಣೆಯನ್ನು ಕೊಡುತ್ತಾನೆ. ವಂಚನೆಯ ರೀತಿಯನ್ನು ನಿರೂಪಿಸದಿರುವುದು ಮುಖ್ಯವಲ್ಲವೆಂದು ನ್ಯಾಯಾಲಯವು ಇದರಿಂದ ಊಹಿಸಬಹುದು.

(ಸಿ) 'ಎ'ನು 'ಬಿ'ಗೆ ವಂಚನೆ ಮಾಡಿದ್ದಾನೆಂದು ಆರೋಪ ಹೊರಿಸಲಾಗಿದೆ ಮತ್ತು ಅವನು 'ಎ'ಯು 'ಬಿ'ಯನ್ನು ವಂಚಿಸಿದ ರೀತಿಯನ್ನು ಆರೋಪದಲ್ಲಿ ನಿರೂಪಿಸಿಲ್ಲ. 'ಎ' ಮತ್ತು 'ಬಿ' ಇವರ ನಡುವೆ ಅನೇಕ ವ್ಯವಹಾರಗಳು ಆಗಿದ್ದವು ಮತ್ತು ಅವುಗಳಲ್ಲಿ ಯಾವುದಕ್ಕೆ ಈ ಆರೋಪವು ಸಂಬಂಧಿಸಿದೆ ಎಂದು ತಿಳಿದುಕೊಳ್ಳಲು 'ಎ'ಗೆ ಅವಕಾಶವಿರಲಿಲ್ಲ; ಆದ್ದರಿಂದ 'ಎ'ಯು ತನ್ನ ಪ್ರತಿವಾದವನ್ನು ಮಂಡಿಸಲಿಲ್ಲ. ವಂಚನೆಯ ರೀತಿಯನ್ನು ನಮೂದಿಸದಿರುವುದು ಈ ಮೊಕದ್ದಮೆಯಲ್ಲಿ ಮುಖ್ಯವಾದ ತಪ್ಪೆಂದು ನ್ಯಾಯಾಲಯವು ಇಂಥ ಸಂಗತಿಗಳಿಂದ ಊಹಿಸಬಹುದು.

(ಡಿ) 'ಎ'ಯು 2023ರ ಜನವರಿ 21ರಂದು ಖುದಾಬಕ್ಷನ ಕೊಲೆ ಮಾಡಿದ್ದಕ್ಕಾಗಿ 'ಎ'ಯ ಮೇಲೆ ಆರೋಪ ಹೊರಿಸಲಾಗಿದೆ. ವಾಸ್ತವವಾಗಿ ಕೊಲೆಯಾದ ವ್ಯಕ್ತಿಯ ಹೆಸರು ಹೈದರ್‌ಬಕ್ಷ ಮತ್ತು ಕೊಲೆಯ ದಿನಾಂಕವು, 20ನೇ ಜನವರಿ 2023. ಈ ಒಂದು ಕೊಲೆಯ ಮೇಲೆ ಹೊರತು ಇತರ ಯಾವ ಕೊಲೆಯ ಬಗೆಗೂ 'ಎ'ಯು ಎಂದೂ ಆರೋಪಿತನಾಗಿರಲಿಲ್ಲ ಮತ್ತು ಹೈದರ್‌ಬಕ್ಷನ ಮೊಕದ್ದಮೆಗೆ ಸಂಬಂಧಿಸಿದ್ದ ವಿಚಾರಣೆಯನ್ನು, ಮ್ಯಾಜಿಸ್ಟ್ರೇಟನ ಸಮ್ಮುಖದಲ್ಲಿ ನಡೆದಿತ್ತು ಎಂಬುದನ್ನು ಕೇಳಿದ್ದನು. ಈ ಸಂಗತಿಗಳಿಂದ 'ಎ'ಗೆ ತಪ್ಪು ಭಾವನೆ ಉಂಟಾಗಿಲ್ಲವೆಂದು ಮತ್ತು ಆರೋಪದಲ್ಲಿರುವ ತಪ್ಪು ಮುಖ್ಯವಲ್ಲವೆಂದು ನ್ಯಾಯಾಲಯವು ಊಹಿಸಬಹುದು.

(ಇ) 'ಎ'ಯು ಮೇಲೆ 2023ರ ಜನವರಿ 20ರಂದು ಹೈದರ್‌ಬಕ್ಷ ಎಂಬುವನನ್ನು ಮತ್ತು (ಆ ಕೊಲೆಗಾಗಿ ತನ್ನನ್ನು ದಸ್ತಗಿರಿ ಮಾಡಲು ಯತ್ನಿಸಿದ) 2023ರ ಜನವರಿ 21ರಂದು ಖುದಾಬಕ್ಷ ಎಂಬುವನನ್ನು ಕೊಲೆ ಮಾಡಿದ್ದಕ್ಕಾಗಿ ಆರೋಪ ಹೊರಿಸಲಾಗಿದೆ. ಹೈದರ್‌ಬಕ್ಷನ ಕೊಲೆಗಾಗಿ ಆರೋಪಿತನಾದಾಗ ಅವನನ್ನು ಖುದಾಬಕ್ಷನ ಕೊಲೆಗಾಗಿ ಆರೋಪಣೆ ವಿಚಾರ ಮಾಡಲಾಯಿತು. 'ಎ'ಯು ತನ್ನ ಪ್ರತಿವಾದ ಮಂಡಿಸುವಾಗ ಹಾಜರಿದ್ದ ಸಾಕ್ಷಿದಾರರು ಹೈದರ್‌ಬಕ್ಷನ ಮೊಕದ್ದಮೆಯಲ್ಲಿ ಸಹ ಸಾಕ್ಷಿದಾರರಾಗಿದ್ದರು. ಇದರಿಂದ 'ಎ'ಗೆ ತಪ್ಪು ಭಾವನೆ ಉಂಟಾಗಿದೆ ಮತ್ತು ಆ ತಪ್ಪು ಮುಖ್ಯವೆಂದು ನ್ಯಾಯಾಲಯವು ಊಹಿಸಬಹುದು.

**239. ನ್ಯಾಯಾಲಯವು ಆರೋಪವನ್ನು ಬದಲಾಯಿಸಬಹುದು.-** (1) ಯಾವುದೇ ನ್ಯಾಯಾಲಯವು ತೀರ್ಪನ್ನು ನೀಡುವ ಮುನ್ನ ಯಾವುದೇ ಸಮಯದಲ್ಲಿ ಯಾವುದೇ ಆರೋಪದಲ್ಲಿ ಬದಲಾವಣೆ ಮಾಡಬಹುದು ಅಥವಾ ಅದಕ್ಕೆ ಸೇರಿಸಬಹುದು.

(2) ಅಂಥ ಪ್ರತಿಯೊಂದು ಬದಲಾವಣೆಯನ್ನು ಅಥವಾ ಸೇರ್ಪಡೆಯನ್ನು ಆಪಾದಿತನಿಗೆ ಓದಿ ಹೇಳತಕ್ಕದ್ದು ಮತ್ತು ವಿವರಿಸತಕ್ಕದ್ದು.

(3) ಆರೋಪದಲ್ಲಿ ಮಾಡಿದ ಬದಲಾವಣೆಯಿಂದಾಗಿ ಅಥವಾ ಸೇರ್ಪಡೆಯಿಂದಾಗಿ ಅಧಿವಿಚಾರಣೆಯನ್ನು ಕೂಡಲೇ ಮುಂದುವರಿಸುವುದರಿಂದ, ಆಪಾದಿತನು ತನ್ನ ಪ್ರತಿವಾದವನ್ನು ಮಂಡಿಸಲು ಅಥವಾ ಪ್ರಾಸಿಕ್ಯೂಟರನಿಂದ ಮೊಕದ್ದಮೆಯ ನಿರ್ವಹಣೆಗೆ ಪ್ರತಿಕೂಲವಾಗುವುದಿಲ್ಲವೆಂದು, ನ್ಯಾಯಾಲಯವು ಅಭಿಪ್ರಾಯಪಟ್ಟರೆ, ನ್ಯಾಯಾಲಯವು ತನ್ನ ವಿವೇಚನೆಯ ಮೇರೆಗೆ, ಅಂಥ ಬದಲಾವಣೆ ಅಥವಾ ಸೇರ್ಪಡೆಯ ತರುವಾಯ, ಬದಲಾವಣೆ ಮಾಡಿದ ಅಥವಾ ಸೇರ್ಪಡೆ ಮಾಡಿದ ಆರೋಪವು ಮೂಲ ಆರೋಪವೆಂಬಂತೆ ಅಧಿವಿಚಾರಣೆಯನ್ನು ಮುಂದುವರಿಸಬಹುದು.

(4) ಆರೋಪದಲ್ಲಿ ಮಾಡಿದ ಬದಲಾವಣೆಯಿಂದಾಗಿ ಅಥವಾ ಸೇರ್ಪಡೆಯಿಂದಾಗಿ, ಅಧಿವಿಚಾರಣೆಯನ್ನು ಕೂಡಲೇ ಮುಂದುವರಿಸುವುದರಿಂದ ಆಪಾದಿತನು ತನ್ನ ಪ್ರತಿವಾದವನ್ನು ಮಂಡಿಸಲು ಅಥವಾ ಪ್ರಾಸಿಕ್ಯೂಟರನಿಂದ ಮೊಕದ್ದಮೆಯ ನಿರ್ವಹಣೆಗೆ ಪ್ರತಿಕೂಲವಾಗುವುದೆಂದು, ನ್ಯಾಯಾಲಯವು ಅಭಿಪ್ರಾಯಪಟ್ಟರೆ ನ್ಯಾಯಾಲಯವು ಹೊಸ ಅಧಿವಿಚಾರಣೆಗಾಗಿ ನಿರ್ದೇಶಿಸಬಹುದು ಅಥವಾ ಅವಶ್ಯಕವಾಗಬಹುದಾದಂಥ ಅವಧಿಯವರೆಗೆ ಅಧಿವಿಚಾರಣೆಯನ್ನು ಮುಂದೂಡಬಹುದು.

(5) ಬದಲಾವಣೆ ಮಾಡಿದ ಅಥವಾ ಸೇರ್ಪಡೆ ಮಾಡಿದ ಆರೋಪದಲ್ಲಿ ಹೇಳಿರುವ ಅಪರಾಧವು, ಅದರ ಪ್ರಾಸಿಕ್ಯೂಷನ್ನಿಗಾಗಿ ಮುಂಚಿತವಾಗಿಯೇ ಮಂಜೂರಾತಿ ಪಡೆಯುವುದು ಅವಶ್ಯಕವಿರುವ ಅಪರಾಧವಾಗಿದ್ದರೆ, ಯಾವ ಸಂಗತಿಗಳ ಮೇಲೆ ಬದಲಾವಣೆ ಮಾಡಿ ಅಥವಾ ಸೇರ್ಪಡೆ ಮಾಡಿ ಆರೋಪವನ್ನು ಮಾಡಲಾಯಿತೋ ಅವೇ ಸಂಗತಿಗಳ ಮೇಲೆ ಪ್ರಾಸಿಕ್ಯೂಷನ್ನಿಗಾಗಿ ಆಗಲೇ ಮುಂಚಿತವಾಗಿಯೇ ಮಂಜೂರಾತಿ ಪಡೆದಿದ್ದ ಹೊರತು, ಅಂಥ ಮಂಜೂರಾತಿ ಪಡೆಯುವವರೆಗೆ ಮೊಕದ್ದಮೆಯನ್ನು ಮುಂದುವರಿಸತಕ್ಕದ್ದಲ್ಲ.

**240. ಆರೋಪದಲ್ಲಿ ಬದಲಾವಣೆಯಾದಾಗ ಸಾಕ್ಷಿದಾರರನ್ನು ಪುನಃ ಕರೆಯುವುದು.-** ಅಧಿವಿಚಾರಣೆಯು ಪ್ರಾರಂಭವಾದ ತರುವಾಯ ನ್ಯಾಯಾಲಯವು, ಆರೋಪದಲ್ಲಿ ಬದಲಾವಣೆ ಮಾಡಿದಾಗ ಅಥವಾ ಸೇರಿಸಿದಾಗ, ಪ್ರಾಸಿಕ್ಯೂಟರನಿಗೆ ಮತ್ತು ಆಪಾದಿತನಿಗೆ,-

(ಎ) ಕಿರುಕುಳದ ಸಲುವಾಗಿ ಅಥವಾ ವಿಳಂಬ ಮಾಡುವ ಅಥವಾ ನ್ಯಾಯೋದ್ದೇಶಗಳನ್ನು ನಿಷ್ಫಲಗೊಳಿಸುವ ಉದ್ದೇಶಕ್ಕಾಗಿ, ಅಂಥ ಸಾಕ್ಷಿದಾರರನ್ನು ಪುನಃ ಕರೆಯಲು ಅಥವಾ ಪುನಃ ಪರೀಕ್ಷಿಸಲು ಸಂದರ್ಭಾನುಸಾರ ಪ್ರಾಸಿಕ್ಯೂಟರನು ಅಥವಾ ಆಪಾದಿತನು ಇಚ್ಛಿಸುತ್ತಾನೆಂದು ನ್ಯಾಯಾಲಯವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಪರ್ಯಾಲೋಚಿಸಿದ ಹೊರತು, ಈಗಾಗಲೇ ಪರೀಕ್ಷೆ ಮಾಡಿರಬಹುದಾದ ಯಾರೇ ಸಾಕ್ಷಿದಾರನನ್ನು ಅಂಥ ಬದಲಾವಣೆಗೆ ಅಥವಾ ಸೇರ್ಪಡೆಗೆ ಸಂಬಂಧಿಸಿದಂತೆ ಪುನಃ ಕರೆಯಲು ಅಥವಾ ಪುನಃ ಸಮನ್ ಮಾಡಲು ಮತ್ತು ಪರೀಕ್ಷೆ ಮಾಡಲು ಅವಕಾಶ ನೀಡತಕ್ಕದ್ದು.

(ಬಿ) ಯಾರ ಸಾಕ್ಷಿಯು ಮುಖ್ಯವೆಂದು ನ್ಯಾಯಾಲಯವು ಭಾವಿಸುತ್ತದೋ ಆ ಯಾರೇ ಹೆಚ್ಚಿನ ಸಾಕ್ಷಿದಾರನನ್ನು ಕರೆಯಲು ಸಹ ಅವಕಾಶ ನೀಡತಕ್ಕದ್ದು.

*ಬಿ.- ಆರೋಪಗಳ ಒಂದುಗೂಡಿಸುವಿಕೆ*

**241. ವಿಭಿನ್ನ ಅಪರಾಧಗಳಿಗಾಗಿ ಪ್ರತ್ಯೇಕ ಆರೋಪಗಳು.-** (1) ಯಾರೇ ವ್ಯಕ್ತಿಯು ಆಪಾದಿತನಾಗಿರುವ ಪ್ರತಿಯೊಂದು ವಿಭಿನ್ನ ಅಪರಾಧಕ್ಕೂ ಪ್ರತ್ಯೇಕ ಆರೋಪವಿರತಕ್ಕದ್ದು ಮತ್ತು ಅಂಥ ಪ್ರತಿಯೊಂದು ಆರೋಪದ ಬಗ್ಗೆ ಪ್ರತ್ಯೇಕವಾಗಿ ಅಧಿವಿಚಾರಣೆ ಮಾಡತಕ್ಕದ್ದು:

ಪರಂತು, ಆಪಾದಿತ ವ್ಯಕ್ತಿಯು ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸಿ ತನ್ನ ವಿರುದ್ಧ ಮಾಡಿದ ಎಲ್ಲ ಆರೋಪಗಳ ಬಗ್ಗೆ ಅಥವಾ ಆ ಆರೋಪಗಳಲ್ಲಿ ಕೆಲವು ಆರೋಪಗಳ ಬಗ್ಗೆ ಒಟ್ಟಿಗೆ ವಿಚಾರಣೆ ಮಾಡಬೇಕೆಂದು ಇಚ್ಛಿಸಿದರೆ ಮತ್ತು ಅದರಿಂದ ಅಂಥ ವ್ಯಕ್ತಿಗೆ ಪ್ರತಿಕೂಲವಾಗುವ ಸಂಭವವಿಲ್ಲವೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಟ್ಟರೆ, ಅವನು ಎಲ್ಲ ಆರೋಪಗಳ ಬಗ್ಗೆ ಅಥವಾ ಆ ಆರೋಪಗಳಲ್ಲಿ ಕೆಲವು ಆರೋಪಗಳ ಬಗ್ಗೆ ಒಟ್ಟಿಗೆ ಅಧಿವಿಚಾರಣೆ ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ, 242, 243, 244 ಮತ್ತು 246ನೇ ಪ್ರಕರಣಗಳ ಪ್ರವರ್ತನೆಗೆ ಬಾಧಕವಾಗತಕ್ಕದ್ದಲ್ಲ.

*ದೃಷ್ಟಾಂತ*

'ಎ'ಯು ಒಂದು ಸಂದರ್ಭದಲ್ಲಿ ಕಳವು ಮಾಡಿದ್ದಕ್ಕಾಗಿ ಮತ್ತು ಇನ್ನೊಂದು ಸಂದರ್ಭದಲ್ಲಿ ತೀವ್ರ ಗಾಯ ಉಂಟು ಮಾಡಿದ್ದಕ್ಕಾಗಿ ಆಪಾದಿತನಾಗಿದ್ದಾನೆ. ಕಳವು ಮಾಡಿದ್ದಕ್ಕಾಗಿ ಮತ್ತು ತೀವ್ರ ಗಾಯ ಉಂಟುಮಾಡಿದ್ದಕ್ಕಾಗಿ 'ಎ'ನ ಮೇಲೆ ಪ್ರತ್ಯೇಕವಾಗಿ ಆರೋಪ ಹೊರಿಸತಕ್ಕದ್ದು ಮತ್ತು ಅವನನ್ನು ಪ್ರತ್ಯೇಕವಾಗಿ ಅಧಿವಿಚಾರಣೆ ಮಾಡತಕ್ಕದ್ದು.

**242. ಒಂದು ವರ್ಷದೊಳಗಿನ ಒಂದೇ ರೀತಿಯ ಅಪರಾಧಗಳನ್ನು ಒಟ್ಟಿಗೆ ಆರೋಪಿಸಬಹುದು.-** (1) ಯಾರೇ ವ್ಯಕ್ತಿಯು, ಒಂದಕ್ಕಿಂತ ಹೆಚ್ಚಿನ ಒಂದೇ ರೀತಿಯ ಅಪರಾಧಗಳನ್ನು, ಒಂದನೇ ಅಪರಾಧದಿಂದ ಕೊನೆಯ ಅಪರಾಧದವರೆಗೆ, ಹನ್ನೆರಡು ತಿಂಗಳ ಅವಧಿಯಲ್ಲಿ ಒಬ್ಬನೇ ವ್ಯಕ್ತಿಗೆ ಸಂಬಂಧಪಟ್ಟಂತೆ ಅಥವಾ ಅನ್ಯಥಾ ಅಪರಾಧ ಮಾಡಿದ್ದಾನೆಂದೂ ಆಪಾದಿತನಾದಾಗ, ಐದಕ್ಕೆ ಮೀರದ ಅಪರಾಧಗಳ ಬಗ್ಗೆ ಅವನ ಮೇಲೆ ಆರೋಪ ಹೊರಿಸಬಹುದು ಮತ್ತು ಒಂದೇ ಬಾರಿಗೆ ಅಧಿವಿಚಾರಣೆ ಮಾಡಬಹುದು.

(2) ಅಪರಾಧಗಳು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45) ಅಥವಾ ಯಾವುದೇ ವಿಶೇಷ ಕಾನೂನಿನ ಅಥವಾ ಸ್ಥಳೀಯ ಕಾನೂನಿನ ಒಂದೇ ಪ್ರಕರಣದ ಮೇರೆಗೆ ಒಂದೇ ಪ್ರಮಾಣದ ದಂಡನೆಯಿಂದ ದಂಡನೀಯವಾದವುಗಳಾಗಿದ್ದರೆ, ಅವು ಒಂದೇ ಸ್ವರೂಪದ್ದಾಗಿರುತ್ತವೆ:

ಪರಂತು, ಈ ಪ್ರಕರಣದ ಉದ್ದೇಶಗಳಿಗಾಗಿ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 303ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸದರಿ ಸಂಹಿತೆಯ 305ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವೆಂಬಂತೆ ಒಂದೇ ರೀತಿಯ ಅಪರಾಧವೆಂಬುದಾಗಿ ಭಾವಿಸತಕ್ಕದ್ದು ಮತ್ತು ಸದರಿ ಸಂಹಿತೆಯ ಅಥವಾ ಯಾವುದೇ ವಿಶೇಷ ಕಾನೂನಿನ ಅಥವಾ ಸ್ಥಳೀಯ ಕಾನೂನಿನ ಯಾವುದೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು, ಅಂಥ ಅಪರಾಧವನ್ನು ಮಾಡುವ ಪ್ರಯತ್ನವೇ ಅಪರಾಧವೆಂದಾದರೆ ಅಂಥ ಪ್ರಯತ್ನವನ್ನು ಅದೇ ರೀತಿಯ ಅಪರಾಧವೆಂಬುದಾಗಿ ಭಾವಿಸತಕ್ಕದ್ದು.

**243. ಒಂದಕ್ಕಿಂತ ಹೆಚ್ಚು ಅಪರಾಧಗಳ ಬಗ್ಗೆ ಅಧಿವಿಚಾರಣೆ.-** (1) ಒಂದೇ ಸರಣಿಯ ಕೃತ್ಯಗಳು ಒಂದೇ ವ್ಯವಹಾರವೆನಿಸುವಂತೆ ಪರಸ್ಪರ ಸಂಬಂಧ ಹೊಂದಿದ್ದರೆ, ಒಬ್ಬನೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಅಪರಾಧಗಳನ್ನು ಮಾಡಿದ್ದರೆ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಆರೋಪ ಹೊರಿಸಬಹುದು ಮತ್ತು ಒಂದೇ ಬಾರಿಗೆ ಅಧಿವಿಚಾರಣೆ ಮಾಡಬಹುದು.

(2) 235ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಅಥವಾ 242ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಪಬಂಧಿಸಲಾದಂತೆ ಆಪರಾಧಿಕ ನಂಬಿಕೆ ದ್ರೋಹದ ಅಥವಾ ಸ್ವತ್ತಿನ ಅಪ್ರಾಮಾಣಿಕ ದುರ್ವಿನಿಯೋಗದ ಒಂದು ಅಥವಾ ಹೆಚ್ಚು ಅಪರಾಧಗಳಿಗಾಗಿ ಆರೋಪಿತನಾದ ವ್ಯಕ್ತಿಯು, ಆ ಅಪರಾಧ ಅಥವಾ ಆ ಅಪರಾಧಗಳನ್ನು ಮಾಡಲು ಅನುವು ಮಾಡಿಕೊಡುವ ಅಥವಾ ಅವುಗಳನ್ನು ಮುಚ್ಚಿಡುವ ಉದ್ದೇಶಕ್ಕಾಗಿ, ಸುಳ್ಳು ಲೆಕ್ಕಗಳನ್ನು ಬರೆಯುವ ಒಂದು ಅಥವಾ ಹೆಚ್ಚು ಅಪರಾಧಗಳನ್ನು ಮಾಡಿದ್ದಕ್ಕಾಗಿ, ಆಪಾದಿತನಾದಾಗ ಅವನ ಮೇಲೆ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಆರೋಪ ಹೊರಿಸಬಹುದು ಮತ್ತು ಒಂದೇ ಬಾರಿಗೆ ಅಧಿವಿಚಾರಣೆ ಮಾಡಬಹುದು.

(3) ಆರೋಪಿಸಿರುವ ಕೃತ್ಯಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವ ಕಾನೂನಿನಲ್ಲಿ ಅಪರಾಧಗಳನ್ನು ಪರಿಭಾಷಿಸಲಾಗಿದೆಯೋ ಅಥವಾ ದಂಡನೀಯವೆಂದು ಹೇಳಲಾಗಿದೆಯೋ ಆ ಯಾವುದೇ ಕಾನೂನಿನ ಎರಡು ಅಥವಾ ಹೆಚ್ಚು ಪ್ರತ್ಯೇಕ ಪರಿಭಾಷೆ ವ್ಯಾಪ್ತಿಯ ಒಳಗೆ ಬರುವ ಅಪರಾಧಗಳಾಗಿದ್ದರೆ, ಅವುಗಳ ಬಗ್ಗೆ ಆರೋಪಿತನಾದ ವ್ಯಕ್ತಿಯ ಮೇಲೆ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಆರೋಪ ಹೊರಿಸಬಹುದು ಮತ್ತು ಒಂದೇ ಬಾರಿಗೆ ಅಧಿವಿಚಾರಣೆ ಮಾಡಬಹುದು.

(4) ಯಾವ ಹಲವು ಕೃತ್ಯಗಳಲ್ಲಿ ಒಂದು ಕೃತ್ಯವೇ ಸ್ವತಃ ಅಥವಾ ಒಂದಕ್ಕಿಂತ ಹೆಚ್ಚು ಕೃತ್ಯಗಳು ಸೇರಿ ಅಪರಾಧವೆಂದಾಗುತ್ತದೋ ಆ ಕೃತ್ಯಗಳೆಲ್ಲವೂ ಸೇರಿ ಬೇರೊಂದು ಅಪರಾಧವೆಂದಾಗುವುದಾದರೆ ಅಂಥ ಕೃತ್ಯಗಳೂ ಒಟ್ಟು ಸೇರಿ ಆದ ಅಪರಾಧವನ್ನು ಮತ್ತು ಅಂಥ ಯಾವುದೇ ಒಂದು ಅಥವಾ ಹೆಚ್ಚು ಕೃತ್ಯಗಳಿಂದ ಆದ ಅಪರಾಧವನ್ನು ಆರೋಪಿತನಾದ ವ್ಯಕ್ತಿಯ ಮೇಲೆ ಹೊರಿಸಬಹುದು ಮತ್ತು ಒಂದೇ ಅಧಿವಿಚಾರಣೆಯಲ್ಲಿ ವಿಚಾರಣೆ ಮಾಡಬಹುದು.

(5) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 9ನೇ ಪ್ರಕರಣಕ್ಕೆ ಬಾಧಕವಾಗತಕ್ಕದ್ದಲ್ಲ.

***(1)ನೇ ಉಪಪ್ರಕರಣಕ್ಕೆ ದೃಷ್ಟಾಂತಗಳು***

(ಎ) 'ಎ'ಯು ಕಾನೂನುಬದ್ಧ ಅಭಿರಕ್ಷೆಯಲ್ಲಿರುವ 'ಬಿ'ಯನ್ನು ಬಿಡಿಸುತ್ತಾನೆ ಮತ್ತು ಹಾಗೆ ಮಾಡುವಾಗ 'ಬಿ'ಯು ಯಾರ ಅಭಿರಕ್ಷೆಯಲ್ಲಿದ್ದನೋ ಆ 'ಸಿ' ಎಂಬ ಕಾನ್ಸ್‌ಟೇಬಲ್‌ನಿಗೆ ತೀವ್ರ ಗಾಯವುಂಟು ಮಾಡುತ್ತಾನೆ. 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 121ನೇ ಪ್ರಕರಣದ (2)ನೇ ಉಪಪ್ರಕರಣ ಮತ್ತು 263ನೇ ಪ್ರಕರಣದ ಮೇರೆಗಿನ ಅಪರಾಧಗಳಿಗಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಬಿ) 'ಎ'ಯು ಅತ್ಯಾಚಾರ ಮಾಡುವ ಉದ್ದೇಶದಿಂದ ಹಗಲು ವೇಳೆ ಮನೆಗೆ ಕನ್ನ ಹಾಕುತ್ತಾನೆ ಮತ್ತು ಹಾಗೆ ಪ್ರವೇಶಿಸಿದ ಮನೆಯಲ್ಲಿ 'ಬಿ'ಯ ಪತ್ನಿಯ ಮೇಲೆ ಅತ್ಯಾಚಾರ ಮಾಡುತ್ತಾನೆ. 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ ಮತ್ತು 331ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಸಿ) 'ಎ'ಯು ಅನೇಕ ಮೊಹರುಗಳನ್ನು, ಅವುಗಳು ಖೋಟಾ ಎಂದು ಗೊತ್ತಿದ್ದರೂ ಕೂಡ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 337ನೇ ಪ್ರಕರಣದ ಮೇರೆಗೆ ದಂಡನೀಯವಾಗುವ ಅನೇಕ ಸುಳ್ಳು ಪತ್ರಗಳ ಸೃಷ್ಟನೆಯನ್ನು

ಮಾಡುವ ಉದ್ದೇಶದಿಂದ ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತಾನೆ. 'ಎ'ಯ ಮೇಲೆ ಅವನು ಪ್ರತಿಯೊಂದು ಮೊಹರನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಬಗ್ಗೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 341ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಡಿ) 'ಎ'ನು 'ಬಿ'ಗೆ ಕ್ಷತಿಯನ್ನುಂಟು ಮಾಡುವ ಉದ್ದೇಶದಿಂದ ಅವನ ವಿರುದ್ಧ ಒಂದು ಆಪರಾಧಿಕ ವ್ಯವಹರಣೆಯನ್ನು, ಅಂಥ ವ್ಯವಹರಣೆಗೆ ನ್ಯಾಯಸಮ್ಮತ ಅಥವಾ ಕಾನೂನುಬದ್ಧ ಆಧಾರವಿಲ್ಲವೆಂದು ಗೊತ್ತಿದ್ದರೂ ಸಹ ಹೂಡುತ್ತಾನೆ ಮತ್ತು 'ಬಿ'ಯು ಒಂದು ಅಪರಾಧವನ್ನು ಮಾಡಿದ್ದಾನೆಂದು, ಅಂಥ ಆರೋಪಕ್ಕೆ ನ್ಯಾಯಸಮ್ಮತವಾದ ಅಥವಾ ಕಾನೂನುಬದ್ಧ ಆಧಾರವಿಲ್ಲವೆಂದು ಗೊತ್ತಿದ್ದರೂ, 'ಬಿ'ಯ ಮೇಲೆ ಸುಳ್ಳು ಆಪಾದನೆ ಮಾಡುತ್ತಾನೆ. 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 248ನೇ ಪ್ರಕರಣದ ಮೇರೆಗಿನ ಎರಡು ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಇ) 'ಎ'ನು 'ಬಿ'ಗೆ ಕ್ಷತಿಯನ್ನುಂಟು ಮಾಡುವ ಉದ್ದೇಶದಿಂದ, ಆ 'ಬಿ'ಯು ಅಪರಾಧ ಮಾಡಿದ್ದಾನೆಂದು ಆರೋಪಿಸಿ, ಅಂಥ ಆರೋಪಕ್ಕೆ ನ್ಯಾಯಸಮ್ಮತ ಅಥವಾ ಕಾನೂನುಬದ್ಧ ಆಧಾರವಿಲ್ಲವೆಂದು ಗೊತ್ತಿದ್ದರೂ ಕೂಡ, 'ಬಿ'ಯ ಮೇಲೆ ಸುಳ್ಳು ಆಪಾದನೆ ಮಾಡುತ್ತಾನೆ. ಅಧಿವಿಚಾರಣೆಯಲ್ಲಿ 'ಎ'ಯು 'ಬಿ'ಗೆ, ಮರಣದಂಡನೆ ಶಿಕ್ಷೆಯಾಗಬೇಕೆಂದು ಬಯಸುತ್ತ ಸುಳ್ಳು ಸಾಕ್ಷ್ಯವನ್ನು ನೀಡುತ್ತಾನೆ. 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 230ನೇ ಮತ್ತು 248ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಎಫ್) ದೊಂಬಿ, ತೀವ್ರ ಗಾಯ ಮತ್ತು ದೊಂಬಿಯನ್ನು ದಮನಗೊಳಿಸುವಂಥ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಪ್ರಯತ್ನಿಸುತ್ತಿದ್ದ ಲೋಕ ನೌಕರನ ಮೇಲೆ 'ಎ'ಯು ಇತರ ಆರು ಮಂದಿಯೊಂದಿಗೆ ಸೇರಿ ಹಲ್ಲೆ ಮಾಡುವ ಅಪರಾಧಗಳನ್ನು ಮಾಡುತ್ತಾನೆ. 'ಎ'ಯ ಮೇಲೆ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 117ನೇ ಪ್ರಕರಣದ (2)ನೇ ಉಪಪ್ರಕರಣ, 191ನೇ ಪ್ರಕರಣದ (2)ನೇ ಉಪಪ್ರಕರಣ ಮತ್ತು 195ನೇ ಪ್ರಕರಣದ ಮೇರೆಗಿನ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಜಿ) 'ಎ'ಯು 'ಬಿ'ಯನ್ನು, 'ಸಿ'ಯನ್ನು ಮತ್ತು 'ಡಿ'ಯನ್ನು, ಅವರಿಗೆ ಗಾಬರಿ ಹುಟ್ಟಿಸುವ ಉದ್ದೇಶದಿಂದ, ಅವರ ದೇಹಕ್ಕೆ ಕ್ಷತಿಗೊಳಿಸುವುದಾಗಿ ಬೆದರಿಸುತ್ತಾನೆ. 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 351ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಮೇರೆಗಿನ ಮೂರು ಅಪರಾಧಗಳಲ್ಲಿ ಪ್ರತಿಯೊಂದಕ್ಕಾಗಿಯೂ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಎ) ಯಿಂದ (ಜಿ) ವರೆಗಿನ ದೃಷ್ಟಾಂತಗಳಲ್ಲಿ, ಅನುಕ್ರಮವಾಗಿ, ಉಲ್ಲೇಖಿಸಿರುವ ಪ್ರತ್ಯೇಕ ಆರೋಪಗಳ ಬಗ್ಗೆ ಏಕಕಾಲದಲ್ಲಿ ಅಧಿವಿಚಾರಣೆ ಮಾಡಬಹುದು.

### ***(3)ನೇ ಉಪಪ್ರಕರಣಕ್ಕೆ ದೃಷ್ಟಾಂತಗಳು***

(ಎಚ್) 'ಎ'ಯು 'ಬಿ'ಯನ್ನು ಪ್ರಮಾದವಶಾತ್ ಬೆತ್ತದಿಂದ ಹೊಡೆಯುತ್ತಾನೆ. 'ಎ'ನ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 115ನೇ ಪ್ರಕರಣದ (2)ನೇ ಉಪಪ್ರಕರಣ ಮತ್ತು 131ನೇ ಪ್ರಕರಣದ ಮೇರೆಗಿನ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಐ) ಧಾನ್ಯದ ಅನೇಕ ಮೂಟೆಗಳು ಕಳವು ಮಾಡಿದ ಸ್ವತ್ತೆಂದು 'ಎ'ಗೆ ಮತ್ತು 'ಬಿ'ಗೆ ಗೊತ್ತಿತ್ತು. ಆದರೂ ಅವುಗಳನ್ನು ಬಚ್ಚಿಡುವ ಉದ್ದೇಶದಿಂದ 'ಎ' ಮತ್ತು 'ಬಿ'ಗೆ ಕೊಡಲಾಗಿತ್ತು. ಆನಂತರ 'ಎ'ಯು ಮತ್ತು 'ಬಿ'ಯು ಕಣಜದ ಕೆಳಗೆ ಮೂಟೆಗಳನ್ನು ಬಚ್ಚಿಡಲು ಪರಸ್ಪರ ನೆರವಾಗುತ್ತಾರೆ. 'ಎ' ಮತ್ತು 'ಬಿ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 317ನೇ ಪ್ರಕರಣದ (2) ಮತ್ತು (5)ನೇ ಉಪಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಹುದು.

(ಜೆ) 'ಎ' ಎಂಬಾಕೆಯು ತನ್ನ ಮಗುವನ್ನು ತೊರೆಯುವುದರಿಂದ ಅದಕ್ಕೆ ಸಾವು ಉಂಟಾಗುವ ಸಂಭವವಿದೆಯೆಂದು ತಿಳಿದಿದ್ದೂ ತೊರೆಯುತ್ತಾಳೆ. ತೊರೆದ ಪರಿಣಾಮವಾಗಿ ಮಗು ಸಾಯುತ್ತದೆ. 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 93 ಮತ್ತು 105ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಹುದು.

(ಕೆ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 201ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ, 'ಬಿ' ಎಂಬ ಲೋಕ ನೌಕರನ ಮೇಲೆ ಅಪರಾಧ ಸಿದ್ಧಪಡಿಸುವುದಕ್ಕಾಗಿ 'ಎ' ಎಂಬಾತನು ಸುಳ್ಳುಸೃಷ್ಟನೆಯ ದಸ್ತಾವೇಜನ್ನು ನಿಜವಾದ ಸಾಕ್ಷ್ಯವೆಂಬಂತೆ ಅಪ್ರಾಮಾಣಿಕವಾಗಿ ಬಳಸುತ್ತಾನೆ. ಆ ಸಂಹಿತೆಯ 233ನೇ ಪ್ರಕರಣ ಮತ್ತು 340ನೇ ಪ್ರಕರಣದ (2)ನೇ ಉಪಪ್ರಕರಣದ (337ನೇ ಪ್ರಕರಣದೊಂದಿಗೆ ಓದಿಕೊಂಡ) ಮೇರೆಗಿನ ಅಪರಾಧಗಳಿಗಾಗಿ 'ಎ'ಯ ಮೇಲೆ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

***(4)ನೇ ಉಪಪ್ರಕರಣಕ್ಕೆ ದೃಷ್ಟಾಂತಗಳು***

(ಎಲ್) 'ಎ'ಯು 'ಬಿ'ಯನ್ನು ಸುಲಿಗೆ ಮಾಡುತ್ತಾನೆ ಮತ್ತು ಹಾಗೆ ಮಾಡುವಾಗ ಸ್ವಇಚ್ಛೆಯಿಂದ ಅವನನ್ನು ಗಾಯಗೊಳಿಸುತ್ತಾನೆ. 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 115ನೇ ಪ್ರಕರಣದ (2)ನೇ ಉಪಪ್ರಕರಣ ಮತ್ತು 309ನೇ ಪ್ರಕರಣದ (2) ಮತ್ತು (4)ನೇ ಉಪಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪ ಹೊರಿಸಬಹುದು ಮತ್ತು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

**244. ಯಾವ ಅಪರಾಧವನ್ನು ಮಾಡಲಾಗಿದೆ ಎಂಬ ಬಗ್ಗೆ ಸಂಶಯ.-** (1) ಒಂದೇ ಕೃತ್ಯವು ಅಥವಾ ಕೃತ್ಯಗಳ ಸರಣಿಯು ಹಲವು ಅಪರಾಧಗಳ ಪೈಕಿ ಯಾವುದನ್ನು ರುಜುವಾತು ಮಾಡಬಹುದೆಂಬುದರ ಬಗ್ಗೆ ಯಾವ ಸಂಗತಿಗಳಿಂದ ಸಂಶಯವನ್ನುಂಟು ಮಾಡುವಂಥ ಸ್ವರೂಪದ ಕೃತ್ಯವಾಗಿದ್ದರೆ ಅಥವಾ ಕೃತ್ಯಗಳಾಗಿದ್ದರೆ, ಅಂಥ ಎಲ್ಲ ಅಥವಾ ಅವುಗಳಲ್ಲಿ ಯಾವುದೇ ಅಪರಾಧಗಳನ್ನು ಮಾಡಿರುವುದಾಗಿ ಆಪಾದಿತನ ಮೇಲೆ ಆರೋಪ ಹೊರಿಸಬಹುದು ಮತ್ತು ಅಂಥ ಎಷ್ಟೇ ಆರೋಪಗಳ ಬಗೆಗಾದರೂ ಕೂಡಲೇ ಅಧಿವಿಚಾರಣೆ ಮಾಡಬಹುದು ಅಥವಾ ಬದಲಿಗೆ ಅವನ ಮೇಲೆ ಸದರಿ ಅಪರಾಧಗಳಲ್ಲಿ ಯಾವುದಾದರೂ ಒಂದನ್ನು ಮಾಡಿರುವ ಬಗ್ಗೆ ಆರೋಪ ಹೊರಿಸಬಹುದು.

(2) ಇಂಥ ಸಂದರ್ಭದಲ್ಲಿ, ಆಪಾದಿತನ ಮೇಲೆ ಒಂದು ಅಪರಾಧಕ್ಕಾಗಿ ಆರೋಪ ಹೊರಿಸಿದ್ದರೆ ಮತ್ತು (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಅವನ ಮೇಲೆ ಆರೋಪ ಹೊರಿಸಬಹುದಾಗಿದ್ದ ಬೇರೊಂದು ಅಪರಾಧವನ್ನು ಅವನು ಮಾಡಿರುವನೆಂದು ಸಾಕ್ಷ್ಯದಿಂದ ಕಂಡುಬಂದರೆ, ಅವನು ಮಾಡಿರುವುದಾಗಿ ಕಂಡುಬಂದ ಆ ಅಪರಾಧದ ಬಗ್ಗೆ, ಅವನ ಮೇಲೆ ಆರೋಪ ಹೊರಿಸದಿದ್ದರೂ ಸಹ, ಅವನನ್ನು ಅಪರಾಧಿಯೆಂದು ನಿರ್ಣೀತಗೊಳಿಸಬಹುದು.

*ದೃಷ್ಟಾಂತಗಳು*

(ಎ) 'ಎ'ಯು ಕಳವು ಅಥವಾ ಕಳವು ಮಾಡಿದ ಸ್ವತ್ತಿನ ಸ್ವೀಕಾರ ಅಥವಾ ಆಪರಾಧಿಕ ನಂಬಿಕೆದ್ರೋಹ ಅಥವಾ ವಂಚನೆ ಎನ್ನಬಹುದಾದ ಒಂದು ಕೃತ್ಯಕ್ಕಾಗಿ ಆಪಾದಿತನಾಗಿದ್ದಾನೆ. ಅವನ ಮೇಲೆ ಕಳವಿನ, ಕಳವು ಮಾಡಿದ ಸ್ವತ್ತಿನ ಸ್ವೀಕಾರದ, ಆಪರಾಧಿಕ ನಂಬಿಕೆದ್ರೋಹದ ಮತ್ತು ವಂಚನೆಯ ಆರೋಪ ಹೊರಿಸಬಹುದು ಅಥವಾ ಕಳವು ಮಾಡಿದ್ದಕ್ಕಾಗಿ ಅಥವಾ ಕಳವು ಮಾಡಿದ ಸ್ವತ್ತಿನ ಸ್ವೀಕಾರಕ್ಕಾಗಿ ಅಥವಾ ಆಪರಾಧಿಕ ನಂಬಿಕೆದ್ರೋಹ ಅಥವಾ ವಂಚನೆ ಮಾಡಿದ್ದಕ್ಕಾಗಿ ಅವನ ಮೇಲೆ ಆರೋಪ ಹೊರಿಸಬಹುದು.

(ಬಿ) ಮೇಲೆ ಹೇಳಿರುವ ಪ್ರಕರಣದಲ್ಲಿ 'ಎ'ಯು ಕಳವಿಗಾಗಿ ಮಾತ್ರ ಆರೋಪಿತನಾಗಿದ್ದಾನೆ, ಅವನು ಆಪರಾಧಿಕ ನಂಬಿಕೆದ್ರೋಹದ ಅಥವಾ ಕಳವು ಮಾಡಿದ ಸ್ವತ್ತನ್ನು ಸ್ವೀಕರಿಸಿದ ಅಪರಾಧವನ್ನು ಮಾಡಿದಂತೆ ಕಂಡುಬರುತ್ತದೆ, (ಸಂದರ್ಭಾನುಸಾರ) ಆಪರಾಧಿಕ ನಂಬಿಕೆದ್ರೋಹದ ಅಥವಾ ಕಳವು ಮಾಡಿದ ಸ್ವತ್ತಿನ ಸ್ವೀಕಾರದ ಅಪರಾಧಕ್ಕಾಗಿ ಅವನ ಮೇಲೆ ಅಂಥ ಆರೋಪವಿಲ್ಲದ್ದಿದ್ದರೂ ಸಹ ಅವನನ್ನು ಆ ಅಪರಾಧದ ಅಪರಾಧಿಯೆಂದು ನಿರ್ಣೀತಗೊಳಿಸಬಹುದು.

(ಸಿ) 'ಬಿ' ಎಂಬಾತನು ದೊಣ್ಣೆಯಿಂದ 'ಸಿ'ಗೆ ಹೊಡೆದುದನ್ನು ನೋಡಿದೆನೆಂದು 'ಎ'ನು ಪ್ರಮಾಣ ಮಾಡಿ ಮ್ಯಾಜಿಸ್ಟ್ರೇಟನ ಸಮಕ್ಷಮದಲ್ಲಿ ಹೇಳುತ್ತಾನೆ. 'ಬಿ'ಯು 'ಸಿ'ಯನ್ನು ಹೊಡೆಯಲೇ ಇಲ್ಲ ಎಂದು ಸೆಷನ್ ನ್ಯಾಯಾಲಯದ ಸಮಕ್ಷಮದಲ್ಲಿ 'ಎ'ನು ಹೇಳುತ್ತಾನೆ. 'ಎ'ಯ ಮೇಲೆ ಪರ್ಯಾಯವಾಗಿ ಆರೋಪ ಹೊರಿಸಬಹುದು ಮತ್ತು ಈ ವ್ಯತಿರಿಕ್ತ ಹೇಳಿಕೆಗಳಲ್ಲಿ ಯಾವುದು ಸುಳ್ಳೆಂಬುದು ರುಜುವಾತಾಗದಿದ್ದರೂ ಸುಳ್ಳು ಸಾಕ್ಷ್ಯ ಕೊಟ್ಟಿದ್ದಕ್ಕಾಗಿ, ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

**245. ಆರೋಪಿಸಿರುವ ಅಪರಾಧದಲ್ಲಿ ರುಜುವಾತಾದ ಅಪರಾಧವು ಸೇರಿರುವಾಗ.-** (1) ಹಲವು ವಿವರಗಳನ್ನೊಳಗೊಂಡ ಅಪರಾಧದ ಬಗ್ಗೆ ವ್ಯಕ್ತಿಯು ಆರೋಪಿತನಾದಾಗ, ಅವುಗಳಲ್ಲಿ ಕೆಲವು ವಿವರಗಳನ್ನು ಒಟ್ಟಿಗೆ ಓದಿಕೊಂಡಾಗ, ಸಂಪೂರ್ಣವಾಗಿ ಅಲ್ಪ ಅಪರಾಧವಾಗಿರುವುದು ಕಂಡುಬಂದರೆ ಮತ್ತು ಹಾಗೆ ಒಟ್ಟಿಗೆ ಹೊಂದಿಕೊಂಡ ವಿವರಗಳು ರುಜುವಾತಾಗಿ ಉಳಿದ ವಿವರಗಳು ರುಜುವಾತಾಗದಿದ್ದಾಗ, ಆ ಅಲ್ಪ ಅಪರಾಧಕ್ಕಾಗಿ, ಅವನು ಆ ಬಗ್ಗೆ ಆರೋಪಿತನಾಗದಿದ್ದರೂ ಸಹ ಅವನನ್ನು ಅಪರಾಧಿಯೆಂದು ನಿರ್ಣೀತಗೊಳಿಸಬಹುದು.

(2) ಯಾವುದೇ ಅಪರಾಧಕ್ಕಾಗಿ ವ್ಯಕ್ತಿಯು ಆರೋಪಿತನಾದಾಗ ಮತ್ತು ಅದನ್ನು ಅಲ್ಪ ಅಪರಾಧವನ್ನಾಗಿಸುವ ಸಂಗತಿಗಳು ರುಜುವಾತಾದಾಗ, ಆ ಅಲ್ಪ ಅಪರಾಧಕ್ಕಾಗಿ ಅವನು ಈ ಬಗ್ಗೆ ಆರೋಪಿತನಾಗದಿದ್ದರೂ ಸಹ, ಅವನನ್ನು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(3) ಯಾರೇ ವ್ಯಕ್ತಿಯು ಅಪರಾಧಕ್ಕಾಗಿ ಆರೋಪಿತನಾದಾಗ ಅಂಥ ಅಪರಾಧವನ್ನು ಮಾಡುವ ಪ್ರಯತ್ನಕ್ಕಾಗಿ, ಆ ಪ್ರಯತ್ನಕ್ಕೆ ಪ್ರತ್ಯೇಕವಾಗಿ ಆರೋಪ ಹೊರಿಸದಿದ್ದರೂ, ಅವನು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(4) ಯಾವುದೇ ಅಲ್ಪ ಅಪರಾಧದ ಬಗ್ಗೆ ವ್ಯವಹರಣೆಗಳನ್ನು ಪ್ರಾರಂಭಿಸಲು ಅವಶ್ಯಕವಾದ ಷರತ್ತುಗಳು ಈಡೇರದಿದ್ದರೆ, ಆ ಅಲ್ಪ ಅಪರಾಧದ ಅಪರಾಧ ನಿರ್ಣಯ ಮಾಡುವುದಕ್ಕೆ ಈ ಪ್ರಕರಣದಲ್ಲಿರುವುದು ಯಾವುದೂ ಅಧಿಕಾರ ನೀಡುತ್ತದೆಂದು ಭಾವಿಸತಕ್ಕದ್ದಲ್ಲ.

*ದೃಷ್ಟಾಂತಗಳು*

(ಎ) ವಾಹಕನಾಗಿ 'ಎ'ಗೆ ವಹಿಸಿಕೊಟ್ಟ ಸ್ವತ್ತಿನ ಬಗೆಗಿನ ಆಪರಾಧಿಕ ನಂಬಿಕೆದ್ರೋಹಕ್ಕಾಗಿ 'ಎ'ಯ ಮೇಲೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 316ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಆರೋಪ ಹೊರಿಸಲಾಗಿದೆ.

ಆ ಸಂಹಿತೆಯ 316ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಆಪರಾಧಿಕ ನಂಬಿಕೆದ್ರೋಹವನ್ನು ಆ ಸ್ವತ್ತಿನ ಬಗ್ಗೆ ಅವನು ಮಾಡಿರುವನೆಂದು, ಆದರೆ ಅದನ್ನು ಅವನಿಗೆ ವಾಹಕನಂತೆ ವಹಿಸಿಕೊಟ್ಟಿಲ್ಲವೆಂಬುದು ಕಂಡುಬರುತ್ತದೆ. 316ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಆಪರಾಧಿಕ ನಂಬಿಕೆದ್ರೋಹಕ್ಕಾಗಿ ಅವನನ್ನು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

(ಬಿ) 'ಎ' ತೀವ್ರ ಗಾಯ ಮಾಡಿದ್ದಕ್ಕಾಗಿ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 117ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಆರೋಪಿತನಾಗಿದ್ದಾನೆ. ಅವನು, ತನಗೆ ತೀವ್ರ ಪ್ರಚೋದನೆ ಮಾಡಿದ್ದರಿಂದಾಗಿ ಮತ್ತು ಹಠಾತ್ ಉದ್ರೇಕದಿಂದಾಗಿ ಹಾಗೆ ಮಾಡಿದ್ದೇನೆಂದು ರುಜುವಾತು ಮಾಡುತ್ತಾನೆ. ಆ ಸಂಹಿತೆಯ 122ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅವನನ್ನು ಅಪರಾಧಿ ಎಂದು ನಿರ್ಣೀತಗೊಳಿಸಬಹುದು.

**246. ಯಾವ ವ್ಯಕ್ತಿಗಳ ಮೇಲೆ ಜಂಟಿಯಾಗಿ ಆರೋಪ ಹೊರಿಸಬಹುದು.-** ಈ ಕೆಳಕಂಡ ವ್ಯಕ್ತಿಗಳ ಮೇಲೆ ಒಟ್ಟಿಗೆ ಆರೋಪ ಹೊರಿಸಬಹುದು ಮತ್ತು ಅಧಿವಿಚಾರಣೆ ಮಾಡಬಹುದು, ಎಂದರೆ:-

(ಎ) ಒಂದೇ ವ್ಯವಹಾರದ ಸಂಬಂಧದಲ್ಲಿ ಮಾಡಲಾದ ಒಂದೇ ಅಪರಾಧಕ್ಕಾಗಿ ಆಪಾದಿತರಾದ ವ್ಯಕ್ತಿಗಳಿಗೆ;

(ಬಿ) ಒಂದು ಅಪರಾಧದ ಬಗ್ಗೆ ಆಪಾದಿತರಾದ ವ್ಯಕ್ತಿಗಳು ಮತ್ತು ಅಂಥ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದ್ದಾರೆಂದು ಅಥವಾ ಅಂಥ ಅಪರಾಧ ಮಾಡಲು ಪ್ರಯತ್ನ ಮಾಡಿದ್ದಾರೆಂದು ಆಪಾದಿತರಾದ ವ್ಯಕ್ತಿಗಳಿಗೆ;

(ಸಿ) 242ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಒಂದೇ ಬಗೆಯ ಒಂದಕ್ಕಿಂತ ಹೆಚ್ಚು ಅಪರಾಧವನ್ನು ಹನ್ನೆರಡು ತಿಂಗಳ ಅವಧಿಯೊಳಗಾಗಿ ಜಂಟಿಯಾಗಿ ಮಾಡಿದ್ದಾರೆಂದು ಆಪಾದಿತರಾದ ವ್ಯಕ್ತಿಗಳಿಗೆ;

(ಡಿ) ಒಂದೇ ವ್ಯವಹಾರ ಮಾಡುವಾಗ ಮಾಡಿದ ಬೇರೆ ಬೇರೆ ಅಪರಾಧಗಳಿಗಾಗಿ ಆಪಾದಿತರಾದ ವ್ಯಕ್ತಿಗಳಿಗೆ;

(ಇ) ಕಳವು, ಬಲಾದ್ಗ್ರಹಣ, ವಂಚನೆ ಅಥವಾ ಆಪರಾಧಿಕ ದುರ್ವಿನಿಯೋಗವನ್ನು ಒಳಗೊಳ್ಳುವ ಅಪರಾಧಕ್ಕಾಗಿ ಆಪಾದಿತರಾದ ವ್ಯಕ್ತಿಗಳು ಮತ್ತು ಯಾವ ಸ್ವತ್ತಿನ ಸ್ವಾಧೀನವನ್ನು ಮೊದಲು ಹೇಳಿದ ವ್ಯಕ್ತಿಗಳು ಮಾಡಿದ ಅಪರಾಧದಿಂದ ವರ್ಗಾಯಿಸಲಾಯಿತೆಂದು ಆರೋಪಿತವಾಗಿದೆಯೋ ಆ ಸ್ವತ್ತಿನ ಸ್ವೀಕಾರ, ಇಟ್ಟುಕೊಳ್ಳುವಿಕೆ ಅಥವಾ ಅದನ್ನು ವಿಲೆ ಮಾಡಲು ಅಥವಾ ಬಚ್ಚಿಡಲು ನೆರವಾದ ಅಥವಾ ಕೊನೆಯಲ್ಲಿ ಹೇಳಿದಂಥ ಯಾವುದೇ ಅಪರಾಧವನ್ನು ಮಾಡಲು ದುಷ್ಪ್ರೇರಣೆ ಮಾಡಿದ ಅಥವಾ ಆ ಅಪರಾಧವನ್ನು ಮಾಡಲು ಪ್ರಯತ್ನ ಮಾಡಿದ್ದಕ್ಕಾಗಿ ಆಪಾದಿತರಾದ ವ್ಯಕ್ತಿಗಳಿಗೆ;

(ಎಫ್) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 317ನೇ ಪ್ರಕರಣದ (2) ಮತ್ತು (5)ನೇ ಉಪಪ್ರಕರಣಗಳ ಮೇರೆಗೆ ಅಥವಾ ಯಾವ ಕಳವು ಮಾಡಿದ ಸ್ವತ್ತಿನ ಸ್ವಾಧೀನವನ್ನು ಒಂದು ಅಪರಾಧದಿಂದ ವರ್ಗಾಯಿಸಲಾಗಿದೆಯೋ ಆ ಕಳವು ಮಾಡಿದ ಸ್ವತ್ತಿಗೆ ಸಂಬಂಧಪಡುವ ಆ ಪ್ರಕರಣಗಳ ಪೈಕಿ ಯಾವುದೇ ಪ್ರಕರಣದ ಮೇರೆಗೆ ಆಪಾದಿತರಾದ ವ್ಯಕ್ತಿಗಳಿಗೆ;

(ಜಿ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಅಧ್ಯಾಯ Xರ ಮೇರೆಗಿನ ಖೋಟಾ ನಾಣ್ಯಕ್ಕೆ ಸಂಬಂಧಿಸಿದ ಯಾವುದೇ ಅಪರಾಧಕ್ಕಾಗಿ ಆಪಾದಿತರಾದ ವ್ಯಕ್ತಿಗಳು ಮತ್ತು ಅದೇ ನಾಣ್ಯಕ್ಕೆ ಸಂಬಂಧಿಸಿದ ಸದರಿ ಅಧ್ಯಾಯದ ಮೇರೆಗಿನ ಯಾವುದೇ ಇತರ ಅಪರಾಧದ ಬಗ್ಗೆ ಅಥವಾ ಅಂಥ ಯಾವುದೇ ಅಪರಾಧವನ್ನು ಮಾಡಲು ದುಷ್ಪ್ರೇರಣೆ ಅಥವಾ ಪ್ರಯತ್ನ ಮಾಡಿದ ಬಗ್ಗೆ ಆಪಾದಿತರಾದ ವ್ಯಕ್ತಿಗಳಿಗೆ

- ಮತ್ತು ಈ ಅಧ್ಯಾಯದ ಮೊದಲ ಭಾಗದಲ್ಲಿರುವ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ ಅಂಥ ಎಲ್ಲಾ ಆರೋಪಗಳಿಗೆ ಅನ್ವಯವಾಗತಕ್ಕದ್ದು:

ಪರಂತು, ಪ್ರತ್ಯೇಕ ಅಪರಾಧಗಳಿಗಾಗಿ ಅನೇಕ ವ್ಯಕ್ತಿಗಳು ಆರೋಪಿತರಾದಾಗ ಮತ್ತು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ವರ್ಗಗಳ ವ್ಯಾಪ್ತಿಯೊಳಗೆ ಅಂಥ ವ್ಯಕ್ತಿಗಳು ಸೇರದಿದ್ದಲ್ಲಿ, ಮ್ಯಾಜಿಸ್ಟ್ರೇಟನು ಅಥವಾ ಸೆಷನ್ ನ್ಯಾಯಾಲಯವು, ಅಂಥ ವ್ಯಕ್ತಿಗಳು ಲಿಖಿತದಲ್ಲಿ ಅರ್ಜಿ ಸಲ್ಲಿಸಿ ಒಟ್ಟಿಗೆ ವಿಚಾರಣೆ ಮಾಡಬೇಕೆಂದು ಇಚ್ಛಿಸಿದರೆ ಮತ್ತು ಹಾಗೆ ಮಾಡಿದರೆ ಅಂಥ ವ್ಯಕ್ತಿಗಳು ಪ್ರತಿಕೂಲವಾಗಿ ಬಾಧಿತರಾಗುವುದಿಲ್ಲವೆಂದು ಅವನಿಗೆ ಅಥವಾ ಆ ನ್ಯಾಯಾಲಯಕ್ಕೆ ಮನದಟ್ಟಾದರೆ ಮತ್ತು ಹಾಗೆ ಮಾಡುವುದು ವಿಹಿತವೆಂದು ಅಭಿಪ್ರಾಯಪಟ್ಟರೆ, ಅಂಥ ಎಲ್ಲ ವ್ಯಕ್ತಿಗಳ ಬಗ್ಗೆ ಒಟ್ಟಿಗೆ ಅಧಿವಿಚಾರಣೆ ಮಾಡಬಹುದು.

**247. ಹಲವು ಆರೋಪಗಳ ಪೈಕಿ ಒಂದು ಅಪರಾಧವು ನಿರ್ಣಯವಾದ ಮೇಲೆ ಉಳಿದ ಆರೋಪಗಳನ್ನು ವಾಪಸ್ಸು ಪಡೆಯುವುದು.-** ಒಬ್ಬ ವ್ಯಕ್ತಿಯ ವಿರುದ್ಧ ಒಂದು ಅಥವಾ ಹೆಚ್ಚು ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಆರೋಪವನ್ನು ರೂಪಿಸಿದಾಗ ಮತ್ತು ಅವುಗಳಲ್ಲಿ ಒಂದು ಅಥವಾ ಹೆಚ್ಚು ಅಪರಾಧಗಳಿಗೆ ಸಂಬಂಧಿಸಿದಂತೆ ಅಪರಾಧ ನಿರ್ಣಯವಾದಾಗ, ದೂರುದಾರನು ಅಥವಾ ಪ್ರಾಸಿಕ್ಯೂಷನ್ ನಡೆಸುವ ಅಧಿಕಾರಿಯು, ನ್ಯಾಯಾಲಯದ ಸಮ್ಮತಿ ಪಡೆದು ಉಳಿದ ಆರೋಪವನ್ನು ಅಥವಾ ಆರೋಪಗಳನ್ನು ಹಿಂತೆಗೆದುಕೊಳ್ಳಬಹುದು ಅಥವಾ ನ್ಯಾಯಾಲಯವು ತಾನಾಗಿಯೇ ಅಂಥ ಆರೋಪದ ಅಥವಾ ಆರೋಪಗಳ ವಿಚಾರಣೆಯನ್ನು ನಿಲ್ಲಿಸಬಹುದು ಮತ್ತು ಹಾಗೆ ಹಿಂಪಡೆದ ಅಂಥ ಆರೋಪ ಅಥವಾ ಆರೋಪಗಳ ಸಂಬಂಧದಲ್ಲಿ ಖುಲಾಸೆ ಎಂಬ ತೀರ್ಮಾನದ ಪರಿಣಾಮವನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಪರಾಧ ನಿರ್ಣಯವನ್ನು ತಳ್ಳಿ ಹಾಕಿದ್ದ ಹೊರತು, ಅಂಥ ಸಂದರ್ಭದಲ್ಲಿ, ಸದರಿ ನ್ಯಾಯಾಲಯವು (ಅಪರಾಧ ನಿರ್ಣಯವನ್ನು ತಳ್ಳಿ ಹಾಕಿರುವ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು) ಹಿಂಪಡೆದುಕೊಂಡಿದ್ದ ಆರೋಪದ ಅಥವಾ ಆರೋಪಗಳ ಬಗ್ಗೆ ವಿಚಾರಣೆಯನ್ನು ಅಥವಾ ಅಧಿವಿಚಾರಣೆಯನ್ನು ಮುಂದುವರಿಸಬಹುದು.

## ಅಧ್ಯಾಯ XIX

## ಸೆಷನ್ ನ್ಯಾಯಾಲಯದ ಮುಂದೆ ಅಧಿವಿಚಾರಣೆ

**248. ಅಧಿವಿಚಾರಣೆಯನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ನಡೆಸುವುದು.-** ಪಬ್ಲಿಕ್ ಪ್ರಾಸಿಕ್ಯೂಟರನು, ಸೆಷನ್ ನ್ಯಾಯಾಲಯದ ಮುಂದೆ ನಡೆಯುವ ಪ್ರತಿಯೊಂದು ಅಧಿವಿಚಾರಣೆಯಲ್ಲಿ ಪ್ರಾಸಿಕ್ಯೂಷನ್ ನಡೆಸತಕ್ಕದ್ದು.

**249. ಪ್ರಾಸಿಕ್ಯೂಷನ್ನಿಗಾಗಿ ಮೊಕದ್ದಮೆಯನ್ನು ಪ್ರಾರಂಭಿಸುವುದು.-** 232ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಮೇರೆಗೆ ಮೊಕದ್ದಮೆಯನ್ನು ಹೂಡಿರುವುದಕ್ಕೆ ಅನುಸಾರವಾಗಿ, ಆಪಾದಿತನು ನ್ಯಾಯಾಲಯದ ಮುಂದೆ ಹಾಜರಾದಾಗ ಅಥವಾ ಆಪಾದಿತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ, ಆಪಾದಿತನ ವಿರುದ್ಧ ಮಾಡಿರುವ ಆರೋಪವನ್ನು ಪ್ರಾಸಿಕ್ಯೂಟರನು ವಿವರಿಸಿ ಮತ್ತು ಯಾವ ಸಾಕ್ಷ್ಯದಿಂದ ಆಪಾದಿತನ ಅಪರಾಧವನ್ನು ರುಜುವಾತುಪಡಿಸಲು ತಾನು ಉದ್ದೇಶಿಸಿರುವನೆಂಬುದನ್ನು ತಿಳಿಸಿ ತನ್ನ ವಾದವನ್ನು ಪ್ರಾರಂಭಿಸತಕ್ಕದ್ದು.

**250. ಬಿಡುಗಡೆ.-** (1) ಆಪಾದಿತನು, 232ನೇ ಪ್ರಕರಣದ ಮೇರೆಗೆ ಮೊಕದ್ದಮೆಯನ್ನು ಹೂಡಿದ ದಿನಾಂಕದಿಂದ ಅರವತ್ತು ದಿನಗಳ ಒಳಗೆ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಬಹುದು.

(2) ಮೊಕದ್ದಮೆಯ ದಾಖಲೆಯನ್ನು ಮತ್ತು ಅದರ ಸಹಿತ ಒಪ್ಪಿಸಿರುವ ದಸ್ತಾವೇಜುಗಳನ್ನು ಪರಿಶೀಲಿಸಿದಾಗ ಮತ್ತು ಆ ಬಗ್ಗೆ ಆಪಾದಿತನ ಹಾಗೂ ಪ್ರಾಸಿಕ್ಯೂಟರನ ನಿವೇದನೆಗಳನ್ನು ಆಲಿಸಿದ ನಂತರ, ಆಪಾದಿತನ ವಿರುದ್ಧ ಮುಂದುವರಿಯಲು ಸಾಕಷ್ಟು ಆಧಾರವಿಲ್ಲವೆಂಬುದಾಗಿ ನ್ಯಾಯಾಧೀಶನು ಪರ್ಯಾಲೋಚಿಸಿದರೆ, ಅವನು ಆಪಾದಿತನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಹಾಗೆ ಮಾಡಲು ತನಗಿರುವ ಕಾರಣಗಳನ್ನು ದಾಖಲು ಮಾಡತಕ್ಕದ್ದು.

**251. ಆರೋಪವನ್ನು ರೂಪಿಸುವುದು.-** (1) ಮೇಲೆ ಹೇಳಿದಂತೆ ಪರ್ಯಾಲೋಚಿಸಿದ ಮತ್ತು ಅಹವಾಲುಗಳನ್ನು ಆಲಿಸಿದ ನಂತರ, ಆ ಆಪಾದಿತನು,-

(ಎ) ಸೆಷನ್ ನ್ಯಾಯಾಲಯವು ಮಾತ್ರವೇ ಅಧಿವಿಚಾರಣೆ ಮಾಡಬೇಕಾಗಿಲ್ಲದಿರುವ ಅಪರಾಧವನ್ನು, ಆಪಾದಿತನು ಮಾಡಿರುವನೆಂಬುದಾಗಿ ಪೂರ್ವಭಾವನೆ ಮಾಡಲು ಆಧಾರವಿದೆಯೆಂದು ನ್ಯಾಯಾಧೀಶನು ಅಭಿಪ್ರಾಯಪಟ್ಟರೆ, ಅವನು ಆಪಾದಿತನ ವಿರುದ್ಧ ಆರೋಪವನ್ನು ರೂಪಿಸಬಹುದು ಮತ್ತು ಆ ಮೊಕದ್ದಮೆಯನ್ನು, ಅಧಿವಿಚಾರಣೆಗಾಗಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಯಾರೇ ಇತರ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಆದೇಶದ ಮೂಲಕ ವರ್ಗಾಯಿಸಬಹುದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದ ದಿನಾಂಕದಂದು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗುವಂತೆ ಆಪಾದಿತನಿಗೆ ನಿರ್ದೇಶನ ನೀಡಬಹುದು ಮತ್ತು ಆನಂತರ, ಅಂಥ ಮ್ಯಾಜಿಸ್ಟ್ರೇಟನು ಪೊಲೀಸ್ ವರದಿಯ ಮೇಲೆ ಹೂಡಿದ ವಾರಂಟ್ ಮೊಕದ್ದಮೆಗಳ ಅಧಿವಿಚಾರಣೆಗೆ ಸಂಬಂಧಿಸಿದ ಕಾರ್ಯವಿಧಾನಕ್ಕನುಸಾರವಾಗಿ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದು;

(ಬಿ) ಆ ನ್ಯಾಯಾಲಯವು ಮಾತ್ರವೇ ಅಧಿವಿಚಾರಣೆ ಮಾಡಬೇಕಾದ ಅಪರಾಧವನ್ನು ಮಾಡಿರುವನೆಂಬುದಾಗಿ ಪೂರ್ವಭಾವನೆ ಮಾಡಲು ಆಧಾರವಿದೆಯೆಂದು ನ್ಯಾಯಾಧೀಶನು ಅಭಿಪ್ರಾಯಪಟ್ಟರೆ, ದೋಷಾರೋಪಣೆಯ ಮೇಲಿನ ಮೊದಲ ಸುನಾವಣೆಯ ದಿನಾಂಕದಿಂದ ಅರವತ್ತು ದಿನಗಳ ಅವಧಿಯ ಒಳಗೆ ಅವರು ಆಪಾದಿತನ ವಿರುದ್ಧ ಲಿಖಿತದಲ್ಲಿ ಆರೋಪವನ್ನು ರೂಪಿಸತಕ್ಕದ್ದು.

(2) ನ್ಯಾಯಾಧೀಶನು, (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಆರೋಪವನ್ನು ರೂಪಿಸಿದರೆ, ಆ ಆರೋಪವನ್ನು ಭೌತಿಕವಾಗಿಯಾಗಲೀ ಅಥವಾ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮುಖಾಂತರವಾಗಿಯಾಗಲೀ ಹಾಜರಿರುವ ಆಪಾದಿತನಿಗೆ ಓದಿ ಹೇಳತಕ್ಕದ್ದು ಹಾಗೂ ವಿವರಿಸತಕ್ಕದ್ದು ಮತ್ತು ಅವನ ಮೇಲೆ ಆರೋಪಿಸಿರುವ ಅಪರಾಧವನ್ನು ಮಾಡಿರುವುದಾಗಿ ಒಪ್ಪಿಕೊಳ್ಳುವನೇ ಅಥವಾ ಅಧಿವಿಚಾರಣೆ ಮಾಡಬೇಕೆಂದು ಹೇಳುವನೇ ಎಂದು ಆಪಾದಿತನನ್ನು ಕೇಳತಕ್ಕದ್ದು.

**252. ತಪ್ಪೊಪ್ಪಿಕೊಂಡ ಮೇಲೆ ಅಪರಾಧ ನಿರ್ಣಯ.-** ಆಪಾದಿತನು ತಪ್ಪೊಪ್ಪಿಕೊಂಡರೆ, ನ್ಯಾಯಾಧೀಶನು ತಪ್ಪೊಪ್ಪಿಗೆಯನ್ನು ದಾಖಲಿಸತಕ್ಕದ್ದು ಮತ್ತು ತನ್ನ ವಿವೇಚನಾನುಸಾರ, ಆ ಬಗ್ಗೆ ಅವನನ್ನು ಅಪರಾಧ ನಿರ್ಣೀತನನ್ನಾಗಿ ಮಾಡಬಹುದು.

**253. ಪ್ರಾಸಿಕ್ಯೂಷನ್ ಸಾಕ್ಷ್ಯಕ್ಕಾಗಿ ದಿನಾಂಕ.-** ಆಪಾದಿತನು ವಾದಿಸಲು ನಿರಾಕರಿಸಿದರೆ ಅಥವಾ ವಾದಿಸದಿದ್ದರೆ ಅಥವಾ ಅಧಿವಿಚಾರಣೆಯಾಗಬೇಕೆಂದು ಕೇಳಿಕೊಂಡರೆ ಅಥವಾ 252ನೇ ಪ್ರಕರಣದ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗದಿದ್ದರೆ, ನ್ಯಾಯಾಧೀಶನು ಸಾಕ್ಷಿದಾರರ ವಿಚಾರಣೆಗಾಗಿ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಪ್ರಾಸಿಕ್ಯೂಷನ್ ಅರ್ಜಿ ಸಲ್ಲಿಸಿದಾಗ

ಯಾರೇ ಸಾಕ್ಷಿದಾರನ ಹಾಜರಾತಿಯನ್ನು ಒತ್ತಾಯಪಡಿಸುವ ಸಲುವಾಗಿ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವ ಸಲುವಾಗಿ ಯಾವುದೇ ಆದೇಶಿಕೆಯನ್ನು ಹೊರಡಿಸಬಹುದು.

**254. ಪ್ರಾಸಿಕ್ಯೂಷನ್ ಪರ ಸಾಕ್ಷ್ಯ.-** (1) ಹಾಗೆ ನಿಗದಿಪಡಿಸಿದ ದಿನಾಂಕದಂದು, ನ್ಯಾಯಾಧೀಶನು ಪ್ರಾಸಿಕ್ಯೂಷನ್ನಿಗೆ ಸಮರ್ಥನೆಯಾಗಿ ಒದಗಿಸಬಹುದಾದಂಥ ಎಲ್ಲ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಸಾಕ್ಷಿದಾರನ ಸಾಕ್ಷ್ಯವನ್ನು ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕ ದಾಖಲಿಸಬಹುದು.

(2) ಯಾರೇ ಲೋಕ ನೌಕರನ ಸಾಕ್ಷ್ಯದ ಹೇಳಿಕೆಯನ್ನು ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕ ತೆಗೆದುಕೊಳ್ಳಬಹುದು.

(3) ನ್ಯಾಯಾಧೀಶನು, ತನ್ನ ವಿವೇಚನಾನುಸಾರ, ಯಾರೇ ಇತರ ಸಾಕ್ಷಿದಾರನನ್ನು ಅಥವಾ ಸಾಕ್ಷಿದಾರರನ್ನು ವಿಚಾರಣೆ ಮಾಡುವವರೆಗೆ ಯಾರೇ ಸಾಕ್ಷಿದಾರನ ಪಾಟೀ-ಸವಾಲನ್ನು ಮುಂದೂಡಲು ಅನುಮತಿ ನೀಡಬಹುದು ಅಥವಾ ಹೆಚ್ಚಿನ ಪಾಟೀ-ಸವಾಲಿಗಾಗಿ, ಯಾರೇ ಸಾಕ್ಷಿದಾರನನ್ನು ಪುನಃ ಕರೆಸಬಹುದು.

**255. ಖುಲಾಸೆ.-** ಪ್ರಾಸಿಕ್ಯೂಷನ್ ಪರ ಸಾಕ್ಷ್ಯವನ್ನು ತೆಗೆದುಕೊಂಡ ಮೇಲೆ ಆಪಾದಿತನನ್ನು ವಿಚಾರಣೆ ಮಾಡಿದ ತರುವಾಯ ಮತ್ತು ಆ ವಿಚಾರದಲ್ಲಿ ಪ್ರಾಸಿಕ್ಯೂಷನ್ನಿನ ವಾದವನ್ನು ಮತ್ತು ಪ್ರತಿವಾದವನ್ನು ಆಲಿಸಿದ ಆನಂತರ, ಆಪಾದಿತನು ಅಪರಾಧವನ್ನು ಮಾಡಿರುವನೆಂಬುದಕ್ಕೆ ಯಾವುದೇ ಸಾಕ್ಷ್ಯವಿಲ್ಲವೆಂದು ನ್ಯಾಯಾಧೀಶನು ಪರ್ಯಾಲೋಚಿಸಿದರೆ, ಅವನು ಖುಲಾಸೆ ಆದೇಶವನ್ನು ದಾಖಲಿಸತಕ್ಕದ್ದು.

**256. ಪ್ರತಿರಕ್ಷೆಯನ್ನು ಪ್ರಾರಂಭಿಸುವುದು.-** (1) ಆಪಾದಿತನು 255ನೇ ಪ್ರಕರಣದ ಮೇರೆಗೆ ಖುಲಾಸೆಯಾಗದಿದ್ದರೆ, ಪ್ರತಿರಕ್ಷೆಯನ್ನು ಪ್ರಾರಂಭಿಸಲು ಮತ್ತು ಅದರ ಸಮರ್ಥನೆಗಾಗಿ ಅವನು ಹೊಂದಿರುವ ಯಾವುದೇ ಸಾಕ್ಷ್ಯವನ್ನು ಒದಗಿಸಲು ಅವನನ್ನು ಕರೆಯತಕ್ಕದ್ದು.

(2) ಆಪಾದಿತನು ಯಾವುದೇ ಲಿಖಿತ ಹೇಳಿಕೆಯನ್ನು ಕೊಟ್ಟರೆ, ನ್ಯಾಯಾಧೀಶನು ಅದನ್ನು ದಾಖಲಿಸಿಕೊಂಡು ದಾಖಲೆಗೆ ಸೇರಿಸತಕ್ಕದ್ದು.

(3) ಯಾರೇ ಸಾಕ್ಷಿದಾರನ ಹಾಜರಾತಿಯನ್ನು ಅಥವಾ ಯಾವುದೇ ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವುದನ್ನು ಒತ್ತಾಯಿಸುವುದಕ್ಕಾಗಿ ಯಾವುದೇ ಆದೇಶಿಕೆಯನ್ನು ಹೊರಡಿಸಬೇಕೆಂದು ಆಪಾದಿತನು ಅರ್ಜಿ ಸಲ್ಲಿಸಿದರೆ, ನ್ಯಾಯಾಧೀಶನು, ಕಾರಣಗಳನ್ನು ದಾಖಲಿಸಿ, ಅಂಥ ಅರ್ಜಿಯನ್ನು, ಅದು ಕಿರುಕುಳ ಕೊಡುವ ಅಥವಾ ವಿಳಂಬ ಮಾಡುವ ಉದ್ದೇಶಕ್ಕಾಗಿ ಅಥವಾ ನ್ಯಾಯೋದ್ದೇಶಗಳನ್ನು ವಿಫಲಗೊಳಿಸುವುದಕ್ಕಾಗಿ ಸಲ್ಲಿಸಲಾಗಿದೆಯೆಂಬ ಆಧಾರದ ಮೇಲೆ ನಿರಾಕರಿಸಬೇಕೆಂದು ಪರ್ಯಾಲೋಚಿಸಿದ ಹೊರತು, ಆದೇಶವನ್ನು ಹೊರಡಿಸತಕ್ಕದ್ದು.

**257. ವಾದ-ಪ್ರತಿವಾದಗಳು.-** ಪ್ರತಿವಾದಿಯ ಸಾಕ್ಷಿದಾರರು ಯಾರಾದರೂ ಇದ್ದರೆ ಅವರ ವಿಚಾರಣೆಯು ಪೂರ್ಣಗೊಂಡಾಗ, ಪ್ರಾಸಿಕ್ಯೂಟರನು ತನ್ನ ವಾದವನ್ನು ಸಂಕ್ಷಿಪ್ತವಾಗಿ ಮಂಡಿಸತಕ್ಕದ್ದು ಮತ್ತು ಅದಕ್ಕೆ ಪ್ರತಿವಾದಿಸಲು ಆಪಾದಿತನಿಗೆ ಅಥವಾ ಅವನ ನ್ಯಾಯವಾದಿಗೆ ಹಕ್ಕು ಇರತಕ್ಕದ್ದು:

ಪರಂತು, ಆಪಾದಿತನು ಅಥವಾ ಅವನ ನ್ಯಾಯವಾದಿಯು ಕಾನೂನಿನ ಯಾವುದೇ ಅಂಶವನ್ನು ಎತ್ತಿದರೆ, ನ್ಯಾಯಾಧೀಶನ ಅನುಮತಿ ಪಡೆದು, ಪ್ರಾಸಿಕ್ಯೂಷನ್ ಅಂಥ ಕಾನೂನಿನ ಅಂಶದ ಬಗ್ಗೆ ತನ್ನ ನಿವೇದನೆಗಳನ್ನು ಮಾಡಬಹುದು.

**258. ಖುಲಾಸೆ ಅಥವಾ ಅಪರಾಧ ನಿರ್ಣಯದ ತೀರ್ಪು.-** (1) ವಾದ-ಪ್ರತಿವಾದಗಳನ್ನು ಮತ್ತು ಕಾನೂನಿನ ಅಂಶಗಳನ್ನು (ಏನಾದರೂ ಇದ್ದರೆ) ಆಲಿಸಿದ ಆನಂತರ, ನ್ಯಾಯಾಧೀಶನು, ಸಾಧ್ಯವಾದಷ್ಟು ಬೇಗನೆ ವಾದ-ಪ್ರತಿವಾದಗಳನ್ನು ಪೂರ್ಣಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ನಲವತ್ತೈದು ದಿನಗಳಿಗೆ ವಿಸ್ತರಿಸಬಹುದಾದಂಥ ಅವಧಿಯೊಳಗೆ ಆ ಮೊಕದ್ದಮೆಯಲ್ಲಿ ತನ್ನ ತೀರ್ಪನ್ನು ಕೊಡತಕ್ಕದ್ದು.

(2) ಆಪಾದಿತನು ನ್ಯಾಯನಿರ್ಣೀತನಾಗಿದ್ದರೆ, ನ್ಯಾಯಾಧೀಶನು, 401ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮುಂದುವರಿದ ಹೊರತು, ಶಿಕ್ಷೆಯ ಪ್ರಶ್ನೆಗಳ ಬಗ್ಗೆ ಆಪಾದಿತನ ಅಹವಾಲನ್ನು ಆಲಿಸಿದ ನಂತರ ಕಾನೂನಿಗನುಸಾರವಾಗಿ ಆಪಾದಿತನಿಗೆ ಶಿಕ್ಷೆ ವಿಧಿಸತಕ್ಕದ್ದು.

**259. ಹಿಂದಿನ ಅಪರಾಧ ನಿರ್ಣಯ.-** ಈ ಹಿಂದೆ ಅಪರಾಧ ನಿರ್ಣಯವಾಗಿದೆಯೆಂದು 234ನೇ ಪ್ರಕರಣದ (7)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಆರೋಪ ಮಾಡಿದ್ದರೆ ಮತ್ತು ಆಪಾದಿತನು, ಆ ಆರೋಪದಲ್ಲಿ ಆಪಾದಿಸಿರುವಂತೆ, ತಾನು ಈ ಹಿಂದೆ ಅಪರಾಧ ನಿರ್ಣೀತನಾಗಿದ್ದನೆಂಬುದನ್ನು ಒಪ್ಪದಿದ್ದರೆ, ನ್ಯಾಯಾಧೀಶನು ಸದರಿ ಆಪಾದಿತನನ್ನು 252ನೇ ಅಥವಾ 258ನೇ ಪ್ರಕರಣದ ಮೇರೆಗೆ ಅಪರಾಧಿ ಎಂದು ನಿರ್ಣಯಿಸಿದ ಆನಂತರ, ಆಪಾದಿಸಿರುವ ಈ ಹಿಂದಿನ ಅಪರಾಧ ನಿರ್ಣಯದ ಬಗ್ಗೆ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು ಮತ್ತು ಆ ಬಗ್ಗೆ ನಿರ್ಣಯವನ್ನು ದಾಖಲು ಮಾಡತಕ್ಕದ್ದು:

ಪರಂತು, ಆಪಾದಿತನು 252ನೇ ಅಥವಾ 258ನೇ ಪ್ರಕರಣದ ಮೇರೆಗೆ, ಅಪರಾಧಿ ಎಂದು ನಿರ್ಣೀತನಾದ ಹೊರತು ಮತ್ತು ನಿರ್ಣೀತನಾಗುವವರೆಗೆ, ಅಂಥ ಯಾವ ಆರೋಪವನ್ನೂ ನ್ಯಾಯಾಧೀಶನು ಓದಿ ಹೇಳತಕ್ಕದ್ದಲ್ಲ ಅಥವಾ ಆಪಾದಿತನನ್ನು ಆ ಬಗ್ಗೆ ವಾದಿಸಲು ಕೇಳತಕ್ಕದ್ದಲ್ಲ ಅಥವಾ ಪ್ರಾಸಿಕ್ಯೂಷನ್ ಅಥವಾ ಅದು ತಾನು ಒದಗಿಸಿದ ಯಾವುದೇ ಸಾಕ್ಷ್ಯದಲ್ಲಿ ಹಿಂದಿನ ಅಪರಾಧ ನಿರ್ಣಯದ ಬಗ್ಗೆ ಏನನ್ನೂ ಪ್ರಸ್ತಾಪಿಸತಕ್ಕದ್ದಲ್ಲ.

**260. 222ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಹೂಡಿದ ಮೊಕದ್ದಮೆಗಳಲ್ಲಿ ಪ್ರಕ್ರಿಯೆ.-** (1) 222ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಸೆಷನ್ ನ್ಯಾಯಾಲಯವು, ಮ್ಯಾಜಿಸ್ಟ್ರೇಟನ ನ್ಯಾಯಾಲಯದ ಮುಂದೆ ಪೊಲೀಸ್ ವರದಿಯ ಮೇಲೆ ಹೊರತು, ಅನ್ಯಥಾ ಹೂಡಿರುವ ವಾರಂಟ್ ಮೊಕದ್ದಮೆಗಳ ಅಧಿವಿಚಾರಣೆಯ ಪ್ರಕ್ರಿಯೆಗೆ ಅನುಸಾರವಾಗಿ ಮೊಕದ್ದಮೆಯ ಅಧಿವಿಚಾರಣೆ ಮಾಡತಕ್ಕದ್ದು:

ಪರಂತು, ಯಾರ ವಿರುದ್ಧ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆಯೋ ಆ ವ್ಯಕ್ತಿಯನ್ನು, ಸೆಷನ್ ನ್ಯಾಯಾಲಯವು, ಕಾರಣಗಳನ್ನು ದಾಖಲಿಸಿ ಅನ್ಯಥಾ ನಿರ್ದೇಶಿಸಿದ ಹೊರತು, ಪ್ರಾಸಿಕ್ಯೂಷನ್ ಪರವಾದ ಸಾಕ್ಷಿದಾರನಾಗಿ ವಿಚಾರಣೆ ಮಾಡತಕ್ಕದ್ದು.

(2) ಈ ಪ್ರಕರಣದಲ್ಲಿನ ಪ್ರತಿಯೊಂದು ಅಧಿವಿಚಾರಣೆಯನ್ನು, ರಹಸ್ಯವಾಗಿ ಮಾಡಬೇಕೆಂದು ಸಂಬಂಧಿಸಿದ ಯಾರೇ ಪಕ್ಷಕಾರರು ಇಚ್ಛಿಸಿದರೆ ಅಥವಾ ಹಾಗೆ ಮಾಡುವುದು ಸೂಕ್ತವೆಂದು ನ್ಯಾಯಾಲಯವು ಭಾವಿಸಿದರೆ, ಗೌಪ್ಯವಾಗಿ ನಡೆಸತಕ್ಕದ್ದು.

(3) ಅಂಥ ಯಾವುದೇ ಮೊಕದ್ದಮೆಯಲ್ಲಿ, ನ್ಯಾಯಾಲಯವು ಎಲ್ಲಾ ಆಪಾದಿತರನ್ನು ಅಥವಾ ಅವರಲ್ಲಿ ಯಾರೊಬ್ಬನನ್ನು ಬಿಡುಗಡೆ ಮಾಡಿದರೆ ಅಥವಾ ಖುಲಾಸೆಗೊಳಿಸಿದರೆ ಮತ್ತು ಅವರುಗಳ ವಿರುದ್ಧ ಅಥವಾ ಅವರಲ್ಲಿ ಯಾರೊಬ್ಬನ ವಿರುದ್ಧ ಆಪಾದನೆ ಮಾಡಲು ಸರಿಯಾದ ಕಾರಣವಿಲ್ಲವೆಂಬುದಾಗಿ ಅಭಿಪ್ರಾಯಪಟ್ಟರೆ, ಯಾರ ವಿರುದ್ಧವಾಗಿ ಅಪರಾಧವನ್ನು ಮಾಡಿರುವನೆಂಬುದಾಗಿ ಆಪಾದಿಸಲಾಗಿತ್ತೋ ಆ ವ್ಯಕ್ತಿಯನ್ನು (ರಾಷ್ಟ್ರಪತಿ, ಉಪ-ರಾಷ್ಟ್ರಪತಿ ಅಥವಾ ರಾಜ್ಯದ ರಾಜ್ಯಪಾಲ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನನ್ನು ಹೊರತುಪಡಿಸಿ) ಅವನು ಅಂಥ ಆಪಾದಿತನಿಗೆ ಅಥವಾ ಒಬ್ಬನಿಗಿಂತ ಹೆಚ್ಚು ಜನ ಆಪಾದಿತರಿದ್ದರೆ ಅಂಥ ಆಪಾದಿತರಲ್ಲಿ ಪ್ರತಿಯೊಬ್ಬನಿಗೆ ಅಥವಾ ಯಾರೊಬ್ಬನಿಗೆ ಏಕೆ

ನಷ್ಟಪರಿಹಾರವನ್ನು ಕೊಡಬಾರದೆಂದು ಕಾರಣವನ್ನು ತೋರಿಸಲು, ಬಿಡುಗಡೆಯ ಅಥವಾ ಖುಲಾಸೆಯ ತನ್ನ ಆದೇಶದ ಮೂಲಕ ನಿರ್ದೇಶಿಸಬಹುದು.

(4) ಹಾಗೆ ನಿರ್ದೇಶಿತನಾದ ವ್ಯಕ್ತಿಯು ತೋರಿಸಬಹುದಾದ ಯಾವುದೇ ಕಾರಣವನ್ನು ನ್ಯಾಯಾಲಯವು ದಾಖಲಿಸತಕ್ಕದ್ದು ಹಾಗೂ ಪರಿಗಣಿಸತಕ್ಕದ್ದು ಮತ್ತು ಅಂಥ ಆಪಾದನೆಯನ್ನು ಮಾಡಲು ಯುಕ್ತ ಕಾರಣವಿರಲಿಲ್ಲ ಎಂದು ಅದಕ್ಕೆ ಮನದಟ್ಟಾದರೆ, ಅದು ಕಾರಣಗಳನ್ನು ದಾಖಲಿಸಿ, ಅದು ನಿರ್ಧರಿಸಬಹುದಾದಂತೆ ಐದು ಸಾವಿರ ರೂಪಾಯಿಗಳಿಗೆ ಮೀರದಂಥ ಮೊಬಲಗಿನ ನಷ್ಟಪರಿಹಾರವನ್ನು, ಅಂಥ ವ್ಯಕ್ತಿಯು ಆಪಾದಿತನಿಗೆ ಅಥವಾ ಅವರಲ್ಲಿ ಪ್ರತಿಯೊಬ್ಬನಿಗೆ ಅಥವಾ ಅವರಲ್ಲಿ ಯಾರೊಬ್ಬನಿಗಾದರೂ ಸಂದಾಯ ಮಾಡಬೇಕೆಂದು ಆದೇಶವನ್ನು ಮಾಡಬಹುದು.

(5) (4)ನೇ ಉಪಪ್ರಕರಣದ ಮೇರೆಗೆ ನಿರ್ಣಯಿಸುವ ನಷ್ಟಪರಿಹಾರವನ್ನು ಅದು ಮ್ಯಾಜಿಸ್ಟ್ರೇಟನು ವಿಧಿಸಿದ್ದ ಜುಲ್ಮಾನೆಯಾಗಿದ್ದರೆ ಹೇಗೆ ವಸೂಲು ಮಾಡಲಾಗುತ್ತಿತ್ತೋ ಹಾಗೆಯೇ ವಸೂಲು ಮಾಡತಕ್ಕದ್ದು.

(6) (4)ನೇ ಉಪಪ್ರಕರಣದ ಮೇರೆಗೆ ನಷ್ಟಪರಿಹಾರವನ್ನು ಸಂದಾಯ ಮಾಡುವಂತೆ ನಿರ್ದೇಶಿಸಲಾದ ಯಾರೇ ವ್ಯಕ್ತಿಗೆ, ಅಂಥ ಆದೇಶದ ಕಾರಣದಿಂದ, ಈ ಪ್ರಕರಣದ ಮೇರೆಗೆ ಮಾಡಿದ ದೂರಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಹೊಣೆಗಾರಿಕೆಯಿಂದ ವಿನಾಯಿತಿ ಕೊಡತಕ್ಕದ್ದಲ್ಲ:

ಪರಂತು, ಈ ಪ್ರಕರಣದ ಮೇರೆಗೆ ಆಪಾದಿತ ವ್ಯಕ್ತಿಗೆ ಸಂದಾಯ ಮಾಡಿದ ಯಾವುದೇ ಮೊಬಲಗನ್ನು ಅದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ತರುವಾಯದ ಸಿವಿಲ್ ದಾವೆಯಲ್ಲಿ ಅಂಥ ವ್ಯಕ್ತಿಗೆ ನಷ್ಟಪರಿಹಾರವನ್ನು ಕೊಡುವಾಗ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(7) (4)ನೇ ಉಪಪ್ರಕರಣದ ಮೇರೆಗೆ ನಷ್ಟಪರಿಹಾರವನ್ನು ಸಂದಾಯ ಮಾಡುವಂತೆ ಯಾವ ವ್ಯಕ್ತಿಗೆ ಆದೇಶ ನೀಡಲಾಗಿದೆಯೋ ಆ ವ್ಯಕ್ತಿಯು ಆ ಆದೇಶದ ಮೇಲೆ, ಅದು ನಷ್ಟಪರಿಹಾರದ ಸಂದಾಯಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

(8) ಆಪಾದಿತ ವ್ಯಕ್ತಿಗೆ ನಷ್ಟಪರಿಹಾರವನ್ನು ಸಂದಾಯ ಮಾಡಲು ಆದೇಶ ಮಾಡಿದಾಗ, ಅಪೀಲನ್ನು ಸಲ್ಲಿಸಲು ಅವಕಾಶವಿರುವ ಅವಧಿಯು ಮುಗಿಯುವ ಮುಂಚೆ ಅಥವಾ ಅಪೀಲು ಸಲ್ಲಿಸಿದ್ದರೆ ಅದು ನಿರ್ಣಯವಾಗುವ ಮುಂಚೆ, ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

## ಅಧ್ಯಾಯ XX

## ಮ್ಯಾಜಿಸ್ಟ್ರೇಟರಿಂದ ವಾರಂಟ್ ಮೊಕದ್ದಮೆಗಳ ಅಧಿವಿಚಾರಣೆ

### *ಎ.- ಪೊಲೀಸ್ ವರದಿಯ ಮೇಲೆ ಹೂಡಿದ ಮೊಕದ್ದಮೆಗಳು*

**261. 230ನೇ ಪ್ರಕರಣದ ಪಾಲನೆ.-** ಪೊಲೀಸ್ ವರದಿಯ ಆಧಾರದ ಮೇಲೆ ಹೂಡಿದ ಯಾವುದೇ ವಾರಂಟ್ ಮೊಕದ್ದಮೆಯಲ್ಲಿ, ಅಧಿವಿಚಾರಣೆಯು ಆರಂಭವಾಗುವಾಗ ಆಪಾದಿತನು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾದರೆ ಅಥವಾ ಅವನನ್ನು ಹಾಜರುಪಡಿಸಿದರೆ, ಮ್ಯಾಜಿಸ್ಟ್ರೇಟನು 230ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಿರುವ ಬಗ್ಗೆ ಮನದಟ್ಟು ಮಾಡಿಕೊಳ್ಳತಕ್ಕದ್ದು.

**262. ಆಪಾದಿತನನ್ನು ಯಾವಾಗ ಬಿಡುಗಡೆ ಮಾಡತಕ್ಕದ್ದು.-** (1) ಆಪಾದಿತನು, 230ನೇ ಪ್ರಕರಣದ ಮೇರೆಗೆ ಮೊಕದ್ದಮೆ ಹೂಡಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಬಹುದು.

(2) ಪೊಲೀಸ್ ವರದಿಯನ್ನು ಮತ್ತು 193ನೇ ಪ್ರಕರಣದ ಮೇರೆಗೆ ಅದರೊಂದಿಗೆ ಕಳುಹಿಸಲಾದ ದಸ್ತಾವೇಜುಗಳನ್ನು ಪರ್ಯಾಲೋಚಿಸಿದ ಮೇಲೆ ಮತ್ತು ಆಪಾದಿತನ ಬಗ್ಗೆ ಮ್ಯಾಜಿಸ್ಟ್ರೇಟನು ಅವಶ್ಯಕವೆಂದು ಭಾವಿಸುವಂಥ ವಿಚಾರಣೆಯೇನಾದರೂ ಇದ್ದರೆ ಅದನ್ನು ಭೌತಿಕವಾಗಿಯಾಗಲೀ ಅಥವಾ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮುಖಾಂತರವಾಗಿಯಾಗಲೀ ಮಾಡಿದ ಮೇಲೆ ಮತ್ತು ಪ್ರಾಸಿಕ್ಯೂಷನ್ನಿಗೆ ಹಾಗೂ ಆಪಾದಿತನಿಗೆ ಅಹವಾಲು ಹೇಳಿಕೊಳ್ಳುವ ಅವಕಾಶಕೊಟ್ಟ ತರುವಾಯ, ಆಪಾದಿತನ ವಿರುದ್ಧ ಇರುವ ಆರೋಪವು ನಿರಾಧಾರವೆಂದು ಮ್ಯಾಜಿಸ್ಟ್ರೇಟನು ಪರ್ಯಾಲೋಚಿಸಿದರೆ, ಅವನು ಆಪಾದಿತನ ವಿರುದ್ಧ ಮಾಡಿರುವ ಆರೋಪವು ನಿರಾಧಾರವಾದುದೆಂದು ಪರಿಗಣಿಸತಕ್ಕದ್ದು ಮತ್ತು ಹಾಗೆ ಮಾಡುವುದಕ್ಕೆ ತನಗೆ ಇರುವ ಕಾರಣಗಳನ್ನು ದಾಖಲಿಸತಕ್ಕದ್ದು.

**263. ಆರೋಪವನ್ನು ರೂಪಿಸುವುದು.-** (1) ಅಂಥ ಪರ್ಯಾಲೋಚನೆ, ಪರೀಕ್ಷೆ ಯಾವುದಾದರೂ ಇದ್ದರೆ, ಅದನ್ನು ಮತ್ತು ವಿಚಾರಣೆಯನ್ನು ಮಾಡಿದ ಮೇಲೆ, ಈ ಅಧ್ಯಾಯದ ಮೇರೆಗೆ ಅಧಿವಿಚಾರಣೆ ಮಾಡಬಹುದಾದ ಅಪರಾಧವನ್ನು ಆಪಾದಿತನು ಮಾಡಿರುವುದಾಗಿ ಪೂರ್ವಭಾವನೆ ಮಾಡಲು ಆಧಾರವಿರುವುದೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಟ್ಟರೆ, ಅದರ ಅಧಿವಿಚಾರಣೆ ಮಾಡಲು ಅಂಥ ಮ್ಯಾಜಿಸ್ಟ್ರೇಟನು ಸಕ್ಷಮನಾಗಿದ್ದರೆ ಮತ್ತು ಅದಕ್ಕೆ ಸರಿಯಾದ ದಂಡನೆಯನ್ನು ತಾನು ವಿಧಿಸಬಹುದೆಂದು ಅವನು ಅಭಿಪ್ರಾಯಪಟ್ಟರೆ, ದೋಷಾರೋಪಣೆಯ ಮೇಲಿನ ಮೊದಲ ಸುನಾವಣೆಯ ದಿನಾಂಕದಿಂದ ಅರವತ್ತು ದಿನಗಳ ಅವಧಿಯ ಒಳಗೆ ಅವರು ಆಪಾದಿತನ ವಿರುದ್ಧ ಲಿಖಿತದಲ್ಲಿ ಆರೋಪವನ್ನು ರೂಪಿಸತಕ್ಕದ್ದು.

(2) ಆರೋಪವನ್ನು ಆಪಾದಿತನಿಗೆ ಓದಿ ಹೇಳತಕ್ಕದ್ದು ಹಾಗೂ ವಿವರಿಸತಕ್ಕದ್ದು ಮತ್ತು ಅವನ ಮೇಲೆ ಆರೋಪಿಸಿರುವ ಅಪರಾಧವನ್ನು ಮಾಡಿರುವುದಾಗಿ ಒಪ್ಪಿಕೊಳ್ಳುವನೇ ಅಥವಾ ಅಧಿವಿಚಾರಣೆ ಮಾಡಬೇಕೆಂದು ಹೇಳುವನೇ ಎಂದು ಆಪಾದಿತನನ್ನು ಕೇಳತಕ್ಕದ್ದು.

**264. ತಪ್ಪೊಪ್ಪಿಕೊಂಡ ಮೇಲೆ ಅಪರಾಧ ನಿರ್ಣಯ.-** ಆಪಾದಿತನು ತಪ್ಪೊಪ್ಪಿಕೊಂಡರೆ, ಮ್ಯಾಜಿಸ್ಟ್ರೇಟನು ತಪ್ಪೊಪ್ಪಿಗೆಯನ್ನು ದಾಖಲಿಸತಕ್ಕದ್ದು ಮತ್ತು ತನ್ನ ವಿವೇಚನಾನುಸಾರ, ಆ ಬಗ್ಗೆ ಅವನನ್ನು ಅಪರಾಧ ನಿರ್ಣೀತನನ್ನಾಗಿ ಮಾಡಬಹುದು.

**265. ಪ್ರಾಸಿಕ್ಯೂಷನ್ ಪರ ಸಾಕ್ಷ್ಯ.-** (1) ಆಪಾದಿತನು ವಾದಿಸಲು ನಿರಾಕರಿಸಿದರೆ ಅಥವಾ ವಾದಿಸದಿದ್ದರೆ ಅಥವಾ ಅಧಿವಿಚಾರಣೆಯಾಗಬೇಕೆಂದು ಕೇಳಿಕೊಂಡರೆ ಅಥವಾ 264ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಅವನನ್ನು ಅಪರಾಧಿ ಎಂದು ನಿರ್ಣಯಿಸಿರದಿದ್ದರೆ, ಮ್ಯಾಜಿಸ್ಟ್ರೇಟನು ಸಾಕ್ಷಿದಾರರ ವಿಚಾರಣೆಗಾಗಿ ದಿನಾಂಕವನ್ನು ನಿಗದಿಪಡಿಸತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟನು ಪೊಲೀಸ್ ತನಿಖೆಯ ಅವಧಿಯಲ್ಲಿ ದಾಖಲು ಮಾಡಿಕೊಳ್ಳಲಾಗಿರುವ ಸಾಕ್ಷಿದಾರರ ಹೇಳಿಕೆಯ ಪ್ರತಿಗಳನ್ನು ಆಪಾದಿತನಿಗೆ ಮುಂಚಿತವಾಗಿಯೇ ಒದಗಿಸತಕ್ಕದ್ದು.

(2) ಪ್ರಾಸಿಕ್ಯೂಷನ್ ಅರ್ಜಿ ಸಲ್ಲಿಸಿದಾಗ ಮ್ಯಾಜಿಸ್ಟ್ರೇಟನು, ಪ್ರಾಸಿಕ್ಯೂಷನ್ನಿನ ಯಾರೇ ಸಾಕ್ಷಿದಾರನು ಹಾಜರಾಗುವಂತೆ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವಂತೆ ನಿರ್ದೇಶಿಸುವ ಸಮನನ್ನು ಹೊರಡಿಸಬಹುದು.

(3) ಹಾಗೆ ನಿಗದಿಪಡಿಸಿದ ದಿನಾಂಕದಂದು, ಮ್ಯಾಜಿಸ್ಟ್ರೇಟನು ಪ್ರಾಸಿಕ್ಯೂಷನ್ನಿಗೆ ಸಮರ್ಥನೆಯಾಗಿ ಒದಗಿಸಬಹುದಾದಂಥ ಎಲ್ಲ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟನು, ಯಾರೇ ಇತರ ಸಾಕ್ಷಿದಾರನನ್ನು ಅಥವಾ ಸಾಕ್ಷಿದಾರರನ್ನು ವಿಚಾರಣೆ ಮಾಡುವವರೆಗೆ ಯಾರೇ ಸಾಕ್ಷಿದಾರನ ಪಾಟೀ-ಸವಾಲನ್ನು ಮುಂದೂಡಲು ಅನುಮತಿ ನೀಡಬಹುದು ಅಥವಾ ಹೆಚ್ಚಿನ ಪಾಟೀ-ಸವಾಲಿಗಾಗಿ, ಯಾರೇ ಸಾಕ್ಷಿದಾರನನ್ನು ಪುನಃ ಕರೆಸಬಹುದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ಸಾಕ್ಷಿದಾರನ ವಿಚಾರಣೆಯನ್ನು ರಾಜ್ಯ ಸರ್ಕಾರವು ಅಧಿಸೂಚಿಸಿದ ಗೊತ್ತುಪಡಿಸಿದ ಸ್ಥಳದಲ್ಲಿ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳ ಮೂಲಕ ಮಾಡಬಹುದು.

**266. ಪ್ರತಿರಕ್ಷೆಗಾಗಿ ಸಾಕ್ಷ್ಯ.-** (1) ಆಪಾದಿತನು ಪ್ರತಿರಕ್ಷೆಯನ್ನು ಪ್ರಾರಂಭಿಸಲು ಮತ್ತು ಅವನು ಹೊಂದಿರುವ ಸಾಕ್ಷ್ಯವನ್ನು ಒದಗಿಸಲು ಅವನನ್ನು ಕರೆಯತಕ್ಕದ್ದು ಮತ್ತು ಆಪಾದಿತನು ಯಾವುದೇ ಲಿಖಿತ ಹೇಳಿಕೆಯನ್ನು ಕೊಟ್ಟರೆ, ಮ್ಯಾಜಿಸ್ಟ್ರೇಟನು ಅದನ್ನು ದಾಖಲೆಗೆ ಸೇರಿಸಿಕೊಳ್ಳತಕ್ಕದ್ದು.

(2) ಆಪಾದಿತನು, ತನ್ನ ಪ್ರತಿರಕ್ಷೆಯ ವಾದವನ್ನು ಪ್ರಾರಂಭಿಸಿದ ತರುವಾಯ, ವಿಚಾರಣೆಗಾಗಿ ಅಥವಾ ಪಾಟೀ-ಸವಾಲಿಗಾಗಿ ಅಥವಾ ಯಾರೇ ಸಾಕ್ಷಿದಾರನ ಹಾಜರಾತಿಯನ್ನು ಅಥವಾ ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸುವುದನ್ನು ಒತ್ತಾಯಿಸುವುದಕ್ಕಾಗಿ ಯಾವುದೇ ಆದೇಶಿಕೆಯನ್ನು ಹೊರಡಿಸಬೇಕೆಂದು ಮ್ಯಾಜಿಸ್ಟ್ರೇಟನಿಗೆ ಅರ್ಜಿ ಸಲ್ಲಿಸಿದರೆ, ಅಂಥ ಅರ್ಜಿಯನ್ನು, ಅದು ಕಿರುಕುಳ ಕೊಡುವ ಅಥವಾ ವಿಳಂಬ ಮಾಡುವ ಉದ್ದೇಶಕ್ಕಾಗಿ ಅಥವಾ ನ್ಯಾಯೋದ್ದೇಶಗಳನ್ನು ವಿಫಲಗೊಳಿಸುವುದಕ್ಕಾಗಿ ಸಲ್ಲಿಸಲಾಗಿದೆಯೆಂಬ ಆಧಾರದ ಮೇಲೆ ನಿರಾಕರಿಸಬೇಕೆಂದು ಮ್ಯಾಜಿಸ್ಟ್ರೇಟನು ಪರ್ಯಾಲೋಚಿಸಿದ ಹೊರತು, ಅವನು ಅಂಥ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿಕೊಳ್ಳತಕ್ಕದ್ದು:

ಪರಂತು, ತನ್ನ ಪ್ರತಿರಕ್ಷೆಯ ವಾದವನ್ನು ಪ್ರಾರಂಭಿಸುವ ಮೊದಲು, ಆಪಾದಿತನು ಯಾರೇ ಸಾಕ್ಷಿದಾರನನ್ನು ಪಾಟೀ-ಸವಾಲು ಮಾಡಿದರೆ ಅಥವಾ ಪಾಟೀ-ಸವಾಲು ಮಾಡುವ ಅವಕಾಶವನ್ನು ಹೊಂದಿದ್ದರೆ, ನ್ಯಾಯೋದ್ದೇಶಗಳಿಗಾಗಿ ಅದು ಅವಶ್ಯವೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದ ಹೊರತು ಅಂಥ ಸಾಕ್ಷಿದಾರನ ಹಾಜರಾತಿಯನ್ನು ಈ ಪ್ರಕರಣದ ಮೇರೆಗೆ ಒತ್ತಾಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ಸಾಕ್ಷಿದಾರನ ವಿಚಾರಣೆಯನ್ನು ರಾಜ್ಯ ಸರ್ಕಾರವು ಅಧಿಸೂಚಿಸಿ ಗೊತ್ತುಪಡಿಸಿದ ಸ್ಥಳದಲ್ಲಿ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕ ಮಾಡಬಹುದು.

(3) ಮ್ಯಾಜಿಸ್ಟ್ರೇಟನು, (2)ನೇ ಉಪಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಿದ ಮೇಲೆ ಯಾರೇ ಸಾಕ್ಷಿದಾರನನ್ನು ಸಮನ್ ಮಾಡುವುದಕ್ಕೂ ಮುಂಚೆ, ಅಧಿವಿಚಾರಣೆಯ ಉದ್ದೇಶಗಳಿಗಾಗಿ ಹಾಜರಾಗಲು ಸಾಕ್ಷಿದಾರನು ಭರಿಸುವ ಯುಕ್ತ ವೆಚ್ಚಗಳನ್ನು ನ್ಯಾಯಾಲಯದಲ್ಲಿ ಠೇವಣಿ ಇಡಲು ಅಗತ್ಯಪಡಿಸಬಹುದು.

### *ಬಿ.- ಪೊಲೀಸ್ ವರದಿಯ ಮೇಲಲ್ಲದೆ ಅನ್ಯಥಾ ಹೂಡಿದ ಮೊಕದ್ದಮೆಗಳು*

**267. ಪ್ರಾಸಿಕ್ಯೂಷನ್ ಪರ ಸಾಕ್ಷ್ಯ.-** (1) ಪೊಲೀಸ್ ವರದಿಯ ಮೇಲಲ್ಲದೆ ಅನ್ಯಥಾ ಹೂಡಿದ ವಾರಂಟ್ ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟನ ಮುಂದೆ ಆಪಾದಿತನು ಹಾಜರಾದಾಗ ಅಥವಾ ಅವನನ್ನು ಹಾಜರುಪಡಿಸಿದಾಗ ಮ್ಯಾಜಿಸ್ಟ್ರೇಟನು ಪ್ರಾಸಿಕ್ಯೂಷನ್ ವಾದವನ್ನು ಆಲಿಸಲು ಮತ್ತು ಪ್ರಾಸಿಕ್ಯೂಷನ್ನಿನ ಸಮರ್ಥನೆಯಾಗಿ ಒದಗಿಸಬಹುದಾದಂಥ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು.

(2) ಪ್ರಾಸಿಕ್ಯೂಷನ್ ಅರ್ಜಿ ಸಲ್ಲಿಸಿದಾಗ ಮ್ಯಾಜಿಸ್ಟ್ರೇಟನು, ಪ್ರಾಸಿಕ್ಯೂಷನ್ನಿನ ಯಾರೇ ಸಾಕ್ಷಿದಾರನು ಹಾಜರಾಗುವಂತೆ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವಂತೆ ನಿರ್ದೇಶಿಸುವ ಸಮನನ್ನು ಹೊರಡಿಸಬಹುದು.

**268. ಆಪಾದಿತನನ್ನು ಯಾವಾಗ ಬಿಡುಗಡೆ ಮಾಡತಕ್ಕದ್ದು.-** (1) 267ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಎಲ್ಲ ಸಾಕ್ಷ್ಯವನ್ನು ತೆಗೆದುಕೊಂಡ ಮೇಲೆ, ಮ್ಯಾಜಿಸ್ಟ್ರೇಟನು, ಯಾವ ವಾದವನ್ನು ಅಲ್ಲಗಳೆಯದಿದ್ದರೆ ಅದು ಆಪಾದಿತನ ವಿರುದ್ಧ ಅಪರಾಧ ನಿರ್ಣಯಕ್ಕೆ ಸಮರ್ಥನೆ ಕೊಡುತ್ತಿತ್ತೋ ಅಂಥ ಯಾವುದೇ ವಾದಕ್ಕೆ ಸಮರ್ಥನೆಯನ್ನು ಒದಗಿಸಿಲ್ಲವೆಂದು ಮ್ಯಾಜಿಸ್ಟ್ರೇಟನು ಪರ್ಯಾಲೋಚಿಸಿದರೆ, ಕಾರಣಗಳನ್ನು ದಾಖಲಿಸಿ ಅವನನ್ನು ಬಿಡುಗಡೆ ಮಾಡತಕ್ಕದ್ದು.

(2) ಈ ಪ್ರಕರಣದಲ್ಲಿರುವುದಾವುದೂ, ಮ್ಯಾಜಿಸ್ಟ್ರೇಟನು ಕಾರಣಗಳನ್ನು ದಾಖಲಿಸಿ, ಆಪಾದಿತನ ವಿರುದ್ಧ ಮಾಡಿದ ಆರೋಪವು ನಿರಾಧಾರವೆಂದು ಪರಿಗಣಿಸಿದರೆ, ಮೊಕದ್ದಮೆಯ ಯಾವುದೇ ಹಿಂದಿನ ಹಂತದಲ್ಲಿ ಆಪಾದಿತನನ್ನು ಬಿಡುಗಡೆ ಮಾಡಲು ಅವನನ್ನು ಪ್ರತಿಬಂಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

**269. ಆಪಾದಿತನನ್ನು ಬಿಡುಗಡೆ ಮಾಡದಿದ್ದಾಗ ಪ್ರಕ್ರಿಯೆ.-** (1) ಅಂಥ ಯಾವುದೇ ಸಾಕ್ಷ್ಯವನ್ನು ತೆಗೆದುಕೊಂಡಾಗ ಅಥವಾ ಮೊಕದ್ದಮೆಯ ಯಾವುದೇ ಹಿಂದಿನ ಹಂತದಲ್ಲಿ ಮ್ಯಾಜಿಸ್ಟ್ರೇಟನು ಈ ಅಧ್ಯಾಯದ ಮೇರೆಗೆ ಅಧಿವಿಚಾರಣೆ ಮಾಡಬಹುದಾದ ಅಪರಾಧವನ್ನು ಆಪಾದಿತನು ಮಾಡಿರುವುದಾಗಿ ಪೂರ್ವಭಾವನೆ ಮಾಡಲು ಕಾರಣವಿರುವುದೆಂದು ಮತ್ತು ಅದನ್ನು ವಿಚಾರಣೆ ಮಾಡಲು ತಾನು ಸಕ್ಷಮನೆಂದು ಮತ್ತು ತಾನು ಅದಕ್ಕೆ ಸರಿಯಾದ ದಂಡನೆ ವಿಧಿಸಬಹುದಾಗಿದೆಯೆಂದು ಅಭಿಪ್ರಾಯಪಟ್ಟರೆ, ಅವರು ಆಪಾದಿತನ ವಿರುದ್ಧ ಲಿಖಿತ ಆರೋಪವನ್ನು ರೂಪಿಸತಕ್ಕದ್ದು.

(2) ಆರೋಪವನ್ನು ಆಪಾದಿತನಿಗೆ ಓದಿ ಹೇಳತಕ್ಕದ್ದು ಹಾಗೂ ವಿವರಿಸತಕ್ಕದ್ದು ಮತ್ತು ಅವನ ಮೇಲೆ ಆರೋಪಿಸಿರುವ ಅಪರಾಧವನ್ನು ಮಾಡಿರುವುದಾಗಿ ಒಪ್ಪಿಕೊಳ್ಳುವನೇ ಅಥವಾ ಅವನು ಪ್ರತಿವಾದವನ್ನೇನಾದರೂ ಮಂಡಿಸುವನೇ ಎಂದು ಆಪಾದಿತನನ್ನು ಕೇಳತಕ್ಕದ್ದು.

(3) ಆಪಾದಿತನು ತಪ್ಪೊಪ್ಪಿಕೊಂಡರೆ, ಮ್ಯಾಜಿಸ್ಟ್ರೇಟನು ಆ ವಾದವನ್ನು ದಾಖಲಿಸತಕ್ಕದ್ದು ಮತ್ತು ತನ್ನ ವಿವೇಚನಾನುಸಾರ, ಆ ಬಗ್ಗೆ ಅವನನ್ನು ಅಪರಾಧ ನಿರ್ಣೀತನನ್ನಾಗಿ ಮಾಡಬಹುದು.

(4) ಆಪಾದಿತನು ವಾದವನ್ನು ಮಂಡಿಸಲು ನಿರಾಕರಿಸಿದರೆ ಅಥವಾ ವಾದವನ್ನು ಪ್ರಾರಂಭಿಸದಿದ್ದರೆ ಅಥವಾ ಅಧಿವಿಚಾರಣೆ ಮಾಡಬೇಕೆಂದು ಕೋರಿದರೆ ಅಥವಾ ಆಪಾದಿತನು (3)ನೇ ಉಪಪ್ರಕರಣದ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗಿರದಿದ್ದರೆ, ತದನಂತರ ಮೊಕದ್ದಮೆಯ ವಿಚಾರಣೆಯು ಪ್ರಾರಂಭವಾಗುವಾಗ ಅಥವಾ ಮ್ಯಾಜಿಸ್ಟ್ರೇಟನು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸುವುದು ಸೂಕ್ತವೆಂದು ಭಾವಿಸಿದರೆ, ಪ್ರಾಸಿಕ್ಯೂಷನ್ ಪರ ಯಾರೇ ಸಾಕ್ಷಿದಾರನನ್ನು ಪಾಟೀ-ಸವಾಲು ಮಾಡಲು ಆಪಾದಿತನು ಇಚ್ಛಿಸುತ್ತಾನೆಯೇ ಮತ್ತು ಹಾಗೆ ಇಚ್ಛಿಸಿದರೆ, ಪ್ರಾಸಿಕ್ಯೂಷನ್ ಸಾಕ್ಷಿದಾರರ ಪೈಕಿ ಯಾವ ಸಾಕ್ಷಿದಾರನ ಸಾಕ್ಷ್ಯ ಎಂಬುದನ್ನು ಕೂಡಲೇ ತಿಳಿಸಲು ಆಪಾದಿತನನ್ನು ಅಗತ್ಯಪಡಿಸತಕ್ಕದ್ದು.

(5) ತಾನು ಹಾಗೆ ಇಚ್ಛಿಸುವನೆಂದು ಅವನು ಹೇಳಿದರೆ, ಅಂಥ ಸಾಕ್ಷಿದಾರರನ್ನು ಪುನಃ ಕರೆಯತಕ್ಕದ್ದು, ಅವನು ಹೆಸರಿಸಿದ ಸಾಕ್ಷಿದಾರರನ್ನು ಪುನಃ ಕರೆಯಬೇಕೆಂದು ಮತ್ತು ಪಾಟೀ-ಸವಾಲು ಮತ್ತು ಮರುಪರೀಕ್ಷೆಯನ್ನು (ಏನಾದರೂ ಇದ್ದರೆ) ಮಾಡಿದ ತರುವಾಯ, ಅವರನ್ನು ಬಿಡುಗಡೆ ಮಾಡತಕ್ಕದ್ದು.

(6) ಪ್ರಾಸಿಕ್ಯೂಷನ್ನಿನ ಉಳಿದ ಸಾಕ್ಷಿದಾರರ ಸಾಕ್ಷ್ಯವನ್ನು ನಂತರ ತೆಗೆದುಕೊಳ್ಳತಕ್ಕದ್ದು ಮತ್ತು ಪಾಟೀ-ಸವಾಲು ಮತ್ತು ಮರುಪರೀಕ್ಷೆಯನ್ನು (ಏನಾದರೂ ಇದ್ದರೆ) ಮಾಡಿದ ತರುವಾಯ, ಅವರನ್ನು ಸಹ ಬಿಡುಗಡೆ ಮಾಡತಕ್ಕದ್ದು.

(7) ಪ್ರಾಸಿಕ್ಯೂಷನ್ನಿಗೆ ಅವಕಾಶವನ್ನು ನೀಡಿದ್ದರೂ ಮತ್ತು ಈ ಸಂಹಿತೆಯ ಮೇರೆಗೆ ಎಲ್ಲಾ ಯುಕ್ತ ಕ್ರಮಗಳನ್ನು ಕೈಗೊಂಡ ನಂತರವೂ, (5) ಮತ್ತು (6)ನೇ ಉಪಪ್ರಕರಣಗಳ ಮೇರೆಗೆ ಪ್ರಾಸಿಕ್ಯೂಷನ್ ಸಾಕ್ಷಿದಾರರನ್ನು ಪಾಟೀ-ಸವಾಲಿಗಾಗಿ ಹಾಜರುಪಡಿಸಲು ಸಾಧ್ಯವಾಗದ ಕಾರಣ, ಅಂಥ ಸಾಕ್ಷಿದಾರನು ಲಭ್ಯವಿಲ್ಲದಿದ್ದುದ್ದಕ್ಕಾಗಿ ಪರೀಕ್ಷಿಸಲಾಗಿಲ್ಲ ಎಂದು ಪರಿಗಣಿಸತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಪ್ರಾಸಿಕ್ಯೂಷನ್ ಸಾಕ್ಷ್ಯವನ್ನು ಮುಕ್ತಾಯಗೊಳಿಸಬಹುದು ಮತ್ತು ದಾಖಲೆಯಲ್ಲಿನ ವಿಷಯಗಳ ಆಧಾರದ ಮೇಲೆ ಮೊಕದ್ದಮೆಯನ್ನು ಮುಂದುವರೆಸಬಹುದು.

**270. ಪ್ರತಿರಕ್ಷೆಗಾಗಿ ಸಾಕ್ಷ್ಯ.-** ಆಪಾದಿತನನ್ನು ತನ್ನ ಪ್ರತಿರಕ್ಷೆಯನ್ನು ಪ್ರಾರಂಭಿಸಲು ಮತ್ತು ತನ್ನ ಸಾಕ್ಷ್ಯವನ್ನು ಒದಗಿಸಲು ಕರೆಯತಕ್ಕದ್ದು ಮತ್ತು 266ನೇ ಪ್ರಕರಣದ ಉಪಬಂಧಗಳು ಆ ಮೊಕದ್ದಮೆಗೆ ಅನ್ವಯವಾಗತಕ್ಕದ್ದು.

***ಸಿ.- ಅಧಿವಿಚಾರಣೆಯ ಮುಕ್ತಾಯ***

**271. ಖುಲಾಸೆ ಅಥವಾ ಅಪರಾಧ ನಿರ್ಣಯ.-** (1) ಈ ಅಧ್ಯಾಯದ ಮೇರೆಗಿನ ಯಾವ ಮೊಕದ್ದಮೆಯಲ್ಲಿ ಆರೋಪವನ್ನು ರೂಪಿಸಲಾಗಿದೆಯೋ, ಆ ಮೊಕದ್ದಮೆಯಲ್ಲಿ, ಆಪಾದಿತನು ತಪ್ಪಿತಸ್ಥನಲ್ಲವೆಂದು ಮ್ಯಾಜಿಸ್ಟ್ರೇಟನು ನಿರ್ಣಯಿಸಿದ್ದಲ್ಲಿ, ಅವನು ಖುಲಾಸೆ ಆದೇಶವನ್ನು ದಾಖಲಿಸತಕ್ಕದ್ದು.

(2) ಈ ಅಧ್ಯಾಯದ ಮೇರೆಗಿನ ಯಾವುದೇ ಮೊಕದ್ದಮೆಯಲ್ಲಿ ಆಪಾದಿತನು ತಪ್ಪಿತಸ್ಥನೆಂದು ಮ್ಯಾಜಿಸ್ಟ್ರೇಟನು ನಿರ್ಣಯಿಸಿದಾಗ, 364ನೇ ಪ್ರಕರಣ ಅಥವಾ 401ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ವ್ಯವಹರಿಸದಿದ್ದರೆ, ಆತನು ಶಿಕ್ಷೆಯ ವಿಷಯವನ್ನು ಕುರಿತು ಆಪಾದಿತನ ಅಹವಾಲನ್ನು ಆಲಿಸಿದ ತರುವಾಯ, ಕಾನೂನಿಗೆ ಅನುಸಾರವಾಗಿ ಅವನಿಗೆ ಶಿಕ್ಷೆಯನ್ನು ವಿಧಿಸತಕ್ಕದ್ದು.

(3) ಈ ಅಧ್ಯಾಯದ ಮೇರೆಗಿನ ಯಾವುದೇ ಮೊಕದ್ದಮೆಯಲ್ಲಿ, 234ನೇ ಪ್ರಕರಣದ (7)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ, ಹಿಂದಿನ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಆರೋಪವನ್ನು ಹೊರಿಸಿದ್ದಲ್ಲಿ ಮತ್ತು ಆ ಆರೋಪದಲ್ಲಿ ಹೇಳಿರುವಂತೆ ತಾನು ಈ ಹಿಂದೆ ಅಪರಾಧಿಯೆಂದು ನಿರ್ಣೀತನಾಗಿದ್ದೇನೆಂಬುದನ್ನು ಆಪಾದಿತನು ಒಪ್ಪದಿದ್ದಲ್ಲಿ, ಮ್ಯಾಜಿಸ್ಟ್ರೇಟನು ಸದರಿ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿದ ತರುವಾಯ, ಈ ಹಿಂದೆ ಆರೋಪಿಸಿದ ಅಪರಾಧದ ಸಂಬಂಧದಲ್ಲಿ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು ಮತ್ತು ಆ ಬಗ್ಗೆ ನಿರ್ಣಯವನ್ನು ದಾಖಲಿಸತಕ್ಕದ್ದು:

ಪರಂತು, (2)ನೇ ಉಪಪ್ರಕರಣದ ಮೇರೆಗೆ ಆಪಾದಿತನು ಅಪರಾಧಿಯೆಂದು ನಿರ್ಣೀತನಾಗಿದ್ದ ಹೊರತು ಮತ್ತು ನಿರ್ಣೀತನಾಗುವವರೆಗೆ, ಮ್ಯಾಜಿಸ್ಟ್ರೇಟನು ಅಂಥ ಯಾವುದೇ ಆರೋಪವನ್ನು ಓದಿ ಹೇಳತಕ್ಕದ್ದಲ್ಲ ಅಥವಾ ಆ ಬಗ್ಗೆ ವಾದಿಸಲು ಆಪಾದಿತನನ್ನು ಕೇಳತಕ್ಕದ್ದಲ್ಲ ಅಥವಾ ಪ್ರಾಸಿಕ್ಯೂಷನ್ ಅಥವಾ ಅದು ಒದಗಿಸಿದ ಯಾವುದೇ ಸಾಕ್ಷ್ಯದಲ್ಲಿ ಹಿಂದಿನ ಅಪರಾಧ ನಿರ್ಣಯದ ಬಗ್ಗೆ ಏನನ್ನೂ ಪ್ರಸ್ತಾಪಿಸತಕ್ಕದ್ದಲ್ಲ.

**272. ದೂರುದಾರನ ಗೈರುಹಾಜರಿ.-** ದೂರಿನ ಆಧಾರದ ಮೇಲೆ ವ್ಯವಹರಣೆಗಳನ್ನು ಪ್ರಾರಂಭಿಸುವಾಗ ಮತ್ತು ಮೊಕದ್ದಮೆಯ ಸುನಾವಣೆಗಾಗಿ ನಿಗದಿಪಡಿಸಿದ್ದ ಯಾವುದೇ ದಿನದಂದು ದೂರುದಾರನು ಗೈರುಹಾಜರಾದಾಗ ಮತ್ತು ಅಪರಾಧವು ಕಾನೂನುಬದ್ಧವಾಗಿ ರಾಜಿ ಮಾಡಿಕೊಳ್ಳುವಂಥದ್ದಾಗಿದ್ದಾಗ ಅಥವಾ ಅದು ಸಂಜ್ಞೇಯ ಅಪರಾಧವಾಗಿರದಿದ್ದಾಗ

ಮ್ಯಾಜಿಸ್ಟ್ರೇಟನು ತನ್ನ ವಿವೇಚನಾನುಸಾರ, ದೂರುದಾರನಿಗೆ ಹಾಜರಾಗುವುದಕ್ಕೆ ಮೂವತ್ತು ದಿನಗಳ ಸಮಯಾವಕಾಶವನ್ನು ನೀಡಿದ ನಂತರ, ಇದರಲ್ಲಿ ಈ ಹಿಂದೆ ಏನೇ ಹೇಳಿದ್ದರೂ ಸಹ, ಆರೋಪ ರೂಪಿತವಾಗುವ ಮುಂಚೆ ಯಾವುದೇ ಸಮಯದಲ್ಲಿ ಆಪಾದಿತನನ್ನು ಬಿಡುಗಡೆ ಮಾಡಬಹುದು.

**273. ಸಮಂಜಸ ಕಾರಣವಿಲ್ಲದೆ ಮಾಡಿದ ಆಪಾದನೆಗಾಗಿ ಪರಿಹಾರ.-** (1) ದೂರಿನ ಆಧಾರದ ಮೇಲೆ ಅಥವಾ ಪೊಲೀಸ್ ಅಧಿಕಾರಿಗೆ ಅಥವಾ ಮ್ಯಾಜಿಸ್ಟ್ರೇಟನಿಗೆ ಬಂದ ಮಾಹಿತಿಯ ಆಧಾರದ ಮೇಲೆ ಹೂಡಿದ ಯಾವುದೇ ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟನು ಅಧಿವಿಚಾರಣೆ ಮಾಡಬಹುದಾದ ಯಾವುದೇ ಅಪರಾಧದ ಬಗ್ಗೆ ಮ್ಯಾಜಿಸ್ಟ್ರೇಟನ ಮುಂದೆ ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಆಪಾದಿತರಾಗಿದ್ದರೆ ಮತ್ತು ವಿಚಾರಣೆ ಮಾಡಿದ ಮ್ಯಾಜಿಸ್ಟ್ರೇಟನು ಯಾರೇ ಆಪಾದಿತನನ್ನು ಅಥವಾ ಎಲ್ಲ ಆಪಾದಿತರನ್ನು ಬಿಡುಗಡೆ ಮಾಡಿದರೆ ಅಥವಾ ಖುಲಾಸೆ ಮಾಡಿದರೆ ಮತ್ತು ಅವರ ವಿರುದ್ಧ ಅಥವಾ ಅವರಲ್ಲಿ ಯಾರ ವಿರುದ್ಧವೂ ಆಪಾದನೆ ಮಾಡಲು ಸಮಂಜಸವಾದ ಆಧಾರವಿರಲಿಲ್ಲವೆಂದು ಅಭಿಪ್ರಾಯಪಟ್ಟರೆ, ಮ್ಯಾಜಿಸ್ಟ್ರೇಟನು, ಬಿಡುಗಡೆಯ ಅಥವಾ ಖುಲಾಸೆ ಮಾಡುವ ತನ್ನ ಆದೇಶದ ಮೂಲಕ, ಯಾವ ವ್ಯಕ್ತಿಯು ದೂರಿನ ಅಥವಾ ಮಾಹಿತಿಯ ಆಧಾರದ ಮೇಲೆ ಆಪಾದನೆಯನ್ನು ಮಾಡಲಾಯಿತೋ, ಆ ವ್ಯಕ್ತಿಯು ಹಾಜರಿದ್ದರೆ, ಅಂಥ ಆಪಾದಿತನಿಗೆ ಅಥವಾ ಒಬ್ಬನಿಗಿಂತ ಹೆಚ್ಚು ಆಪಾದಿತರಿರುವಾಗ ಅವರಲ್ಲಿ ಪ್ರತಿಯೊಬ್ಬನಿಗೂ ಅಥವಾ ಅವರಲ್ಲಿ ಯಾರೇ ಒಬ್ಬನಿಗೆ ಏಕೆ ನಷ್ಟಪರಿಹಾರ ಸಂದಾಯ ಮಾಡಬಾರದೆಂಬುದಕ್ಕೆ ಕಾರಣ ತೋರಿಸಲು ಆ ವ್ಯಕ್ತಿಯನ್ನು ಕೂಡಲೇ ಕರೆಸಬಹುದು ಅಥವಾ ಅಂಥ ವ್ಯಕ್ತಿಯು ಹಾಜರಿರದಿದ್ದರೆ ಅವನು ಹಾಜರಾಗುವಂತೆ ಮತ್ತು ಈ ಮೇಲೆ ಹೇಳಿದಂತೆ ಕಾರಣ ತೋರಿಸುವ ಸಮನ್ ಹೊರಡಿಸಲು ನಿರ್ದೇಶಿಸಬಹುದು.

(2) ಮ್ಯಾಜಿಸ್ಟ್ರೇಟನು, ಅಂಥ ದೂರುದಾರನು ಅಥವಾ ಮಾಹಿತಿದಾರನು ತೋರಿಸಬಹುದಾದ ಯಾವುದೇ ಕಾರಣವನ್ನು ದಾಖಲಿಸತಕ್ಕದ್ದು ಹಾಗೂ ಪರ್ಯಾಲೋಚಿಸತಕ್ಕದ್ದು ಮತ್ತು ಆ ಆಪಾದನೆಗೆ ಸಮಂಜಸವಾದ ಆಧಾರವಿಲ್ಲವೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ತಾನು ಎಷ್ಟು ಜುಲ್ಮಾನೆಯನ್ನು ವಿಧಿಸಲು ಅಧಿಕಾರ ಉಳ್ಳವನಾಗಿರುವನೋ ಆ ಮೊಬಲಗಿಗೆ ಮೀರದ ತಾನು ನಿರ್ಧರಿಸಬಹುದಾದಂತೆ ಮೊಬಲಗಿನ ನಷ್ಟಪರಿಹಾರವನ್ನು ಅಂಥ ದೂರುದಾರನು ಅಥವಾ ಮಾಹಿತಿದಾರನು ಆಪಾದಿತನಿಗೆ ಅಥವಾ ಅವರಲ್ಲಿ ಪ್ರತಿಯೊಬ್ಬನಿಗೆ ಅಥವಾ ಯಾರೇ ಒಬ್ಬನಿಗೆ ಸಂದಾಯ ಮಾಡಬೇಕೆಂದು ಕಾರಣಗಳನ್ನು ದಾಖಲಿಸಿ ಆದೇಶ ಮಾಡಬಹುದು.

(3) ಮ್ಯಾಜಿಸ್ಟ್ರೇಟನು, (2)ನೇ ಉಪಪ್ರಕರಣದ ಮೇರೆಗೆ ನಷ್ಟಪರಿಹಾರವನನು ಸಂದಾಯ ಮಾಡಬೇಕೆಂದು ನಿರ್ದೇಶಿಸುವ ಆದೇಶದ ಮೂಲಕ, ಅಂಥ ನಷ್ಟಪರಿಹಾರವನ್ನು ಸಂದಾಯ ಮಾಡಲು ಯಾವ ವ್ಯಕ್ತಿಗೆ ಆದೇಶ ಮಾಡಲಾಗಿದೆಯೋ ಆ ವ್ಯಕ್ತಿಯು ಹಾಗೆ ಮಾಡಲು ತಪ್ಪಿದ್ದಲ್ಲಿ ಮೂವತ್ತು ದಿನಗಳಿಗೆ ಮೀರದ ಅವಧಿಯ ಸಾದಾ ಕಾರಾವಾಸಕ್ಕೆ ಒಳಗಾಗತಕ್ಕದ್ದೆಂದು ಆದೇಶ ಮಾಡಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯು, ಕಾರಾವಾಸದಲ್ಲಿ ಇರುವಾಗ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 8ನೇ ಪ್ರಕರಣದ (6)ನೇ ಉಪಪ್ರಕರಣದ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

(5) ಈ ಪ್ರಕರಣದ ಮೇರೆಗಿನ ನಷ್ಟಪರಿಹಾರವನ್ನು ಸಂದಾಯ ಮಾಡುವಂತೆ ಯಾವ ವ್ಯಕ್ತಿಗೆ ನಿರ್ದೇಶನ ನೀಡಲಾಗಿದೆಯೋ ಆ ಯಾರೇ ವ್ಯಕ್ತಿಗೆ, ಅಂಥ ಆದೇಶದ ಕಾರಣದಿಂದ, ತಾನು ಸಲ್ಲಿಸಿದ ದೂರು ಅಥವಾ ಕೊಟ್ಟ ಮಾಹಿತಿಯ ಬಗ್ಗೆ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಹೊಣೆಗಾರಿಕೆಯಿಂದ ವಿನಾಯಿತಿ ಇರತಕ್ಕದ್ದಲ್ಲ:

ಪರಂತು, ಈ ಪ್ರಕರಣದ ಮೇರೆಗೆ ಆಪಾದಿತ ವ್ಯಕ್ತಿಗೆ ಸಂದಾಯವಾದ ಯಾವುದೇ ಮೊಬಲಗನ್ನು, ಅದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ತರುವಾಯದ ಸಿವಿಲ್ ದಾವೆಯಲ್ಲಿ ಅಂಥ ವ್ಯಕ್ತಿಗೆ ನಷ್ಟಪರಿಹಾರವನ್ನು ನೀಡುವಾಗ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(6) ಎರಡು ಸಾವಿರ ರೂಪಾಯಿಗಳಿಗೆ ಮೀರಿದ ನಷ್ಟಪರಿಹಾರವನ್ನು ಸಂದಾಯ ಮಾಡಲು ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು (2)ನೇ ಉಪಪ್ರಕರಣದ ಮೇರೆಗೆ ಯಾರಿಗೆ ಆದೇಶ ನೀಡಿದ್ದಾನೋ ಆ ದೂರುದಾರನು ಅಥವಾ ಮಾಹಿತಿದಾರನು, ಒಂದು ವೇಳೆ ಅಂಥ ಮ್ಯಾಜಿಸ್ಟ್ರೇಟನು ಅಂಥ ದೂರುದಾರನ ಅಥವಾ ಮಾಹಿತಿದಾರನ ಬಗ್ಗೆ, ನಡೆಸಿದ ಅಧಿವಿಚಾರಣೆಯಲ್ಲಿ ಅವನು ಅಪರಾಧಿಯೆಂದು ನಿರ್ಣಯಿಸಿದರೆ ಹೇಗೋ ಹಾಗೆ ಆ ಆದೇಶದ ಬಗ್ಗೆ ಅಪೀಲು ಸಲ್ಲಿಸಬಹುದು.

(7) (6)ನೇ ಉಪಪ್ರಕರಣದ ಮೇರೆಗೆ ಅಪೀಲಿಗೆ ಒಳಪಡುವ ಮೊಕದ್ದಮೆಯಲ್ಲಿ, ಆಪಾದಿತನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡಲು ಆದೇಶವನ್ನು ಮಾಡಿರುವಾಗ, ಅಪೀಲು ಸಲ್ಲಿಸಲು ಇರುವ ಅವಧಿಯು ಮುಗಿಯುವುದಕ್ಕೆ ಮುಂಚೆಯೇ ಅಥವಾ ಅಪೀಲನ್ನು ಸಲ್ಲಿಸಿದ್ದರೆ ಅದು ತೀರ್ಮಾನವಾಗುವುದಕ್ಕೆ ಮುಂಚೆಯೇ ಅವನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ ಮತ್ತು ಅಪೀಲಿಗೆ ಒಳಪಡದಿರುವ ಮೊಕದ್ದಮೆಯಲ್ಲಿ ಅಂಥ ಆದೇಶವನ್ನು ಮಾಡಿರುವಾಗ, ಆದೇಶದ ದಿನಾಂಕದಿಂದ ಒಂದು ತಿಂಗಳು ಮುಗಿಯುವುದಕ್ಕೆ ಮುಂಚೆಯೇ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(8) ಈ ಪ್ರಕರಣದ ಉಪಬಂಧಗಳು ಸಮನ್ ಮೊಕದ್ದಮೆಗಳಿಗೆ ಹಾಗೂ ವಾರಂಟ್ ಮೊಕದ್ದಮೆಗಳಿಗೂ ಸಹ ಅನ್ವಯವಾಗುತ್ತವೆ.

## ಅಧ್ಯಾಯ XXI

## ಮ್ಯಾಜಿಸ್ಟ್ರೇಟರಿಂದ ಸಮನ್ ಮೊಕದ್ದಮೆಗಳ ಅಧಿವಿಚಾರಣೆ

**274. ಆಪಾದನೆಯ ಸಾರಾಂಶವನ್ನು ನಿರೂಪಿಸುವುದು.-** ಸಮನ್ ಮೊಕದ್ದಮೆಯಲ್ಲಿ ಆಪಾದಿತನು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾದಾಗ ಅಥವಾ ಅವನನ್ನು ಹಾಜರುಪಡಿಸಿದಾಗ, ಅವನು ಯಾವ ಅಪರಾಧಕ್ಕಾಗಿ ಆಪಾದಿತನಾಗಿರುವನೋ ಆ ಅಪರಾಧದ ವಿವರಗಳನ್ನು ಅವನಿಗೆ ತಿಳಿಸತಕ್ಕದ್ದು ಮತ್ತು ಅವನು ತಪ್ಪೊಪ್ಪಿಕೊಳ್ಳುವನೇ ಅಥವಾ ಪ್ರತಿವಾದವನ್ನೇನಾದರೂ ಮಂಡಿಸಲಿದ್ದಾನೆಯೇ ಎಂದು ಅವನನ್ನು ಕೇಳತಕ್ಕದ್ದು, ಆದರೆ, ವಿದ್ಯುಕ್ತ ಆರೋಪವನ್ನು ರೂಪಿಸುವುದು ಅವಶ್ಯಕವಿರತಕ್ಕದ್ದಲ್ಲ:

ಪರಂತು, ಆಪಾದಿತನ ವಿರುದ್ಧ ಮಾಡಿದ ಆರೋಪವು ನಿರಾಧಾರವೆಂದು ಮ್ಯಾಜಿಸ್ಟ್ರೇಟನು ಪರಿಗಣಿಸಿದರೆ, ಆತನು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಆಪಾದಿತನನ್ನು ಬಿಡುಗಡೆ ಮಾಡಬಹುದು ಮತ್ತು ಹಾಗೆ ಮಾಡಿದಂಥ ಬಿಡುಗಡೆಯು ಪರಿಣಾಮವನ್ನು ಹೊಂದಿರತಕ್ಕದ್ದು.

**275. ತಪ್ಪೊಪ್ಪಿಕೊಂಡಾಗ ಅಪರಾಧ ನಿರ್ಣಯ.-** ಆಪಾದಿತನು ತಪ್ಪೊಪ್ಪಿಕೊಂಡರೆ, ಆಪಾದಿತನು ಬಳಸಿದ ಪದಗಳನ್ನೇ ಸಾಧ್ಯವಿರುವಷ್ಟರ ಮಟ್ಟಿಗೆ ಬಳಸಿ ಆಪಾದಿತನ ತಪ್ಪೊಪ್ಪಿಗೆಯನ್ನು ಮ್ಯಾಜಿಸ್ಟ್ರೇಟನು ದಾಖಲಿಸತಕ್ಕದ್ದು ಮತ್ತು ತನ್ನ ವಿವೇಚನಾನುಸಾರ ಆ ಬಗ್ಗೆ ಅವನನ್ನು ಅಪರಾಧಿಯೆಂದು ನಿರ್ಣಯಿಸಬಹುದು.

**276. ಲಘು ಮೊಕದ್ದಮೆಗಳಲ್ಲಿ ಆಪಾದಿತನ ಗೈರುಹಾಜರಿಯಲ್ಲಿ ತಪ್ಪೊಪ್ಪಿಗೆಯ ಮೇಲೆ ಅಪರಾಧ ನಿರ್ಣಯ.-** (1) 229ನೇ ಪ್ರಕರಣದ ಮೇರೆಗೆ ಸಮನ್ ಹೊರಡಿಸಿದ್ದಲ್ಲಿ ಮತ್ತು ಆಪಾದಿತನು ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗದೆಯೇ ಆರೋಪದ ಬಗ್ಗೆ ತಪ್ಪೊಪ್ಪಿಕೊಳ್ಳಲು ಇಚ್ಛಿಸಿದಲ್ಲಿ, ಅವನು ಅಂಚೆಯ ಮೂಲಕ ಅಥವಾ ಸಂದೇಶ ವಾಹಕನ ಮೂಲಕ ತನ್ನ

ತಪ್ಪೊಪ್ಪಿಗೆಯನ್ನು ಒಳಗೊಂಡಿರುವ ಪತ್ರವನ್ನು ಮತ್ತು ಸಮನ್‌ನಲ್ಲಿ ನಿರ್ದಿಷ್ಟಪಡಿಸಿದ ಜುಲ್ಮಾನೆಯ ಮೊಬಲಗನ್ನೂ ಸಹ ಮ್ಯಾಜಿಸ್ಟ್ರೇಟನಿಗೆ ರವಾನಿಸತಕ್ಕದ್ದು.

(2) ಮ್ಯಾಜಿಸ್ಟ್ರೇಟನು, ತನ್ನ ವಿವೇಚನಾನುಸಾರ, ಆಪಾದಿತನ ಗೈರುಹಾಜರಿಯಲ್ಲಿ ಅವನ ತಪ್ಪೊಪ್ಪಿಗೆಯ ಮೇಲೆ ಅವನನ್ನು ಅಪರಾಧಿಯೆಂದು ನಿರ್ಣಯಿಸಬಹುದು ಮತ್ತು ಸಮನ್‌ನಲ್ಲಿ ನಿರ್ದಿಷ್ಟಪಡಿಸಿದ ದಂಡವನ್ನು ಸಂದಾಯ ಮಾಡುವಂತೆ ಅವನಿಗೆ ಶಿಕ್ಷೆ ವಿಧಿಸಬಹುದು ಮತ್ತು ಆಪಾದಿತನು ರವಾನಿಸಿದ ಮೊಬಲಗನ್ನು ದಂಡಕ್ಕೆ ಜಮಾ ಮಾಡಿಕೊಳ್ಳತಕ್ಕದ್ದು ಅಥವಾ ಆಪಾದಿತನಿಂದ ಈ ಬಗ್ಗೆ ಅಧಿಕೃತನಾದ ನ್ಯಾಯವಾದಿಯು, ಆಪಾದಿತನ ಪರ ತಪ್ಪೊಪ್ಪಿಕೊಂಡರೆ ಆ ನ್ಯಾಯವಾದಿಯು ಬಳಸಿದ ಪದಗಳನ್ನೇ ಸಾಧ್ಯವಿರುವಷ್ಟರಮಟ್ಟಿಗೆ ಬಳಸಿ ಆಪಾದಿತನ ಪರವಾದ ತಪ್ಪೊಪ್ಪಿಗೆಯನ್ನು ದಾಖಲಿಸತಕ್ಕದ್ದು ಮತ್ತು ಹಾಗೆ ತಪ್ಪೊಪ್ಪಿಕೊಂಡಿರುವುದರ ಬಗ್ಗೆ ತನ್ನ ವಿವೇಚನಾನುಸಾರ ಅವನನ್ನು ಮ್ಯಾಜಿಸ್ಟ್ರೇಟನು ಅಪರಾಧಿಯೆಂದು ನಿರ್ಣಯಿಸಬಹುದು ಮತ್ತು ಈ ಹಿಂದೆ ಹೇಳಿದಂತೆ ಅವನಿಗೆ ಶಿಕ್ಷೆ ವಿಧಿಸಬಹುದು.

**277. ಅಪರಾಧಿಯೆಂದು ನಿರ್ಣಯವಾಗದಿರುವಾಗ ಪ್ರಕ್ರಿಯೆ.-** (1) ಮ್ಯಾಜಿಸ್ಟ್ರೇಟನು ಆಪಾದಿತನನ್ನು 275ನೇ ಪ್ರಕರಣ ಅಥವಾ 276ನೇ ಪ್ರಕರಣದ ಮೇರೆಗೆ ಅಪರಾಧಿಯೆಂದು ನಿರ್ಣಯಿಸದಿದ್ದರೆ, ಮ್ಯಾಜಿಸ್ಟ್ರೇಟನು ಪ್ರಾಸಿಕ್ಯೂಷನ್ನಿನ ವಾದವನ್ನು ಆಲಿಸಲು ಉದ್ಯುಕ್ತನಾಗತಕ್ಕದ್ದು ಮತ್ತು ಪ್ರಾಸಿಕ್ಯೂಷನ್ನಿಗೆ ಸಮರ್ಥನೆಯಾಗಿ ಹಾಜರುಪಡಿಸಬಹುದಾದಂಥ ಎಲ್ಲ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆಪಾದಿತನ ವಾದವನ್ನು ಆಲಿಸಿ, ಅವನು ತನ್ನ ಪ್ರತಿರಕ್ಷೆಗಾಗಿ ಹಾಜರುಪಡಿಸಬಹುದಾದಂಥ ಎಲ್ಲ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು.

(2) ಮ್ಯಾಜಿಸ್ಟ್ರೇಟನು ತಾನು ಸೂಕ್ತವೆಂದು ಭಾವಿಸಿದರೆ, ಪ್ರಾಸಿಕ್ಯೂಷನ್ ಅಥವಾ ಆಪಾದಿತನ ಅರ್ಜಿಯ ಮೇಲೆ ಯಾರೇ ಸಾಕ್ಷಿದಾರನಿಗೆ ಹಾಜರಾಗಲು ಅಥವಾ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವಂತೆ ನಿರ್ದೇಶಿಸಿ ಒಂದು ಸಮನನ್ನು ಹೊರಡಿಸಬಹುದು.

(3) ಮ್ಯಾಜಿಸ್ಟ್ರೇಟನು, ಅಂಥ ಅರ್ಜಿಯು ಬಂದ ಮೇಲೆ ಯಾರೇ ಸಾಕ್ಷಿದಾರನನ್ನು ಸಮನ್ ಮಾಡುವುದಕ್ಕೂ ಮುಂಚೆ, ಅಧಿವಿಚಾರಣೆಯ ಉದ್ದೇಶಗಳಿಗಾಗಿ ಹಾಜರಾಗಲು ಸಾಕ್ಷಿದಾರನಿಗೆ ತಗಲುವ ಯುಕ್ತ ವೆಚ್ಚಗಳನ್ನು ನ್ಯಾಯಾಲಯದಲ್ಲಿ ಠೇವಣಿ ಇಡತಕ್ಕದ್ದೆಂದು ಅಗತ್ಯಪಡಿಸಬಹುದು.

**278. ಖುಲಾಸೆ ಅಥವಾ ಅಪರಾಧ ನಿರ್ಣಯ.-** (1) ಮ್ಯಾಜಿಸ್ಟ್ರೇಟನು, 277ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸಾಕ್ಷ್ಯವನ್ನು ಮತ್ತು ತಾನಾಗಿಯೇ ಸ್ವಪ್ರೇರಣೆಯಿಂದ ಹಾಜರುಪಡಿಸಬೇಕೆಂದು ಕೇಳಬಹುದಾದಂಥ ಹೆಚ್ಚಿನ ಸಾಕ್ಷ್ಯವೇನಾದರೂ ಇದ್ದರೆ ಅದನ್ನು ತೆಗೆದುಕೊಂಡ ಮೇಲೆ, ಆಪಾದಿತನು ತಪ್ಪಿತಸ್ಥನಲ್ಲವೆಂದು ನಿರ್ಣಯಿಸಿದರೆ, ಅವನು ಖುಲಾಸೆ ಆದೇಶವನ್ನು ದಾಖಲಿಸತಕ್ಕದ್ದು.

(2) ಮ್ಯಾಜಿಸ್ಟ್ರೇಟನು, 364ನೇ ಪ್ರಕರಣ ಅಥವಾ 401ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ವ್ಯವಹರಣೆಯನ್ನು ಮುಂದುವರೆಸದಿದ್ದಲ್ಲಿ, ಆಪಾದಿತನು ತಪ್ಪಿತಸ್ಥನೆಂದು ತಾನು ನಿರ್ಣಯಿಸಿದರೆ, ಕಾನೂನಿಗನುಸಾರವಾಗಿ ಅವನಿಗೆ ಶಿಕ್ಷೆಯ ಆದೇಶವನ್ನು ಹೊರಡಿಸತಕ್ಕದ್ದು.

(3) ಈ ಅಧ್ಯಾಯದ ಮೇರೆಗೆ ಆರೋಪವು ಅಧಿವಿಚಾರಣೆ ಮಾಡಬಹುದಾದ ಮತ್ತು ಒಪ್ಪಿಕೊಳ್ಳಲಾದ ಅಥವಾ ರುಜುವಾತಾದ ಸಂಗತಿಗಳಿಂದ ಅವನು ಮಾಡಿರುವನೆಂದು ಕಂಡುಬರುವ ಯಾವುದೇ ಅಪರಾಧದ ಆಪಾದಿತನನ್ನು, ಆ ದೂರಿನ ಅಥವಾ ಸಮನಿನ ಸ್ವರೂಪವೇನೇ ಆಗಿರಲಿ, ಆಪಾದಿತನಿಗೆ ಅದರಿಂದ ಯಾವುದೇ ಬಾಧಕವಾಗದೆಂದು

ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಆಪಾದಿತನನ್ನು 275ನೇ ಪ್ರಕರಣ ಅಥವಾ 278ನೇ ಪ್ರಕರಣದ ಮೇರೆಗೆ ಅಪರಾಧಿಯೆಂದು ನಿರ್ಣಯಿಸಬಹುದು.

**279. ದೂರುದಾರನ ಗೈರುಹಾಜರಿ ಅಥವಾ ಮರಣ.-** (1) ಮ್ಯಾಜಿಸ್ಟ್ರೇಟನು, ದೂರಿನ ಆಧಾರದ ಮೇಲೆ ಸಮನನ್ನು ಹೊರಡಿಸಿದ್ದರೆ ಮತ್ತು ಆಪಾದಿತನ ಹಾಜರಾತಿಗಾಗಿ ಗೊತ್ತುಪಡಿಸಿದ ದಿನದಂದು ಅಥವಾ ಆ ದಿನದ ತರುವಾಯದಲ್ಲಿ ಯಾವ ದಿನಕ್ಕೆ ವಿಚಾರಣೆಯನ್ನು ಮುಂದಕ್ಕೆ ಹಾಕಬಹುದೋ ಆ ದಿನದಂದು ದೂರುದಾರನು ಹಾಜರಾಗದಿದ್ದರೆ, ಅವನು ಹಾಜರಾಗಲು ದೂರುದಾರನಿಗೆ ಮೂವತ್ತು ದಿನಗಳ ಸಮಯವನ್ನು ನೀಡಿದ ನಂತರ ಇದರಲ್ಲಿ ಹಿಂದೆ ಏನೇ ಹೇಳಿದ್ದರೂ, ತಾನು ಕೆಲವು ಕಾರಣಕ್ಕಾಗಿ ಮೊಕದ್ದಮೆಯ ವಿಚಾರಣೆಯನ್ನು ಯಾವುದೇ ಇತರ ದಿನಕ್ಕೆ ಮುಂದೂಡುವುದು ಸೂಕ್ತವೆಂದು ಆಲೋಚಿಸಿದ ಹೊರತು, ಆಪಾದಿತನನ್ನು ಖುಲಾಸೆ ಮಾಡತಕ್ಕದ್ದು:

ಪರಂತು, ನ್ಯಾಯವಾದಿಯು ಅಥವಾ ಪ್ರಾಸಿಕ್ಯೂಷನ್ ನಡೆಸುವ ಅಧಿಕಾರಿಯು ದೂರುದಾರನನ್ನು ಪ್ರತಿನಿಧಿಸಿದ್ದಲ್ಲಿ ಅಥವಾ ಮ್ಯಾಜಿಸ್ಟ್ರೇಟನು, ದೂರುದಾರನ ಖುದ್ದು ಹಾಜರಾತಿಯು ಅವಶ್ಯಕತೆ ಇಲ್ಲವೆಂದು ಅಭಿಪ್ರಾಯಪಟ್ಟಲ್ಲಿ, ಮ್ಯಾಜಿಸ್ಟ್ರೇಟನು ಅವನ ಹಾಜರಾತಿಗೆ ವಿನಾಯಿತಿ ಕೊಡಬಹುದು ಮತ್ತು ಮೊಕದ್ದಮೆಯನ್ನು ಮುಂದುವರಿಸಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳು, ಸಾಧ್ಯವಾಗಬಹುದಾದಷ್ಟರಮಟ್ಟಿಗೆ ದೂರುದಾರನ ಗೈರುಹಾಜರಿಯು ಅವನ ಮರಣದ ಕಾರಣದಿಂದಾಗಿದ್ದಲ್ಲಿ ಆ ಮೊಕದ್ದಮೆಗಳಿಗೆ ಅನ್ವಯವಾಗತಕ್ಕದ್ದು.

**280. ದೂರನ್ನು ಹಿಂಪಡೆಯುವುದು.-** ಈ ಅಧ್ಯಾಯದ ಮೇರೆಗಿನ ಯಾವುದೇ ಮೊಕದ್ದಮೆಯಲ್ಲಿ, ಅಂತಿಮ ಆದೇಶವನ್ನು ಮಾಡುವುದಕ್ಕೂ ಮುಂಚೆ ಯಾವುದೇ ಸಮಯದಲ್ಲಿ ದೂರುದಾರನು, ಆಪಾದಿತನ ವಿರುದ್ಧ ಅಥವಾ ಒಬ್ಬನಿಗಿಂತ ಹೆಚ್ಚು ಆಪಾದಿತರಿದ್ದರೆ ಅವರೆಲ್ಲರ ಅಥವಾ ಅವರಲ್ಲಿ ಯಾರೇ ಒಬ್ಬನ ವಿರುದ್ಧ ಸಲ್ಲಿಸಿದ ತನ್ನ ದೂರನ್ನು ಹಿಂತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡಲು ಸಾಕಷ್ಟು ಕಾರಣಗಳಿವೆಯೆಂಬುದಾಗಿ ಮ್ಯಾಜಿಸ್ಟ್ರೇಟನಿಗೆ ಮನದಟ್ಟು ಮಾಡಿಕೊಟ್ಟರೆ, ಮ್ಯಾಜಿಸ್ಟ್ರೇಟನು ಅವನಿಗೆ ಅದನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಬಹುದು ಮತ್ತು ಯಾವ ಆಪಾದಿತನ ವಿರುದ್ಧದ ದೂರನ್ನು ಹಾಗೆ ಹಿಂತೆಗೆದುಕೊಳ್ಳಲಾಯಿತೋ ಆ ಆಪಾದಿತನನ್ನು ಆನಂತರ ಖುಲಾಸೆ ಮಾಡತಕ್ಕದ್ದು.

**281. ಕೆಲವು ಮೊಕದ್ದಮೆಗಳಲ್ಲಿ ವ್ಯವಹರಣೆಗಳನ್ನು ನಿಲ್ಲಿಸಲು ಅಧಿಕಾರ.-** ದೂರಿನ ಆಧಾರದ ಮೇಲಲ್ಲದೆ ಹೂಡಿದ ಯಾವುದೇ ಸಮನ್ ಮೊಕದ್ದಮೆಯಲ್ಲಿ, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಂದ ಮುಂಚಿತವಾಗಿ ಮಂಜೂರಾತಿ ಪಡೆದು, ಯಾರೇ ಇತರ ನ್ಯಾಯಿಕ ಮ್ಯಾಜಿಸ್ಟ್ರೇಟನು ಕಾರಣಗಳನ್ನು ದಾಖಲಿಸಿ, ಯಾವುದೇ ತೀರ್ಪನ್ನು ನೀಡದೆಯೇ ಯಾವುದೇ ಹಂತದಲ್ಲಿ ವ್ಯವಹರಣೆಗಳನ್ನು ನಿಲ್ಲಿಸಬಹುದು ಮತ್ತು ಮುಖ್ಯ ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲಿಸಿದ ತರುವಾಯ ಅಂಥ ವ್ಯವಹರಣೆಗಳನ್ನು ನಿಲ್ಲಿಸಿದ್ದಲ್ಲಿ ಖುಲಾಸೆ ತೀರ್ಪನ್ನು ನೀಡಬಹುದು ಮತ್ತು ಯಾವುದೇ ಇತರ ಮೊಕದ್ದಮೆಯಲ್ಲಿ ಆಪಾದಿತನನ್ನು ಬಿಡುಗಡೆ ಮಾಡಬಹುದು ಮತ್ತು ಅಂಥ ಬಿಡುಗಡೆಯು ವಿಮೋಚನೆಯ ಪರಿಣಾಮವನ್ನು ಹೊಂದಿರತಕ್ಕದ್ದು.

**282. ಸಮನ್ ಮೊಕದ್ದಮೆಗಳನ್ನು ವಾರಂಟ್ ಮೊಕದ್ದಮೆಗಳನ್ನಾಗಿ ಪರಿವರ್ತಿಸಲು ನ್ಯಾಯಾಲಯದ ಅಧಿಕಾರ.-** ಆರು ತಿಂಗಳಿಗೆ ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಾಗುವ ಅಪರಾಧಕ್ಕೆ ಸಂಬಂಧಿಸಿದ ಸಮನ್ ಮೊಕದ್ದಮೆಯ ಅಧಿವಿಚಾರಣೆಯು ನಡೆಯುತ್ತಿರುವಾಗ, ನ್ಯಾಯೋದ್ದೇಶದಿಂದ ವಾರಂಟ್ ಮೊಕದ್ದಮೆಗಳ ಅಧಿವಿಚಾರಣೆಯ ಪ್ರಕ್ರಿಯೆಗೆ ಅನುಸಾರವಾಗಿ ಆ ಅಪರಾಧವನ್ನು ಅಧಿವಿಚಾರಣೆ ಮಾಡಬೇಕೆಂಬುದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ ಅಂಥ ಮ್ಯಾಜಿಸ್ಟ್ರೇಟನು ವಾರಂಟ್ ಮೊಕದ್ದಮೆಗಳ ಅಧಿವಿಚಾರಣೆಗೆ ಈ ಸಂಹಿತೆಯಲ್ಲಿ ಉಪಬಂಧಿಸಿರುವ ರೀತಿಯಲ್ಲಿಯೇ ಆ

ಮೊಕದ್ದಮೆಯನ್ನು ಪುನಃ ವಿಚಾರಣೆ ಮಾಡಬಹುದು ಮತ್ತು ಯಾರೇ ಸಾಕ್ಷಿದಾರನನ್ನು ವಿಚಾರಣೆ ಮಾಡಿರಬಹುದಾದರೂ ಆ ಸಾಕ್ಷಿದಾರನನ್ನು ಪುನಃ ಕರೆಯಬಹುದು.

## ಅಧ್ಯಾಯ XXII

## ಸಂಕ್ಷಿಪ್ತ ಅಧಿವಿಚಾರಣೆಗಳು

**283. ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಲು ಅಧಿಕಾರ.-** (1) ಈ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಯಾರೇ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು;

(ಬಿ) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು

- ಈ ಕೆಳಕಂಡ ಯಾವುದೇ ಅಥವಾ ಎಲ್ಲಾ ಅಪರಾಧಗಳನ್ನು ಸಂಕ್ಷಿಪ್ತ ರೀತಿಯಲ್ಲಿ ಅಧಿವಿಚಾರಣೆ ಮಾಡತಕ್ಕದ್ದು,-

(i) ಕಳವಾದ ಸ್ವತ್ತಿನ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರಿರದಿದ್ದರೆ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 303ನೇ ಪ್ರಕರಣದ (2)ನೇ ಉಪಪ್ರಕರಣ, 305ನೇ ಪ್ರಕರಣ ಅಥವಾ 306ನೇ ಪ್ರಕರಣದ ಮೇರೆಗಿನ ಕಳವು;

(ii) ಕಳವು ಸ್ವತ್ತಿನ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರಿರದಿದ್ದರೆ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 317ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಕಳವು ಸ್ವತ್ತನ್ನು ಸ್ವೀಕರಿಸುವುದು ಅಥವಾ ಇಟ್ಟುಕೊಳ್ಳುವುದು;

(iii) ಅಂಥ ಸ್ವತ್ತಿನ ಮೌಲ್ಯವು, ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರಿರದಿದ್ದರೆ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 317ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗಿನ ಕಳವು ಸ್ವತ್ತನ್ನು ಬಚ್ಚಿಡಲು ಅಥವಾ ವಿಲೆ ಮಾಡಲು ಸಹಾಯ ಮಾಡುವುದು;

(iv) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 331ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಮೇರೆಗಿನ ಅಪರಾಧಗಳು;

(v) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 352ನೇ ಪ್ರಕರಣದ ಮೇರೆಗೆ ಶಾಂತಿಭಂಗ ಮಾಡುವುದಕ್ಕೆ ಉದ್ರೇಕಿಸಲು ಉದ್ದೇಶಪೂರ್ವಕವಾಗಿ ಮಾಡುವ ಅವಮಾನ ಮತ್ತು 351ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಆಪರಾಧಿಕ ಭಯೋತ್ಪಾದನೆ;

(vi) ಹಿಂದೆ ಹೇಳಿದ ಯಾವುದೇ ಅಪರಾಧಕ್ಕೆ ದುಷ್ಪ್ರೇರಣೆ;

(vii) ಹಿಂದೆ ಹೇಳಿದ ಯಾವುದೇ ಅಪರಾಧವನ್ನು ಮಾಡಲು ಮಾಡಿದ ಪ್ರಯತ್ನ, ಅಂಥ ಪ್ರಯತ್ನವು ಅಪರಾಧವಾಗಿದ್ದರೆ;

(viii) ಜಾನುವಾರು ಅತಿಕ್ರಮಣ ಅಧಿನಿಯಮ, 1871 (1871ರ 1) 20ನೇ ಪ್ರಕರಣದ ಮೇರೆಗೆ ಯಾವ ಕೃತ್ಯದ ಬಗ್ಗೆ ದೂರನ್ನು ಸಲ್ಲಿಸಬಹುದಾಗಿದೆಯೋ ಆ ಕೃತ್ಯದಿಂದ ಘಟಿಸಿದ ಯಾವುದೇ ಅಪರಾಧ.

(2) ಮ್ಯಾಜಿಸ್ಟ್ರೇಟನು, ಆಪಾದಿತನಿಗೆ ವಾದ ಮಂಡಿಸಲು ಸಮಂಜಸವಾದ ಅವಕಾಶವನ್ನು ನೀಡಿದ ತರುವಾಯ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಮರಣದಂಡನೆ ಅಥವಾ ಆಜೀವ ಕಾರಾವಾಸ ಅಥವಾ ಮೂರು ವರ್ಷಗಳಿಗಿಂತ

ಹೆಚ್ಚಿನ ಅವಧಿಯ ಕಾರಾವಾಸದಿಂದ ಶಿಕ್ಷಾರ್ಹವಲ್ಲದ ಎಲ್ಲಾ ಅಥವಾ ಯಾವುದೇ ಅಪರಾಧಗಳನ್ನು ಸಂಕ್ಷಿಪ್ತ ರೂಪದಲ್ಲಿ ಅಧಿವಿಚಾರಣೆ ಮಾಡಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಸಂಕ್ಷಿಪ್ತ ರೂಪದಲ್ಲಿ ಮೊಕದ್ದಮೆಯ ಅಧಿವಿಚಾರಣೆಯ ಮಾಡುವ ಮ್ಯಾಜಿಸ್ಟ್ರೇಟನ ತೀರ್ಮಾನದ ವಿರುದ್ಧ ಯಾವುದೇ ಅಪೀಲನ್ನು ಹೂಡತಕ್ಕದ್ದಲ್ಲ.

(3) ಮೊಕದ್ದಮೆಯ ಸ್ವರೂಪವು, ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡುವುದು ಅನಪೇಕ್ಷಿತವಾಗಿದೆಯೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಆತನು ವಿಚಾರಣೆ ಮಾಡಬಹುದಾದ ಯಾರೇ ಸಾಕ್ಷಿದಾರರನ್ನು ಪುನಃ ಕರೆಯತಕ್ಕದ್ದು ಮತ್ತು ಈ ಸಂಹಿತೆಯಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಮೊಕದ್ದಮೆಯನ್ನು ಪುನಃ ವಿಚಾರಣೆ ಮಾಡಲು ಮುಂದುವರೆಯತಕ್ಕದ್ದು.

**284. ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನಿಂದ ಸಂಕ್ಷಿಪ್ತ ಅಧಿವಿಚಾರಣೆ.-** ಜುಲ್ಮಾನೆಯಿಂದ ಮಾತ್ರ ಅಥವಾ ಜುಲ್ಮಾನೆಯ ಸಹಿತವಾಗಿ ಅಥವಾ ರಹಿತವಾಗಿ ಆರು ತಿಂಗಳ ಅವಧಿಗೆ ಮೀರದ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧವನ್ನು ಮತ್ತು ಅಂಥ ಯಾವುದೇ ಅಪರಾಧಕ್ಕೆ ಮಾಡಿದ ಯಾವುದೇ ದುಷ್ಪ್ರೇರಣೆಯನ್ನು ಅಥವಾ ಆ ಅಪರಾಧವನ್ನು ಮಾಡುವ ಪ್ರಯತ್ನವನ್ನು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡುವ ಅಧಿಕಾರವನ್ನು, ಉಚ್ಚ ನ್ಯಾಯಾಲಯವು ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನ ಅಧಿಕಾರಗಳು ನಿಹಿತವಾಗಿರುವ ಯಾರೇ ಮ್ಯಾಜಿಸ್ಟ್ರೇಟನಿಗೆ ಪ್ರದಾನ ಮಾಡಬಹುದು.

**285. ಸಂಕ್ಷಿಪ್ತ ಅಧಿವಿಚಾರಣೆಗಳ ಪ್ರಕ್ರಿಯೆ.-** (1) ಈ ಪ್ರಕರಣದ ಮೇರೆಗಿನ ಅಧಿವಿಚಾರಣೆಗಳಲ್ಲಿ, ಇದರಲ್ಲಿ ಇನ್ನು ಮುಂದೆ ಹೇಳಿರುವುದನ್ನು ಹೊರತುಪಡಿಸಿ ಸಮನ್ ಮೊಕದ್ದಮೆಗಳ ಅಧಿವಿಚಾರಣೆಗಾಗಿ ಈ ಸಂಹಿತೆಯಲ್ಲಿ ನಿರ್ದಿಷ್ಟಪಡಿಸಿರುವ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(2) ಈ ಅಧ್ಯಾಯದ ಮೇರೆಗೆ ಯಾವುದೇ ನ್ಯಾಯನಿರ್ಣಯದ ಮೊಕದ್ದಮೆಯಲ್ಲಿ ಮೂರು ತಿಂಗಳ ಅವಧಿಗೆ ಮೀರುವ ಕಾರಾವಾಸದ ಶಿಕ್ಷೆಯ ಆದೇಶವನ್ನು ಮಾಡತಕ್ಕದ್ದಲ್ಲ.

**286. ಸಂಕ್ಷಿಪ್ತ ಅಧಿವಿಚಾರಣೆಗಳನ್ನು ದಾಖಲಿಸುವುದು.-** ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಲಾದ ಪ್ರತಿಯೊಂದು ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟನು, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಈ ಕೆಳಗಿನ ವಿವರಗಳನ್ನು ನಮೂದಿಸತಕ್ಕದ್ದು, ಎಂದರೆ:-

(ಎ) ಮೊಕದ್ದಮೆಯ ಕ್ರಮ ಸಂಖ್ಯೆ;

(ಬಿ) ಅಪರಾಧವನ್ನು ಮಾಡಿದ ದಿನಾಂಕ;

(ಸಿ) ವರದಿಯ ಅಥವಾ ದೂರಿನ ದಿನಾಂಕ;

(ಡಿ) ದೂರುದಾರನ ಹೆಸರು (ಯಾರಾದರೂ ಇದ್ದರೆ);

(ಇ) ಆಪಾದಿತನ ಹೆಸರು, ತಂದೆ ತಾಯಿಗಳ ಹೆಸರು ಮತ್ತು ವಾಸಸ್ಥಳ;

(ಎಫ್) ಯಾವ ಅಪರಾಧದ ಬಗ್ಗೆ ದೂರು ಕೊಡಲಾಗಿದೆಯೋ (ಯಾವುದಾದರೂ ಇದ್ದರೆ) ಆ ಅಪರಾಧ ಮತ್ತು ಅಪರಾಧವು ರುಜುವಾತಾಗಿದ್ದರೆ ಆ ಅಪರಾಧ ಮತ್ತು 283ನೇ ಪ್ರಕರಣದ (1)ನೇ ಉಪಪ್ರಕರಣದ (i)ನೇ ಖಂಡ, (ii)ನೇ ಖಂಡ ಅಥವಾ (iii)ನೇ ಖಂಡದ ಮೇರೆಗಿನ ಮೊಕದ್ದಮೆಗಳಲ್ಲಿ ಯಾವ ಸ್ವತ್ತಿನ ಸಂಬಂಧದಲ್ಲಿ ಅಪರಾಧ ಮಾಡಲಾಗಿದೆಯೋ ಆ ಸ್ವತ್ತಿನ ಮೌಲ್ಯ;

(ಜಿ) ಆಪಾದಿತನ ವಾದ ಮತ್ತು ಅವನ ವಿಚಾರಣೆ (ಯಾವುದಾದರೂ ಇದ್ದರೆ);

(ಹೆಚ್) ನಿರ್ಣಯ;

(ಐ) ಶಿಕ್ಷೆಯ ಆದೇಶ ಅಥವಾ ಇತರ ಅಂತಿಮ ಆದೇಶ;

(ಜೆ) ವ್ಯವಹರಣೆಗಳನ್ನು ಮುಕ್ತಾಯಗೊಳಿಸಿದ ದಿನಾಂಕ.

**287. ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಲಾದ ಮೊಕದ್ದಮೆಗಳಲ್ಲಿ ತೀರ್ಪು.-** ಆಪಾದಿತನು ತಪ್ಪೊಪ್ಪಿಕೊಳ್ಳದಿರುವ ಮತ್ತು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಲಾದ ಪ್ರತಿಯೊಂದು ಮೊಕದ್ದಮೆಯಲ್ಲಿ, ಮ್ಯಾಜಿಸ್ಟ್ರೇಟನು ಸಾಕ್ಷ್ಯದ ಸಾರಾಂಶವನ್ನು ಮತ್ತು ಆ ನಿರ್ಣಯಕ್ಕೆ ಇರುವ ಕಾರಣಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡ ತೀರ್ಪನ್ನು ದಾಖಲಿಸತಕ್ಕದ್ದು.

**288. ದಾಖಲೆಯ ಮತ್ತು ತೀರ್ಪಿನ ಭಾಷೆ.-** (1) ಅಂಥ ಪ್ರತಿಯೊಂದು ದಾಖಲೆಯನ್ನು ಮತ್ತು ತೀರ್ಪನ್ನು ನ್ಯಾಯಾಲಯದ ಭಾಷೆಯಲ್ಲಿ ಬರೆಯತಕ್ಕದ್ದು.

(2) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಂದ ನೇಮಕಗೊಂಡ ಅಧಿಕಾರಿಯ ಮೂಲಕ ಮೇಲೆ ಹೇಳಿರುವ ದಾಖಲೆಯನ್ನು ಅಥವಾ ತೀರ್ಪನ್ನು ಅಥವಾ ಅವೆರಡನ್ನೂ ಸಿದ್ಧಪಡಿಸಲು, ಅಪರಾಧಗಳ ಸಂಕ್ಷಿಪ್ತ ಅಧಿವಿಚಾರಣೆ ಮಾಡಲು ಅಧಿಕಾರ ಉಳ್ಳ ಯಾರೇ ಮ್ಯಾಜಿಸ್ಟ್ರೇಟನನ್ನು ಉಚ್ಚ ನ್ಯಾಯಾಲಯವು ಅಧಿಕೃತಗೊಳಿಸಬಹುದು ಮತ್ತು ಹಾಗೆ ಸಿದ್ಧಪಡಿಸಲಾದ ದಾಖಲೆಗೆ ಅಥವಾ ತೀರ್ಪಿಗೆ ಅಂಥ ಮ್ಯಾಜಿಸ್ಟ್ರೇಟನು ಸಹಿ ಮಾಡತಕ್ಕದ್ದು.

## ಅಧ್ಯಾಯ XXIII

### ಚೌಕಾಸಿಗಾಗಿ ಮನವಿ

**289. ಈ ಅಧ್ಯಾಯದ ಅನ್ವಯ.-** (1) ಈ ಅಧ್ಯಾಯವು, ಯಾವ ಆಪಾದಿತನ ವಿರುದ್ಧ,-

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಉಪಬಂಧಿಸಿರುವಂತೆ ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಏಳು ವರ್ಷಗಳಿಗೆ ಮೀರಿದ ಕಾರಾವಾಸದ ದಂಡನೆಯಿಂದ ದಂಡನೀಯವಾಗಬಹುದಾದ ಅಪರಾಧಗಳನ್ನು ಹೊರತುಪಡಿಸಿ, ಇತರ ಅಪರಾಧವನ್ನು ಆಪಾದಿತನು ಮಾಡಿದ್ದಾನೆಂದು ಆಪಾದಿಸಿ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು 193ನೇ ಪ್ರಕರಣದ ಮೇರೆಗೆ ವರದಿಯನ್ನು ರವಾನಿಸಲಾಗಿದೆಯೋ;

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಉಪಬಂಧಿಸಿರುವಂತೆ ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಏಳು ವರ್ಷಗಳಿಗೆ ಮೀರಿದ ಕಾರಾವಾಸದ ದಂಡನೆಯಿಂದ ಮತ್ತು ಜುಲ್ಮಾನೆಯಿಂದ ದಂಡನೀಯವಾಗಬಹುದಾದ ಅಪರಾಧಗಳನ್ನು ಹೊರತುಪಡಿಸಿ, ಇತರ ಅಪರಾಧದ ಬಗ್ಗೆ ಬಂದ ದೂರಿನ ಆಧಾರದ ಮೇಲೆ ಆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡು, ಮ್ಯಾಜಿಸ್ಟ್ರೇಟನು ದೂರುದಾರನನ್ನು ಮತ್ತು ಸಾಕ್ಷಿದಾರನನ್ನು 223ನೇ ಪ್ರಕರಣದ ಮೇರೆಗೆ ಪರೀಕ್ಷಿಸಿದ ನಂತರ, 227ನೇ ಪ್ರಕರಣದ ಮೇರೆಗೆ ಆದೇಶಿಕೆಯನ್ನು ಹೊರಡಿಸಲಾಗಿದೆಯೋ

-ಅಂಥ ಆಪಾದಿತನ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು,

ಆದರೆ, ಅಂಥ ಅಪರಾಧವು ರಾಷ್ಟ್ರದ ಸಮಾಜೋ-ಆರ್ಥಿಕ ಸ್ಥಿತಿಗೆ ಧಕ್ಕೆಯುಂಟು ಮಾಡುವಂಥದ್ದಾಗಿದ್ದರೆ ಅಥವಾ ಅಂಥ ಅಪರಾಧವನ್ನು ಮಹಿಳೆಯ ಅಥವಾ ಮಗುವಿನ ಮೇಲೆ ಎಸಗಿದ್ದರೆ ಈ ಅಧ್ಯಾಯ ಅನ್ವಯವಾಗುವುದಿಲ್ಲ.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಯಾವ ಅಪರಾಧಗಳು ರಾಷ್ಟ್ರದ ಸಮಾಜೋ-ಆರ್ಥಿಕ ಪರಿಸ್ಥಿತಿಗೆ ಧಕ್ಕೆಯುಂಟು ಮಾಡುವಂಥವುಗಳಾಗಿವೆ ಎಂಬುದನ್ನು ನಿರ್ಧರಿಸತಕ್ಕದ್ದು.

**290. ಚೌಕಾಸಿಗಾಗಿ ಮನವಿ ಅರ್ಜಿ.-** (1) ಅಪರಾಧಕ್ಕಾಗಿ ಆಪಾದಿತನಾದ ವ್ಯಕ್ತಿಯು, ಯಾವ ನ್ಯಾಯಾಲಯದಲ್ಲಿ ಅಂಥ ಅಪರಾಧದ ಅಧಿವಿಚಾರಣೆ ಇತ್ಯರ್ಥದಲ್ಲಿರುವುದೋ ಆ ನ್ಯಾಯಾಲಯದಲ್ಲಿ ಆರೋಪವನ್ನು ರೂಪಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಚೌಕಾಸಿಗಾಗಿ ಮನವಿ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯು ಯಾವ ಮೊಕದ್ದಮೆಗೆ ಸಂಬಂಧಿಸಿರುವುದೋ ಆ ಮೊಕದ್ದಮೆಯ ಸಂಕ್ಷಿಪ್ತ ವಿವರಗಳನ್ನು ಮತ್ತು ಮೊಕದ್ದಮೆಯು ಯಾವ ಅಪರಾಧಕ್ಕೆ ಸಂಬಂಧಿಸಿದೆಯೋ ಆ ಅಪರಾಧವನ್ನು ಒಳಗೊಂಡಿರತಕ್ಕದ್ದು ಮತ್ತು ತಾನು ಸ್ವಇಚ್ಛೆಯಿಂದ ಮತ್ತು ಆ ಅಪರಾಧಕ್ಕಾಗಿ, ಕಾನೂನಿನ ಮೇರೆಗೆ ಉಪಬಂಧಿಸಿದ ದಂಡನೆಯ ಸ್ವರೂಪವನ್ನು ಮತ್ತು ವ್ಯಾಪ್ತಿಯನ್ನು ತಿಳಿದುಕೊಂಡ ನಂತರ ತನ್ನ ಮೊಕದ್ದಮೆಯಲ್ಲಿ ಚೌಕಾಸಿಗಾಗಿ ಮನವಿಯನ್ನು ತಾನೇ ಸ್ವತಃ ಸಲ್ಲಿಸಿರುವುದಾಗಿಯೂ ಮತ್ತು ಈ ಮೊಕದ್ದಮೆಯಲ್ಲಿ ಯಾವ ಅಪರಾಧವನ್ನು ಆರೋಪಿಸಲಾಗಿದೆಯೋ ಅದೇ ಮೊಕದ್ದಮೆಯಲ್ಲಿ ನ್ಯಾಯಾಲಯದಿಂದ ಈ ಮುಂಚೆ ಅಪರಾಧಿ ಎಂದು ನ್ಯಾಯನಿರ್ಣೀತವಾಗಿಲ್ಲವೆಂಬ ಬಗ್ಗೆ ಆಪಾದಿತನು ಪ್ರತಿಜ್ಞೆ ಮಾಡಿ ಹೇಳಿರುವ ಅಫಿಡಾವಿತ್ತನ್ನು ಜೊತೆಗೆ ಲಗತ್ತಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ನಂತರ, ನ್ಯಾಯಾಲಯವು ಪಬ್ಲಿಕ್ ಪ್ರಾಸಿಕ್ಯೂಟರನಿಗೆ ಅಥವಾ ಮೊಕದ್ದಮೆಯ ದೂರುದಾರನಿಗೆ ಮತ್ತು ಆಪಾದಿತನಿಗೆ ಮೊಕದ್ದಮೆಗಾಗಿ ನಿಗದಿಪಡಿಸಿದ ದಿನಾಂಕದಂದು ಹಾಜರಾಗುವಂತೆ ನೋಟೀಸನ್ನು ನೀಡತಕ್ಕದ್ದು.

(4) ಪಬ್ಲಿಕ್ ಪ್ರಾಸಿಕ್ಯೂಟರನು ಅಥವಾ ಮೊಕದ್ದಮೆಯ ದೂರುದಾರನು ಮತ್ತು ಆಪಾದಿತನು (3)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ದಿನದಂದು ಹಾಜರಾದಾಗ ನ್ಯಾಯಾಲಯವು, ಆಪಾದಿತನನ್ನು ನ್ಯಾಯಾಧೀಶರ ಕೊಠಡಿಯಲ್ಲಿ ರಹಸ್ಯವಾಗಿ, ಮೊಕದ್ದಮೆಯ ಇತರ ಪಕ್ಷಕಾರನು ಅಲ್ಲಿ ಹಾಜರಿಲ್ಲದಿರುವಲ್ಲಿ, ಆಪಾದಿತನು ಸ್ವ-ಇಚ್ಛೆಯಿಂದ ಅರ್ಜಿಯನ್ನು ಸಲ್ಲಿಸಿರುತ್ತಾನೆ ಎಂಬ ಬಗ್ಗೆ ಮನವರಿಕೆ ಮಾಡಿಕೊಳ್ಳಲು ಆತನನ್ನು ಪರೀಕ್ಷಿಸತಕ್ಕದ್ದು, ಮತ್ತು,-

(ಎ) ಅರ್ಜಿಯನ್ನು, ಆಪಾದಿತನು ಸ್ವಇಚ್ಛೆಯಿಂದ ಸಲ್ಲಿಸಿರುತ್ತಾನೆಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ, ಅದು ಪಬ್ಲಿಕ್ ಪ್ರಾಸಿಕ್ಯೂಟರನಿಗೆ ಅಥವಾ ಮೊಕದ್ದಮೆಯ ದೂರುದಾರನಿಗೆ ಮತ್ತು ಆಪಾದಿತನಿಗೆ, ಆ ಆಪಾದಿತನು ಸಂತ್ರಸ್ತ ವ್ಯಕ್ತಿಗೆ ಪರಿಹಾರಧನವನ್ನು ಮತ್ತು ಮೊಕದ್ದಮೆಯ ವೆಚ್ಚವನ್ನು ಕೊಡುವ ವಿಷಯವನ್ನು ಒಳಗೊಂಡಂತೆ, ಪರಸ್ಪರ ಸಮಾಧಾನಕರವಾಗುವಂತೆ ಮೊಕದ್ದಮೆಯನ್ನು ವಿಲೆ ಮಾಡಲು, ನ್ಯಾಯಾಲಯವು ಅರವತ್ತು ದಿನಗಳು ಮೀರದ ಕಾಲಾವಕಾಶ ನೀಡತಕ್ಕದ್ದು ಮತ್ತು ನಂತರ ಮೊಕದ್ದಮೆಯ ಮುಂದಿನ ವಿಚಾರಣೆಗಾಗಿ ದಿನಾಂಕವನ್ನು ನಿಗದಿಪಡಿಸತಕ್ಕದ್ದು;

(ಬಿ) ಅರ್ಜಿಯನ್ನು ಆಪಾದಿತನು ಸ್ವಇಚ್ಛೆಯಿಂದ ಸಲ್ಲಿಸಿಲ್ಲ ಎಂದು ನ್ಯಾಯಾಲಯಕ್ಕೆ ಕಂಡುಬಂದರೆ ಅಥವಾ ಯಾವ ಮೊಕದ್ದಮೆಯಲ್ಲಿ ಅದೇ ಅಪರಾಧವನ್ನು ಆರೋಪಿಸಲಾಗಿದೆಯೋ ಆ ಮೊಕದ್ದಮೆಯಲ್ಲಿ ಈ ಮುಂಚೆ ಆತನು ನ್ಯಾಯಾಲಯದಿಂದ ಅಪರಾಧಿ ಎಂದು ನ್ಯಾಯನಿರ್ಣೀತನಾಗಿದ್ದಾನೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ಆಗ,

ಅದು (1)ನೇ ಉಪಪ್ರಕರಣದ ಮೇರೆಗೆ ಅಂಥ ಅರ್ಜಿಯನ್ನು ಸಲ್ಲಿಸಿದ ಹಂತದಿಂದ ಈ ಸಂಹಿತೆಯ ಉಪಬಂಧಗಳ ಅನುಸಾರವಾಗಿ ಮುಂದುವರೆಯತಕ್ಕದ್ದು.

**291. ಪರಸ್ಪರ ಸಮಾಧಾನಕರ ವಿಲೆಗಾಗಿ ಮಾರ್ಗಸೂಚಿಗಳು.-** 290ನೇ ಪ್ರಕರಣದ (4)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಪರಸ್ಪರ ಸಮಾಧಾನಕರ ವಿಲೆಗಾಗಿ ಕಾರ್ಯವಿಧಾನವನ್ನು ರೂಪಿಸಲು ನ್ಯಾಯಾಲಯವು ಕೆಳಗೆ ಹೇಳಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು, ಎಂದರೆ:-

(ಎ) ಪೊಲೀಸ್ ವರದಿಯ ಮೇಲೆ ಹೂಡಿದ ಮೊಕದ್ದಮೆಯಲ್ಲಿ ನ್ಯಾಯಾಲಯವು ಮೊಕದ್ದಮೆಯ ಸಮಾಧಾನಕರ ವಿಲೆಗಾಗಿ ಕಾರ್ಯವಿಧಾನವನ್ನು ರೂಪಿಸುವ ಸಭೆಯಲ್ಲಿ ಪಾಲ್ಗೊಳ್ಳುವಂತೆ ಪಬ್ಲಿಕ್ ಪ್ರಾಸಿಕ್ಯೂಟರ್, ಮೊಕದ್ದಮೆಯ ತನಿಖೆ ಮಾಡಿದ ಪೊಲೀಸ್ ಅಧಿಕಾರಿಗೆ, ಮೊಕದ್ದಮೆಯ ಆಪಾದಿತನಿಗೆ ಮತ್ತು ಸಂತ್ರಸ್ತನಿಗೆ ನೋಟೀಸ್ ನೀಡತಕ್ಕದ್ದು:

ಪರಂತು, ಮೊಕದ್ದಮೆಯ ಸಮಾಧಾನಕರ ವಿಲೆಗಾಗಿ ಕಾರ್ಯವಿಧಾನವನ್ನು ರೂಪಿಸುವಂಥ ಇಡೀ ಪ್ರಕ್ರಿಯೆಯಲ್ಲಿ, ಸಂಪೂರ್ಣ ಪ್ರಕ್ರಿಯೆಯನ್ನು ಆ ಸಭೆಯಲ್ಲಿ ಭಾಗವಹಿಸುತ್ತಿರುವ ಪಕ್ಷಕಾರರು ಸ್ವಇಚ್ಛೆಯಿಂದ ಪೂರ್ಣಗೊಳಿಸಿದನೆಂಬುದನ್ನು ಖಚಿತಪಡಿಸುವುದು ನ್ಯಾಯಾಲಯದ ಕರ್ತವ್ಯವಾಗಿರತಕ್ಕದ್ದು:

ಮತ್ತು ಪರಂತು, ಆಪಾದಿತನು, ಮೊಕದ್ದಮೆಯಲ್ಲಿ ನ್ಯಾಯವಾದಿಯನ್ನು ನಿಯೋಜಿಸಿಕೊಂಡಿದ್ದರೆ, ಆ ನ್ಯಾಯವಾದಿಯ ಜೊತೆ ಆ ಸಭೆಯಲ್ಲಿ ಭಾಗವಹಿಸಲು ಇಚ್ಛಿಸಿದರೆ, ಹಾಗೆ ಭಾಗವಹಿಸಬಹುದು.

(ಬಿ) ಪೊಲೀಸ್ ವರದಿಯನ್ನು ಮೇಲಲ್ಲದೆ ಅನ್ಯಥಾ ಹೂಡಿದ ಮೊಕದ್ದಮೆಯಲ್ಲಿ ನ್ಯಾಯಾಲಯವು ಮೊಕದ್ದಮೆಯ ಸಮಾಧಾನಕರ ವಿಲೆಗಾಗಿ ಕಾರ್ಯವಿಧಾನವನ್ನು ರೂಪಿಸಲು ನಡೆಯುವ ಸಭೆಯಲ್ಲಿ ಭಾಗವಹಿಸಲು ಆಪಾದಿತನಿಗೆ ಮತ್ತು ಸಂತ್ರಸ್ತನಿಗೆ ನೋಟೀಸು ನೀಡತಕ್ಕದ್ದು:

ಪರಂತು, ಮೊಕದ್ದಮೆಯ ಸಮಾಧಾನಕರ ವಿಲೆಗಾಗಿ ಕಾರ್ಯವಿಧಾನವನ್ನು ರೂಪಿಸುವಂಥ ಇಡೀ ಪ್ರಕ್ರಿಯೆಯಲ್ಲಿ, ಸಂಪೂರ್ಣ ಪ್ರಕ್ರಿಯೆಯನ್ನು ಆ ಸಭೆಯಲ್ಲಿ ಭಾಗವಹಿಸುತ್ತಿರುವ ಪಕ್ಷಕಾರರು ಸ್ವಇಚ್ಛೆಯಿಂದ ಪೂರ್ಣಗೊಳಿಸಿದನೆಂಬುದನ್ನು ಖಚಿತಪಡಿಸುವುದು ನ್ಯಾಯಾಲಯದ ಕರ್ತವ್ಯವಾಗಿರತಕ್ಕದ್ದು:

ಮತ್ತು ಪರಂತು, ಮೊಕದ್ದಮೆಯಿಂದಾಗಿ ಸಂತ್ರಸ್ತ ವ್ಯಕ್ತಿಯು ಅಥವಾ ಆಪಾದಿತನು, ಮೊಕದ್ದಮೆಯಲ್ಲಿ ತಾನು ನಿಯೋಜಿಸಿಕೊಂಡ ನ್ಯಾಯವಾದಿಯ ಜೊತೆ ಆ ಸಭೆಯಲ್ಲಿ ಭಾಗವಹಿಸಲು ಇಚ್ಛಿಸಿದರೆ ಹಾಗೆ ಭಾಗವಹಿಸಬಹುದು.

**292. ಪರಸ್ಪರ ಸಮಾಧಾನಕರ ವಿಲೆಯ ವರದಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸುವುದು.-** 291ನೇ ಪ್ರಕರಣದ ಮೇರೆಗೆ ನಡೆದ ಸಭೆಯಲ್ಲಿ ಮೊಕದ್ದಮೆಯ ಸಮಾಧಾನಕರ ವಿಲೆಯ ಕಾರ್ಯವಿಧಾನವನ್ನು ರೂಪಿಸಿರುವಲ್ಲಿ, ನ್ಯಾಯಾಲಯವು, ಅಂಥ ವಿಲೆಯ ವರದಿಯನ್ನು ಸಿದ್ಧಪಡಿಸತಕ್ಕದ್ದು, ಆ ವರದಿಗೆ, ನ್ಯಾಯಾಲಯದ ಪೀಠಾಸೀನ ನ್ಯಾಯಾಧೀಶನು ಮತ್ತು ಆ ಸಭೆಯಲ್ಲಿ ಭಾಗವಹಿಸಿದ ಎಲ್ಲ ಇತರೆ ವ್ಯಕ್ತಿಗಳು ಸಹಿ ಮಾಡತಕ್ಕದ್ದು ಮತ್ತು ಯಾವುದೇ ಅಂಥ ವಿಲೆಗಾಗಿ ಕಾರ್ಯವಿಧಾನವನ್ನು ರೂಪಿಸದಿದ್ದರೆ, ನ್ಯಾಯಾಲಯವು ಅಂಥ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಅಂಥ ಮೊಕದ್ದಮೆಯಲ್ಲಿ 290ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ಹಂತದಿಂದ ಈ ಸಂಹಿತೆಯ ಉಪಬಂಧಗಳಿಗನುಸಾರವಾಗಿ ಮುಂದುವರೆಯತಕ್ಕದ್ದು.

**293. ಮೊಕದ್ದಮೆಯ ವಿಲೆ.-** 292ನೇ ಪ್ರಕರಣದ ಮೇರೆಗೆ ಮೊಕದ್ದಮೆಯ ಸಮಾಧಾನಕರ ವಿಲೆಗಾಗಿ ಕಾರ್ಯವಿಧಾನವನ್ನು ರೂಪಿಸಿದ್ದಲ್ಲಿ, ನ್ಯಾಯಾಲಯವು ಈ ಕೆಳಕಂಡ ರೀತಿಯಲ್ಲಿ ಮೊಕದ್ದಮೆಯನ್ನು ವಿಲೆ ಮಾಡತಕ್ಕದ್ದು, ಎಂದರೆ:-

(ಎ) ನ್ಯಾಯಾಲಯವು, 292ನೇ ಪ್ರಕರಣದ ಮೇರೆಗೆ ಆದ ವಿಲೆಗನುಸಾರವಾಗಿ ಸಂತ್ರಸ್ತನಿಗೆ ಪರಿಹಾರವನ್ನು ನೀಡತಕ್ಕದ್ದು ಮತ್ತು ದಂಡನೆಯ ಪ್ರಮಾಣದ ಬಗ್ಗೆ 401ನೇ ಪ್ರಕರಣದ ಮೇರೆಗೆ ಆಪಾದಿತನನ್ನು ಸನ್ನಡತೆಯ ಪರಿವೀಕ್ಷಣೆಯ ಮೇಲೆ ಅಥವಾ ಎಚ್ಚರಿಕೆ ಕೊಟ್ಟ ತರುವಾಯ ಬಿಡುಗಡೆ ಮಾಡಲು ಅಥವಾ ಆಪಾದಿತನ ಬಗ್ಗೆ ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (1958ರ 20) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಮೇರೆಗೆ ವ್ಯವಹರಿಸಲು ಪಕ್ಷಕಾರರ ಅಹವಾಲನ್ನು ಆಲಿಸತಕ್ಕದ್ದು ಮತ್ತು ಆಪಾದಿತನಿಗೆ ದಂಡನೆ ವಿಧಿಸಲು ಈ ಮುಂದಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು;

(ಬಿ) ಖಂಡ (ಎ)ಯ ಮೇರೆಗೆ ಪಕ್ಷಕಾರರ ಅಹವಾಲನ್ನು ಆಲಿಸಿದ ನಂತರ ನ್ಯಾಯಾಲಯವು, 401ನೇ ಪ್ರಕರಣವನ್ನು ಅಥವಾ ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (1958ರ 20)ರ ಉಪಬಂಧಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳು ಆಪಾದಿತನು ಒಳಗೊಂಡ ಮೊಕದ್ದಮೆಗೆ ಅನ್ವಯವಾಗುತ್ತವೆಂದು ಅಭಿಪ್ರಾಯಪಟ್ಟರೆ, ಅದು, ಆಪಾದಿತನನ್ನು ಪರಿವೀಕ್ಷಣೆಯ ಮೇಲೆ ಸಂದರ್ಭಾನುಸಾರ, ಬಿಡುಗಡೆ ಮಾಡಬಹುದು ಅಥವಾ ಅಂಥ ಯಾವುದೇ ಕಾನೂನಿನ ಪ್ರಯೋಜನವನ್ನು ಅವನಿಗೆ ಕಲ್ಪಿಸಬಹುದು;

(ಸಿ) ಖಂಡ (ಬಿ)ಯ ಮೇರೆಗೆ ಪಕ್ಷಕಾರರ ಅಹವಾಲನ್ನು ಆಲಿಸಿದ ನಂತರ ನ್ಯಾಯಾಲಯಕ್ಕೆ ಆಪಾದಿತನು ಮಾಡಿದ ಅಪರಾಧಕ್ಕೆ ಕನಿಷ್ಠ ದಂಡನೆಯನ್ನು ವಿಧಿಸಲು ಕಾನೂನಿನಲ್ಲಿ ಉಪಬಂಧ ಇದೆ ಎಂದು ಕಂಡುಬಂದರೆ, ಅದು, ಆಪಾದಿತನಿಗೆ ಅಂಥ ಕನಿಷ್ಠ ದಂಡನೆಯ ಅರ್ಧದಷ್ಟು ಶಿಕ್ಷೆಯನ್ನು ವಿಧಿಸಬಹುದು ಮತ್ತು ಆಪಾದಿತನು ಮೊದಲ ಭಾರಿಗೆ ಅಪರಾಧವನ್ನು ಎಸಗಿದ್ದಲ್ಲಿ ಮತ್ತು ಈ ಹಿಂದೆ ಯಾವುದೇ ವಿಧದ ಅಪರಾಧದ ಶಿಕ್ಷೆಗೆ ಗುರಿಯಾಗಿರದಿದ್ದಲ್ಲಿ, ಅಂತಹ ಕನಿಷ್ಠ ದಂಡನೆಯ ನಾಲ್ಕನೇ ಒಂದು ಭಾಗದಷ್ಟು ಶಿಕ್ಷೆಯನ್ನು ಆಪಾದಿತನಿಗೆ ವಿಧಿಸಬಹುದು;

(ಡಿ) ಖಂಡ (ಬಿ)ಯ ಮೇರೆಗೆ ಪಕ್ಷಕಾರರ ಅಹವಾಲನ್ನು ಆಲಿಸಿದ ನಂತರ, ನ್ಯಾಯಾಲಯಕ್ಕೆ ಆಪಾದಿತನು ಮಾಡಿದ ಅಪರಾಧವು (ಬಿ) ಖಂಡದ ಅಥವಾ (ಸಿ) ಖಂಡದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಕಂಡುಬಂದ ಸಂದರ್ಭದಲ್ಲಿ, ಅದು, ಅಂಥ ಅಪರಾಧಕ್ಕಾಗಿ ಉಪಬಂಧಿಸಲಾದ ಅಥವಾ ವಿಸ್ತರಿಸಬಹುದಾದ ದಂಡನೆಯ ನಾಲ್ಕನೇ ಒಂದು ಭಾಗದಷ್ಟು ಶಿಕ್ಷೆಯನ್ನು ಆಪಾದಿತನಿಗೆ ವಿಧಿಸಬಹುದು ಮತ್ತು ಆಪಾದಿತನು ಮೊದಲ ಬಾರಿಗೆ ಅಪರಾಧವನ್ನು ಎಸಗಿದ್ದಲ್ಲಿ ಮತ್ತು ಈ ಹಿಂದೆ ಯಾವುದೇ ಅಪರಾಧದ ಅಪರಾಧಿಯೆಂದು ನ್ಯಾಯನಿರ್ಣೀತನಾಗಿರದಿದ್ದಲ್ಲಿ, ಅದು ಅಂಥ ಅಪರಾಧಕ್ಕಾಗಿ ಉಪಬಂಧಿಸಲಾದ ಅಥವಾ ವಿಸ್ತರಿಸಬಹುದಾದ ದಂಡನೆಯ ಆರನೇ ಒಂದು ಭಾಗದಷ್ಟು ಶಿಕ್ಷೆಯನ್ನು ಆಪಾದಿತನಿಗೆ ವಿಧಿಸಬಹುದು.

**294. ನ್ಯಾಯಾಲಯದ ತೀರ್ಪು.-** ನ್ಯಾಯಾಲಯವು, 293ನೇ ಪ್ರಕರಣದ ನಿಬಂಧನೆಗಳಿಗನುಸಾರವಾಗಿ ಬಹಿರಂಗ ನ್ಯಾಯಾಲಯದಲ್ಲಿ ತೀರ್ಪನ್ನು ನೀಡತಕ್ಕದ್ದು ಮತ್ತು ಅದಕ್ಕೆ ನ್ಯಾಯಾಲಯದ ಪೀಠಾಸೀನ ನ್ಯಾಯಾಧೀಶನು ಸಹಿ ಮಾಡತಕ್ಕದ್ದು.

**295. ತೀರ್ಪಿನ ಅಂತಿಮತೆ.-** ನ್ಯಾಯಾಲಯವು ಈ ಪ್ರಕರಣದ ಮೇರೆಗೆ ನೀಡಿದ ತೀರ್ಪು ಅಂತಿಮವಾದುದಾಗಿರತಕ್ಕದ್ದು ಮತ್ತು (ಸಂವಿಧಾನದ ಅನುಚ್ಛೇದ 136ರ ಮೇರೆಗೆ ವಿಶೇಷ ಅನುಮತಿ ಅರ್ಜಿ ಸಲ್ಲಿಸಿದ್ದ ಅಥವಾ

ಅನುಚ್ಛೇದ 226 ಮತ್ತು 227ರ ಮೇರೆಗೆ ರಿಟ್ ಅರ್ಜಿ ಸಲ್ಲಿಸಿದ್ದ ಹೊರತು) ಅಂಥ ತೀರ್ಪಿನ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸತಕ್ಕದ್ದಲ್ಲ.

**296. ಚೌಕಾಸಿಗಾಗಿ ಮನವಿ ಕುರಿತಂತೆ ನ್ಯಾಯಾಲಯದ ಅಧಿಕಾರ.-** ನ್ಯಾಯಾಲಯವು, ಈ ಅಧ್ಯಾಯದ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಯ ಉದ್ದೇಶಕ್ಕಾಗಿ ಜಾಮೀನು, ಅಪರಾಧಗಳ ಅಧಿವಿಚಾರಣೆ ಮತ್ತು ಮೊಕದ್ದಮೆಯ ವಿಲೆಗೆ ಸಂಬಂಧಿಸಿದ ಇತರ ವಿಷಯಗಳ ಸಂಬಂಧದಲ್ಲಿ ಈ ಸಂಹಿತೆಯ ಮೇರೆಗೆ ಅಂಥ ನ್ಯಾಯಾಲಯದಲ್ಲಿ ನಿಹಿತವಾಗಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

**297. ಆಪಾದಿತನನ್ನು ತಡೆಹಿಡಿದಿರಿಸಿದ್ದ ಅವಧಿಯನ್ನು ಆತನಿಗೆ ವಿಧಿಸಿದ ಕಾರಾವಾಸದ ಶಿಕ್ಷೆಯಲ್ಲಿ ಕಳೆಯುವುದು.-** ಈ ಅಧ್ಯಾಯದ ಮೇರೆಗೆ ವಿಧಿಸಿದ ಕಾರಾವಾಸದ ಶಿಕ್ಷೆಯಲ್ಲಿ ಆಪಾದಿತನು ಅನುಭವಿಸಿದ ತಡೆಹಿಡಿದಿರಿಸಲಾದ ಅವಧಿಯನ್ನು ಕಳೆಯುವುದಕ್ಕಾಗಿ ಈ ಸಂಹಿತೆಯ 468ನೇ ಪ್ರಕರಣದ ಉಪಬಂಧಗಳು ಈ ಸಂಹಿತೆಯ ಇತರ ಉಪಬಂಧಗಳ ಮೇರೆಗೆ ವಿಧಿಸುವ ದಂಡನೆಗೆ ಆ ಉಪಬಂಧಗಳು ಯಾವ ರೀತಿಯಲ್ಲಿ ಅನ್ವಯವಾಗುತ್ತವೋ ಅದೇ ರೀತಿಯಲ್ಲಿಯೇ ಅನ್ವಯವಾಗತಕ್ಕದ್ದು.

**298. ಉಳಿಸುವಿಕೆಗಳು.-** ಈ ಅಧ್ಯಾಯದ ಉಪಬಂಧಗಳು, ಈ ಸಂಹಿತೆಯು ಯಾವುದೇ ಇತರ ಉಪಬಂಧಗಳಲ್ಲಿ ಅದಕ್ಕೆ ಅಸಂಗತವಾದುದು ಏನೇ ಇದ್ದಾಗ್ಯೂ, ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಅಂಥ ಇತರ ಉಪಬಂಧಗಳಲ್ಲಿರುವುದು ಯಾವುದೂ ಈ ಅಧ್ಯಾಯದ ಯಾವುದೇ ಉಪಬಂಧದ ಅರ್ಥವನ್ನು ನಿರ್ಬಂಧಿಸುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

*ವಿವರಣೆ.-* ಈ ಅಧ್ಯಾಯದ ಉದ್ದೇಶಕ್ಕಾಗಿ, "ಪಬ್ಲಿಕ್ ಪ್ರಾಸಿಕ್ಯೂಟರ್" ಪದಾವಳಿಯು 2ನೇ ಪ್ರಕರಣದ (V)ನೇ ಖಂಡದಲ್ಲಿ ಅದಕ್ಕೆ ಗೊತ್ತುಪಡಿಸಿರುವ ಅರ್ಥವನ್ನೇ ಹೊಂದಿರತಕ್ಕದ್ದು ಮತ್ತು ಆ ಪದಾವಳಿಯು, 19ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ನನ್ನು ಒಳಗೊಳ್ಳುತ್ತದೆ.

**299. ಆಪಾದಿತನ ಹೇಳಿಕೆಗಳನ್ನು ಬಳಸಿಕೊಳ್ಳಬಾರದು.-** ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, 290ನೇ ಪ್ರಕರಣದ ಮೇರೆಗೆ ಚೌಕಾಸಿಗಾಗಿ ಮನವಿ ಸಲ್ಲಿಸಿದ ಅರ್ಜಿಯಲ್ಲಿ ಆಪಾದಿತನು ಹೇಳಿದ ಯಾವುದೇ ಹೇಳಿಕೆಗಳನ್ನು ಅಥವಾ ಸಂಗತಿಗಳನ್ನು, ಈ ಅಧ್ಯಾಯದ ಉದ್ದೇಶಕ್ಕಾಗಿ ಅಲ್ಲದೆ ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸಿಕೊಳ್ಳತಕ್ಕದ್ದಲ್ಲ.

**300. ಈ ಅಧ್ಯಾಯ ಅನ್ವಯವಾಗದಿರುವುದು.-** ಈ ಅಧ್ಯಾಯದಲ್ಲಿರುವುದು ಯಾವುದೂ, ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015 (2016ರ 2)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಯಾರೇ ಬಾಲಕನಿಗೆ ಅಥವಾ ಮಗುವಿಗೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ XXIV

### ಬಂದೀಖಾನೆಗಳಲ್ಲಿ ಬಂಧಿಸಿಟ್ಟಿರುವ ಅಥವಾ ತಡೆಹಿಡಿದಿರಿಸಿರುವ ವ್ಯಕ್ತಿಗಳ ಹಾಜರಾತಿ

**301. ಪರಿಭಾಷೆಗಳು.-** ಈ ಅಧ್ಯಾಯದಲ್ಲಿ,-

(ಎ) "ತಡೆಹಿಡಿದಿರಿಸಿರುವುದು" ಎಂಬುದು, ಪ್ರತಿಬಂಧಕ ತಡೆಹಿಡಿದಿರಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಿರುವ ಯಾವುದೇ ಕಾನೂನಿನ ಮೇರೆಗೆ ತಡೆಹಿಡಿದಿರಿಸಿರುವುದು ಒಳಗೊಳ್ಳುತ್ತದೆ;

(ಬಿ) "ಕಾರಾಗೃಹ" ಎಂಬ ಪದವು,-

(i) ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸಹಾಯಕ-ಜೈಲು ಎಂದು ಯಾವ ಜಾಗವನ್ನು ಘೋಷಿಸಿದೆಯೋ ಆ ಯಾವುದೇ ಜಾಗವನ್ನು;

(ii) ಯಾವುದೇ ಸುಧಾರಣಾಲಯವನ್ನು, ಬೋರ್ಸ್ಟಲ್ ಸಂಸ್ಥೆಯನ್ನು ಅಥವಾ ಅದೇ ಬಗೆಯ ಇತರ ಸಂಸ್ಥೆಯನ್ನು

- ಒಳಗೊಳ್ಳುತ್ತದೆ.

**302. ಕೈದಿಗಳ ಹಾಜರಾತಿಯನ್ನು ಅಗತ್ಯಪಡಿಸಲು ಅಧಿಕಾರ.-** (1) ಈ ಸಂಹಿತೆಯ ಮೇರೆಗೆ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯು ನಡೆಯುತ್ತಿರುವಾಗ ಕ್ರಿಮಿನಲ್ ನ್ಯಾಯಾಲಯಕ್ಕೆ,-

(ಎ) ಕಾರಾಗೃಹದಲ್ಲಿ ಬಂಧಿಸಿಟ್ಟಿರುವ ಅಥವಾ ತಡೆಹಿಡಿದಿರಿಸಿರುವ ವ್ಯಕ್ತಿಯನ್ನು ಅಪರಾಧದ ಆರೋಪಕ್ಕೆ ಉತ್ತರಿಸಲು ಅಥವಾ ಅವನ ವಿರುದ್ಧವಾದ ಯಾವುದೇ ವ್ಯವಹರಣೆಗಳ ಉದ್ದೇಶಕ್ಕಾಗಿ ನ್ಯಾಯಾಲಯದ ಮುಂದೆ ಕರೆತಕ್ಕದ್ದೆಂದು; ಅಥವಾ

(ಬಿ) ನ್ಯಾಯೋದ್ದೇಶಗಳಿಗಾಗಿ ಅಂಥ ವ್ಯಕ್ತಿಯನ್ನು ಸಾಕ್ಷಿದಾರನಾಗಿ ವಿಚಾರಣೆ ಮಾಡುವುದು ಅವಶ್ಯಕವೆಂದು

- ಕಂಡುಬಂದರೆ, ಅದು ಸಂದರ್ಭಾನುಸಾರ, ಆರೋಪಕ್ಕೆ ಉತ್ತರಿಸಲು ಅಥವಾ ಅಂಥ ವ್ಯವಹರಣೆಯ ಉದ್ದೇಶಕ್ಕಾಗಿ ಅಥವಾ ಸಾಕ್ಷ್ಯ ನೀಡಲು ಅಂಥ ವ್ಯಕ್ತಿಯನ್ನು ಹಾಜರುಪಡಿಸಬೇಕೆಂದು ಕಾರಾಗೃಹದ ಪ್ರಭಾರವನ್ನು ಹೊಂದಿರುವ ಅಧಿಕಾರಿಯನ್ನು ಅಗತ್ಯಪಡಿಸುವ ಆದೇಶವನ್ನು ನ್ಯಾಯಾಲಯವು ಮಾಡಬಹುದು.

(2) ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿದಾಗ, ಅಂಥ ಮ್ಯಾಜಿಸ್ಟ್ರೇಟನು ಯಾವ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಧೀನನಾಗಿರುವನೋ ಆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅದಕ್ಕೆ ಮೇಲುರುಜು ಹಾಕಿದ ಹೊರತು, ಕಾರಾಗೃಹದ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಅದನ್ನು ಕಳುಹಿಸತಕ್ಕದ್ದಲ್ಲ ಅಥವಾ ಅವನು ಅದನ್ನು ಕಾರ್ಯಗತಗೊಳಿಸತಕ್ಕದ್ದಲ್ಲ.

(3) ಉಪಪ್ರಕರಣ (2)ರ ಮೇರೆಗೆ ಮೇಲುರುಜುವಿಗಾಗಿ ಒಪ್ಪಿಸಿದ ಪ್ರತಿಯೊಂದು ಆದೇಶವು, ಮ್ಯಾಜಿಸ್ಟ್ರೇಟನ ಅಭಿಪ್ರಾಯದಲ್ಲಿ ಅಂಥ ಆದೇಶವನ್ನು ಮಾಡುವುದಕ್ಕೆ ಅವಶ್ಯಕವಾಗುವಂಥ ಸಂಗತಿಗಳ ಬಗೆಗಿನ ಹೇಳಿಕೆಯೊಂದಿಗೆ ಇರತಕ್ಕದ್ದು ಮತ್ತು ಅದನ್ನು ಯಾವ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಸಲ್ಲಿಸಲಾಯಿತೋ ಆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಂಥ ಹೇಳಿಕೆಯನ್ನು ಪರ್ಯಾಲೋಚಿಸಿದ ತರುವಾಯ ಆ ಆದೇಶಕ್ಕೆ ಮೇಲುರುಜು ಮಾಡಲು ನಿರಾಕರಿಸಬಹುದು.

**303. 302ನೇ ಪ್ರಕರಣವನ್ನು ಕೆಲವು ವ್ಯಕ್ತಿಗಳಿಗೆ ಅನ್ವಯವಾಗದಂತೆ ಮಾಡಲು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಧಿಕಾರ.-** (1) ಸಂದರ್ಭಾನುಸಾರ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು, (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಸಮಯದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ವರ್ಗವನ್ನು, ಯಾವ ಕಾರಾಗೃಹದಲ್ಲಿ ಅವನನ್ನು ಅಥವಾ ಅವರನ್ನು ಬಂಧಿಸಿಟ್ಟಿರಬಹುದೋ ಅಥವಾ ತಡೆಹಿಡಿದಿರಿಸಿರಬಹುದೋ ಆ ಕಾರಾಗೃಹದಿಂದ ಸ್ಥಳಾಂತರಿಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು ಮತ್ತು ಆನಂತರ ಆ ಆದೇಶವು ಜಾರಿಯಲ್ಲಿರುವಷ್ಟು ಕಾಲ, ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಆದೇಶಕ್ಕೆ ಮುಂಚೆ ಅಥವಾ ತರುವಾಯ ಮಾಡಿದ 302ನೇ ಪ್ರಕರಣದ ಮೇರೆಗಿನ ಯಾವುದೇ ಆದೇಶವು ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಸಂಬಂಧಪಟ್ಟಂತೆ ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೂ ಮುಂಚೆ, ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ, ಕೇಂದ್ರ ಸರ್ಕಾರದ ಕೇಂದ್ರೀಯ ಏಜೆನ್ಸಿಯ ಮೂಲಕ ಮೊಕದ್ದಮೆಗಳನ್ನು ಹೂಡುವಲ್ಲಿ ಕೇಂದ್ರ ಸರ್ಕಾರವು, ಈ ಕೆಳಕಂಡ ವಿಷಯಗಳಿಗೆ ಗಮನ ನೀಡತಕ್ಕದ್ದು, ಎಂದರೆ:-

(ಎ) ಯಾವ ಸ್ವರೂಪದ ಅಪರಾಧಕ್ಕಾಗಿ ಅಥವಾ ಯಾವ ಕಾರಣಗಳ ಮೇಲೆ ಆ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ವರ್ಗವನ್ನು ಕಾರಾಗೃಹದಲ್ಲಿ ಬಂಧಿಸಿಟ್ಟಿರಲು ಅಥವಾ ತಡೆಹಿಡಿದಿರಿಸಲು ಆದೇಶಿಸಲಾಗಿದೆಯೋ ಆ ಅಪರಾಧದ ಸ್ವರೂಪ ಅಥವಾ ಕಾರಣಗಳು;

(ಬಿ) ಕಾರಾಗೃಹದಿಂದ ಆ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ವರ್ಗವನ್ನು ಸ್ಥಳಾಂತರಿಸಲು ಅನುಮತಿಸಿದರೆ ಉಂಟಾಗಬಹುದಾದ ಸಾರ್ವಜನಿಕ ಸುವ್ಯವಸ್ಥೆಯ ಭಂಗ;

(ಸಿ) ಸಾಮಾನ್ಯವಾಗಿ, ಸಾರ್ವಜನಿಕ ಹಿತಾಸಕ್ತಿ.

**304. ಕಾರಾಗೃಹದ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಕೆಲವು ಅನಿಶ್ಚಿತ ಸಂದರ್ಭಗಳಲ್ಲಿ ಆದೇಶವನ್ನು ಪಾಲಿಸದೆ ತಟಸ್ಥನಾಗಿರುವುದು.-** 302ನೇ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ಸಂಬಂಧದಲ್ಲಿ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು,-

(ಎ) ಕಾಯಿಲೆಯ ಅಥವಾ ದೌರ್ಬಲ್ಯದ ಕಾರಣದಿಂದಾಗಿ ಕಾರಾಗೃಹದಿಂದ ಸ್ಥಳಾಂತರಗೊಳ್ಳಲು ಅಸಮರ್ಥನಾಗಿದ್ದರೆ; ಅಥವಾ

(ಬಿ) ಅವನನ್ನು ಅಧಿವಿಚಾರಣೆಗಾಗಿ ಒಪ್ಪಿಸಿದ್ದರೆ ಅಥವಾ ಅಧಿವಿಚಾರಣೆಯಾಗುತ್ತಿರುವಾಗ ಅಥವಾ ಪ್ರಾರಂಭಿಕ ತನಿಖೆಯಾಗುತ್ತಿರುವಾಗ ಸುಪರ್ದಿಗೆ ಒಪ್ಪಿಸಿದ್ದರೆ; ಅಥವಾ

(ಸಿ) ಆದೇಶವನ್ನು ಪಾಲಿಸಲು ಮತ್ತು ಯಾವ ಕಾರಾಗೃಹದಲ್ಲಿ ಅವನನ್ನು ಬಂಧಿಸಿಟ್ಟಿರಲಾಗಿತ್ತೋ ಅಥವಾ ತಡೆಹಿಡಿದಿರಿಸಲಾಗಿತ್ತೋ ಆ ಕಾರಾಗೃಹಕ್ಕೆ ವಾಪಸು ಕರೆದೊಯ್ಯುವುದಕ್ಕಾಗಿ ಅಗತ್ಯವಿರುವ ಕಾಲಾವಧಿಯು ಮುಕ್ತಾಯವಾಗುವುದಕ್ಕೂ ಮುಂಚೆ, ಮುಕ್ತಾಯವಾಗಬಹುದಾಗಿದ್ದ ಅವಧಿಯವರೆಗೆ ಅವನು ಅಭಿರಕ್ಷೆಯಲ್ಲಿದ್ದರೆ; ಅಥವಾ

(ಡಿ) 303ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಮಾಡಿದ ಆದೇಶವು ಅನ್ವಯವಾಗುವ ವ್ಯಕ್ತಿಯಾಗಿದ್ದರೆ

- ಕಾರಾಗೃಹದ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ನ್ಯಾಯಾಲಯದ ಆದೇಶವನ್ನು ಪಾಲಿಸದೆ ತಟಸ್ಥನಾಗಿರತಕ್ಕದ್ದು ಮತ್ತು ಹಾಗೆ ತಟಸ್ಥನಾಗಿರುವುದಕ್ಕೆ ಇರುವ ಕಾರಣಗಳ ಬಗ್ಗೆ ಹೇಳಿಕೆಯನ್ನು ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು:

ಪರಂತು, ಕಾರಾಗೃಹದಿಂದ ಇಪ್ಪತ್ತೈದು ಕಿ.ಮೀ. ಗಳಿಗಿಂತ ಹೆಚ್ಚು ದೂರ ಇರದ ಸ್ಥಳದಲ್ಲಿ ಸಾಕ್ಷ್ಯ ನೀಡಲು ಅಂಥ ವ್ಯಕ್ತಿಯ ಹಾಜರಾತಿಯು ಅಗತ್ಯವಾಗಿದ್ದರೆ, ಕಾರಾಗೃಹದ ಪ್ರಭಾರವನ್ನು ಹೊಂದಿರುವ ಅಧಿಕಾರಿಯು (ಬಿ) ಖಂಡದಲ್ಲಿ ಹೇಳಿರುವ ಕಾರಣಕ್ಕಾಗಿ ಆದೇಶವನ್ನು ಹಾಗೆ ಪಾಲಿಸದೇ ತಟಸ್ಥನಾಗಿರತಕ್ಕದ್ದಲ್ಲ.

**305. ಕೈದಿಯನ್ನು ನ್ಯಾಯಾಲಯಕ್ಕೆ ಅಭಿರಕ್ಷೆಯಲ್ಲಿ ಕರೆ ತರುವುದು.-** 304ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, 302ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಮತ್ತು ಅವಶ್ಯವಿರುವಲ್ಲಿ ಅದರ (2)ನೇ ಉಪಪ್ರಕರಣದ

ಮೇರೆಗೆ ಯುಕ್ತವಾಗಿ ಮೇಲುರುಜು ಮಾಡಿರುವ ಆದೇಶವನ್ನು ಕಾರಾಗೃಹದ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ತಲುಪಿಸಿದ ತರುವಾಯ, ನ್ಯಾಯಾಲಯವು ಯಾವ ವ್ಯಕ್ತಿಯ ಹಾಜರಾತಿಯನ್ನು ಅಗತ್ಯಪಡಿಸಿ ನ್ಯಾಯಾಲಯಕ್ಕೆ ಕರೆತಂದು ಆ ಆದೇಶದಲ್ಲಿ ಹೆಸರಿಸಿದ ವ್ಯಕ್ತಿಯನ್ನು, ಆದೇಶದಲ್ಲಿ ನಮೂದಿಸಿದ ಕಾಲದಲ್ಲಿ ಹಾಜರುಪಡಿಸುವಂತೆ ಮಾಡತಕ್ಕದ್ದು ಮತ್ತು ಅವನನ್ನು ವಿಚಾರಣೆ ಮಾಡುವವರೆಗೆ ಅಥವಾ ಅವನನ್ನು ಬಂಧಿಸಿಟ್ಟಿದ್ದ ಅಥವಾ ತಡೆಹಿಡಿದಿರಿಸಿಟ್ಟಿದ್ದ ಕಾರಾಗೃಹಕ್ಕೆ ವಾಪಸು ಕರೆದೊಯ್ಯುವುದಕ್ಕೆ ನ್ಯಾಯಾಲಯವು ಅನುಮತಿ ಕೊಡುವವರೆಗೆ ನ್ಯಾಯಾಲಯದಲ್ಲಿ ಅಥವಾ ಅದರ ಸಮೀಪದಲ್ಲಿ ಅವನನ್ನು ಅಭಿರಕ್ಷೆಯಲ್ಲಿರಿಸಿಕೊಂಡಿರತಕ್ಕದ್ದು.

**306. ಕಾರಾಗೃಹದಲ್ಲಿರುವ ಸಾಕ್ಷಿದಾರನ ವಿಚಾರಣೆಗೆ ಕಾರ್ಯಾಜ್ಞೆ ಹೊರಡಿಸಲು ಅಧಿಕಾರ.-** ಈ ಅಧ್ಯಾಯದ ಉಪಬಂಧಗಳು, ಕಾರಾಗೃಹದಲ್ಲಿ ಬಂಧಿಸಿಟ್ಟುಕೊಂಡಿರುವ ಅಥವಾ ತಡೆಹಿಡಿದಿರಿಸುವ ಯಾರೇ ವ್ಯಕ್ತಿಯನ್ನು ಸಾಕ್ಷಿದಾರನು ವಿಚಾರಣೆ ಮಾಡಲು 319ನೇ ಪ್ರಕರಣದ ಮೇರೆಗೆ ಕಾರ್ಯಾಜ್ಞೆಯನ್ನು ಹೊರಡಿಸುವ ನ್ಯಾಯಾಲಯದ ಅಧಿಕಾರಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಅಧ್ಯಾಯ ರ 'ಬಿ' ಭಾಗದ ಉಪಬಂಧಗಳು ಯಾರೇ ಇತರ ವ್ಯಕ್ತಿಯನ್ನು ಕಾರ್ಯಾಜ್ಞೆ ಮೇರೆಗೆ ವಿಚಾರಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಹೇಗೆ ಅನ್ವಯವಾಗುತ್ತವೆಯೋ ಹಾಗೆಯೇ ಕಾರಾಗೃಹದಲ್ಲಿರುವ ಅಂಥ ಯಾರೇ ವ್ಯಕ್ತಿಯನ್ನು ಕಾರ್ಯಾಜ್ಞೆ ಮೇರೆಗೆ ಮಾಡುವ ವಿಚಾರಣೆಗೆ ಸಂಬಂಧಿಸಿದಂತೆಯೇ ಅನ್ವಯವಾಗತಕ್ಕದ್ದು.

## ಅಧ್ಯಾಯ XXV

## ವಿಚಾರಣೆಗಳಲ್ಲಿ ಹಾಗೂ ಅಧಿವಿಚಾರಣೆಗಳಲ್ಲಿ ಸಾಕ್ಷ್ಯ

### *ಎ.- ಸಾಕ್ಷ್ಯವನ್ನು ತೆಗೆದುಕೊಳ್ಳುವ ಹಾಗೂ ದಾಖಲಿಸುವ ವಿಧಾನ*

**307. ನ್ಯಾಯಾಲಯಗಳ ಭಾಷೆ.-** ರಾಜ್ಯ ಸರ್ಕಾರವು, ಈ ಸಂಹಿತೆಯ ಉದ್ದೇಶಗಳಿಗಾಗಿ, ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ರಾಜ್ಯದೊಳಗಿರುವ ಪ್ರತಿಯೊಂದು ನ್ಯಾಯಾಲಯದ ಭಾಷೆ ಯಾವುದಿರತಕ್ಕದ್ದೆಂಬುದನ್ನು ನಿರ್ಧರಿಸಬಹುದು.

**308. ಆಪಾದಿತನ ಸಮ್ಮುಖದಲ್ಲಿ ತೆಗೆದುಕೊಳ್ಳಬೇಕಾದ ಸಾಕ್ಷ್ಯ.-** ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯು ನಡೆಯುತ್ತಿರುವಾಗ ತೆಗೆದುಕೊಳ್ಳುವ ಎಲ್ಲ ಸಾಕ್ಷ್ಯವನ್ನು ಆಪಾದಿತನ ಸಮ್ಮುಖದಲ್ಲಿ ಅಥವಾ ಅವನ ಖುದ್ದು ಹಾಜರಾತಿಗೆ ವಿನಾಯಿತಿ ಕೊಟ್ಟಿದ್ದರೆ, ರಾಜ್ಯ ಸರ್ಕಾರವು ಅಧಿಸೂಚಿಸಿದ ನಿಯೋಜಿತ ಸ್ಥಳದಲ್ಲಿ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮುಖಾಂತರವೂ ಸೇರಿದಂತೆ ಅವನ ನ್ಯಾಯವಾದಿಯ ಸಮ್ಮುಖದಲ್ಲಿ ತೆಗೆದುಕೊಳ್ಳತಕ್ಕದ್ದು:

ಪರಂತು, ಅತ್ಯಾಚಾರ ಅಥವಾ ಯಾವುದೇ ಇತರ ಲೈಂಗಿಕ ಅಪರಾಧಕ್ಕೆ ಒಳಗಾದ ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯ ಸಾಕ್ಷ್ಯವನ್ನು ದಾಖಲು ಮಾಡಿಕೊಳ್ಳಬೇಕಾಗಿದ್ದಲ್ಲಿ, ನ್ಯಾಯಾಲಯವು ಮಹಿಳೆಯು ಆಪಾದಿತನಿಗೆ ಎದುರಾಗದಂತೆ ಹಾಗೂ ಆಪಾದಿತನನ್ನು ಪಾಟೀ-ಸವಾಲು ಮಾಡುವ ಹಕ್ಕನ್ನು ಅವಳಿಗೆ ಸುನಿಶ್ಚಿತಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

*ವಿವರಣೆ.-* ಈ ಪ್ರಕರಣದಲ್ಲಿ, "ಆಪಾದಿತ" ಎಂಬುದು, ಯಾವ ವ್ಯಕ್ತಿಗೆ ಸಂಬಂಧಿಸಿದಂತೆ I ನೇ ಅಧ್ಯಾಯದ ಮೇರೆಗಿನ ಯಾವುದೇ ವ್ಯವಹರಣೆಯು ಈ ಸಂಹಿತೆಯ ಮೇರೆಗೆ ಪ್ರಾರಂಭಿಸಲಾಗಿದೆಯೋ ಆ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

**309. ಸಮನ್ ಮೊಕದ್ದಮೆಗಳಲ್ಲಿ ಮತ್ತು ವಿಚಾರಣೆಗಳಲ್ಲಿ ದಾಖಲಿಸುವುದು.-** (1) ಮ್ಯಾಜಿಸ್ಟ್ರೇಟನ ಮುಂದೆ ಅಧಿವಿಚಾರಣೆ ಮಾಡಲಾದ ಎಲ್ಲಾ ಸಮನ್ ಮೊಕದ್ದಮೆಗಳಲ್ಲಿ, 164ರಿಂದ 167ರವರೆಗಿನ (ಎರಡನ್ನೂ ಒಳಗೊಂಡು) ಪ್ರಕರಣಗಳ ಮೇರೆಗಿನ ಎಲ್ಲ ವಿಚಾರಣೆಗಳಲ್ಲಿ ಮತ್ತು ಅಧಿವಿಚಾರಣೆಯನ್ನು ಹೊರತುಪಡಿಸಿ, 491ನೇ ಪ್ರಕರಣದ ಮೇರೆಗಿನ ಎಲ್ಲಾ ವ್ಯವಹರಣೆಗಳಲ್ಲಿ, ಮ್ಯಾಜಿಸ್ಟ್ರೇಟನು, ಪ್ರತಿಯೊಬ್ಬ ಸಾಕ್ಷಿದಾರನ ವಿಚಾರಣೆಯು ಮುಂದುವರಿದಂತೆ ಅವನ ಸಾಕ್ಷ್ಯದ ಸಾರಾಂಶವನ್ನು ನ್ಯಾಯಾಲಯದ ಭಾಷೆಯಲ್ಲಿ ಬರೆಯತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟನು ಸ್ವತಃ ಅಂಥ ಲಿಖಿತ ಸಾರಾಂಶವನ್ನು ಬರೆಯಲು ಅಸಮರ್ಥನಾಗಿದ್ದರೆ, ಅವನು ತನ್ನ ಅಸಮರ್ಥತೆಯ ಕಾರಣವನ್ನು ದಾಖಲಿಸಿದ ಆನಂತರ, ಬಹಿರಂಗ ನ್ಯಾಯಾಲಯದಲ್ಲಿ ಅಂಥ ಸಾರಾಂಶವನ್ನು ಲಿಖಿತದಲ್ಲಿ ಬರೆಸತಕ್ಕದ್ದು ಅಥವಾ ತಾನೇ ಉಕ್ತಲೇಖನ ಕೊಡತಕ್ಕದ್ದು.

(2) ಅಂಥ ಲಿಖಿತ ಸಾರಾಂಶಕ್ಕೆ ಮ್ಯಾಜಿಸ್ಟ್ರೇಟನು ಸಹಿ ಹಾಕತಕ್ಕದ್ದು ಮತ್ತು ಅದು ದಾಖಲೆಯ ಭಾಗವಾಗಿರತಕ್ಕದ್ದು.

**310. ವಾರಂಟ್ ಮೊಕದ್ದಮೆಗಳಲ್ಲಿ ದಾಖಲಿಸುವುದು.-** (1) ಮ್ಯಾಜಿಸ್ಟ್ರೇಟನ ಮುಂದೆ ಅಧಿವಿಚಾರಣೆ ಮಾಡಿದ ಎಲ್ಲಾ ವಾರಂಟ್ ಮೊಕದ್ದಮೆಗಳಲ್ಲಿ, ಪ್ರತಿಯೊಬ್ಬ ಸಾಕ್ಷಿದಾರನ ಸಾಕ್ಷ್ಯವನ್ನು, ಅವನ ವಿಚಾರಣೆಯು ಮುಂದುವರಿದಂತೆ ಮ್ಯಾಜಿಸ್ಟ್ರೇಟನು ಸ್ವತಃ ಬರೆದುಕೊಳ್ಳತಕ್ಕದ್ದು ಅಥವಾ ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡುವ ಮೂಲಕ ಬರೆಸತಕ್ಕದ್ದು ಅಥವಾ ಅವನ ದೈಹಿಕ ಅಥವಾ ಇತರ ಅಶಕ್ತತೆಯಿಂದ ಹಾಗೆ ಮಾಡಲು ಅವನು ಅಸಮರ್ಥನಾಗಿದ್ದರೆ, ಅವನ ನಿರ್ದೇಶನ ಮತ್ತು ಅಧೀಕ್ಷಣೆಯಲ್ಲಿ ಈ ಬಗ್ಗೆ ಅವನು ನೇಮಿಸಿದ ನ್ಯಾಯಾಲಯದ ಅಧಿಕಾರಿಯು ಬರೆದುಕೊಳ್ಳತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಸಾಕ್ಷಿದಾರನ ಸಾಕ್ಷ್ಯವನ್ನು ಅಪರಾಧದ ಆಪಾದಿತ ವ್ಯಕ್ತಿಯ ನ್ಯಾಯವಾದಿಯ ಸಮಕ್ಷಮದಲ್ಲಿ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳ ಮೂಲಕವೂ ಸಹ ದಾಖಲಿಸಿಕೊಳ್ಳಬಹುದು.

(2) ಮ್ಯಾಜಿಸ್ಟ್ರೇಟನು ಸಾಕ್ಷ್ಯವನ್ನು ಬರೆಯಿಸಿದ್ದರೆ, ಅವರು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಕಾರಣಗಳಿಗಾಗಿ ಸಾಕ್ಷ್ಯವನ್ನು ತಾನೇ ಸ್ವತಃ ಬರೆದುಕೊಳ್ಳಲಾಗಲಿಲ್ಲ ಎಂಬ ಪ್ರಮಾಣಪತ್ರವನ್ನು ದಾಖಲಿಸತಕ್ಕದ್ದು.

(3) ಅಂಥ ಸಾಕ್ಷ್ಯವನ್ನು ಸಾಮಾನ್ಯವಾಗಿ ವೃತ್ತಾಂತ ನಿರೂಪಣೆ ರೂಪದಲ್ಲಿ ಬರೆದುಕೊಳ್ಳತಕ್ಕದ್ದು, ಆದರೆ ಮ್ಯಾಜಿಸ್ಟ್ರೇಟನು ಅಂಥ ಸಾಕ್ಷ್ಯದ ಯಾವುದೇ ಭಾಗವನ್ನು ಪ್ರಶ್ನೆ ಮತ್ತು ಉತ್ತರದ ರೂಪದಲ್ಲಿ, ತನ್ನ ವಿವೇಚನಾನುಸಾರ, ಬರೆದುಕೊಳ್ಳಬಹುದು ಅಥವಾ ಬರೆಸಬಹುದು.

(4) ಹಾಗೆ ಬರೆದುಕೊಂಡ ಸಾಕ್ಷ್ಯಕ್ಕೆ ಮ್ಯಾಜಿಸ್ಟ್ರೇಟನು ಸಹಿ ಮಾಡತಕ್ಕದ್ದು ಮತ್ತು ಅದು ದಾಖಲೆಯ ಭಾಗವಾಗಿರತಕ್ಕದ್ದು.

**311. ಸೆಷನ್ ನ್ಯಾಯಾಲಯದ ಅಧಿವಿಚಾರಣೆಯಲ್ಲಿ ದಾಖಲಿಸುವುದು.-** (1) ಸೆಷನ್ ನ್ಯಾಯಾಲಯದ ಮುಂದಿರುವ ಎಲ್ಲ ಅಧಿವಿಚಾರಣೆಗಳಲ್ಲಿ, ಪ್ರತಿಯೊಬ್ಬ ಸಾಕ್ಷಿದಾರನ ಸಾಕ್ಷ್ಯವನ್ನು ಅವನ ವಿಚಾರಣೆಯು ಮುಂದುವರಿದಂತೆ ಪೀಠಾಸೀನ ನ್ಯಾಯಾಧೀಶನು ಸ್ವತಃ ಬರೆದುಕೊಳ್ಳತಕ್ಕದ್ದು ಅಥವಾ ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡುವ ಮೂಲಕ ಬರೆಸತಕ್ಕದ್ದು ಅಥವಾ ಈ ಬಗ್ಗೆ ಅವನು ನೇಮಿಸಿದ ನ್ಯಾಯಾಲಯದ ಅಧಿಕಾರಿಯು ಅವನ ನಿರ್ದೇಶನ ಮತ್ತು ಅಧೀಕ್ಷಣೆಯಲ್ಲಿ ಬರೆದುಕೊಳ್ಳತಕ್ಕದ್ದು.

(2) ಅಂಥ ಸಾಕ್ಷ್ಯವನ್ನು ಸಾಮಾನ್ಯವಾಗಿ ವೃತ್ತಾಂತ ನಿರೂಪಣೆಯ ರೂಪದಲ್ಲಿ ಬರೆದುಕೊಳ್ಳತಕ್ಕದ್ದು, ಆದರೆ ಪೀಠಾಸೀನ ನ್ಯಾಯಾಧೀಶನು ತನ್ನ ವಿವೇಚನೆಯಲ್ಲಿ, ಅಂಥ ಸಾಕ್ಷ್ಯದ ಯಾವುದೇ ಭಾಗವನ್ನು ಪ್ರಶ್ನೆ ಮತ್ತು ಉತ್ತರದ ರೂಪದಲ್ಲಿ ಬರೆದುಕೊಳ್ಳಬಹುದು ಅಥವಾ ಬರೆಸಬಹುದು.

(3) ಹಾಗೆ ಬರೆದುಕೊಂಡ ಸಾಕ್ಷ್ಯಕ್ಕೆ ಪೀಠಾಸೀನ ನ್ಯಾಯಾಧೀಶನು ಸಹಿ ಮಾಡತಕ್ಕದ್ದು ಮತ್ತು ಅದು ದಾಖಲೆಯ ಭಾಗವಾಗಿರತಕ್ಕದ್ದು.

**312. ಸಾಕ್ಷ್ಯವನ್ನು ಯಾವ ಭಾಷೆಯಲ್ಲಿ ದಾಖಲಿಸುವುದು.-** 310ನೇ ಅಥವಾ 311ನೇ ಪ್ರಕರಣದ ಮೇರೆಗೆ ಪ್ರತಿಯೊಂದು ಮೊಕದ್ದಮೆಯಲ್ಲಿ ಸಾಕ್ಷ್ಯವನ್ನು ಬರೆದುಕೊಳ್ಳುವಾಗ,-

(ಎ) ಸಾಕ್ಷಿದಾರನು ನ್ಯಾಯಾಲಯದ ಭಾಷೆಯಲ್ಲಿ ಸಾಕ್ಷ್ಯವನ್ನು ಕೊಟ್ಟರೆ, ಅದನ್ನು ಆ ಭಾಷೆಯಲ್ಲೇ ಬರೆದುಕೊಳ್ಳತಕ್ಕದ್ದು;

(ಬಿ) ಅವನು ಇತರ ಯಾವುದೇ ಭಾಷೆಯಲ್ಲಿ ಸಾಕ್ಷ್ಯವನ್ನು ಕೊಟ್ಟರೆ, ಅದನ್ನು ಕಾರ್ಯಸಾಧ್ಯವಾದರೆ, ಆ ಭಾಷೆಯಲ್ಲಿ ಬರೆದುಕೊಳ್ಳಬಹುದು ಮತ್ತು ಹಾಗೆ ಮಾಡಲು ಕಾರ್ಯಸಾಧ್ಯವಾಗದಿದ್ದರೆ, ಆ ಸಾಕ್ಷಿದಾರನ ವಿಚಾರಣೆಯು ಮುಂದುವರಿದಂತೆ ಸಾಕ್ಷ್ಯದ ಸರಿಯಾದ ಭಾಷಾಂತರವನ್ನು ನ್ಯಾಯಾಲಯದ ಭಾಷೆಯಲ್ಲಿ ಸಿದ್ಧಪಡಿಸತಕ್ಕದ್ದು, ಅದಕ್ಕೆ ಮ್ಯಾಜಿಸ್ಟ್ರೇಟನು ಅಥವಾ ಪೀಠಾಸೀನ ನ್ಯಾಯಾಧೀಶನು ಸಹಿ ಮಾಡತಕ್ಕದ್ದು ಮತ್ತು ಅದು ದಾಖಲೆಯ ಭಾಗವಾಗಿರತಕ್ಕದ್ದು;

(ಸಿ) ನ್ಯಾಯಾಲಯದ ಭಾಷೆಯಲ್ಲದ ಇತರ ಭಾಷೆಯಲ್ಲಿ (ಬಿ) ಖಂಡದ ಮೇರೆಗೆ ಸಾಕ್ಷ್ಯವನ್ನು ಬರೆದುಕೊಂಡಿದ್ದರೆ, ನ್ಯಾಯಾಲಯದ ಭಾಷೆಯಲ್ಲಿ ಅದರ ಸರಿಯಾದ ಭಾಷಾಂತರವನ್ನು ಕಾರ್ಯಸಾಧ್ಯವಿರುವಷ್ಟು ಬೇಗನೆ ಸಿದ್ಧಪಡಿಸತಕ್ಕದ್ದು, ಮ್ಯಾಜಿಸ್ಟ್ರೇಟನು ಅಥವಾ ಪೀಠಾಸೀನ ನ್ಯಾಯಾಧೀಶನು ಅದಕ್ಕೆ ಸಹಿ ಮಾಡತಕ್ಕದ್ದು ಮತ್ತು ಅದು ದಾಖಲೆಯ ಭಾಗವಾಗಿರತಕ್ಕದ್ದು:

ಪರಂತು, (ಬಿ) ಖಂಡದ ಮೇರೆಗೆ ಸಾಕ್ಷ್ಯವನ್ನು ಇಂಗ್ಲೀಷ್‌ನಲ್ಲಿ ಬರೆದುಕೊಂಡಾಗ ಮತ್ತು ನ್ಯಾಯಾಲಯದ ಭಾಷೆಯಲ್ಲಿನ ಅದರ ಭಾಷಾಂತರವನ್ನು ಯಾರೇ ಪಕ್ಷಕಾರನು ಅಪೇಕ್ಷಿಸದಿದ್ದರೆ, ನ್ಯಾಯಾಲಯವು ಅಂಥ ಭಾಷಾಂತರವನ್ನು ಬಿಟ್ಟುಬಿಡಬಹುದು.

**313. ಅಂಥ ಸಾಕ್ಷ್ಯವು ಮುಕ್ತಾಯವಾದಾಗ ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆ.-** (1) 310ನೇ ಅಥವಾ 311ನೇ ಪ್ರಕರಣದ ಮೇರೆಗೆ ತೆಗೆದುಕೊಂಡ ಪ್ರತಿಯೊಬ್ಬ ಸಾಕ್ಷಿದಾರನ ಸಾಕ್ಷ್ಯವು ಮುಕ್ತಾಯವಾದಂತೆ, ಅದನ್ನು ಅವನಿಗೆ, ಆಪಾದಿತನು ಹಾಜರಿದ್ದರೆ ಆಪಾದಿತನ ಸಮ್ಮುಖದಲ್ಲಿ ಅಥವಾ ಅವನು ನ್ಯಾಯವಾದಿಯ ಮೂಲಕ ಹಾಜರಾದರೆ ಆ ನ್ಯಾಯವಾದಿಯ ಸಮ್ಮುಖದಲ್ಲಿ ಓದಿ ಹೇಳತಕ್ಕದ್ದು ಮತ್ತು ಅವಶ್ಯಕವಾದರೆ ಸರಿಪಡಿಸಿಕೊಳ್ಳತಕ್ಕದ್ದು.

(2) ಸಾಕ್ಷಿದಾರನಿಗೆ ಸಾಕ್ಷ್ಯವನ್ನು ಓದಿ ಹೇಳಿದಾಗ ಅವನು ಅದರ ಯಾವುದೇ ಭಾಗವು ಸರಿಯಾಗಿಲ್ಲವೆಂದು ಹೇಳಿದರೆ, ಮ್ಯಾಜಿಸ್ಟ್ರೇಟನು ಅಥವಾ ಪೀಠಾಸೀನ ನ್ಯಾಯಾಧೀಶನು, ಸಾಕ್ಷ್ಯವನ್ನು ಸರಿಪಡಿಸುವ ಬದಲು, ಸಾಕ್ಷಿದಾರನು ಅದಕ್ಕೆ ಮಾಡಿದ ಆಕ್ಷೇಪಣೆಯ ವಿವರಣೆಯನ್ನು ಅದರ ಮೇಲೆ ಬರೆಯತಕ್ಕದ್ದು ಮತ್ತು ಅವಶ್ಯಕವೆಂದು ತಾನು ಭಾವಿಸುವಂಥ ಷರಾಗಳನ್ನು ಸೇರಿಸತಕ್ಕದ್ದು.

(3) ಯಾವ ಭಾಷೆಯಲ್ಲಿ ಸಾಕ್ಷ್ಯವನ್ನು ಕೊಡಲಾಯಿತೋ ಆ ಭಾಷೆಯಲ್ಲಲ್ಲದೆ ಬೇರೆ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಂಡಿದ್ದರೆ ಮತ್ತು ಸಾಕ್ಷಿದಾರನಿಗೆ ಆ ಭಾಷೆಯು ಅರ್ಥವಾಗದಿದ್ದರೆ, ಯಾವ ಭಾಷೆಯಲ್ಲಿ ಸಾಕ್ಷ್ಯವನ್ನು ಕೊಡಲಾಗಿತ್ತೋ ಆ ಭಾಷೆಯಲ್ಲಿ ಅಥವಾ ಅವನು ಅರ್ಥ ಮಾಡಿಕೊಳ್ಳುವ ಭಾಷೆಯಲ್ಲಿ ದಾಖಲಿಸಿಕೊಂಡಿರುವುದರ ಅರ್ಥವನ್ನು ವಿವರಿಸಿ ಹೇಳತಕ್ಕದ್ದು.

**314. ಆಪಾದಿತನಿಗೆ ಅಥವಾ ಅವನ ನ್ಯಾಯವಾದಿಗೆ ಸಾಕ್ಷ್ಯದ ಅರ್ಥವಿವರಣೆ.-** (1) ಯಾವುದೇ ಸಾಕ್ಷ್ಯವನ್ನು ಆಪಾದಿತನಿಗೆ ಅರ್ಥವಾಗದ ಭಾಷೆಯಲ್ಲಿ ಕೊಟ್ಟಾಗ ಮತ್ತು ಅವನು ಖುದ್ದಾಗಿ ನ್ಯಾಯಾಲಯದಲ್ಲಿ ಹಾಜರಿದ್ದಾಗ, ಅದನ್ನು ಬಹಿರಂಗ ನ್ಯಾಯಾಲಯದಲ್ಲಿ ಅವನಿಗೆ ಅರ್ಥವಾಗುವ ಭಾಷೆಯಲ್ಲಿ ವಿವರಿಸಿ ಹೇಳತಕ್ಕದ್ದು.

(2) ಅವನು ನ್ಯಾಯವಾದಿಯ ಮೂಲಕ ಹಾಜರಾದರೆ ಮತ್ತು ಸಾಕ್ಷ್ಯವನ್ನು ನ್ಯಾಯಾಲಯದ ಭಾಷೆಯಲ್ಲದ ಬೇರೊಂದು ಭಾಷೆಯಲ್ಲಿ ಕೊಟ್ಟಿದ್ದು, ಅದು ನ್ಯಾಯವಾದಿಗೆ ಅರ್ಥವಾಗದ ಭಾಷೆಯಾಗಿದ್ದರೆ ಅದನ್ನು ನ್ಯಾಯಾಲಯದ ಭಾಷೆಯಲ್ಲಿ ನ್ಯಾಯವಾದಿಗೆ ವಿವರಿಸಿ ಹೇಳತಕ್ಕದ್ದು.

(3) ದಸ್ತಾವೇಜುಗಳನ್ನು ವಿದ್ಯುಕ್ತ ರುಜುವಾತಿಗಾಗಿ ಹಾಜರುಪಡಿಸಿದಾಗ, ಅದರಲ್ಲಿ ಅವಶ್ಯಕವೆಂದು ಕಂಡುಬರುವಷ್ಟು ಭಾಗವನ್ನು ವಿವರಿಸಿ ಹೇಳುವುದು ನ್ಯಾಯಾಲಯದ ವಿವೇಚನೆಗೆ ಸೇರಿರತಕ್ಕದ್ದು.

**315. ಸಾಕ್ಷಿದಾರನ ವರ್ತನೆಗೆ ಸಂಬಂಧಿಸಿದ ವಿಷಯಗಳು.-** ಪೀಠಾಸೀನ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ಸಾಕ್ಷಿದಾರನ ಸಾಕ್ಷ್ಯವನ್ನು ದಾಖಲಿಸುವಾಗ, ಸಾಕ್ಷಿದಾರನ ವಿಚಾರಣೆಯಾಗುವಾಗ ಅವನ ವರ್ತನೆಗೆ ಸಂಬಂಧಿಸಿದಂತೆ ಮುಖ್ಯವೆಂದು ತಾನು ಭಾವಿಸುವಂಥ ವಿಷಯಗಳು ಏನಾದರೂ ಇದ್ದರೆ ಅವುಗಳನ್ನು ಸಹ ದಾಖಲಿಸತಕ್ಕದ್ದು.

**316. ಆಪಾದಿತನ ವಿಚಾರಣೆಯನ್ನು ದಾಖಲಿಸುವುದು.-** (1) ಆಪಾದಿತನನ್ನು ಯಾರೇ ಮ್ಯಾಜಿಸ್ಟ್ರೇಟನು ಅಥವಾ ಸೆಷನ್ ನ್ಯಾಯಾಲಯವು ವಿಚಾರಣೆ ಮಾಡಿದಾಗಲೆಲ್ಲಾ, ಅವನಿಗೆ ಕೇಳಿದ ಪ್ರತಿಯೊಂದು ಪ್ರಶ್ನೆ ಮತ್ತು ಅವನು ನೀಡಿದ ಪ್ರತಿಯೊಂದು ಉತ್ತರವನ್ನು ಒಳಗೊಂಡಂತೆ, ಅಂಥ ಸಂಪೂರ್ಣ ವಿಚಾರಣೆಯನ್ನು ಪೀಠಾಸೀನ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ತಾನಾಗಿಯೇ ಆಗಲಿ ಅಥವಾ ಅವನ ದೈಹಿಕ ಅಥವಾ ಇತರ ಅಸಾಮರ್ಥ್ಯದ ಕಾರಣದಿಂದಾಗಿ ಅವನು ಹಾಗೆ ಮಾಡಲು ಸಾಧ್ಯವಾಗದಿದ್ದಲ್ಲಿ, ಅವನ ನಿರ್ದೇಶನ ಅಥವಾ ಅಧೀಕ್ಷಣೆಯಲ್ಲಿ ಈ ಬಗ್ಗೆ ಅವನು ನೇಮಕ ಮಾಡಿದ ನ್ಯಾಯಾಲಯದ ಯಾರೇ ಅಧಿಕಾರಿಯು ದಾಖಲಿಸತಕ್ಕದ್ದು.

(2) ದಾಖಲೆಯು ಸಾಧ್ಯವಾದಷ್ಟು ಮಟ್ಟಿಗೆ, ಆಪಾದಿತನನ್ನು ಯಾವ ಭಾಷೆಯಲ್ಲಿ ವಿಚಾರಣೆ ಮಾಡಲಾಯಿತೋ ಆ ಭಾಷೆಯಲ್ಲಿ ಇರತಕ್ಕದ್ದು ಅಥವಾ ಅದು ಸಾಧ್ಯವಿಲ್ಲದಿದ್ದರೆ ನ್ಯಾಯಾಲಯದ ಭಾಷೆಯಲ್ಲಿ ಇರತಕ್ಕದ್ದು.

(3) ದಾಖಲೆಯನ್ನು ಆಪಾದಿತನಿಗೆ ತೋರಿಸತಕ್ಕದ್ದು ಅಥವಾ ಓದಿ ಹೇಳತಕ್ಕದ್ದು ಅಥವಾ ಅದರ ಭಾಷೆಯು ಅವನಿಗೆ ಅರ್ಥವಾಗದಿದ್ದರೆ, ಅವನಿಗೆ ಅರ್ಥವಾಗುವ ಭಾಷೆಯಲ್ಲಿ ಅದರ ಅರ್ಥವನ್ನು ವಿವರಿಸತಕ್ಕದ್ದು ಮತ್ತು ಅವನಿಗೆ ತನ್ನ ಉತ್ತರಗಳನ್ನು ವಿವರಿಸಲು ಅಥವಾ ಅವುಗಳಿಗೆ ಸೇರಿಸಲು ಸ್ವಾತಂತ್ರ್ಯವಿರತಕ್ಕದ್ದು.

(4) ಆನಂತರ ಅದಕ್ಕೆ ಆಪಾದಿತನು ಮತ್ತು ಮ್ಯಾಜಿಸ್ಟ್ರೇಟನು ಅಥವಾ ಪೀಠಾಸೀನ ನ್ಯಾಯಾಧೀಶನು ಸಹಿ ಮಾಡತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಅಥವಾ ಪೀಠಾಸೀನ ನ್ಯಾಯಾಧೀಶನು ವಿಚಾರಣೆಯು ತನ್ನ ಸಮ್ಮುಖದಲ್ಲಿ ಮತ್ತು ತನಗೆ ಕೇಳುವಂತೆ ನಡೆಯಿತೆಂದು ಮತ್ತು ದಾಖಲಿಸಿಕೊಂಡಿರುವುದು ಆಪಾದಿತನ ಹೇಳಿಕೆಯ ಪೂರ್ಣವಾದ ಹಾಗೂ ಸತ್ಯವಾದ ವಿವರವನ್ನು ಒಳಗೊಂಡಿದೆ ಎಂದು ತಾನು ಸಹಿ ಮಾಡಿ ಪ್ರಮಾಣೀಕರಿಸತಕ್ಕದ್ದು:

ಪರಂತು, ಆಪಾದಿತನು ಅಭಿರಕ್ಷೆಯಲ್ಲಿರುವಲ್ಲಿ ಮತ್ತು ವಿದ್ಯುನ್ಮಾನ ಸಂವಹನದ ಮೂಲಕ ಆತನನ್ನು ವಿಚಾರಣೆ ಮಾಡಿರುವಲ್ಲಿ, ಅಂಥ ವಿಚಾರಣೆಯ ಎಪ್ಪತ್ತೆರಡು ಗಂಟೆಗಳೊಳಗೆ ಅವನ ಸಹಿಯನ್ನು ತೆಗೆದುಕೊಳ್ಳತಕ್ಕದ್ದು.

(5) ಈ ಪ್ರಕರಣದಲ್ಲಿರುವ ಯಾವುದೂ, ಸಂಕ್ಷಿಪ್ತ ಅಧಿವಿಚಾರಣೆ ನಡೆಯುತ್ತಿರುವಾಗ ಆಪಾದಿತ ವ್ಯಕ್ತಿಯ ವಿಚಾರಣೆಗೆ ಅನ್ವಯವಾಗುವುದೆಂದು ಭಾವಿಸತಕ್ಕದ್ದಲ್ಲ.

**317. ದುಭಾಷಿಯು ನೈಜವಾಗಿ ಅರ್ಥವಿವರಣೆ ಮಾಡಲು ಬದ್ಧನಾಗಿರುವುದು.-** ಯಾವುದೇ ಸಾಕ್ಷ್ಯದ ಅಥವಾ ಹೇಳಿಕೆಯ ಅರ್ಥವಿವರಣೆಗಾಗಿ ಯಾವುದೇ ಕ್ರಿಮಿನಲ್ ನ್ಯಾಯಾಲಯವು ದುಭಾಷಿಗನ ಸೇವೆಯನ್ನು ಅಗತ್ಯಪಡಿಸಿದರೆ, ಅವನು ಅಂಥ ಸಾಕ್ಷ್ಯದ ಅಥವಾ ಹೇಳಿಕೆಯ ನೈಜ ಅರ್ಥವಿವರಣೆ ಮಾಡಲು ಬದ್ಧನಾಗಿರತಕ್ಕದ್ದು.

**318. ಉಚ್ಚ ನ್ಯಾಯಾಲಯದಲ್ಲಿ ದಾಖಲಿಸುವುದು.-** ಪ್ರತಿಯೊಂದು ಉಚ್ಚ ನ್ಯಾಯಾಲಯವು ತನ್ನ ಮುಂದೆ ಬರುವ ಮೊಕದ್ದಮೆಗಳಲ್ಲಿ ಸಾಕ್ಷಿದಾರರ ಸಾಕ್ಷ್ಯವನ್ನು ಮತ್ತು ಆಪಾದಿತನ ವಿಚಾರಣೆಯನ್ನು ಬರೆದುಕೊಳ್ಳತಕ್ಕ ರೀತಿಯನ್ನು ಸಾಮಾನ್ಯ ನಿಯಮದ ಮೂಲಕ ನಿಯಮಿಸಬಹುದು ಮತ್ತು ಅಂಥ ಸಾಕ್ಷ್ಯವನ್ನು ಮತ್ತು ವಿಚಾರಣೆಯನ್ನು ಅಂಥ ನಿಯಮಕ್ಕೆ ಅನುಸಾರವಾಗಿ ಬರೆದುಕೊಳ್ಳತಕ್ಕದ್ದು.

***ಬಿ.- ಸಾಕ್ಷಿದಾರರ ವಿಚಾರಣೆಗಾಗಿ ಕಾರ್ಯಾಜ್ಞೆಗಳು***

**319. ಯಾವಾಗ ಸಾಕ್ಷಿದಾರನ ಹಾಜರಾತಿಯನ್ನು ಮನ್ನಾ ಮಾಡಬಹುದು ಮತ್ತು ಕಾರ್ಯಾಜ್ಞೆಯನ್ನು ಹೊರಡಿಸಬಹುದು.-** (1) ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯು ನಡೆಯುತ್ತಿರುವಾಗಲೆಲ್ಲಾ, ಸಾಕ್ಷಿದಾರನ ವಿಚಾರಣೆಯು ನ್ಯಾಯೋದ್ದೇಶಗಳಿಗಾಗಿ ಅವಶ್ಯಕವೆಂದು ಮತ್ತು ಅಂಥ ಸಾಕ್ಷಿದಾರನ ಹಾಜರಾತಿಯನ್ನು, ಮೊಕದ್ದಮೆಯ ಸನ್ನಿವೇಶಗಳನ್ನು ಗಮನಿಸಿದರೆ ಅಸಮಂಜಸವೆನಿಸುವಷ್ಟು ವಿಳಂಬ, ವೆಚ್ಚ ಮತ್ತು ಅನಾನುಕೂಲತೆ ಆಗದೆಯೇ ದೊರಕಿಸಿಕೊಡಲು ಸಾಧ್ಯವಾಗದೆಂದು ನ್ಯಾಯಾಲಯಕ್ಕೆ ಅಥವಾ ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಆ ನ್ಯಾಯಾಲಯವು ಅಥವಾ ಆ ಮ್ಯಾಜಿಸ್ಟ್ರೇಟನು, ಅಂಥ ಹಾಜರಾತಿಗೆ ಮನ್ನಾ ಮಾಡಬಹುದು ಮತ್ತು ಈ ಅಧ್ಯಾಯದ ಉಪಬಂಧಗಳಿಗೆ ಅನುಸಾರವಾಗಿ ಸಾಕ್ಷಿದಾರನ ವಿಚಾರಣೆಯನ್ನು ಮಾಡಲು ಕಾರ್ಯಾಜ್ಞೆಯನ್ನು ಹೊರಡಿಸಬಹುದು:

ಪರಂತು, ನ್ಯಾಯೋದ್ದೇಶಗಳಿಗಾಗಿ, ಭಾರತದ ರಾಷ್ಟ್ರಪತಿಯನ್ನು ಅಥವಾ ಉಪರಾಷ್ಟ್ರಪತಿಯನ್ನು ಅಥವಾ ರಾಜ್ಯದ ರಾಜ್ಯಪಾಲನನ್ನು ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನನ್ನು ಸಾಕ್ಷಿದಾರನಾಗಿ ವಿಚಾರಣೆ ಮಾಡುವುದು ಅವಶ್ಯಕವಾದರೆ, ಅಂಥ ಸಾಕ್ಷಿದಾರನ ವಿಚಾರಣೆಗಾಗಿ ಕಾರ್ಯಾಜ್ಞೆಯನ್ನು ಹೊರಡಿಸತಕ್ಕದ್ದು.

(2) ನ್ಯಾಯಾಲಯವು, ಪ್ರಾಸಿಕ್ಯೂಷನಿಗಾಗಿ ಪರವಾಗಿ ಸಾಕ್ಷಿದಾರನ ವಿಚಾರಣೆಗಾಗಿ ಕಾರ್ಯಾಜ್ಞೆಯನ್ನು ಹೊರಡಿಸುವಾಗ, ನ್ಯಾಯವಾದಿಯ ಫೀಜನ್ನೊಳಗೊಂಡು ಆಪಾದಿತನ ವೆಚ್ಚಗಳ ಬಗ್ಗೆ ತಾನು ಸೂಕ್ತವೆಂದು ಭಾವಿಸುವಂಥ ಮೊಬಲಗುಗಳನ್ನು ಪ್ರಾಸಿಕ್ಯೂಷನ್ ಸಂದಾಯ ಮಾಡಬೇಕೆಂದು ನಿರ್ದೇಶಿಸಬಹುದು.

**320. ಕಾರ್ಯಾಜ್ಞೆಯನ್ನು ಯಾರಿಗೆ ಹೊರಡಿಸಬಹುದು.-** (1) ಈ ಸಂಹಿತೆಯು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳೊಳಗೆ ಸಾಕ್ಷಿದಾರನು ಇದ್ದರೆ, ಯಾರ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಸಾಕ್ಷಿದಾರನು ಕಂಡುಬರುತ್ತಾನೆಯೋ ಆ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗಿನ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಕಾರ್ಯಾಜ್ಞೆಯನ್ನು ನಿರ್ದೇಶಿಸಿರತಕ್ಕದ್ದು.

(2) ಸಾಕ್ಷಿದಾರನು ಭಾರತದಲ್ಲಿದ್ದರೂ ಈ ಸಂಹಿತೆಯು ವ್ಯಾಪ್ತವಾಗದ ರಾಜ್ಯದಲ್ಲಿ ಅಥವಾ ಪ್ರದೇಶದಲ್ಲಿದ್ದರೆ, ಕೇಂದ್ರ ಸರ್ಕಾರವು, ಈ ಬಗ್ಗೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನ್ಯಾಯಾಲಯಕ್ಕೆ ಅಥವಾ ಅಧಿಕಾರಿಗೆ ಕಾರ್ಯಾಜ್ಞೆಯನ್ನು ನಿರ್ದೇಶಿಸಿರತಕ್ಕದ್ದು.

(3) ಸಾಕ್ಷಿದಾರನು ಭಾರತದ ಹೊರಗಿನ ದೇಶದಲ್ಲಿ ಅಥವಾ ಸ್ಥಳದಲ್ಲಿ ಇದ್ದರೆ ಮತ್ತು ಕ್ರಿಮಿನಲ್ ವಿಷಯಗಳಲ್ಲಿ ಸಾಕ್ಷಿದಾರರ ಸಾಕ್ಷ್ಯವನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರವು ಅಂಥ ದೇಶದ ಅಥವಾ ಸ್ಥಳದ ಸರ್ಕಾರದೊಡನೆ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದರೆ, ಆ ಕಾರ್ಯಾಜ್ಞೆಯನ್ನು ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ಹೊರಡಿಸತಕ್ಕದ್ದು, ಅಂಥ ನ್ಯಾಯಾಲಯ ಅಥವಾ ಅಧಿಕಾರಿಗೆ ನಿರ್ದೇಶಿಸತಕ್ಕದ್ದು ಮತ್ತು ರವಾನೆಗಾಗಿ ಅಂಥ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು.

**321. ಕಾರ್ಯಾಜ್ಞೆಗಳ ಪಾಲನೆ.-** ಕಾರ್ಯಾಜ್ಞೆಯನ್ನು ಸ್ವೀಕರಿಸಿದ ಮೇಲೆ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಅವನು ಈ ಬಗ್ಗೆ ನಿಯುಕ್ತಿಗೊಳಿಸಬಹುದಾದಂಥ ಮ್ಯಾಜಿಸ್ಟ್ರೇಟನು, ಸಾಕ್ಷಿದಾರನಿಗೆ ತನ್ನ ಮುಂದೆ ಹಾಜರಾಗುವಂತೆ ಸಮನ್ ನೀಡತಕ್ಕದ್ದು ಅಥವಾ ಸಾಕ್ಷಿದಾರನು ಇರುವ ಸ್ಥಳಕ್ಕೆ ಹೋಗತಕ್ಕದ್ದು ಮತ್ತು ಈ ಸಂಹಿತೆಯ ಮೇರೆಗಿನ ವಾರಂಟ್ ಮೊಕದ್ದಮೆಗಳ ಅಧಿವಿಚಾರಣೆಗಳಲ್ಲಿ ಬರೆದುಕೊಳ್ಳುವ ರೀತಿಯಂತೆಯೇ ಸಾಕ್ಷ್ಯವನ್ನು ಬರೆದುಕೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವೇ ಅಧಿಕಾರಗಳನ್ನು ಚಲಾಯಿಸಬಹುದು.

**322. ಪಕ್ಷಕಾರರು ಸಾಕ್ಷಿದಾರರ ವಿಚಾರಣೆ ಮಾಡಬಹುದು.-** (1) ಈ ಸಂಹಿತೆಯ ಮೇರೆಗಿನ ಯಾವ ವ್ಯವಹರಣೆಯಲ್ಲಿ ಕಾರ್ಯಾಜ್ಞೆಯನ್ನು ಹೊರಡಿಸಲಾಗಿದೆಯೋ ಆ ಯಾವುದೇ ವ್ಯವಹರಣೆಯ ಪಕ್ಷಕಾರರು ಅನುಕ್ರಮವಾಗಿ, ಕಾರ್ಯಾಜ್ಞೆಯನ್ನು ನಿರ್ದೇಶಿಸುವ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ವಿವಾದಿತ ಸಂಗತಿಗೆ ಸುಸಂಬದ್ಧವೆಂದು ಭಾವಿಸುವಂಥ ಯಾವುದೇ ಪ್ರಶ್ನೆಗಳನ್ನು ಲಿಖಿತದಲ್ಲಿ ಕಳುಹಿಸಬಹುದು ಮತ್ತು ಯಾರಿಗೆ ಕಾರ್ಯಾಜ್ಞೆಯನ್ನು ಹೊರಡಿಸಲಾಗಿದೆಯೋ ಅಥವಾ ಯಾರಿಗೆ ಅದರ ಪಾಲನೆಯ ಕರ್ತವ್ಯಗಳನ್ನು ವಹಿಸಿಕೊಡಲಾಗಿದೆಯೋ ಆ ಮ್ಯಾಜಿಸ್ಟ್ರೇಟನು, ನ್ಯಾಯಾಲಯವು ಅಥವಾ ಅಧಿಕಾರಿಯು ಅಂಥ ಲಿಖಿತ ಪ್ರಶ್ನೆಗಳನ್ನು ಕೇಳಿ ಸಾಕ್ಷಿದಾರನನ್ನು ವಿಚಾರಣೆ ಮಾಡುವುದು ಕಾನೂನುಬದ್ಧವಾಗಿರತಕ್ಕದ್ದು.

(2) ಅಂಥ ಯಾರೇ ಪಕ್ಷಕಾರನು, ಅಂಥ ಮ್ಯಾಜಿಸ್ಟ್ರೇಟನ ನ್ಯಾಯಾಲಯದ ಅಥವಾ ಅಧಿಕಾರಿಯ ಮುಂದೆ ನ್ಯಾಯವಾದಿಯ ಮೂಲಕ ಅಥವಾ ತಾನು ಅಭಿರಕ್ಷೆಯಲ್ಲಿ ಇಲ್ಲದಿದ್ದರೆ ಖುದ್ದಾಗಿ ಹಾಜರಾಗಬಹುದು ಮತ್ತು ಸದರಿ ಸಾಕ್ಷಿದಾರನನ್ನು ವಿಚಾರಣೆ, ಪಾಟೀ-ಸವಾಲು ಮತ್ತು ಪುನರ್-ವಿಚಾರಣೆ ಮಾಡಬಹುದು.

**323. ಕಾರ್ಯಾಜ್ಞೆಯನ್ನು ಹಿಂದಿರುಗಿಸುವುದು.-** (1) 319ನೇ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಕಾರ್ಯಾಜ್ಞೆಯನ್ನು ಯುಕ್ತವಾಗಿ ಪಾಲನೆ ಮಾಡಿದ ತರುವಾಯ, ಅದರ ಮೇರೆಗೆ ವಿಚಾರಣೆ ಮಾಡಿದ ಸಾಕ್ಷಿದಾರನ ಹೇಳಿಕೆಯೊಂದಿಗೆ ಕಾರ್ಯಾಜ್ಞೆಯನ್ನು ಹೊರಡಿಸಿದ ನ್ಯಾಯಾಲಯಕ್ಕೆ ಅಥವಾ ಮ್ಯಾಜಿಸ್ಟ್ರೇಟನಿಗೆ ಹಿಂದಿರುಗಿಸತಕ್ಕದ್ದು ಮತ್ತು ಕಾರ್ಯಾಜ್ಞೆ, ಅದರ ಮೇರೆಗಿನ ವರದಿ ಮತ್ತು ಹೇಳಿಕೆಯು ಪಕ್ಷಕಾರರ ಪರಿಶೀಲನೆಗಾಗಿ ಎಲ್ಲ ಯುಕ್ತ ಸಮಯಗಳಲ್ಲಿ ಮುಕ್ತವಾಗಿರತಕ್ಕದ್ದು ಮತ್ತು ಎಲ್ಲ ನ್ಯಾಯಸಮ್ಮತ ವಿನಾಯಿತಿಗಳಿಗೊಳಪಟ್ಟು, ಅದನ್ನು ಯಾರೇ ಪಕ್ಷಕಾರರಾದರೂ ಮೊಕದ್ದಮೆಯಲ್ಲಿ ಸಾಕ್ಷ್ಯವಾಗಿ ಓದಬಹುದು ಮತ್ತು ಅದು ದಾಖಲೆಯ ಭಾಗವಾಗಿರತಕ್ಕದ್ದು.

(2) ಹಾಗೆ ತೆಗೆದುಕೊಂಡ ಸಾಕ್ಷಿದಾರನ ಯಾವುದೇ ಹೇಳಿಕೆಯು ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 27ನೇ ಪ್ರಕರಣದ ಮೂಲಕ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ್ದರೆ, ಮತ್ತೊಂದು ನ್ಯಾಯಾಲಯದ ಮುಂದೆ ಆ ಮೊಕದ್ದಮೆಯ ತರುವಾಯದ ಯಾವುದೇ ಹಂತದಲ್ಲಿ ಅದನ್ನು ಸಾಕ್ಷ್ಯವಾಗಿ ಸ್ವೀಕರಿಸಬಹುದು.

**324. ವ್ಯವಹರಣೆಯ ಮುಂದೂಡುವಿಕೆ.-** 319ನೇ ಪ್ರಕರಣದ ಮೇರೆಗೆ ಕಾರ್ಯಾಜ್ಞೆಯನ್ನು ಹೊರಡಿಸಿದ ಪ್ರತಿಯೊಂದು ಮೊಕದ್ದಮೆಯಲ್ಲಿ ಆ ಕಾರ್ಯಾಜ್ಞೆಯ ಪಾಲನೆಗೆ ಹಾಗೂ ಅದನ್ನು ಹಿಂದಿರುಗಿಸುವುದಕ್ಕೆ ಯುಕ್ತವಾಗಿ ಸಾಕಾಗುವಷ್ಟು ನಿರ್ದಿಷ್ಟ ಸಮಯದವರೆಗೆ ವಿಚಾರಣೆಯನ್ನು, ಅಧಿವಿಚಾರಣೆಯನ್ನು ಅಥವಾ ಇತರ ವ್ಯವಹರಣೆಯನ್ನು ಮುಂದೂಡಬಹುದು.

**325. ವಿದೇಶಿ ಕಾರ್ಯಾಜ್ಞೆಗಳ ಪಾಲನೆ.-** (1) 321ನೇ ಪ್ರಕರಣದ ಉಪಬಂಧಗಳು ಮತ್ತು 322ನೇ ಹಾಗೂ 323ನೇ ಪ್ರಕರಣಗಳಲ್ಲಿ ಕಾರ್ಯಾಜ್ಞೆಯ ಪಾಲನೆ ಮತ್ತು ಹಿಂದಿರುಗಿಸುವುದಕ್ಕೆ ಸಂಬಂಧಪಡುವ ಉಪಬಂಧಗಳು, 319ನೇ ಪ್ರಕರಣದ ಮೇರೆಗೆ ಹೊರಡಿಸಿದ ಕಾರ್ಯಾಜ್ಞೆಗಳಿಗೆ ಅವು ಅನ್ವಯವಾಗುವಂತೆಯೇ, ಇದರಲ್ಲಿ ಇನ್ನು ಮುಂದೆ ಹೇಳಿರುವ ಯಾವುದೇ ನ್ಯಾಯಾಲಯಗಳು, ನ್ಯಾಯಾಧೀಶರು ಅಥವಾ ಮ್ಯಾಜಿಸ್ಟ್ರೇಟರು ಹೊರಡಿಸಿದ ಕಾರ್ಯಾಜ್ಞೆಗಳಿಗೂ ಅನ್ವಯವಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಹೇಳಿರುವ ನ್ಯಾಯಾಲಯಗಳು, ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟರು, ಯಾರೆಂದರೆ:-

(ಎ) ಈ ಸಂಹಿತೆಯ ವ್ಯಾಪ್ತಿಗೆ ಒಳಪಡದ ಭಾರತದ ಪ್ರದೇಶದೊಳಗೆ ಅಧಿಕಾರವ್ಯಾಪ್ತಿ ಹೊಂದಿರುವ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ನ್ಯಾಯಾಲಯ, ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟ್;

(ಬಿ) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ, ಭಾರತದ ಹೊರಗಿನ ಅಂಥ ಯಾವುದೇ ದೇಶದಲ್ಲಿ ಅಥವಾ ಸ್ಥಳದಲ್ಲಿ ಅಧಿಕಾರವ್ಯಾಪ್ತಿ ಹೊಂದಿರುವ ಮತ್ತು ಆ ದೇಶದಲ್ಲಿ ಅಥವಾ ಸ್ಥಳದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಕ್ರಿಮಿನಲ್ ವಿಷಯಗಳಿಗೆ ಸಂಬಂಧಿಸಿದಂತೆ ಸಾಕ್ಷಿದಾರರ ವಿಚಾರಣೆಗಾಗಿ ಕಾರ್ಯಾಜ್ಞೆಗಳನ್ನು ಹೊರಡಿಸಲು ಅಧಿಕಾರ ಹೊಂದಿರುವ ಯಾವುದೇ ನ್ಯಾಯಾಲಯ, ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟ್.

**326. ವೈದ್ಯಕೀಯ ಸಾಕ್ಷಿದಾರನ ಹೇಳಿಕೆ.-** (1) ಆಪಾದಿತನ ಸಮ್ಮುಖದಲ್ಲಿ ಮ್ಯಾಜಿಸ್ಟ್ರೇಟನು ತೆಗೆದುಕೊಂಡ ಮತ್ತು ದೃಢೀಕರಿಸಿದ ಅಥವಾ ಈ ಅಧ್ಯಾಯದ ಮೇರೆಗೆ ಕಾರ್ಯಾಜ್ಞೆಯ ಮೇಲೆ ತೆಗೆದುಕೊಂಡ ಸಿವಿಲ್ ಸರ್ಜನ್‌ನ ಅಥವಾ ಇತರ ವೈದ್ಯಕೀಯ ಸಾಕ್ಷಿದಾರನ ಹೇಳಿಕೆಯನ್ನು, ಹೇಳಿಕೆದಾರನನ್ನು ಸಾಕ್ಷಿದಾರನಾಗಿ ಕರೆಯದಿದ್ದರೂ ಸಹ, ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆಯಲ್ಲಿ, ಅಧಿವಿಚಾರಣೆಯಲ್ಲಿ ಅಥವಾ ಇತರ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ನೀಡಬಹುದು.

(2) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಪ್ರಾಸಿಕ್ಯೂಷನ್ ಅಥವಾ ಆಪಾದಿತನ ಅರ್ಜಿಯ ಮೇಲೆ, ಯಾರೇ ಅಂಥ ಹೇಳಿಕೆದಾರನ ಹೇಳಿಕೆಯ ವಿಷಯ ವಸ್ತುವಿಗೆ ಸಂಬಂಧಿಸಿದಂತೆ, ಅಂಥ ಹೇಳಿಕೆದಾರನನ್ನು ಸಮನ್ ಮಾಡಿ, ವಿಚಾರಣೆ ಮಾಡತಕ್ಕದ್ದು.

**327. ಮ್ಯಾಜಿಸ್ಟ್ರೇಟನ ಗುರುತಿನ ವರದಿ.-** (1) ಯಾರೇ ವ್ಯಕ್ತಿಗೆ ಅಥವಾ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನ ಸಹಿ ಇರುವ ಗುರುತಿನ ವರದಿ ಎಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಈ ಸಂಹಿತೆಯ ಮೇರೆಗಿನ ವಿಚಾರಣೆಯಲ್ಲಿ, ಅಧಿವಿಚಾರಣೆಯಲ್ಲಿ ಅಥವಾ ಇತರ ಯಾವುದೇ ವ್ಯವಹರಣೆಯಲ್ಲಿ, ಆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನನ್ನು ಸಾಕ್ಷಿದಾರನೆಂದು ಕರೆಯಲಾಗದಿದ್ದರೂ, ಅದನ್ನು ಸಾಕ್ಷ್ಯವಾಗಿ ಬಳಸಬಹುದು:

ಪರಂತು, ಅಂಥ ವರದಿಯು ಯಾವ ಶಂಕಿತ ವ್ಯಕ್ತಿಯ ಅಥವಾ ಸಾಕ್ಷಿದಾರರ ಹೇಳಿಕೆಗೆ ಸಂದರ್ಭಾನುಸಾರ ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 19ನೇ ಪ್ರಕರಣ, 26ನೇ ಪ್ರಕರಣ, 27ನೇ ಪ್ರಕರಣ, 158ನೇ ಪ್ರಕರಣ ಅಥವಾ 160ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವುದೋ ಅಂಥ ಹೇಳಿಕೆಯನ್ನು ಒಳಗೊಂಡಿದ್ದರೆ, ಅಂಥ ಹೇಳಿಕೆಯನ್ನು ಆ ಪ್ರಕರಣಗಳಿಗೆ ಅನುಸಾರವಾಗಿಯಲ್ಲದೆ ಈ ಉಪಪ್ರಕರಣದ ಮೇರೆಗೆ ಬಳಸತಕ್ಕದ್ದಲ್ಲ.

(2) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಪ್ರಾಸಿಕ್ಯೂಷನ್ ಅಥವಾ ಆಪಾದಿತನ ಅರ್ಜಿಯ ಮೇಲೆ, ಸದರಿ ವರದಿಯ ವಿಷಯ ವಸ್ತುವಿಗೆ ಸಂಬಂಧಿಸಿದಂತೆ, ಅಂಥ ಮ್ಯಾಜಿಸ್ಟ್ರೇಟನನ್ನು ಸಮನ್ ಮಾಡಿ, ವಿಚಾರಣೆ ಮಾಡತಕ್ಕದ್ದು.

**328. ಟಂಕಸಾಲೆಯ ಅಧಿಕಾರಿಗಳ ಸಾಕ್ಷ್ಯ.-** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತೆ, ಸಂದರ್ಭಾನುಸಾರ, ಯಾವುದೇ ಟಂಕಸಾಲೆಯ ಅಥವಾ ನೋಟು ಮುದ್ರಣದ ಯಾವುದೇ ಮುದ್ರಣಾಲಯದ ಅಥವಾ ಯಾವುದೇ ಭದ್ರತಾ ಮುದ್ರಣಾಲಯದ (ಸ್ಟಾಂಪ್ ಮತ್ತು ಲೇಖನ ಸಾಮಗ್ರಿ ನಿಯಂತ್ರಣ ಅಧಿಕಾರಿಯೂ ಒಳಗೊಂಡಂತೆ) ಅಥವಾ ವಿಧಿವಿಜ್ಞಾನ ಇಲಾಖೆಯ ಅಥವಾ ವಿಧಿವಿಜ್ಞಾನ ಪ್ರಯೋಗಾಲಯ ವಿಭಾಗದ ಯಾರೇ ಪತ್ರಾಂಕಿತ ಅಧಿಕಾರಿಯ ಅಥವಾ ಪ್ರಶ್ನಿತ ದಸ್ತಾವೇಜುಗಳ ಯಾರೇ ಸರ್ಕಾರಿ ಪರೀಕ್ಷಕನ ಅಥವಾ ಪ್ರಶ್ನಿತ ದಸ್ತಾವೇಜಿನ ಯಾರೇ ರಾಜ್ಯ ಪರೀಕ್ಷಕನ ಸಹಿ ಇರುವ, ಈ ಸಂಹಿತೆಯ ಮೇರೆಗಿನ ಯಾವುದೇ ವ್ಯವಹರಣೆಯು, ನಡೆಯುತ್ತಿರುವಾಗ ಪರೀಕ್ಷೆ ಮತ್ತು ವರದಿಗಾಗಿ ಆ ಅಧಿಕಾರಿಗೆ ಯುಕ್ತವಾಗಿ ಒಪ್ಪಿಸಿದ ಯಾವುದೇ ವಿಷಯದ ಅಥವಾ ವಸ್ತುವಿನ ಬಗ್ಗೆ ವರದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು, ಆ ಅಧಿಕಾರಿಯನ್ನು ಸಾಕ್ಷಿದಾರನನ್ನಾಗಿ ಕರೆಯದಿದ್ದರೂ, ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆಯಲ್ಲಿ, ಅಧಿವಿಚಾರಣೆಯಲ್ಲಿ ಅಥವಾ ಇತರ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಬಳಸಿಕೊಳ್ಳಬಹುದು.

(2) ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಅವನ ವರದಿಯ ವಿಷಯ ವಸ್ತುವಿಗೆ ಸಂಬಂಧಿಸಿದಂತೆ, ಅಂಥ ಯಾರೇ ಅಧಿಕಾರಿಯನ್ನು ಸಮನ್ ಮಾಡಿ, ವಿಚಾರಣೆ ಮಾಡತಕ್ಕದ್ದು:

ಪರಂತು, ವರದಿಯು ಯಾವ ದಾಖಲೆಗಳ ಮೇಲೆ ಆಧಾರಿತವಾಗಿರುವುದೋ ಆ ಯಾವುದೇ ದಾಖಲೆಗಳನ್ನು ಹಾಜರುಪಡಿಸಲು ಅಂಥ ಯಾರೇ ಅಧಿಕಾರಿಯನ್ನು ಸಮನು ಮಾಡತಕ್ಕದ್ದಲ್ಲ.

(3) ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 129ನೇ ಮತ್ತು 130ನೇ ಪ್ರಕರಣಗಳ ಉಪಬಂಧಗಳಿಗೆ ಬಾಧಕವಾಗದಂತೆ, ಅಂಥ ಯಾರೇ ಅಧಿಕಾರಿಗೆ, ಯಾವುದೇ ಟಂಕಸಾಲೆಯ ಅಥವಾ ನೋಟುಗಳ ಮುದ್ರಣದ ಯಾವುದೇ ಮುದ್ರಣಾಲಯದ ಅಥವಾ ಯಾವುದೇ ಭದ್ರತಾ ಮುದ್ರಣಾಲಯದ (ಸೆಕ್ಯೂರಿಟಿ ಪ್ರಿಂಟಿಂಗ್ ಪ್ರೆಸ್) ಅಥವಾ ಯಾವುದೇ ವಿಧಿವಿಜ್ಞಾನ ಇಲಾಖೆಯ ಪ್ರಧಾನ ವ್ಯವಸ್ಥಾಪಕನ ಅಥವಾ ಪ್ರಭಾರದಲ್ಲಿರುವ ಯಾರೇ ಅಧಿಕಾರಿಯ ಅಥವಾ ಯಾವುದೇ ವಿಧಿವಿಜ್ಞಾನ ಪ್ರಯೋಗಾಲಯದ ಪ್ರಭಾರವನ್ನು ಹೊಂದಿರುವ ಯಾರೇ ಅಧಿಕಾರಿಯ ಅಥವಾ ಪ್ರಶ್ನಿತ ದಸ್ತಾವೇಜುಗಳ ಸಂಸ್ಥೆಯ ಸರ್ಕಾರಿ ಪರೀಕ್ಷಕನ ಅಥವಾ ಪ್ರಶ್ನಿತ ದಸ್ತಾವೇಜುಗಳ ಸಂಸ್ಥೆಯ ರಾಜ್ಯ ಪರೀಕ್ಷಕನ ಅನುಮತಿ ಇದ್ದ ಹೊರತು,-

(ಎ) ವರದಿ ಆಧಾರಿತವಾಗಿರುವ ಯಾವುದೇ ಅಪ್ರಕಟಿತ ಸರ್ಕಾರಿ ದಾಖಲೆಗಳಿಂದ ಪಡೆದ ಯಾವುದೇ ಸಾಕ್ಷ್ಯವನ್ನು ನೀಡಲು ಅನುಮತಿ ನೀಡತಕ್ಕದ್ದಲ್ಲ; ಅಥವಾ

(ಬಿ) ಆ ವಿಷಯದ ಅಥವಾ ವಸ್ತುವಿನ ಪರೀಕ್ಷೆ ಆಗುತ್ತಿರುವಾಗ ಆತನು ಮಾಡಿದ ಯಾವುದೇ ಪ್ರಯೋಗದ ಸ್ವರೂಪ ಅಥವಾ ನಿರ್ದಿಷ್ಟ ವಿವರಗಳನ್ನು ಬಹಿರಂಗಪಡಿಸಲು ಅನುಮತಿ ನೀಡತಕ್ಕದ್ದಲ್ಲ.

**329. ಕೆಲವು ಸರ್ಕಾರಿ ವೈಜ್ಞಾನಿಕ ತಜ್ಞರ ವರದಿಗಳು.-** (1) ಈ ಪ್ರಕರಣವು ಅನ್ವಯವಾಗುವ ಸರ್ಕಾರಿ ವೈಜ್ಞಾನಿಕ ತಜ್ಞನು ಸಹಿ ಮಾಡಿದ, ಈ ಸಂಹಿತೆಯ ಮೇರೆಗೆ ಯಾವುದೇ ವ್ಯವಹರಣೆ ನಡೆಯುತ್ತಿರುವಾಗ ಪರೀಕ್ಷೆಗಾಗಿ ಅಥವಾ ವಿಶ್ಲೇಷಣೆಗಾಗಿ ಮತ್ತು ವರದಿಗಾಗಿ ಆತನಿಗೆ ಯುಕ್ತವಾಗಿ ಒಪ್ಪಿಸಲಾದ ಯಾವುದೇ ವಿಷಯದ ಅಥವಾ ವಸ್ತುವಿನ ಬಗ್ಗೆ ವರದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು, ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಬಳಸಬಹುದು.

(2) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಅವನ ವರದಿಯ ವಿಷಯ ವಸ್ತುವಿಗೆ ಸಂಬಂಧಿಸಿದಂತೆ, ಅಂಥ ಯಾರೇ ತಜ್ಞನನ್ನು ಸಮನ್ ಮಾಡಿ, ವಿಚಾರಣೆ ಮಾಡತಕ್ಕದ್ದು.

(3) ನ್ಯಾಯಾಲಯವು ಅಂಥ ಯಾರೇ ತಜ್ಞನನ್ನು ಸಮನ್ ಮಾಡಿದ್ದಲ್ಲಿ, ಅವನು ಖುದ್ದಾಗಿ ಹಾಜರಾಗಲು ಅಸಮರ್ಥನಾಗಿದ್ದರೆ, ಅವನೇ ಖುದ್ದಾಗಿ ಹಾಜರಾಗಬೇಕೆಂದು ನ್ಯಾಯಾಲಯವು ಸ್ಪಷ್ಟವಾಗಿ ನಿರ್ದೇಶಿಸಿದ್ದ ಹೊರತು, ಅವನು ತನ್ನೊಂದಿಗೆ ಕೆಲಸ ಮಾಡುತ್ತಿರುವ ಯಾರೇ ಜವಾಬ್ದಾರಿಯುತನಾದ ಅಧಿಕಾರಿಯನ್ನು, ಅಂಥ ಅಧಿಕಾರಿಯು ಆ ಮೊಕದ್ದಮೆಯ ಸಂಗತಿಗಳನ್ನು ಬಲ್ಲವನಾಗಿದ್ದರೆ ಮತ್ತು ತನ್ನ ಪರವಾಗಿ ನ್ಯಾಯಾಲಯದಲ್ಲಿ ಸಮರ್ಥವಾಗಿ ಹೇಳಿಕೆ ನೀಡಬಲ್ಲವನಾದರೆ, ನ್ಯಾಯಾಲಯದಲ್ಲಿ ಹಾಜರಾಗಲು ಆ ಅಧಿಕಾರಿಯನ್ನು ನಿಯೋಜಿಸಬಹುದು.

(4) ಈ ಪ್ರಕರಣವು ಈ ಕೆಳಕಂಡ ಸರ್ಕಾರಿ ವೈಜ್ಞಾನಿಕ ತಜ್ಞರಿಗೆ ಅನ್ವಯವಾಗುತ್ತದೆ, ಎಂದರೆ:-

(ಎ) ಸರ್ಕಾರದ ಯಾರೇ ರಾಸಾಯನಿಕ ಪರೀಕ್ಷಕ ಅಥವಾ ಸಹಾಯಕ ರಾಸಾಯನಿಕ ಪರೀಕ್ಷಕ;

(ಬಿ) ಸ್ಫೋಟಕಗಳ ಮುಖ್ಯ ನಿಯಂತ್ರಕ;

(ಸಿ) ಬೆರಳೊತ್ತು ತಜ್ಞ ಸಂಸ್ಥೆ (ಫಿಂಗರ್ ಪ್ರಿಂಟ್ ಬ್ಯೂರೋ)ಯ ನಿರ್ದೇಶಕ;

(ಡಿ) ನಿರ್ದೇಶಕ, ಹ್ಯಾಫ್‌ಕಿನ್ ಸಂಸ್ಥೆ, ಮುಂಬಯಿ;

(ಇ) ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯ ಅಥವಾ ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯ ನಿರ್ದೇಶಕ, ಉಪನಿರ್ದೇಶಕ ಅಥವಾ ಸಹಾಯಕ ನಿರ್ದೇಶಕ;

(ಎಫ್) ಸರ್ಕಾರದ ರಕ್ತಸಾರ ವಿಜ್ಞಾನಿ (ಸಿರೋಲಜಿಸ್ಟ್);

(ಜಿ) ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಅಥವಾ ಪ್ರಮಾಣೀಕರಿಸಿದ ಯಾರೇ ಇತರ ವೈಜ್ಞಾನಿಕ ತಜ್ಞ.

**330. ಕೆಲವು ದಸ್ತಾವೇಜುಗಳ ವಿಧ್ಯುಕ್ತ ರುಜುವಾತು ಅನಾವಶ್ಯಕ.-** (1) ಪ್ರಾಸಿಕ್ಯೂಷನ್ ಅಥವಾ ಆಪಾದಿತನು ಯಾವುದೇ ನ್ಯಾಯಾಲಯದ ಮುಂದೆ ಯಾವುದೇ ದಸ್ತಾವೇಜನ್ನು ದಾಖಲು ಮಾಡಿದ್ದರೆ, ಅಂಥ ಪ್ರತಿಯೊಂದು ದಸ್ತಾವೇಜಿನ ವಿವರಗಳನ್ನು ಒಂದು ಪಟ್ಟಿಯಲ್ಲಿ ಸೇರಿಸತಕ್ಕದ್ದು ಮತ್ತು ಪ್ರಾಸಿಕ್ಯೂಷನನ್ನು ಅಥವಾ ಆಪಾದಿತನನ್ನು ಅಥವಾ ಪ್ರಾಸಿಕ್ಯೂಷನ್ನಿನ ಅಥವಾ ಆಪಾದಿತನ ನ್ಯಾಯವಾದಿಯು ಯಾರಾದರೂ ಇದ್ದರೆ, ಅವನನ್ನು ಅಂಥ ಪ್ರತಿಯೊಂದು ದಸ್ತಾವೇಜಿನ ನೈಜತೆಯನ್ನು ಒಪ್ಪಿಕೊಳ್ಳಲು ಅಥವಾ ನಿರಾಕರಿಸಲು ಅಂಥ ದಸ್ತಾವೇಜುಗಳನ್ನು ಒದಗಿಸಿದ ಕೂಡಲೇ ಕರೆಯತಕ್ಕದ್ದು ಮತ್ತು ಹಾಗೆ ಒದಗಿಸಿದ ತರುವಾಯ, ಮೂವತ್ತು ದಿನಗಳಿಗಿಂತ ತಡವಾದ ಯಾವುದೇ ಸಂದರ್ಭದಲ್ಲಿ ಕರೆಯತಕ್ಕದ್ದಲ್ಲ:

ಪರಂತು, ನ್ಯಾಯಾಲಯವು, ತನ್ನ ವಿವೇಚನಾನುಸಾರ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಕಾಲಪರಿಮಿತಿಯನ್ನು ಸಡಿಲಗೊಳಿಸಬಹುದು:

ಮತ್ತು ಪರಂತು, ಯಾರೇ ತಜ್ಞನನ್ನು, ಅಂಥ ತಜ್ಞನ ವರದಿಯನ್ನು ಅಧಿವಿಚಾರಣೆಗಾಗಿ ಯಾರೇ ಪಕ್ಷಕಾರರು ವಿವಾದಿಸಿದ ಹೊರತು ನ್ಯಾಯಾಲಯದ ಮುಂದೆ ಅವನನ್ನು ಹಾಜರುಪಡಿಸಲು ಕರೆಯತಕ್ಕದ್ದಲ್ಲ.

(2) ದಸ್ತಾವೇಜುಗಳ ಪಟ್ಟಿಯು ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು.

(3) ಯಾವುದೇ ದಸ್ತಾವೇಜಿನ ನೈಜತೆಯ ಬಗ್ಗೆ ವಿವಾದ ಇಲ್ಲದಿರುವಾಗ, ಯಾರಿಂದ ಅದು ಸಹಿಯಾಗಿದೆಯೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯ ಸಹಿಯ ರುಜುವಾತು ಕೇಳದೆ ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ ಅಂಥ ದಸ್ತಾವೇಜನ್ನು ಸಾಕ್ಷ್ಯವಾಗಿ ಓದಬಹುದು:

ಪರಂತು, ನ್ಯಾಯಾಲಯವು ತನ್ನ ವಿವೇಚನಾನುಸಾರ, ಅಂಥ ಸಹಿಯನ್ನು ರುಜುವಾತುಪಡಿಸಬೇಕೆಂದು ಅಗತ್ಯಪಡಿಸಬಹುದು.

**331. ಲೋಕ ನೌಕರನ ವರ್ತನೆಯ ರುಜುವಾತಿನ ಬಗ್ಗೆ ಅಫಿದಾವಿತ್.-** ಈ ಸಂಹಿತೆಯ ಮೇರೆಗೆ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯು ನಡೆಯುತ್ತಿರುವಾಗ ಯಾವುದೇ ನ್ಯಾಯಾಲಯಕ್ಕೆ ಯಾವುದೇ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಅದರಲ್ಲಿ ಯಾರೇ ಲೋಕ ನೌಕರನ ಬಗ್ಗೆ ಆಪಾದನೆಗಳನ್ನು ಮಾಡಿದ್ದರೆ, ಆಪಾದಿಸಿರುವ ಸಂಗತಿಗಳ ಬಗ್ಗೆ ಅರ್ಜಿದಾರನು ಅಫಿದಾವಿತ್ತಿನ ಮೂಲಕ ಸಾಕ್ಷ್ಯವನ್ನು ನೀಡಬಹುದು ಮತ್ತು ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಅಂಥ ಸಂಗತಿಗಳಿಗೆ ಸಂಬಂಧಿಸಿದ ಸಾಕ್ಷ್ಯವನ್ನು ಹಾಗೆ ಕೊಡಬೇಕೆಂದು ಆದೇಶಿಸಬಹುದು.

**332. ಅಫಿದಾವಿತ್ತಿನಲ್ಲಿ ವಿದ್ಯುಕ್ತ ಸ್ವರೂಪದ ಸಾಕ್ಷ್ಯ.-** (1) ಯಾರೇ ವ್ಯಕ್ತಿಯ ಸಾಕ್ಷ್ಯವು ವಿದ್ಯುಕ್ತ ಸ್ವರೂಪದ್ದಾಗಿದ್ದರೆ ಅದನ್ನು ಅಫಿದಾವಿತ್ತಿನ ಮೂಲಕ ನೀಡಬಹುದು ಮತ್ತು ಎಲ್ಲ ನ್ಯಾಯಸಮ್ಮತ ವಿನಾಯಿತಿಗಳಿಗೊಳಪಟ್ಟು, ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ ಅದನ್ನು ಸಾಕ್ಷ್ಯವಾಗಿ ಓದಬಹುದು.

(2) ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಪ್ರಾಸಿಕ್ಯೂಷನ್ ಅಥವಾ ಆಪಾದಿತನ ಅರ್ಜಿಯ ಮೇಲೆ ಯಾರೇ ವ್ಯಕ್ತಿಯು ಸಲ್ಲಿಸಿದ ಅಫಿದಾವಿತ್ತಿನಲ್ಲಿರುವ ಸಂಗತಿಗಳಿಗೆ ಸಂಬಂಧಿಸಿದಂತೆ, ಅಂಥ ವ್ಯಕ್ತಿಯನ್ನು ಸಮನ್ ಮಾಡಿ, ವಿಚಾರಣೆ ಮಾಡತಕ್ಕದ್ದು.

**333. ಯಾವ ಪ್ರಾಧಿಕಾರಿಗಳ ಸಮ್ಮುಖದಲ್ಲಿ ಅಫಿದಾವಿತ್ತುಗಳ ಬಗ್ಗೆ ಪ್ರಮಾಣ ಮಾಡಿಸಬಹುದು.-** (1) ಈ ಸಂಹಿತೆಯ ಮೇರೆಗೆ ಯಾವುದೇ ನ್ಯಾಯಾಲಯದಲ್ಲಿ ಬಳಸುವ ಅಫಿದಾವಿತ್ತುಗಳನ್ನು,-

(ಎ) ಯಾರೇ ನ್ಯಾಯಾಧೀಶನ ಅಥವಾ ನ್ಯಾಯಿಕ ಅಥವಾ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನ; ಅಥವಾ

(ಬಿ) ಉಚ್ಚ ನ್ಯಾಯಾಲಯದಿಂದ ಅಥವಾ ಸೆಷನ್ ನ್ಯಾಯಾಲಯದಿಂದ ನೇಮಕಗೊಂಡ ಯಾರೇ ಪ್ರಮಾಣವಚನ ಕಮೀಷನರ್ (ಕಮೀಷನರ್ ಆಫ್ ಓತ್ಸ್); ಅಥವಾ

(ಸಿ) ನೋಟರಿಗಳ ಅಧಿನಿಯಮ, 1952 (1952ರ 53)ರ ಮೇರೆಗೆ ನೇಮಕಗೊಂಡ ಯಾರೇ ನೋಟರಿಯ

- ಸಮ್ಮುಖದಲ್ಲಿ ಪ್ರಮಾಣ ಮಾಡಿಸಬಹುದು ಅಥವಾ ದೃಢೀಕರಿಸಬಹುದು.

(2) ಹೇಳಿಕೆದಾರನು, ತನ್ನ ಸ್ವಂತ ತಿಳುವಳಿಕೆಯಿಂದ ರುಜುವಾತು ಮಾಡಬಲ್ಲಂಥ ಸಂಗತಿಗಳಿಗೆ ಮತ್ತು ತಾನು ನೈಜವೆಂದು ನಂಬಲು ಸೂಕ್ತವಾದ ಕಾರಣವಿರುವಂಥ ಸಂಗತಿಗಳಿಗೆ ಅಫಿದಾವಿತ್ತುಗಳು ಸೀಮಿತವಾಗಿರತಕ್ಕದ್ದು ಮತ್ತು

ಅವುಗಳನ್ನು ಪ್ರತ್ಯೇಕವಾಗಿ ತಿಳಿಸತಕ್ಕದ್ದು ಮತ್ತು ಪ್ರತ್ಯೇಕವಾಗಿ ತಿಳಿಸಬೇಕಾದವುಗಳ ಬಗ್ಗೆ ಹೇಳಿಕೆದಾರನು ಅಂಥ ನಂಬಿಕೆಗೆ ಇರುವ ಕಾರಣಗಳನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು.

(3) ಅಫಿದಾವಿತ್ತಿನಲ್ಲಿರುವ ಯಾವುದೇ ಅವಹೇಳನೀಯ ಮತ್ತು ಅಸಂಬದ್ಧ ವಿಷಯವನ್ನು ಹೊಡೆದು ಹಾಕಲು ಅಥವಾ ತಿದ್ದುಪಡಿ ಮಾಡಲು ನ್ಯಾಯಾಲಯವು ಆದೇಶ ಮಾಡಬಹುದು.

**334. ಈ ಹಿಂದಿನ ಅಪರಾಧ ನಿರ್ಣಯದ ಅಥವಾ ಖುಲಾಸೆಯ ರುಜುವಾತು.-** ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ, ಈ ಹಿಂದೆ ಆಗಿರುವ ಅಪರಾಧ ನಿರ್ಣಯವನ್ನು ಅಥವಾ ಖುಲಾಸೆಯನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಉಪಬಂಧಿಸಿರುವ ಇತರ ಯಾವುದೇ ವಿಧಾನದ ಜೊತೆಗೆ,-

(ಎ) ಯಾವ ನ್ಯಾಯಾಲಯದಲ್ಲಿ ಅಂಥ ಅಪರಾಧ ನಿರ್ಣಯ ಅಥವಾ ಖುಲಾಸೆ ಎಂದು ಆಯಿತೋ ಆ ನ್ಯಾಯಾಲಯದ ದಾಖಲೆಗಳ ಅಭಿರಕ್ಷೆಯನ್ನು ಹೊಂದಿರುವ ಅಧಿಕಾರಿಯು ಆ ಶಿಕ್ಷೆಯ ಅಥವಾ ಆದೇಶದ ಪ್ರತಿಯೆಂದು ಪ್ರಮಾಣೀಕರಿಸಿ ಸಹಿ ಹಾಕಿದ ಉದ್ಧೃತ ಭಾಗವನ್ನು ಒದಗಿಸುವ ಮೂಲಕ; ಅಥವಾ

(ಬಿ) ಅಪರಾಧ ನಿರ್ಣಯದ ಸಂದರ್ಭದಲ್ಲಿ, ಯಾವ ಜೈಲಿನಲ್ಲಿ ದಂಡನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಅನುಭವಿಸಲಾಯಿತೋ, ಆ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಸಹಿ ಹಾಕಿದ ಪ್ರಮಾಣಪತ್ರದ ಮೂಲಕ ಅಥವಾ ಯಾವ ವಾರಂಟಿನ ಮೇರೆಗೆ ದಂಡನೆಯನ್ನು ಅನುಭವಿಸಲಾಯಿತೋ ಆ ವಾರಂಟನ್ನು ಹಾಜರುಪಡಿಸುವುದರ ಮೂಲಕ

- ಅಂಥ ಪ್ರತಿಯೊಂದು ಮೊಕದ್ದಮೆಯಲ್ಲಿ, ಹಾಗೆ ಅಪರಾಧ ನಿರ್ಣೀತನಾದ ಅಥವಾ ಖುಲಾಸೆಗೊಂಡ ವ್ಯಕ್ತಿಯೇ ಆಪಾದಿತ ವ್ಯಕ್ತಿಯೆಂಬ ಬಗೆಗಿನ ಸಾಕ್ಷ್ಯದೊಂದಿಗೆ ರುಜುವಾತುಪಡಿಸಬಹುದು.

**335. ಆಪಾದಿತನ ಗೈರುಹಾಜರಿಯಲ್ಲಿ ಸಾಕ್ಷ್ಯದ ದಾಖಲೆ.-** (1) ಆಪಾದಿತ ವ್ಯಕ್ತಿಯು ತಲೆಮರೆಸಿಕೊಂಡಿದ್ದಾನೆಂದು ಮತ್ತು ಅವನನ್ನು ಕೂಡಲೇ ದಸ್ತಗಿರಿ ಮಾಡುವ ಸಂಭವ ಇಲ್ಲವೆಂದು ರುಜುವಾತಾದಾಗ, ದೂರು ನೀಡಲಾದ ಅಪರಾಧಕ್ಕಾಗಿ ಅಂಥ ವ್ಯಕ್ತಿಯನ್ನು ಅಧಿವಿಚಾರಣೆ ಮಾಡಲು ಅಥವಾ ಅಧಿವಿಚಾರಣೆಗೆ ಒಪ್ಪಿಸಲು ಸಕ್ಷಮವಾದ ನ್ಯಾಯಾಲಯವು, ಅವನ ಗೈರುಹಾಜರಿಯಲ್ಲಿ, ಪ್ರಾಸಿಕ್ಯೂಷನ್ನಿನ ಪರವಾಗಿ ಹಾಜರುಪಡಿಸಲಾದ ಸಾಕ್ಷಿದಾರರನ್ನು (ಯಾರಾದರೂ ಇದ್ದರೆ) ವಿಚಾರಣೆ ಮಾಡಬಹುದು ಮತ್ತು ಅವರ ಹೇಳಿಕೆಗಳನ್ನು ದಾಖಲಿಸಬಹುದು ಮತ್ತು ಹೇಳಿಕೆದಾರನು ಮರಣ ಹೊಂದಿದ್ದರೆ ಅಥವಾ ಸಾಕ್ಷ್ಯ ನೀಡಲು ಅಸಮರ್ಥನಾಗಿದ್ದರೆ ಅಥವಾ ಅವನು ಸಿಗದಿದ್ದರೆ ಅಥವಾ ಮೊಕದ್ದಮೆಯ ಸನ್ನಿವೇಶಗಳಲ್ಲಿ ಅನುಚಿತ ವಿಳಂಬ, ವೆಚ್ಚ ಅಥವಾ ಅನಾನುಕೂಲತೆ ಇಲ್ಲದೆ ಅವನನ್ನು ಹಾಜರುಪಡಿಸಲು ಸಾಧ್ಯವಿಲ್ಲದಿದ್ದರೆ, ಅಂಥ ಯಾವುದೇ ಹೇಳಿಕೆಯನ್ನು ಅಂಥ ವ್ಯಕ್ತಿಯು ದಸ್ತಗಿರಿಯಾದ ಆನಂತರ ಅವನ ಮೇಲೆ ಆರೋಪಿಸಲಾದ ಅಪರಾಧದ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ಅವನ ವಿರುದ್ಧ ಸಾಕ್ಷ್ಯವಾಗಿ ನೀಡಬಹುದು.

(2) ಯಾರೇ ಅಪರಿಚಿತ ವ್ಯಕ್ತಿ ಅಥವಾ ವ್ಯಕ್ತಿಗಳು, ಮರಣದಂಡನೆ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಎಸಗಿದ್ದಾರೆಂದು ಕಂಡುಬಂದರೆ, ಉಚ್ಚ ನ್ಯಾಯಾಲಯವು ಅಥವಾ ಸೆಷನ್ಸ್ ನ್ಯಾಯಾಧೀಶನು, ಯಾರೇ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು, ಅದರ ವಿಚಾರಣೆ ನಡೆಸತಕ್ಕದ್ದೆಂದು ಮತ್ತು ಅಪರಾಧಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ನೀಡಬಲ್ಲ ಯಾರೇ ಸಾಕ್ಷಿದಾರರನ್ನು ವಿಚಾರಣೆ ಮಾಡತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಹೇಳಿಕೆದಾರನು ಮರಣ ಹೊಂದಿದ್ದರೆ ಅಥವಾ ಸಾಕ್ಷ್ಯ ನೀಡಲು ಅಸಮರ್ಥನಾಗಿದ್ದರೆ ಅಥವಾ ಭಾರತದ ಪರಿಮಿತಿಗಳಾಚೆ

ಇದ್ದರೆ, ಹಾಗೆ ತೆಗೆದುಕೊಳ್ಳಲಾದ ಯಾವುದೇ ಹೇಳಿಕೆಗಳನ್ನು, ತರುವಾಯದ ಅಪರಾಧಕ್ಕಾಗಿ, ಆಪಾದಿತನಾದ ಯಾರೇ ವ್ಯಕ್ತಿಯ ವಿರುದ್ಧ ಸಾಕ್ಷ್ಯವಾಗಿ ನೀಡಬಹುದು.

**336. ಕೆಲವು ಮೊಕದ್ದಮೆಗಳಲ್ಲಿ ಲೋಕ ನೌಕರರು, ತಜ್ಞರು, ಪೊಲೀಸ್ ಅಧಿಕಾರಿಗಳ ಸಾಕ್ಷ್ಯ.-** ಲೋಕ ನೌಕರ, ವೈಜ್ಞಾನಿಕ ತಜ್ಞ ಅಥವಾ ವೈದ್ಯಾಧಿಕಾರಿಯು ಸಿದ್ಧಪಡಿಸಿದ ಯಾವುದೇ ದಸ್ತಾವೇಜು ಅಥವಾ ವರದಿಯನ್ನು, ಈ ಸಂಹಿತೆಯ ಮೇರೆಗೆ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಬಳಸಲಾಗಿದೆಯೆಂದು ತಾತ್ಪರ್ಯವಾಗಿದ್ದಲ್ಲಿ, ಮತ್ತು,—

(i) ಅಂಥ ಲೋಕ ನೌಕರ, ತಜ್ಞ ಅಥವಾ ಅಧಿಕಾರಿಯು ವರ್ಗಾವಣೆಗೊಂಡಿರಲಿ, ನಿವೃತ್ತನಾಗಿರಲಿ ಅಥವಾ ಮರಣ ಹೊಂದಿರಲಿ; ಅಥವಾ

(ii)ಅಂಥ ಲೋಕ ನೌಕರ, ತಜ್ಞ ಅಥವಾ ಅಧಿಕಾರಿಯು ಸಿಕ್ಕದಿದ್ದಲ್ಲಿ ಅಥವಾ ಹೇಳಿಕೆಯನ್ನು ಕೊಡಲು ಅಸಮರ್ಥನಾಗಿದ್ದಲ್ಲಿ; ಅಥವಾ

(iii) ಅಂಥ ಲೋಕ ನೌಕರ, ತಜ್ಞ ಅಥವಾ ಅಧಿಕಾರಿಯ ಹಾಜರಾತಿಯನ್ನು ಪಡೆಯುವುದು, ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯನ್ನು ನಡೆಸುವುದರಲ್ಲಿ ವಿಳಂಬವುಂಟಾಗುವ ಸಂಭವವಿದ್ದಲ್ಲಿ

- ನ್ಯಾಯಾಲಯವು ಅಂಥ ದಸ್ತಾವೇಜು ಅಥವಾ ವರದಿಯ ಬಗ್ಗೆ ಹೇಳಿಕೆ ನೀಡುವ, ಅಂಥ ಹೇಳಿಕೆಯ ಸಮಯದಲ್ಲಿ ಹುದ್ದೆಯನ್ನು ಧಾರಣ ಮಾಡಿರುವಂಥ ಲೋಕ ನೌಕರ, ತಜ್ಞ ಅಥವಾ ಅಧಿಕಾರಿಯ ಉತ್ತರಾಧಿಕಾರಿಯ ಹಾಜರಾತಿಯನ್ನು ಖಚಿತಪಡಿಸತಕ್ಕದ್ದು:

ಪರಂತು, ಯಾರೇ ಲೋಕ ನೌಕರ, ವೈಜ್ಞಾನಿಕ ತಜ್ಞ ಅಥವಾ ವೈದ್ಯಾಧಿಕಾರಿಯ ವರದಿಯನ್ನು ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಾಗಿ ಯಾರೇ ಪಕ್ಷಕಾರರು ವಿವಾದಿಸಿದ ಹೊರತು ಅಂಥ ಲೋಕ ನೌಕರ, ವೈಜ್ಞಾನಿಕ ತಜ್ಞ ಅಥವಾ ವೈದ್ಯಾಧಿಕಾರಿಯನ್ನು ನ್ಯಾಯಾಲಯದ ಮುಂದೆ ಅವನನ್ನು ಹಾಜರುಪಡಿಸಲು ಕರೆಯತಕ್ಕದ್ದಲ್ಲ:

ಮತ್ತು ಪರಂತು, ಅಂಥ ಉತ್ತರಾಧಿಕಾರಿ ಲೋಕ ನೌಕರ, ತಜ್ಞ ಅಥವಾ ಅಧಿಕಾರಿಯ ಹೇಳಿಕೆಯನ್ನು ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕ ಅನುಮತಿಸಬಹುದು.

## ಅಧ್ಯಾಯ XXVI

### ವಿಚಾರಣೆ ಹಾಗೂ ಅಧಿವಿಚಾರಣೆಗಳಿಗೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು

**337. ಒಮ್ಮೆ ಅಪರಾಧಿಯೆಂದು ನಿರ್ಣೀತನಾದ ಅಥವಾ ಖುಲಾಸೆಯಾದ ವ್ಯಕ್ತಿಯನ್ನು ಅದೇ ಅಪರಾಧಕ್ಕಾಗಿ ಅಧಿವಿಚಾರಣೆ ಮಾಡದಿರುವುದು.-** (1) ಸಕ್ಷಮ ಅಧಿಕಾರವ್ಯಾಪ್ತಿಯಿರುವ ನ್ಯಾಯಾಲಯವು ಒಂದು ಅಪರಾಧಕ್ಕಾಗಿ ಒಮ್ಮೆ ಅಧಿವಿಚಾರಣೆ ಮಾಡಿದ ಮತ್ತು ಅಂಥ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ಅಥವಾ ಖುಲಾಸೆಗೊಂಡ ವ್ಯಕ್ತಿಯು, ಅಂಥ ಅಪರಾಧ ನಿರ್ಣಯವು ಅಥವಾ ಖುಲಾಸೆಯು ಜಾರಿಯಲ್ಲಿರುವಾಗ, ಅದೇ ಅಪರಾಧಕ್ಕಾಗಿ ಅಥವಾ ಅವೇ ಸಂಗತಿಗಳ ಮೇಲೆ ಆತನ ವಿರುದ್ಧ ಮಾಡಲಾದ ಆರೋಪಕ್ಕಿಂತ ಬೇರೆ ಆರೋಪವನ್ನು, 244ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ಅಪರಾಧಕ್ಕಾಗಿ ಮಾಡಬಹುದಾಗಿತ್ತೋ ಅಥವಾ ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣಯಿಸಬಹುದಾಗಿತ್ತೋ, ಆ ಇತರ ಯಾವುದೇ ಅಪರಾಧಕ್ಕಾಗಿ ಪುನಃ ಅಧಿವಿಚಾರಣೆಗೆ ಗುರಿಯಾಗತಕ್ಕದ್ದಲ್ಲ.

(2) ಯಾವುದೇ ಅಪರಾಧದ ಬಗ್ಗೆ ಖುಲಾಸೆಗೊಂಡ ಅಥವಾ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು, 243ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹಿಂದಿನ ಅಧಿವಿಚಾರಣೆಯಲ್ಲಿ ಅವನ ವಿರುದ್ಧ ಪ್ರತ್ಯೇಕ ಆರೋಪವನ್ನು ಮಾಡಬಹುದಾಗಿದ್ದ ಯಾವುದೇ ನಿರ್ದಿಷ್ಟ ಅಪರಾಧಕ್ಕಾಗಿ, ರಾಜ್ಯ ಸರ್ಕಾರದ ಸಮ್ಮತಿ ಪಡೆದು, ತರುವಾಯ ಅಧಿವಿಚಾರಣೆ ಮಾಡಬಹುದು.

(3) ಯಾವುದೇ ಕೃತ್ಯದಿಂದ ಉಂಟಾದ ಅಪರಾಧಕ್ಕಾಗಿ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾಗಿದ್ದು, ಆ ಕೃತ್ಯದ ಪರಿಣಾಮಗಳು, ಆ ಕೃತ್ಯವನ್ನೊಳಗೊಂಡು, ಅವನು ಯಾವ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದನೋ ಆ ಅಪರಾಧಕ್ಕಿಂತ ಭಿನ್ನವಾದ ಅಪರಾಧವನ್ನು ಮಾಡಿದ್ದರೆ, ಅವನು ಆ ಅಪರಾಧದ ನಿರ್ಣೀತನಾದ ಸಮಯದಲ್ಲಿ, ಆ ಪರಿಣಾಮಗಳು ಸಂಭವಿಸಿಲ್ಲದಿದ್ದರೆ ಅಥವಾ ಸಂಭವಿಸಿದ್ದುವೆಂದು ನ್ಯಾಯಾಲಯಕ್ಕೆ ತಿಳಿದಿರದಿದ್ದರೆ, ಅಂಥ ಅಪರಾಧಕ್ಕಾಗಿ ಅವನನ್ನು ತರುವಾಯ ಅಧಿವಿಚಾರಣೆ ಮಾಡಬಹುದು.

(4) ಯಾವುದೇ ಕೃತ್ಯಗಳಿಂದುಂಟಾದ ಅಪರಾಧದ ಬಗ್ಗೆ ಖುಲಾಸೆಗೊಂಡ ಅಥವಾ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು, ಅಂಥ ಖುಲಾಸೆ ಅಥವಾ ಅಪರಾಧಿಯೆಂದು ನಿರ್ಣಯವಾಗಿದ್ದರೂ, ಅವನ ಮೇಲೆ ತರುವಾಯ ಆರೋಪಿಸಿದ ಅಪರಾಧವನ್ನು, ಅವನನ್ನು ಪ್ರಥಮವಾಗಿ ಅಧಿವಿಚಾರಣೆ ಮಾಡಿದ ನ್ಯಾಯಾಲಯವು ಅಧಿವಿಚಾರಣೆ ಮಾಡಲು ಸಕ್ಷಮವಾಗಿಲ್ಲದಿದ್ದರೆ, ಅವನು ಮಾಡಿರಬಹುದಾದಂಥದ್ದೇ ಅವೇ ಕೃತ್ಯಗಳಿಂದುಂಟಾದ ಇತರ ಯಾವುದೇ ಅಪರಾಧಕ್ಕಾಗಿ, ಆ ತರುವಾಯ ಅವನನ್ನು ಆರೋಪಿಸಬಹುದು ಮತ್ತು ಅಧಿವಿಚಾರಣೆ ನಡೆಸಬಹುದು.

(5) 281ನೇ ಪ್ರಕರಣದ ಮೇರೆಗೆ ಬಿಡುಗಡೆಯಾದ ಒಬ್ಬ ವ್ಯಕ್ತಿಯನ್ನು, ಯಾವ ನ್ಯಾಯಾಲಯದಿಂದ ಆತನು ಬಿಡುಗಡೆ ಹೊಂದಿದನೋ ಆ ನ್ಯಾಯಾಲಯದ ಅಥವಾ ಆ ನ್ಯಾಯಾಲಯವು ಯಾವ ನ್ಯಾಯಾಲಯಕ್ಕೆ ಅಧೀನವಾಗಿರುವುದೋ, ಆ ಇತರ ಯಾವುದೇ ನ್ಯಾಯಾಲಯದ ಅನುಮತಿ ಪಡೆದ ಹೊರತು, ಅದೇ ಅಪರಾಧಕ್ಕಾಗಿ ಪುನಃ ಅಧಿವಿಚಾರಣೆ ಮಾಡತಕ್ಕದ್ದಲ್ಲ.

(6) ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 26ನೇ ಪ್ರಕರಣದ ಅಥವಾ ಈ ಸಂಹಿತೆಯ 208ನೇ ಪ್ರಕರಣದ ಉಪಬಂಧಗಳನ್ನು ಈ ಪ್ರಕರಣದಲ್ಲಿರುವ ಯಾವುದೂ ಬಾಧಿಸತಕ್ಕದ್ದಲ್ಲ.

*ವಿವರಣೆ.-* ಈ ಪ್ರಕರಣದ ಉದ್ದೇಶಗಳಿಗಾಗಿ, ದೂರನ್ನು ವಜಾ ಮಾಡುವುದು ಅಥವಾ ಆಪಾದಿತನ ಬಿಡುಗಡೆಯು ಖುಲಾಸೆಯಾಗಿರುವುದಿಲ್ಲ.

*ದೃಷ್ಟಾಂತಗಳು*

(ಎ) 'ಎ' ಎಂಬಾತನನ್ನು ಅವನು ನೌಕರನಾಗಿ ಕಳವು ಮಾಡಿದ ಆರೋಪಕ್ಕಾಗಿ ಅಧಿವಿಚಾರಣೆ ಮಾಡಿ ಖುಲಾಸೆಗೊಳಿಸಲಾಯಿತು. ಖುಲಾಸೆಯು ಜಾರಿಯಲ್ಲಿರುವಾಗ, ಅವನನ್ನು, ನೌಕರನಾಗಿ ಕಳವು ಮಾಡಿರುವುದಾಗಿ ಅಥವಾ ಅವೇ ಸಂಗತಿಗಳ ಮೇಲೆ, ಕೇವಲ ಕಳವು ಮಾಡಿದ್ದಕ್ಕಾಗಿ ಅಥವಾ ಆಪರಾಧಿಕ ನಂಬಿಕೆ ದ್ರೋಹಕ್ಕಾಗಿ ತರುವಾಯ ಆರೋಪಿಸಲು ಆಗುವುದಿಲ್ಲ.

(ಬಿ) ತೀವ್ರ ಗಾಯವನ್ನುಂಟು ಮಾಡಿದ್ದಕ್ಕಾಗಿ 'ಎ' ಎಂಬಾತನನ್ನು ಅಧಿವಿಚಾರಣೆ ಮಾಡಿ ಅವನು ಅಪರಾಧಿಯೆಂದು ನಿರ್ಣೀತನಾಗಿರುತ್ತಾನೆ. ತರುವಾಯ, ಗಾಯಗೊಂಡ ವ್ಯಕ್ತಿಯು ಮೃತನಾಗುತ್ತಾನೆ. 'ಎ' ಎಂಬಾತನನ್ನು ಪುನಃ ಆಪರಾಧಿಕ ಮಾನವ ಹತ್ಯೆಗಾಗಿ ಪುನಃ ಅಧಿವಿಚಾರಣೆ ಮಾಡಬಹುದು.

(ಸಿ) 'ಎ' ಎಂಬಾತನನ್ನು ಸೆಷನ್ ನ್ಯಾಯಾಲಯದ ಮುಂದೆ ಆರೋಪಿಸಲಾಗಿದೆ ಮತ್ತು ಅವನು 'ಬಿ' ಎಂಬಾತನ ಆಪರಾಧಿಕ ಮಾನವ ಹತ್ಯೆಗಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ. 'ಎ' ಎಂಬಾತನನ್ನು ತರುವಾಯ 'ಬಿ' ಎಂಬಾತನ ಕೊಲೆಗಾಗಿ ಅವೇ ಸಂಗತಿಗಳ ಮೇಲೆ ಅಧಿವಿಚಾರಣೆ ಮಾಡಲು ಆಗುವುದಿಲ್ಲ.

(ಡಿ) 'ಎ' ಎಂಬಾತನು 'ಬಿ' ಎಂಬಾತನಿಗೆ ಸ್ವಇಚ್ಛೆಯಿಂದ ಗಾಯವನ್ನುಂಟು ಮಾಡಿದ್ದಕ್ಕಾಗಿ, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಂದ ಅವನು ಆರೋಪಿತನಾಗಿದ್ದಾನೆ ಮತ್ತು ಆತನಿಂದ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ. 'ಎ' ಎಂಬಾತನನ್ನು ತರುವಾಯ, ಆ ಮೊಕದ್ದಮೆಯು ಈ ಪ್ರಕರಣದ (3)ನೇ ಉಪಪ್ರಕರಣದ ವ್ಯಾಪ್ತಿಯಲ್ಲಿದ್ದ ಹೊರತು, ಅವೇ ಸಂಗತಿಗಳ ಮೇಲೆ 'ಬಿ' ಎಂಬಾತನಿಗೆ ತೀವ್ರ ಗಾಯವುಂಟು ಮಾಡಿರುವುದಾಗಿ ಅಧಿವಿಚಾರಣೆ ಮಾಡಲು ಬರುವುದಿಲ್ಲ.

(ಇ) 'ಎ' ಎಂಬಾತನು 'ಬಿ' ಎಂಬ ವ್ಯಕ್ತಿಯ ದೇಹದ ಮೇಲಿನಿಂದ ಸ್ವತ್ತನ್ನು ಕಳವು ಮಾಡಿದ್ದಕ್ಕಾಗಿ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನಿಂದ, ಅವನು ಆರೋಪಿತನಾಗಿದ್ದಾನೆ ಮತ್ತು ಅವನಿಂದ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ. ತರುವಾಯ, ಅವೇ ಸಂಗತಿಗಳ ಮೇಲೆ 'ಎ' ಎಂಬವನನ್ನು ಸುಲಿಗೆ ಮಾಡಿರುವನೆಂದು ಆರೋಪಿಸಬಹುದು ಮತ್ತು ಅಧಿವಿಚಾರಣೆ ಮಾಡಬಹುದು.

(ಎಫ್) 'ಎ', 'ಬಿ' ಮತ್ತು 'ಸಿ' ಎಂಬುವರು 'ಡಿ' ಎಂಬಾತನನ್ನು ಸುಲಿಗೆ ಮಾಡಿದ್ದಕ್ಕಾಗಿ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಂದ ಆರೋಪಿತರಾಗಿದ್ದಾರೆ ಮತ್ತು ಆತನಿಂದ ಅಪರಾಧಿಗಳೆಂದು ನಿರ್ಣೀತರಾಗಿದ್ದಾರೆ. ತರುವಾಯ 'ಎ', 'ಬಿ' ಮತ್ತು 'ಸಿ' ಎಂಬವರನ್ನು ಅವೇ ಸಂಗತಿಗಳ ಮೇಲೆ ದರೋಡೆಯ ಬಗ್ಗೆ ಆರೋಪಿಸಬಹುದು ಮತ್ತು ಅಧಿವಿಚಾರಣೆ ಮಾಡಬಹುದು.

**338. ಪಬ್ಲಿಕ್ ಪ್ರಾಸಿಕ್ಯೂಟರುಗಳ ಹಾಜರಾತಿ.-** (1) ಮೊಕದ್ದಮೆಯನ್ನು ನಡೆಸುತ್ತಿರುವ ಪಬ್ಲಿಕ್ ಪ್ರಾಸಿಕ್ಯೂಟರು ಅಥವಾ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರು, ವಿಚಾರಣೆ, ಅಧಿವಿಚಾರಣೆ ಅಥವಾ ಅಪೀಲಿನಲ್ಲಿರುವ ಮೊಕದ್ದಮೆಯ ಸಂಬಂಧದಲ್ಲಿ ಯಾವುದೇ ನ್ಯಾಯಾಲಯದ ಮುಂದೆ ಯಾವುದೇ ಲಿಖಿತ ಅಧಿಕಾರವಿಲ್ಲದೆ ಹಾಜರಾಗಬಹುದು ಮತ್ತು ವಾದ ಮಂಡಿಸಬಹುದು.

(2) ಅಂಥ ಯಾವುದೇ ಮೊಕದ್ದಮೆಯಲ್ಲಿ ಯಾರೇ ಖಾಸಗಿ ವ್ಯಕ್ತಿಯು, ಯಾವುದೇ ನ್ಯಾಯಾಲಯದಲ್ಲಿ ಯಾರೇ ವ್ಯಕ್ತಿಯನ್ನು, ಪ್ರಾಸಿಕ್ಯೂಟ್ ಮಾಡಲು ಒಬ್ಬ ನ್ಯಾಯವಾದಿಗೆ ಸೂಚಿಸಿದರೆ, ಆ ಮೊಕದ್ದಮೆಯನ್ನು ನಡೆಸುತ್ತಿರುವ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಾಸಿಕ್ಯೂಷನನ್ನು ನಡೆಸತಕ್ಕದ್ದು ಮತ್ತು ಹಾಗೆ ಸೂಚಿಸಿದಾಗ ನ್ಯಾಯವಾದಿಯು, ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ನಿರ್ದೇಶನಗಳ ಮೇರೆಗೆ ಕಾರ್ಯನಿರ್ವಹಿಸತಕ್ಕದ್ದು ಮತ್ತು ಮೊಕದ್ದಮೆಯಲ್ಲಿ ಸಾಕ್ಷ್ಯ ತೆಗೆದುಕೊಳ್ಳುವುದು ಮುಗಿದ ತರುವಾಯ, ನ್ಯಾಯಾಲಯದ ಅನುಮತಿ ಪಡೆದು ಲಿಖಿತ ವಾದಗಳನ್ನು ಸಲ್ಲಿಸಬಹುದು.

**339. ಪ್ರಾಸಿಕ್ಯೂಷನನ್ನು ನಡೆಸಲು ಅನುಮತಿ.-** (1) ಮೊಕದ್ದಮೆಯ ವಿಚಾರಣೆ ಅಥವಾ ಅಧಿವಿಚಾರಣೆ ಮಾಡುವ ಯಾರೇ ಮ್ಯಾಜಿಸ್ಟ್ರೇಟನು, ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಯಲ್ಲದ ಯಾರೇ ವ್ಯಕ್ತಿಗೆ ಪ್ರಾಸಿಕ್ಯೂಷನ್ ನಡೆಸಲು ಅನುಮತಿ ನೀಡಬಹುದು, ಆದರೆ ಅಡ್ವೋಕೇಟ್ ಜನರಲ್ ಅಥವಾ ಸರ್ಕಾರಿ ನ್ಯಾಯವಾದಿ ಅಥವಾ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯು, ಅಂಥ ಅನುಮತಿಯಿಲ್ಲದೆ, ಹಾಗೆ ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ಆಪಾದಿತನನ್ನು ಪ್ರಾಸಿಕ್ಯೂಟ್ ಮಾಡಲಾಗುತ್ತಿರುವ ಅಪರಾಧದ ಬಗೆಗಿನ ತನಿಖೆಯಲ್ಲಿ ಭಾಗವಹಿಸಿರುವ ಯಾರೇ ಪೊಲೀಸ್ ಅಧಿಕಾರಿಗೆ ಪ್ರಾಸಿಕ್ಯೂಷನ್ ನಡೆಸಲು ಅನುಮತಿ ನೀಡತಕ್ಕದ್ದಲ್ಲ.

(2) ಪ್ರಾಸಿಕ್ಯೂಷನನ್ನು ನಡೆಸುವ ಯಾರೇ ವ್ಯಕ್ತಿಯು ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಪ್ರಾಸಿಕ್ಯೂಷನ್ ನಡೆಸಬಹುದು.

**340. ಯಾರ ವಿರುದ್ಧ ವ್ಯವಹರಣೆಗಳನ್ನು ಹೂಡಲಾಗಿದೆಯೋ ಆ ವ್ಯಕ್ತಿಯ ಪ್ರತಿರಕ್ಷೆಯ ಹಕ್ಕು.-** ಅಪರಾಧಕ್ಕಾಗಿ, ಕ್ರಿಮಿನಲ್ ನ್ಯಾಯಾಲಯದಲ್ಲಿ ಆಪಾದಿತನಾದ ಯಾರೇ ವ್ಯಕ್ತಿಯು ಅಥವಾ ಈ ಸಂಹಿತೆಯ ಮೇರೆಗೆ ಯಾರ ವಿರುದ್ಧ ವ್ಯವಹರಣೆಗಳನ್ನು ಹೂಡಲಾಗಿದೆಯೋ ಆ ವ್ಯಕ್ತಿಯು, ತನ್ನ ಆಯ್ಕೆಯ ನ್ಯಾಯವಾದಿಯ ಮೂಲಕ ತನ್ನನ್ನು ಪ್ರತಿರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆ.

**341. ಕೆಲವು ಮೊಕದ್ದಮೆಗಳಲ್ಲಿ ರಾಜ್ಯದ ವೆಚ್ಚದಲ್ಲಿ ಆಪಾದಿತರಿಗೆ ಕಾನೂನಿನ ನೆರವು.-** (1) ನ್ಯಾಯಾಲಯದಲ್ಲಿ ನಡೆಯುವ ಅಧಿವಿಚಾರಣೆಯಲ್ಲಿ ಅಥವಾ ಅಪೀಲಿನಲ್ಲಿ ಆಪಾದಿತನು ನ್ಯಾಯವಾದಿಯಿಂದ ಪ್ರತಿನಿಧಿತನಾಗಿಲ್ಲದಿದ್ದರೆ ಮತ್ತು ನ್ಯಾಯವಾದಿಯನ್ನು ನೇಮಿಸಿಕೊಳ್ಳಲು ಆಪಾದಿತನಿಗೆ ಸಾಕಷ್ಟು ಅನುಕೂಲಗಳಿಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದಲ್ಲಿ, ಅವನ ಪ್ರತಿರಕ್ಷೆಗಾಗಿ ನ್ಯಾಯಾಲಯವು ರಾಜ್ಯ ವೆಚ್ಚದಲ್ಲಿ ಒಬ್ಬ ನ್ಯಾಯವಾದಿಯನ್ನು ನಿಯೋಜಿಸತಕ್ಕದ್ದು.

(2) ಉಚ್ಚ ನ್ಯಾಯಾಲಯವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು,-

(ಎ) (1)ನೇ ಉಪಪ್ರಕರಣದ ಮೇರೆಗೆ ಪ್ರತಿರಕ್ಷೆಗಾಗಿ ನ್ಯಾಯವಾದಿಯನ್ನು ಆಯ್ಕೆ ಮಾಡುವ ವಿಧಾನಕ್ಕಾಗಿ;

(ಬಿ) ನ್ಯಾಯಾಲಯಗಳು ಅಂಥ ನ್ಯಾಯವಾದಿಗೆ ನೀಡಬೇಕಾದ ಸೌಲಭ್ಯಗಳಿಗಾಗಿ;

(ಸಿ) ಸರ್ಕಾರವು ಅಂಥ ನ್ಯಾಯವಾದಿಗೆ ಸಂದಾಯ ಮಾಡಬೇಕಾದ ಫೀಜುಗಳಿಗಾಗಿ ಮತ್ತು ಸಾಮಾನ್ಯವಾಗಿ, (1)ನೇ ಉಪಪ್ರಕರಣದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ

- ಉಪಬಂಧ ಕಲ್ಪಿಸಲು ನಿಯಮಗಳನ್ನು ರಚಿಸಬಹುದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ (1) ಮತ್ತು (2)ನೇ ಉಪಪ್ರಕರಣದ ಉಪಬಂಧಗಳು ಸೆಷನ್ ನ್ಯಾಯಾಲಯದ ಮುಂದೆ ನಡೆಯುವ ಅಧಿವಿಚಾರಣೆಗಳಿಗೆ ಸಂಬಂಧಿಸಿದಂತೆ ಅವು ಅನ್ವಯವಾಗುವಂತೆಯೇ, ರಾಜ್ಯದಲ್ಲಿರುವ ಇತರ ನ್ಯಾಯಾಲಯಗಳಲ್ಲಿ ನಡೆಯುವ ಅಧಿವಿಚಾರಣೆಗಳ ಯಾವುದೇ ವರ್ಗಕ್ಕೆ ಸಂಬಂಧಿಸಿದಂತೆಯೂ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

**342. ನಿಗಮ ಅಥವಾ ನೋಂದಾಯಿತ ಸೊಸೈಟಿಯು ಆಪಾದಿತವಾದಾಗ ಪ್ರಕ್ರಿಯೆ.-** (1) ಈ ಪ್ರಕರಣದಲ್ಲಿ, "ನಿಗಮ" ಎಂದರೆ, ನಿಗಮಿತ ಕಂಪನಿ ಅಥವಾ ಇತರ ನಿಗಮಿತ ನಿಕಾಯ ಮತ್ತು ಇದು ಸೊಸೈಟಿ ನೋಂದಣಿ ಅಧಿನಿಯಮ, 1860 (1860 ರ 21)ರ ಮೇರೆಗೆ ನೋಂದಾಯಿತವಾದ ಸೊಸೈಟಿಯನ್ನೂ ಒಳಗೊಳ್ಳುತ್ತದೆ.

(2) ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ನಿಗಮವು ಆಪಾದಿತ ವ್ಯಕ್ತಿಯಾಗಿರುವಾಗ ಅಥವಾ ಆಪಾದಿತ ವ್ಯಕ್ತಿಗಳ ಪೈಕಿ ಒಂದಾಗಿರುವಾಗ, ಅದು ವಿಚಾರಣೆಯ ಅಥವಾ ಅಧಿವಿಚಾರಣೆಯ ಉದ್ದೇಶಕ್ಕಾಗಿ ಒಬ್ಬ ಪ್ರತಿನಿಧಿಯನ್ನು ನೇಮಿಸಬಹುದು ಮತ್ತು ಅಂಥ ನೇಮಕಕ್ಕೆ ನಿಗಮದ ಮುದ್ರೆ ಇರಬೇಕಾಗಿಲ್ಲ.

(3) ನಿಗಮದ ಪ್ರತಿನಿಧಿಯು ಹಾಜರಾದಾಗ, ಯಾವುದೇ ವಿಷಯವನ್ನು ಆಪಾದಿತನ ಸಮ್ಮುಖದಲ್ಲಿ ಮಾಡತಕ್ಕದ್ದು ಅಥವಾ ಆಪಾದಿತನಿಗೆ ಓದಿ ಹೇಳತಕ್ಕದ್ದು ಅಥವಾ ತಿಳಿಸತಕ್ಕದ್ದು ಅಥವಾ ವಿವರಿಸತಕ್ಕದ್ದು ಎಂಬ ಈ ಸಂಹಿತೆಯ ಯಾವುದೇ ಅಗತ್ಯವನ್ನು ಪ್ರತಿನಿಧಿಯ ಸಮ್ಮುಖದಲ್ಲಿ ಮಾಡತಕ್ಕದ್ದು ಅಥವಾ ಪ್ರತಿನಿಧಿಗೆ ಓದಿ ಹೇಳತಕ್ಕದ್ದು ಅಥವಾ ತಿಳಿಸತಕ್ಕದ್ದು ಅಥವಾ

ವಿವರಿಸತಕ್ಕದ್ದು ಅಗತ್ಯವೆಂದು ಅರ್ಥೈಸತಕ್ಕದ್ದು ಮತ್ತು ಆಪಾದಿತನನ್ನು ವಿಚಾರಣೆ ಮಾಡತಕ್ಕದ್ದೆಂಬ ಯಾವುದೇ ಅಗತ್ಯವನ್ನು, ಪ್ರತಿನಿಧಿಯನ್ನು ವಿಚಾರಣೆ ಮಾಡತಕ್ಕದ್ದೆಂಬ ಅಗತ್ಯವೆಂದು ಅರ್ಥೈಸತಕ್ಕದ್ದು.

(4) ನಿಗಮದ ಪ್ರತಿನಿಧಿಯು ಹಾಜರಾಗದಿದ್ದಾಗ, (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥ ಯಾವುದೇ ಅಗತ್ಯವು ಅನ್ವಯಿಸತಕ್ಕದ್ದಲ್ಲ.

(5) ನಿಗಮದ ಕಾರ್ಯನಿರ್ವಾಹಕ ನಿರ್ದೇಶಕನು ಅಥವಾ ನಿಗಮದ ವ್ಯವಹಾರಗಳ ಕಾರ್ಯನಿರ್ವಹಣೆಯನ್ನು ಮಾಡುವ ಅವನ ಮೂಲಕ ಯುಕ್ತವಾಗಿ ಅಧಿಕೃತನಾದ ವ್ಯಕ್ತಿಯಾಗಿರುವ (ಯಾವುದೇ ಹೆಸರಿನಿಂದ ಕರೆಯಲಾದ) ಅಥವಾ ವ್ಯಕ್ತಿಗಳಲ್ಲಿ ಒಬ್ಬನಾಗಿರುವ ಯಾರೇ ವ್ಯಕ್ತಿಯು ಸಹಿ ಹಾಕಿದ್ದಾನೆಂದು ತಾತ್ಪರ್ಯವಾಗುವ ಹೇಳಿಕೆಯಲ್ಲಿ ಹೆಸರಿಸಲಾದ ವ್ಯಕ್ತಿಯನ್ನು, ಈ ಪ್ರಕರಣದ ಉದ್ದೇಶಗಳಿಗಾಗಿ ನಿಗಮದ ಪ್ರತಿನಿಧಿಯಾಗಿ ನೇಮಿಸಲಾಗಿದೆ ಎಂದು ಲಿಖಿತ ಹೇಳಿಕೆಯನ್ನು ದಾಖಲು ಮಾಡಿರುವಲ್ಲಿ, ನ್ಯಾಯಾಲಯವು, ತದ್ವಿರುದ್ಧ ರುಜುವಾತಾದ ಹೊರತು, ಆ ವ್ಯಕ್ತಿಯು ಹಾಗೆ ನೇಮಕಗೊಂಡಿದ್ದಾನೆಂದು ಪೂರ್ವಭಾವನೆ ಮಾಡತಕ್ಕದ್ದು.

(6) ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ನಿಗಮದ ಪ್ರತಿನಿಧಿಯಾಗಿ ನ್ಯಾಯಾಲಯದ ಮುಂದೆ ಹಾಜರಾಗುವ ಯಾರೇ ವ್ಯಕ್ತಿಯು, ಅಂಥ ಪ್ರತಿನಿಧಿಯೇ ಅಥವಾ ಅಲ್ಲವೇ ಎಂಬ ಪ್ರಶ್ನೆ ಉದ್ಭವಿಸಿದರೆ, ಆ ಪ್ರಶ್ನೆಯನ್ನು ನ್ಯಾಯಾಲಯವೇ ನಿರ್ಧರಿಸತಕ್ಕದ್ದು.

**343. ಸಹ-ಅಪರಾಧಿಗೆ ಕ್ಷಮಾದಾನ ನೀಡಿಕೆ.-** (1) ಈ ಪ್ರಕರಣವು ಅನ್ವಯಿಸುವ ಅಪರಾಧಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿರುವನೆಂದು ಅಥವಾ ಶಾಮೀಲಾಗಿರುವನೆಂದು ಭಾವಿಸಿದ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ಪಡೆಯುವ ಉದ್ದೇಶದಿಂದ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು, ಅಪರಾಧದ ತನಿಖೆಯ ಅಥವಾ ವಿಚಾರಣೆಯ ಅಥವಾ ಅಧಿವಿಚಾರಣೆಯ ಯಾವುದೇ ಹಂತದಲ್ಲಿ ಮತ್ತು ಅಪರಾಧದ ವಿಚಾರಣೆ ಅಥವಾ ಅಧಿವಿಚಾರಣೆಯನ್ನು ನಡೆಸುತ್ತಿರುವ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ವಿಚಾರಣೆ ಅಥವಾ ಅಧಿವಿಚಾರಣೆಯ ಯಾವುದೇ ಹಂತದಲ್ಲಿ, ಆ ಅಪರಾಧಕ್ಕೆ ಮತ್ತು ಆ ಅಪರಾಧವನ್ನು ಮಾಡುವಲ್ಲಿ ಪ್ರಧಾನವಾಗಿ ಅಥವಾ ದುಷ್ಪ್ರೇರಕವಾಗಿ ಸಂಬಂಧಪಟ್ಟ ಪ್ರತಿಯೊಬ್ಬ ಇತರ ವ್ಯಕ್ತಿಗೆ ಸಂಬಂಧಿಸಿದಂತೆ ಅವನು ತಿಳಿದಿರುವ ಎಲ್ಲ ಸನ್ನಿವೇಶಗಳನ್ನು ಪೂರ್ಣವಾಗಿ ಹಾಗೂ ಸತ್ಯವಾಗಿ ಹೊರಗೆಡಹಬೇಕೆಂಬ ಷರತ್ತಿನ ಮೇಲೆ ಕ್ಷಮಾದಾನ ನೀಡಬಹುದು.

(2) ಈ ಪ್ರಕರಣವು,-

(ಎ) ಸೆಷನ್ ನ್ಯಾಯಾಲಯದಿಂದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೇಮಕಗೊಂಡಿರುವ ವಿಶೇಷ ನ್ಯಾಯಾಧೀಶನ ನ್ಯಾಯಾಲಯದಿಂದ ಮಾತ್ರವೇ ಅಧಿವಿಚಾರಣೀಯವಾದ ಯಾವುದೇ ಅಪರಾಧಕ್ಕೆ;

(ಬಿ) ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ತೀವ್ರತರ ಶಿಕ್ಷೆಯಿಂದ ದಂಡನೀಯವಾಗುವ ಯಾವುದೇ ಅಪರಾಧಕ್ಕೆ

- ಅನ್ವಯಿಸುತ್ತದೆ.

(3) (1)ನೇ ಉಪಪ್ರಕರಣದ ಮೇರೆಗೆ ಕ್ಷಮಾದಾನ ನೀಡುವ ಪ್ರತಿಯೊಬ್ಬ ಮ್ಯಾಜಿಸ್ಟ್ರೇಟನು,-

(ಎ) ಹಾಗೆ ಮಾಡಲು ತನಗೆ ಇರುವ ಕಾರಣಗಳನ್ನು;

(ಬಿ) ನೀಡಿದ ಕ್ಷಮಾದಾನವನ್ನು ವ್ಯಕ್ತಿಯು ಅಂಗೀಕರಿಸಿದ್ದನೇ ಅಥವಾ ಅಂಗೀಕರಿಸಿರಲಿಲ್ಲವೇ ಎಂಬುದನ್ನು

- ದಾಖಲ್ಮಾಡತಕ್ಕದ್ದು ಮತ್ತು ಆಪಾದಿತನು ಮಾಡಿದ ಮನವಿಯ ಮೇಲೆ ಅಂಥ ದಾಖಲೆಯ ಪ್ರತಿಯನ್ನು ಉಚಿತವಾಗಿ ಅವನಿಗೆ ಒದಗಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ನೀಡಿದ ಕ್ಷಮಾದಾನವನ್ನು ಅಂಗೀಕರಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು,-

(ಎ) ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನು ನ್ಯಾಯಾಲಯದಲ್ಲಿ ಮತ್ತು ತರುವಾಯದ ಅಧಿವಿಚಾರಣೆಯಲ್ಲಿ, ಯಾವುದಾದರೂ ಇದ್ದರೆ, ಸಾಕ್ಷಿದಾರರನ್ನು ವಿಚಾರಣೆ ಮಾಡತಕ್ಕದ್ದು;

(ಬಿ) ಅವನು ಈಗಾಗಲೇ ಜಾಮೀನಿನ ಮೇಲಿದ್ದ ಹೊರತು, ಅಧಿವಿಚಾರಣೆಯು ಮುಕ್ತಾಯವಾಗುವವರೆಗೆ ಅವನನ್ನು ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ನೀಡಿರುವ ಕ್ಷಮಾದಾನವನ್ನು ಒಬ್ಬ ವ್ಯಕ್ತಿಯು ಅಂಗೀಕರಿಸಿರುವಲ್ಲಿ ಮತ್ತು (4)ನೇ ಉಪಪ್ರಕರಣದ ಮೇರೆಗೆ ಅವನನ್ನು ವಿಚಾರಣೆ ಮಾಡಿರುವಲ್ಲಿ, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನು ಆ ಮೊಕದ್ದಮೆಯಲ್ಲಿ ಯಾವುದೇ ಹೆಚ್ಚಿನ ವಿಚಾರಣೆ ಮಾಡದೇ,-

(ಎ) ಅದನ್ನು ಅಧಿವಿಚಾರಣೆಗಾಗಿ,-

(i) ಆ ಅಪರಾಧವು ಸೆಷನ್ ನ್ಯಾಯಾಲಯದಿಂದ ಮಾತ್ರವೇ ಅಧಿವಿಚಾರಣೆಯಾಗಿದ್ದರೆ ಅಥವಾ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಾಗಿದ್ದರೆ, ಆ ಸೆಷನ್ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು;

(ii) ಆ ಅಪರಾಧವನ್ನು ಆ ನ್ಯಾಯಾಲಯವು ಮಾತ್ರವೇ ಅಧಿವಿಚಾರಣೆ ಮಾಡಬಹುದಾಗಿದ್ದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶನ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು;

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಮೊಕದ್ದಮೆಯನ್ನು ವಹಿಸಿಕೊಡತಕ್ಕದ್ದು, ಅವನು ಸ್ವತಃ ಆ ಮೊಕದ್ದಮೆಯ ಅಧಿವಿಚಾರಣೆ ನಡೆಸತಕ್ಕದ್ದು.

**344. ಕ್ಷಮಾದಾನ ನೀಡಲು ನಿರ್ದೇಶಿಸುವ ಅಧಿಕಾರ.-** ಮೊಕದ್ದಮೆಯನ್ನು ಒಪ್ಪಿಸಿದ ತರುವಾಯ, ಆದರೆ ತೀರ್ಪುಕೊಡುವ ಮುನ್ನ, ಯಾವುದೇ ಕಾಲದಲ್ಲಿ, ಮೊಕದ್ದಮೆಯನ್ನು ಒಪ್ಪಿಸಲಾಗಿರುವ ನ್ಯಾಯಾಲಯವು, ಅಂಥ ಯಾವುದೇ ಅಪರಾಧಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿರುವನೆಂದು ಅಥವಾ ಶಾಮೀಲಾಗಿರುವನೆಂದು ಭಾವಿಸಿದ್ದ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ಅಧಿವಿಚಾರಣೆಯಲ್ಲಿ ಪಡೆಯುವ ಉದ್ದೇಶದಿಂದ, ಅದೇ ಷರತ್ತಿನ ಮೇಲೆ ಅಂಥ ವ್ಯಕ್ತಿಗೆ ಕ್ಷಮಾದಾನ ನೀಡಬಹುದು.

**345. ಕ್ಷಮಾದಾನದ ಷರತ್ತುಗಳನ್ನು ಪಾಲಿಸದ ವ್ಯಕ್ತಿಯ ಅಧಿವಿಚಾರಣೆ.-** (1) 343ನೇ ಪ್ರಕರಣ ಅಥವಾ 344ನೇ ಪ್ರಕರಣದ ಮೇರೆಗೆ ನೀಡಲಾದ ಕ್ಷಮಾದಾನವನ್ನು ಅಂಗೀಕರಿಸಿದ ವ್ಯಕ್ತಿಯ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರನು, ತನ್ನ ಅಭಿಪ್ರಾಯದಲ್ಲಿ, ಅಂಥ ವ್ಯಕ್ತಿಯು ಮುಖ್ಯವಾದುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಿಕೊಂಡು ಅಥವಾ ಸುಳ್ಳು ಸಾಕ್ಷ್ಯವನ್ನು ನೀಡಿ ಕ್ಷಮಾದಾನದ ಷರತ್ತನ್ನು ಪಾಲಿಸಿಲ್ಲವೆಂದು ಪ್ರಮಾಣೀಕರಿಸಿದಲ್ಲಿ, ಯಾವುದರ ಸಂಬಂಧದಲ್ಲಿ ಕ್ಷಮಾದಾನ ನೀಡಲಾಗಿತ್ತೋ ಆ ಅಪರಾಧಕ್ಕಾಗಿ ಅಥವಾ ಅದೇ ವಿಷಯದ ಸಂಬಂಧದಲ್ಲಿ ಅವನು ಅಪರಾಧಿಯೆಂದು ಕಂಡುಬರುವ

ಇತರ ಯಾವುದೇ ಅಪರಾಧಕ್ಕಾಗಿ ಮತ್ತು ಸುಳ್ಳು ಸಾಕ್ಷ್ಯ ನೀಡಿದ ಅಪರಾಧಕ್ಕಾಗಿಯೂ ಅಂಥ ವ್ಯಕ್ತಿಯನ್ನು ಅಧಿವಿಚಾರಣೆ ಮಾಡಬಹುದು:

ಪರಂತು, ಅಂಥ ವ್ಯಕ್ತಿಯನ್ನು ಇತರ ಯಾರೇ ಆಪಾದಿತನ ಜೊತೆಯಲ್ಲಿ ಅಧಿವಿಚಾರಣೆ ಮಾಡತಕ್ಕದ್ದಲ್ಲ:

ಮತ್ತು ಪರಂತು, ಸುಳ್ಳು ಸಾಕ್ಷ್ಯ ನೀಡಿದ ಅಪರಾಧಕ್ಕಾಗಿ ಅಂಥ ವ್ಯಕ್ತಿಯನ್ನು ಉಚ್ಚ ನ್ಯಾಯಾಲಯದ ಒಪ್ಪಿಗೆಯಿಲ್ಲದೆ ಅಧಿವಿಚಾರಣೆ ಮಾಡತಕ್ಕದ್ದಲ್ಲ ಮತ್ತು 215ನೇ ಪ್ರಕರಣ ಅಥವಾ 379ನೇ ಪ್ರಕರಣದಲ್ಲಿರುವುದಾವುದೂ, ಆ ಅಪರಾಧಕ್ಕೆ ಅನ್ವಯವಾಗತಕ್ಕದ್ದಲ್ಲ.

(2) ಕ್ಷಮಾದಾನ ನೀಡಿಕೆಯನ್ನು ಅಂಗೀಕರಿಸಿದಂಥ ವ್ಯಕ್ತಿಯು ಕೊಟ್ಟ ಮತ್ತು 183ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು ಅಥವಾ 343ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ನ್ಯಾಯಾಲಯವು ದಾಖಲಿಸಿದ ಯಾವುದೇ ಹೇಳಿಕೆಯನ್ನು ಅಂಥ ಅಧಿವಿಚಾರಣೆಯಲ್ಲಿ ಆತನ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಬಹುದು.

(3) ಅಂಥ ಅಧಿವಿಚಾರಣೆಯಲ್ಲಿ, ಕ್ಷಮಾದಾನ ನೀಡಿಕೆ ಷರತ್ತನ್ನು ತಾನು ಪಾಲಿಸಿರುವುದಾಗಿ ವಾದಿಸಲು ಆಪಾದಿತನು ಹಕ್ಕುಳ್ಳವನಾಗಿರತಕ್ಕದ್ದು, ಅಂಥ ಸಂದರ್ಭದಲ್ಲಿ ಕ್ಷಮಾದಾನ ನೀಡಿಕೆ ಷರತ್ತನ್ನು ಪಾಲಿಸಿಲ್ಲವೆಂದು ಪ್ರಾಸಿಕ್ಯೂಷನ್ ರುಜುವಾತುಪಡಿಸತಕ್ಕದ್ದು.

(4) ಅಂಥ ಅಧಿವಿಚಾರಣೆಯಲ್ಲಿ, ನ್ಯಾಯಾಲಯವು,-

(ಎ) ಅದು ಸೆಷನ್ ನ್ಯಾಯಾಲಯವಾಗಿದ್ದರೆ, ಆಪಾದಿತನಿಗೆ ಆರೋಪವನ್ನು ಓದಿ ಹೇಳುವ ಅಥವಾ ವಿವರಿಸುವ ಮುನ್ನ;

(ಬಿ) ಅದು ಮ್ಯಾಜಿಸ್ಟ್ರೇಟನ ನ್ಯಾಯಾಲಯವಾಗಿದ್ದರೆ, ಪ್ರಾಸಿಕ್ಯೂಷನ್ನಿನ ಪರವಾಗಿ ಸಾಕ್ಷ್ಯವನ್ನು ತೆಗೆದುಕೊಳ್ಳುವ ಮುನ್ನ

- ಕ್ಷಮಾದಾನದ ಷರತ್ತುಗಳನ್ನು ತಾನು ಪಾಲಿಸಿರುವನೆಂದು ಅವನು ವಾದಿಸುವನೇ ಎಂದು ಆಪಾದಿತನನ್ನು ಕೇಳತಕ್ಕದ್ದು.

(5) ಆಪಾದಿತನು ಹಾಗೆ ವಾದಿಸಿದರೆ, ನ್ಯಾಯಾಲಯವು ಆ ವಾದವನ್ನು ದಾಖಲಿಸತಕ್ಕದ್ದು ಮತ್ತು ಅಧಿವಿಚಾರಣೆಯನ್ನು ಮುಂದುವರಿಸತಕ್ಕದ್ದು ಮತ್ತು ಅದು ಆ ಮೊಕದ್ದಮೆಯಲ್ಲಿ ತೀರ್ಪು ನೀಡುವ ಮುನ್ನ, ಆಪಾದಿತನು ಕ್ಷಮಾದಾನದ ಷರತ್ತುಗಳನ್ನು ಪಾಲಿಸಿರುವನೇ ಅಥವಾ ಇಲ್ಲವೇ ಎಂದು ತೀರ್ಮಾನಿಸತಕ್ಕದ್ದು ಮತ್ತು ಅವನು ಹಾಗೆ ಪಾಲಿಸಿರುವನೆಂದು ಅದು ತೀರ್ಮಾನಿಸಿದರೆ ಅದು, ಈ ಸಂಹಿತೆಯಲ್ಲಿ ಏನೇ ಇದ್ದರೂ ಅವನು ನಿರಪರಾಧಿಯೆಂದು ತೀರ್ಪು ನೀಡತಕ್ಕದ್ದು.

**346. ವ್ಯವಹರಣೆಗಳನ್ನು ಮುಂದೂಡುವ ಅಥವಾ ಮುಂದಕ್ಕೆ ಹಾಕುವ ಅಧಿಕಾರ.-** (1) ಪ್ರತಿಯೊಂದು ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿ ನ್ಯಾಯಾಲಯವು ಕಾರಣಗಳನ್ನು ದಾಖಲಿಸಿ ವ್ಯವಹರಣೆಗಳನ್ನು ಮರುದಿನದ ಆಚೆಗೆ ಮುಂದೂಡುವುದು ಅವಶ್ಯವೆಂದು ಕಂಡುಬಂದ ಹೊರತು ಹಾಜರಿರುವ ಎಲ್ಲಾ ಸಾಕ್ಷಿದಾರರನ್ನು ಪರೀಕ್ಷಿಸುವವರೆಗೆ ದಿನನಿತ್ಯ ವ್ಯವಹರಣೆಗಳನ್ನು ಮುಂದುವರೆಸತಕ್ಕದ್ದು:

ಪರಂತು, ವಿಚಾರಣೆಯು ಅಥವಾ ಅಧಿವಿಚಾರಣೆಯು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ 70ನೇ ಪ್ರಕರಣ ಅಥವಾ 71ನೇ ಪ್ರಕರಣಗಳ

ಮೇರೆಗಿನ ಅಪರಾಧಕ್ಕೆ ಸಂಬಂಧಿಸಿದ್ದರೆ, ಆ ವಿಚಾರಣೆಯನ್ನು ಅಥವಾ ಅಧಿವಿಚಾರಣೆಯನ್ನು ಸಾಧ್ಯವಿರುವಷ್ಟರಮಟ್ಟಿಗೆ ಆರೋಪ ಪಟ್ಟಿಯನ್ನು ದಾಖಲು ಮಾಡಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.

(2) ನ್ಯಾಯಾಲಯವು ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡ ತರುವಾಯ ಅಥವಾ ಅಧಿವಿಚಾರಣೆ ಪ್ರಾರಂಭವಾದ ತರುವಾಯ, ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆಯ ಪ್ರಾರಂಭವನ್ನು ಮುಂದೂಡುವುದು ಅಥವಾ ಮುಂದಕ್ಕೆ ಹಾಕುವುದು ಅವಶ್ಯಕ ಅಥವಾ ಸೂಕ್ತವೆಂದು ಅದಕ್ಕೆ ಕಂಡುಬಂದರೆ, ಅದು ಕಾಲಕಾಲಕ್ಕೆ ತಾನು ಸೂಕ್ತವೆಂದು ಭಾವಿಸುವಂಥ ಕಾಲದವರೆಗೆ ಮತ್ತು ತಾನು ಸೂಕ್ತವೆಂದು ಭಾವಿಸುವ ನಿಬಂಧನೆಗಳ ಮೇಲೆ, ಆ ಬಗ್ಗೆ ಕಾರಣಗಳನ್ನು ದಾಖಲಿಸಿ, ಅದನ್ನು ಮುಂದೂಡಬಹುದು ಅಥವಾ ಮುಂದಕ್ಕೆ ಹಾಕಬಹುದು ಮತ್ತು ಆಪಾದಿತನು ಅಭಿರಕ್ಷೆಯಲ್ಲಿದ್ದರೆ, ಅವನನ್ನು ವಾರಂಟಿನ ಮೂಲಕ ರಿಮ್ಯಾಂಡ್ ಮಾಡಬಹುದು:

ಪರಂತು, ಯಾವುದೇ ನ್ಯಾಯಾಲಯವು, ಯಾರೇ ಆಪಾದಿತ ವ್ಯಕ್ತಿಯನ್ನು ಒಂದು ಬಾರಿಗೆ ಹದಿನೈದು ದಿನಗಳಿಗೆ ಮೀರಿದ ಅವಧಿಗೆ ಅಭಿರಕ್ಷೆಯಲ್ಲಿಡಲು ಈ ಪ್ರಕರಣದ ಮೇರೆಗೆ ರಿಮ್ಯಾಂಡ್ ಮಾಡತಕ್ಕದ್ದಲ್ಲ:

ಮತ್ತು ಪರಂತು, ಸಾಕ್ಷಿದಾರರು ಹಾಜರಿದ್ದಾಗ, ವಿಶೇಷ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ಹೊರತು, ಅವರ ವಿಚಾರಣೆ ಮಾಡದೆ ಮುಂದೂಡತಕ್ಕದ್ದಲ್ಲ ಅಥವಾ ಮುಂದಕ್ಕೆ ಹಾಕತಕ್ಕದ್ದಲ್ಲ:

ಮತ್ತೂ ಪರಂತು, ಅವನ ಮೇಲೆ ವಿಧಿಸಲು ಉದ್ದೇಶಿಸಿದ ಶಿಕ್ಷೆಯ ವಿರುದ್ಧ ಕಾರಣ ತೋರಿಸುವುದಕ್ಕೆ ಆಪಾದಿತ ವ್ಯಕ್ತಿಗೆ ಅವಕಾಶ ಕೊಡುವ ಉದ್ದೇಶಕ್ಕಾಗಿ ಮಾತ್ರ ಯಾವುದೇ ಮುಂದೂಡಿಕೆಯನ್ನು ಮಾಡತಕ್ಕದ್ದಲ್ಲ:

ಮತ್ತೂ ಅಲ್ಲದೇ,-

(ಎ) ಪಕ್ಷಕಾರನ ನಿಯಂತ್ರಣಕ್ಕೆ ಮೀರಿದ ಸಂದರ್ಭಗಳು ಇದ್ದ ಹೊರತು, ಪಕ್ಷಕಾರನ ವಿನಂತಿಯ ಮೇರೆಗೆ ದಿನಾಂಕವನ್ನು ಮುಂದೂಡತಕ್ಕದ್ದಲ್ಲ;

(ಬಿ) ಪಕ್ಷಕಾರನ ನಿಯಂತ್ರಣವನ್ನೂ ಮೀರಿದ ಸನ್ನಿವೇಶಗಳಲ್ಲಿ, ಇನ್ನೊಬ್ಬ ಪಕ್ಷಕಾರನ ಆಕ್ಷೇಪಣೆಗಳನ್ನು ಆಲಿಸಿದ ತರುವಾಯ ಮತ್ತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ನ್ಯಾಯಾಲಯವು ಎರಡಕ್ಕಿಂತ ಹೆಚ್ಚು ಮುಂದೂಡಿಕೆಗಳನ್ನು ಮೀರುವಂತಿಲ್ಲ.

(ಸಿ) ಪಕ್ಷಕಾರನ ನ್ಯಾಯವಾದಿಯು ಇನ್ನೊಂದು ನ್ಯಾಯಾಲಯದಲ್ಲಿ ಕಾರ್ಯನಿರತನಾಗಿದ್ದಾನೆಂಬ ಸಂಗತಿಯು ಮುಂದೂಡಲು ಕಾರಣವಾಗತಕ್ಕದ್ದಲ್ಲ;

(ಡಿ) ಸಾಕ್ಷಿದಾರನು ನ್ಯಾಯಾಲಯದಲ್ಲಿ ಹಾಜರಿದ್ದಾಗ, ಆದರೆ ಪಕ್ಷಕಾರನು ಅಥವಾ ಆತನ ನ್ಯಾಯವಾದಿಯು ಹಾಜರಿರದಿದ್ದಾಗ ಅಥವಾ ನ್ಯಾಯಾಲಯದಲ್ಲಿ ಹಾಜರಿದ್ದಾಗ್ಯೂ ಪಕ್ಷಕಾರನು ಅಥವಾ ಆತನ ನ್ಯಾಯವಾದಿಯು ಸಾಕ್ಷಿದಾರನನ್ನು ಪರೀಕ್ಷಿಸಲು ಅಥವಾ ಪಾಟೀ-ಸವಾಲು ಮಾಡಲು ಸಿದ್ಧರಿರದಿದ್ದಾಗ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಸಾಕ್ಷಿದಾರನ ಹೇಳಿಕೆಯನ್ನು ದಾಖಲಿಸಿಕೊಳ್ಳಬಹುದು ಮತ್ತು ಸಂದರ್ಭಾನುಸಾರ ಸಾಕ್ಷಿದಾರನ ಮುಖ್ಯ ವಿಚಾರಣೆಯನ್ನು ಅಥವಾ ಪಾಟೀ-ಸವಾಲನ್ನು ಕೈಬಿಟ್ಟು ತಾನು ಸೂಕ್ತವೆಂದು ಭಾವಿಸುವ ಆದೇಶವನ್ನು ಹೊರಡಿಸಬಹುದು.

*ವಿವರಣೆ 1.-* ಆಪಾದಿತನು ಅಪರಾಧವನ್ನು ಮಾಡಿರಬಹುದೆಂದು ಸಂಶಯಪಡಲು ಸಾಕಷ್ಟು ಸಾಕ್ಷ್ಯವನ್ನು ಪಡೆದಿದ್ದರೆ ಮತ್ತು ರಿಮ್ಯಾಂಡ್ ಮಾಡುವುದರಿಂದ ಹೆಚ್ಚಿನ ಸಾಕ್ಷ್ಯವನ್ನು ಪಡೆಯಬಹುದಾದ ಸಂಭವವಿದೆಯೆಂದು ಕಂಡುಬಂದರೆ, ರಿಮ್ಯಾಂಡ್ ಮಾಡಲು ಇದು ಯುಕ್ತವಾದ ಕಾರಣವಾಗುತ್ತದೆ.

*ವಿವರಣೆ 2.-* ಮುಂದಕ್ಕೆ ಹಾಕಲು ಅಥವಾ ಮುಂದೂಡಲು ಇರುವ ನಿಬಂಧನೆಗಳು ಸೂಕ್ತವಾದ ಸಂದರ್ಭಗಳಲ್ಲಿ, ಪ್ರಾಸಿಕ್ಯೂಷನ್‌ನಿಂದ ಅಥವಾ ಆಪಾದಿತನಿಂದ ವೆಚ್ಚಗಳನ್ನು ಸಂದಾಯ ಮಾಡಬೇಕೆಂಬುದನ್ನು ಒಳಗೊಳ್ಳುತ್ತದೆ.

**347. ಸ್ಥಳೀಯ ಪರಿಶೀಲನೆ.-** (1) ಯಾರೇ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ಯಾವುದೇ ವಿಚಾರಣೆಯ, ಅಧಿವಿಚಾರಣೆಯ ಅಥವಾ ಇತರ ವ್ಯವಹರಣೆಯ ಯಾವುದೇ ಹಂತದಲ್ಲಿ, ಪಕ್ಷಕಾರರಿಗೆ ಯುಕ್ತ ನೋಟೀಸು ಕೊಟ್ಟ ತರುವಾಯ, ಎಲ್ಲಿ ಅಪರಾಧವು ನಡೆದಿದೆಯೆಂದು ಆರೋಪಿಸಲಾಗಿದೆಯೋ ಆ ಸ್ಥಳವನ್ನು ಅಥವಾ ಅಂಥ ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿ ನೀಡಿದ್ದ ಸಾಕ್ಷ್ಯವನ್ನು ಸರಿಯಾಗಿ ತಿಳಿದುಕೊಳ್ಳುವ ಉದ್ದೇಶಕ್ಕಾಗಿ, ಅವಶ್ಯಕವಾಗಿರುವಂಥ ಇತರ ಯಾವುದೇ ಸ್ಥಳಕ್ಕೆ ಭೇಟಿ ನೀಡಬೇಕೆಂದು ಆತನು ಅಭಿಪ್ರಾಯಪಟ್ಟರೆ, ಅದನ್ನು ಭೇಟಿ ನೀಡಬಹುದು ಮತ್ತು ಪರಿಶೀಲಿಸಬಹುದು ಮತ್ತು ಅಂಥ ಪರಿಶೀಲನೆಯಲ್ಲಿ ಗಮನಿಸಿದ ಯಾವುದೇ ಸುಸಂಬದ್ಧ ಸಂಗತಿಗಳ ವಿವರಣಾ ಪತ್ರವನ್ನು ಅನಗತ್ಯ ವಿಳಂಬವಿಲ್ಲದೆ ದಾಖಲಿಸತಕ್ಕದ್ದು.

(2) ಅಂಥ ವಿವರಣಪತ್ರವು ಮೊಕದ್ದಮೆಯ ದಾಖಲೆಯ ಭಾಗವಾಗಿರತಕ್ಕದ್ದು ಮತ್ತು ಪ್ರಾಸಿಕ್ಯೂಟರ್, ದೂರುದಾರ ಅಥವಾ ಆಪಾದಿತ ಅಥವಾ ಮೊಕದ್ದಮೆಯ ಇತರ ಯಾರೇ ಪಕ್ಷಕಾರನು ಆ ವಿವರಣಪತ್ರದ ಪ್ರತಿಯನ್ನು ಕೇಳಿದರೆ ಆತನಿಗೆ ಅದನ್ನು ಉಚಿತವಾಗಿ ಒದಗಿಸತಕ್ಕದ್ದು.

**348. ಮುಖ್ಯ ಸಾಕ್ಷಿದಾರನನ್ನು ಸಮನ್ ಮಾಡುವ ಅಥವಾ ಹಾಜರಿರುವ ವ್ಯಕ್ತಿಯನ್ನು ವಿಚಾರಣೆ ಮಾಡುವ ಅಧಿಕಾರ.-** ಯಾವುದೇ ನ್ಯಾಯಾಲಯವು, ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯ ಯಾವುದೇ ಹಂತದಲ್ಲಿ, ಯಾರೇ ವ್ಯಕ್ತಿಯನ್ನು ಸಾಕ್ಷಿದಾರನಾಗಿ ಸಮನ್ ಮಾಡಬಹುದು ಅಥವಾ ಹಾಜರಿರುವ ಯಾರೇ ವ್ಯಕ್ತಿಯನ್ನು, ಅವನನ್ನು ಸಾಕ್ಷಿದಾರನಾಗಿ ಸಮನ್ ಮಾಡಿಲ್ಲದಿದ್ದರೂ ವಿಚಾರಣೆ ಮಾಡಬಹುದು ಅಥವಾ ಈಗಾಗಲೇ ವಿಚಾರಣೆ ಮಾಡಲಾಗಿರುವ ಯಾರೇ ವ್ಯಕ್ತಿಯನ್ನು, ಪುನಃ ಕರೆಯಿಸಬಹುದು ಮತ್ತು ಪುನಃ ವಿಚಾರಣೆ ಮಾಡಬಹುದು ಮತ್ತು ನ್ಯಾಯಾಲಯವು, ಅಂಥ ಯಾರೇ ವ್ಯಕ್ತಿಯನ್ನು, ಅವನ ಸಾಕ್ಷ್ಯವು ಮೊಕದ್ದಮೆಯ ನ್ಯಾಯಸಮ್ಮತ ನಿರ್ಣಯಕ್ಕೆ ಅಗತ್ಯವೆಂದು ಕಂಡುಬಂದರೆ, ಅವನನ್ನು ಸಮನ್ ಮಾಡತಕ್ಕದ್ದು ಮತ್ತು ವಿಚಾರಣೆ ಮಾಡತಕ್ಕದ್ದು ಅಥವಾ ಪುನಃ ಕರೆಯತಕ್ಕದ್ದು ಮತ್ತು ಪುನಃ ವಿಚಾರಣೆ ಮಾಡತಕ್ಕದ್ದು.

**349. ಮಾದರಿ ಸಹಿಯನ್ನು ಅಥವಾ ಕೈಬರಹ, ಇತ್ಯಾದಿಯನ್ನು ಕೊಡುವಂತೆ ವ್ಯಕ್ತಿಗೆ ಆದೇಶಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.-** ಈ ಸಂಹಿತೆಯ ಮೇರೆಗಿನ ಯಾವುದೇ ತನಿಖೆಯ ಅಥವಾ ವ್ಯವಹರಣೆಯ ಉದ್ದೇಶಗಳಿಗಾಗಿ ಆಪಾದಿತ ವ್ಯಕ್ತಿಯನ್ನೂ ಒಳಗೊಂಡಂತೆ, ಯಾರೇ ವ್ಯಕ್ತಿಗೆ ಮಾದರಿ ಸಹಿಗಳನ್ನು ಅಥವಾ ಕೈಬೆರಳಿನ ಗುರುತುಗಳನ್ನು ಅಥವಾ ಕೈಬರಹವನ್ನು ಅಥವಾ ಧ್ವನಿ ಮಾದರಿಯನ್ನು ನೀಡಲು ನಿರ್ದೇಶಿಸುವುದು ವಿಹಿತ ಎಂದು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗೆ ಮನವರಿಕೆಯಾದರೆ, ಆ ಬಗ್ಗೆ ಅವನು ಆದೇಶ ಮಾಡಬಹುದು ಮತ್ತು ಅಂಥ ಸಂದರ್ಭದಲ್ಲಿ ಯಾವ ವ್ಯಕ್ತಿಗೆ ಆ ಆದೇಶವು ಸಂಬಂಧಪಟ್ಟಿರುತ್ತದೆಯೋ ಅವನನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಸಮಯದಲ್ಲಿ ಮತ್ತು ಸ್ಥಳದಲ್ಲಿ ಹಾಜರುಪಡಿಸತಕ್ಕದ್ದು ಅಥವಾ ಆತನು ಹಾಜರಾಗತಕ್ಕದ್ದು ಮತ್ತು ಆತನು ತನ್ನ ಮಾದರಿ ಸಹಿಗಳನ್ನು ಅಥವಾ ಕೈಬೆರಳಿನ ಗುರುತುಗಳನ್ನು ಅಥವಾ ಕೈಬರಹವನ್ನು ಅಥವಾ ಧ್ವನಿ ಮಾದರಿಯನ್ನು ನೀಡತಕ್ಕದ್ದು:

ಪರಂತು, ಅಂಥ ವ್ಯಕ್ತಿಯನ್ನು ಅಂಥ ತನಿಖೆಗೆ ಅಥವಾ ವ್ಯವಹರಣೆಗೆ ಸಂಬಂಧಿಸಿದಂತೆ ಯಾವಾಗಲಾದರೂ ದಸ್ತಗಿರಿ ಮಾಡಿದ್ದ ಹೊರತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ:

ಮತ್ತು ಪರಂತು, ಮ್ಯಾಜಿಸ್ಟ್ರೇಟನು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಯಾರೇ ವ್ಯಕ್ತಿಯನ್ನು ಅವನನ್ನು ಬಂಧಿಸದೆ ಅಂಥ ನಮೂನೆ ಅಥವಾ ಮಾದರಿಯನ್ನು ನೀಡುವಂತೆ ಆದೇಶಿಸಬಹುದು.

**350. ದೂರುದಾರರ ಮತ್ತು ಸಾಕ್ಷಿದಾರರ ವೆಚ್ಚಗಳು.-** ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮಗಳಿಗೊಳಪಟ್ಟು, ಯಾವುದೇ ಕ್ರಿಮಿನಲ್ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಈ ಸಂಹಿತೆಯ ಮೇರೆಗೆ ಅಂಥ ನ್ಯಾಯಾಲಯದ ಮುಂದೆ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯ ಉದ್ದೇಶಗಳಿಗಾಗಿ ಹಾಜರಾಗುವ ಯಾರೇ ದೂರುದಾರನಿಗೆ ಅಥವಾ ಸಾಕ್ಷಿದಾರನಿಗೆ ತಗಲುವ ಯುಕ್ತ ವೆಚ್ಚಗಳನ್ನು ಸರ್ಕಾರವು ಸಂದಾಯ ಮಾಡಬೇಕೆಂದು ಆದೇಶಿಸಬಹುದು.

**351. ಆಪಾದಿತನನ್ನು ವಿಚಾರಣೆ ಮಾಡುವ ಅಧಿಕಾರ.-** (1) ಪ್ರತಿಯೊಂದು ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿ, ಆಪಾದಿತನಿಗೆ, ಅವನ ವಿರುದ್ಧ ನೀಡಿರುವ ಸಾಕ್ಷ್ಯದಲ್ಲಿ ಕಂಡುಬರುವ ಯಾವುದೇ ಸನ್ನಿವೇಶಗಳನ್ನು ಖುದ್ದಾಗಿ ವಿವರಿಸಲು ಸಾಧ್ಯವಾಗಿಸುವ ಉದ್ದೇಶಗಳಿಗಾಗಿ, ನ್ಯಾಯಾಲಯವು,-

(ಎ) ಯಾವುದೇ ಹಂತದಲ್ಲಿ, ಆಪಾದಿತನಿಗೆ ಮುನ್ನೆಚ್ಚರಿಕೆ ನೀಡದೆಯೇ, ಅವಶ್ಯಕವೆಂದು ತಾನು ಪರ್ಯಾಲೋಚಿಸುವಂಥ ಪ್ರಶ್ನೆಗಳನ್ನು ಅವನಿಗೆ ಕೇಳಬಹುದು;

(ಬಿ) ಪ್ರಾಸಿಕ್ಯೂಷನ್ನಿನ ಪರವಾದ ಸಾಕ್ಷಿದಾರರನ್ನು ವಿಚಾರಣೆ ಮಾಡಿದ ತರುವಾಯ ಮತ್ತು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಅವನನ್ನು ಕರೆಯುವ ಮುನ್ನ, ಮೊಕದ್ದಮೆಯ ಬಗ್ಗೆ ಸಾಮಾನ್ಯವಾಗಿ ಅವನನ್ನು ಪ್ರಶ್ನಿಸತಕ್ಕದ್ದು:

ಪರಂತು, ಸಮನ್ ಮೊಕದ್ದಮೆಯಲ್ಲಿ, ಆಪಾದಿತನ ಖುದ್ದು ಹಾಜರಾತಿಯನ್ನು ನ್ಯಾಯಾಲಯವು ಮನ್ನಾ ಮಾಡಿರುವಾಗ, (ಬಿ) ಖಂಡದ ಮೇರೆಗೆ ಅವನ ವಿಚಾರಣೆಯನ್ನು ಸಹ ಅದು ಬಿಟ್ಟುಬಿಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಆಪಾದಿತನನ್ನು ವಿಚಾರಣೆ ಮಾಡುವಾಗ ಅವನಿಂದ ಪ್ರಮಾಣ ಮಾಡಿಸತಕ್ಕದ್ದಲ್ಲ.

(3) ಆಪಾದಿತನು ಅಂಥ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸುವುದರಿಂದ ಅಥವಾ ಅವುಗಳಿಗೆ ಸುಳ್ಳು ಉತ್ತರ ನೀಡುವುದರಿಂದ ಅವನು ದಂಡನೆಗೆ ಗುರಿಯಾಗತಕ್ಕದ್ದಲ್ಲ.

(4) ಆಪಾದಿತನು ಕೊಟ್ಟ ಉತ್ತರಗಳನ್ನು ಅಂಥ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು ಮತ್ತು ಇತರ ಯಾವುದೇ ಅಪರಾಧವನ್ನು ಅವನು ಮಾಡಿರುವನೆಂದು ತೋರಿಸಬಹುದಾದಂಥ ಉತ್ತರಗಳನ್ನು ಆ ಇತರ ಯಾವುದೇ ಅಪರಾಧದ ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಯಲ್ಲಿ ಅವನ ಪರವಾದ ಅಥವಾ ವಿರುದ್ಧವಾದ ಸಾಕ್ಷ್ಯವಾಗಿ ನೀಡಬಹುದು.

(5) ಆಪಾದಿತನಿಗೆ ಕೇಳಬೇಕಾದ ಸುಸಂಬದ್ಧ ಪ್ರಶ್ನೆಗಳನ್ನು ಸಿದ್ಧಪಡಿಸುವಲ್ಲಿ ನ್ಯಾಯಾಲಯವು ಪ್ರಾಸಿಕ್ಯೂಟರನ ಮತ್ತು ಆಪಾದಿತನ ನ್ಯಾಯವಾದಿಯ ಸಹಾಯವನ್ನು ಪಡೆದುಕೊಳ್ಳಬಹುದು ಮತ್ತು ಈ ಪ್ರಕರಣದ ಪರ್ಯಾಪ್ತ ಪಾಲನೆಗಾಗಿ ಆಪಾದಿತನು ಲಿಖಿತ ಹೇಳಿಕೆಯನ್ನು ಸಲ್ಲಿಸಲು ನ್ಯಾಯಾಲಯವು ಅನುಮತಿಸಬಹುದು.

**352. ಮೌಖಿಕ ವಾದಗಳು ಮತ್ತು ವಾದಗಳ ವಿವರಣಪತ್ರ.-** (1) ವ್ಯವಹರಣೆಯ ಯಾರೇ ಪಕ್ಷಕಾರನು, ತನ್ನ ಸಾಕ್ಷ್ಯವು ಮುಗಿದ ತರುವಾಯ, ಸಾಧ್ಯವಾದಷ್ಟು ಬೇಗನೆ ಸಂಕ್ಷಿಪ್ತವಾಗಿ ವಾದಗಳನ್ನು ಮಾಡಬಹುದು ಮತ್ತು ಅವನು ತನ್ನ ಮೌಖಿಕ

ವಾದಗಳು ಯಾವುದಾದರೂ ಇದ್ದರೆ ಮುಗಿಸುವ ಮುನ್ನ, ತನ್ನ ನಿಲುವನ್ನು ಸಮರ್ಥಿಸುವ ವಾದಗಳನ್ನು ಸಂಕ್ಷಿಪ್ತವಾಗಿ ಮತ್ತು ಪ್ರತ್ಯೇಕ ಶೀರ್ಷಿಕೆಗಳಲ್ಲಿ ತಿಳಿಸುವ ಒಂದು ವಿವರಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದು ಮತ್ತು ಅಂಥ ಪ್ರತಿಯೊಂದು ವಿವರಣಪತ್ರವು ದಾಖಲೆಯ ಭಾಗವಾಗಿರತಕ್ಕದ್ದು.

(2) ಅಂಥ ಪ್ರತಿಯೊಂದು ವಿವರಣಪತ್ರದ ಪ್ರತಿಯನ್ನು ಎದುರು ಪಕ್ಷಕಾರನಿಗೆ ಏಕಕಾಲದಲ್ಲಿ ಒದಗಿಸತಕ್ಕದ್ದು.

(3) ನ್ಯಾಯಾಲಯವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ವ್ಯವಹರಣೆಗಳನ್ನು ಹಾಗೆ ಮುಂದಕ್ಕೆ ಹಾಕುವುದು ಅವಶ್ಯಕವೆಂದು ಪರ್ಯಾಲೋಚಿಸಿದ ಹೊರತು, ಲಿಖಿತ ವಾದಗಳನ್ನು ದಾಖಲು ಮಾಡುವ ಉದ್ದೇಶಕ್ಕಾಗಿ ಯಾವುದೇ ವ್ಯವಹರಣೆಗಳನ್ನು ಮುಂದಕ್ಕೆ ಹಾಕತಕ್ಕದ್ದಲ್ಲ.

(4) ನ್ಯಾಯಾಲಯವು, ಮೌಖಿಕ ವಾದಗಳು ಸಂಕ್ಷಿಪ್ತವಾಗಿಲ್ಲವೆಂದು ಅಥವಾ ಸುಸಂಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ, ಅಂಥ ವಾದಗಳನ್ನು ನಿಯಂತ್ರಿಸಬಹುದು.

**353. ಆಪಾದಿತ ವ್ಯಕ್ತಿಯು ಸಕ್ಷಮ ಸಾಕ್ಷಿದಾರನಾಗಿರುವುದು.-** (1) ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದ ಮುಂದೆ ಆಪಾದಿತನಾದ ಯಾರೇ ವ್ಯಕ್ತಿಯು, ಪ್ರತಿರಕ್ಷೆಗೆ ಸಂಬಂಧಿಸಿದಂತೆ ಸಕ್ಷಮ ಸಾಕ್ಷಿದಾರನಾಗಿರತಕ್ಕದ್ದು ಮತ್ತು ಅವನು ತನ್ನ ವಿರುದ್ಧ ಅಥವಾ ಅದೇ ಅಧಿವಿಚಾರಣೆಯಲ್ಲಿ ತನ್ನೊಂದಿಗೆ ಆರೋಪಿತನಾದ ಯಾರೇ ವ್ಯಕ್ತಿಯ ವಿರುದ್ಧ ಮಾಡಿರುವ ಆರೋಪಗಳು ಸರಿಯಲ್ಲವೆಂದು ಪ್ರಮಾಣ ಮಾಡಿ ಸಾಕ್ಷ್ಯ ನೀಡಬಹುದು:

ಪರಂತು,-

(ಎ) ಅವನ ಲಿಖಿತ ಕೋರಿಕೆಯ ಮೇರೆಗೆ ಹೊರತು ಅವನನ್ನು ಸಾಕ್ಷಿದಾರರನನ್ನಾಗಿ ಕರೆಯತಕ್ಕದ್ದಲ್ಲ;

(ಬಿ) ಅವನು ಸಾಕ್ಷ್ಯ ನೀಡಲು ವಿಫಲನಾಗಿರುವುದು ಯಾರೇ ಪಕ್ಷಕಾರರ ಅಥವಾ ನ್ಯಾಯಾಲಯದ ಯಾವುದೇ ಟೀಕೆಗೆ ವಸ್ತುವಾಗತಕ್ಕದ್ದಲ್ಲ ಅಥವಾ ಅವನ ವಿರುದ್ಧ ಅಥವಾ ಅದೇ ಅಧಿವಿಚಾರಣೆಯಲ್ಲಿ ಅವನೊಂದಿಗೆ ಆರೋಪಿತನಾದ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಪೂರ್ವಭಾವನೆಗೆ ಅವಕಾಶ ನೀಡತಕ್ಕದ್ದಲ್ಲ.

(2) 101ನೇ ಪ್ರಕರಣ ಅಥವಾ 126ನೇ ಪ್ರಕರಣ ಅಥವಾ 127ನೇ ಪ್ರಕರಣ ಅಥವಾ 128ನೇ ಪ್ರಕರಣ ಅಥವಾ 129ನೇ ಪ್ರಕರಣದ ಮೇರೆಗೆ ಅಥವಾ ನೇ ಅಧ್ಯಾಯದ ಮೇರೆಗೆ ಅಥವಾ Iನೇ ಅಧ್ಯಾಯದ 'ಬಿ' ಭಾಗ, 'ಸಿ' ಭಾಗ ಅಥವಾ 'ಡಿ' ಭಾಗದ ಮೇರೆಗೆ ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿ, ಯಾರ ವಿರುದ್ಧ ವ್ಯವಹರಣೆಗಳನ್ನು ಹೂಡಲಾಗಿದೆಯೋ ಆ ವ್ಯಕ್ತಿಯು ಅಂಥ ವ್ಯವಹರಣೆಗಳಲ್ಲಿ ತಾನೇ ಸಾಕ್ಷಿದಾರನಾಗಬಹುದು:

ಪರಂತು, 127ನೇ ಪ್ರಕರಣ, 128ನೇ ಪ್ರಕರಣ ಅಥವಾ 129ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳಲ್ಲಿ, ಅಂಥ ವ್ಯಕ್ತಿಯು ಸಾಕ್ಷ್ಯ ನೀಡಲು ವಿಫಲನಾಗಿರುವುದು ಯಾರೇ ಪಕ್ಷಕಾರನ ಅಥವಾ ನ್ಯಾಯಾಲಯದ ಯಾವುದೇ ಟೀಕೆಗೆ ವಸ್ತುವಾಗತಕ್ಕದ್ದಲ್ಲ ಅಥವಾ ಅವನ ವಿರುದ್ಧ ಅಥವಾ ಅದೇ ವಿಚಾರಣೆಯಲ್ಲಿ ಅವನೊಂದಿಗೆ ವ್ಯವಹರಣೆಗೆ ಒಳಪಟ್ಟ ಆತನ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಪೂರ್ವಭಾವನೆಗೆ ಅವಕಾಶ ನೀಡತಕ್ಕದ್ದಲ್ಲ.

**354. ವಿಷಯವನ್ನು ಬಹಿರಂಗಪಡಿಸಲು ಪ್ರೇರೇಪಿಸುವಂತೆ ಪ್ರಭಾವ ಬೀರದಿರುವುದು.-** ಆಪಾದಿತ ವ್ಯಕ್ತಿಗೆ ತಿಳಿದಿರುವ ಯಾವುದೇ ವಿಷಯವನ್ನು ಬಹಿರಂಗಪಡಿಸುವಂತೆ ಅಥವಾ ಬಹಿರಂಗಪಡಿಸದಿರುವಂತೆ ಪ್ರೇರೇಪಿಸಲು, 343ನೇ ಮತ್ತು 344ನೇ ಪ್ರಕರಣಗಳಲ್ಲಿ ಉಪಬಂಧಿಸಿದಂತೆ ಹೊರತು, ಯಾವುದೇ ವಾಗ್ದಾನದ ಅಥವಾ ಬೆದರಿಕೆಯ ಅಥವಾ ಅನ್ಯಥಾ ಯಾವುದೇ ಪ್ರಭಾವವನ್ನು ಅವನ ಮೇಲೆ ಬೀರತಕ್ಕದ್ದಲ್ಲ.

**355. ಕೆಲವು ಸಂದರ್ಭಗಳಲ್ಲಿ ಆಪಾದಿತನ ಗೈರುಹಾಜರಿಯಲ್ಲಿ ನಡೆಯುವ ವಿಚಾರಣೆಗಳ ಹಾಗೂ ಅಧಿವಿಚಾರಣೆಗಳ ಬಗ್ಗೆ ಉಪಬಂಧ.-** (1) ಈ ಸಂಹಿತೆಯ ಮೇರೆಗಿನ ವಿಚಾರಣೆಯ ಅಥವಾ ಅಧಿವಿಚಾರಣೆಯ ಯಾವುದೇ ಹಂತದಲ್ಲಿ, ನ್ಯಾಯೋದ್ದೇಶಗಳಿಗಾಗಿ ನ್ಯಾಯಾಲಯದಲ್ಲಿ ಆಪಾದಿತನ ಖುದ್ದು ಹಾಜರಾತಿಯು ಅವಶ್ಯವಿಲ್ಲವೆಂದು ಅಥವಾ ಆಪಾದಿತನು ನ್ಯಾಯಾಲಯದಲ್ಲಿನ ವ್ಯವಹರಣೆಗೆ ಮತ್ತೆ ಮತ್ತೆ ತೊಂದರೆಯುಂಟು ಮಾಡುತ್ತಿದ್ದಾನೆಂದು ನ್ಯಾಯಾಧೀಶನಿಗೆ ಅಥವಾ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಈ ಬಗ್ಗೆ ಕಾರಣಗಳನ್ನು ದಾಖಲಿಸಿ, ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ಆಪಾದಿತನು ನ್ಯಾಯವಾದಿಯ ಮೂಲಕ ಪ್ರತಿನಿಧಿತನಾಗಿದ್ದರೆ, ಅವನ ಹಾಜರಾತಿಯನ್ನು ಮನ್ನಾ ಮಾಡಬಹುದು ಮತ್ತು ಅವನ ಗೈರುಹಾಜರಿಯಲ್ಲಿ ಅಂಥ ವಿಚಾರಣೆ ಅಥವಾ ಅಧಿವಿಚಾರಣೆಯನ್ನು ಮುಂದುವರಿಸಬಹುದು ಮತ್ತು ವ್ಯವಹರಣೆಗಳ ಯಾವುದೇ ತರುವಾಯದ ಹಂತದಲ್ಲಿ, ಅಂಥ ಆಪಾದಿತನ ಖುದ್ದು ಹಾಜರಾತಿಗೆ ನಿರ್ದೇಶಿಸಬಹುದು.

(2) ಅಂಥ ಯಾವುದೇ ಮೊಕದ್ದಮೆಯಲ್ಲಿ ಆಪಾದಿತನು ನ್ಯಾಯವಾದಿಯ ಮೂಲಕ ಪ್ರತಿನಿಧಿತನಾಗಿಲ್ಲದಿದ್ದರೆ ಅಥವಾ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ಅವನ ಖುದ್ದು ಹಾಜರಾತಿಯು ಅವಶ್ಯವೆಂದು ಪರಿಗಣಿಸಿದರೆ, ತಾನು ಸೂಕ್ತವೆಂದು ಭಾವಿಸುವ ಮತ್ತು ಆ ಬಗ್ಗೆ ಕಾರಣಗಳನ್ನು ದಾಖಲಿಸಿ, ಅಂಥ ವಿಚಾರಣೆಯನ್ನು ಅಥವಾ ಅಧಿವಿಚಾರಣೆಯನ್ನು ಮುಂದಕ್ಕೆ ಹಾಕಬಹುದು ಅಥವಾ ಅಂಥ ಆಪಾದಿತನು ಮೊಕದ್ದಮೆಯನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಲು ಅಥವಾ ಅಧಿವಿಚಾರಣೆ ಮಾಡಲು ಆದೇಶಿಸಬಹುದು.

*ವಿವರಣೆ:-* ಈ ಪ್ರಕರಣದ ಉದ್ದೇಶಕ್ಕಾಗಿ, ಆಪಾದಿತನ ಖುದ್ದು ಹಾಜರಾತಿಯು ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನ ಮುಖಾಂತರದ ಹಾಜರಾತಿಯನ್ನೂ ಒಳಗೊಳ್ಳುತ್ತದೆ.

**356. ಉದ್ಘೋಷಿತ ಅಪರಾಧಿಯ ಗೈರುಹಾಜರಿಯಲ್ಲಿ ವಿಚಾರಣೆ, ಅಧಿವಿಚಾರಣೆ ಅಥವಾ ತೀರ್ಪು.-** (1) ಈ ಸಂಹಿತೆಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಉದ್ಘೋಷಿತ ಅಪರಾಧಿಯೆಂದು ಘೋಷಿಸಲಾದ ವ್ಯಕ್ತಿಯು ಜಂಟಿಯಾಗಿ ಆಪಾದಿತನಾಗಿರಲಿ ಅಥವಾ ಇಲ್ಲದಿರಲಿ, ಅಧಿವಿಚಾರಣೆ ತಪ್ಪಿಸಿಕೊಳ್ಳಲು ತಲೆಮರೆಸಿಕೊಂಡಿದ್ದಾನೆಂದು ಮತ್ತು ಆತನನ್ನು ದಸ್ತಗಿರಿ ಮಾಡುವ ಯಾವುದೇ ತ್ವರಿತ ಸಂಭಾವ್ಯತೆಯಿಲ್ಲವೆಂದು, ಹಾಜರಿರಬೇಕಾದಂಥ ವ್ಯಕ್ತಿಯ ಮತ್ತು ವಿಚಾರಣೆಗೆ ಒಳಪಡಬೇಕಾದಂಥ ವ್ಯಕ್ತಿಯ ಹಕ್ಕನ್ನು ಮನ್ನಾ ಮಾಡುವಂತೆ ಕಾರ್ಯನಿರ್ವಹಿಸುತ್ತದೆ ಎಂದು ಭಾವಿಸತಕ್ಕದ್ದು ಮತ್ತು ನ್ಯಾಯಾಲಯವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ತರುವಾಯ, ನ್ಯಾಯೋದ್ದೇಶದಿಂದ, ಈ ಸಂಹಿತೆಯ ಮೇರೆಗೆ ಅವನು ಹಾಜರಿದ್ದರೆ ಹೇಗೋ ಹಾಗೆ ಅಂಥ ರೀತಿಯಲ್ಲಿ ಮತ್ತು ಅಂಥ ಪರಿಣಾಮದೊಂದಿಗೆ ಅಧಿವಿಚಾರಣೆಯನ್ನು ಮುಂದುವರಿಸತಕ್ಕದ್ದು ಮತ್ತು ತೀರ್ಪನ್ನು ಘೋಷಿಸತಕ್ಕದ್ದು:

ಪರಂತು, ಆರೋಪವನ್ನು ರೂಪಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯು ಕಳೆದುಹೋದ ಹೊರತು ನ್ಯಾಯಾಲಯವು ಅಧಿವಿಚಾರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(2) ನ್ಯಾಯಾಲಯವು ಈ ಮುಂದಿನ ಪ್ರಕ್ರಿಯೆಯ (1)ನೇ ಉಪಪ್ರಕರಣದ ಮೇರೆಗೆ ಹಿಂದಿನ ವ್ಯವಹರಣೆಯನ್ನು ಅನುಸರಿಸಲಾಗುತ್ತಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು, ಎಂದರೆ:-

(i) ಕನಿಷ್ಠ ಮೂವತ್ತು ದಿನಗಳ ಅಂತರದೊಳಗೆ ಎರಡು ನಿರಂತರ ಬಂಧನ ವಾರಂಟ್ ಗಳನ್ನು ನೀಡುವುದು;

(ii) ಉದ್ಘೋಷಿತ ಆಪಾದಿತನು ಕೊನೆಯಲ್ಲಿ ತಿಳಿಸಿರುವ ಅವನ ವಾಸಸ್ಥಳದ ವಿಳಾಸದ ಸ್ಥಳದಲ್ಲಿ ಪ್ರಸಾರವಾಗುವ ರಾಷ್ಟ್ರೀಯ ಅಥವಾ ಸ್ಥಳೀಯ ದೈನಂದಿನ ವೃತ್ತಪತ್ರಿಕೆಯಲ್ಲಿ ಪ್ರಕಟಿಸಿ, ಅಧಿವಿಚಾರಣೆಗಾಗಿ

ನ್ಯಾಯಾಲಯದ ಮುಂದೆ ಹಾಜರಾಗಲು ಅಗತ್ಯಪಡಿಸುವುದು ಮತ್ತು ಅಂಥ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಹಾಜರಾಗಲು ಅವನು ವಿಫಲನಾದ ಸಂದರ್ಭದಲ್ಲಿ, ಅವನ ಗೈರುಹಾಜರಿಯಲ್ಲಿ ಅಧಿವಿಚಾರಣೆಯನ್ನು ಪ್ರಾರಂಭಿಸಲಾಗುವುದೆಂದು ಪ್ರಕಟಿಸುವುದು;

(iii) ಅವನ ಸಂಬಂಧಿಕರು ಅಥವಾ ಸ್ನೇಹಿತರು ಯಾರಾದರೂ ಇದ್ದರೆ, ಅಧಿವಿಚಾರಣೆಯ ಪ್ರಾರಂಭದ ಬಗ್ಗೆ ಅವರಿಗೆ ತಿಳಿಸುವುದು; ಮತ್ತು

(iv)ಅಂಥ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಮನೆ ಅಥವಾ ವಸತಿ ಸಂಕೀರ್ಣದ ಕೆಲವು ಎದ್ದುಕಾಣುವ ಸ್ಥಳದಲ್ಲಿ ಅಧಿವಿಚಾರಣೆಯ ಪ್ರಾರಂಭದ ಕುರಿತು ಮಾಹಿತಿಯನ್ನು ಅಂಟಿಸುವುದು ಮತ್ತು ಕೊನೆಯಲ್ಲಿ ತಿಳಿದಿರುವ ಅವನ ನಿವಾಸದ ವಿಳಾಸದ ಜಿಲ್ಲೆಯ ಪೊಲೀಸ್ ಠಾಣೆಯಲ್ಲಿ ಪ್ರದರ್ಶಿಸುವುದು.

(3) ಉದ್ಘೋಷಿತ ಆಪಾದಿತನನ್ನು ಯಾರೇ ನ್ಯಾಯವಾದಿಯು ಪ್ರತಿನಿಧಿಸಿರದಿದ್ದರೆ, ಅವನಿಗೆ ರಾಜ್ಯದ ವೆಚ್ಚದಲ್ಲಿ ಅವನ ಪ್ರತಿರಕ್ಷೆಗಾಗಿ ನ್ಯಾಯವಾದಿಯನ್ನು ಒದಗಿಸತಕ್ಕದ್ದು.

(4) ನ್ಯಾಯಾಲಯವು, ಪ್ರಕರಣವನ್ನು ಅಧಿವಿಚಾರಣೆ ಮಾಡಲು ಅಥವಾ ಅಧಿವಿಚಾರಣೆಗಾಗಿ ಒಪ್ಪಿಸಲು ಪ್ರಾಸಿಕ್ಯೂಷನಿಗಾಗಿ ಯಾರೇ ಸಾಕ್ಷಿದಾರರನ್ನು ಪರೀಕ್ಷಿಸಿದ್ದಲ್ಲಿ ಮತ್ತು ಅವರ ಹೇಳಿಕೆಗಳನ್ನು ದಾಖಲಿಸಿದ್ದಲ್ಲಿ, ಅಂಥ ಹೇಳಿಕೆಗಳನ್ನು ಅಂಥ ಉದ್ಘೋಷಿತ ಆಪಾದಿತನ ವಿರುದ್ಧ ಅವನು ಆರೋಪಿಸಿರುವ ಅಪರಾಧದ ವಿಚಾರಣೆಯಲ್ಲಿ ಅಥವಾ ಅಧಿವಿಚಾರಣೆಗೆ ಸಾಕ್ಷ್ಯವಾಗಿ ನೀಡತಕ್ಕದ್ದು:

ಪರಂತು, ಉದ್ಘೋಷಿತ ಆಪಾದಿತನನ್ನು ಬಂಧಿಸಿದ್ದರೆ ಮತ್ತು ಅಂಥ ಅಧಿವಿಚಾರಣೆಯ ಅವಧಿಯಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದರೆ ಅಥವಾ ಹಾಜರಾದರೆ ನ್ಯಾಯಾಲಯವು, ನ್ಯಾಯೋದ್ದೇಶದಿಂದ ಅವನ ಗೈರುಹಾಜರಿಯಲ್ಲಿ ತೆಗೆದುಕೊಂಡ ಯಾವುದೇ ಸಾಕ್ಷ್ಯವನ್ನು ಪರೀಕ್ಷಿಸಲು ಅವನಿಗೆ ಅನುಮತಿ ನೀಡಬಹುದು.

(5) ಅಧಿವಿಚಾರಣೆಯು, ಈ ಪ್ರಕರಣದ ಮೇರೆಗಿನ ವ್ಯಕ್ತಿಗೆ ಸಂಬಂಧಿಸಿರುವಲ್ಲಿ ಸಾಕ್ಷಿದಾರನ ಹೇಳಿಕೆ ಮತ್ತು ವಿಚಾರಣೆಯನ್ನು ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ, ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನದ ಮೂಲಕ ಮುಖ್ಯವಾಗಿ ಮೊಬೈಲ್ ದೂರವಾಣಿಯ ಮೂಲಕ ದಾಖಲಿಸಬಹುದು ಮತ್ತು ಅಂಥ ದಾಖಲೆಯನ್ನು ನ್ಯಾಯಾಲಯವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಇಡತಕ್ಕದ್ದು.

(6) ಈ ಸಂಹಿತೆಯ ಮೇರೆಗೆ ಅಪರಾಧಗಳಿಗಾಗಿನ ಪ್ರಾಸಿಕ್ಯೂಷನ್ನಲ್ಲಿ, (1)ನೇ ಉಪಪ್ರಕರಣದ ಮೇರೆಗೆ ಅಧಿವಿಚಾರಣೆಯನ್ನು ಪ್ರಾರಂಭಿಸಿದ ನಂತರ ಆಪಾದಿತನ ಸ್ವಯಂ ಗೈರುಹಾಜರಿಯು, ಅಂಥ ವಿಚಾರಣೆಯ ಕೊನೆಯಲ್ಲಿ ಆತನನ್ನು ಬಂಧಿಸಿದ್ದರೂ ಮತ್ತು ಹಾಜರುಪಡಿಸಿದರೂ ಅಥವಾ ಹಾಜರಾದರೂ ಸಹ ತೀರ್ಪಿನ ಉಚ್ಚರಣೆಯೂ ಸೇರಿದಂತೆ ಅಧಿವಿಚಾರಣೆಯನ್ನು ಮುಂದುವರಿಸುವುದನ್ನು ತಡೆಯತಕ್ಕದ್ದಲ್ಲ.

(7) ಉದ್ಘೋಷಿತ ಆಪಾದಿತನು ತಾನು ಅಪೀಲು ನ್ಯಾಯಾಲಯದ ಮುಂದೆ ಸ್ವಯಂ ಹಾಜರಾಗದ ಹೊರತು ಈ ಪ್ರಕರಣದ ಮೇರೆಗಿನ ತೀರ್ಪಿನ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ:

ಪರಂತು, ತೀರ್ಪಿನ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯದ ತರುವಾಯ ಅಪರಾಧ ನಿರ್ಣಯದ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ.

(8) ರಾಜ್ಯವು ಅಧಿಸೂಚನೆಯ ಮೂಲಕ, 84ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಮೂದಿಸಿದ ತಲೆಮರೆಸಿಕೊಂಡಿರುವ ಯಾರೇ ವ್ಯಕ್ತಿಗೆ ಈ ಪ್ರಕರಣದ ಉಪಬಂಧಗಳನ್ನು ವಿಸ್ತರಿಸಬಹುದು.

**357. ಆಪಾದಿತನು ವ್ಯವಹರಣೆಗಳನ್ನು ಅರ್ಥ ಮಾಡಿಕೊಳ್ಳದಿರುವಾಗ ಪ್ರಕ್ರಿಯೆ.-** ಅಸ್ವಸ್ಥಚಿತ್ತದವನಲ್ಲದಿದ್ದರೂ, ಆಪಾದಿತನಿಗೆ, ವ್ಯವಹರಣೆಗಳನ್ನು ಅರ್ಥ ಮಾಡಿಸಲು ಆಗದಿದ್ದರೆ, ನ್ಯಾಯಾಲಯವು ವಿಚಾರಣೆ ಅಥವಾ ಅಧಿವಿಚಾರಣೆಯನ್ನು ಮುಂದುವರಿಸಬಹುದು ಮತ್ತು ಉಚ್ಚ ನ್ಯಾಯಾಲಯವಲ್ಲದ ಬೇರೆ ನ್ಯಾಯಾಲಯದ ಸಂದರ್ಭದಲ್ಲಿ, ಅಂಥ ವ್ಯವಹರಣೆಗಳಲ್ಲಿ ಅಪರಾಧ ನಿರ್ಣಯವಾದರೆ, ಮೊಕದ್ದಮೆಯ ಪರಿಸ್ಥಿತಿಗಳ ವರದಿಯೊಂದಿಗೆ ವ್ಯವಹರಣೆಗಳನ್ನು ಉಚ್ಚ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು.

**358. ಅಪರಾಧದ ಬಗ್ಗೆ ದೋಷಿಗಳೆಂದು ಕಂಡುಬರುವ ಇತರ ವ್ಯಕ್ತಿಗಳ ವಿರುದ್ಧ ವ್ಯವಹರಣೆ ನಡೆಸುವ ಅಧಿಕಾರ.-** (1) ಅಪರಾಧದ ವಿಚಾರಣೆ ಅಥವಾ ಅಧಿವಿಚಾರಣೆ ನಡೆಯುತ್ತಿರುವಾಗ, ಆಪಾದಿತನಲ್ಲದ ಯಾರೇ ವ್ಯಕ್ತಿಯು ಆ ಯಾವುದೇ ಅಪರಾಧ ಮಾಡಿರುವನೆಂದು ಮತ್ತು ಅದಕ್ಕಾಗಿ ಅಂಥ ವ್ಯಕ್ತಿಯನ್ನು ಆಪಾದಿತನೊಂದಿಗೆ ಒಟ್ಟಿಗೆ ಅಧಿವಿಚಾರಣೆ ಮಾಡಬಹುದೆಂದು ಸಾಕ್ಷ್ಯದಿಂದ ಕಂಡುಬಂದರೆ, ನ್ಯಾಯಾಲಯವು ಅಂಥ ವ್ಯಕ್ತಿಯ ವಿರುದ್ಧ ಅವನು ಅಪರಾಧ ಮಾಡಿರುವುದಾಗಿ ಕಂಡುಬರುವ ಅಪರಾಧಕ್ಕಾಗಿ ವ್ಯವಹರಣೆ ನಡೆಸಬಹುದು.

(2) ಅಂಥ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗದಿದ್ದಾಗ, ಮೇಲೆ ಹೇಳಿದ ಉದ್ದೇಶಕ್ಕಾಗಿ, ಮೊಕದ್ದಮೆಯ ಪರಿಸ್ಥಿತಿಗಳು ಅಗತ್ಯಪಡಿಸಬಹುದಾದಂತೆ, ಅವನನ್ನು ದಸ್ತಗಿರಿ ಮಾಡಬಹುದು ಅಥವಾ ಸಮನ್ ಮಾಡಬಹುದು.

(3) ದಸ್ತಗಿರಿ ಮಾಡದಿದ್ದರೂ ಅಥವಾ ಸಮನ್ ಮಾಡದಿದ್ದರೂ, ನ್ಯಾಯಾಲಯದಲ್ಲಿ ಹಾಜರಾಗುವ ಯಾರೇ ವ್ಯಕ್ತಿಯನ್ನು, ಅವನು ಮಾಡಿರುವುದಾಗಿ ಕಂಡುಬರುವ ಅಪರಾಧದ ವಿಚಾರಣೆಯ ಅಥವಾ ಅಧಿವಿಚಾರಣೆಯ ಉದ್ದೇಶಕ್ಕಾಗಿ ಅಂಥ ನ್ಯಾಯಾಲಯವು ತಡೆಹಿಡಿದಿರಿಸಬಹುದು.

(4) (1)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯ ವಿರುದ್ಧ ನ್ಯಾಯಾಲಯವು ವ್ಯವಹರಣೆ ನಡೆಸುವಲ್ಲಿ,-

(ಎ) ಅಂಥ ವ್ಯಕ್ತಿಯ ಬಗೆಗಿನ ವ್ಯವಹರಣೆಗಳನ್ನು ಹೊಸದಾಗಿ ಪ್ರಾರಂಭಿಸತಕ್ಕದ್ದು ಮತ್ತು ಸಾಕ್ಷಿದಾರರನ್ನು ಪುನಃ ವಿಚಾರಣೆ ಮಾಡತಕ್ಕದ್ದು;

(ಬಿ) ಖಂಡ (ಎ)ಯ ಉಪಬಂಧಗಳಿಗೊಳಪಟ್ಟು, ಯಾವ ಅಪರಾಧದ ಬಗ್ಗೆ ವಿಚಾರಣೆ ಅಥವಾ ಅಧಿವಿಚಾರಣೆ ಪ್ರಾರಂಭವಾಯಿತೋ ಆ ಅಪರಾಧದ ಬಗ್ಗೆ ನ್ಯಾಯಾಲಯವು ಸಂಜ್ಞಾನವನ್ನು ತೆಗೆದುಕೊಂಡಾಗಲೇ ಅಂಥ ವ್ಯಕ್ತಿಯು ಆಪಾದಿತನಾಗಿದ್ದಾನೆಂಬಂತೆ, ಮೊಕದ್ದಮೆಯನ್ನು ಮುಂದುವರಿಸಬಹುದು.

**359. ಅಪರಾಧಗಳ ಬಗ್ಗೆ ರಾಜಿ.-** (1) ಈ ಮುಂದಿನ ಕೋಷ್ಟಕದ ಮೊದಲ ಎರಡು ಅಂಕಣಗಳಲ್ಲಿ ನಿರ್ದಿಷ್ಟಪಡಿಸಿದ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳ ಬಗ್ಗೆ ಕೋಷ್ಟಕದ ಮೂರನೇ ಅಂಕಣದಲ್ಲಿ ನಮೂದಿಸಿದ ವ್ಯಕ್ತಿಗಳು ರಾಜಿ ಮಾಡಿಕೊಳ್ಳಬಹುದು:-

| **ಕೋಷ್ಟಕ** |
|---|

| ಅಪರಾಧ | ಅನ್ವಯವಾಗುವ ಭಾರತೀಯ ನ್ಯಾಯ ಸಂಹಿತೆ, 2023 ರ ಪ್ರಕರಣ | ಅಪರಾಧದ ಬಗ್ಗೆ ರಾಜಿ ಮಾಡಿ ಮಾಡಿಕೊಳ್ಳಬಹುದಾದ ವ್ಯಕ್ತಿ |
|---|---|---|
| 1 | 2 | 3 |
| ವಿವಾಹಿತ ಮಹಿಳೆಯನ್ನು ಆಪರಾಧಿಕ ಉದ್ದೇಶದಿಂದ ಪುಸಲಾಯಿಸುವುದು ಅಥವಾ ಕರೆದುಕೊಂಡು ಹೋಗುವುದು ಅಥವಾ ತಡೆಹಿಡಿದಿಡುವುದು | 84 | ಮಹಿಳೆಯ ಪತಿ ಮತ್ತು ಮಹಿಳೆ |
| ಸ್ವಇಚ್ಛೆಯಿಂದ ಗಾಯವನ್ನುಂಟು ಮಾಡುವುದು | 115(2) | ಯಾವ ವ್ಯಕ್ತಿಗೆ ಗಾಯವನ್ನುಂಟು ಮಾಡಲಾಗಿದೆಯೋ ಆ ವ್ಯಕ್ತಿ. |
| ಉದ್ರೇಕಗೊಂಡು ಸ್ವಇಚ್ಛೆಯಿಂದ ಗಾಯವನ್ನುಂಟು ಮಾಡುವುದು | 122(1) | ಯಾವ ವ್ಯಕ್ತಿಗೆ ಗಾಯವನ್ನುಂಟು ಮಾಡಲಾಗಿದೆಯೋ ಆ ವ್ಯಕ್ತಿ |
| ತೀವ್ರ ಮತ್ತು ಹಠಾತ್ ಉದ್ರೇಕಗೊಂಡು ಸ್ವಇಚ್ಛೆಯಿಂದ ತೀವ್ರಗಾಯವನ್ನುಂಟು ಮಾಡುವುದು | 122(2) | ಯಾವ ವ್ಯಕ್ತಿಗೆ ಗಾಯವನ್ನುಂಟು ಮಾಡಲಾಗಿದೆಯೋ ಆ ವ್ಯಕ್ತಿ. |
| ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ನಿರ್ಬಂಧಿಸುವುದು ಅಥವಾ ಬಂಧಿಸುವುದು | 126(2), 127(2) | ನಿರ್ಬಂಧಿಸಲಾದ ಅಥವಾ ಬಂಧಿಸಿಡಲಾದ ವ್ಯಕ್ತಿ. |
| ವ್ಯಕ್ತಿಯನ್ನು ಮೂರು ಅಥವಾ ಹೆಚ್ಚು ದಿನಗಳವರೆಗೆ ಅಕ್ರಮವಾಗಿ ಬಂಧಿಸುವುದು | 127(3) | ಬಂಧಿಸಿಡಲಾದ ವ್ಯಕ್ತಿ. |
| ವ್ಯಕ್ತಿಯನ್ನು ಹತ್ತು ಅಥವಾ ಹೆಚ್ಚು ದಿನಗಳವರೆಗೆ ಅಕ್ರಮವಾಗಿ ಬಂಧಿಸುವುದು | 127(4) | ಬಂಧಿಸಿಡಲಾದ ವ್ಯಕ್ತಿ. |
| ವ್ಯಕ್ತಿಯನ್ನು ಗುಪ್ತವಾಗಿ ಅಕ್ರಮ ಬಂಧಿಸುವುದು | 127(6) | ಬಂಧಿಸಿಡಲಾದ ವ್ಯಕ್ತಿ. |
| ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗ | 131, 133, 136 | ಹಲ್ಲೆಗೆ ಅಥವಾ ಆಪರಾಧಿಕ ಬಲಪ್ರಯೋಗಕ್ಕೆ ಒಳಗಾದ ವ್ಯಕ್ತಿ. |
| ಯಾರೇ ವ್ಯಕ್ತಿಯ ಧಾರ್ಮಿಕ ಭಾವನೆಗಳಿಗೆ ಬುದ್ಧಿಪೂರ್ವಕವಾಗಿ ನೋವುಂಟು ಮಾಡುವ ಉದ್ದೇಶದಿಂದ ಪದಗಳು, ಇತ್ಯಾದಿಗಳನ್ನು ಉಚ್ಚರಿಸುವುದು | 302 | ಯಾವ ವ್ಯಕ್ತಿಯ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವ ಉದ್ದೇಶಿಸಿರುವ ವ್ಯಕ್ತಿ. |
| ಕಳವು. | 303(2) | ಕಳವು ಮಾಡಲಾಗಿರುವ ಸ್ವತ್ತಿನ ಒಡೆಯ. |
| ಸ್ವತ್ತಿನ ಅಪ್ರಾಮಾಣಿಕ ದುರ್ವಿನಿಯೋಗ. | 314 | ದುರ್ವಿನಿಯೋಗಪಡಿಸಿಕೊಂಡ ಸ್ವತ್ತಿನ ಒಡೆಯ. |

| | | |
|---|---|---|
| ಸಾಗಣೆದಾರ, ಬಂದರುಕಟ್ಟೆ, ಇತ್ಯಾದಿಯವರಿಂದ ಆಪರಾಧಿಕ ನಂಬಿಕೆದ್ರೋಹ. | 316(3) | ಯಾವ ಸ್ವತ್ತಿಗೆ ಸಂಬಂಧಿಸಿದಂತೆ ನಂಬಿಕೆದ್ರೋಹ ಮಾಡಲಾಗಿದೆಯೋ ಆ ಸ್ವತ್ತಿನ ಒಡೆಯ. |
| ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದರೂ ಅದನ್ನು ಅಪ್ರಾಮಾಣಿಕವಾಗಿ ಸ್ವೀಕರಿಸುವುದು. | 317(2) | ಕಳವಾದ ಸ್ವತ್ತಿನ ಒಡೆಯ. |
| ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದರೂ ಅದನ್ನು ಬಚ್ಚಿಡಲು ಅಥವಾ ವಿಲೆ ಮಾಡಲು ಸಹಾಯ ಮಾಡುವುದು | 317(5) | ಕಳವಾದ ಸ್ವತ್ತಿನ ಒಡೆಯ. |
| ವಂಚಿಸುವುದು | 318(2) | ವಂಚನೆಗೊಳಗಾದ ವ್ಯಕ್ತಿ. |
| ಮತ್ತೊಬ್ಬನಂತೆ ವರ್ತಿಸಿ ವಂಚಿಸುವುದು. | 319(2) | ವಂಚನೆಗೊಳಗಾದ ವ್ಯಕ್ತಿ. |
| ಸಾಲದಾತರಲ್ಲಿ ಸ್ವತ್ತು, ಇತ್ಯಾದಿ ಹಂಚಿಕೆಯಾಗುವುದನ್ನು ತಪ್ಪಿಸಲು ಅದನ್ನು ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು. | 320 | ಅದರಿಂದಾಗಿ ಬಾಧಿತರಾದ ಸಾಲದಾತರು. |
| ಅಪರಾಧಿಗೆ ಬರಬೇಕಾದ ಸಾಲದ ಹಣ ಅಥವಾ ತಗಾದೆ ಹಣವನ್ನು ಅವನ ಸಾಲದಾತನಿಗೆ ದೊರೆಯದಂತೆ ಮೋಸದಿಂದ ತಪ್ಪಿಸುವುದು. | 321 | ಅದರಿಂದಾಗಿ ಬಾಧಿತರಾದ ಸಾಲದಾತರು. |
| ಪ್ರತಿಫಲದ ಬಗ್ಗೆ ಸುಳ್ಳು ಹೇಳಿಕೆಯನ್ನೊಳಗೊಂಡ ವರ್ಗಾವಣೆ ಪತ್ರವನ್ನು ಮೋಸದಿಂದ ಬರೆದುಕೊಡುವುದು. | 322 | ಅದರಿಂದ ಬಾಧಿತನಾದ ವ್ಯಕ್ತಿ. |
| ಸ್ವತ್ತನ್ನು ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು | 323 | ಅದರಿಂದ ಬಾಧಿತನಾದ ವ್ಯಕ್ತಿ. |
| ಉಂಟುಮಾಡಿದ ನಷ್ಟ ಅಥವಾ ಹಾನಿಯು ಖಾಸಗಿ ವ್ಯಕ್ತಿಗೆ ನಷ್ಟ ಅಥವಾ ಹಾನಿ ಆಗಿದ್ದಾಗ ಮಾತ್ರವೇ ಕೇಡಾಗುತ್ತದೆ. | 324(2), 324(4) | ನಷ್ಟ ಅಥವಾ ಹಾನಿಗೆ ಒಳಗಾದ ವ್ಯಕ್ತಿ. |
| ಪ್ರಾಣಿಯನ್ನು ಕೊಂದು ಅಥವಾ ಅಂಗವಿಕಲಗೊಳಿಸಿ ಮಾಡಿದ ಕೇಡು. | 325 | ಆ ಪ್ರಾಣಿಯ ಒಡೆಯ. |
| ಅಕ್ರಮವಾಗಿ ನೀರಿನ ಮಾರ್ಗ ಬದಲಿಸಿ, ನೀರಾವರಿ ಕಾಮಗಾರಿಗಳಿಗೆ ಕ್ಷತಿಯನ್ನುಂಟು ಮಾಡಿದಾಗ ಖಾಸಗಿ ವ್ಯಕ್ತಿಗೆ ಮಾತ್ರ ಆದ ಹಾನಿಯಿಂದ ಅಥವಾ ನಷ್ಟದಿಂದ ಕೇಡು. | 326(ಎ) | ಯಾವ ವ್ಯಕ್ತಿಗೆ ಹಾನಿ ಅಥವಾ ನಷ್ಟ ಉಂಟಾಗಿದೆಯೋ ಆ ವ್ಯಕ್ತಿ. |
| ಆಪರಾಧಿಕ ಅತಿಕ್ರಮಣ ಪ್ರವೇಶ | 329(3) | ಅತಿಕ್ರಮಣ ಪ್ರವೇಶಕ್ಕೆ ಒಳಗಾದ ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ವ್ಯಕ್ತಿ. |
| ಮನೆ-ಅತಿಕ್ರಮಣ ಪ್ರವೇಶ | 329(4) | ಅತಿಕ್ರಮಣ ಪ್ರವೇಶಕ್ಕೆ ಒಳಗಾದ ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ವ್ಯಕ್ತಿ. |

| | | |
|---|---|---|
| ಕಾರಾವಾಸದಿಂದ ದಂಡನೀಯವಾದ ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ (ಕಳವನ್ನು ಹೊರತುಪಡಿಸಿ) | 332(ಸಿ) | ಅತಿಕ್ರಮಣ ಪ್ರವೇಶಕ್ಕೆ ಒಳಗಾದ ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ವ್ಯಕ್ತಿ. |
| ಸುಳ್ಳು ವ್ಯಾಪಾರ ಅಥವಾ ಸ್ವತ್ತು ಗುರುತನ್ನು ಬಳಸುವುದು | 345(3) | ಅಂಥ ಬಳಕೆಯಿಂದಾಗಿ ಯಾವ ವ್ಯಕ್ತಿಗೆ ನಷ್ಟ ಅಥವಾ ಕ್ಷತಿ ಉಂಟಾಗಿದೆಯೋ ಆ ವ್ಯಕ್ತಿ. |
| ಇನ್ನೊಬ್ಬನು ಬಳಸಿದ ಸ್ವತ್ತು ಗುರುತಿನ ಖೋಟಾ ತಯಾರಿಕೆ | 347(1) | ಅಂಥ ಬಳಕೆಯಿಂದಾಗಿ ಯಾವ ವ್ಯಕ್ತಿಗೆ ನಷ್ಟ ಅಥವಾ ಕ್ಷತಿ ಉಂಟಾಗಿದೆಯೋ ಆ ವ್ಯಕ್ತಿ. |
| ಖೋಟಾ ಸ್ವತ್ತು ಗುರುತು ಹಾಕಿದ ಸರಕುಗಳ ಮಾರಾಟ | 349 | ಅಂಥ ಬಳಕೆಯಿಂದಾಗಿ ಯಾವ ವ್ಯಕ್ತಿಗೆ ನಷ್ಟ ಅಥವಾ ಕ್ಷತಿ ಉಂಟಾಗಿದೆಯೋ ಆ ವ್ಯಕ್ತಿ. |
| ಆಪರಾಧಿಕ ಭಯೋತ್ಪಾದನೆ | 351(2), 351(3) | ಭಯೋತ್ಪಾದನೆಗೆ ಒಳಗಾದ ವ್ಯಕ್ತಿ |
| ಶಾಂತಿಭಂಗವನ್ನು ಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಕ ಅವಮಾನ | 352 | ಅವಮಾನಕ್ಕೆ ಒಳಗಾದ ವ್ಯಕ್ತಿ |
| ದೈವೀ ಅವಕೃಪೆಗೆ ಗುರಿಯಾಗುವನೆಂದು ವ್ಯಕ್ತಿಯು ನಂಬುವಂತೆ ಮಾಡುವುದು. | 354 | ನಂಬುವಂತೆ ಮಾಡಲಾದ ವ್ಯಕ್ತಿ. |
| ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 356(2) ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕೋಷ್ಠಕದ 1ನೇ ಅಂಕಣದ ನಿರ್ದಿಷ್ಟಪಡಿಸಿದಂಥ ಮೊಕದ್ದಮೆಗಳನ್ನು ಹೊರತುಪಡಿಸಿ ಮಾನಹಾನಿ | 356(2) | ಮಾನಹಾನಿಗೊಳಗಾದ ವ್ಯಕ್ತಿ. |
| ಮಾನಹಾನಿಕರವಾದುದೆಂದು ಗೊತ್ತಿದ್ದರೂ ವಿಷಯವನ್ನು ಮುದ್ರಿಸುವುದು ಅಥವಾ ಕೆತ್ತುವುದು | 356(3) | ಮಾನಹಾನಿಗೊಳಗಾದ ವ್ಯಕ್ತಿ. |
| ಮಾನಹಾನಿಕರ ವಿಷಯವನ್ನು ಒಳಗೊಂಡಿದೆಯೆಂದು ಗೊತ್ತಿದ್ದರೂ, ಅಂಥ ವಿಷಯವನ್ನು ಒಳಗೊಂಡ ಮುದ್ರಿತ ಅಥವಾ ಕೆತ್ತನೆಯ ವಸ್ತುವಿನ ಮಾರಾಟ | 356(4) | ಮಾನಹಾನಿಗೊಳಗಾದ ವ್ಯಕ್ತಿ. |
| ಸೇವಾ ಕರಾರಿನ ಆಪರಾಧಿಕ ಭಂಗ | 357 | ಯಾರೊಂದಿಗೆ ಅಪರಾಧಿಯು ಕರಾರು ಮಾಡಿಕೊಂಡಿರುವನೋ ಆ ವ್ಯಕ್ತಿ |

(2) ಈ ಕೆಳಗಿನ ಕೋಷ್ಠಕದ ಮೊದಲ ಎರಡು ಅಂಕಣಗಳಲ್ಲಿ ನಿರ್ದಿಷ್ಟಪಡಿಸಲಾದ ಹಾಗೂ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳ ಬಗ್ಗೆ, ಯಾವ ನ್ಯಾಯಾಲಯದ ಮುಂದೆ ಅಂಥ ಅಪರಾಧದ ಬಗೆಗಿನ ಯಾವುದೇ ಪ್ರಾಸಿಕ್ಯೂಷನ್ ಇತ್ಯರ್ಥದಲ್ಲಿ ಇರುವುದೋ ಆ ನ್ಯಾಯಾಲಯದ ಅನುಮತಿಯನ್ನು ಪಡೆದು, ಈ ಕೋಷ್ಠಕದ ಮೂರನೆಯ ಅಂಕಣದಲ್ಲಿ ನಮೂದಿಸಲಾದ ವ್ಯಕ್ತಿಗಳು ರಾಜಿ ಮಾಡಿಕೊಳ್ಳಬಹುದು:-

| ಕೋಷ್ಟಕ | | |
|---|---|---|
| **ಅಪರಾಧ** | **ಅನ್ವಯವಾಗುವ ಭಾರತೀಯ ನ್ಯಾಯ ಸಂಹಿತೆಯ ಪ್ರಕರಣ** | **ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದಾದ ವ್ಯಕ್ತಿ** |
| 1 | 2 | 3 |
| ಮಹಿಳೆಯ ಗೌರವ-ಘನತೆಗೆ ಕುಂದುಂಟು ಮಾಡುವ ಉದ್ದೇಶವಿರುವ ಪದ, ಆಂಗಿಕಸನ್ನೆ ಅಥವಾ ಕೃತ್ಯ | 79 | ಯಾವ ಮಹಿಳೆಯನ್ನು ಉದ್ದೇಶಿಸಿ ಅವಮಾನ ಮಾಡಲಾಗಿತ್ತೋ ಅಥವಾ ಯಾವ ಮಹಿಳೆಯ ಏಕಾಂತಕ್ಕೆ ಭಂಗವುಂಟು ಮಾಡಲಾಗಿತ್ತೋ ಆ ಮಹಿಳೆ |
| ಪತಿಯು ಅಥವಾ ಪತ್ನಿಯು ಜೀವಿಸಿರುವಾಗ ಪುನಃ ಮದುವೆಯಾಗುವುದು | 82(1) | ಹಾಗೆ ವಿವಾಹವಾದ ವ್ಯಕ್ತಿಯ ಪತಿ ಅಥವಾ ಪತ್ನಿ |
| ಗರ್ಭಪಾತವುಂಟು ಮಾಡುವುದು | 88 | ಯಾವ ಮಹಿಳೆಗೆ ಗರ್ಭಪಾತವನ್ನುಂಟು ಮಾಡಲಾಗಿದೆಯೋ ಆ ಮಹಿಳೆ. |
| ಸ್ವಇಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು. | 117(2) | ಯಾವ ವ್ಯಕ್ತಿಗೆ ಗಾಯವನ್ನುಂಟು ಮಾಡಲಾಗಿದೆಯೋ ಆ ವ್ಯಕ್ತಿ. |
| ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಮನುಷ್ಯನ ಪ್ರಾಣಕ್ಕೆ ಅಥವಾ ಇತರರ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನು ಉಂಟುಮಾಡುವಂಥ ಗಾಯವನ್ನುಂಟು ಮಾಡುವುದು. | 125(ಎ) | ಯಾವ ವ್ಯಕ್ತಿಗೆ ಗಾಯವನ್ನುಂಟು ಮಾಡಲಾಗಿದೆಯೋ ಆ ವ್ಯಕ್ತಿ. |
| ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಮನುಷ್ಯನ ಪ್ರಾಣಕ್ಕೆ ಅಥವಾ ಇತರರ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನು ಉಂಟುಮಾಡುವಂಥ ತೀವ್ರಗಾಯವನ್ನುಂಟು ಮಾಡುವುದು. | 125(ಬಿ) | ಯಾವ ವ್ಯಕ್ತಿಗೆ ಗಾಯವನ್ನುಂಟು ಮಾಡಲಾಗಿದೆಯೋ ಆ ವ್ಯಕ್ತಿ. |
| ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಿಟ್ಟುಕೊಳ್ಳಲು ಪ್ರಯತ್ನ ಮಾಡುವಾಗ ಅವನ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು. | 135 | ಹಲ್ಲೆಗೊಳಗಾದ ಅಥವಾ ಬಲಪ್ರಯೋಗಕ್ಕೊಳಗಾದ ವ್ಯಕ್ತಿ. |
| ಗುಮಾಸ್ತ ಅಥವಾ ಸೇವಕನಿಂದ ಯಜಮಾನನ ಸ್ವಾಧೀನದಲ್ಲಿರುವ ಸ್ವತ್ತಿನ ಕಳವು. | 306 | ಕಳುವಾದ ಸ್ವತ್ತಿನ ಒಡೆಯ. |
| ಆಪರಾಧಿಕ ನಂಬಿಕೆ ದ್ರೋಹ. | 316(2) | ಯಾವ ಸ್ವತ್ತಿಗೆ ಸಂಬಂಧಿಸಿದಂತೆ ನಂಬಿಕೆ ದ್ರೋಹವನ್ನು ಮಾಡಲಾಗಿದೆಯೋ ಆ ಸ್ವತ್ತಿನ ಒಡೆಯ. |
| ಗುಮಾಸ್ತ ಅಥವಾ ಸೇವಕನಿಂದ ಆಪರಾಧಿಕ ನಂಬಿಕೆ ದ್ರೋಹ. | 316(4) | ಯಾವ ಸ್ವತ್ತಿಗೆ ಸಂಬಂಧಿಸಿದಂತೆ ನಂಬಿಕೆ ದ್ರೋಹವನ್ನು ಮಾಡಲಾಗಿದೆಯೋ ಆ ಸ್ವತ್ತಿನ ಒಡೆಯ. |

| | | |
|---|---|---|
| ಯಾವ ವ್ಯಕ್ತಿಯ ಹಿತಾಸಕ್ತಿಯನ್ನು ಕಾಪಾಡಲು ಕಾನೂನಿನ ಮೂಲಕ ಅಥವಾ ಕಾನೂನುಸಮ್ಮತ ಕರಾರಿನ ಮೂಲಕ ಅಪರಾಧಿಯು ಬದ್ಧನಾಗಿದ್ದನೋ ಆ ವ್ಯಕ್ತಿಗೆ ವಂಚಿಸುವುದು. | 318(3) | ವಂಚನೆಗೊಳಗಾದ ವ್ಯಕ್ತಿ. |
| ವಂಚಿಸುವುದು ಮತ್ತು ಸ್ವತ್ತನ್ನು ತಲುಪಿಸಲು ಅಥವಾ ಬೆಲೆಯುಳ್ಳ ಭದ್ರತೆಯನ್ನು ರಚಿಸಲು, ವ್ಯತ್ಯಸ್ತಗೊಳಿಸಲು ಅಥವಾ ನಾಶಪಡಿಸಲು ಅಪ್ರಾಮಾಣಿಕವಾಗಿ ಪ್ರೇರೇಪಿಸುವುದು. | 318(4) | ವಂಚನೆಗೊಳಗಾದ ವ್ಯಕ್ತಿ. |
| ರಾಷ್ಟ್ರಪತಿ ಅಥವಾ ಉಪರಾಷ್ಟ್ರಪತಿ ಅಥವಾ ರಾಜ್ಯದ ರಾಜ್ಯಪಾಲ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಮಂತ್ರಿಯ ವಿರುದ್ಧ ತನ್ನ ಸಾರ್ವಜನಿಕ ಪ್ರಕಾರ್ಯಗಳ ಸಂಬಂಧದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರನು ಮಾಡಿದ ದೂರಿನ ಮೇರೆಗೆ ಮಾನಹಾನಿ. | 356(2) | ಮಾನಹಾನಿಗೊಳಗಾದ ವ್ಯಕ್ತಿ. |

(3) ಅಪರಾಧವು ಈ ಪ್ರಕರಣದ ಮೇರೆಗೆ ರಾಜಿ ಮಾಡಿಸುವಂಥದ್ದಾಗಿದ್ದಾಗ, ಅಂಥ ಅಪರಾಧಕ್ಕೆ ದುಷ್ಪ್ರೇರಣೆ ಅಥವಾ ಅಂಥ ಅಪರಾಧವನ್ನು ಮಾಡಲು ಮಾಡಿರುವ ಪ್ರಯತ್ನ, ಅಂಥ ಪ್ರಯತ್ನವೇ ಅಪರಾಧವಾಗಿರುವಾಗ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 3ನೇ ಪ್ರಕರಣದ (5)ನೇ ಉಪಪ್ರಕರಣ ಮತ್ತು 190ನೇ ಪ್ರಕರಣದ ಮೇರೆಗೆ ಅಪರಾಧಿಯು ಹೊಣೆಗಾರನಾಗಿರುವಲ್ಲಿ, ಅದೇ ರೀತಿಯಲ್ಲಿ ರಾಜಿ ಮಾಡಬಹುದು.

(4) (ಎ) ಈ ಪ್ರಕರಣದ ಮೇರೆಗೆ ಅಪರಾಧದ ಬಗ್ಗೆ ಅನ್ಯಥಾ ರಾಜಿ ಮಾಡಿಕೊಳ್ಳಲು ಸಕ್ಷಮನಾಗಿರಬಹುದಾಗಿದ್ದ ವ್ಯಕ್ತಿಯು ಮಗುವಾಗಿರುವಾಗ ಅಥವಾ ಅಸ್ವಸ್ಥಚಿತ್ತನಾಗಿರುವಾಗ, ಅವನ ಪರವಾಗಿ ಕರಾರು ಮಾಡಿಕೊಳ್ಳಲು ಸಕ್ಷಮನಾಗಿರುವ ಯಾರೇ ವ್ಯಕ್ತಿಯು, ನ್ಯಾಯಾಲಯದ ಅನುಮತಿಯನ್ನು ಪಡೆದು, ಅಂಥ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು;

(ಬಿ) ಈ ಪ್ರಕರಣದ ಮೇರೆಗೆ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಲು ಅನ್ಯಥಾ ಸಕ್ಷಮನಾಗಿರಬಹುದಾಗಿದ್ದ ವ್ಯಕ್ತಿಯು ಮೃತನಾಗಿರುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಪರಿಭಾಷಿಸಿದಂತೆ, ಅಂಥ ವ್ಯಕ್ತಿಯ ಕಾನೂನು ಪ್ರತಿನಿಧಿಯು ನ್ಯಾಯಾಲಯದ ಸಮ್ಮತಿಯನ್ನು ಪಡೆದು, ಅಂಥ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು.

(5) ಆಪಾದಿತನನ್ನು ಅಧಿವಿಚಾರಣೆಗೆ ಒಪ್ಪಿಸಿರುವಾಗ ಅಥವಾ ಆತನನ್ನು ಅಪರಾಧಿಯೆಂದು ನಿರ್ಣಯಿಸಿರುವಾಗ ಮತ್ತು ಅಪೀಲು ಇತ್ಯರ್ಥದಲ್ಲಿರುವಾಗ, ಸಂದರ್ಭಾನುಸಾರ, ಯಾವ ನ್ಯಾಯಾಲಯಕ್ಕೆ ಆತನನ್ನು ಒಪ್ಪಿಸಲಾಗಿದೆಯೋ ಅಥವಾ ಯಾವ ನ್ಯಾಯಾಲಯದಿಂದ ಅಪೀಲು ವಿಚಾರಣೆಯಾಗಬೇಕಾಗಿದೆಯೋ ಆ ನ್ಯಾಯಾಲಯದ ಅನುಮತಿ ಇಲ್ಲದೆ ಆ ಅಪರಾಧದ ಬಗ್ಗೆ ಯಾವುದೇ ರಾಜಿಗೆ ಅವಕಾಶವಿರತಕ್ಕದ್ದಲ್ಲ.

(6) 442ನೇ ಪ್ರಕರಣದ ಮೇರೆಗೆ ಪುನರೀಕ್ಷಣೆಯ ತನ್ನ ಅಧಿಕಾರಗಳನ್ನು ಚಲಾಯಿಸುವ ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು, ಯಾವ ಅಪರಾಧದ ಬಗ್ಗೆ ಯಾರೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ರಾಜಿ ಮಾಡಿಕೊಳ್ಳಲು ಸಕ್ಷಮನಾಗಿರುವನೋ ಅಂಥ ವ್ಯಕ್ತಿಗೆ ಆ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಲು ಅವಕಾಶ ನೀಡಬಹುದು.

(7) ಆಪಾದಿತನು ಹಿಂದಿನ ಅಪರಾಧ ನಿರ್ಣಯದ ಕಾರಣದಿಂದಾಗಿ, ಆ ಅಪರಾಧದ ಬಗ್ಗೆ ಹೆಚ್ಚಿನ ದಂಡನೆಗೆ ಅಥವಾ ಬೇರೆ ರೀತಿಯ ದಂಡನೆಗೆ ಗುರಿಯಾಗಲು ಬದ್ಧನಾಗಿದ್ದರೆ, ಅಂಥ ಯಾವುದೇ ಅಪರಾಧದ ಬಗ್ಗೆ ರಾಜಿಯಾಗತಕ್ಕದ್ದಲ್ಲ.

(8) ಈ ಪ್ರಕರಣದ ಮೇರೆಗೆ ಮಾಡಿಕೊಂಡ ಅಪರಾಧದ ರಾಜಿಯು, ಅಪರಾಧದ ಬಗ್ಗೆ ರಾಜಿ ಮಾಡಿಕೊಂಡಿರುವ ಆಪಾದಿತನನ್ನು ಖುಲಾಸೆಯೆಂದು ತೀರ್ಮಾನಿಸಿದ ಪರಿಣಾಮವನ್ನು ಹೊಂದಿರತಕ್ಕದ್ದು.

(9) ಈ ಪ್ರಕರಣದಲ್ಲಿ ಉಪಬಂಧಿಸಿದಂತೆ ಹೊರತು ಯಾವ ಅಪರಾಧದ ಬಗ್ಗೆಯೂ ರಾಜಿ ಮಾಡಿಕೊಳ್ಳತಕ್ಕದ್ದಲ್ಲ.

**360. ಪ್ರಾಸಿಕ್ಯೂಷನನ್ನು ಹಿಂತೆಗೆದುಕೊಳ್ಳುವುದು.-** ಮೊಕದ್ದಮೆಯನ್ನು ನಡೆಸುತ್ತಿರುವ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್, ನ್ಯಾಯಾಲಯವು ತೀರ್ಪು ಕೊಡುವ ಮುನ್ನ ಯಾವುದೇ ಸಮಯದಲ್ಲಿ, ಸಾಮಾನ್ಯವಾಗಿ ಅಥವಾ ವಿಚಾರಣೆ ಮಾಡಿದ ಒಂದು ಅಥವಾ ಹೆಚ್ಚು ಅಪರಾಧಗಳ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧದ ಪ್ರಾಸಿಕ್ಯೂಷನನ್ನು, ನ್ಯಾಯಾಲಯದ ಅನುಮತಿ ಪಡೆದು ಹಿಂತೆಗೆದುಕೊಳ್ಳಬಹುದು ಮತ್ತು ಹಾಗೆ ಹಿಂತೆಗೆದುಕೊಂಡ ಮೇಲೆ,-

(ಎ) ಆರೋಪವನ್ನು ರೂಪಿಸುವುದಕ್ಕೆ ಮುಂಚೆ ಅದನ್ನು ಮಾಡಿದ್ದರೆ, ಅಂಥ ಅಪರಾಧ ಅಥವಾ ಅಪರಾಧಗಳ ಬಗ್ಗೆ ಆಪಾದಿತನನ್ನು ವಿಮೋಚಿಸತಕ್ಕದ್ದು;

(ಬಿ) ಆರೋಪವನ್ನು ರೂಪಿಸಿದ ತರುವಾಯ ಅದನ್ನು ಮಾಡಿದ್ದರೆ ಅಥವಾ ಈ ಸಂಹಿತೆಯ ಮೇರೆಗೆ ಯಾವುದೇ ಆರೋಪವು ಅಗತ್ಯವಾಗಿಲ್ಲದಿರುವಾಗ, ಅಂಥ ಅಪರಾಧ ಅಥವಾ ಅಪರಾಧಗಳ ಬಗ್ಗೆ ಅವನನ್ನು ನಿರಪರಾಧಿಯೆಂದು ನಿರ್ಣಯಿಸಿ ಖುಲಾಸೆಗೊಳಿಸತಕ್ಕದ್ದು:

ಪರಂತು, ಅಂಥ ಅಪರಾಧವು,-

(i) ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರವ್ಯಾಪ್ತಿಗೆ ಒಳಪಡುವ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿಗೆ ವಿರುದ್ಧವಾಗಿದ್ದರೆ; ಅಥವಾ

(ii) ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ತನಿಖೆ ನಡೆಸಲಾಗಿದ್ದರೆ; ಅಥವಾ

(iii) ಕೇಂದ್ರ ಸರ್ಕಾರಕ್ಕೆ ಸೇರಿದ ಯಾವುದೇ ಸ್ವತ್ತಿನ ದುರ್ವಿನಿಯೋಗ ಅಥವಾ ನಾಶ ಅಥವಾ ಹಾನಿಯನ್ನು ಒಳಗೊಂಡಿದ್ದರೆ; ಅಥವಾ

(iv)ಕೇಂದ್ರ ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯು, ಅವನು ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವುದಾಗಿ ತಾತ್ಪರ್ಯವಾಗುವಾಗ ಮಾಡಲಾಗಿದ್ದರೆ

- ಮತ್ತು ಮೊಕದ್ದಮೆಯನ್ನು ನಡೆಸುತ್ತಿರುವ ಪ್ರಾಸಿಕ್ಯೂಟರನು ಕೇಂದ್ರ ಸರ್ಕಾರದಿಂದ ನೇಮಕಗೊಂಡಿರದಿದ್ದರೆ, ಅವನು ಕೇಂದ್ರ ಸರ್ಕಾರದಿಂದ ಪ್ರಾಸಿಕ್ಯೂಷನನ್ನು ಹಿಂತೆಗೆದುಕೊಳ್ಳಲು ಅನುಮತಿ ಪಡೆದ ಹೊರತು, ಅದರ ಅನುಮತಿಗಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದಲ್ಲ ಮತ್ತು ನ್ಯಾಯಾಲಯವು, ಅನುಮತಿ ನೀಡುವ ಮೊದಲು, ಪ್ರಾಸಿಕ್ಯೂಷನನ್ನು ಹಿಂತೆಗೆದುಕೊಳ್ಳಲು ಕೇಂದ್ರ ಸರ್ಕಾರವು ನೀಡಿರುವ ಅನುಮತಿ ಪತ್ರವನ್ನು ತನ್ನ ಮುಂದೆ ಹಾಜರುಪಡಿಸಬೇಕೆಂದು ಪ್ರಾಸಿಕ್ಯೂಟರ್‌ಗೆ ನಿರ್ದೇಶಿಸತಕ್ಕದ್ದು:

ಮತ್ತು ಪರಂತು, ಯಾವುದೇ ನ್ಯಾಯಾಲಯವು ಮೊಕದ್ದಮೆಯಲ್ಲಿ ಸಂತ್ರಸ್ತರಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ಅಂಥ ಹಿಂತೆಗೆದುಕೊಳ್ಳುವಿಕೆಯನ್ನು ಅನುಮತಿಸತಕ್ಕದ್ದಲ್ಲ.

**361. ಮ್ಯಾಜಿಸ್ಟ್ರೇಟನು ಇತ್ಯರ್ಥಗೊಳಿಸಲಾಗದ ಮೊಕದ್ದಮೆಗಳಲ್ಲಿ ಪ್ರಕ್ರಿಯೆ.-** (1) ಯಾವುದೇ ಜಿಲ್ಲೆಯಲ್ಲಿನ ಮ್ಯಾಜಿಸ್ಟ್ರೇಟನ ಮುಂದಿರುವ ಅಪರಾಧದ ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆ ನಡೆಯುತ್ತಿರುವಾಗ,-

(ಎ) ಮೊಕದ್ದಮೆಯ ಬಗ್ಗೆ ಅಧಿವಿಚಾರಣೆ ಮಾಡಲು ಅಥವಾ ಅದನ್ನು ಅಧಿವಿಚಾರಣೆಗೆ ಒಪ್ಪಿಸಲು ತನಗೆ ಅಧಿಕಾರವ್ಯಾಪ್ತಿ ಇಲ್ಲವೆಂದು; ಅಥವಾ

(ಬಿ) ಮೊಕದ್ದಮೆಯನ್ನು ಜಿಲ್ಲೆಯಲ್ಲಿರುವ ಇತರೆ ಯಾರೇ ಮ್ಯಾಜಿಸ್ಟ್ರೇಟನು ಅಧಿವಿಚಾರಣೆ ಮಾಡಬೇಕೆಂದು ಅಥವಾ ಅಧಿವಿಚಾರಣೆಗೆ ಒಪ್ಪಿಸಬೇಕೆಂದು; ಅಥವಾ

(ಸಿ) ಮೊಕದ್ದಮೆಯನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಧಿವಿಚಾರಣೆ ಮಾಡಬೇಕೆಂದು

- ಪೂರ್ವಭಾವನೆ ಮಾಡಲು ಅವನಿಗೆ ಸಾಕ್ಷ್ಯದಿಂದ ಕಂಡುಬಂದರೆ ಅವನು ವ್ಯವಹರಣೆಗಳನ್ನು ನಿಲ್ಲಿಸತಕ್ಕದ್ದು ಮತ್ತು ಮೊಕದ್ದಮೆಯನ್ನು, ಅದರ ಸ್ವರೂಪವನ್ನು ವಿವರಿಸುವ ಸಂಕ್ಷಿಪ್ತ ವರದಿಯೊಂದಿಗೆ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ನಿರ್ದೇಶಿಸುವಂತೆ ಅಧಿಕಾರವ್ಯಾಪ್ತಿ ಹೊಂದಿರುವ ಅಂಥ ಇತರ ಮ್ಯಾಜಿಸ್ಟ್ರೇಟನಿಗೆ ಒಪ್ಪಿಸತಕ್ಕದ್ದು.

(2) ಯಾವ ಮ್ಯಾಜಿಸ್ಟ್ರೇಟನಿಗೆ ಮೊಕದ್ದಮೆಯನ್ನು ಒಪ್ಪಿಸಲಾಯಿತೋ, ಆ ಮ್ಯಾಜಿಸ್ಟ್ರೇಟನು, ಹಾಗೆ ಮಾಡಲು ಅಧಿಕಾರವಿದ್ದರೆ, ತಾನೇ ಮೊಕದ್ದಮೆಯ ಅಧಿವಿಚಾರಣೆ ಮಾಡಬಹುದು ಅಥವಾ ಅಧಿಕಾರವ್ಯಾಪ್ತಿ ಇರುವ ಮತ್ತು ತನಗೆ ಅಧೀನನಾಗಿರುವ ಯಾರೇ ಮ್ಯಾಜಿಸ್ಟ್ರೇಟನಿಗೆ ಕಳುಹಿಸಬಹುದು ಅಥವಾ ಆಪಾದಿತನನ್ನು ಅಧಿವಿಚಾರಣೆಗಾಗಿ ಒಪ್ಪಿಸಬಹುದು.

**362. ವಿಚಾರಣೆ ಅಥವಾ ಅಧಿವಿಚಾರಣೆಯು ಪ್ರಾರಂಭವಾದ ನಂತರ ಮೊಕದ್ದಮೆಯನ್ನು ಒಪ್ಪಿಸಬೇಕೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದಾಗ ಪ್ರಕ್ರಿಯೆ.-** ಮ್ಯಾಜಿಸ್ಟ್ರೇಟನ ಮುಂದಿರುವ ಅಪರಾಧದ ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ, ತಾನು ತೀರ್ಪಿಗೆ ಸಹಿ ಹಾಕುವ ಮೊದಲು, ವ್ಯವಹರಣೆಗಳ ಯಾವುದೇ ಹಂತದಲ್ಲಿ, ಅದು ಸೆಷನ್ ನ್ಯಾಯಾಲಯದಿಂದಲೇ ಅಧಿವಿಚಾರಣೆಯಾಗತಕ್ಕ ಮೊಕದ್ದಮೆಯೆಂದು ಅವನಿಗೆ ಕಂಡುಬಂದರೆ, ಅವನು ಅದನ್ನು, ಇದರಲ್ಲಿ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ಆ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು ಮತ್ತು ಆ ತರುವಾಯ, ನೇ ಅಧ್ಯಾಯದ ಉಪಬಂಧಗಳು, ಹಾಗೆ ಮಾಡಿದ ಒಪ್ಪಿಸುವಿಕೆಗೆ ಅನ್ವಯವಾಗತಕ್ಕದ್ದು.

**363. ನಾಣ್ಯ ತಯಾರಿಕೆ, ಸ್ಟಾಂಪು-ಕಾನೂನು ಅಥವಾ ಸ್ವತ್ತಿಗೆ ಸಂಬಂಧಿಸಿದ ಅಪರಾಧಗಳ ಬಗ್ಗೆ ಹಿಂದೆ ಅಪರಾಧಿಗಳೆಂದು ನಿರ್ಣೀತರಾದ ವ್ಯಕ್ತಿಗಳ ಅಧಿವಿಚಾರಣೆ.-** (1) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಅಧ್ಯಾಯ ಅಥವಾ ಅಧ್ಯಾಯ IIರ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಮೂರು ವರ್ಷಗಳ ಅಥವಾ ಹೆಚ್ಚಿನ ಅವಧಿಯ ಕಾರಾವಾಸ ದಂಡನೆಯ ಅಪರಾಧ ನಿರ್ಣೀತನಾಗಿ ದಂಡಿತನಾದ ವ್ಯಕ್ತಿಯು, ಆ ಅಧ್ಯಾಯಗಳಲ್ಲಿ ಯಾವುದೊಂದರ ಮೇರೆಗೆ ಮೂರು ವರ್ಷಗಳು ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾಗಬಹುದಾದ ಯಾವುದೇ ಅಪರಾಧಕ್ಕಾಗಿ ಪುನಃ ಆಪಾದಿತನಾದಾಗ ಮತ್ತು ಅಂಥ ವ್ಯಕ್ತಿಯು, ಅಪರಾಧವನ್ನು ಮಾಡಿರುವುದಾಗಿ ಪೂರ್ವಭಾವನೆ ಮಾಡಲು ಕಾರಣವಿದೆಯೆಂದು ಯಾರ ಮುಂದೆ ಮೊಕದ್ದಮೆಯು ಇತ್ಯರ್ಥದಲ್ಲಿದೆಯೋ ಆ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಮೊಕದ್ದಮೆಯ ಅಧಿವಿಚಾರಣೆ ಮಾಡಲು ಸಕ್ಷಮನಾಗಿರುವ ಹೊರತು ಮತ್ತು ಆಪಾದಿತನು ಅಪರಾಧಿಯೆಂದು ನಿರ್ಣೀತನಾದರೆ ತಾನೇ ಸ್ವತಃ ಪರ್ಯಾಪ್ತ ದಂಡನೆ ವಿಧಿಸಬಹುದೆಂದು ಅಭಿಪ್ರಾಯಪಟ್ಟ ಹೊರತು ಆಪಾದಿತನನ್ನು ಅಧಿವಿಚಾರಣೆಗಾಗಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಮುಂದೆ ಕಳುಹಿಸತಕ್ಕದ್ದು ಅಥವಾ ಸೆಷನ್ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಮುಂದೆ ಅಧಿವಿಚಾರಣೆಗಾಗಿ ಕಳುಹಿಸಿದಾಗ ಅಥವಾ ಸೆಷನ್ ನ್ಯಾಯಾಲಯಕ್ಕೆ ಒಪ್ಪಿಸಿದಾಗ, ಅದೇ ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ಅವನೊಂದಿಗೆ ಆಪಾದಿತನಾದ ಇತರ ಯಾರೇ ವ್ಯಕ್ತಿಯನ್ನು, ಸಂದರ್ಭಾನುಸಾರ, 262ನೇ ಪ್ರಕರಣ ಅಥವಾ 268ನೇ ಪ್ರಕರಣದ ಮೇರೆಗೆ ಅಂಥ ಇತರ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನು ವಿಮೋಚನೆಗೊಳಿಸಿದ ಹೊರತು, ಅದೇ ರೀತಿಯಲ್ಲಿ ಕಳುಹಿಸತಕ್ಕದ್ದು ಅಥವಾ ಒಪ್ಪಿಸತಕ್ಕದ್ದು.

**364. ಮ್ಯಾಜಿಸ್ಟ್ರೇಟನು ಸಾಕಷ್ಟು ಕಠಿಣ ಶಿಕ್ಷೆಯನ್ನು ವಿಧಿಸಲು ಆಗದಿದ್ದಾಗ ಪ್ರಕ್ರಿಯೆ.-** (1) ಮ್ಯಾಜಿಸ್ಟ್ರೇಟನು, ಪ್ರಾಸಿಕ್ಯೂಷನ್ನಿನ ಮತ್ತು ಆಪಾದಿತನ ಸಾಕ್ಷ್ಯವನ್ನು ವಿಚಾರಣೆ ಮಾಡಿದ ತರುವಾಯ, ಆಪಾದಿತನು ತಪ್ಪಿತಸ್ಥನೆಂದು ಮತ್ತು ಅಂಥ ಮ್ಯಾಜಿಸ್ಟ್ರೇಟನು ತಾನು ವಿಧಿಸಲು ಅಧಿಕಾರ ಹೊಂದಿರುವುದಕ್ಕಿಂತ ಬೇರೆ ರೀತಿಯ ಅಥವಾ ಹೆಚ್ಚು ಕಠಿಣವಾದ ದಂಡನೆಯನ್ನು ಅವನಿಗೆ ಕೊಡತಕ್ಕದ್ದೆಂದು ಅಭಿಪ್ರಾಯಪಟ್ಟಾಗ ಅಥವಾ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನಾಗಿದ್ದು, 125ನೇ ಪ್ರಕರಣದ ಮೇರೆಗೆ ಬಂಧಪತ್ರವನ್ನು ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಲು ಆಪಾದಿತನನ್ನು ಅಗತ್ಯಪಡಿಸತಕ್ಕದ್ದೆಂದು ಅಭಿಪ್ರಾಯಪಟ್ಟಾಗ, ಅವನು ತನ್ನ ಅಭಿಪ್ರಾಯವನ್ನು ದಾಖಲಿಸಬಹುದು ಮತ್ತು ತಾನು ಯಾರಿಗೆ ಅಧೀನನೋ ಆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ವ್ಯವಹರಣೆಗಳನ್ನು ಸಲ್ಲಿಸಬಹುದು ಮತ್ತು ಅವನ ಬಳಿಗೆ ಆಪಾದಿತನನ್ನು ಕಳುಹಿಸಬಹುದು.

(2) ಒಬ್ಬನಿಗಿಂತ ಹೆಚ್ಚು ಆಪಾದಿತರನ್ನು ಒಟ್ಟಿಗೆ ಅಧಿವಿಚಾರಣೆ ಮಾಡಿದಾಗ ಮತ್ತು ಅಂಥ ಆಪಾದಿತರಲ್ಲಿ ಯಾರೊಬ್ಬನ ಬಗ್ಗೆ (1)ನೇ ಉಪಪ್ರಕರಣದ ಮೇರೆಗೆ ವ್ಯವಹರಣೆಯನ್ನು ಮುಂದುವರಿಸುವುದು ಅವಶ್ಯವೆಂದು ಮ್ಯಾಜಿಸ್ಟ್ರೇಟನು ಪರ್ಯಾಲೋಚಿಸಿದಾಗ, ಅವನು ತನ್ನ ಅಭಿಪ್ರಾಯದ ಪ್ರಕಾರ ತಪ್ಪಿತಸ್ಥರಾಗಿರುವ ಎಲ್ಲ ಆಪಾದಿತರನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು.

(3) ಯಾರಿಗೆ ವ್ಯವಹರಣೆಗಳನ್ನು ಒಪ್ಪಿಸಲಾಗಿದೆಯೋ ಆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ತಾನು ಸೂಕ್ತವೆಂದು ಭಾವಿಸಿದರೆ, ಪಕ್ಷಕಾರರನ್ನು ವಿಚಾರಣೆ ಮಾಡಬಹುದು ಮತ್ತು ಮೊಕದ್ದಮೆಯಲ್ಲಿ ಈಗಾಗಲೇ ಸಾಕ್ಷ್ಯ ನೀಡಿರುವ ಯಾರೇ ಸಾಕ್ಷಿದಾರರನ್ನು ಪುನಃ ಕರೆಸಬಹುದು ಮತ್ತು ವಿಚಾರಣೆ ಮಾಡಬಹುದು ಮತ್ತು ಯಾವುದೇ ಹೆಚ್ಚಿನ ಸಾಕ್ಷ್ಯವನ್ನು ತರಿಸಿಕೊಳ್ಳಬಹುದು ಮತ್ತು ತೆಗೆದುಕೊಳ್ಳಬಹುದು ಮತ್ತು ಮೊಕದ್ದಮೆಯ ಬಗ್ಗೆ ತಾನು ಸೂಕ್ತವೆಂದು ಭಾವಿಸುವ ಮತ್ತು ಕಾನೂನಿಗೆ ಅನುಸಾರವಾಗಿ ತೀರ್ಪು ನೀಡತಕ್ಕದ್ದು, ಶಿಕ್ಷೆ ವಿಧಿಸತಕ್ಕದ್ದು ಅಥವಾ ಆದೇಶ ನೀಡತಕ್ಕದ್ದು.

**365. ಒಬ್ಬ ಮ್ಯಾಜಿಸ್ಟ್ರೇಟನಿಂದ ಭಾಗಶಃ ಮತ್ತು ಇನ್ನೊಬ್ಬ ಮ್ಯಾಜಿಸ್ಟ್ರೇಟನಿಂದ ಭಾಗಶಃ ದಾಖಲಿಸಿದ ಸಾಕ್ಷ್ಯದ ಮೇಲೆ ಅಪರಾಧ ನಿರ್ಣಯ ಅಥವಾ ವಿಚಾರಣೆಗೆ ಒಪ್ಪಿಸುವಿಕೆ.-** (1) ಯಾರೇ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ವಿಚಾರಣೆ ಅಥವಾ ಅಧಿವಿಚಾರಣೆಯಲ್ಲಿ ಸಾಕ್ಷ್ಯವನ್ನು ಪೂರ್ಣವಾಗಿ ಅಥವಾ ಭಾಗಶಃ ವಿಚಾರಣೆ ಮಾಡಿ ದಾಖಲಿಸಿದ ತರುವಾಯ, ಅದರಲ್ಲಿ ತನ್ನ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದನ್ನು ಮುಕ್ತಾಯಗೊಳಿಸಿದರೆ ಮತ್ತು ಅಂಥ ಅಧಿಕಾರವ್ಯಾಪ್ತಿಯನ್ನು ಹೊಂದಿದ್ದ ಅದನ್ನು ಚಲಾಯಿಸುವ ಇನ್ನೊಬ್ಬ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ಉತ್ತರಾಧಿಕಾರಿಯಾದಾಗ, ಹಾಗೆ ಉತ್ತರಾಧಿಕಾರಿಯಾದ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ತನ್ನ ಪೂರ್ವವರ್ತಿಯು ಹಾಗೆ ದಾಖಲಿಸಿದ ಅಥವಾ ಭಾಗಶಃ ದಾಖಲಿಸಿದ ಮತ್ತು ತಾನು ಭಾಗಶಃ ದಾಖಲಿಸಿದ ಸಾಕ್ಷ್ಯದ ಮೇಲೆ ಕ್ರಮ ತೆಗೆದುಕೊಳ್ಳಬಹುದು:

ಪರಂತು, ಯಾರ ಸಾಕ್ಷ್ಯವನ್ನು ಈಗಾಗಲೇ ದಾಖಲಿಸಲಾಗಿದೆಯೋ, ಆ ಯಾರೇ ಸಾಕ್ಷಿದಾರನ ಹೆಚ್ಚಿನ ವಿಚಾರಣೆಯು ನ್ಯಾಯೋದ್ದೇಶದಿಂದ ಅವಶ್ಯವೆಂದು ಉತ್ತರಾಧಿಕಾರಿಯಾದ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ಅಭಿಪ್ರಾಯಪಟ್ಟರೆ,

ಅವನು ಅಂಥ ಯಾರೇ ಸಾಕ್ಷಿದಾರನನ್ನು ಪುನಃ ಸಮನ್ ಮಾಡಬಹುದು ಮತ್ತು ತಾನು ಅನುಮತಿಸಬಹುದಾದಂಥ ಹೆಚ್ಚಿನ ವಿಚಾರಣೆ, ಪಾಟೀ-ಸವಾಲು ಮತ್ತು ಮರುವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ಮಾಡಿದ ತರುವಾಯ ಸಾಕ್ಷಿದಾರನನ್ನು ವಿಮೋಚನೆಗೊಳಿಸತಕ್ಕದ್ದು.

(2) ಈ ಸಂಹಿತೆಯ ಉಪಬಂಧಗಳ ಮೇರೆಗೆ ಮೊಕದ್ದಮೆಯು ಒಬ್ಬ ನ್ಯಾಯಾಧೀಶನಿಂದ ಇನ್ನೊಬ್ಬ ನ್ಯಾಯಾಧೀಶನಿಗೆ ಅಥವಾ ಒಬ್ಬ ಮ್ಯಾಜಿಸ್ಟ್ರೇಟನಿಂದ ಇನ್ನೊಬ್ಬ ಮ್ಯಾಜಿಸ್ಟ್ರೇಟನಿಗೆ ವರ್ಗಾವಣೆಯಾದಾಗ, (1)ನೇ ಉಪಪ್ರಕರಣದ ಮೇರೆಗಿನ ಅರ್ಥವ್ಯಾಪ್ತಿಯೊಳಗೆ ಮೊದಲಿನ ಮ್ಯಾಜಿಸ್ಟ್ರೇಟನು ಅದರಲ್ಲಿ ಅಧಿಕಾರವ್ಯಾಪ್ತಿ ಹೊಂದಿರುವುದು ಮುಕ್ತಾಯವಾಗುವುದೆಂದು ಮತ್ತು ಆ ತರುವಾಯ ಎರಡನೇ ಮ್ಯಾಜಿಸ್ಟ್ರೇಟನು ಉತ್ತರಾಧಿಕಾರಿ ಆಗಿರುವನೆಂದು ಭಾವಿಸತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಸಂಕ್ಷಿಪ್ತ ಅಧಿವಿಚಾರಣೆಗಳಿಗೆ ಅಥವಾ 361ನೇ ಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ನಿಲ್ಲಿಸಲಾಗಿರುವ ಅಥವಾ 364ನೇ ಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ವರಿಷ್ಠ ಮ್ಯಾಜಿಸ್ಟ್ರೇಟನಿಗೆ ಒಪ್ಪಿಸಲಾಗಿರುವ ಮೊಕದ್ದಮೆಗಳಿಗೆ ಅನ್ವಯಿಸುವುದಿಲ್ಲ.

**366. ನ್ಯಾಯಾಲಯವು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿರುವುದು.-** (1) ಯಾವುದೇ ಅಪರಾಧದ ವಿಚಾರಣೆಯ ಅಥವಾ ಅಧಿವಿಚಾರಣೆಯ ಉದ್ದೇಶಕ್ಕಾಗಿ ಯಾವುದೇ ಕ್ರಿಮಿನಲ್ ನ್ಯಾಯಾಲಯವು ನಡೆಯುವ ಸ್ಥಳವನ್ನು, ಸಾರ್ವಜನಿಕರಿಗೆ ಸಾಮಾನ್ಯವಾಗಿ ಪ್ರವೇಶವಿರುವ ಅಲ್ಲಿ ಅವರಿಗೆ ಸ್ಥಳಾವಕಾಶವಿರುವಷ್ಟರಮಟ್ಟಿಗೆ ಮುಕ್ತ ನ್ಯಾಯಾಲಯವೆಂದು ಭಾವಿಸತಕ್ಕದ್ದು:

ಪರಂತು, ಪೀಠಾಸೀನ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ತಾನು ಸೂಕ್ತವೆಂದು ಭಾವಿಸಿದರೆ, ಯಾವುದೇ ನಿರ್ದಿಷ್ಟ ಮೊಕದ್ದಮೆಯ ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆಯ ಯಾವುದೇ ಹಂತದಲ್ಲಿ, ಸಾರ್ವಜನಿಕರು ಅಥವಾ ಯಾರೇ ನಿರ್ದಿಷ್ಟ ವ್ಯಕ್ತಿಯು ನ್ಯಾಯಾಲಯಕ್ಕಾಗಿ ಉಪಯೋಗಿಸಿದ ಕೊಠಡಿಯನ್ನು ಅಥವಾ ಕಟ್ಟಡವನ್ನು ಪ್ರವೇಶಿಸತಕ್ಕದ್ದಲ್ಲ ಅಥವಾ ಅಲ್ಲಿರತಕ್ಕದ್ದಲ್ಲ ಅಥವಾ ಅಲ್ಲಿ ಉಳಿಯತಕ್ಕದ್ದಲ್ಲ ಎಂದು ಆದೇಶಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅತ್ಯಾಚಾರ ಅಥವಾ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 70ನೇ ಪ್ರಕರಣ ಅಥವಾ 71ನೇ ಪ್ರಕರಣ ಅಥವಾ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012 (2012ರ 32)ರ 4ನೇ ಪ್ರಕರಣ, 6ನೇ ಪ್ರಕರಣ, 8ನೇ ಪ್ರಕರಣ ಅಥವಾ 10ನೇ ಪ್ರಕರಣದ ಮೇರೆಗಿನ ಅಪರಾಧದ ವಿಚಾರಣೆಯನ್ನು ಅಥವಾ ಅಧಿವಿಚಾರಣೆಯನ್ನು ರಹಸ್ಯವಾಗಿ ನಡೆಸತಕ್ಕದ್ದು:

ಪರಂತು, ಪೀಠಾಸೀನ ನ್ಯಾಯಾಧೀಶನು, ತಾನು ಸೂಕ್ತವೆಂದು ಭಾವಿಸಿದರೆ ಅಥವಾ ಪಕ್ಷಕಾರರಲ್ಲಿ ಯಾರೇ ಆಗಲಿ ಸಲ್ಲಿಸಿದ ಅರ್ಜಿಯ ಮೇಲೆ, ಯಾರೇ ನಿರ್ದಿಷ್ಟ ವ್ಯಕ್ತಿಗೆ ನ್ಯಾಯಾಲಯವು ಉಪಯೋಗಿಸುತ್ತಿರುವ ಕೊಠಡಿಗೆ ಅಥವಾ ಕಟ್ಟಡಕ್ಕೆ ಪ್ರವೇಶಾವಕಾಶವನ್ನು ನೀಡಬಹುದು ಅಥವಾ ಅಲ್ಲಿ ಇರಲು ಅಥವಾ ಉಳಿಯಲು ಅವಕಾಶ ನೀಡಬಹುದು:

ಮತ್ತು ಪರಂತು, ನ್ಯಾಯಾಧೀಶನ ಕೊಠಡಿಯಲ್ಲಿ ರಹಸ್ಯವಾಗಿ (ಇನ್-ಕ್ಯಾಮರಾ) ನಡೆಯುವ ಅಧಿವಿಚಾರಣೆಯನ್ನು ಸಾಧ್ಯವಾದಷ್ಟುಮಟ್ಟಿಗೆ ಮಹಿಳಾ ನ್ಯಾಯಾಧೀಶೆ ಅಥವಾ ಮ್ಯಾಜಿಸ್ಟ್ರೇಟ್ ನಡೆಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಗಳನ್ನು ನಡೆಸಿದ್ದಲ್ಲಿ, ನ್ಯಾಯಾಲಯದ ಪೂರ್ವಾನುಮತಿಯಿಂದಲ್ಲದೆ, ಅಂಥ ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಷಯವನ್ನು ಯಾರೇ ವ್ಯಕ್ತಿಯು ಮುದ್ರಿಸುವುದು ಅಥವಾ ಪ್ರಕಟಿಸುವುದು ನ್ಯಾಯಸಮ್ಮತವಾಗಿರತಕ್ಕದ್ದಲ್ಲ:

ಪರಂತು, ಪಕ್ಷಕಾರರ ಹೆಸರು ಮತ್ತು ವಿಳಾಸಗಳ ರಹಸ್ಯವನ್ನು ಕಾಪಾಡಿಕೊಂಡು ಬರುವುದಕ್ಕೆ ಒಳಪಟ್ಟು, ಅತ್ಯಾಚಾರದ ಅಪರಾಧಕ್ಕೆ ಸಂಬಂಧಿಸಿದ ಅಧಿವಿಚಾರಣಾ ವ್ಯವಹರಣೆಗಳನ್ನು ಮುದ್ರಿಸುವುದಕ್ಕೆ ಅಥವಾ ಪ್ರಕಟಣೆಗೆ ವಿಧಿಸಿದ್ದ ನಿಷೇಧವನ್ನು ರದ್ದುಪಡಿಸಬಹುದು.

## ಅಧ್ಯಾಯ XXVII

## ಅಸ್ವಸ್ಥಚಿತ್ತದ ಆಪಾದಿತ ವ್ಯಕ್ತಿಗಳ ಬಗ್ಗೆ ಉಪಬಂಧಗಳು

**367. ಆಪಾದಿತ ವ್ಯಕ್ತಿಯು ಅಸ್ವಸ್ಥಚಿತ್ತನಾಗಿರುವ ಸಂದರ್ಭದಲ್ಲಿ ಪ್ರಕ್ರಿಯೆ.-** (1) ವಿಚಾರಣೆಯನ್ನು ನಡೆಸುವ ಮ್ಯಾಜಿಸ್ಟ್ರೇಟನು ವಿಚಾರಣೆಗೆ ಗುರಿಯಾಗಿರುವ ವ್ಯಕ್ತಿಯು ಅಸ್ವಸ್ಥಚಿತ್ತದವನಾಗಿದ್ದಾನೆಂದು ಮತ್ತು ಅದರ ಪರಿಣಾಮವಾಗಿ ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಅಸಮರ್ಥನಾಗಿರುವನೆಂದು ನಂಬಲು ಕಾರಣವಿದ್ದರೆ, ಮ್ಯಾಜಿಸ್ಟ್ರೇಟನು ಅಂಥ ಅಸ್ವಸ್ಥಚಿತ್ತದ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಯನ್ನು ಜಿಲ್ಲೆಯ ಸಿವಿಲ್ ಸರ್ಜನ್ ಅಥವಾ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವೈದ್ಯಕೀಯ ಅಧಿಕಾರಿಯಿಂದ ಪರೀಕ್ಷೆ ಮಾಡಿಸತಕ್ಕದ್ದು ಮತ್ತು ಆನಂತರ ಅಂಥ ಶಸ್ತ್ರಚಿಕಿತ್ಸಕ ಅಥವಾ ಇತರ ಅಧಿಕಾರಿಯನ್ನು ಸಾಕ್ಷಿದಾರನಾಗಿ ವಿಚಾರಣೆ ಮಾಡತಕ್ಕದ್ದು ಮತ್ತು ಆ ವಿಚಾರಣೆಯು ಲಿಖಿತದಲ್ಲಿರತಕ್ಕದ್ದು.

(2) ಆಪಾದಿತನು ಅಸ್ವಸ್ಥಚಿತ್ತ ವ್ಯಕ್ತಿಯೆಂದು ಸಿವಿಲ್ ಸರ್ಜನ್‌ಗೆ ಕಂಡುಬಂದರೆ, ಆತನು ಅಂಥ ವ್ಯಕ್ತಿಯನ್ನು ಆರೈಕೆಗಾಗಿ, ಚಿಕಿತ್ಸೆಗಾಗಿ ಅಥವಾ ಆ ವ್ಯಕ್ತಿಯ ಪರಿಸ್ಥಿತಿಯ ಮುಂಗಾಣಿಕೆಗಾಗಿ, ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ವೈದ್ಯಕೀಯ ಕಾಲೇಜಿನ ಮನೋರೋಗ ತಜ್ಞನಲ್ಲಿಗೆ ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞನ ಬಳಿಗೆ ಕಳುಹಿಸತಕ್ಕದ್ದು. ಸಂದರ್ಭಾನುಸಾರ, ಮನೋರೋಗ ತಜ್ಞನು ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞನು ಆ ಆಪಾದಿತನು ಅಸ್ವಸ್ಥಚಿತ್ತದಿಂದ ಅಥವಾ ಬೌದ್ಧಿಕ ಅಸಮರ್ಥತೆಯಿಂದ ಬಳಲುತ್ತಿರುವನೇ ಎಂಬುದನ್ನು ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕದ್ದು:

ಪರಂತು, ಆಪಾದಿತನು, ಸಂದರ್ಭಾನುಸಾರ, ಮನೋರೋಗ ತಜ್ಞ ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞ ವೈದ್ಯನು ಮ್ಯಾಜಿಸ್ಟ್ರೇಟನಿಗೆ ಕೊಟ್ಟ ಮಾಹಿತಿಯಿಂದ ಬಾಧಿತನಾಗಿದ್ದರೆ, ಅವನು ವೈದ್ಯಕೀಯ ಮಂಡಳಿಗೆ ಅಪೀಲು ಸಲ್ಲಿಸಬಹುದು, ವೈದ್ಯಕೀಯ ಮಂಡಳಿಯಲ್ಲಿ ಈ ಮುಂದಿನವರು ಒಳಗೊಂಡಿರತಕ್ಕದ್ದು,-

(ಎ) ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ಇರುವ ಮನೋರೋಗ ಘಟಕದ ಮುಖ್ಯಸ್ಥ; ಮತ್ತು

(ಬಿ) ಸಮೀಪದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಇರುವ ಮನೋರೋಗ ವಿಭಾಗದ ಸದಸ್ಯ.

(3) ಅಂಥ ಪರೀಕ್ಷೆ ಮತ್ತು ವಿಚಾರಣೆಯು ಆಗುವವರೆಗೆ, ಮ್ಯಾಜಿಸ್ಟ್ರೇಟನು ಅಂಥ ವ್ಯಕ್ತಿಯೊಡನೆ 369ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ವ್ಯವಹರಿಸಬಹುದು.

(4) (2)ನೇ ಉಪಪ್ರಕರಣದಲ್ಲಿ ಹೇಳಿರುವ ವ್ಯಕ್ತಿಯು ಅಸ್ವಸ್ಥಚಿತ್ತನೆಂದು ಮ್ಯಾಜಿಸ್ಟ್ರೇಟನಿಗೆ ತಿಳಿಸಿದ್ದರೆ, ಆಪಾದಿತನ ಪರ ಪ್ರತಿರಕ್ಷೆ ವಾದವನ್ನು ಮಂಡಿಸಲು ಆತನ ಅಸ್ವಸ್ಥಚಿತ್ತ ಸ್ಥಿತಿಯು ಆತನನ್ನು ಅಸಮರ್ಥಗೊಳಿಸುತ್ತಿದೆಯೇ ಎನ್ನುವುದನ್ನು ಮ್ಯಾಜಿಸ್ಟ್ರೇಟನು ನಿರ್ಣಯಿಸತಕ್ಕದ್ದು ಮತ್ತು ಆಪಾದಿತನು ಹಾಗೆ ಅಸಮರ್ಥನೆಂದು ಕಂಡುಬಂದರೆ, ಆ ಬಗ್ಗೆ ಮ್ಯಾಜಿಸ್ಟ್ರೇಟನು ನಿರ್ಣಯವನ್ನು ದಾಖಲಿಸತಕ್ಕದ್ದು ಮತ್ತು ಪ್ರಾಸಿಕ್ಯೂಷನ್‌ನವರು ಹಾಜರುಪಡಿಸಿದ ಸಾಕ್ಷ್ಯದ ದಾಖಲೆಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಆಪಾದಿತನ ನ್ಯಾಯವಾದಿಯ ವಾದವನ್ನು ಆಲಿಸಿದ ನಂತರ, ಆದರೆ, ಆಪಾದಿತನನ್ನು ಪ್ರಶ್ನಿಸದೆಯೇ, ಆಪಾದಿತನ ವಿರುದ್ಧ ಮೇಲ್ನೋಟಕ್ಕೆ ಕಂಡುಬರುವ ಸಂಗತಿ ಯಾವುದೂ ಇಲ್ಲ ಎಂದು ಕಂಡುಬಂದರೆ, ಮ್ಯಾಜಿಸ್ಟ್ರೇಟನು ವಿಚಾರಣೆಯನ್ನು

ಮುಂದುವರಿಸದೆಯೇ ಆಪಾದಿತನನ್ನು ವಿಮೋಚನೆಗೊಳಿಸತಕ್ಕದ್ದು ಮತ್ತು 369ನೇ ಪ್ರಕರಣದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಆತನೊಡನೆ ವ್ಯವಹರಿಸತಕ್ಕದ್ದು:

ಪರಂತು, ಯಾವ ಆಪಾದಿತನು ಅಸ್ವಸ್ಥಚಿತ್ತನೆಂದು ನಿರ್ಣಯಕ್ಕೆ ಬರಲಾಗಿದೆಯೋ ಆ ಆಪಾದಿತನ ವಿರುದ್ಧ ಮೇಲ್ನೋಟಕ್ಕೆ ಕಂಡುಬರುವ ಸಂಗತಿ ಇದೆ ಎಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಯಾವ ಅವಧಿಯವರೆಗೆ ಆಪಾದಿತನ ಚಿಕಿತ್ಸೆಯು ಅಗತ್ಯ ಇದೆಯೆಂದು ಮನೋರೋಗತಜ್ಞ ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞನು ಅಭಿಪ್ರಾಯಪಡುವನೋ ಆ ಅವಧಿಯವರೆಗೆ ವ್ಯವಹರಣೆಗಳನ್ನು ಮುಂದೂಡತಕ್ಕದ್ದು ಮತ್ತು ಆಪಾದಿತನೊಡನೆ 369ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದಂತೆ ವ್ಯವಹರಿಸಬೇಕೆಂದು ಆದೇಶಿಸತಕ್ಕದ್ದು.

(5) (2)ನೇ ಉಪಪ್ರಕರಣದಲ್ಲಿ ಹೇಳಿರುವ ವ್ಯಕ್ತಿಯು ಬೌದ್ಧಿಕ ಅಸಮರ್ಥತೆಯುಳ್ಳ ವ್ಯಕ್ತಿಯೆಂದು ಮ್ಯಾಜಿಸ್ಟ್ರೇಟನಿಗೆ ತಿಳಿಸಿದ್ದರೆ, ತನ್ನ ಪರ ಪ್ರತಿರಕ್ಷೆಯ ವಾದವನ್ನು ಮಂಡಿಸಲು ಆತನ ಬೌದ್ಧಿಕ ಅಸಮರ್ಥತೆಯು ಆತನನ್ನು ಅಸಮರ್ಥಗೊಳಿಸುತ್ತಿದೆಯೇ ಎನ್ನುವುದನ್ನು ಮ್ಯಾಜಿಸ್ಟ್ರೇಟನು ನಿರ್ಣಯಿಸತಕ್ಕದ್ದು ಮತ್ತು ಆಪಾದಿತನು, ಹಾಗೆ ಅಸಮರ್ಥನೆಂದು ಕಂಡುಬಂದರೆ, ಮ್ಯಾಜಿಸ್ಟ್ರೇಟನು ವಿಚಾರಣೆಯನ್ನು ಮುಕ್ತಾಯಗೊಳಿಸಿದೆ ಎಂದು ಆದೇಶ ಮಾಡತಕ್ಕದ್ದು ಮತ್ತು ಆಪಾದಿತನೊಡನೆ 369ನೇ ಪ್ರಕರಣದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ವ್ಯವಹರಿಸತಕ್ಕದ್ದು.

**368. ನ್ಯಾಯಾಲಯದಲ್ಲಿ ಅಸ್ವಸ್ಥಚಿತ್ತದ ವ್ಯಕ್ತಿಯ ಅಧಿವಿಚಾರಣೆಯ ಸಂದರ್ಭದಲ್ಲಿ ಪ್ರಕ್ರಿಯೆ.-** (1) ಮ್ಯಾಜಿಸ್ಟ್ರೇಟನ ಅಥವಾ ಸೆಷನ್ ನ್ಯಾಯಾಲಯದ ಮುಂದೆ ನಡೆಯುವ ಯಾರೇ ವ್ಯಕ್ತಿಯ ಅಧಿವಿಚಾರಣೆಯಲ್ಲಿ, ಆ ವ್ಯಕ್ತಿಯು ಅಸ್ವಸ್ಥಚಿತ್ತನೆಂದು ಮತ್ತು ಅದರ ಪರಿಣಾಮವಾಗಿ, ಆತನು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಅಸಮರ್ಥನಾಗಿರುವನೆಂದು ಮ್ಯಾಜಿಸ್ಟ್ರೇಟನಿಗೆ ಅಥವಾ ನ್ಯಾಯಾಲಯಕ್ಕೆ ಕಂಡುಬಂದರೆ, ಆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ಮೊದಲು ಅಂಥ ಅಸ್ವಸ್ಥಚಿತ್ತದ ಮತ್ತು ಅಸಮರ್ಥತೆಯ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ತನ್ನ ಮುಂದೆ ಹಾಜರುಪಡಿಸಬಹುದಾದಂಥ ವೈದ್ಯಕೀಯ ಅಥವಾ ಇತರ ಸಾಕ್ಷ್ಯವನ್ನು ಪರ್ಯಾಲೋಚಿಸಿದ ನಂತರ ಆ ಬಗ್ಗೆ ಅವನಿಗೆ ಮನದಟ್ಟಾದರೆ, ಅವನು ಅಥವಾ ಅದು, ಆ ಬಗ್ಗೆ ನಿರ್ಣಯವನ್ನು ದಾಖಲಿಸತಕ್ಕದ್ದು ಮತ್ತು ಮೊಕದ್ದಮೆಯಲ್ಲಿನ ಮುಂದಿನ ವ್ಯವಹರಣೆಗಳನ್ನು ಮುಂದೂಡತಕ್ಕದ್ದು.

(2) ಅಧಿವಿಚಾರಣೆಯ ಸಂದರ್ಭದಲ್ಲಿ, ಆಪಾದಿತನು ಅಸ್ವಸ್ಥಚಿತ್ತನೆಂದು ಮ್ಯಾಜಿಸ್ಟ್ರೇಟ್ ಅಥವಾ ಸೆಷನ್ ನ್ಯಾಯಾಲಯಕ್ಕೆ ಕಂಡುಬಂದರೆ, ಆತನು ಅಂಥ ವ್ಯಕ್ತಿಯನ್ನು ಆರೈಕೆಗಾಗಿ ಮತ್ತು ಚಿಕಿತ್ಸೆಗಾಗಿ ಮನೋರೋಗ ತಜ್ಞನಲ್ಲಿಗೆ ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞನ ಬಳಿಗೆ ಕಳುಹಿಸತಕ್ಕದ್ದು ಮತ್ತು ಸಂದರ್ಭಾನುಸಾರ ಮನೋರೋಗ ತಜ್ಞನು ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞನು ಆ ಆಪಾದಿತನು ಅಸ್ವಸ್ಥಚಿತ್ತತೆಯಿಂದ ಬಳಲುತ್ತಿರುವನೆಂದು ಮ್ಯಾಜಿಸ್ಟ್ರೇಟನಿಗೆ ಅಥವಾ ನ್ಯಾಯಾಲಯಕ್ಕೆ ವರದಿ ಮಾಡತಕ್ಕದ್ದು:

ಪರಂತು, ಸಂದರ್ಭಾನುಸಾರ, ಮನೋರೋಗ ತಜ್ಞ ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞನು ಮ್ಯಾಜಿಸ್ಟ್ರೇಟನಿಗೆ ಕೊಟ್ಟ ಮಾಹಿತಿಯಿಂದ ಆಪಾದಿತನು ಬಾಧಿತನಾದರೆ, ಅವನು ವೈದ್ಯಕೀಯ ಮಂಡಳಿಗೆ ಅಪೀಲು ಸಲ್ಲಿಸಬಹುದು, ವೈದ್ಯಕೀಯ ಮಂಡಳಿಯಲ್ಲಿ ಈ ಮುಂದಿನವರು ಒಳಗೊಂಡಿರತಕ್ಕದ್ದು,-

(ಎ) ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ಇರುವ ಮನೋರೋಗ ಘಟಕದ ಮುಖ್ಯಸ್ಥ; ಮತ್ತು

(ಬಿ) ಸಮೀಪದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಇರುವ ಮನೋರೋಗ ವಿಭಾಗದ ಸದಸ್ಯ.

(3) (2)ನೇ ಉಪಪ್ರಕರಣದಲ್ಲಿ ಹೇಳಿರುವ ವ್ಯಕ್ತಿಯು ಅಸ್ವಸ್ಥಚಿತ್ತನೆಂದು ಮ್ಯಾಜಿಸ್ಟ್ರೇಟನಿಗೆ ಅಥವಾ ನ್ಯಾಯಾಲಯಕ್ಕೆ ತಿಳಿಸಿದ್ದರೆ, ಆಪಾದಿತನ ಪರ ಪ್ರತಿರಕ್ಷೆ ವಾದವನ್ನು ಮಂಡಿಸಲು ಆತನ ಅಸ್ವಸ್ಥಚಿತ್ತ ಸ್ಥಿತಿಯು ಆತನನ್ನು ಅಸಮರ್ಥಗೊಳಿಸುತ್ತಿದೆಯೇ ಎನ್ನುವುದನ್ನು ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ನಿರ್ಣಯಿಸತಕ್ಕದ್ದು ಮತ್ತು ಆಪಾದಿತನು ಹಾಗೆ ಅಸಮರ್ಥನೆಂದು ಕಂಡುಬಂದರೆ, ಆ ಬಗ್ಗೆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ನಿರ್ಣಯವನ್ನು ದಾಖಲಿಸತಕ್ಕದ್ದು ಮತ್ತು ಪ್ರಾಸಿಕ್ಯೂಷನ್‌ನವರು ಹಾಜರುಪಡಿಸಿದ ಸಾಕ್ಷ್ಯದ ದಾಖಲೆಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಆಪಾದಿತನ ನ್ಯಾಯವಾದಿಯ ವಾದವನ್ನು ಆಲಿಸಿದ ನಂತರ, ಆದರೆ, ಆಪಾದಿತನನ್ನು ಪ್ರಶ್ನಿಸದೆಯೇ, ಆಪಾದಿತನ ವಿರುದ್ಧ ಮೇಲ್ನೋಟಕ್ಕೆ ಕಂಡುಬರುವ ಸಂಗತಿ ಯಾವುದೂ ಇಲ್ಲ ಎಂದು ಕಂಡುಬಂದರೆ, ಅವನು ಅಥವಾ ಅದು ಅಧಿವಿಚಾರಣೆಯನ್ನು ಮುಂದುವರಿಸದೆಯೇ ಆಪಾದಿತನನ್ನು ವಿಮೋಚನೆಗೊಳಿಸತಕ್ಕದ್ದು ಮತ್ತು 369ನೇ ಪ್ರಕರಣದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಆತನೊಡನೆ ವ್ಯವಹರಿಸತಕ್ಕದ್ದು:

ಪರಂತು, ಯಾವ ಆಪಾದಿತನು ಅಸ್ವಸ್ಥಚಿತ್ತನೆಂದು ನಿರ್ಣಯಕ್ಕೆ ಬರಲಾಗಿದೆಯೋ ಆ ಆಪಾದಿತನ ವಿರುದ್ಧ ಮೇಲ್ನೋಟಕ್ಕೆ ಕಂಡುಬರುವ ಸಂಗತಿ ಇದೆ ಎಂದು ಮ್ಯಾಜಿಸ್ಟ್ರೇಟನಿಗೆ ಅಥವಾ ನ್ಯಾಯಾಲಯಕ್ಕೆ ಕಂಡುಬಂದರೆ, ಯಾವ ಅವಧಿಯವರೆಗೆ ಆಪಾದಿತನ ಚಿಕಿತ್ಸೆಯು ಅಗತ್ಯ ಇದೆಯೆಂದು ಮನೋರೋಗ ತಜ್ಞ ಅಥವಾ ಚಿಕಿತ್ಸಾ ಮನಃಶಾಸ್ತ್ರಜ್ಞನು ಅಭಿಪ್ರಾಯಪಡುವನೋ ಆ ಅವಧಿಯವರೆಗೆ ವ್ಯವಹರಣೆಗಳನ್ನು ಮುಂದೂಡತಕ್ಕದ್ದು.

(4) ಮ್ಯಾಜಿಸ್ಟ್ರೇಟನಿಗೆ ಅಥವಾ ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಆಪಾದಿತನಿಂದ ಅಪರಾಧವಾಗಿದೆಯೆಂದು ಕಂಡುಬಂದರೆ ಮತ್ತು ಬೌದ್ಧಿಕ ಅಸಮರ್ಥತೆಯಿಂದಾಗಿ ತನ್ನ ಪರ ಪ್ರತಿರಕ್ಷೆಯ ವಾದವನ್ನು ಮಂಡಿಸಲು ಆಪಾದಿತನಿಗೆ ಸಾಧ್ಯವಾಗುತ್ತಿಲ್ಲವೆಂಬುದು ಕಂಡುಬಂದರೆ, ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಅಧಿವಿಚಾರಣೆಯನ್ನು ನಡೆಸತಕ್ಕದ್ದಲ್ಲ ಮತ್ತು ಆಪಾದಿತನೊಡನೆ 369ನೇ ಪ್ರಕರಣದ ಅನುಸಾರವಾಗಿ ವ್ಯವಹರಿಸಬೇಕೆಂದು ಆದೇಶಿಸತಕ್ಕದ್ದು.

**369. ತನಿಖೆ ಅಥವಾ ಅಧಿವಿಚಾರಣೆ ಬಾಕಿ ಇರುವಾಗ ಅಸ್ವಸ್ಥಚಿತ್ತ ವ್ಯಕ್ತಿಯ ಬಿಡುಗಡೆ.-** (1) ಯಾರೇ ವ್ಯಕ್ತಿಯು ಅಸ್ವಸ್ಥಚಿತ್ತನೆಂದು ಅಥವಾ ಬೌದ್ಧಿಕ ಅಸಮರ್ಥತೆಯ ಕಾರಣದಿಂದಾಗಿ ತನ್ನನ್ನು ತಾನು ಪ್ರತಿರಕ್ಷಿಸಿಕೊಳ್ಳಲು ಅಸಮರ್ಥನಾಗಿದ್ದಾನೆಂದು 367ನೇ ಪ್ರಕರಣದ ಅಥವಾ 368ನೇ ಪ್ರಕರಣದ ಮೇರೆಗೆ ಕಂಡುಬಂದರೆ, ಸಂದರ್ಭಾನುಸಾರ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ಆ ಮೊಕದ್ದಮೆಯಲ್ಲಿ ಜಾಮೀನನ್ನು ತೆಗೆದುಕೊಳ್ಳಬಹುದಾಗಿರಲಿ ಅಥವಾ ಇಲ್ಲದಿರಲಿ, ಅಂಥ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು:

ಪರಂತು, ಒಳರೋಗಿಯಾಗಿ ಚಿಕಿತ್ಸೆ ಪಡೆಯುವುದು ಕಡ್ಡಾಯವಲ್ಲದಂಥ ಅಸ್ವಸ್ಥಚಿತ್ತತೆಯಿಂದ ಅಥವಾ ಬೌದ್ಧಿಕ ಅಸಮರ್ಥತೆಯಿಂದ ಬಳಲುತ್ತಿರುವ ಆಪಾದಿತನನ್ನು ಆತನ ಸ್ನೇಹಿತ ಅಥವಾ ಸಂಬಂಧಿಯು ಸಮೀಪದ ವೈದ್ಯಕೀಯ ಸೌಕರ್ಯ ಇರುವ ಕಡೆ ನಿಯತವಾಗಿ ಹೊರರೋಗಿಯಾಗಿ ಮನೋರೋಗ ಚಿಕಿತ್ಸೆಯನ್ನು ಮಾಡಿಸುವುದಾಗಿ ಮತ್ತು ಸ್ವತಃ ಆಪಾದಿತನು ತನಗೆ ಕ್ಷತಿ ಮಾಡಿಕೊಳ್ಳದಂತೆ ಅಥವಾ ಯಾರೇ ಇತರ ವ್ಯಕ್ತಿಗೆ ಯಾವುದೇ ಕ್ಷತಿ ಮಾಡದಂತೆ ತಡೆಯುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿರಬೇಕು.

(2) ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಅಭಿಪ್ರಾಯದಲ್ಲಿ ಅದು ಜಾಮೀನನ್ನು ಮಂಜೂರು ಮಾಡಲಾರದಂಥ ಮೊಕದ್ದಮೆಯಾಗಿದ್ದರೆ ಅಥವಾ ಸೂಕ್ತ ಮುಚ್ಚಳಿಕೆಯನ್ನು ಬರೆದುಕೊಡದಿದ್ದರೆ, ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ಆಪಾದಿತನಿಗೆ ನಿಯತವಾಗಿ ಮನೋರೋಗ ಚಿಕಿತ್ಸೆಯನ್ನು ಒದಗಿಸುವಂಥ ಸ್ಥಳದಲ್ಲಿ ಆಪಾದಿತನನ್ನು

ಸುರಕ್ಷಿತ ಅಭಿರಕ್ಷೆಯಲ್ಲಿ ಇರಿಸುವಂತೆ ಆದೇಶಿಸತಕ್ಕದ್ದು ಮತ್ತು ಆ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು:

ಪರಂತು, ಆಪಾದಿತನನ್ನು ಸಾರ್ವಜನಿಕ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ಇರಿಸುವುದಕ್ಕಾಗಿ ಮಾನಸಿಕ ಆರೋಗ್ಯ ಅಧಿನಿಯಮ, 2017 (2017 ರ 10)ರ ಮೇರೆಗೆ ರಾಜ್ಯ ಸರ್ಕಾರವು ರಚಿಸಿರಬಹುದಾದಂಥ ನಿಯಮಗಳಿಗನುಸಾರವಾಗಿ ಹೊರತು, ಅನ್ಯಥಾ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(3) 367ನೇ ಪ್ರಕರಣದ ಅಥವಾ 368ನೇ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯು ಅಸ್ವಸ್ತಚಿತ್ತನೆಂದು ಅಥವಾ ಬೌದ್ಧಿಕ ಅಸಮರ್ಥತೆಯ ಕಾರಣದಿಂದಾಗಿ ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಅಸಮರ್ಥನಾಗಿದ್ದಾನೆಂದು ಕಂಡುಬಂದಲ್ಲಿ, ಸಂದರ್ಭಾನುಸಾರ, ಮಾಡಿದ ಕೃತ್ಯದ ಸ್ವರೂಪವನ್ನು ಮತ್ತು ಮಾನಸಿಕ ಅಸ್ವಸ್ಥತೆಯ ಅಥವಾ ಬೌದ್ಧಿಕ ಅಸಮರ್ಥತೆಯ ತೀವ್ರತೆಯನ್ನು ಗಮನಿಸಿ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಆಪಾದಿತನನ್ನು ಬಿಡುಗಡೆಗೊಳಿಸಬಹುದೇ ಎಂಬುದನ್ನು ನಿರ್ಣಯಿಸತಕ್ಕದ್ದು:

ಪರಂತು,-

(ಎ) ವೈದ್ಯಕೀಯ ಅಭಿಪ್ರಾಯದ ಅಥವಾ ತಜ್ಞನ ಅಭಿಪ್ರಾಯದ ಆಧಾರದ ಮೇಲೆ ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು 367ನೇ ಪ್ರಕರಣದ ಅಥವಾ ಅಥವಾ 368ನೇ ಪ್ರಕರಣದ ಮೇರೆಗೆ ಉಪಬಂಧಿಸಿರುವಂತೆ ಆಪಾದಿತನನ್ನು ಬಿಡುಗಡೆಗೆ ಆದೇಶಿಸಲು ನಿರ್ಣಯಿಸಿದ್ದರೆ, ಆಪಾದಿತನು ತನಗೆ ತಾನೇ ಕ್ಷತಿ ಮಾಡಿಕೊಳ್ಳದಂತೆ ಅಥವಾ ಇತರ ಯಾರೇ ವ್ಯಕ್ತಿಗೆ ಕ್ಷತಿ ಮಾಡದಂತೆ ತಡೆಯಲು ಸಾಕಷ್ಟು ಭದ್ರತೆಯನ್ನು ಒದಗಿಸಿದರೆ ಅಂಥ ಆದೇಶವನ್ನು ಮಾಡಬಹುದು;

(ಬಿ) ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಆಪಾದಿತನ ಬಿಡುಗಡೆಗೆ ಆದೇಶವನ್ನು ಮಾಡಲಾಗದು ಎಂದು ಅಭಿಪ್ರಾಯಪಟ್ಟರೆ, ಆಪಾದಿತನನ್ನು ಅಸ್ವಸ್ಥಚಿತ್ತತೆ ಅಥವಾ ಬೌದ್ಧಿಕ ಅಸಮರ್ಥತೆಯ ವ್ಯಕ್ತಿಗಳಿಗಾಗಿ ವಸತಿ ಸೌಲಭ್ಯವಿರುವ ಕೇಂದ್ರಕ್ಕೆ ಕಳುಹಿಸಲು ಆದೇಶಿಸಬಹುದು ಮತ್ತು ಅಲ್ಲಿ ಅವನಿಗೆ ಆರೈಕೆಯನ್ನು ಮತ್ತು ಸೂಕ್ತ ಶಿಕ್ಷಣವನ್ನು ಮತ್ತು ತರಬೇತಿಯನ್ನು ಒದಗಿಸಬಹುದು.

**370. ವಿಚಾರಣೆ ಅಥವಾ ಅಧಿವಿಚಾರಣೆಯ ಪುನರಾರಂಭ.-** (1) 367ನೇ ಪ್ರಕರಣ ಅಥವಾ 368ನೇ ಪ್ರಕರಣದ ಮೇರೆಗೆ ವಿಚಾರಣೆ ಅಥವಾ ಅಧಿವಿಚಾರಣೆಯನ್ನು ಮುಂದೂಡಿದಾಗ, ಆಗ ಯಾವುದೇ ಸಮಯದಲ್ಲಿ, ಸಂಬಂಧಪಟ್ಟ ವ್ಯಕ್ತಿಯ ಮನಸ್ಸಿನ ಅಸ್ವಸ್ಥತೆಯು ನಿವಾರಣೆಯಾಗಿದ್ದಲ್ಲಿ, ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ವಿಚಾರಣೆ ಅಥವಾ ಅಧಿವಿಚಾರಣೆಯನ್ನು ಪುನಃ ಪ್ರಾರಂಭಿಸಬಹುದು ಮತ್ತು ಆಪಾದಿತನನ್ನು, ಅಂಥ ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ ಹಾಜರಾಗಲು ಅಥವಾ ಕರೆತರಲು ಅಗತ್ಯಪಡಿಸಬಹುದು.

(2) ಆಪಾದಿತನನ್ನು 369ನೇ ಪ್ರಕರಣದ ಮೇರೆಗೆ ಬಿಡುಗಡೆ ಮಾಡಿದಾಗ ಮತ್ತು ಅವನ ಹಾಜರಾತಿಗಾಗಿ ಜಾಮೀನುದಾರನು, ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಈ ಬಗ್ಗೆ ನೇಮಕ ಮಾಡುವ ಅಧಿಕಾರಿಯ ಮುಂದೆ ಅವನನ್ನು ಹಾಜರುಪಡಿಸಿದಾಗ, ಆಪಾದಿತನು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಸಮರ್ಥನಾಗಿರುವನೆಂದು ಅಂಥ ಅಧಿಕಾರಿಯು ಕೊಟ್ಟ ಪ್ರಮಾಣಪತ್ರವನ್ನು ಸಾಕ್ಷ್ಯವಾಗಿ ಸ್ವೀಕರಿಸಬಹುದಾದುದಾಗಿರತಕ್ಕದ್ದು.

**371. ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ ಆಪಾದಿತನು ಹಾಜರಾದ ಮೇಲೆ ಪ್ರಕ್ರಿಯೆ.-** (1) ಆಪಾದಿತನು, ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ ಹಾಜರಾದಾಗ ಅಥವಾ ಅವನನ್ನು ಮತ್ತೆ ಕರೆತಂದಾಗ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಅವನು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಸಮರ್ಥನಾಗಿರುವನೆಂದು ಪರಿಗಣಿಸಿದಾಗ ವಿಚಾರಣೆ ಅಥವಾ ಅಧಿವಿಚಾರಣೆಯು ಮುಂದುವರಿಯತಕ್ಕದ್ದು.

(2) ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ಆಪಾದಿತನು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಇನ್ನೂ ಅಸಮರ್ಥನಾಗಿರುವನೆಂದು ಪರಿಗಣಿಸಿದರೆ, ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, 367ನೇ ಪ್ರಕರಣ ಅಥವಾ 368ನೇ ಪ್ರಕರಣದ ಉಪಬಂಧಗಳ ಅನುಸಾರ ಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ಆಪಾದಿತನು ಅಸ್ವಸ್ಥಚಿತ್ತದವನೆಂದು ಮತ್ತು ಅದರ ಪರಿಣಾಮವಾಗಿ ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಅಸಮರ್ಥನಾಗಿರುವನೆಂದು ಕಂಡುಬಂದರೆ, ಅಂಥ ಆಪಾದಿತನೊಡನೆ 369ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ವ್ಯವಹರಿಸತಕ್ಕದ್ದು.

**372. ಆಪಾದಿತನು ಸ್ವಸ್ಥಚಿತ್ತದವನೆಂದು ಕಂಡುಬಂದಾಗ.-** ವಿಚಾರಣೆ ಅಥವಾ ಅಧಿವಿಚಾರಣೆಯ ಸಮಯದಲ್ಲಿ ಆಪಾದಿತನು ಸ್ವಸ್ಥಚಿತ್ತದವನೆಂದು ಕಂಡುಬಂದರೆ ಮತ್ತು ಆಪಾದಿತನು ಸ್ವಸ್ಥಚಿತ್ತದವನಾಗಿದ್ದರೆ ಅಪರಾಧವಾಗಬಹುದಾಗಿದ್ದ ಕೃತ್ಯವನ್ನು ಮಾಡಿರುವನೆಂದು ನಂಬಲು ಕಾರಣವಿರುವುದೆಂದು ಮತ್ತು ಅವನು ಕೃತ್ಯವನ್ನು ಮಾಡಿದ್ದಾಗ ಅಸ್ವಸ್ಥಚಿತ್ತದಿಂದಾಗಿ ಕೃತ್ಯದ ಸ್ವರೂಪವನ್ನು ಅಥವಾ ಅದು ತಪ್ಪು ಅಥವಾ ಕಾನೂನಿಗೆ ವಿರುದ್ಧವಾದದ್ದು ಎಂಬುದನ್ನು ತಿಳಿಯಲು ಅಸಮರ್ಥನಾಗಿದ್ದಾನೆಂದು ತನ್ನ ಮುಂದೆ ನೀಡಲಾದ ಸಾಕ್ಷ್ಯದಿಂದ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಮ್ಯಾಜಿಸ್ಟ್ರೇಟನು ಮೊಕದ್ದಮೆಯನ್ನು ಮುಂದುವರಿಸತಕ್ಕದ್ದು ಮತ್ತು ಆಪಾದಿತನನ್ನು ಸೆಷನ್ ನ್ಯಾಯಾಲಯವು ಅಧಿವಿಚಾರಣೆ ಮಾಡಬೇಕಾಗಿದ್ದರೆ, ಸೆಷನ್ ನ್ಯಾಯಾಲಯದ ಮುಂದೆ ಅಧಿವಿಚಾರಣೆಗಾಗಿ ಅವನನ್ನು ಒಪ್ಪಿಸತಕ್ಕದ್ದು.

**373. ಅಸ್ವಸ್ಥಚಿತ್ತದ ಕಾರಣದ ಮೇಲೆ ನಿರಪರಾಧಿಯೆಂದು ತೀರ್ಪು.-** ಯಾವ ಸಮಯದಲ್ಲಿ ಅಪರಾಧವನ್ನು ಮಾಡಿರುವುದಾಗಿ ಯಾವ ವ್ಯಕ್ತಿಯು ಆಪಾದಿತನಾಗಿರುವನೋ, ಆ ಸಮಯದಲ್ಲಿ, ಅವನ ಅಸ್ವಸ್ಥಚಿತ್ತದ ಕಾರಣದಿಂದಾಗಿ ಅಪರಾಧ ಘಟಿಸಿದೆಯೆಂಬ ಮತ್ತು ಆಪಾದಿಸಲಾದ ಕೃತ್ಯದ ಸ್ವರೂಪವನ್ನು ಅಥವಾ ಅದು ತಪ್ಪು ಅಥವಾ ಕಾನೂನಿಗೆ ವಿರುದ್ಧವಾದುದೆಂದು ತಿಳಿಯಲು ಅಸಮರ್ಥನಾಗಿದ್ದನೆಂಬ ಕಾರಣದ ಮೇಲೆ ಆ ಯಾರೇ ವ್ಯಕ್ತಿ ನಿರಪರಾಧಿಯೆಂದು ನಿರ್ಣಯವಾದಾಗ, ಆ ನಿರ್ಣಯವು, ಅವನು ಕೃತ್ಯವನ್ನು ಮಾಡಿದ್ದಾನೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸತಕ್ಕದ್ದು.

**374. ಅಂಥ ಅಸ್ವಸ್ಥಚಿತ್ತತೆ ಕಾರಣದ ಮೇಲೆ ನಿರಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ತಡೆಹಿಡಿದಿಡುವುದು.-** (1) ಆಪಾದಿತ ವ್ಯಕ್ತಿಯು, ಆಪಾದಿಸಲಾದ ಕೃತ್ಯವನ್ನು ಮಾಡಿರುವನೆಂದು ನಿರ್ಣಯವು ತಿಳಿಸಿದಾಗ, ಯಾವ ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಸಲಾಯಿತೋ ಆ ಮ್ಯಾಜಿಸ್ಟ್ರೇಟನಿಗೆ ಅಥವಾ ನ್ಯಾಯಾಲಯಕ್ಕೆ ಅಸಾಮರ್ಥ್ಯವು ಕಂಡುಬಂದಿರದಿದ್ದ ಸಂದರ್ಭದಲ್ಲಿ ಅಂಥ ಕೃತ್ಯವು ಅಪರಾಧವಾಗಬಹುದಾಗಿದ್ದರೆ,-

(ಎ) ಅಂಥ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಸೂಕ್ತವೆಂದು ಭಾವಿಸುವಂಥ ಸ್ಥಳ ಮತ್ತು ರೀತಿಯಲ್ಲಿ ಸುರಕ್ಷಿತ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಲು ಆದೇಶಿಸತಕ್ಕದ್ದು; ಅಥವಾ

(ಬಿ) ಅಂಥ ವ್ಯಕ್ತಿಯನ್ನು, ಅವನ ಯಾರೇ ಸಂಬಂಧಿಕನಿಗೆ ಅಥವಾ ಸ್ನೇಹಿತನಿಗೆ ಒಪ್ಪಿಸಲು ಆದೇಶಿಸತಕ್ಕದ್ದು.

(2) ಮಾನಸಿಕ ಆರೋಗ್ಯಪಾಲನೆ ಅಧಿನಿಯಮ, 2017 (2017ರ 10)ರ ಮೇರೆಗೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗನುಸಾರವಾಗಿ ಹೊರತು, ಆಪಾದಿತನನ್ನು ಸರ್ಕಾರಿ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ತಡೆಹಿಡಿದಿಡುವುದಕ್ಕಾಗಿ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

(3) ಆಪಾದಿತನನ್ನು ಆತನ ಸಂಬಂಧಿಕನಿಗೆ ಅಥವಾ ಸ್ನೇಹಿತನಿಗೆ ಒಪ್ಪಿಸುವುದಕ್ಕಾಗಿ ಅಂಥ ಸಂಬಂಧಿಕನ ಅಥವಾ ಸ್ನೇಹಿತನ ಅರ್ಜಿಯ ಮೇಲೆ ಹೊರತು ಮತ್ತು ಹಾಗೆ ಒಪ್ಪಿಸಲಾದ ವ್ಯಕ್ತಿಯನ್ನು,-

(ಎ) ಸರಿಯಾಗಿ ಪಾಲನೆ ಮಾಡಲಾಗುವುದೆಂದು ಮತ್ತು ಅವನು ತನಗೆ ತಾನೇ ಕ್ಷತಿಯುಂಟು ಮಾಡಿಕೊಳ್ಳದಂತೆ ಅಥವಾ ಇತರ ಯಾರೇ ವ್ಯಕ್ತಿಗೆ ಕ್ಷತಿಯುಂಟು ಮಾಡದಂತೆ ತಡೆಯಲಾಗುವುದೆಂಬ ಬಗ್ಗೆ;

(ಬಿ) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಅಧಿಕಾರಿಯ ಪರಿಶೀಲನೆಗಾಗಿ ಹಾಗೆ ನಿರ್ದೇಶಿಸಿದ ಸಮಯ ಮತ್ತು ಸ್ಥಳಗಳಲ್ಲಿ ಹಾಜರುಪಡಿಸಲಾಗುವುದೆಂಬ ಬಗ್ಗೆ

- ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಒಪ್ಪುವಷ್ಟು ಭದ್ರತೆಯನ್ನು ಒದಗಿಸಿದ ಹೊರತು, (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗಿನ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

(4) (1)ನೇ ಉಪಪ್ರಕರಣದ ಮೇರೆಗೆ ಕೈಗೊಳ್ಳಲಾದ ಕ್ರಮವನ್ನು ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

**375. ಕರ್ತವ್ಯಗಳನ್ನು ನಿರ್ವಹಿಸುವ ಅಧಿಕಾರಿಗೆ ಅಧಿಕಾರ ನೀಡಲು ರಾಜ್ಯ ಸರ್ಕಾರದ ಅಧಿಕಾರ.-** 369ನೇ ಪ್ರಕರಣ ಅಥವಾ 374ನೇ ಪ್ರಕರಣದ ಉಪಬಂಧಗಳ ಮೇರೆಗೆ ವ್ಯಕ್ತಿಯನ್ನು ಬಂಧಿಸಿಡಲಾಗಿರುವ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಯನ್ನು, 376ನೇ ಪ್ರಕರಣ ಅಥವಾ 377ನೇ ಪ್ರಕರಣದ ಮೇರೆಗೆ ಬಂದೀಖಾನೆಗಳ ಮಹಾ-ನಿರೀಕ್ಷಕರು (ಇನ್ಸ್‌ಪೆಕ್ಟರ್ ಜನರಲ್) ಎಲ್ಲಾ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರವು ಅಧಿಕಾರ ನೀಡಬಹುದು.

**376. ಅಸ್ವಸ್ಥಚಿತ್ತನಾದ ಕೈದಿಯು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಸಮರ್ಥನಾಗಿರುವನೆಂದು ವರದಿ ಮಾಡಿದಾಗ ಪ್ರಕ್ರಿಯೆ.-** 369ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಒಬ್ಬ ವ್ಯಕ್ತಿಯನ್ನು ತಡೆಹಿಡಿದಿರಿಸಿದ್ದರೆ ಮತ್ತು ಜೈಲಿನಲ್ಲಿ ತಡೆಹಿಡಿದಿರಿಸಲಾದ ವ್ಯಕ್ತಿಯ ಸಂದರ್ಭದಲ್ಲಿ ಕಾರಾಗೃಹಗಳ ಮಹಾ-ನಿರೀಕ್ಷಕ (ಇನ್ಸ್‌ಪೆಕ್ಟರ್ ಜನರಲ್) ಅಥವಾ ಸಾರ್ವಜನಿಕ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ತಡೆಹಿಡಿದಿರಿಸಲಾದ ವ್ಯಕ್ತಿಯ ಸಂದರ್ಭದಲ್ಲಿ, ಮಾನಸಿಕ ಆರೋಗ್ಯಪಾಲನೆ ಅಧಿನಿಯಮ, 2017 (2017ರ 10)ರ ಮೇರೆಗೆ ರಚಿಸಲಾದ ಮಾನಸಿಕ ಆರೋಗ್ಯ ಪರಿಶೀಲನಾ ಮಂಡಳಿಯು, ತನ್ನ ಹಾಗೂ ತಮ್ಮ ಅಭಿಪ್ರಾಯದಲ್ಲಿ, ಅಂಥ ವ್ಯಕ್ತಿಯು ತನ್ನನ್ನು ತಾನು ಪ್ರತಿರಕ್ಷಿಸಿಕೊಳ್ಳಲು ಸಮರ್ಥನಾಗಿರುವನೆಂದು ಪ್ರಮಾಣೀಕರಿಸತಕ್ಕದ್ದು, ಸಂದರ್ಭಾನುಸಾರ, ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ, ಆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ಗೊತ್ತುಪಡಿಸುವಂಥ ಸಮಯದಲ್ಲಿ ಕರೆದೊಯ್ಯತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ಅಂಥ ವ್ಯಕ್ತಿಯೊಡನೆ 371ನೇ ಪ್ರಕರಣದ ಉಪಬಂಧಗಳ ಮೇರೆಗೆ ವ್ಯವಹರಿಸತಕ್ಕದ್ದು ಮತ್ತು ಹಿಂದೆ ಹೇಳಿದಂತೆ ಮಹಾ-ನಿರೀಕ್ಷಕನ (ಇನ್ಸ್‌ಪೆಕ್ಟರ್ ಜನರಲ್) ಅಥವಾ ಸಂದರ್ಶಕರ ಪ್ರಮಾಣಪತ್ರವನ್ನು ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದು.

**377. ತಡೆಹಿಡಿದಿರಿಸಲಾದ ಅಸ್ವಸ್ಥಚಿತ್ತ ವ್ಯಕ್ತಿಯನ್ನು ಬಿಡುಗಡೆ ಮಾಡುವುದು ಸೂಕ್ತವೆಂದು ಘೋಷಿಸಿದಾಗ ಪ್ರಕ್ರಿಯೆ.-** (1) ಅಂಥ ವ್ಯಕ್ತಿಯನ್ನು 369ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ 374ನೇ ಪ್ರಕರಣದ ಉಪಬಂಧಗಳ ಮೇರೆಗೆ ತಡೆಹಿಡಿದಿರಿಸಿರುವಾಗ ಮತ್ತು ಮಹಾ-ನಿರೀಕ್ಷಕನು ಅಥವಾ ಸಂದರ್ಶಕರು ತನ್ನ ಅಥವಾ ತಮ್ಮ ತೀರ್ಮಾನದಲ್ಲಿ ಅವನು

ತನಗೆ ತಾನೇ ಕ್ಷತಿಯುಂಟು ಮಾಡಿಕೊಳ್ಳುವ ಅಥವಾ ಇತರ ವ್ಯಕ್ತಿಗೆ ಕ್ಷತಿಯುಂಟು ಮಾಡುವ ಅಪಾಯವಿಲ್ಲದೆ ಬಿಡುಗಡೆ ಮಾಡಬಹುದೆಂದು ಪ್ರಮಾಣೀಕರಿಸಿದರೆ, ಆನಂತರ ರಾಜ್ಯ ಸರ್ಕಾರವು ಅವನನ್ನು ಬಿಡುಗಡೆ ಮಾಡಲು ಅಥವಾ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಲು ಅಥವಾ ಅವನನ್ನು ಈಗಾಗಲೇ ಅಂಥ ಸಾರ್ವಜನಿಕ ಮಾನಸಿಕ ಆರೋಗ್ಯ ಸಂಸ್ಥೆಗೆ ಕಳುಹಿಸಿರದಿದ್ದರೆ ಅಂಥ ಸಂಸ್ಥೆಗೆ ವರ್ಗಾಯಿಸಲು ಆದೇಶಿಸಬಹುದು ಮತ್ತು ಅವನನ್ನು ಅಂಥ ಸಾರ್ವಜನಿಕ ಮಾನಸಿಕ ಆರೋಗ್ಯ ಸಂಸ್ಥೆಗೆ ವರ್ಗಾಯಿಸಲು ಆದೇಶಿಸಿದ ಸಂದರ್ಭದಲ್ಲಿ ಒಬ್ಬ ನ್ಯಾಯಿಕ ಮತ್ತು ಇಬ್ಬರು ವೈದ್ಯಕೀಯ ಅಧಿಕಾರಿಗಳನ್ನೊಳಗೊಂಡ ಆಯೋಗವನ್ನು ನೇಮಕ ಮಾಡಬಹುದು.

(2) ಅಂಥ ಆಯೋಗವು, ಅಂಥ ವ್ಯಕ್ತಿಯ ಮನಸ್ಥಿತಿಯ ಬಗ್ಗೆ ಔಪಚಾರಿಕ ವಿಚಾರಣೆಯನ್ನು ಮಾಡತಕ್ಕದ್ದು ಹಾಗೂ ಅವಶ್ಯಕವಾದಂಥ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂತೆ ಅವನ ಬಿಡುಗಡೆಗಾಗಿ ಅಥವಾ ಅವನನ್ನು ತಡೆಹಿಡಿದಿರಿಸುವುದಕ್ಕಾಗಿ ಆದೇಶಿಸಬಹುದು.

**378. ಅಸ್ವಸ್ಥಚಿತ್ತ ವ್ಯಕ್ತಿಯನ್ನು ಪಾಲನೆಗಾಗಿ ಸಂಬಂಧಿಕ ಅಥವಾ ಸ್ನೇಹಿತನಿಗೆ ಒಪ್ಪಿಸುವುದು.-** (1) 369ನೇ ಪ್ರಕರಣ ಅಥವಾ 374ನೇ ಪ್ರಕರಣದ ಉಪಬಂಧಗಳ ಮೇರೆಗೆ ತಡೆಹಿಡಿದಿರಿಸಲಾದ ಯಾರೇ ವ್ಯಕ್ತಿಯ, ಯಾರೇ ಸಂಬಂಧಿಕ ಅಥವಾ ಸ್ನೇಹಿತನು, ಅವನನ್ನು ತನ್ನ ಪಾಲನೆ ಮತ್ತು ಅಭಿರಕ್ಷೆಗೆ ಒಪ್ಪಿಸತಕ್ಕದ್ದೆಂದು ಇಚ್ಛಿಸಿದಾಗ, ಅಂಥ ರಾಜ್ಯ ಸರ್ಕಾರವು ಅಂಥ ಸಂಬಂಧಿಕ ಅಥವಾ ಸ್ನೇಹಿತನ ಕೋರಿಕೆಯ ಮೇರೆಗೆ ಮತ್ತು ಒಪ್ಪಿಸಲಾದ ವ್ಯಕ್ತಿಯನ್ನು,-

(ಎ) ಸರಿಯಾಗಿ ಪಾಲನೆ ಮಾಡಲಾಗುವುದೆಂದು ಮತ್ತು ಅವನು ತನಗೆ ತಾನೇ ಕ್ಷತಿಯುಂಟು ಮಾಡಿಕೊಳ್ಳದಂತೆ ಅಥವಾ ಇತರ ಯಾರೇ ವ್ಯಕ್ತಿಗೆ ಕ್ಷತಿಯುಂಟು ಮಾಡದಂತೆ ತಡೆಯಲಾಗುವುದೆಂಬ ಬಗ್ಗೆ;

(ಬಿ) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಅಧಿಕಾರಿಯ ಪರಿಶೀಲನೆಗಾಗಿ ಹಾಗೆ ನಿರ್ದೇಶಿಸಿದ ಸಮಯ ಮತ್ತು ಸ್ಥಳಗಳಲ್ಲಿ ಹಾಜರುಪಡಿಸಲಾಗುವುದೆಂಬ ಬಗ್ಗೆ;

(ಸಿ) 369ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ತಡೆಹಿಡಿದಿರಿಸಲಾದ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುತ್ತದೆ ಎಂಬ ಬಗ್ಗೆ

- ರಾಜ್ಯ ಸರ್ಕಾರಕ್ಕೆ ಒಪ್ಪಿಗೆಯಾಗುವಂಥ ಭದ್ರತೆಯನ್ನು ಒದಗಿಸಿದ ಮೇಲೆ ಅಂಥ ವ್ಯಕ್ತಿಯನ್ನು ಅಂಥ ಸಂಬಂಧಿಕ ಅಥವಾ ಸ್ನೇಹಿತನಿಗೆ ಒಪ್ಪಿಸಲು ಆದೇಶಿಸತಕ್ಕದ್ದು.

(2) ಹಾಗೆ ಒಪ್ಪಿಸಲಾದ ವ್ಯಕ್ತಿಯು ಯಾವುದೇ ಅಪರಾಧಕ್ಕಾಗಿ ಆರೋಪಿತನಾಗಿದ್ದು, ಅಸ್ವಸ್ಥಚಿತ್ತನಾಗಿರುವ ಮತ್ತು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಅಸಮರ್ಥನಾಗಿರುವ ಕಾರಣದಿಂದಾಗಿ, ಅದರ ಅಧಿವಿಚಾರಣೆಯನ್ನು ಮುಂದೂಡಲಾಗಿದ್ದರೆ ಮತ್ತು (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ್ದ ಪರಿಶೀಲನಾಧಿಕಾರಿಯು, ಮ್ಯಾಜಿಸ್ಟ್ರೇಟನಿಗೆ ಅಥವಾ ನ್ಯಾಯಾಲಯಕ್ಕೆ, ಅಂಥ ವ್ಯಕ್ತಿಯು ತನ್ನನ್ನು ಪ್ರತಿರಕ್ಷಿಸಿಕೊಳ್ಳಲು ಸಮರ್ಥನಾಗಿರುವನೆಂಬುದಾಗಿ ಯಾವುದೇ ಸಮಯದಲ್ಲಿ ಪ್ರಮಾಣೀಕರಿಸಿದರೆ, ಅಂಥ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು, ಯಾರಿಗೆ ಅಂಥ ಆಪಾದಿತನನ್ನು ಒಪ್ಪಿಸಲಾಗಿತ್ತೋ ಆ ಸಂಬಂಧಿಕನನ್ನು ಅಥವಾ ಸ್ನೇಹಿತನನ್ನು ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಲಯದ ಮುಂದೆ, ಆಪಾದಿತನನ್ನು ಹಾಜರುಪಡಿಸಲು ಕರೆದುಕೊಂಡು ಹೋಗತಕ್ಕದ್ದು ಮತ್ತು ಹಾಗೆ ಹಾಜರುಪಡಿಸಿದ ಮೇಲೆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು 371ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಮುಂದುವರಿಯತಕ್ಕದ್ದು ಮತ್ತು ಪರಿಶೀಲನಾಧಿಕಾರಿಯು ಪ್ರಮಾಣಪತ್ರವನ್ನು ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದು.

## ಅಧ್ಯಾಯ XXVIII

### ನ್ಯಾಯ ನಿರ್ವಹಣೆಗೆ ಅಡಚಣೆಯನ್ನುಂಟು ಮಾಡುವ ಅಪರಾಧಗಳ ಬಗ್ಗೆ ಉಪಬಂಧಗಳು

**379. ಪ್ರಕರಣ 215ರಲ್ಲಿ ನಮೂದಿಸಲಾದ ಮೊಕದ್ದಮೆಗಳಲ್ಲಿ ಪ್ರಕ್ರಿಯೆ.-** (1) ಯಾವುದೇ ನ್ಯಾಯಾಲಯಕ್ಕೆ ಈ ಬಗ್ಗೆ ಸಲ್ಲಿಸಿದ ಕೋರಿಕೆಯ ಮೇಲೆ ಅಥವಾ ಅನ್ಯಥಾ, ಆ ನ್ಯಾಯಾಲಯವು, 215ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ, ಆ ನ್ಯಾಯಾಲಯದ ವ್ಯವಹರಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಅಥವಾ ಆ ನ್ಯಾಯಾಲಯದಲ್ಲಿ ನಡೆಯುವ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸಲಾದ ಅಥವಾ ನೀಡಲಾದ ದಸ್ತಾವೇಜಿನ ಬಗ್ಗೆ, ಮಾಡಲಾದುದೆಂದು ಕಂಡುಬರುವ ಯಾವುದೇ ಅಪರಾಧದ ಬಗ್ಗೆ ವಿಚಾರಣೆಯನ್ನು ಮಾಡುವುದು ನ್ಯಾಯದ ಹಿತದೃಷ್ಟಿಯಿಂದ ಯುಕ್ತವೆಂದು ಅಭಿಪ್ರಾಯಪಟ್ಟರೆ, ಅಂಥ ನ್ಯಾಯಾಲಯವು ಅವಶ್ಯವೆಂದು ತಾನು ಭಾವಿಸುವಂಥ ಪ್ರಾರಂಭಿಕ ವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ಮಾಡಿದ ನಂತರ,-

(ಎ) ಆ ಬಗ್ಗೆ ನಿರ್ಣಯವನ್ನು ದಾಖಲಿಸಬಹುದು;

(ಬಿ) ಅದರ ಬಗ್ಗೆ ಲಿಖಿತ ದೂರನ್ನು ಸಲ್ಲಿಸಬಹುದು;

(ಸಿ) ಅಧಿಕಾರವ್ಯಾಪ್ತಿ ಹೊಂದಿರುವ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗೆ ಅದನ್ನು ಕಳುಹಿಸಬಹುದು;

(ಡಿ) ಅಂಥ ಮ್ಯಾಜಿಸ್ಟ್ರೇಟನ ಮುಂದೆ ಆಪಾದಿತನನ್ನು ಹಾಜರುಪಡಿಸುವುದಕ್ಕಾಗಿ ಸಾಕಷ್ಟು ಭದ್ರತೆಯನ್ನು ತೆಗೆದುಕೊಳ್ಳಬಹುದು ಅಥವಾ ಆಪಾದಿಸಲಾದ ಅಪರಾಧವು ಜಾಮೀನೀಯವಲ್ಲದಿದ್ದರೆ ಮತ್ತು ನ್ಯಾಯಾಲಯವು ಆಪಾದಿತನನ್ನು ಅಭಿರಕ್ಷೆಗಾಗಿ ಅಂಥ ಮ್ಯಾಜಿಸ್ಟ್ರೇಟನ ಬಳಿಗೆ ಹಾಗೆ ಕಳುಹಿಸುವುದು ಅವಶ್ಯವೆಂದು ಭಾವಿಸಿದರೆ ಅಭಿರಕ್ಷೆಗಾಗಿ ಕಳುಹಿಸಬಹುದು; ಮತ್ತು

(ಇ) ಯಾರೇ ವ್ಯಕ್ತಿಯನ್ನು ಅಂಥ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗಲು ಮತ್ತು ಸಾಕ್ಷ್ಯವನ್ನು ನೀಡಲು ಬದ್ಧಗೊಳಿಸಬಹುದು.

(2) ಅಪರಾಧದ ಸಂಬಂಧದಲ್ಲಿ (1)ನೇ ಉಪಪ್ರಕರಣವು, ನ್ಯಾಯಾಲಯಕ್ಕೆ ಪ್ರದಾನ ಮಾಡಿದ ಅಧಿಕಾರವನ್ನು ಆ ಅಪರಾಧದ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಆ ನ್ಯಾಯಾಲಯವು ದೂರನ್ನು ಸಲ್ಲಿಸದಿರಲಿ ಅಥವಾ ದೂರು ಸಲ್ಲಿಸುವುದಕ್ಕಾಗಿ ಮಾಡಿದ ಕೋರಿಕೆಯನ್ನು ತಿರಸ್ಕರಿಸಿರದಿರಲಿ ಆ ಯಾವುದೇ ಸಂದರ್ಭದಲ್ಲಿ, ಯಾವ ನ್ಯಾಯಾಲಯಕ್ಕೆ ಅಂಥ ಹಿಂದಿನ ನ್ಯಾಯಾಲಯವು 215ನೇ ಪ್ರಕರಣದ (4)ನೇ ಉಪಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಅಧೀನವಾಗಿದೆಯೋ, ಆ ನ್ಯಾಯಾಲಯವು ಚಲಾಯಿಸಬಹುದು.

(3) ಈ ಪ್ರಕರಣದ ಮೇರೆಗೆ ದೂರನ್ನು ಸಲ್ಲಿಸಲಾಗಿರುವಲ್ಲಿ, ಅದಕ್ಕೆ,-

(ಎ) ದೂರನ್ನು ಸಲ್ಲಿಸುವ ನ್ಯಾಯಾಲಯವು, ಉಚ್ಚ ನ್ಯಾಯಾಲಯವಾಗಿರುವಲ್ಲಿ, ನ್ಯಾಯಾಲಯವು ನೇಮಿಸಬಹುದಾದಂಥ ನ್ಯಾಯಾಲಯದ ಅಧಿಕಾರಿಯು;

(ಬಿ) ಇತರ ಯಾವುದೇ ಸಂದರ್ಭದಲ್ಲಿ, ನ್ಯಾಯಾಲಯದ ಪೀಠಾಸೀನ ಅಧಿಕಾರಿಯು ಅಥವಾ ಆ ಬಗ್ಗೆ ನ್ಯಾಯಾಲಯವು ಅಧಿಕೃತಗೊಳಿಸಬಹುದಾದಂಥ ನ್ಯಾಯಾಲಯದ ಅಧಿಕಾರಿಯು

- ಸಹಿ ಮಾಡತಕ್ಕದ್ದು.

(4) ಈ ಪ್ರಕರಣದಲ್ಲಿ ʼನ್ಯಾಯಾಲಯʼ ಎಂಬುದು 215ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿದೆ.

**380. ಅಪೀಲು.-** (1) ಉಚ್ಚ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯವು ಯಾರ ಅರ್ಜಿಯ ಮೇಲೆ 379ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ದೂರನ್ನು ಸಲ್ಲಿಸಲು ತಿರಸ್ಕರಿಸಿದೆಯೋ ಅಥವಾ ಯಾರ ವಿರುದ್ಧ ಅಂಥ ದೂರನ್ನು ಅಂಥ ನ್ಯಾಯಾಲಯವು ಮಾಡಿದೆಯೋ ಆ ಯಾರೇ ವ್ಯಕ್ತಿಯು, ಯಾವ ನ್ಯಾಯಾಲಯಕ್ಕೆ ಅಂಥ ಹಿಂದಿನ ನ್ಯಾಯಾಲಯವು 215ನೇ ಪ್ರಕರಣದ (4)ನೇ ಉಪಪ್ರಕರಣದ ಅರ್ಥವ್ಯಾಪ್ತಿಯೊಳಗೆ ಅಧೀನವಾಗಿದೆಯೋ, ಆ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು ಮತ್ತು ನಂತರ, ವರಿಷ್ಠ ನ್ಯಾಯಾಲಯವು ಸಂಬಂಧಪಟ್ಟ ಪಕ್ಷಕಾರರಿಗೆ ನೋಟೀಸು ಕೊಟ್ಟ ಆನಂತರ, ಸಂದರ್ಭಾನುಸಾರ, ದೂರನ್ನು ಹಿಂತೆಗೆದುಕೊಳ್ಳಲು ಅಥವಾ 379ನೇ ಪ್ರಕರಣದ ಮೇರೆಗೆ ಅಂಥ ಹಿಂದಿನ ನ್ಯಾಯಾಲಯವು ಮಾಡಬಹುದಾಗಿದ್ದ ದೂರನ್ನು ಮಾಡಲು ನಿರ್ದೇಶಿಸಬಹುದು ಮತ್ತು ಅದು ಅಂಥ ದೂರನ್ನು ಮಾಡಿದರೆ, ಆ ಪ್ರಕರಣದ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಆದೇಶವು ಮತ್ತು ಅಂಥ ಯಾವುದೇ ಆದೇಶಕ್ಕೊಳಪಟ್ಟು, 379ನೇ ಪ್ರಕರಣದ ಮೇರೆಗಿನ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಪುನರೀಕ್ಷಣೆಗೆ ಒಳಪಡತಕ್ಕದ್ದಲ್ಲ.

**381. ಖರ್ಚುಗಳ ಬಗ್ಗೆ ಆದೇಶಿಸುವ ಅಧಿಕಾರ.-** 379ನೇ ಪ್ರಕರಣದ ಮೇರೆಗೆ ದೂರನ್ನು ದಾಖಲ್ಮಾಡಲು ತನಗೆ ಸಲ್ಲಿಸಿದ ಅರ್ಜಿಯ ಮೇಲೆ ಅಥವಾ 380ನೇ ಪ್ರಕರಣದ ಮೇರೆಗಿನ ಅಪೀಲಿನ ಸಂಬಂಧದಲ್ಲಿ ವ್ಯವಹರಿಸುವ ಯಾವುದೇ ನ್ಯಾಯಾಲಯವು, ಖರ್ಚುಗಳ ಬಗ್ಗೆ ನ್ಯಾಯಸಮ್ಮತವಾಗಬಹುದಾದಂಥ ಆದೇಶವನ್ನು ಮಾಡಲು ಅಧಿಕಾರ ಹೊಂದಿರತಕ್ಕದ್ದು.

**382. ಸಂಜ್ಞಾನ ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನ ಪ್ರಕ್ರಿಯೆ.-** (1) 379 ಅಥವಾ 380ನೇ ಪ್ರಕರಣದ ಮೇರೆಗೆ ಯಾರಿಗೆ ದೂರನ್ನು ಸಲ್ಲಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು, ಅಧ್ಯಾಯ I ರಲ್ಲಿ ಏನೇ ಇದ್ದರೂ, ಸಾಧ್ಯವಾದಷ್ಟು ಮಟ್ಟಿಗೆ, ಆ ಮೊಕದ್ದಮೆಯನ್ನು ಪೊಲೀಸ್ ವರದಿಯ ಮೇಲೆ ಹೂಡಲಾಗಿದ್ದರೆ ಆ ಬಗ್ಗೆ ಹೇಗೆ ವ್ಯವಹರಿಸಲಾಗುತ್ತಿತ್ತೋ ಹಾಗೆ ವ್ಯವಹರಿಸತಕ್ಕದ್ದು.

(2) ಯಾವ ನ್ಯಾಯಿಕ ವ್ಯವಹರಣೆಯಿಂದ ಮೊಕದ್ದಮೆಯ ವಿಷಯವು ಉದ್ಭವವಾಗಿದೆಯೋ ಆ ವ್ಯವಹರಣೆಯ ಮೇಲಿನ ನಿರ್ಣಯದ ವಿರುದ್ಧ ಹೂಡಿದ ಅಪೀಲು ಇತ್ಯರ್ಥದಲ್ಲಿದೆಯೆಂಬುದನ್ನು ಅಂಥ ಮ್ಯಾಜಿಸ್ಟ್ರೇಟನ ಅಥವಾ ಮೊಕದ್ದಮೆಯು ವರ್ಗಾವಣೆಯಾಗಿರಬಹುದಾದ ಇತರ ಯಾರೇ ಮ್ಯಾಜಿಸ್ಟ್ರೇಟನ ಗಮನಕ್ಕೆ ತಂದರೆ, ಅವನು ತಾನು ಸೂಕ್ತವೆಂದು ಭಾವಿಸಿದರೆ, ಯಾವುದೇ ಹಂತದಲ್ಲಿ, ಅಂಥ ಅಪೀಲು ತೀರ್ಮಾನವಾಗುವವರೆಗೆ ಮೊಕದ್ದಮೆಯ ವಿಚಾರಣೆಯನ್ನು ಮುಂದಕ್ಕೆ ಹಾಕಬಹುದು.

**383. ಸುಳ್ಳು ಸಾಕ್ಷ್ಯ ನೀಡಿದ ಸಂಬಂಧದಲ್ಲಿ ಅಧಿವಿಚಾರಣೆಗಾಗಿ ಸಂಕ್ಷಿಪ್ತ ಪ್ರಕ್ರಿಯೆ.-** (1) ಯಾವುದೇ ತೀರ್ಪನ್ನು ನೀಡುವ ಅಥವಾ ಯಾವುದೇ ನ್ಯಾಯಿಕ ವ್ಯವಹರಣೆಯನ್ನು ವಿಲೆಯ ಅಂತಿಮ ಆದೇಶವನ್ನು ಮಾಡುವ ಸಮಯದಲ್ಲಿ, ಸೆಷನ್ ನ್ಯಾಯಾಲಯವು ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಅಂಥ ವ್ಯವಹರಣೆಯಲ್ಲಿ ಹಾಜರಾಗುವ ಯಾರೇ ಸಾಕ್ಷಿದಾರನು, ತನಗೆ ತಿಳಿದಿದ್ದೂ ಅಥವಾ ಉದ್ದೇಶಪೂರ್ವಕವಾಗಿ, ಅಂಥ ವ್ಯವಹರಣೆಯಲ್ಲಿ ಉಪಯೋಗಿಸಬೇಕೆಂಬ ಉದ್ದೇಶದಿಂದ, ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುವನೆಂದು ಅಥವಾ ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿರುವನೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಸಂದರ್ಭಾನುಸಾರ, ಸುಳ್ಳು ಸಾಕ್ಷ್ಯವನ್ನು ನೀಡಿರುವುದಕ್ಕಾಗಿ ಅಥವಾ ಸೃಷ್ಟಿಸಿರುವುದಕ್ಕಾಗಿ ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡುವುದು ನ್ಯಾಯದ ಹಿತದೃಷ್ಟಿಯಿಂದ ಅವಶ್ಯಕ ಮತ್ತು ಯುಕ್ತವೆಂದು ಅದಕ್ಕೆ ಅಥವಾ ಅವನಿಗೆ ಮನದಟ್ಟಾದರೆ, ಅದು ಅಥವಾ ಅವನು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು ಮತ್ತು ಅಪರಾಧಿಗೆ ಅವನನ್ನು ಅಂಥ ಅಪರಾಧಕ್ಕಾಗಿ

ಏಕೆ ಶಿಕ್ಷೆಗೊಳಪಡಿಸಬಾರದೆಂಬುದಕ್ಕೆ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ನೀಡಿದ ತರುವಾಯ, ಅಂಥ ಅಪರಾಧಿಯನ್ನು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಬಹುದು ಮತ್ತು ಮೂರು ತಿಂಗಳವರೆಗಿನ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸವನ್ನು ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಅಥವಾ ಅವೆರಡನ್ನೂ ವಿಧಿಸಬಹುದು.

(2) ಅಂಥ ಪ್ರತಿಯೊಂದು ಮೊಕದ್ದಮೆಯಲ್ಲಿ, ನ್ಯಾಯಾಲಯವು, ಸಾಧ್ಯವಾದಷ್ಟು ಮಟ್ಟಿಗೆ, ಸಂಕ್ಷಿಪ್ತ ಅಧಿವಿಚಾರಣೆಗಳಿಗಾಗಿ ನಿಯಮಿಸಲಾದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(3) ನ್ಯಾಯಾಲಯವು, ಈ ಪ್ರಕರಣದ ಮೇರೆಗೆ ಮುಂದುವರಿಯಲು ಇಚ್ಛಿಸದಿರುವಲ್ಲಿ, ಈ ಪ್ರಕರಣದಲ್ಲಿರುವುದು ಯಾವುದೂ, ಅಪರಾಧಕ್ಕಾಗಿ 379ನೇ ಪ್ರಕರಣದ ಮೇರೆಗೆ ದೂರನ್ನು ನೀಡಲು ನ್ಯಾಯಾಲಯಕ್ಕೆ ಇರುವ ಅಧಿಕಾರಕ್ಕೆ ಬಾಧಕವಾಗತಕ್ಕದ್ದಲ್ಲ.

(4) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಕ್ರಮವನ್ನು ಪ್ರಾರಂಭಿಸಿರುವಲ್ಲಿ, ಯಾವ ತೀರ್ಪಿನಲ್ಲಿ ಅಥವಾ ಆದೇಶದಲ್ಲಿ ಆ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆಯೋ ಆ ತೀರ್ಪಿನ ಅಥವಾ ಆದೇಶದ ವಿರುದ್ಧ ಅಪೀಲು ಮಾಡುವುದಕ್ಕಾಗಿ ಅಥವಾ ಪುನರೀಕ್ಷಣೆಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು ಅಥವಾ ದಾಖಲ್ಮಾಡಲಾಗಿದೆಯೆಂದು ಸೆಷನ್ ನ್ಯಾಯಾಲಯಕ್ಕೆ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅದು ಅಥವಾ ಅವನು, ಸಂದರ್ಭಾನುಸಾರ, ಅಪೀಲು ಅಥವಾ ಪುನರೀಕ್ಷಣೆಯ ಅರ್ಜಿಯು ವಿಲೆಯಾಗುವವರೆಗೆ ಅಧಿವಿಚಾರಣೆಯ ಮುಂದಿನ ವ್ಯವಹರಣೆಗಳನ್ನು ನಿಲ್ಲಿಸತಕ್ಕದ್ದು ಮತ್ತು ನಂತರ ಅಧಿವಿಚಾರಣೆಯ ಮುಂದಿನ ವ್ಯವಹರಣೆಗಳು, ಪುನರೀಕ್ಷಣೆಗಾಗಿ ಸಲ್ಲಿಸಿದ ಅಪೀಲು ಅಥವಾ ಅರ್ಜಿಯ ಫಲಿತಾಂಶಕ್ಕೆ ಅನುಗುಣವಾಗಿರತಕ್ಕದ್ದು.

**384. ನ್ಯಾಯಾಲಯ ನಿಂದನೆಯ ಕೆಲವು ಮೊಕದ್ದಮೆಗಳಲ್ಲಿ ಪ್ರಕ್ರಿಯೆ.-** (1) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 210ನೇ ಪ್ರಕರಣ, 213ನೇ ಪ್ರಕರಣ, 214ನೇ ಪ್ರಕರಣ, 215ನೇ ಪ್ರಕರಣ ಅಥವಾ 267ನೇ ಪ್ರಕರಣದಲ್ಲಿ ವಿವರಿಸಲಾದಂಥ ಯಾವುದೇ ಅಪರಾಧವನ್ನು ಯಾವುದೇ ಸಿವಿಲ್, ಕ್ರಿಮಿನಲ್ ಅಥವಾ ರಾಜಸ್ವ ನ್ಯಾಯಾಲಯಕ್ಕೆ ಕಾಣುವಂತೆ ಅಥವಾ ಅದರ ಸಮ್ಮುಖದಲ್ಲಿ ಮಾಡಿರುವಾಗ, ನ್ಯಾಯಾಲಯವು ಅಪರಾಧಿಯನ್ನು ಅಭಿರಕ್ಷೆಯಲ್ಲಿ ತಡೆಹಿಡಿದಿರಿಸುವಂತೆ ಮಾಡಬಹುದು ಮತ್ತು ನ್ಯಾಯಾಲಯದ ವ್ಯವಹರಣೆಗಳು ಮುಕ್ತಾಯವಾಗುವ ಮುನ್ನ ಅಥವಾ ಅದೇ ದಿನ ಯಾವುದೇ ಸಮಯದಲ್ಲಿ, ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡು ಕ್ರಮ ಕೈಗೊಳ್ಳಬಹುದು ಮತ್ತು ಅಪರಾಧಿಗೆ ಅವನನ್ನು ಈ ಪ್ರಕರಣದ ಮೇರೆಗೆ ಏಕೆ ಶಿಕ್ಷಿಸಬಾರದೆಂಬುದಕ್ಕೆ ಕಾರಣ ತೋರಿಸಲು ಯುಕ್ತವಾದ ಅವಕಾಶ ನೀಡಿದ ತರುವಾಯ, ಅಪರಾಧಿಗೆ ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯನ್ನು ಮತ್ತು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ, ಅಂಥ ಜುಲ್ಮಾನೆಯನ್ನು ಬೇಗನೆ ಸಂದಾಯ ಮಾಡದಿದ್ದರೆ, ಒಂದು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸವನ್ನು ವಿಧಿಸಬಹುದು.

(2) ಅಂಥ ಪ್ರತಿಯೊಂದು ಮೊಕದ್ದಮೆಯಲ್ಲಿ ನ್ಯಾಯಾಲಯವು, ಅಪರಾಧಿಯು ನೀಡಿದ ಹೇಳಿಕೆಯೊಡನೆ (ಯಾವುದಾದರೂ ಇದ್ದರೆ) ಅಪರಾಧಕ್ಕೆಡೆ ಮಾಡಿಕೊಟ್ಟ ಸಂಗತಿಯನ್ನು, ನಿರ್ಣಯವನ್ನು ಹಾಗೂ ಶಿಕ್ಷೆಯನ್ನು ದಾಖಲಿಸತಕ್ಕದ್ದು.

(3) ಅಪರಾಧವು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 267ನೇ ಪ್ರಕರಣದ ಮೇರೆಗಿನದ್ದಾಗಿದ್ದರೆ, ನ್ಯಾಯಿಕ ವ್ಯವಹರಣೆಗಳು ನಡೆಯುತ್ತಿದ್ದಾಗ ಉಪವೇಶನದಲ್ಲಿದ್ದ ನ್ಯಾಯಾಲಯಕ್ಕೆ ಅಡ್ಡಿಪಡಿಸಲಾಗಿತ್ತೋ ಅಥವಾ ಅವಮಾನ

ಮಾಡಲಾಗಿತ್ತೋ, ಆ ನ್ಯಾಯಿಕ ವ್ಯವಹರಣೆಯ ಸ್ವರೂಪ ಮತ್ತು ಹಂತವನ್ನು ಮತ್ತು ಅಡ್ಡಿಪಡಿಸಿರುವಿಕೆಯ ಅಥವಾ ಅವಮಾನದ ಸ್ವರೂಪವನ್ನು ದಾಖಲೆಯಲ್ಲಿ ತೋರಿಸತಕ್ಕದ್ದು.

**385. ಪ್ರಕರಣ 384ರ ಮೇರೆಗೆ ಮೊಕದ್ದಮೆಯನ್ನು ನಡೆಸಬಾರದೆಂದು ನ್ಯಾಯಾಲಯವು ಪರ್ಯಾಲೋಚಿಸಿದಲ್ಲಿ ಪ್ರಕ್ರಿಯೆ.-** (1) 384ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧಗಳ ಪೈಕಿ ಯಾವುದೇ ಅಪರಾಧಕ್ಕಾಗಿ ಆಪಾದಿತನಾದ ಅಥವಾ ತನಗೆ ಕಾಣುವಂತೆ ಮತ್ತು ತನ್ನ ಸಮ್ಮುಖದಲ್ಲಿ ಆ ಅಪರಾಧಗಳನ್ನು ಮಾಡಿರುವ ಯಾರೇ ವ್ಯಕ್ತಿಯನ್ನು, ಜುಲ್ಮಾನೆ ಸಂದಾಯ ಮಾಡಲು ತಪ್ಪಿದ್ದಕ್ಕಲ್ಲದೆ ಅನ್ಯಥಾ ಕಾರಾವಾಸಕ್ಕೊಳಪಡಿಸಬೇಕೆಂದು ಅಥವಾ ಇನ್ನೂರು ರೂಪಾಯಿಗಳಿಗೆ ಮೀರಿದ ಜುಲ್ಮಾನೆಯನ್ನು ಅವನಿಗೆ ವಿಧಿಸಬೇಕೆಂದು ನ್ಯಾಯಾಲಯವು ಯಾವುದೇ ಮೊಕದ್ದಮೆಯಲ್ಲಿ ಪರ್ಯಾಲೋಚಿಸಿದಾಗ ಅಥವಾ ಅಂಥ ನ್ಯಾಯಾಲಯವು ಆ ಮೊಕದ್ದಮೆಯನ್ನು 384ನೇ ಪ್ರಕರಣದ ಮೇರೆಗೆ ವಿಲೆ ಮಾಡಬಾರದೆಂದು ಇತರ ಯಾವುದೇ ಕಾರಣಕ್ಕಾಗಿ ಅಭಿಪ್ರಾಯಪಟ್ಟರೆ, ಅಂಥ ನ್ಯಾಯಾಲಯವು, ಅಪರಾಧಕ್ಕೆಡೆ ಮಾಡಿಕೊಟ್ಟ ಸಂಗತಿಗಳನ್ನು ಮತ್ತು ಇದರಲ್ಲಿ ಈ ಹಿಂದೆ ಉಪಬಂಧಿಸಲಾದಂತೆ ಆಪಾದಿತನ ಹೇಳಿಕೆಯನ್ನು ದಾಖಲಿಸಿದ ನಂತರ, ಅದನ್ನು ಅಧಿವಿಚಾರಣೆ ಮಾಡಲು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಆ ಮೊಕದ್ದಮೆಯನ್ನು ಕಳುಹಿಸಬಹುದು ಮತ್ತು ಅಂಥ ಮ್ಯಾಜಿಸ್ಟ್ರೇಟನ ಮುಂದೆ ಅಂಥ ವ್ಯಕ್ತಿಯ ಹಾಜರಾತಿಗಾಗಿ ಭದ್ರತೆಯನ್ನು ಒದಗಿಸುವಂತೆ ಅಗತ್ಯಪಡಿಸಬಹುದು ಅಥವಾ ಸಾಕಷ್ಟು ಭದ್ರತೆಯನ್ನು ಒದಗಿಸದಿದ್ದರೆ, ಅಂಥ ವ್ಯಕ್ತಿಯನ್ನು ಅಭಿರಕ್ಷೆಯಲ್ಲಿ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು.

(2) ಮ್ಯಾಜಿಸ್ಟ್ರೇಟನು, ತನಗೆ ಕಳುಹಿಸಿರುವ ಈ ಪ್ರಕರಣದ ಮೇರೆಗಿನ ಯಾವುದೇ ಮೊಕದ್ದಮೆಯನ್ನು ಸಾಧ್ಯವಾದಷ್ಟು ಮಟ್ಟಿಗೆ, ಅದನ್ನು ಪೊಲೀಸ್ ವರದಿಯ ಮೇಲೆ ಹೂಡಲಾಗಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು.

**386. ರಿಜಿಸ್ಟ್ರಾರ್ ಅಥವಾ ಸಬ್ ರಿಜಿಸ್ಟ್ರಾರನನ್ನು ಸಿವಿಲ್ ನ್ಯಾಯಾಲಯವೆಂದು ಯಾವಾಗ ಭಾವಿಸಬಹುದು.-** ರಾಜ್ಯ ಸರ್ಕಾರವು, ನೋಂದಣಿ ಅಧಿನಿಯಮ, 1908 (1908ರ 16)ರ ಮೇರೆಗೆ ನೇಮಕಗೊಂಡ ಯಾರೇ ರಿಜಿಸ್ಟ್ರಾರ್ ಅಥವಾ ಯಾರೇ ಸಬ್-ರಿಜಿಸ್ಟ್ರಾರನನ್ನು, 384 ಮತ್ತು 385ನೇ ಪ್ರಕರಣಗಳ ಅರ್ಥವ್ಯಾಪ್ತಿಯಲ್ಲಿ ಸಿವಿಲ್ ನ್ಯಾಯಾಲಯವೆಂದು ನಿರ್ದೇಶಿಸಿದಾಗ ಹಾಗೆ ಭಾವಿಸತಕ್ಕದ್ದು.

**387. ಕ್ಷಮಾಪಣೆ ಕೇಳಿದ ಮೇಲೆ ಅಪರಾಧಿಯ ಬಿಡುಗಡೆ.-** ಯಾವುದೇ ನ್ಯಾಯಾಲಯವು, 384ನೇ ಪ್ರಕರಣದ ಮೇರೆಗೆ ಅಪರಾಧಿಯನ್ನು ದಂಡಿಸಲು ನ್ಯಾಯನಿರ್ಣಯ ಮಾಡಿದಾಗ ಅಥವಾ ಅವನು ಕಾನೂನುಬದ್ಧವಾಗಿ ಮಾಡಬೇಕೆಂದು ಅಗತ್ಯಪಡಿಸಲಾಗಿದ್ದ ಯಾವುದನ್ನೇ ಆಗಲಿ ಮಾಡಲು ತಿರಸ್ಕರಿಸಿದುದಕ್ಕಾಗಿ ಅಥವಾ ಮಾಡದೆ ಬಿಟ್ಟಿದ್ದಕ್ಕಾಗಿ ಅಥವಾ ಉದ್ದೇಶಪೂರ್ವಕವಾದ ಅವಮಾನ ಅಥವಾ ಅಡ್ಡಿಪಡಿಸುವಿಕೆಯ ಬಗ್ಗೆ ಅಧಿವಿಚಾರಣೆಗಾಗಿ 385ನೇ ಪ್ರಕರಣದ ಮೇರೆಗೆ ಅವನನ್ನು ಮ್ಯಾಜಿಸ್ಟ್ರೇಟನಿಗೆ ಒಪ್ಪಿಸಿದಾಗ, ನ್ಯಾಯಾಲಯವು, ತನ್ನ ವಿವೇಚನಾನುಸಾರ, ಅಂಥ ನ್ಯಾಯಾಲಯದ ಆದೇಶ ಅಥವಾ ಅಪೇಕ್ಷೆಯನ್ನು ಅವನು ಒಪ್ಪಿಕೊಂಡರೆ ಅಥವಾ ಅದಕ್ಕೆ ಮನವರಿಕೆಯಾಗುವಂತೆ ಕ್ಷಮೆ ಕೋರಿದರೆ, ಅಪರಾಧಿಯನ್ನು ವಿಮೋಚಿಸಬಹುದು ಅಥವಾ ದಂಡನೆಯನ್ನು ಮಾಫಿ ಮಾಡಬಹುದು.

**388. ಉತ್ತರಿಸಲು ಅಥವಾ ದಸ್ತಾವೇಜನ್ನು ಹಾಜರುಪಡಿಸಲು ನಿರಾಕರಿಸಿದ ವ್ಯಕ್ತಿಯನ್ನು ಕಾರಾವಾಸ ಅಥವಾ ಸುಪರ್ದಿಗೆ ಒಪ್ಪಿಸುವುದು.-** ಕ್ರಿಮಿನಲ್ ನ್ಯಾಯಾಲಯದ ಮುಂದೆ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸಲು ಕರೆಸಲಾದ ಯಾರೇ ಸಾಕ್ಷಿದಾರನು ಅಥವಾ ವ್ಯಕ್ತಿಯು, ಅವನಿಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಅಥವಾ ತನ್ನ ಸ್ವಾಧೀನದಲ್ಲಿರುವ ಅಥವಾ ಅಧಿಕಾರದಲ್ಲಿರುವ ಅಥವಾ ಹಾಜರುಪಡಿಸಬೇಕೆಂದು ನ್ಯಾಯಾಲಯವು ಅಗತ್ಯಪಡಿಸುವ, ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸಲು ಅವನು ನಿರಾಕರಿಸಿದರೆ ಮತ್ತು ಹಾಗೆ ಮಾಡಲು ಅವನಿಗೆ

ಯುಕ್ತ ಅವಕಾಶವನ್ನು ಕೊಟ್ಟ ನಂತರವೂ ಅಂಥ ನಿರಾಕರಣೆಗೆ ಯಾವುದೇ ಯುಕ್ತ ಕಾರಣವನ್ನು ಕೊಡದಿದ್ದರೆ, ಅಂಥ ನ್ಯಾಯಾಲಯವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಅವನನ್ನು ಸಾದಾ ಕಾರಾವಾಸದ ಶಿಕ್ಷೆಗೆ ಗುರಿಪಡಿಸಬಹುದು ಅಥವಾ ಈ ಮಧ್ಯೆ ಅಂಥ ವ್ಯಕ್ತಿಯು ವಿಚಾರಣೆಗೊಳಗಾಗಲು ಮತ್ತು ಉತ್ತರಿಸಲು ಅಥವಾ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸಲು ಒಪ್ಪಿದ ಹೊರತು, ಪೀಠಾಸೀನ ಮ್ಯಾಜಿಸ್ಟ್ರೇಟನ ಅಥವಾ ನ್ಯಾಯಾಧೀಶನ ಸಹಿ ಮಾಡಿದ ವಾರಂಟಿನ ಮೂಲಕ ಏಳು ದಿನಗಳಿಗೆ ಮೀರದ ಯಾವುದೇ ಅವಧಿಗಾಗಿ ನ್ಯಾಯಾಲಯದ ಅಧಿಕಾರಿಯ ಅಭಿರಕ್ಷೆಗೆ ಒಪ್ಪಿಸಬಹುದು ಮತ್ತು ಹಾಗೆ ನಿರಾಕರಿಸುವುದನ್ನು ಅವನು ಮುಂದುವರಿಸಿದ ಸಂದರ್ಭದಲ್ಲಿ 384ನೇ ಪ್ರಕರಣ ಅಥವಾ 385ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅವನ ಮೇಲೆ ಕ್ರಮ ತೆಗೆದುಕೊಳ್ಳಬಹುದು.

**389. ಸಮನುಗಳಿಗೆ ವಿಧೇಯನಾಗಿ ಹಾಜರಾಗಲು ತಪ್ಪಿದ ಸಾಕ್ಷಿದಾರನನ್ನು ದಂಡಿಸಲು ಸಂಕ್ಷಿಪ್ತ ಪ್ರಕ್ರಿಯೆ.-** (1) ಕ್ರಿಮಿನಲ್ ನ್ಯಾಯಾಲಯದ ಮುಂದೆ ಹಾಜರಾಗಲು ಸಮನ್ ಮಾಡಲಾದ ಯಾರೇ ಸಾಕ್ಷಿದಾರನು ಸಮನಿಗೆ ವಿಧೇಯನಾಗಿ ನಿರ್ದಿಷ್ಟಪಡಿಸಿದ್ದ ಸ್ಥಳದಲ್ಲಿ ಮತ್ತು ಸಮಯದಲ್ಲಿ ಹಾಜರಾಗಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದರೆ ಮತ್ತು ನ್ಯಾಯೋಚಿತ ಕಾರಣವಿಲ್ಲದೆ ನಿರ್ದಿಷ್ಟಪಡಿಸಿದ್ದ ಸ್ಥಳ ಅಥವಾ ಸಮಯದಲ್ಲಿ ಹಾಜರಾಗಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ ಅಥವಾ ಅವನು ಹಾಜರಾಗಬೇಕಾದ ಸ್ಥಳದಿಂದ ಅವನು ಕಾನೂನುಬದ್ಧವಾಗಿ ಹೊರಡಬಹುದಾದ ಸಮಯಕ್ಕೆ ಮುಂಚೆಯೇ ಹೊರಟು ಹೋದರೆ ಮತ್ತು ಅಂಥ ಸಾಕ್ಷಿದಾರನನ್ನು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡುವುದು ನ್ಯಾಯೋದ್ದೇಶದಿಂದ ಯುಕ್ತವಾಗಿದೆಯೆಂದು ಸಾಕ್ಷಿದಾರನು ಹಾಜರಾಗಬೇಕಾಗಿರುವ ನ್ಯಾಯಾಲಯಕ್ಕೆ ಮನದಟ್ಟಾದರೆ, ನ್ಯಾಯಾಲಯವು ಆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡು ಕ್ರಮಕೈಗೊಳ್ಳಬಹುದು ಮತ್ತು ಈ ಪ್ರಕರಣದ ಮೇರೆಗೆ ಏಕೆ ಅವನನ್ನು ದಂಡನೆಗೆ ಗುರಿಪಡಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಅಪರಾಧಿಗೆ ಅವಕಾಶವನ್ನು ನೀಡಿದ ತರುವಾಯ, ಐದು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯ ಶಿಕ್ಷೆಗೆ ಅವನನ್ನು ಗುರಿಪಡಿಸಬಹುದು.

(2) ನ್ಯಾಯಾಲಯವು, ಅಂಥ ಪ್ರತಿಯೊಂದು ಮೊಕದ್ದಮೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ, ಸಂಕ್ಷಿಪ್ತ ಅಧಿವಿಚಾರಣೆಗಳಿಗಾಗಿ ನಿಯಮಿಸಲಾದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

**390. ಪ್ರಕರಣ 383, 384, 388 ಮತ್ತು 389ರ ಮೇರೆಗಿನ ಅಪರಾಧ ನಿರ್ಣಯಗಳ ಮೇಲೆ ಅಪೀಲುಗಳು.-** (1) ಉಚ್ಚ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯದಿಂದ 383, 384, 388 ಅಥವಾ 389ನೇ ಪ್ರಕರಣದ ಮೇರೆಗೆ ಶಿಕ್ಷೆಗೊಳಗಾದ ಯಾರೇ ವ್ಯಕ್ತಿಯು, ಈ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಂಥ ನ್ಯಾಯಾಲಯದಲ್ಲಿ ಮಾಡಲಾದ ಡಿಕ್ರಿಗಳ ಅಥವಾ ಆದೇಶಗಳ ಮೇಲೆ ಸಾಮಾನ್ಯವಾಗಿ ಯಾವ ನ್ಯಾಯಾಲಯಕ್ಕೆ ಅಪೀಲು ಮಾಡಲಾಗುತ್ತದೆಯೋ ಆ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು.

(2) ಅಧ್ಯಾಯ XXXIರ ಉಪಬಂಧಗಳು, ಅವು ಅನ್ವಯವಾಗುವಷ್ಟರ ಮಟ್ಟಿಗೆ, ಈ ಪ್ರಕರಣದ ಮೇರೆಗಿನ ಅಪೀಲುಗಳಿಗೆ ಅನ್ವಯವಾಗತಕ್ಕದ್ದು ಮತ್ತು ಅಪೀಲು ವಿಚಾರಣಾ ನ್ಯಾಯಾಲಯವು ನಿರ್ಣಯವನ್ನು ಬದಲಾಯಿಸಬಹುದು ಅಥವಾ ವಿಪರ್ಯಯಗೊಳಿಸಬಹುದು ಅಥವಾ ಅಪೀಲು ಮಾಡಲಾದ ಶಿಕ್ಷೆಯನ್ನು ತಗ್ಗಿಸಬಹುದು ಅಥವಾ ವಿಪರ್ಯಯಗೊಳಿಸಬಹುದು.

(3) ಲಘು ವ್ಯವಹಾರಗಳ ನ್ಯಾಯಾಲಯವು ಮಾಡಿದ ಅಪರಾಧ ನಿರ್ಣಯದ ಮೇಲೆ ಅಂಥ ನ್ಯಾಯಾಲಯವು ಯಾವ ಸೆಷನ್ ನ್ಯಾಯಾಲಯದ ವಿಭಾಗದಲ್ಲಿ ಇದೆಯೋ ಆ ಸೆಷನ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶ ಇರತಕ್ಕದ್ದು.

(4) 386ನೇ ಪ್ರಕರಣದ ಮೇರೆಗೆ ಹೊರಡಿಸಲಾದ ನಿರ್ದೇಶನದ ಆಧಾರದ ಮೇಲೆ ಸಿವಿಲ್ ನ್ಯಾಯಾಲಯವೆಂದು ಭಾವಿತವಾದ ಯಾರೇ ರಿಜಿಸ್ಟ್ರಾರ್ ಅಥವಾ ಸಬ್-ರಿಜಿಸ್ಟ್ರಾರ್, ಅಂಥ ಅಪರಾಧ ನಿರ್ಣಯದ ಮೇಲೆ, ಅಂಥ ರಿಜಿಸ್ಟ್ರಾರನ ಅಥವಾ ಸಬ್-ರಿಜಿಸ್ಟ್ರಾರನ ಕಚೇರಿಯು, ಯಾವ ಸೆಷನ್ ನ್ಯಾಯಾಲಯದ ವಿಭಾಗದಲ್ಲಿ ಇದೆಯೋ, ಆ ಸೆಷನ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶ ಇರತಕ್ಕದ್ದು.

**391. ಕೆಲವು ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟರು ತಮ್ಮ ಸಮ್ಮುಖದಲ್ಲಿ ನಡೆದ ಕೆಲವು ಅಪರಾಧಗಳ ಬಗ್ಗೆ ಅಧಿವಿಚಾರಣೆ ಮಾಡಬಾರದು.-** 383, 384, 388 ಮತ್ತು 389ನೇ ಪ್ರಕರಣಗಳಲ್ಲಿ ಉಪಬಂಧಿಸಲಾದಂತೆ ಹೊರತು, ಕ್ರಿಮಿನಲ್ ನ್ಯಾಯಾಲಯದ ಯಾರೇ ನ್ಯಾಯಾಧೀಶನೂ (ಉಚ್ಚ ನ್ಯಾಯಾಲಯದ ನ್ಯಾಯಾಧೀಶನಲ್ಲದ) ಅಥವಾ ಮ್ಯಾಜಿಸ್ಟ್ರೇಟನು ಯಾರೇ ವ್ಯಕ್ತಿಯನ್ನು 215ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಅಪರಾಧಕ್ಕಾಗಿ, ತನ್ನ ಮುಂದೆಯೇ ಅಥವಾ ಅವನು ಅಧಿಕಾರ ನಿಂದನೆ ಮಾಡಿ, ಅಂಥ ಅಪರಾಧವನ್ನು ಮಾಡಿರುವಾಗ ಅಥವಾ ನ್ಯಾಯಿಕ ವ್ಯವಹರಣೆ ನಡೆಯುತ್ತಿರುವಾಗ ಅಂಥ ನ್ಯಾಯಾಧೀಶನ ಅಥವಾ ಮ್ಯಾಜಿಸ್ಟ್ರೇಟನ ಗಮನಕ್ಕೆ ತಂದಾಗ ಅಧಿವಿಚಾರಣೆ ಮಾಡತಕ್ಕದ್ದಲ್ಲ.

## ಅಧ್ಯಾಯ XXIX

### ತೀರ್ಪು

**392. ತೀರ್ಪು.-** (1) ಮೂಲ ಅಧಿಕಾರವ್ಯಾಪ್ತಿಯುಳ್ಳ ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿನ ಪ್ರತಿಯೊಂದು ಅಧಿವಿಚಾರಣೆಯ ತೀರ್ಪನ್ನು, ಅಧಿವಿಚಾರಣೆಯು ಮುಕ್ತಾಯವಾದ ಕೂಡಲೇ ಅಥವಾ ನಲವತ್ತೈದು ದಿನಗಳನ್ನು ಮೀರದ ನಂತರದ ಯಾವುದೇ ಸಮಯದಲ್ಲಿ ಪಕ್ಷಕಾರರಿಗೆ ಅಥವಾ ಅವರ ನ್ಯಾಯವಾದಿಗಳು ನೋಟೀಸನ್ನು ನೀಡಿ,-

(ಎ) ತೀರ್ಪನ್ನು ಪೂರ್ಣವಾಗಿ ಹೇಳುವ ಮೂಲಕ; ಅಥವಾ

(ಬಿ) ತೀರ್ಪನ್ನು ಪೂರ್ಣವಾಗಿ ಓದುವ ಮೂಲಕ; ಅಥವಾ

(ಸಿ) ತೀರ್ಪಿನಲ್ಲಿ ಜಾರಿಗೊಳಿಸಬೇಕಾದ ಭಾಗವನ್ನು ಓದುವ ಮೂಲಕ ಮತ್ತು ಆಪಾದಿತನಿಗೆ ಅಥವಾ ಅವನ ನ್ಯಾಯವಾದಿಗೆ ಅರ್ಥವಾಗುವ ಭಾಷೆಯಲ್ಲಿ ತೀರ್ಪಿನ ಸಾರಾಂಶವನ್ನು ವಿವರಿಸುವ ಮೂಲಕ

- ಪೀಠಾಸೀನ ಅಧಿಕಾರಿಯು ಬಹಿರಂಗ ನ್ಯಾಯಾಲಯದಲ್ಲಿ ಉಚ್ಚರಿಸತಕ್ಕದ್ದು.

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತೀರ್ಪನ್ನು ನೀಡಿದಾಗ, ಪೀಠಾಸೀನ ಅಧಿಕಾರಿಯು ಅದನ್ನು ಶೀಘ್ರಲಿಪಿಯಲ್ಲಿ ಬರೆಸತಕ್ಕದ್ದು, ಅದನ್ನು ರೂಢಿಯ ಲಿಪಿಗೆ ಪರಿವರ್ತನೆಯಾದ ಕೂಡಲೇ ಅದಕ್ಕೆ ಮತ್ತು ಅದರ ಪ್ರತಿಯೊಂದು ಪುಟಕ್ಕೆ ಸಹಿ ಹಾಕತಕ್ಕದ್ದು ಮತ್ತು ಬಹಿರಂಗ ನ್ಯಾಯಾಲಯದಲ್ಲಿ ಆ ತೀರ್ಪನ ದಿನಾಂಕವನ್ನು ಅದರಲ್ಲಿ ಬರೆಯತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಸಂದರ್ಭಾನುಸಾರ, (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ತೀರ್ಪನ್ನು ಅಥವಾ ಅದನ್ನು ಜಾರಿಗೊಳಿಸಬೇಕಾದ ಭಾಗವನ್ನು ಓದಿದಾಗ, ಬಹಿರಂಗ ನ್ಯಾಯಾಲಯದಲ್ಲಿ ಪೀಠಾಸೀನ ಅಧಿಕಾರಿಯು ಅದಕ್ಕೆ ದಿನಾಂಕ ಮತ್ತು ಸಹಿಯನ್ನು ಹಾಕತಕ್ಕದ್ದು ಮತ್ತು ಅದನ್ನು ಅವನೇ ಬರೆದಿರದಿದ್ದಲ್ಲಿ, ತೀರ್ಪಿನ ಪ್ರತಿಯೊಂದು ಪುಟಕ್ಕೂ ಅವನು ಸಹಿ ಹಾಕತಕ್ಕದ್ದು.

(4) (1)ನೇ ಉಪಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತೀರ್ಪನ್ನು ಉಚ್ಚರಿಸಿದ್ದಲ್ಲಿ, ಪೂರ್ಣ ತೀರ್ಪನ್ನು ಅಥವಾ ಅದರ ಪ್ರತಿಯನ್ನು ಪಕ್ಷಕಾರರಿಗೆ ಅಥವಾ ಅವರ ನ್ಯಾಯವಾದಿಗಳಿಗೆ ಪರಿಶೀಲನೆಗಾಗಿ ಕೂಡಲೇ ಉಚಿತವಾಗಿ ಒದಗಿಸತಕ್ಕದ್ದು:

ಪರಂತು, ನ್ಯಾಯಾಲಯವು, ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ, ತೀರ್ಪಿನ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಅದರ ಪೋರ್ಟಲ್‌ನಲ್ಲಿ ತೀರ್ಪಿನ ಪ್ರತಿಯನ್ನು ಅಪ್ ಲೋಡ್ ಮಾಡತಕ್ಕದ್ದು.

(5) ಆಪಾದಿತನು ಅಭಿರಕ್ಷೆಯಲ್ಲಿದ್ದರೆ, ವ್ಯಕ್ತಿಯ ಮೂಲಕವಾಗಲೀ ಅಥವಾ ಶ್ರವ್ಯ-ದೃಶ್ಯ ವಿದ್ಯುನ್ಮಾನದ ಸಾಧನಗಳ ಮುಖಾಂತರವಾಗಲೀ ಉಚ್ಚರಿಸುವ ತೀರ್ಪನ್ನು ಕೇಳಲು ಅವನನ್ನು ಕರೆಯತಕ್ಕದ್ದು.

(6) ಆಪಾದಿತನು ಅಭಿರಕ್ಷೆಯಲ್ಲಿರದಿದ್ದರೆ, ಅಧಿವಿಚಾರಣೆಯ ಸಮಯದಲ್ಲಿ ಅವನ ಖುದ್ದು ಹಾಜರಾತಿಯನ್ನು ಮನ್ನಾ ಮಾಡಿದ್ದ ಹೊರತು ಮತ್ತು ಶಿಕ್ಷೆಯು ಕೇವಲ ಜುಲ್ಮಾನೆ ಮಾತ್ರವಾಗಿದ್ದಲ್ಲಿ ಅಥವಾ ಅವನು ನಿರಪರಾಧಿಯೆಂದು ನಿರ್ಣಯವಾಗಿರುವ ಹೊರತು ಉಚ್ಚರಿಸುವ ತೀರ್ಪನ್ನು ಕೇಳುವುದಕ್ಕಾಗಿ ಹಾಜರಾಗಬೇಕೆಂದು ನ್ಯಾಯಾಲಯವು ಅವನನ್ನು ಅಗತ್ಯಪಡಿಸತಕ್ಕದ್ದು:

ಪರಂತು, ಒಬ್ಬನಿಗಿಂತ ಹೆಚ್ಚು ಆಪಾದಿತರಿರುವಲ್ಲಿ ಮತ್ತು ತೀರ್ಪನ್ನು ಉಚ್ಚರಿಸುವ ದಿನಾಂಕದಂದು ಅವರಲ್ಲಿ ಒಬ್ಬರು ಅಥವಾ ಹೆಚ್ಚಿನವರು ನ್ಯಾಯಾಲಯಕ್ಕೆ ಹಾಜರಾಗದಿರುವಲ್ಲಿ, ಪೀಠಾಸೀನ ಅಧಿಕಾರಿಯು, ಮೊಕದ್ದಮೆಯ ವಿಲೆಯಲ್ಲಿ ಆಗುವ ಅನಗತ್ಯ ವಿಳಂಬವನ್ನು ತಪ್ಪಿಸುವುದಕ್ಕಾಗಿ, ಅವರು ಗೈರುಹಾಜರಾಗಿದ್ದರೂ ತೀರ್ಪನ್ನು ಉಚ್ಚರಿಸಬಹುದು.

(7) ಕ್ರಿಮಿನಲ್ ನ್ಯಾಯಾಲಯವು ನೀಡಿದ ಯಾವುದೇ ತೀರ್ಪನ್ನು ಅದನ್ನು ನೀಡುವುದಕ್ಕಾಗಿ ಅಧಿಸೂಚಿತವಾದ ದಿನದಂದು ಅಥವಾ ಸ್ಥಳದಲ್ಲಿ ಯಾರೇ ಪಕ್ಷಕಾರನು ಅಥವಾ ಅವನ ನ್ಯಾಯವಾದಿಯು ಗೈರುಹಾಜರಾದ ಕಾರಣಕ್ಕಾಗಿ ಮಾತ್ರವೇ ಅಥವಾ ಅಂಥ ದಿನ ಮತ್ತು ಸ್ಥಳ ಸೂಚನೆಯನ್ನು ಪಕ್ಷಕಾರರಿಗೆ ಅಥವಾ ಅವರ ನ್ಯಾಯವಾದಿಗಳಿಗೆ ಅಥವಾ ಅವರಲ್ಲಿ ಯಾರಿಗೇ ಆಗಲಿ ಕೊಡಲು ತಪ್ಪಿದ್ದಕ್ಕಾಗಿ ಅಥವಾ ತಪ್ಪಾಗಿ ಕೊಟ್ಟಿದ್ದಕ್ಕಾಗಿ ಮಾತ್ರವೇ ಕಾನೂನು ಮಾನ್ಯವಲ್ಲ ಎಂದು ಭಾವಿಸತಕ್ಕದ್ದಲ್ಲ.

(8) ಈ ಪ್ರಕರಣದಲ್ಲಿರುವುದು ಯಾವುದೂ, 511ನೇ ಪ್ರಕರಣದ ಉಪಬಂಧಗಳ ವ್ಯಾಪ್ತಿಯನ್ನು ಯಾವುದೇ ರೀತಿಯಲ್ಲಿ ಪರಿಮಿತಗೊಳಿಸುತ್ತದೆಂದು ಅರ್ಥೈಸತಕ್ಕದ್ದಲ್ಲ.

**393. ತೀರ್ಪಿನ ಭಾಷೆ ಮತ್ತು ಒಳಾಂಶಗಳು.-** (1) ಈ ಸಂಹಿತೆಯಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, 392ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಯೊಂದು ತೀರ್ಪು,-

(ಎ) ನ್ಯಾಯಾಲಯದ ಭಾಷೆಯಲ್ಲಿ ಬರೆದಿರತಕ್ಕದ್ದು;

(ಬಿ) ನಿರ್ಧರಿಸಬೇಕಾದ ಅಂಶ ಅಥವಾ ಅಂಶಗಳನ್ನು, ಅವುಗಳ ಮೇಲಿನ ತೀರ್ಮಾನ ಮತ್ತು ತೀರ್ಮಾನದ ಕಾರಣಗಳನ್ನು ಒಳಗೊಂಡಿರತಕ್ಕದ್ದು;

(ಸಿ) ಯಾವ ಅಪರಾಧಕ್ಕಾಗಿ (ಯಾವುದಾದರೂ ಇದ್ದರೆ) ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆಯೋ ಆ ಅಪರಾಧವನ್ನು ಮತ್ತು ಭಾರತೀಯ ನ್ಯಾಯ ಸಂಹಿತೆ, 2023 (2023ರ 45) ಅಥವಾ ಯಾವ ಇತರ ಕಾನೂನಿನ ಪ್ರಕರಣದ ಮೇರೆಗೆ ಅವನನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆಯೋ ಆ ಶಿಕ್ಷೆಯನ್ನು ಮತ್ತು ದಂಡನೆಯನ್ನು ನಿರ್ದಿಷ್ಟಪಡಿಸತಕ್ಕದ್ದು;

(ಡಿ) ಅದು, ನಿರಪರಾಧಿ ಎಂಬ ತೀರ್ಪಾಗಿದ್ದರೆ, ಯಾವ ಅಪರಾಧದ ಬಗ್ಗೆ ಆಪಾದಿತನನ್ನು ಖುಲಾಸೆ ಮಾಡಲಾಗಿದೆ ಎಂದು ತೀರ್ಮಾನಿಸಲಾಯಿತೋ, ಆ ಅಪರಾಧವನ್ನು ತಿಳಿಸತಕ್ಕದ್ದು ಮತ್ತು ಅವನನ್ನು ಸ್ವತಂತ್ರಗೊಳಿಸಬೇಕೆಂದು ನಿರ್ದೇಶಿಸತಕ್ಕದ್ದು.

(2) ಅಪರಾಧ ನಿರ್ಣಯವನ್ನು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಮೇರೆಗೆ ಮಾಡಲಾಗಿದ್ದರೆ ಮತ್ತು ಆ ಸಂಹಿತೆಯ ಎರಡು ಪ್ರಕರಣಗಳಲ್ಲಿ ಯಾವುದಕ್ಕೆ ಅಥವಾ ಒಂದೇ ಪ್ರಕರಣದ ಎರಡು ಭಾಗಗಳಲ್ಲಿ ಯಾವುದಕ್ಕೆ ಆ ಅಪರಾಧವು ಒಳಪಡುತ್ತದೆ ಎಂಬ ಬಗ್ಗೆ ಸಂಶಯವಿರುವಾಗ, ನ್ಯಾಯಾಲಯವು ಅದನ್ನು ಸ್ಪಷ್ಟವಾಗಿ ಹೇಳತಕ್ಕದ್ದು ಮತ್ತು ಪರ್ಯಾಯ ತೀರ್ಪು ನೀಡತಕ್ಕದ್ದು.

(3) ಮರಣದಂಡನೆಯಿಂದ ಅಥವಾ ಪರ್ಯಾಯವಾಗಿ ಆಜೀವ ಕಾರಾವಾಸದಿಂದ ಅಥವಾ ಕೆಲವು ವರ್ಷಗಳ ಅವಧಿಯ ಕಾರಾವಾಸದಿಂದ ದಂಡನೀಯವಾಗುವ ಅಪರಾಧಕ್ಕಾಗಿ ಅಪರಾಧ ನಿರ್ಣಯವಾದಾಗ, ಆ ಶಿಕ್ಷೆಯ ಕಾರಣಗಳನ್ನು ಮತ್ತು ಮರಣದಂಡನೆ ಶಿಕ್ಷೆಯ ಸಂದರ್ಭದಲ್ಲಿ, ಅಂಥ ಶಿಕ್ಷೆಯ ವಿಶೇಷ ಕಾರಣಗಳನ್ನು ತೀರ್ಪಿನಲ್ಲಿ ಹೇಳತಕ್ಕದ್ದು.

(4) ಒಂದು ವರ್ಷ ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಅಪರಾಧ ನಿರ್ಣಯವಾದಾಗ, ಆದರೆ ನ್ಯಾಯಾಲಯವು, ಮೂರು ತಿಂಗಳುಗಳಿಗಿಂತ ಕಡಿಮೆ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಿದರೆ, ಅದು, ನ್ಯಾಯಾಲಯದ ವ್ಯವಹರಣೆಗಳು ಮುಕ್ತಾಯವಾಗುವವರೆಗಿನ ಕಾರಾವಾಸದ ಶಿಕ್ಷೆಯ ಹೊರತು ಅಥವಾ ಈ ಸಂಹಿತೆಯ ಉಪಬಂಧಗಳ ಮೇರೆಗೆ ಮೊಕದ್ದಮೆಯ ಸಂಕ್ಷಿಪ್ತ ಅಧಿವಿಚಾರಣೆ ಮಾಡಿದ್ದ ಹೊರತು, ಅಂಥ ಶಿಕ್ಷೆಯನ್ನು ನೀಡಲು ಇರುವ ಕಾರಣಗಳನ್ನು ಅದು ದಾಖಲಿಸತಕ್ಕದ್ದು.

(5) ಯಾರೇ ವ್ಯಕ್ತಿಗೆ ಮರಣದಂಡನೆಯನ್ನು ವಿಧಿಸಿದರೆ, ಅವನು ಮರಣ ಹೊಂದುವವರೆಗೆ ಅವನ ಕುತ್ತಿಗೆಗೆ ನೇಣು ಹಾಕಬೇಕೆಂದು ಆ ಶಿಕ್ಷೆಯ ಆದೇಶದಲ್ಲಿ ನಿರ್ದೇಶಿಸತಕ್ಕದ್ದು.

(6) 136ನೇ ಪ್ರಕರಣ ಅಥವಾ 157ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಆದೇಶವು ಮತ್ತು 144ನೇ ಪ್ರಕರಣ, 164ನೇ ಪ್ರಕರಣ ಅಥವಾ 166ನೇ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಅಂತಿಮ ಆದೇಶವು, ನಿರ್ಧರಿಸಬೇಕಾದ ಅಂಶವನ್ನು ಅಥವಾ ಅಂಶಗಳನ್ನು, ಅವುಗಳ ಮೇಲಿನ ತೀರ್ಮಾನವನ್ನು ಮತ್ತು ತೀರ್ಮಾನದ ಕಾರಣಗಳನ್ನು ಒಳಗೊಂಡಿರತಕ್ಕದ್ದು.

**394. ಈ ಹಿಂದೆ ಅಪರಾಧಿ ಎಂದು ನಿರ್ಣೀತನಾದ ಅಪರಾಧಿಯ ವಿಳಾಸವನ್ನು ಅಧಿಸೂಚಿಸಲು ಆದೇಶ.-** (1) ಮೂರು ವರ್ಷಗಳ ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಭಾರತದಲ್ಲಿ ಯಾವುದೇ ನ್ಯಾಯಾಲಯದಿಂದ ಪುನಃ ಅಪರಾಧಿಯೆಂದು ನ್ಯಾಯನಿರ್ಣೀತನಾದ ಯಾರೇ ವ್ಯಕ್ತಿಯು, ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯದಿಂದ ಮೂರು ವರ್ಷಗಳು ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಪುನಃ ಅಪರಾಧಿಯೆಂದು ನ್ಯಾಯನಿರ್ಣೀತನಾದಾಗ, ಅಂಥ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಅಂಥ ವ್ಯಕ್ತಿಗೆ ಕಾರಾವಾಸದ ಶಿಕ್ಷೆ ನೀಡುವ ಕಾಲದಲ್ಲಿ, ಬಿಡುಗಡೆಯಾದ ತರುವಾಯ ಅವನ ವಿಳಾಸವನ್ನು ಅಥವಾ ಅಂಥ ವಿಳಾಸದ ಯಾವುದೇ ಬದಲಾವಣೆಯನ್ನು ಅಥವಾ ಅವನು ಅಲ್ಲಿ ಇಲ್ಲದಿರುವುದನ್ನು, ಅಂಥ ಶಿಕ್ಷೆಯು ಮುಗಿದ ದಿನಾಂಕದಿಂದ ಐದು ವರ್ಷಗಳಿಗೆ ಮೀರದ ಅವಧಿಯವರೆಗೆ ಈ ಮುಂದೆ ಉಪಬಂಧಿಸಲಾದ ರೀತಿಯಲ್ಲಿ ತಿಳಿಸತಕ್ಕದ್ದೆಂದೂ ಆದೇಶಿಸಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳು ಅಂಥ ಅಪರಾಧಗಳನ್ನು ಮಾಡಲು ಉದ್ದೇಶಿಸುವ ಆಪರಾಧಿಕ ಒಳಸಂಚುಗಳಿಗೆ ಮತ್ತು ಅಂಥ ಅಪರಾಧಗಳ ದುಷ್ಪ್ರೇರಣೆಗೆ ಹಾಗೂ ಅವುಗಳನ್ನು ಮಾಡಲು ಪ್ರಯತ್ನಿಸುವುದಕ್ಕೂ ಸಹ ಅನ್ವಯವಾಗತಕ್ಕದ್ದು.

(3) ಅಂಥ ಅಪರಾಧ ನಿರ್ಣಯವನ್ನು ಅಪೀಲಿನ ಮೇಲೆ ಅಥವಾ ಅನ್ಯಥಾ ತಳ್ಳಿ ಹಾಕಲಾಗಿದ್ದರೆ, ಅಂಥ ಆದೇಶವು ಅಸಿಂಧುವಾಗಿರತಕ್ಕದ್ದು.

(4) ಅಪೀಲು ವಿಚಾರಣಾ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು ತನ್ನ ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸುವಾಗ, ಈ ಪ್ರಕರಣದ ಮೇರೆಗೆ ಆದೇಶವನ್ನು ಸಹ ಮಾಡಬಹುದು.

(5) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಬಿಡುಗಡೆ ಹೊಂದಿದ ಅಪರಾಧಿಗಳು ತಮ್ಮ ನಿವಾಸದ ಅಥವಾ ನಿವಾಸದ ಬದಲಾವಣೆಯ ಅಥವಾ ಅವರು ಅಲ್ಲಿಲ್ಲದಿರುವ ಬಗ್ಗೆ ತಿಳಿಸುವುದಕ್ಕೆ ಸಂಬಂಧಿಸಿದ ಈ ಪ್ರಕರಣದ ಉಪಬಂಧಗಳನ್ನು ಪಾಲಿಸುವ ಸಂಬಂಧದಲ್ಲಿ ನಿಯಮಗಳನ್ನು ರಚಿಸಬಹುದು.

(6) ಅಂಥ ನಿಯಮಗಳು, ಅವುಗಳ ಉಲ್ಲಂಘನೆಯ ಬಗ್ಗೆ ದಂಡನೆಯನ್ನು ಉಪಬಂಧಿಸಬಹುದು ಮತ್ತು ಅಂಥ ಯಾವುದೇ ನಿಯಮದ ಉಲ್ಲಂಘನೆಗಾಗಿ ಆರೋಪಿತನಾದ ಯಾರೇ ವ್ಯಕ್ತಿಯನ್ನು, ಅವನು ಕೊನೆಯದಾಗಿ ತಿಳಿಸಿದ ಆತನ ನಿವಾಸದ ಸ್ಥಳವು ಇರುವ ಜಿಲ್ಲೆಯಲ್ಲಿ ಸಕ್ಷಮ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನು ಅಧಿವಿಚಾರಣೆ ಮಾಡಬಹುದು.

**395. ನಷ್ಟಪರಿಹಾರ ಸಂದಾಯ ಮಾಡಲು ಆದೇಶ.-** (1) ಜುಲ್ಮಾನೆಯ ಶಿಕ್ಷೆ ಆದೇಶವನ್ನು ಅಥವಾ ಜುಲ್ಮಾನೆಯು ಒಂದು ಭಾಗವಾಗಿರುವ ಶಿಕ್ಷೆಯ ಆದೇಶವನ್ನು (ಮರಣದಂಡನೆಯೂ ಸೇರಿ) ನ್ಯಾಯಾಲಯವು ವಿಧಿಸಿದಾಗ, ಅದು ತಾನು ತೀರ್ಪು ನೀಡುವಾಗ, ವಸೂಲಾದ ಜುಲ್ಮಾನೆಯ ಪೂರ್ಣ ಅಥವಾ ಯಾವುದೇ ಭಾಗವನ್ನು,-

(ಎ) ಪ್ರಾಸಿಕ್ಯೂಷನ್ನಿಗಾಗಿ ತಗುಲಿದ ಸೂಕ್ತ ವೆಚ್ಚಗಳನ್ನು ಭರಿಸುವುದಕ್ಕೆ;

(ಬಿ) ಯಾರೇ ವ್ಯಕ್ತಿಗೆ ಆ ಅಪರಾಧದಿಂದ ಉಂಟಾದ ಯಾವುದೇ ನಷ್ಟ ಅಥವಾ ಕ್ಷತಿಗಾಗಿ ಯಾರೇ ವ್ಯಕ್ತಿಗೆ ಪರಿಹಾರವನ್ನು, ಆ ನಷ್ಟಪರಿಹಾರವನ್ನು ಆ ವ್ಯಕ್ತಿಯು ಸಿವಿಲ್ ನ್ಯಾಯಾಲಯದಲ್ಲಿ ವಸೂಲು ಮಾಡಬಹುದಾಗಿದೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಹಾಗೆ ಆ ನಷ್ಟಪರಿಹಾರವನ್ನು ಸಂದಾಯ ಮಾಡುವುದಕ್ಕೆ;

(ಸಿ) ಮತ್ತೊಬ್ಬ ವ್ಯಕ್ತಿಗೆ ಮರಣವನ್ನುಂಟು ಮಾಡಿದ ಯಾವುದೇ ಅಪರಾಧಕ್ಕಾಗಿ ಅಥವಾ ಅಂಥ ಅಪರಾಧವನ್ನು ಮಾಡಲು ದುಷ್ಪ್ರೇರಿಸಿದ್ದಕ್ಕಾಗಿ ಯಾರೇ ವ್ಯಕ್ತಿಯು, ಅಪರಾಧಿಯೆಂದು ನಿರ್ಣೀತನಾದಾಗ ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, 1855 (1855ರ 13) ರ ಮೇರೆಗೆ ಅಂಥ ಮರಣದಿಂದ ತಮಗಾದ ನಷ್ಟಕ್ಕಾಗಿ ಯಾರಿಗೆ ಶಿಕ್ಷೆಯ ಆದೇಶ ಮಾಡಲಾಗಿದೆಯೋ ಆ ವ್ಯಕ್ತಿಯಿಂದ ನಷ್ಟಪರಿಹಾರ ವಸೂಲು ಮಾಡಲು ಹಕ್ಕುಳ್ಳ ವ್ಯಕ್ತಿಗಳಿಗೆ ನಷ್ಟಪರಿಹಾರ ಸಂದಾಯ ಮಾಡುವುದಕ್ಕೆ;

(ಡಿ) ಕಳವು, ಆಪರಾಧಿಕ ದುರ್ವಿನಿಯೋಗ, ಆಪರಾಧಿಕ ನಂಬಿಕೆದ್ರೋಹ ಅಥವಾ ವಂಚನೆ ಅಥವಾ ಕಳವು ಮಾಡಿದ ಸ್ವತ್ತನ್ನು, ಅದು ಕಳವು ಮಾಡಿದ ಸ್ವತ್ತೆಂದು ತಿಳಿದಿದ್ದೂ ಅಥವಾ ಹಾಗೆ ನಂಬಲು ಕಾರಣವಿದ್ದೂ, ಅಪ್ರಾಮಾಣಿಕವಾಗಿ ಸ್ವೀಕರಿಸುವ ಅಥವಾ ಇಟ್ಟುಕೊಳ್ಳುವ ಅಥವಾ ಅದನ್ನು ವಿಲೆ ಮಾಡಲು ಸ್ವಯಿಚ್ಛೆಯಿಂದ ಸಹಾಯ ಮಾಡುವ ಯಾವುದೇ ಅಪರಾಧಕ್ಕಾಗಿ ಯಾರೇ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದಾಗ, ಅಂಥ ಸ್ವತ್ತನ್ನು ಅದಕ್ಕೆ ಹಕ್ಕುಳ್ಳ ವ್ಯಕ್ತಿಯ ಸ್ವಾಧೀನಕ್ಕೆ ಒಪ್ಪಿಸಿದಾಗ ಅಂಥ ಸ್ವತ್ತಿನ ಯಾರೇ ಸದ್ಭಾವನೆಯ ಖರೀದಿದಾರನಿಗೆ ಅದರಿಂದಾಗುವ ನಷ್ಟಕ್ಕಾಗಿ ಪರಿಹಾರ ನೀಡುವುದಕ್ಕೆ

- ವಿನಿಯೋಗಿಸತಕ್ಕದ್ದು ಎಂದು ಆದೇಶಿಸಬಹುದು.

(2) ಅಪೀಲಿಗೆ ಒಳಪಡುವ ಮೊಕದ್ದಮೆಯಲ್ಲಿ ಜುಲ್ಮಾನೆಯನ್ನು ವಿಧಿಸಿದರೆ, ಅಪೀಲು ಹೂಡಲು ಇರುವ ಅವಧಿಯು ಮುಗಿಯುವ ಮುನ್ನ ಅಥವಾ ಅಪೀಲು ಹೂಡಲಾಗಿದ್ದರೆ, ಅದು ತೀರ್ಮಾನವಾಗುವ ಮುನ್ನ, ಅಂಥ ಯಾವುದೇ ಸಂದಾಯವನ್ನು ಮಾಡತಕ್ಕದ್ದಲ್ಲ.

(3) ಜುಲ್ಮಾನೆಯ ಭಾಗವಾಗಿರದ ಶಿಕ್ಷೆಯ ಆದೇಶವನ್ನು ನ್ಯಾಯಾಲಯವು ವಿಧಿಸಿದರೆ, ಆ ನ್ಯಾಯಾಲಯವು, ತಾನು ತೀರ್ಪು ಕೊಡುವಾಗ, ಯಾವುದಕ್ಕಾಗಿ ಆಪಾದಿತ ವ್ಯಕ್ತಿಗೆ ಹಾಗೆ ಶಿಕ್ಷೆಯ ಆದೇಶ ಮಾಡಲಾಗಿದೆಯೋ ಆ ಕೃತ್ಯದ ಕಾರಣದಿಂದಾಗಿ ಯಾವುದೇ ನಷ್ಟ ಅಥವಾ ಕ್ಷತಿಯನ್ನು ಅನುಭವಿಸಿದ ವ್ಯಕ್ತಿಗೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮೊಬಲಗನ್ನು ನಷ್ಟಪರಿಹಾರದ ರೂಪದಲ್ಲಿ ಸಂದಾಯ ಮಾಡಲು ಆಪಾದಿತ ವ್ಯಕ್ತಿಗೆ ಆದೇಶಿಸಬಹುದು.

(4) ಅಪೀಲು ವಿಚಾರಣಾ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು ಪುನರೀಕ್ಷಣೆಯ ತನ್ನ ಅಧಿಕಾರಗಳನ್ನು ಚಲಾಯಿಸುವಾಗ, ಈ ಪ್ರಕರಣದ ಮೇರೆಗೆ ಆದೇಶವನ್ನು ಸಹ ಮಾಡಬಹುದು.

(5) ಅದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ತರುವಾಯದ ಸಿವಿಲ್ ದಾವೆಯಲ್ಲಿ ನಷ್ಟಪರಿಹಾರವನ್ನು ನೀಡುವ ಕಾಲದಲ್ಲಿ, ಈ ಪ್ರಕರಣದ ಮೇರೆಗೆ ನಷ್ಟಪರಿಹಾರವಾಗಿ ಸಂದಾಯವಾದ ಅಥವಾ ವಸೂಲು ಮಾಡಿದ ಯಾವುದೇ ಮೊತ್ತವನ್ನು ನ್ಯಾಯಾಲಯವು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

**396. ಸಂತ್ರಸ್ತರ ನಷ್ಟಪರಿಹಾರ ಯೋಜನೆ.-** (1) ಅಪರಾಧದ ಪರಿಣಾಮದಿಂದಾಗಿ ನಷ್ಟಕ್ಕೊಳಗಾದ ಅಥವಾ ಕ್ಷತಿಗೊಂಡ ಮತ್ತು ಪುನರ್ವಸತಿ ಅಗತ್ಯವಾಗಿರುವ ಸಂತ್ರಸ್ತ ವ್ಯಕ್ತಿಗೆ ಅಥವಾ ಆತನ ಅವಲಂಬಿತರಿಗೆ ನಷ್ಟಪರಿಹಾರ ನೀಡುವ ಉದ್ದೇಶಕ್ಕಾಗಿ ಪ್ರತಿಯೊಂದು ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಸಮನ್ವಯದೊಂದಿಗೆ ಯೋಜನೆಯನ್ನು ರೂಪಿಸತಕ್ಕದ್ದು.

(2) ನಷ್ಟಪರಿಹಾರಕ್ಕಾಗಿ ನ್ಯಾಯಾಲಯವು ಶಿಫಾರಸ್ಸನ್ನು ಮಾಡಿದಾಗಲೆಲ್ಲ, ಸಂದರ್ಭಾನುಸಾರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಅಥವಾ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯೋಜನೆಯ ಮೇರೆಗೆ ನೀಡಬೇಕಾದ ನಷ್ಟಪರಿಹಾರದ ಪ್ರಮಾಣವನ್ನು ನಿರ್ಧರಿಸತಕ್ಕದ್ದು.

(3) 395ನೇ ಪ್ರಕರಣದ ಮೇರೆಗೆ ನೀಡಿದ ನಷ್ಟಪರಿಹಾರವು, ಅಂಥ ಪುನರ್ವಸತಿಗೆ ಸಾಕಾಗುವುದಿಲ್ಲ ಎಂದು ಅಧಿವಿಚಾರಣೆಯ ಮುಕ್ತಾಯದ ನಂತರ ಅಧಿವಿಚಾರಣಾ ನ್ಯಾಯಾಲಯಕ್ಕೆ ಮನದಟ್ಟಾದರೆ ಅಥವಾ ಮೊಕದ್ದಮೆಯಲ್ಲಿ ನಿರ್ದೋಷಿಗಳೆಂದು ನಿರ್ಣಯವಾದರೆ ಅಥವಾ ಬಿಡುಗಡೆ ಮಾಡಿದ್ದರೆ ಮತ್ತು ಸಂತ್ರಸ್ತ ವ್ಯಕ್ತಿಗೆ ಪುನರ್ವಸತಿ ಕಲ್ಪಿಸಬೇಕಾಗಿದ್ದರೆ, ಅದು ನಷ್ಟಪರಿಹಾರಕ್ಕಾಗಿ ಶಿಫಾರಸ್ಸು ಮಾಡಬಹುದು.

(4) ಅಪರಾಧಿಯು ಪತ್ತೆ ಆಗದಿದ್ದರೆ ಅಥವಾ ಆತನನ್ನು ಗುರುತಿಸಲಾಗದಿದ್ದರೆ, ಆದರೆ, ಸಂತ್ರಸ್ತ ವ್ಯಕ್ತಿಯನ್ನು ಗುರುತಿಸಿದ್ದು ಅಧಿವಿಚಾರಣೆ ನಡೆಯದಿದ್ದರೆ, ಸಂತ್ರಸ್ತ ವ್ಯಕ್ತಿಯು ಅಥವಾ ಆತನ ಅವಲಂಬಿತರು ರಾಜ್ಯ ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ನಷ್ಟಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು.

(5) ಅಂಥ ಶಿಫಾರಸುಗಳನ್ನು ಅಥವಾ (4)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ನಂತರ ರಾಜ್ಯ ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಸೂಕ್ತ ವಿಚಾರಣೆ ನಡೆಸಿ ಎರಡು ತಿಂಗಳೊಳಗಾಗಿ ವಿಚಾರಣೆಯನ್ನು ಮುಕ್ತಾಯಗೊಳಿಸಿ, ಸಾಕಷ್ಟು ನಷ್ಟಪರಿಹಾರವನ್ನು ಮಂಜೂರು ಮಾಡತಕ್ಕದ್ದು.

(6) ಸಂದರ್ಭಾನುಸಾರ, ರಾಜ್ಯ ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಸಂತ್ರಸ್ತ ವ್ಯಕ್ತಿಯ ಸಂಕಷ್ಟವನ್ನು ಶಮನಗೊಳಿಸಲು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಪೊಲೀಸ್ ಅಧಿಕಾರಿಯ ದರ್ಜೆಗಿಂತ ಕಡಿಮೆ

ದರ್ಜೆಯವನಲ್ಲದ ಪೊಲೀಸ್ ಅಧಿಕಾರಿಯ ಅಥವಾ ಆಯಾ ಪ್ರದೇಶದ ಮ್ಯಾಜಿಸ್ಟ್ರೇಟನ ಪ್ರಮಾಣಪತ್ರದ ಆಧಾರದ ಮೇಲೆ ಉಚಿತವಾಗಿ ತುರ್ತು ಪ್ರಥಮ ಚಿಕಿತ್ಸೆ ಸೌಕರ್ಯವನ್ನು ಅಥವಾ ವೈದ್ಯಕೀಯ ಪ್ರಯೋಜನಗಳನ್ನು ಕೊಡುವಂತೆ ಆದೇಶ ಮಾಡಬಹುದು ಅಥವಾ ಸಮುಚಿತ ಪ್ರಾಧಿಕಾರವು ಸೂಕ್ತವೆಂದು ಭಾವಿಸುವಂಥ ಯಾವುದೇ ಇತರ ಮಧ್ಯಂತರ ಪರಿಹಾರಕ್ಕೆ ಆದೇಶ ಮಾಡಬಹುದು.

(7) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಿಂದ ಸಂದಾಯವಾಗಬೇಕಾದ ನಷ್ಟಪರಿಹಾರವು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 65ನೇ ಪ್ರಕರಣ, 70ನೇ ಪ್ರಕರಣ ಮತ್ತು 124ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂತ್ರಸ್ತ ವ್ಯಕ್ತಿಗೆ ಮಾಡುವ ಜುಲ್ಮಾನೆ ಸಂದಾಯಕ್ಕೆ ಹೆಚ್ಚುವರಿಯಾಗಿರತಕ್ಕದ್ದು.

**397. ಸಂತ್ರಸ್ತರಿಗೆ ಚಿಕಿತ್ಸೆ.-** ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ನಿಕಾಯಗಳು ಅಥವಾ ಯಾರೇ ಇತರ ವ್ಯಕ್ತಿಯು ನಡೆಸುತ್ತಿರುವ, ಎಲ್ಲಾ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 70ನೇ ಪ್ರಕರಣ, 71ನೇ ಪ್ರಕರಣ ಅಥವಾ 124ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012 (2012ರ 32) ರ 4, 6, 8 ಅಥವಾ 10ನೇ ಪ್ರಕರಣಗಳಲ್ಲಿ ಒಳಗೊಳ್ಳುವ ಯಾವುದೇ ಅಪರಾಧದ ಸಂತ್ರಸ್ತರಿಗೆ ಆ ಕೂಡಲೇ ಉಚಿತವಾಗಿ ಪ್ರಥಮ ಚಿಕಿತ್ಸೆಯನ್ನು ಅಥವಾ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸತಕ್ಕದ್ದು ಮತ್ತು ಆ ಘಟನೆಯ ಮಾಹಿತಿಯನ್ನು ಕೂಡಲೇ ಪೊಲೀಸರಿಗೆ ತಿಳಿಸತಕ್ಕದ್ದು.

**398. ಸಾಕ್ಷಿದಾರನ ಸಂರಕ್ಷಣಾ ಯೋಜನೆ.-** ಪ್ರತಿಯೊಂದು ರಾಜ್ಯ ಸರ್ಕಾರವು ಸಾಕ್ಷಿದಾರರ ಸಂರಕ್ಷಣೆಯನ್ನು ಖಚಿತಪಡಿಸುವ ದೃಷ್ಟಿಯಿಂದ ರಾಜ್ಯ ಸಾಕ್ಷಿದಾರನ ಸಂರಕ್ಷಣೆ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಧಿಸೂಚಿಸತಕ್ಕದ್ದು.

**399. ನಿರಾಧಾರವಾಗಿ ದಸ್ತಗಿರಿಯಾದ ವ್ಯಕ್ತಿಗಳಿಗೆ ನಷ್ಟಪರಿಹಾರ.-** (1) ಒಬ್ಬ ವ್ಯಕ್ತಿಯು ಪೊಲೀಸ್ ಅಧಿಕಾರಿಯಿಂದ ಮತ್ತೊಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಿಸಿದರೆ, ಅಂಥ ದಸ್ತಗಿರಿ ಮಾಡಿಸಲು ಸಾಕಷ್ಟು ಆಧಾರವಿರಲಿಲ್ಲವೆಂದು ಮೊಕದ್ದಮೆಯನ್ನು ವಿಚಾರಣೆ ಮಾಡಿದ ಮ್ಯಾಜಿಸ್ಟ್ರೇಟನಿಗೆ ಕಂಡುಬಂದಲ್ಲಿ, ಹಾಗೆ ದಸ್ತಗಿರಿಯಾದ ವ್ಯಕ್ತಿಗೆ ಈ ವಿಷಯದಲ್ಲಿ ಆದ ಅವನ ಸಮಯ ಹಾಗೂ ವೆಚ್ಚಗಳ ನಷ್ಟಕ್ಕಾಗಿ, ಮ್ಯಾಜಿಸ್ಟ್ರೇಟನು ತಾನು ಸೂಕ್ತವೆಂದು ಭಾವಿಸುವಂಥ ಒಂದು ಸಾವಿರ ರೂಪಾಯಿಗಳಿಗೆ ಮೀರದ ಪರಿಹಾರವನ್ನು ದಸ್ತಗಿರಿ ಮಾಡಿಸಿದ ವ್ಯಕ್ತಿಯು ಸಂದಾಯ ಮಾಡಬೇಕೆಂದು ಆದೇಶಿಸಬಹುದು.

(2) ಅಂಥ ಸಂದರ್ಭಗಳಲ್ಲಿ, ಒಬ್ಬನಿಗಿಂತ ಹೆಚ್ಚು ಮಂದಿ ದಸ್ತಗಿರಿಯಾದರೆ, ಮ್ಯಾಜಿಸ್ಟ್ರೇಟನು ಅದೇ ರೀತಿಯಲ್ಲಿ, ತಾನು ಸೂಕ್ತವೆಂದು ಭಾವಿಸುವಂಥ, ಒಂದು ಸಾವಿರ ರೂಪಾಯಿಗಳಿಗೆ ಮೀರದ ಪರಿಹಾರವನ್ನು ಪ್ರತಿಯೊಬ್ಬರಿಗೂ ನೀಡಬೇಕೆಂದು ಆದೇಶಿಸಬಹುದು.

(3) ಈ ಪ್ರಕರಣದ ಮೇರೆಗೆ ನೀಡಬೇಕೆಂದು ಆದೇಶಿಸಿದ ಎಲ್ಲ ಪರಿಹಾರಧನವನ್ನು ಅದು ಜುಲ್ಮಾನೆಯಾಗಿದ್ದಿದ್ದರೆ ಹೇಗೋ ಹಾಗೆ ವಸೂಲು ಮಾಡಬಹುದು ಮತ್ತು ಅದನ್ನು ಹಾಗೆ ವಸೂಲು ಮಾಡಲು ಆಗದಿದ್ದರೆ, ಅಂಥ ಮೊಬಲಗು ಬೇಗ ಸಂದಾಯವಾದ ಹೊರತು, ಯಾರು ಅದನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಗೆ, ಮ್ಯಾಜಿಸ್ಟ್ರೇಟನು ನಿರ್ದೇಶಿಸಬಹುದಾದಂಥ ಮೂವತ್ತು ದಿನಗಳಿಗೆ ಮೀರದ ಅವಧಿಯ ಸಾದಾ ಕಾರಾವಾಸ ಶಿಕ್ಷೆಯನ್ನು ವಿಧಿಸತಕ್ಕದ್ದು.

**400. ಸಂಜ್ಞೇಯವಲ್ಲದ ಮೊಕದ್ದಮೆಗಳಲ್ಲಿ ಖರ್ಚುಗಳ ಸಂದಾಯಕ್ಕೆ ಆದೇಶ.-** (1) ಸಂಜ್ಞೇಯವಲ್ಲದ ಅಪರಾಧದ ಬಗ್ಗೆ ಯಾವುದೇ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿದಾಗ, ನ್ಯಾಯಾಲಯವು, ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿದರೆ, ಅದು ಅವನಿಗೆ ವಿಧಿಸಲಾದ ದಂಡದ ಜೊತೆಗೆ, ಪ್ರಾಸಿಕ್ಯೂಷನ್ನಿಗಾಗಿ ದೂರುದಾರನು ಭರಿಸಿದ ಖರ್ಚುಗಳನ್ನು

ಪೂರ್ಣವಾಗಿ ಅಥವಾ ಭಾಗಶಃ ಆ ದೂರುದಾರನಿಗೆ ಸಂದಾಯ ಮಾಡಬೇಕೆಂದು ಅವನಿಗೆ ಆದೇಶಿಸಬಹುದು ಮತ್ತು ಸಂದಾಯ ಮಾಡಲು ತಪ್ಪಿದ್ದಲ್ಲಿ, ಆಪಾದಿತನು ಮೂವತ್ತು ದಿನಗಳಿಗೆ ಮೀರದ ಅವಧಿಯ ಸಾದಾ ಕಾರಾವಾಸ ಶಿಕ್ಷೆಯನ್ನು ಅನುಭವಿಸತಕ್ಕದ್ದೆಂದೂ ಆದೇಶಿಸಬಹುದು ಮತ್ತು ಅಂಥ ಖರ್ಚುಗಳು, ನ್ಯಾಯಾಲಯವು ಯುಕ್ತವೆಂದು ಪರ್ಯಾಲೋಚಿಸಬಹುದಾದ, ಆದೇಶಿಕೆಯ ಫೀಜು, ಸಾಕ್ಷಿದಾರರ ಮತ್ತು ನ್ಯಾಯವಾದಿ ಫೀಜುಗಳ ಸಂಬಂಧದಲ್ಲಿ ಭರಿಸಿದ ಯಾವುದೇ ವೆಚ್ಚಗಳನ್ನು ಒಳಗೊಳ್ಳಬಹುದು.

(2) ಅಪೀಲು ವಿಚಾರಣಾ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು ಪುನರೀಕ್ಷಣೆಯ ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಈ ಪ್ರಕರಣದ ಮೇರೆಗೆ ಆದೇಶವನ್ನೂ ಸಹ ಮಾಡಬಹುದು.

**401. ಸನ್ನಡತೆಯ ಪರಿವೀಕ್ಷಣೆಯ ಮೇಲೆ ಅಥವಾ ಎಚ್ಚರಿಕೆ ಕೊಟ್ಟ ತರುವಾಯ ಬಿಡುಗಡೆ ಮಾಡಲು ಆದೇಶ.-** (1) ಇಪ್ಪತ್ತೊಂದು ವರ್ಷಗಳಿಗಿಂತ ಕಡಿಮೆ ವಯಸ್ಸಿನವಲ್ಲದ ಯಾರೇ ವ್ಯಕ್ತಿಯು, ಕೇವಲ ಜುಲ್ಮಾನೆಯಿಂದ ಅಥವಾ ಏಳು ವರ್ಷಗಳ ಅಥವಾ ಅದಕ್ಕಿಂತ ಕಡಿಮೆ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಅಪರಾಧಿಯೆಂದು ನಿರ್ಣಯಿಸಿರುವಾಗ ಅಥವಾ ಇಪ್ಪತ್ತೊಂದು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾರೇ ವ್ಯಕ್ತಿಯು ಅಥವಾ ಯಾರೇ ಮಹಿಳೆಯು, ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಲ್ಲದ ಅಪರಾಧದ ಅಪರಾಧಿಯೆಂದು ನಿರ್ಣಯಿಸಿದಾಗ ಮತ್ತು ಅಪರಾಧಿಯ ವಿರುದ್ಧ ಯಾವುದೇ ಹಿಂದಿನ ಅಪರಾಧ ನಿರ್ಣಯದ ರುಜುವಾತು ಇಲ್ಲದಿರುವಾಗ, ಅಪರಾಧಿಯ ವಯಸ್ಸು, ಶೀಲ ಅಥವಾ ಪೂರ್ವೋತ್ತರಗಳನ್ನು ಮತ್ತು ಅಪರಾಧವು ನಡೆದಿದ್ದ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡು, ಅಪರಾಧಿಯನ್ನು ಸನ್ನಡತೆಯ ಪರಿವೀಕ್ಷಣೆಯ ಮೇಲೆ ಬಿಡುಗಡೆ ಮಾಡುವುದು ವಿಹಿತವಾಗಿದೆಯೆಂದು ಅವನನ್ನು ಅಪರಾಧಿಯೆಂದು ನಿರ್ಣಯಿಸಿದ ಆ ನ್ಯಾಯಾಲಯಕ್ಕೆ ಕಂಡುಬಂದರೆ, ಅದು ಯಾವುದೇ ದಂಡನೆಯನ್ನು ಕೂಡಲೇ ಅವನಿಗೆ ವಿಧಿಸುವ ಬದಲು, ನ್ಯಾಯಾಲಯವು ನಿರ್ದೇಶಿಸಬಹುದಾದಂಥ (ಮೂರು ವರ್ಷಗಳಿಗೆ ಮೀರದ) ಅವಧಿಯಲ್ಲಿ ಕರೆದಾಗ ಹಾಜರಾಗಲು ಹಾಗೂ ಶಿಕ್ಷೆಯ ಆದೇಶಕ್ಕೆ ಒಳಪಡಲು ಮತ್ತು ಆ ಅವಧಿಯಲ್ಲಿ ಶಾಂತಿಪಾಲನೆ ಹಾಗೂ ಸದ್ವರ್ತನೆಯಲ್ಲಿರಲು ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಟ್ಟ ಮೇಲೆ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಬಹುದು:

ಪರಂತು, ಉಚ್ಚ ನ್ಯಾಯಾಲಯವು ವಿಶೇಷವಾಗಿ ಅಧಿಕಾರ ನೀಡದ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು ಯಾರೇ ಮೊದಲ ಅಪರಾಧಿಯೆಂದು ಅಪರಾಧಿಯೆಂದು ನಿರ್ಣಯಿಸಿರುವಲ್ಲಿ ಮತ್ತು ಈ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಡುವಲ್ಲಿ, ಅವನು ಆ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು ಮತ್ತು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಬಳಿಗೆ ಆಪಾದಿತನನ್ನು ಕಳುಹಿಸಿ ಅಥವಾ ಆ ಮ್ಯಾಜಿಸ್ಟ್ರೇಟನ ಮುಂದೆ ಅವನ ಹಾಜರಾತಿಗಾಗಿ ಜಾಮೀನು ತೆಗೆದುಕೊಂಡು ಅಂಥ ಮ್ಯಾಜಿಸ್ಟ್ರೇಟನಿಗೆ ವ್ಯವಹರಣೆಗಳನ್ನು ಒಪ್ಪಿಸತಕ್ಕದ್ದು ಹಾಗೂ ಅವನು (2)ನೇ ಉಪಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಮೊಕದ್ದಮೆಯನ್ನು ವಿಲೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಲಾದಂತೆ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗೆ ವ್ಯವಹರಣೆಗಳನ್ನು ಒಪ್ಪಿಸಿರುವಾಗ, ಅಂಥ ಮ್ಯಾಜಿಸ್ಟ್ರೇಟನು, ಆ ಮೊಕದ್ದಮೆಯ ಪ್ರಥಮ ವಿಚಾರಣೆ ಮಾಡಿದ್ದರೂ, ತಾನು ಮಾಡಬಹುದಾಗಿದ್ದ ಶಿಕ್ಷೆಯ ಆದೇಶವನ್ನು ಅಥವಾ ಅಂಥ ಆದೇಶವನ್ನು ಮಾಡಬಹುದು ಮತ್ತು ಯಾವುದೇ ಅಂಶದ ಮೇಲೆ ಮುಂದಿನ ವಿಚಾರಣೆ ಅಥವಾ ಹೆಚ್ಚಿನ ಸಾಕ್ಷ್ಯವು ಅವಶ್ಯಕವೆಂದು ಅವನು ಭಾವಿಸಿದರೆ, ಅವನೇ ಅಂಥ ವಿಚಾರಣೆಯನ್ನು ಮಾಡಬಹುದು ಅಥವಾ

ಅಂಥ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು ಅಥವಾ ಅಂಥ ವಿಚಾರಣೆಯನ್ನು ಮಾಡುವಂತೆ ಅಥವಾ ಸಾಕ್ಷ್ಯವನ್ನು ತೆಗೆದುಕೊಳ್ಳುವಂತೆ ನಿರ್ದೇಶಿಸಬಹುದು.

(3) ಕಳವು, ಕಟ್ಟಡದಲ್ಲಿ ಕಳವು, ಅಪ್ರಾಮಾಣಿಕ ದುರ್ವಿನಿಯೋಗ, ವಂಚನೆ ಇವುಗಳಿಗಾಗಿ ಅಥವಾ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ಮೇರೆಗೆ ಎರಡು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಅಥವಾ ಜುಲ್ಮಾನೆಯಿಂದ ಮಾತ್ರ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ, ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಲಾಗಿರುವ ಯಾವುದೇ ಮೊಕದ್ದಮೆಯಲ್ಲಿ ಮತ್ತು ಅವನ ವಿರುದ್ಧ ಯಾವುದೇ ಹಿಂದಿನ ಅಪರಾಧ ನಿರ್ಣಯದ ರುಜುವಾತು ಇಲ್ಲದಿರುವಲ್ಲಿ, ಆತನನ್ನು ಹಾಗೆ ಅಪರಾಧಿಯೆಂದು ನಿರ್ಣಯಿಸಿದ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ ಅಪರಾಧಿಯ ವಯಸ್ಸು, ಚಾರಿತ್ರ್ಯ, ಪೂರ್ವೋತ್ತರಗಳು ಅಥವಾ ದೈಹಿಕ ಅಥವಾ ಮಾನಸಿಕ ಸ್ಥಿತಿ ಮತ್ತು ಅಪರಾಧದ ಕ್ಷುದ್ರ ಸ್ವರೂಪ ಅಥವಾ ಅಪರಾಧ ನಡೆದ ಯಾವುದೇ ಪರಿಶಮನಕಾರಿ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡು, ಅವನಿಗೆ ಯಾವುದೇ ಶಿಕ್ಷೆಯನ್ನು ವಿಧಿಸುವ ಬದಲು ಸೂಕ್ತ ಎಚ್ಚರಿಕೆ ಕೊಟ್ಟ ತರುವಾಯ ಅವನನ್ನು ಬಿಡುಗಡೆ ಮಾಡಬಹುದು.

(4) ಯಾವುದೇ ಅಪೀಲು ವಿಚಾರಣಾ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು, ತನ್ನ ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸುವಾಗ ಈ ಪ್ರಕರಣದ ಮೇರೆಗೆ ಆದೇಶವನ್ನು ಸಹ ಮಾಡಬಹುದು.

(5) ಯಾರೇ ಅಪರಾಧಿಯ ಬಗ್ಗೆ ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಾಗ, ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು, ಅಂಥ ನ್ಯಾಯಾಲಯಕ್ಕೆ ಅಪೀಲು ಹೂಡಲು ಅಧಿಕಾರವಿರುವಾಗ, ಹೂಡಲಾದ ಅಪೀಲಿನ ಮೇಲೆ ಅಥವಾ ಪುನರೀಕ್ಷಣೆಯ ತನ್ನ ಅಧಿಕಾರಗಳನ್ನು ಚಲಾಯಿಸುವಾಗ, ಅಂಥ ಆದೇಶವನ್ನು ತಳ್ಳಿ ಹಾಕಬಹುದು ಮತ್ತು ಅದರ ಬದಲಾಗಿ ಕಾನೂನಿಗನುಸಾರವಾಗಿ ಅಂಥ ಅಪರಾಧಿಗೆ ಶಿಕ್ಷೆಯ ಆದೇಶ ಮಾಡಬಹುದು:

ಪರಂತು, ಅಪರಾಧಿಯೆಂದು ನಿರ್ಣಯಿಸಿದ ನ್ಯಾಯಾಲಯವು, ವಿಧಿಸಬಹುದಾಗಿದ್ದ ದಂಡನೆಗಿಂತ ಹೆಚ್ಚಿನ ದಂಡನೆಯನ್ನು ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು ಈ ಉಪಪ್ರಕರಣದ ಮೇರೆಗೆ ವಿಧಿಸತಕ್ಕದ್ದಲ್ಲ.

(6) 140, 143 ಮತ್ತು 414ನೇ ಪ್ರಕರಣಗಳ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ, ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನೀಡಲಾದ ಜಾಮೀನುದಾರರ ಸಂದರ್ಭದಲ್ಲೂ ಸಹ ಅನ್ವಯವಾಗತಕ್ಕದ್ದು.

(7) (1)ನೇ ಉಪಪ್ರಕರಣದ ಮೇರೆಗೆ ಯಾರೇ ಅಪರಾಧಿಯ ಬಿಡುಗಡೆಗೆ ನಿರ್ದೇಶಿಸುವ ಮುನ್ನ, ಆ ಅಪರಾಧಿಯು ಅಥವಾ ಅವನ ಜಾಮೀನುದಾರನು (ಯಾರಾದರೂ ಇದ್ದರೆ) ನ್ಯಾಯಾಲಯವು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಅಥವಾ ಷರತ್ತುಗಳನ್ನು ಪಾಲಿಸಬೇಕಾದ ಅವಧಿಯಲ್ಲಿ ಅಪರಾಧಿಯು ವಾಸಿಸುವ ಸಂಭವವಿರುವ ಸ್ಥಳದಲ್ಲಿ ನಿಶ್ಚಿತ ನಿವಾಸವನ್ನು ಅಥವಾ ನಿಯತ ವೃತ್ತಿ ನಡೆಸುತ್ತಿರುವನೆಂದು ನ್ಯಾಯಾಲಯವು ಮನದಟ್ಟು ಮಾಡಿಕೊಳ್ಳತಕ್ಕದ್ದು.

(8) ಅಪರಾಧಿಯನ್ನು ಅಪರಾಧಿಯೆಂದು ನಿರ್ಣಯಿಸಿದ ನ್ಯಾಯಾಲಯಕ್ಕೆ ಅಥವಾ ಅಪರಾಧಿಯೊಂದಿಗೆ ಅವನ ಮೂಲ ಅಪರಾಧದ ಬಗ್ಗೆ ವ್ಯವಹರಿಸಬಹುದಾಗಿದ್ದ ನ್ಯಾಯಾಲಯಕ್ಕೆ, ಅಪರಾಧಿಯು ತನ್ನ ಮುಚ್ಚಳಿಕೆಯ ಯಾವುದೇ ಷರತ್ತುಗಳನ್ನು ಪಾಲಿಸಿಲ್ಲವೆಂದು ಮನದಟ್ಟಾದರೆ, ಅದು ಅವನ ದಸ್ತಗಿರಿಗಾಗಿ ವಾರಂಟ್ ಹೊರಡಿಸಬಹುದು.

(9) ಅಂಥ ಯಾವುದೇ ವಾರಂಟಿನ ಮೇಲೆ ದಸ್ತಗಿರಿಯಾದ ಅಪರಾಧಿಯನ್ನು, ಆ ವಾರಂಟನ್ನು ಹೊರಡಿಸಿದ ನ್ಯಾಯಾಲಯದ ಮುಂದೆ ಕೂಡಲೇ ಕರೆತರತಕ್ಕದ್ದು ಮತ್ತು ಅಂಥ ನ್ಯಾಯಾಲಯವು ಅವನನ್ನು ಮೊಕದ್ದಮೆಯು ವಿಚಾರಣೆಯಾಗುವವರೆಗೆ ಅಭಿರಕ್ಷೆಯಲ್ಲಿ ಇರಿಸಬಹುದು ಅಥವಾ ಶಿಕ್ಷೆಯ ಆದೇಶಕ್ಕಾಗಿ ಅವನು ಹಾಜರಾಗಬೇಕೆಂಬ ಷರತ್ತಿನ ಮೇಲೆ ಸಾಕಷ್ಟು ಜಾಮೀನು ಪಡೆದು ಅವನನ್ನು ಬಿಡಬಹುದು ಮತ್ತು ಅಂಥ ನ್ಯಾಯಾಲಯವು ಮೊಕದ್ದಮೆಯನ್ನು ವಿಚಾರಣೆ ಮಾಡಿದ ತರುವಾಯ ಶಿಕ್ಷೆಯ ಆದೇಶ ಮಾಡಬಹುದು.

(10) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (1958 ರ 20) ಅಥವಾ ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2015 (2016ರ 2) ಅಥವಾ ಯುವ ಅಪರಾಧಿಗಳ ಚಿಕಿತ್ಸೆ, ತರಬೇತಿ ಅಥವಾ ಪುನರ್ವಸತಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳನ್ನು ಈ ಪ್ರಕರಣದಲ್ಲಿರುವುದು ಯಾವುದೂ ಬಾಧಿಸತಕ್ಕದ್ದಲ್ಲ.

**402. ಕೆಲವು ಮೊಕದ್ದಮೆಗಳಲ್ಲಿ ದಾಖಲಿಸಬೇಕಾದ ವಿಶೇಷ ಕಾರಣಗಳು.-** ಯಾವುದೇ ಮೊಕದ್ದಮೆಯಲ್ಲಿ ನ್ಯಾಯಾಲಯವು,-

(ಎ) 401ನೇ ಪ್ರಕರಣದ ಮೇರೆಗೆ ಅಥವಾ ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (1958 ರ 20)ರ ಉಪಬಂಧಗಳ ಮೇರೆಗೆ ಆಪಾದಿತನೊಂದಿಗೆ; ಅಥವಾ

(ಬಿ) ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2015 (2016ರ 2) ಅಥವಾ ಯುವ ಅಪರಾಧಿಗಳ ಚಿಕಿತ್ಸೆ, ತರಬೇತಿ ಅಥವಾ ಪುನರ್ವಸತಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಯುವ ಅಪರಾಧಿಯೊಂದಿಗೆ

- ವ್ಯವಹರಿಸಬಹುದಾಗಿದ್ದು, ಆದರೆ ಹಾಗೆ ಮಾಡದಿರುವಾಗ, ಅದು ಹಾಗೆ ಮಾಡದಿರುವುದಕ್ಕೆ ಇರುವ ವಿಶೇಷ ಕಾರಣಗಳನ್ನು ತನ್ನ ತೀರ್ಪಿನಲ್ಲಿ ದಾಖಲಿಸತಕ್ಕದ್ದು.

**403. ನ್ಯಾಯಾಲಯವು ತೀರ್ಪನ್ನು ಬದಲಾಯಿಸಬಾರದು.-** ಈ ಸಂಹಿತೆಯಿಂದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಲಾಗಿದ್ದ ಹೊರತು, ಯಾವುದೇ ನ್ಯಾಯಾಲಯವು, ಅದು ಮೊಕದ್ದಮೆಯನ್ನು ವಿಲೆ ಮಾಡುವ ತನ್ನ ತೀರ್ಪಿಗೆ ಅಥವಾ ಅಂತಿಮ ಆದೇಶಕ್ಕೆ ಸಹಿ ಹಾಕಿರುವಾಗ, ಲಿಪಿಕ ಅಥವಾ ಅಂಕಿಗಳ ತಪ್ಪನ್ನು ತಿದ್ದುವುದರ ಹೊರತು, ಅದನ್ನು ಬದಲಾಯಿಸತಕ್ಕದ್ದಲ್ಲ ಅಥವಾ ಪುನರ್ ಅವಲೋಕಿಸತಕ್ಕದ್ದಲ್ಲ.

**404. ತೀರ್ಪಿನ ಪ್ರತಿಯನ್ನು ಆಪಾದಿತನಿಗೆ ಮತ್ತು ಇತರ ವ್ಯಕ್ತಿಗಳಿಗೆ ನೀಡುವುದು.-** (1) ಆಪಾದಿತನಿಗೆ ಕಾರಾವಾಸದ ಶಿಕ್ಷೆಯನ್ನು ವಿಧಿಸಿರುವಾಗ, ತೀರ್ಪನ್ನು ಉಚ್ಚರಿಸಿದ ಕೂಡಲೇ ತೀರ್ಪಿನ ಪ್ರತಿಯನ್ನು ಅವನಿಗೆ ಉಚಿತವಾಗಿ ನೀಡತಕ್ಕದ್ದು.

(2) ಆಪಾದಿತನ ಅರ್ಜಿಯ ಮೇಲೆ, ತೀರ್ಪಿನ ಪ್ರಮಾಣೀತ ಪ್ರತಿಯನ್ನು ಅಥವಾ ಅವನು ಹಾಗೆ ಇಚ್ಛಿಸಿದರೆ, ಸಾಧ್ಯವಾದರೆ ಆತನ ಭಾಷೆಯಲ್ಲಿ ಅಥವಾ ನ್ಯಾಯಾಲಯದ ಭಾಷೆಯಲ್ಲಿ, ಅದರ ಭಾಷಾಂತರವನ್ನು ವಿಳಂಬವಿಲ್ಲದೆ ಅವನಿಗೆ ಕೊಡತಕ್ಕದ್ದು ಮತ್ತು ಆಪಾದಿತನು ತೀರ್ಪಿನ ಮೇಲೆ ಅಪೀಲು ಹೂಡಬಹುದಾಗಿರುವ ಪ್ರತಿಯೊಂದು ಮೊಕದ್ದಮೆಯಲ್ಲೂ, ಅಂಥ ಪ್ರತಿಯನ್ನು ಉಚಿತವಾಗಿ ನೀಡತಕ್ಕದ್ದು:

ಪರಂತು, ಉಚ್ಚ ನ್ಯಾಯಾಲಯವು ಮರಣದಂಡನೆಯನ್ನು ವಿಧಿಸಿರುವಲ್ಲಿ ಅಥವಾ ಸ್ಥಿರೀಕರಿಸಿರುವಲ್ಲಿ, ತೀರ್ಪಿನ ಪ್ರಮಾಣಿತ ಪ್ರತಿಯನ್ನು ಆಪಾದಿತನಿಗೆ ಉಚಿತವಾಗಿ, ಅವನು ಅದಕ್ಕಾಗಿ ಅರ್ಜಿ ಸಲ್ಲಿಸಿರಲಿ ಅಥವಾ ಸಲ್ಲಿಸದೆ ಇರಲಿ, ಕೂಡಲೇ ನೀಡತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಗಳು, ಆಪಾದಿತನು ಅಪೀಲು ಹೂಡಬಹುದಾದ ತೀರ್ಪಿನ ಸಂಬಂಧದಲ್ಲಿ ಅವು ಅನ್ವಯಿಸುವಂತೆಯೇ, 136ನೇ ಪ್ರಕರಣದ ಮೇರೆಗಿನ ಆದೇಶದ ಸಂಬಂಧದಲ್ಲೂ ಅನ್ವಯವಾಗತಕ್ಕದ್ದು.

(4) ಯಾವುದೇ ನ್ಯಾಯಾಲಯದಿಂದ ಆಪಾದಿತನು ಮರಣದಂಡನೆಗೆ ಗುರಿಯಾದಾಗ ಮತ್ತು ಅಂಥ ತೀರ್ಪಿನ ಮೇಲೆ ಅಪೀಲು ಮಾಡಲು ಅವನಿಗೆ ಅಧಿಕಾರವಿರುವಾಗ, ಆತನು ಅಪೀಲು ಹೂಡಲು ಇಚ್ಛಿಸಿದರೆ, ಅವನು ಅಪೀಲು ಸಲ್ಲಿಸಲು ಇರುವ ಅವಧಿಯನ್ನು ನ್ಯಾಯಾಲಯವು ಅವನಿಗೆ ತಿಳಿಸತಕ್ಕದ್ದು.

(5) (2)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದನ್ನು ಉಳಿದು, ಕ್ರಿಮಿನಲ್ ನ್ಯಾಯಾಲಯವು ನೀಡಿದ ತೀರ್ಪು ಅಥವಾ ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಈ ಬಗ್ಗೆ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ನಿಯಮಿಸಲಾದ ಶುಲ್ಕಗಳನ್ನು ಸಂದಾಯ ಮಾಡಿದ ಮೇಲೆ, ಅಂಥ ತೀರ್ಪಿನ ಅಥವಾ ಆದೇಶದ ಅಥವಾ ಯಾರೇ ಸಾಕ್ಷಿದಾರನ ಹೇಳಿಕೆಯ ಪ್ರತಿಯನ್ನು ಅಥವಾ ದಾಖಲೆಯ ಇತರ ಭಾಗದ ಪ್ರತಿಯನ್ನು ನೀಡತಕ್ಕದ್ದು:

ಪರಂತು, ನ್ಯಾಯಾಲಯವು, ಯಾವುದೇ ವಿಶೇಷ ಕಾರಣಕ್ಕಾಗಿ ಸೂಕ್ತವೆಂದು ಅದು ಭಾವಿಸಿದರೆ, ಅದನ್ನು ಅವನಿಗೆ ಉಚಿತವಾಗಿ ನೀಡಬಹುದು:

ಮತ್ತು ಪರಂತು, ನ್ಯಾಯಾಲಯವು, ಪ್ರಾಸಿಕ್ಯೂಟಿಂಗ್ ಅಧಿಕಾರಿಯು ಈ ಬಗ್ಗೆ ಸಲ್ಲಿಸಿದ ಅರ್ಜಿಯ ಮೇಲೆ, ಅಂಥ ತೀರ್ಪು, ಆದೇಶ, ಸಾಕ್ಷಿದಾರನ ಹೇಳಿಕೆ ಅಥವಾ ದಾಖಲೆಯ ಪ್ರಮಾಣಿತ ಪ್ರತಿಯನ್ನು ಉಚಿತವಾಗಿ ಸರ್ಕಾರಕ್ಕೆ ಒದಗಿಸಬಹುದು.

(6) ಕ್ರಿಮಿನಲ್ ನ್ಯಾಯಾಲಯದ ಯಾವುದೇ ತೀರ್ಪಿನ ಅಥವಾ ಆದೇಶದ ಪ್ರತಿಗಳ ನೀಡಿಕೆಗಾಗಿ, ಆ ತೀರ್ಪಿನಿಂದ ಅಥವಾ ಆದೇಶದಿಂದ ಬಾಧಿತನಾಗಿಲ್ಲದ ಯಾರೇ ವ್ಯಕ್ತಿಗೆ ಉಚ್ಚ ನ್ಯಾಯಾಲಯವು ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಶುಲ್ಕಗಳನ್ನು ಅಂಥ ವ್ಯಕ್ತಿಯು ಸಂದಾಯ ಮಾಡಿದ ಮೇಲೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಉಚ್ಚ ನ್ಯಾಯಾಲಯವು ನಿಯಮಗಳ ಮೂಲಕ ಒದಗಿಸಬಹುದು.

**405. ತೀರ್ಪನ್ನು ಯಾವಾಗ ಭಾಷಾಂತರಿಸುವುದು.-** ಮೂಲ ತೀರ್ಪನ್ನು ವ್ಯವಹರಣೆಗಳ ದಾಖಲೆಯೊಂದಿಗೆ ಸೇರಿಸತಕ್ಕದ್ದು ಮತ್ತು ಮೂಲವನ್ನು ನ್ಯಾಯಾಲಯದ ಭಾಷೆಗಿಂತ ಭಿನ್ನವಾದ ಭಾಷೆಯಲ್ಲಿ ದಾಖಲಿಸಿರುವಾಗ ಮತ್ತು ಮತ್ತೊಬ್ಬ ಪಕ್ಷಕಾರರಲ್ಲಿ ಯಾರೊಬ್ಬರು ಹಾಗೆ ಅಪೇಕ್ಷಿಸಿದರೆ, ನ್ಯಾಯಾಲಯದ ಭಾಷೆಗೆ ಭಾಷಾಂತರಿಸಿದ ಅದರ ಭಾಷಾಂತರವನ್ನು ಅಂಥ ದಾಖಲೆಗೆ ಸೇರಿಸತಕ್ಕದ್ದು.

**406. ಸೆಷನ್ ನ್ಯಾಯಾಲಯವು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ನಿರ್ಣಯದ ಹಾಗೂ ಶಿಕ್ಷೆಯ ಆದೇಶದ ಪ್ರತಿಯನ್ನು ಕಳುಹಿಸುವುದು.-** ಸೆಷನ್ ನ್ಯಾಯಾಲಯವು ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಧಿವಿಚಾರಣೆ ಮಾಡಿದ ಮೊಕದ್ದಮೆಗಳಲ್ಲಿ, ಸಂದರ್ಭಾನುಸಾರ, ಅಂಥ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು, ತನ್ನ ಅಥವಾ ಆತನ ನಿರ್ಣಯ ಮತ್ತು ಶಿಕ್ಷೆಯ ಆದೇಶದ (ಯಾವುದಾದರೂ ಇದ್ದರೆ) ಪ್ರತಿಯನ್ನು, ಯಾರ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಅಧಿವಿಚಾರಣೆಯನ್ನು ನಡೆಸಲಾಯಿತೋ ಆ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು.

## ಅಧ್ಯಾಯ XXX

## ಮರಣದಂಡನೆಗಳನ್ನು ಸ್ಥಿರೀಕರಿಸುವುದಕ್ಕಾಗಿ ಸಲ್ಲಿಸುವುದು

**407. ಸೆಷನ್ ನ್ಯಾಯಾಲಯವು ಮರಣದಂಡನೆಯನ್ನು ಸ್ಥಿರೀಕರಿಸುವುದಕ್ಕಾಗಿ ಸಲ್ಲಿಸುವುದು.-** (1) ಸೆಷನ್ ನ್ಯಾಯಾಲಯವು ಮರಣದಂಡನೆಯನ್ನು ವಿಧಿಸಿದಾಗ, ಉಚ್ಚ ನ್ಯಾಯಾಲಯಕ್ಕೆ ಕೂಡಲೇ ಆ ವ್ಯವಹರಣೆಗಳನ್ನು ಸಲ್ಲಿಸತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು ಸ್ಥಿರೀಕರಿಸಿದ ಹೊರತು, ಆ ಶಿಕ್ಷೆಯ ಆದೇಶವನ್ನು ಕಾರ್ಯಗತಗೊಳಿಸತಕ್ಕದ್ದಲ್ಲ.

(2) ಆ ಶಿಕ್ಷೆಯ ಆದೇಶವನ್ನು ಮಾಡುವ ನ್ಯಾಯಾಲಯವು ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು ವಾರಂಟಿನ ಮೂಲಕ ಜೈಲು ಅಭಿರಕ್ಷೆಗೆ ಒಪ್ಪಿಸತಕ್ಕದ್ದು.

**408. ಮತ್ತಷ್ಟು ವಿಚಾರಣೆಯನ್ನು ಮಾಡಬೇಕೆಂದು ಅಥವಾ ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕೆಂದು ನಿರ್ದೇಶಿಸುವ ಅಧಿಕಾರ.-** (1) ಅಂಥ ವ್ಯವಹರಣೆಗಳನ್ನು ಸಲ್ಲಿಸಿದಾಗ, ಉಚ್ಚ ನ್ಯಾಯಾಲಯವು ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯ ಅಪರಾಧಿತ್ವ ಅಥವಾ ನಿರಪರಾಧಿತ್ವಕ್ಕೆ ಸಂಬಂಧಿಸಿದ ಯಾವುದೇ ಅಂಶದ ಬಗ್ಗೆ ವಿಚಾರಣೆಯನ್ನು ಮಾಡಬೇಕೆಂದು ಅಥವಾ ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕೆಂದು ಭಾವಿಸಿದರೆ, ಅದು ತಾನೇ ಅಂಥ ವಿಚಾರಣೆಯನ್ನು ಮಾಡಬಹುದು ಅಥವಾ ಅಂಥ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು ಅಥವಾ ಅದನ್ನು ಮಾಡುವಂತೆ ಅಥವಾ ತೆಗೆದುಕೊಳ್ಳುವಂತೆ ಸೆಷನ್ ನ್ಯಾಯಾಲಯಕ್ಕೆ ನಿರ್ದೇಶಿಸಬಹುದು.

(2) ಉಚ್ಚ ನ್ಯಾಯಾಲಯವು ಅನ್ಯಥಾ ನಿರ್ದೇಶಿಸಿದ ಹೊರತು, ಅಂಥ ವಿಚಾರಣೆಯನ್ನು ಮಾಡುವಾಗ ಅಥವಾ ಅಂಥ ಸಾಕ್ಷ್ಯವನ್ನು ತೆಗೆದುಕೊಳ್ಳುವಾಗ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯ ಖುದ್ದು ಹಾಜರಾತಿಗೆ ವಿನಾಯಿತಿ ನೀಡಬಹುದು.

(3) ಉಚ್ಚ ನ್ಯಾಯಾಲಯವು ಆ ವಿಚಾರಣೆಯನ್ನು ಮಾಡದಿರುವಾಗ ಅಥವಾ ಸಾಕ್ಷ್ಯವನ್ನು (ಯಾವುದಾದರೂ ಇದ್ದರೆ) ತೆಗೆದುಕೊಳ್ಳದಿರುವಾಗ, ಅಂಥ ವಿಚಾರಣೆ ಅಥವಾ ಸಾಕ್ಷ್ಯದ ಫಲಿತಾಂಶವನ್ನು ಅಂಥ ನ್ಯಾಯಾಲಯಕ್ಕೆ ಪ್ರಮಾಣೀಕರಿಸಿ ಕಳುಹಿಸತಕ್ಕದ್ದು.

**409. ಶಿಕ್ಷೆಯ ಆದೇಶವನ್ನು ಸ್ಥಿರೀಕರಿಸಲು ಅಥವಾ ಅಪರಾಧ ನಿರ್ಣಯವನ್ನು ರದ್ದುಗೊಳಿಸಲು ಉಚ್ಚ ನ್ಯಾಯಾಲಯದ ಅಧಿಕಾರ.-** 407ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಯಾವುದೇ ಮೊಕದ್ದಮೆಯಲ್ಲಿ, ಉಚ್ಚ ನ್ಯಾಯಾಲಯವು,-

(ಎ) ಶಿಕ್ಷೆಯ ಆದೇಶವನ್ನು ಸ್ಥಿರೀಕರಿಸಬಹುದು ಅಥವಾ ಕಾನೂನಿನ ಮೂಲಕ ಸಮರ್ಥಿತವಾದ ಇತರ ಯಾವುದೇ ಶಿಕ್ಷೆಯ ಆದೇಶವನ್ನು ಮಾಡಬಹುದು; ಅಥವಾ

(ಬಿ) ಅಪರಾಧ ನಿರ್ಣಯವನ್ನು ರದ್ದುಗೊಳಿಸಬಹುದು ಮತ್ತು ಸೆಷನ್ ನ್ಯಾಯಾಲಯವು ಅವನನ್ನು ಅಪರಾಧಿಯೆಂದು ನಿರ್ಣಯಿಸಬಹುದಾಗಿದ್ದ ಯಾವುದೇ ಅಪರಾಧಕ್ಕಾಗಿ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಬಹುದು ಅಥವಾ ಅದೇ ಅಥವಾ ತಿದ್ದುಪಡಿಯಾದ ಆರೋಪದ ಮೇಲೆ ಹೊಸ ಅಧಿವಿಚಾರಣೆ ಮಾಡಲು ಆದೇಶಿಸಬಹುದು; ಅಥವಾ

(ಸಿ) ಆಪಾದಿತನನ್ನು ನಿರಪರಾಧಿಯೆಂದು ನಿರ್ಣಯಿಸಬಹುದು:

ಪರಂತು, ಅಪೀಲು ಹೂಡಲು ಇರುವ ಅವಧಿಯು ಮುಕ್ತಾಯವಾಗುವವರೆಗೆ ಅಥವಾ ಅಂಥ ಅವಧಿಯೊಳಗೆ ಅಪೀಲನ್ನು ಸಲ್ಲಿಸಲಾಗಿದ್ದರೆ, ಅಂಥ ಅಪೀಲು ವಿಲೆಯಾಗುವವರೆಗೆ, ಈ ಪ್ರಕರಣದ ಮೇರೆಗೆ ಯಾವುದೇ ಸ್ಥಿರೀಕರಣದ ಆದೇಶವನ್ನು ಮಾಡತಕ್ಕದ್ದಲ್ಲ.

**410. ಸ್ಥಿರೀಕರಣಕ್ಕೆ ಅಥವಾ ಹೊಸ ಶಿಕ್ಷೆಯ ಆದೇಶಕ್ಕೆ ಇಬ್ಬರು ನ್ಯಾಯಾಧೀಶರು ಸಹಿ ಮಾಡುವುದು.-** ಹಾಗೆ ಸಲ್ಲಿಸಲಾದ ಪ್ರತಿಯೊಂದು ಮೊಕದ್ದಮೆಯಲ್ಲಿ, ಉಚ್ಚ ನ್ಯಾಯಾಲಯವು ಮಾಡಿದ ಶಿಕ್ಷೆಯ ಆದೇಶದ ಸ್ಥಿರೀಕರಣ ಅಥವಾ ಯಾವುದೇ ಹೊಸ ಶಿಕ್ಷೆಯ ಆದೇಶ ಅಥವಾ ಆದೇಶವನ್ನು, ಅಂಥ ನ್ಯಾಯಾಲಯವು ಇಬ್ಬರು ಅಥವಾ ಹೆಚ್ಚು ನ್ಯಾಯಾಧೀಶರನ್ನು ಹೊಂದಿರುವಾಗ, ಅವರಲ್ಲಿ ಕನಿಷ್ಠ ಇಬ್ಬರು ಮಾಡತಕ್ಕದ್ದು ಮತ್ತು ಅದಕ್ಕೆ ಸಹಿ ಹಾಕತಕ್ಕದ್ದು.

**411. ಭಿನ್ನಾಭಿಪ್ರಾಯ ಇರುವ ಸಂದರ್ಭದಲ್ಲಿ ಪ್ರಕ್ರಿಯೆ.-** ಅಂಥ ಯಾವುದೇ ಮೊಕದ್ದಮೆಯು ನ್ಯಾಯಪೀಠದ ಮುಂದೆ ವಿಚಾರಣೆಯಾದಾಗ ಮತ್ತು ಅಂಥ ನ್ಯಾಯಾಧೀಶರು ಭಿನ್ನಾಭಿಪ್ರಾಯ ಹೊಂದಿದ ನ್ಯಾಯಾಧೀಶರ ಸಂಖ್ಯೆ ಸಮನಾಗಿದ್ದಾಗ 433ನೇ ಪ್ರಕರಣದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಮೊಕದ್ದಮೆಯನ್ನು ತೀರ್ಮಾನಿಸತಕ್ಕದ್ದು.

**412. ಸ್ಥಿರೀಕರಣಕ್ಕಾಗಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ಮೊಕದ್ದಮೆಗಳ ಬಗ್ಗೆ ಪ್ರಕ್ರಿಯೆ.-** ಮರಣದಂಡನೆಯ ಸ್ಥಿರೀಕರಣಕ್ಕಾಗಿ ಸೆಷನ್ ನ್ಯಾಯಾಲಯವು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಮೊಕದ್ದಮೆಗಳಲ್ಲಿ, ಉಚ್ಚ ನ್ಯಾಯಾಲಯದ ಸಮುಚಿತ ಅಧಿಕಾರಿಯು, ಉಚ್ಚ ನ್ಯಾಯಾಲಯವು ಸ್ಥಿರೀಕರಣದ ಆದೇಶವನ್ನು ಅಥವಾ ಇತರ ಆದೇಶವನ್ನು ಮಾಡಿದ ತರುವಾಯ, ಉಚ್ಚ ನ್ಯಾಯಾಲಯದ ಮೊಹರಿನೊಂದಿಗೆ ಮತ್ತು ತನ್ನ ಅಧಿಕೃತ ಸಹಿಯೊಂದಿಗೆ ದೃಢೀಕರಿಸಿ ಆದೇಶದ ಪ್ರತಿಯನ್ನು ವಿಳಂಬವಿಲ್ಲದೆ ಭೌತಿಕವಾಗಿಯಾಗಲೀ ಅಥವಾ ವಿದ್ಯುನ್ಮಾನ ಮಾಧ್ಯಮದ ಮೂಲಕವಾಗಿಯಾಗಲೀ ಸೆಷನ್ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು.

## ಅಧ್ಯಾಯ XXXI

### ಅಪೀಲುಗಳು

**413. ಅನ್ಯಥಾ ಉಪಬಂಧಿಸಲಾದ ಹೊರತು ಅಪೀಲನ್ನು ಸಲ್ಲಿಸದಿರುವುದು.-** ಈ ಸಂಹಿತೆಯ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಉಪಬಂಧಿಸಿರುವುದನ್ನು ಹೊರತುಪಡಿಸಿ, ಕ್ರಿಮಿನಲ್ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶದ ಮೇಲೆ ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ:

ಪರಂತು, ಆಪಾದಿತನನ್ನು ನಿರಪರಾಧಿ ಅಥವಾ ಕಡಿಮೆ ಪ್ರಮಾಣದ ಅಪರಾಧದ ದೋಷಿ ಎಂದು ನಿರ್ಣಯಿಸಿ ಅಥವಾ ಅಲ್ಪ ಪ್ರಮಾಣದ ಪರಿಹಾರವನ್ನು ಗೊತ್ತುಪಡಿಸಿ, ನ್ಯಾಯಾಲಯವು ಮಾಡಿದ ಯಾವುದೇ ಆದೇಶದ ವಿರುದ್ಧ ಸಂತ್ರಸ್ತನು ಅಪೀಲು ಸಲ್ಲಿಸಲು ಹಕ್ಕು ಹೊಂದಿರತಕ್ಕದ್ದು ಮತ್ತು ಅಂಥ ನ್ಯಾಯಾಲಯದ, ನ್ಯಾಯನಿರ್ಣಯದ ಆದೇಶದ ವಿರುದ್ಧ ಸಾಮಾನ್ಯವಾಗಿ ಯಾವ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದೋ ಆ ನ್ಯಾಯಾಲಯಕ್ಕೆ ಅಂಥ ಅಪೀಲನ್ನು ಸಲ್ಲಿಸಬಹುದು.

**414. ಶಾಂತಿಪಾಲನೆಗಾಗಿ ಅಥವಾ ಸದ್ವರ್ತನೆಗಾಗಿ ಭದ್ರತೆಯನ್ನು ಅಗತ್ಯಪಡಿಸುವ ಅಥವಾ ಜಾಮೀನನ್ನು ಅಂಗೀಕರಿಸಲು ನಿರಾಕರಿಸುವ ಅಥವಾ ಅದನ್ನು ತಿರಸ್ಕರಿಸುವ ಆದೇಶಗಳ ಮೇಲೆ ಅಪೀಲು.-** ಯಾರೇ ವ್ಯಕ್ತಿಯು,-

(i) 136ನೇ ಪ್ರಕರಣದ ಮೇರೆಗೆ ಶಾಂತಿಪಾಲನೆಗಾಗಿ ಅಥವಾ ಸದ್ವರ್ತನೆಗಾಗಿ ಭದ್ರತೆಯನ್ನು ನೀಡಲು ಆದೇಶಿತನಾಗಿದ್ದರೆ; ಅಥವಾ

(ii) 140ನೇ ಪ್ರಕರಣದ ಮೇರೆಗೆ ಜಾಮೀನನ್ನು ಅಂಗೀಕರಿಸಲು ನಿರಾಕರಿಸುವ ಅಥವಾ ಅದನ್ನು ತಿರಸ್ಕರಿಸುವ ಯಾವುದೇ ಆದೇಶದಿಂದ ಬಾಧಿತನಾಗಿದ್ದರೆ

- ಅವನು ಅಂಥ ಆದೇಶದ ವಿರುದ್ಧ ಸೆಷನ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, 141ನೇ ಪ್ರಕರಣದ (2) ಅಥವಾ (4)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಯಾರ ವಿರುದ್ಧದ ವ್ಯವಹರಣೆಗಳು ಸೆಷನ್ಸ್ ನ್ಯಾಯಾಧೀಶರ ಮುಂದೆ ಇರುವುವೋ ಆ ವ್ಯಕ್ತಿಗಳಿಗೆ, ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

**415. ಅಪರಾಧ ನಿರ್ಣಯಗಳ ಮೇಲೆ ಅಪೀಲುಗಳು.-** (1) ಉಚ್ಚ ನ್ಯಾಯಾಲಯವು ತನ್ನ ವಿಶೇಷ ಮೂಲ ಕ್ರಿಮಿನಲ್ ಅಧಿಕಾರವ್ಯಾಪ್ತಿಯಲ್ಲಿ ಮಾಡಿದ ಅಧಿವಿಚಾರಣೆಯಲ್ಲಿ ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಯು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

(2) ಸೆಷನ್ಸ್ ನ್ಯಾಯಾಧೀಶನು ಅಥವಾ ಅಪರ ಸೆಷನ್ಸ್ ನ್ಯಾಯಾಧೀಶನು ಮಾಡಿದ ಅಧಿವಿಚಾರಣೆಯಲ್ಲಿ ಅಥವಾ ಇತರ ಯಾವುದೇ ನ್ಯಾಯಾಲಯವು ಮಾಡಿದ ಅಧಿವಿಚಾರಣೆಯಲ್ಲಿ ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಗೆ ಏಳು ವರ್ಷಗಳಿಗೆ ಮೀರಿದ ಅವಧಿಯ ಕಾರಾವಾಸದ ಶಿಕ್ಷೆಯನ್ನು ಅವನ ವಿರುದ್ಧ ಅಥವಾ ಅದೇ ಅಧಿವಿಚಾರಣೆಯಲ್ಲಿ ಅಪರಾಧಿಯೆಂದು ನಿರ್ಣೀತನಾದ ಯಾರೇ ಇತರ ವ್ಯಕ್ತಿಯ ವಿರುದ್ಧ ವಿಧಿಸಿದರೆ, ಆ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

(3) (2)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು,-

(ಎ) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಅಥವಾ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು ನಡೆಸಿದ ಅಧಿವಿಚಾರಣೆಯಲ್ಲಿ ಅಪರಾಧಿಯೆಂದು ನಿರ್ಣೀತನಾದ; ಅಥವಾ

(ಬಿ) 364ನೇ ಪ್ರಕರಣದ ಮೇರೆಗೆ ಶಿಕ್ಷೆಯ ಆದೇಶವನ್ನು ಮಾಡಲಾಗಿರುವ; ಅಥವಾ

(ಸಿ) ಯಾರೇ ಮ್ಯಾಜಿಸ್ಟ್ರೇಟನು 401ನೇ ಪ್ರಕರಣದ ಮೇರೆಗೆ ಯಾರ ಸಂಬಂಧದಲ್ಲಿ ಆದೇಶವನ್ನು ಮಾಡಿರುವನೋ ಅಥವಾ ಶಿಕ್ಷೆಯ ಆದೇಶವನ್ನು ಮಾಡಿರುವನೋ

- ಆ ಯಾರೇ ವ್ಯಕ್ತಿಯು ಸೆಷನ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

(4) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 70ನೇ ಪ್ರಕರಣ ಅಥವಾ 71ನೇ ಪ್ರಕರಣದ ಮೇರೆಗೆ ವಿಧಿಸಿದ ಶಿಕ್ಷೆಯ ವಿರುದ್ಧ ಅಪೀಲನ್ನು ಸಲ್ಲಿಸಿರುವಾಗ, ಅಂಥ ಅಪೀಲನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗಾಗಿ ಅಪೀಲನ್ನು ವಿಲೆ ಮಾಡತಕ್ಕದ್ದು.

**416. ಆಪಾದಿತನು ತಪ್ಪೊಪ್ಪಿಕೊಂಡಿರುವ ಕೆಲವು ಮೊಕದ್ದಮೆಗಳಲ್ಲಿ ಅಪೀಲಿಗೆ ಅವಕಾಶವಿರುವುದಿಲ್ಲ.-** 415ನೇ ಪ್ರಕರಣದಲ್ಲಿ ಏನೇ ಇದ್ದರೂ, ಆಪಾದಿತನು ತಪ್ಪೊಪ್ಪಿಕೊಂಡಾಗ ಮತ್ತು ಅಂಥ ತಪ್ಪೊಪ್ಪಿಗೆಯ ಮೇಲೆ ಅಪರಾಧಿಯೆಂದು ನಿರ್ಣೀತನಾದಾಗ,-

(i) ಅಪರಾಧಿಯೆಂದು ಉಚ್ಚ ನ್ಯಾಯಾಲಯವು ನಿರ್ಣಯಿಸಿದ್ದರೆ; ಅಥವಾ

(ii) ಸೆಷನ್ ನ್ಯಾಯಾಲಯ ಅಥವಾ ಪ್ರಥಮ ದರ್ಜೆ ಅಥವಾ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು, ಅಪರಾಧಿಯೆಂದು ನಿರ್ಣಯಿಸಿದ್ದರೆ, ಶಿಕ್ಷೆಯ ಆದೇಶದ ವ್ಯಾಪ್ತಿ ಅಥವಾ ಕಾನೂನುಸಮ್ಮತತೆಯ ಬಗ್ಗೆ ಹೊರತು

- ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

**417. ಸಣ್ಣಪುಟ್ಟ ಮೊಕದ್ದಮೆಗಳಲ್ಲಿ ಯಾವುದೇ ಅಪೀಲಿಗೆ ಅವಕಾಶವಿರುವುದಿಲ್ಲ.-** 415ನೇ ಪ್ರಕರಣದಲ್ಲಿ ಏನೇ ಇದ್ದರೂ, ಈ ಕೆಳಕಂಡ ಯಾವುದೇ ಮೊಕದ್ದಮೆಗಳಲ್ಲಿ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯು ಯಾವುದೇ ಅಪೀಲು ಸಲ್ಲಿಸತಕ್ಕದ್ದಲ್ಲ, ಎಂದರೆ:-

(ಎ) ಮೂರು ತಿಂಗಳಿಗೆ ಮೀರದ ಅವಧಿಯ ಕಾರಾವಾಸದ ಶಿಕ್ಷೆಯನ್ನು ಮಾತ್ರ ಅಥವಾ ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯನ್ನು ಮಾತ್ರ ಅಥವಾ ಅಂಥ ಕಾರಾವಾಸ ಮತ್ತು ಜುಲ್ಮಾನೆಗಳೆರಡನ್ನೂ ಉಚ್ಚ ನ್ಯಾಯಾಲಯವು ವಿಧಿಸಿರುವಾಗ;

(ಬಿ) ಮೂರು ತಿಂಗಳಿಗೆ ಮೀರದ ಅವಧಿಯ ಕಾರಾವಾಸದ ಶಿಕ್ಷೆಯನ್ನು ಮಾತ್ರ ಅಥವಾ ಎರಡು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯನ್ನು ಮಾತ್ರ ಅಥವಾ ಅಂಥ ಕಾರಾವಾಸ ಮತ್ತು ಜುಲ್ಮಾನೆಗಳೆರಡನ್ನೂ ಸೆಷನ್ ನ್ಯಾಯಾಲಯವು ವಿಧಿಸಿರುವಾಗ;

(ಸಿ) ಒಂದು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯ ಶಿಕ್ಷೆಯನ್ನು ಮಾತ್ರ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ವಿಧಿಸಿರುವಾಗ; ಅಥವಾ

(ಡಿ) ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಲಾದ ಮೊಕದ್ದಮೆಯಲ್ಲಿ, 283ನೇ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸಲು ಅಧಿಕಾರ ನೀಡಲಾದ ಮ್ಯಾಜಿಸ್ಟ್ರೇಟನು ಎರಡು ನೂರು ರೂಪಾಯಿಗಳಿಗೆ ಮೀರದ ಶಿಕ್ಷೆಯನ್ನು ಮಾತ್ರ ವಿಧಿಸಿರುವಾಗ:

ಪರಂತು, ಇತರ ಯಾವುದೇ ದಂಡನೆಯು ಅದರೊಂದಿಗೆ ಸೇರಿದ್ದರೆ ಅಂಥ ಯಾವುದೇ ಶಿಕ್ಷೆಯ ವಿರುದ್ಧ ಅಪೀಲು ಸಲ್ಲಿಸಬಹುದು, ಆದರೆ ಅಂಥ ಶಿಕ್ಷೆಯು,-

(i) ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯು ಶಾಂತಿ ಪಾಲನೆಗಾಗಿ ಭದ್ರತೆಯನ್ನು ಒದಗಿಸಲು ಆದೇಶಿತನಾಗಿರುವನೆಂಬ; ಅಥವಾ

(ii)ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ ಕಾರಾವಾಸವನ್ನು ಅನುಭವಿಸಬೇಕೆಂಬ ನಿರ್ದೇಶನವು ಶಿಕ್ಷೆಯ ಆದೇಶದಲ್ಲಿ ಸೇರಿದೆಯೆಂಬ; ಅಥವಾ

(iii) ವಿಧಿಸಲಾದ ಜುಲ್ಮಾನೆಯ ಒಟ್ಟು ಮೊಬಲಗು, ಮೊಕದ್ದಮೆಯ ಬಗ್ಗೆ ಈ ಹಿಂದೆ ನಿರ್ದಿಷ್ಟಪಡಿಸಲಾದ ಮೊಬಲಗನ್ನು ಮೀರದಿದ್ದರೆ, ಮೊಕದ್ದಮೆಯ ಬಗ್ಗೆ ಒಂದಕ್ಕಿಂತ ಹೆಚ್ಚು ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಲಾಗಿದೆಯೆಂಬ

- ಕಾರಣ ಮಾತ್ರದಿಂದಲೇ ಅಪೀಲು ಸಲ್ಲಿಸತಕ್ಕದ್ದಲ್ಲ.

**418. ರಾಜ್ಯ ಸರ್ಕಾರದಿಂದ ಶಿಕ್ಷೆಯ ವಿರುದ್ಧ ಅಪೀಲು.-** (1) (2)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಉಚ್ಚ ನ್ಯಾಯಾಲಯವಲ್ಲದ ಯಾವುದೇ ನ್ಯಾಯಾಲಯವು ನಡೆಸಿದ ಅಧಿವಿಚಾರಣೆಯಲ್ಲಿ ಅಪರಾಧ ನಿರ್ಣಯವಾದ ಯಾವುದೇ ಮೊಕದ್ದಮೆಯಲ್ಲಿ ರಾಜ್ಯ ಸರ್ಕಾರವು,-

(ಎ) ಆ ಶಿಕ್ಷೆಯ ಆದೇಶವನ್ನು ಮ್ಯಾಜಿಸ್ಟ್ರೇಟನು ಮಾಡಿದ್ದರೆ, ಸೆಷನ್ ನ್ಯಾಯಾಲಯಕ್ಕೆ; ಮತ್ತು

(ಬಿ) ಆ ಶಿಕ್ಷೆಯ ಆದೇಶವನ್ನು ಇತರ ಯಾವುದೇ ನ್ಯಾಯಾಲಯವು ಮಾಡಿದ್ದರೆ, ಉಚ್ಚ ನ್ಯಾಯಾಲಯಕ್ಕೆ

- ಶಿಕ್ಷೆಯು ಸಾಕಾಗದು ಎಂಬ ಕಾರಣದ ಮೇಲೆ ಆ ಶಿಕ್ಷೆಯ ಆದೇಶದ ವಿರುದ್ಧ ಅಪೀಲು ಸಲ್ಲಿಸುವಂತೆ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ನಿರ್ದೇಶಿಸಬಹುದು.

(2) ಈ ಸಂಹಿತೆಯ ಹೊರತು ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ಅಪರಾಧದ ತನಿಖೆ ಮಾಡಲು ಯಾವ ಏಜೆನ್ಸಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಏಜೆನ್ಸಿಯು ಅಪರಾಧದ ತನಿಖೆ ಮಾಡಿರುವ ಮೊಕದ್ದಮೆಯಲ್ಲಿ ಅಂಥ ಅಪರಾಧ ನಿರ್ಣಯವಾಗಿದ್ದರೆ, ಕೇಂದ್ರ ಸರ್ಕಾರವು,-

(ಎ) ಆ ಶಿಕ್ಷೆಯ ಆದೇಶವನ್ನು ಮ್ಯಾಜಿಸ್ಟ್ರೇಟನು ಮಾಡಿದ್ದರೆ, ಸೆಷನ್ ನ್ಯಾಯಾಲಯಕ್ಕೆ; ಮತ್ತು

(ಬಿ) ಆ ಶಿಕ್ಷೆಯ ಆದೇಶವನ್ನು ಇತರ ಯಾವುದೇ ನ್ಯಾಯಾಲಯವು ಮಾಡಿದ್ದರೆ, ಉಚ್ಚ ನ್ಯಾಯಾಲಯಕ್ಕೆ

- ಶಿಕ್ಷೆಯು ಸಾಕಾಗದು ಎಂಬ ಕಾರಣದ ಮೇಲೆ ಆ ಶಿಕ್ಷೆಯ ಆದೇಶದ ವಿರುದ್ಧ ಅಪೀಲು ಸಲ್ಲಿಸುವಂತೆ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ಸಹ ನಿರ್ದೇಶಿಸಬಹುದು.

(3) ಶಿಕ್ಷೆಯು ಸಾಕಾಗದು ಎಂಬ ಕಾರಣದ ಮೇಲೆ ಶಿಕ್ಷೆಯ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಿರುವಲ್ಲಿ, ಸಂದರ್ಭಾನುಸಾರ ಸೆಷನ್ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಶಿಕ್ಷೆಯನ್ನು ಹೆಚ್ಚಿಸುವುದರ ವಿರುದ್ಧ ಕಾರಣ ತೋರಿಸಲು ಯುಕ್ತವಾದ ಅವಕಾಶವನ್ನು ಆಪಾದಿತನಿಗೆ ಕೊಟ್ಟ ಮೇಲಲ್ಲದೆ, ಅದು ಹಾಗೆ ಹೆಚ್ಚಿಸತಕ್ಕದ್ದಲ್ಲ ಮತ್ತು ಕಾರಣವನ್ನು ತೋರಿಸುವಾಗ, ಆಪಾದಿತನು ತನ್ನನ್ನು ನಿರಪರಾಧಿಯೆಂದು ನಿರ್ಣಯಿಸಬೇಕೆಂದು ಅಥವಾ ಶಿಕ್ಷೆಯನ್ನು ಕಡಿಮೆ ಮಾಡಬೇಕೆಂದು ಕೋರಬಹುದು.

(4) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 70ನೇ ಪ್ರಕರಣ ಅಥವಾ 71ನೇ ಪ್ರಕರಣದ ಮೇರೆಗೆ ವಿಧಿಸಿದ ಶಿಕ್ಷೆಯ ವಿರುದ್ಧ ಅಪೀಲನ್ನು ಸಲ್ಲಿಸಿರುವಾಗ, ಅಂಥ ಅಪೀಲನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗಾಗಿ ಅಪೀಲನ್ನು ವಿಲೆ ಮಾಡತಕ್ಕದ್ದು.

**419. ಖುಲಾಸೆಗೊಳಿಸಿದ ಮೊಕದ್ದಮೆಯಲ್ಲಿ ಅಪೀಲು.-** (1) (2)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು ಮತ್ತು (3)ನೇ ಮತ್ತು (5)ನೇ ಉಪಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು,-

(ಎ) ಜಿಲ್ಲಾ ಮ್ಯಾಜಿಸ್ಟ್ರೇಟನು, ಯಾವುದೇ ಮೊಕದ್ದಮೆಯಲ್ಲಿ, ಸಂಜ್ಞಾನಕ್ಕೆ ತೆಗೆದುಕೊಳ್ಳಬೇಕಾದ ಮತ್ತು ಜಾಮೀನೀಯವಲ್ಲದ ಅಪರಾಧದ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟನು ಮಾಡಿದ ಖುಲಾಸೆ ಆದೇಶದ ವಿರುದ್ಧ ಸೆಷನ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವಂತೆ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ನಿರ್ದೇಶಿಸಬಹುದು;

(ಬಿ) ರಾಜ್ಯ ಸರ್ಕಾರವು ಯಾವುದೇ ಸಂದರ್ಭದಲ್ಲಿ, (ಎ) ಖಂಡದ ಮೇರೆಗಿನ ಆದೇಶವಾಗಿರದ ಅಥವಾ ಪುನರೀಕ್ಷಣೆಯಲ್ಲಿ ಸೆಷನ್ ನ್ಯಾಯಾಲಯವು ಮಾಡಿದ ಖುಲಾಸೆ ಆದೇಶವಾಗಿರುವ, ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಯಾವುದೇ ನ್ಯಾಯಾಲಯವು ಮಾಡಿದ ಖುಲಾಸೆಯ ಮೂಲ ಅಥವಾ ಅಪೀಲು ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವಂತೆ ಪಬ್ಲಿಕ್ ಪ್ರಾಸಿಕ್ಯೂಟರನನ್ನು ನಿರ್ದೇಶಿಸಬಹುದು.

(2) ಈ ಸಂಹಿತೆಯ ಹೊರತು ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ಅಪರಾಧದ ತನಿಖೆ ಮಾಡಲು ಯಾವ ಏಜೆನ್ಸಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಏಜೆನ್ಸಿಯು, ಅಪರಾಧದ ತನಿಖೆ ಮಾಡಿರುವ ಯಾವುದೇ ಮೊಕದ್ದಮೆಯಲ್ಲಿ ಖುಲಾಸೆಯ ಆದೇಶವಾಗಿದ್ದರೆ, ಆ ಖುಲಾಸೆಯ ಆದೇಶದ ಬಗ್ಗೆ (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸರ್ಕಾರವು,-

(ಎ) ಸಂಜ್ಞೇಯ ಮತ್ತು ಜಾಮೀನೀಯವಲ್ಲದ ಅಪರಾಧಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟ್ರೇಟನು ಮಾಡಿದ ಖುಲಾಸೆ ಆದೇಶದ ವಿರುದ್ಧ ಸೆಷನ್ ನ್ಯಾಯಾಲಯಕ್ಕೆ;

(ಬಿ) ಖಂಡ (ಎ)ಯ ಮೇರೆಗಿನ ಆದೇಶವಾಗಿರದ ಅಥವಾ ಪುನರೀಕ್ಷಣೆಯಲ್ಲಿ ಸೆಷನ್ ನ್ಯಾಯಾಲಯವು ಮಾಡಿದ ಖುಲಾಸೆ ಆದೇಶವಾಗಿರುವ, ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಯಾವುದೇ ನ್ಯಾಯಾಲಯವು ಮಾಡಿದ ಖುಲಾಸೆಯ ಮೂಲ ಅಥವಾ ಅಪೀಲು ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ

- ಅಪೀಲನ್ನು ಸಲ್ಲಿಸುವಂತೆ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ನಿರ್ದೇಶಿಸಬಹುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸುವ ಯಾವುದೇ ಅಪೀಲನ್ನು ಉಚ್ಚ ನ್ಯಾಯಾಲಯದ ಅನುಮತಿ ಪಡೆಯದ ಹೊರತು ಪುರಸ್ಕರಿಸತಕ್ಕದ್ದಲ್ಲ.

(4) ದೂರುದಾರನ ಮೇಲೆ ಹೂಡಲಾದ ಯಾವುದೇ ಮೊಕದ್ದಮೆಯಲ್ಲಿ ಅಂಥ ಖುಲಾಸೆಯ ಆದೇಶವನ್ನು ಮಾಡಿದ್ದರೆ ಮತ್ತು ಈ ಬಗ್ಗೆ ದೂರುದಾರನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ, ಅದು ನಿರಪರಾಧಿಯ ನಿರ್ಣಯದ ಮೇಲೆ ಅಪೀಲು ಸಲ್ಲಿಸಲು ವಿಶೇಷ ಅನುಮತಿ ನೀಡಿದರೆ, ದೂರುದಾರನು ಉಚ್ಚ ನ್ಯಾಯಾಲಯಕ್ಕೆ ಅಂಥ ಅಪೀಲು ಸಲ್ಲಿಸಬಹುದು.

(5) ದೂರುದಾರನು ಲೋಕ ನೌಕರನಾಗಿರುವಲ್ಲಿ, ಖುಲಾಸೆ ಆದೇಶ ನೀಡಿದ ಮೇಲೆ ಆರು ತಿಂಗಳ ಅವಧಿಯು ಮುಕ್ತಾಯವಾದ ತರುವಾಯ ಮತ್ತು ಇತರ ಯಾವುದೇ ಸಂದರ್ಭದಲ್ಲಿ ಅರವತ್ತು ದಿನಗಳು ಮುಕ್ತಾಯವಾದ ತರುವಾಯ ಖುಲಾಸೆ ಆದೇಶದ ಮೇಲೆ ಅಪೀಲು ಸಲ್ಲಿಸಲು ವಿಶೇಷ ಅನುಮತಿ ನೀಡುವುದಕ್ಕಾಗಿ (4)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಪುರಸ್ಕರಿಸತಕ್ಕದ್ದಲ್ಲ.

(6) ಯಾವುದೇ ಮೊಕದ್ದಮೆಯಲ್ಲಿ, ಖುಲಾಸೆ ಆದೇಶದ ಮೇಲೆ ಅಪೀಲು ಸಲ್ಲಿಸಲು ವಿಶೇಷ ಅನುಮತಿ ನೀಡುವುದಕ್ಕಾಗಿ (4)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯು ತಿರಸ್ಕೃತವಾದರೆ ಆ ಖುಲಾಸೆ ಆದೇಶದ ಮೇಲೆ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ.

**420. ಉಚ್ಚ ನ್ಯಾಯಾಲಯವು ಕೆಲವು ಮೊಕದ್ದಮೆಗಳಲ್ಲಿ ಮಾಡಿದ ಅಪರಾಧ ನಿರ್ಣಯದ ವಿರುದ್ಧ ಅಪೀಲು.-** ಆಪಾದಿತ ವ್ಯಕ್ತಿಯ ಖುಲಾಸೆ ಆದೇಶವನ್ನು ಅಪೀಲಿನ ಮೇಲೆ, ಉಚ್ಚ ನ್ಯಾಯಾಲಯವು ವಿಪರ್ಯಯಗೊಳಿಸಿದರೆ ಮತ್ತು ಅವನಿಗೆ ಮರಣದಂಡನೆಯನ್ನು ಅಥವಾ ಆಜೀವ ಕಾರಾವಾಸವನ್ನು ಅಥವಾ ಹತ್ತು ವರ್ಷಗಳ ಅಥವಾ ಅದಕ್ಕೆ ಮೀರಿದ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಿದರೆ, ಅವನು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**421. ಕೆಲವು ಮೊಕದ್ದಮೆಗಳಲ್ಲಿ ಅಪೀಲು ಸಲ್ಲಿಸಲು ವಿಶೇಷ ಹಕ್ಕು.-** ಈ ಅಧ್ಯಾಯದಲ್ಲಿ ಏನೇ ಇದ್ದರೂ, ಅಧಿವಿಚಾರಣೆಯಲ್ಲಿ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳನ್ನು ಅಪರಾಧಿಗಳೆಂದು ನಿರ್ಣಯಿಸಿರುವಾಗ ಮತ್ತು ಅಪೀಲು ಸಲ್ಲಿಸಬಹುದಾದ ತೀರ್ಪು ಅಥವಾ ಆದೇಶವನ್ನು ಅಂಥ ವ್ಯಕ್ತಿಗಳಲ್ಲಿ ಯಾರ ಸಂಬಂಧದಲ್ಲಾದರೂ ಮಾಡಿರುವಾಗ ಅಂಥ

ಅಧಿವಿಚಾರಣೆಯಲ್ಲಿ ಅಪರಾಧಿಗಳೆಂದು ನಿರ್ಣೀತರಾದ ಎಲ್ಲ ಅಥವಾ ಯಾರೇ ವ್ಯಕ್ತಿಯು ಅಪೀಲು ಸಲ್ಲಿಸುವ ಹಕ್ಕು ಹೊಂದಿರತಕ್ಕದ್ದು.

**422. ಸೆಷನ್ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅಪೀಲಿನ ವಿಚಾರಣೆಯ ರೀತಿ.-** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಸೆಷನ್ ನ್ಯಾಯಾಲಯ ಅಥವಾ ಸೆಷನ್ಸ್ ನ್ಯಾಯಾಧೀಶನಿಗೆ ಸಲ್ಲಿಸಿದ ಅಪೀಲನ್ನು ಸೆಷನ್ಸ್ ನ್ಯಾಯಾಧೀಶನು ಅಥವಾ ಅಪರ ಸೆಷನ್ಸ್ ನ್ಯಾಯಾಧೀಶನು ವಿಚಾರಣೆ ಮಾಡತಕ್ಕದ್ದು:

ಪರಂತು, ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನು ನಡೆಸಿದ ಅಧಿವಿಚಾರಣೆಯಲ್ಲಿ ಅಪರಾಧ ನಿರ್ಣಯ ಮಾಡಿರುವುದರ ವಿರುದ್ಧವಾಗಿ ಸಲ್ಲಿಸಿದ ಅಪೀಲನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ವಿಚಾರಣೆ ಮಾಡಬಹುದು ಮತ್ತು ವಿಲೆ ಮಾಡಬಹುದು.

(2) ಅಪರ ಸೆಷನ್ಸ್ ನ್ಯಾಯಾಧೀಶನು ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು, ವಿಭಾಗದ ಸೆಷನ್ಸ್ ನ್ಯಾಯಾಧೀಶನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅವರಿಗೆ ವಹಿಸಿಕೊಡುವಂಥ ಅಥವಾ ಉಚ್ಚ ನ್ಯಾಯಾಲಯವು ವಿಶೇಷ ಆದೇಶದ ಮೂಲಕ ವಿಚಾರಣೆ ನಡೆಸಲು ಅವರಿಗೆ ನಿರ್ದೇಶಿಸುವಂಥ ಅಪೀಲುಗಳನ್ನು ಮಾತ್ರ ವಿಚಾರಣೆ ಮಾಡತಕ್ಕದ್ದು.

**423. ಅಪೀಲು ಅರ್ಜಿ.-** ಅಪೀಲುದಾರನು ಅಥವಾ ಅವನ ನ್ಯಾಯವಾದಿಯು ಸಲ್ಲಿಸುವ ಪ್ರತಿಯೊಂದು ಅಪೀಲು ಲಿಖಿತ ಅರ್ಜಿ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ಪ್ರತಿಯೊಂದು ಅರ್ಜಿಯು (ಅದನ್ನು ಯಾವ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆಯೋ ಆ ನ್ಯಾಯಾಲಯವು ಅನ್ಯಥಾ ನಿರ್ದೇಶಿಸಿದ ಹೊರತು) ಯಾವುದರ ವಿರುದ್ಧ ಅಪೀಲು ಸಲ್ಲಿಸಲಾಗುತ್ತಿದೆಯೋ ಆ ತೀರ್ಪು ಅಥವಾ ಆದೇಶದ ಪ್ರತಿಯೊಂದಿಗೆ ಲಗತ್ತಾಗಿರತಕ್ಕದ್ದು.

**424. ಅಪೀಲುದಾರನು ಜೈಲಿನಲ್ಲಿರುವಾಗ ಪ್ರಕ್ರಿಯೆ.-** ಅಪೀಲುದಾರನು ಜೈಲಿನಲ್ಲಿದ್ದರೆ, ತನ್ನ ಅಪೀಲಿನ ಅರ್ಜಿಯನ್ನು ಮತ್ತು ಅದರ ಜೊತೆಗಿರುವ ಪ್ರತಿಗಳನ್ನು ಅವನು ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಸಲ್ಲಿಸಬಹುದು ಮತ್ತು ನಂತರ ಆ ಅಧಿಕಾರಿಯು, ಅಂಥ ಅರ್ಜಿಯನ್ನು ಹಾಗೂ ಪ್ರತಿಗಳನ್ನು ಯುಕ್ತ ಅಪೀಲು ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು.

**425. ಅಪೀಲನ್ನು ಕೂಡಲೇ ವಜಾ ಮಾಡುವುದು.-** (1) 423ನೇ ಪ್ರಕರಣ ಅಥವಾ 424ನೇ ಪ್ರಕರಣದ ಮೇರೆಗೆ ಸ್ವೀಕರಿಸಿದ ಅಪೀಲಿನ ಅರ್ಜಿಯನ್ನು ಮತ್ತು ತೀರ್ಪಿನ ಪ್ರತಿಯನ್ನು ಪರಿಶೀಲಿಸಿದ ಮೇಲೆ ಮಧ್ಯಪ್ರವೇಶಿಸಲು ಸಾಕಷ್ಟು ಕಾರಣವಿಲ್ಲವೆಂದು ಅಪೀಲು ನ್ಯಾಯಾಲಯವು ಪರಿಗಣಿಸಿದರೆ, ಅದು ಅಪೀಲನ್ನು ಕೂಡಲೇ ವಜಾ ಮಾಡಬಹುದು:

ಪರಂತು,-

(ಎ) ಅಪೀಲುದಾರನಿಗೆ ಅಥವಾ ಅವನ ನ್ಯಾಯವಾದಿಗೆ ಅದನ್ನು ಪುಷ್ಟೀಕರಿಸುವಂಥ ಹೇಳಿಕೆಯನ್ನು ನೀಡಲು ಯುಕ್ತ ಅವಕಾಶ ನೀಡಿದ ಹೊರತು, 423ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲನ್ನು ವಜಾ ಮಾಡತಕ್ಕದ್ದಲ್ಲ;

(ಬಿ) ಅಪೀಲುದಾರನಿಗೆ ಅದನ್ನು ಪುಷ್ಟೀಕರಿಸುವಂಥ ಹೇಳಿಕೆಯನ್ನು ನೀಡಲು ಯುಕ್ತವಾದ ಅವಕಾಶ ನೀಡಿದ ಹೊರತು, ಅಪೀಲು ಕ್ಷುಲ್ಲಕವಾದುದೆಂದು ಅಥವಾ ಅಭಿರಕ್ಷೆಯಲ್ಲಿರುವ ಆಪಾದಿತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವುದು ಮೊಕದ್ದಮೆಯ ಸನ್ನಿವೇಶಗಳಿಗೆ ಅಸಮಂಜಸವಾದಂಥ ಅನಾನುಕೂಲತೆಯನ್ನುಂಟು ಮಾಡುತ್ತದೆಂದು ಅಪೀಲು ನ್ಯಾಯಾಲಯವು ಪರಿಗಣಿಸಿದ ಹೊರತು, 424ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಯಾವುದೇ ಅಪೀಲನ್ನು ವಜಾ ಮಾಡತಕ್ಕದ್ದಲ್ಲ;

(ಸಿ) ಅಪೀಲನ್ನು ಸಲ್ಲಿಸುವುದಕ್ಕೆ ಅನುಮತಿಸಲಾದ ಅವಧಿಯು ಮುಕ್ತಾಯವಾಗುವವರೆಗೆ, 424ನೇ ಪ್ರಕರಣದ ಮೇರೆಗೆ ಸಲ್ಲಿಸಲಾದಂಥ ಅಪೀಲನ್ನು ಕೂಡಲೇ ವಜಾ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಅಪೀಲನ್ನು ವಜಾ ಮಾಡುವ ಮುನ್ನ, ನ್ಯಾಯಾಲಯವು ಮೊಕದ್ದಮೆಯ ದಾಖಲೆಯನ್ನು ತರಿಸಿಕೊಳ್ಳಬಹುದು.

(3) ಈ ಪ್ರಕರಣದ ಮೇರೆಗೆ ಅಪೀಲನ್ನು ವಜಾ ಮಾಡುವ ಅಪೀಲು ನ್ಯಾಯಾಲಯವು ಸೆಷನ್ ನ್ಯಾಯಾಲಯವಾಗಿರುವಲ್ಲಿ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯವಾಗಿರುವಲ್ಲಿ, ಅದು ಹಾಗೆ ಮಾಡಲು ತನಗಿರುವ ಕಾರಣಗಳನ್ನು ದಾಖಲಿಸತಕ್ಕದ್ದು.

(4) 424ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲನ್ನು ಈ ಪ್ರಕರಣದ ಮೇರೆಗೆ ಕೂಡಲೇ ವಜಾ ಮಾಡಿರುವಲ್ಲಿ ಮತ್ತು ಅದೇ ಅಪೀಲುದಾರನ ಪರವಾಗಿ 423ನೇ ಪ್ರಕರಣದ ಮೇರೆಗೆ ಯುಕ್ತಬದ್ಧವಾಗಿ ಸಲ್ಲಿಸಲಾದ ಅಪೀಲಿನ ಅರ್ಜಿಯನ್ನು ತಾನು ಪರಿಗಣಿಸಿಲ್ಲವೆಂದು ಅಪೀಲು ನ್ಯಾಯಾಲಯಕ್ಕೆ ಕಂಡುಬಂದರೆ, ಆ ನ್ಯಾಯಾಲಯವು, 434ನೇ ಪ್ರಕರಣದಲ್ಲಿ ಏನೇ ಇದ್ದರೂ, ನ್ಯಾಯೋದ್ದೇಶಗಳಿಗಾಗಿ ಹಾಗೆ ಮಾಡುವುದು ಅವಶ್ಯಕವೆಂದು ಅದಕ್ಕೆ ಮನದಟ್ಟಾದರೆ, ಕಾನೂನಿಗನುಸಾರವಾಗಿ ಅಂಥ ಅಪೀಲನ್ನು ವಿಚಾರಣೆ ಮಾಡಬಹುದು ಮತ್ತು ವಿಲೆ ಮಾಡಬಹುದು.

**426. ಕೂಡಲೇ ವಜಾ ಮಾಡಿಲ್ಲದ ಅಪೀಲುಗಳ ವಿಚಾರಣೆಗೆ ಪ್ರಕ್ರಿಯೆ.-** (1) ಅಪೀಲು ನ್ಯಾಯಾಲಯವು ಅಪೀಲನ್ನು ಕೂಡಲೇ ವಜಾ ಮಾಡದಿದ್ದರೆ, ಅದು ಅಂಥ ಅಪೀಲನ್ನು ವಿಚಾರಣೆ ಮಾಡುವ ಕಾಲ ಹಾಗೂ ಸ್ಥಳದ ಬಗ್ಗೆ ನೋಟೀಸನ್ನು,-

(i) ಅಪೀಲುದಾರನಿಗೆ ಅಥವಾ ಅವನ ನ್ಯಾಯವಾದಿಗೆ;

(ii) ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಬಹುದಾದಂಥ ಅಧಿಕಾರಿಗೆ;

(iii) ದೂರುದಾರನ ಮೇಲೆ ಹೂಡಲಾದ ಮೊಕದ್ದಮೆಯಲ್ಲಿ ಆದ ಅಪರಾಧ ನಿರ್ಣಯ ತೀರ್ಪಿನ ವಿರುದ್ಧ ಅಪೀಲು ಸಲ್ಲಿಸಲಾಗಿದ್ದರೆ, ದೂರುದಾರನಿಗೆ;

(iv) 418ನೇ ಪ್ರಕರಣ ಅಥವಾ 419ನೇ ಪ್ರಕರಣದ ಮೇರೆಗಿನ ಅಪೀಲು ಆಗಿದ್ದರೆ, ಆಪಾದಿತನಿಗೆ

- ನೀಡತಕ್ಕದ್ದು ಮತ್ತು ಅಂಥ ಅಧಿಕಾರಿ, ದೂರುದಾರ ಹಾಗೂ ಆಪಾದಿತನಿಗೆ ಅಪೀಲಿನ ಕಾರಣಗಳ ಪ್ರತಿಯನ್ನು ಒದಗಿಸತಕ್ಕದ್ದು.

(2) ಮೊಕದ್ದಮೆಯ ದಾಖಲೆಯನ್ನು, ಅಂಥ ದಾಖಲೆಯು ಈಗಾಗಲೇ ನ್ಯಾಯಾಲಯದಲ್ಲಿಲ್ಲದಿದ್ದರೆ, ಅಪೀಲು ನ್ಯಾಯಾಲಯವು ಅದನ್ನು ತರಿಸಿಕೊಳ್ಳತಕ್ಕದ್ದು ಮತ್ತು ಪಕ್ಷಕಾರರನ್ನು ವಿಚಾರಣೆ ಮಾಡತಕ್ಕದ್ದು:

ಪರಂತು, ಶಿಕ್ಷೆಯ ಆದೇಶದ ವ್ಯಾಪ್ತಿ ಅಥವಾ ಕಾನೂನುಸಮ್ಮತತೆಯ ಬಗ್ಗೆ ಮಾತ್ರ ಅಪೀಲು ಸಲ್ಲಿಸಲಾಗಿದ್ದರೆ, ನ್ಯಾಯಾಲಯವು ದಾಖಲೆಯನ್ನು ತರಿಸಿಕೊಳ್ಳದೇ ಅಪೀಲನ್ನು ವಿಲೆ ಮಾಡಬಹುದು.

(3) ಶಿಕ್ಷೆಯ ಆದೇಶವು ತೀವ್ರವಾಗಿದೆ ಎಂಬ ಕಾರಣವೊಂದೇ ಅಪರಾಧ ನಿರ್ಣಯದ ಮೇಲೆ ಹೂಡಲಾದ ಅಪೀಲಿಗೆ ಆಧಾರವಾಗಿದ್ದರೆ, ಅಪೀಲುದಾರನು, ನ್ಯಾಯಾಲಯದ ಅನುಮತಿಯಿಲ್ಲದೆ, ಇತರ ಯಾವುದೇ ಕಾರಣವನ್ನು ಮುಂದಿರಿಸತಕ್ಕದ್ದಲ್ಲ ಅಥವಾ ಅದನ್ನು ಸಮರ್ಥಿಸುವಂಥ ಯಾವುದೇ ಹೇಳಿಕೆಯನ್ನು ನೀಡತಕ್ಕದ್ದಲ್ಲ.

**427. ಅಪೀಲು ನ್ಯಾಯಾಲಯದ ಅಧಿಕಾರಗಳು.-** ದಾಖಲೆಯನ್ನು ಪರಿಶೀಲಿಸಿದ ತರುವಾಯ ಮತ್ತು ಅಪೀಲುದಾರನನ್ನು ಅಥವಾ ಆತನ ನ್ಯಾಯವಾದಿಯನ್ನು, ಅವನು ಹಾಜರಾದರೆ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರನನ್ನು, ಅವನು ಹಾಜರಾದರೆ ಮತ್ತು 418ನೇ ಪ್ರಕರಣ ಅಥವಾ 419ನೇ ಪ್ರಕರಣದ ಮೇರೆಗಿನ ಅಪೀಲಿನ ಸಂದರ್ಭದಲ್ಲಿ ಆಪಾದಿತನನ್ನು,

ಅವನು ಹಾಜರಾದರೆ, ವಿಚಾರಣೆ ಮಾಡಿದ ತರುವಾಯ, ಅಪೀಲು ನ್ಯಾಯಾಲಯವು, ಮಧ್ಯಪ್ರವೇಶಿಸಲು ಸಾಕಷ್ಟು ಕಾರಣವಿಲ್ಲವೆಂದು ಪರಿಗಣಿಸಿದರೆ, ಅಪೀಲನ್ನು ವಜಾ ಮಾಡಬಹುದು ಅಥವಾ,-

(ಎ) ಖುಲಾಸೆ ಆದೇಶದ ವಿರುದ್ಧದ ಅಪೀಲಿನಲ್ಲಿ, ಅಂಥ ಆದೇಶವನ್ನು ವಿಪರ್ಯಯಗೊಳಿಸಬಹುದು ಮತ್ತು ಸಂದರ್ಭಾನುಸಾರ, ಮತ್ತಷ್ಟು ವಿಚಾರಣೆಯನ್ನು ಮಾಡಬೇಕೆಂದು ಅಥವಾ ಆಪಾದಿತನನ್ನು ಪುನಃ ಅಧಿವಿಚಾರಣೆ ಮಾಡಬೇಕೆಂದು ಅಥವಾ ಅಧಿವಿಚಾರಣೆಗೆ ಒಪ್ಪಿಸಬೇಕೆಂದು ನಿರ್ದೇಶಿಸಬಹುದು ಅಥವಾ ಅವನು ತಪ್ಪಿತಸ್ಥನೆಂದು ನಿರ್ಣಯಿಸಿ ಕಾನೂನಿಗನುಸಾರವಾಗಿ ಅವನಿಗೆ ಶಿಕ್ಷೆಯ ಆದೇಶವನ್ನು ಮಾಡಬಹುದು;

(ಬಿ) ಅಪರಾಧ ನಿರ್ಣಯದ ವಿರುದ್ಧದ ಅಪೀಲಿನಲ್ಲಿ,-

(i) ನಿರ್ಣಯವನ್ನು ಮತ್ತು ಶಿಕ್ಷೆಯ ಆದೇಶವನ್ನು ವಿಪರ್ಯಯಗೊಳಿಸಬಹುದು ಮತ್ತು ಆಪಾದಿತನನ್ನು ಖುಲಾಸೆಗೊಳಿಸಬಹುದು ಅಥವಾ ವಿಮೋಚನೆಗೊಳಿಸಬಹುದು ಅಥವಾ ಅಂಥ ಅಪೀಲು ನ್ಯಾಯಾಲಯಕ್ಕೆ ಅಧೀನವಾದ ಸಕ್ಷಮ ಅಧಿಕಾರವ್ಯಾಪ್ತಿಯಿರುವ ನ್ಯಾಯಾಲಯವು ಅವನನ್ನು ಪುನಃ ಅಧಿವಿಚಾರಣೆ ಮಾಡಬೇಕೆಂದು ಅಥವಾ ಅಧಿವಿಚಾರಣೆಗೆ ಒಪ್ಪಿಸಬೇಕೆಂದು ಆದೇಶಿಸಬಹುದು; ಅಥವಾ

(ii) ಶಿಕ್ಷೆಯ ಆದೇಶವನ್ನು ಉಳಿಸಿಕೊಂಡು, ನಿರ್ಣಯವನ್ನು ಬದಲಾಯಿಸಬಹುದು; ಅಥವಾ

(iii) ನಿರ್ಣಯವನ್ನು ಬದಲಾಯಿಸಿ ಅಥವಾ ಬದಲಾಯಿಸದೆ, ಶಿಕ್ಷೆಯ ಆದೇಶದ ಸ್ವರೂಪ ಅಥವಾ ವ್ಯಾಪ್ತಿಯನ್ನು ಅಥವಾ ಸ್ವರೂಪ ಮತ್ತು ವ್ಯಾಪ್ತಿಯನ್ನು, ಆದರೆ ಅದನ್ನು ಹೆಚ್ಚಿಸದಂತೆ ಬದಲಾಯಿಸಬಹುದು;

(ಸಿ) ಶಿಕ್ಷೆಯನ್ನು ಹೆಚ್ಚಿಸುವುದಕ್ಕಾಗಿನ ಅಪೀಲಿನಲ್ಲಿ,-

(i) ನಿರ್ಣಯವನ್ನು ಮತ್ತು ಶಿಕ್ಷೆಯ ಆದೇಶವನ್ನು ವಿಪರ್ಯಯಗೊಳಿಸಬಹುದು ಮತ್ತು ಆಪಾದಿತನನ್ನು ಖುಲಾಸೆ ಮಾಡಬಹುದು ಅಥವಾ ವಿಮೋಚನೆಗೊಳಿಸಬಹುದು ಅಥವಾ ಅಪರಾಧದ ಅಧಿವಿಚಾರಣೆ ಮಾಡಲು ಸಕ್ಷಮ ನ್ಯಾಯಾಲಯವು ಅವನನ್ನು ಪುನಃ ಅಧಿವಿಚಾರಣೆ ಮಾಡಬೇಕೆಂದು ಆದೇಶಿಸಬಹುದು; ಅಥವಾ

(ii) ಶಿಕ್ಷೆಯ ಆದೇಶವನ್ನು ಉಳಿಸಿಕೊಂಡು, ನಿರ್ಣಯವನ್ನು ಬದಲಾಯಿಸಬಹುದು; ಅಥವಾ

(iii) ನಿರ್ಣಯವನ್ನು ಬದಲಾಯಿಸಿ ಅಥವಾ ಬದಲಾಯಿಸದೆ, ಶಿಕ್ಷೆಯ ಆದೇಶದ ಸ್ವರೂಪ ಅಥವಾ ವ್ಯಾಪ್ತಿಯನ್ನು ಅಥವಾ ಸ್ವರೂಪ ಮತ್ತು ವ್ಯಾಪ್ತಿಯನ್ನು ವ್ಯತ್ಯಾಸಗೊಳಿಸಿ, ಶಿಕ್ಷೆಯನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದು;

(ಡಿ) ಇತರ ಯಾವುದೇ ಆದೇಶದ ವಿರುದ್ಧದ ಅಪೀಲಿನಲ್ಲಿ, ಅಂಥ ಆದೇಶವನ್ನು ಬದಲಾಯಿಸಬಹುದು ಅಥವಾ ವಿಪರ್ಯಯಗೊಳಿಸಬಹುದು;

(ಇ) ನ್ಯಾಯಸಮ್ಮತವಾಗಬಹುದಾದ ಅಥವಾ ಯುಕ್ತವಾಗಬಹುದಾದ ಯಾವುದೇ ತಿದ್ದುಪಡಿಯನ್ನು ಅಥವಾ ಯಾವುದೇ ಆನುಷಂಗಿಕ ಅಥವಾ ಪ್ರಾಸಂಗಿಕ ಆದೇಶವನ್ನು ಮಾಡಬಹುದು:

ಪರಂತು, ಶಿಕ್ಷೆಯನ್ನು ಹೆಚ್ಚಿಸುವುದರ ವಿರುದ್ಧ ಕಾರಣ ತೋರಿಸಲು ಯುಕ್ತವಾದ ಅವಕಾಶವನ್ನು ಆಪಾದಿತನಿಗೆ ಕೊಟ್ಟ ಹೊರತು, ಆ ಶಿಕ್ಷೆಯನ್ನು ಹೆಚ್ಚಿಸತಕ್ಕದ್ದಲ್ಲ:

ಮತ್ತು ಪರಂತು, ಅಪೀಲು ನ್ಯಾಯಾಲಯವು ಆಪಾದಿತನು ಮಾಡಿರುವನೆಂದು ತಾನು ಅಭಿಪ್ರಾಯಪಡುವ ಅಪರಾಧಕ್ಕಾಗಿ ಅಪೀಲಿನ ಮೇರೆಗೆ ಆದೇಶ ಅಥವಾ ಶಿಕ್ಷೆಯ ಆದೇಶವನ್ನು ಮಾಡುವ ನ್ಯಾಯಾಲಯವು ಆ ಅಪರಾಧಕ್ಕಾಗಿ ವಿಧಿಸಬಹುದಾಗಿದ್ದ ದಂಡನೆಗಿಂತ ಹೆಚ್ಚಿನ ದಂಡನೆಯನ್ನು ವಿಧಿಸತಕ್ಕದ್ದಲ್ಲ.

**428. ಅಧೀನ ಅಪೀಲು ನ್ಯಾಯಾಲಯದ ತೀರ್ಪುಗಳು.-** ಮೂಲ ಅಧಿಕಾರವ್ಯಾಪ್ತಿ ಹೊಂದಿರುವ ಕ್ರಿಮಿನಲ್ ನ್ಯಾಯಾಲಯದ ತೀರ್ಪಿಗೆ ಸಂಬಂಧಿಸಿದಂತೆ ಅಧ್ಯಾಯ I ರಲ್ಲಿ ಅಡಕವಾಗಿರುವ ನಿಯಮಗಳು, ಸೆಷನ್ ನ್ಯಾಯಾಲಯದ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಅಪೀಲಿನ ತೀರ್ಪಿಗೆ, ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು:

ಪರಂತು, ಅಪೀಲು ನ್ಯಾಯಾಲಯವು ಅನ್ಯಥಾ ನಿರ್ದೇಶಿಸಿದ ಹೊರತು, ತೀರ್ಪನ್ನು ಆಲಿಸಲು ಆಪಾದಿತನನ್ನು ಕರೆಸತಕ್ಕದ್ದಲ್ಲ ಅಥವಾ ಹಾಜರಾಗುವಂತೆ ಅಗತ್ಯಪಡಿಸತಕ್ಕದ್ದಲ್ಲ.

**429. ಉಚ್ಚ ನ್ಯಾಯಾಲಯವು ಅಪೀಲಿನ ಮೇಲೆ ಮಾಡಿದ ಆದೇಶವನ್ನು ಪ್ರಮಾಣೀಕರಿಸಿ ಕೆಳ ನ್ಯಾಯಾಲಯಕ್ಕೆ ಕಳುಹಿಸುವುದು.-** (1) ಉಚ್ಚ ನ್ಯಾಯಾಲಯವು, ಅಪೀಲಿನ ಮೊಕದ್ದಮೆಯನ್ನು ಈ ಅಧ್ಯಾಯದ ಮೇರೆಗೆ ತೀರ್ಮಾನಿಸಿದಾಗ, ಯಾವುದರ ವಿರುದ್ಧ ಅಪೀಲು ಸಲ್ಲಿಸಲಾಯಿತೋ ಆ ನಿರ್ಣಯವನ್ನು, ಶಿಕ್ಷೆಯ ಆದೇಶವನ್ನು ಅಥವಾ ಆದೇಶವನ್ನು ದಾಖಲಿಸಿದ ಅಥವಾ ಮಾಡಿದ ನ್ಯಾಯಾಲಯಕ್ಕೆ ತನ್ನ ತೀರ್ಪನ್ನು ಅಥವಾ ಆದೇಶವನ್ನು ಪ್ರಮಾಣೀಕರಿಸಿ ಕಳುಹಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯವು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಲ್ಲದ ನ್ಯಾಯಿಕ ಮ್ಯಾಜಿಸ್ಟ್ರೇಟನದಾಗಿದ್ದರೆ, ಉಚ್ಚ ನ್ಯಾಯಾಲಯದ ತೀರ್ಪು ಅಥವಾ ಆದೇಶವನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ ಮೂಲಕ ಕಳುಹಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯವು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನದಾಗಿದ್ದರೆ, ಉಚ್ಚ ನ್ಯಾಯಾಲಯದ ತೀರ್ಪು ಅಥವಾ ಆದೇಶವನ್ನು ಜಿಲ್ಲಾ ಮ್ಯಾಜಿಸ್ಟ್ರೇಟನ ಮೂಲಕ ಕಳುಹಿಸತಕ್ಕದ್ದು.

(2) ಉಚ್ಚ ನ್ಯಾಯಾಲಯವು ಯಾವ ನ್ಯಾಯಾಲಯಕ್ಕೆ ತನ್ನ ತೀರ್ಪನ್ನು ಅಥವಾ ಆದೇಶವನ್ನು ಪ್ರಮಾಣೀಕರಿಸಿ ಕಳುಹಿಸುತ್ತದೋ, ಆ ನ್ಯಾಯಾಲಯವು ಆನಂತರ ಉಚ್ಚ ನ್ಯಾಯಾಲಯದ ತೀರ್ಪು ಅಥವಾ ಆದೇಶಕ್ಕನುಗುಣವಾದಂಥ ಆದೇಶಗಳನ್ನು ಮಾಡತಕ್ಕದ್ದು ಮತ್ತು ಅವಶ್ಯಕವಾದರೆ, ಅದಕ್ಕೆ ಅನುಸಾರವಾಗಿ ದಾಖಲೆಯನ್ನು ತಿದ್ದುಪಡಿ ಮಾಡತಕ್ಕದ್ದು.

**430. ಅಪೀಲು ಇತ್ಯರ್ಥವಾಗುವವರೆಗೆ ಶಿಕ್ಷೆಯ ಆದೇಶದ ಅಮಾನತು; ಜಾಮೀನಿನ ಮೇಲೆ ಅಪೀಲುದಾರನ ಬಿಡುಗಡೆ.-** (1) ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯ ಯಾವುದೇ ಅಪೀಲು ಇತ್ಯರ್ಥವಾಗುವವರೆಗೆ, ಅಪೀಲು ನ್ಯಾಯಾಲಯವು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಯಾವ ಶಿಕ್ಷೆಯ ಆದೇಶ ಅಥವಾ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಶಿಕ್ಷೆಯ ಆದೇಶ ಅಥವಾ ಆದೇಶದ ಜಾರಿಯನ್ನು ಅಮಾನತುಗೊಳಿಸಬೇಕೆಂದು ಮತ್ತು ಅವನನ್ನು ಬಂಧಿಸಿಟ್ಟಿದ್ದರೆ ಅವನನ್ನು ಜಾಮೀನಿನ ಮೇಲೆ ಅಥವಾ ಅವನ ಸ್ವಂತ ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಮೇಲೆ ಬಿಡುಗಡೆ ಮಾಡಬೇಕೆಂದು ಆದೇಶಿಸಬಹುದು:

ಪರಂತು, ಅಪೀಲು ನ್ಯಾಯಾಲಯವು, ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದ ಅಥವಾ ಹತ್ತು ವರ್ಷಕ್ಕಿಂತ ಕಡಿಮೆಯಲ್ಲದ ಕಾರಾವಾಸದಿಂದ ದಂಡನೀಯವಾದ ಅಪರಾಧದ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು, ಆತನ ಸ್ವಂತ ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಮೇಲೆ, ಬಿಡುಗಡೆ ಮಾಡುವುದಕ್ಕೆ ಮೊದಲು ಹಾಗೆ ಅಂಥ ಬಿಡುಗಡೆಯ ವಿರುದ್ಧ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ತನ್ನ ಕಾರಣಗಳನ್ನು ಲಿಖಿತದಲ್ಲಿ ಸಲ್ಲಿಸಲು ಅವಕಾಶ ನೀಡತಕ್ಕದ್ದು:

ಮತ್ತು ಪರಂತು, ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ಸಂದರ್ಭಗಳಲ್ಲಿ, ಆ ಜಾಮೀನನ್ನು ರದ್ದುಪಡಿಸುವಂತೆ ಕೋರಿ ಪಬ್ಲಿಕ್ ಪ್ರಾಸಿಕ್ಯೂಟರನು ಅರ್ಜಿ ಸಲ್ಲಿಸಲು ಮುಕ್ತನಾಗಿರತಕ್ಕದ್ದು.

(2) ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ಅಧೀನವಾದ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ ಸಂದರ್ಭದಲ್ಲಿ, ಅಪೀಲು ನ್ಯಾಯಾಲಯಕ್ಕೆ ಈ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಉಚ್ಚ ನ್ಯಾಯಾಲಯವು ಸಹ ಚಲಾಯಿಸಬಹುದು.

(3) ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯು, ತಾನು ಅಪೀಲು ಸಲ್ಲಿಸುವ ಉದ್ದೇಶ ಹೊಂದಿರುವನೆಂದು ಯಾವ ನ್ಯಾಯಾಲಯದಿಂದ ತಾನು ಅಪರಾಧಿಯೆಂದು ನಿರ್ಣೀತನಾದನೋ ಆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರೆ, ಆ ನ್ಯಾಯಾಲಯವು,-

(i) ಅಂಥ ವ್ಯಕ್ತಿಯು ಜಾಮೀನಿನ ಮೇಲಿದ್ದು, ಮೂರು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ii) ಯಾವುದಕ್ಕಾಗಿ ಅಂಥ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾಗಿರುವನೋ ಆ ಅಪರಾಧವು ಜಾಮೀನೀಯವಾಗಿದ್ದರೆ ಮತ್ತು ಅವನು ಜಾಮೀನಿನ ಮೇಲಿದ್ದರೆ

- ಜಾಮೀನನ್ನು ನಿರಾಕರಿಸುವುದಕ್ಕೆ ವಿಶೇಷ ಕಾರಣಗಳಿರುವ ಹೊರತು, ಅಪೀಲು ಸಲ್ಲಿಸಲು ಮತ್ತು (1)ನೇ ಉಪಪ್ರಕರಣದ ಮೇರೆಗೆ ಅಪೀಲು ನ್ಯಾಯಾಲಯದ ಆದೇಶಗಳನ್ನು ಪಡೆಯಲು ಸಾಕಾಗುವಷ್ಟು ಅವಧಿಯವರೆಗೆ ಅಪರಾಧಿಯೆಂದು ನಿರ್ಣೀತನಾದ ವ್ಯಕ್ತಿಯನ್ನು, ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದೆಂದು ಆದೇಶಿಸತಕ್ಕದ್ದು ಮತ್ತು ಅವನನ್ನು ಜಾಮೀನಿನ ಮೇಲೆ ಹಾಗೆ ಬಿಡುಗಡೆ ಮಾಡಿರುವಷ್ಟು ಕಾಲವೂ ಕಾರಾವಾಸದ ಶಿಕ್ಷೆಯ ಆದೇಶವು ಅಮಾನತುಗೊಂಡಿರುವುದೆಂದು ಭಾವಿಸತಕ್ಕದ್ದು.

(4) ಅಪೀಲುದಾರನು ಅಂತಿಮವಾಗಿ ಯಾವುದೇ ಅವಧಿಯ ಕಾರಾವಾಸದ ಅಥವಾ ಆಜೀವ ಕಾರಾವಾಸದ ಶಿಕ್ಷೆಯ ಆದೇಶಕ್ಕೆ ಗುರಿಯಾದಾಗ, ಅವನಿಗೆ ವಿಧಿಸಿದ ಶಿಕ್ಷೆಯ ಆದೇಶದ ಅವಧಿಯನ್ನು ಲೆಕ್ಕ ಹಾಕುವಾಗ, ಅವನನ್ನು ಹಾಗೆ ಬಿಡುಗಡೆ ಮಾಡಿದ ಅವಧಿಯನ್ನು ಹೊರತುಪಡಿಸತಕ್ಕದ್ದು.

**431. ಖುಲಾಸೆ ಆದೇಶದ ವಿರುದ್ಧದ ಅಪೀಲಿನಲ್ಲಿ ಆಪಾದಿತನ ದಸ್ತಗಿರಿ.-** 419ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಿರುವಾಗ, ಉಚ್ಚ ನ್ಯಾಯಾಲಯವು, ಆಪಾದಿತನನ್ನು ದಸ್ತಗಿರಿ ಮಾಡಿ ತನ್ನ ಮುಂದೆ ಅಥವಾ ಯಾವುದೇ ಅಧೀನ ನ್ಯಾಯಾಲಯದ ಮುಂದೆ ಕರೆತರತಕ್ಕದ್ದೆಂದು ನಿರ್ದೇಶಿಸಿ ವಾರಂಟನ್ನು ಹೊರಡಿಸಬಹುದು ಮತ್ತು ಯಾವ ನ್ಯಾಯಾಲಯದ ಮುಂದೆ ಅವನನ್ನು ಹಾಜರುಪಡಿಸಲಾಗಿದೆಯೋ ಆ ನ್ಯಾಯಾಲಯವು ಅಪೀಲು ಇತ್ಯರ್ಥವಾಗುವವರೆಗೆ ಆತನನ್ನು ಕಾರಾಗೃಹಕ್ಕೆ ಕಳುಹಿಸಬಹುದು ಅಥವಾ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು.

**432. ಅಪೀಲು ನ್ಯಾಯಾಲಯವು ಮತ್ತಷ್ಟು ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳುವಂತೆ ನಿರ್ದೇಶಿಸಬಹುದು.-** (1) ಈ ಅಧ್ಯಾಯದ ಮೇರೆಗಿನ ಯಾವುದೇ ಅಪೀಲಿನ ಬಗ್ಗೆ ವ್ಯವಹರಿಸುವಲ್ಲಿ, ಅಪೀಲು ನ್ಯಾಯಾಲಯವು ಹೆಚ್ಚಿನ ಸಾಕ್ಷ್ಯ ಅವಶ್ಯವೆಂದು ಭಾವಿಸಿದರೆ, ಅದು ತನ್ನ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ಅಂಥ ಸಾಕ್ಷ್ಯವನ್ನು ಅದು ತಾನೇ ತೆಗೆದುಕೊಳ್ಳಬಹುದು ಅಥವಾ ಮ್ಯಾಜಿಸ್ಟ್ರೇಟನು ತೆಗೆದುಕೊಳ್ಳುವಂತೆ ನಿರ್ದೇಶಿಸಬಹುದು ಅಥವಾ

ಉಚ್ಚ ನ್ಯಾಯಾಲಯವು ಅಪೀಲು ನ್ಯಾಯಾಲಯವಾಗಿರುವಾಗ ಸೆಷನ್ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ತೆಗೆದುಕೊಳ್ಳುವಂತೆ ನಿರ್ದೇಶಿಸಬಹುದು.

(2) ಸೆಷನ್ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಂಡಾಗ, ಅದು ಅಥವಾ ಅವನು ಅಂಥ ಸಾಕ್ಷ್ಯವನ್ನು ಪ್ರಮಾಣೀಕರಿಸಿ ಅಪೀಲು ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯವು ಆನಂತರ ಅಪೀಲನ್ನು ವಿಲೆ ಮಾಡತಕ್ಕದ್ದು.

(3) ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳುವಾಗ ಆಪಾದಿತನು ಅಥವಾ ಆತನ ನ್ಯಾಯವಾದಿಯು ಹಾಜರಿರಲು ಹಕ್ಕನ್ನು ಹೊಂದಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಅದು ವಿಚಾರಣೆಯಾಗಿದ್ದರೆ ಹೇಗೋ ಹಾಗೆ, ಅಧ್ಯಾಯ ರ ಉಪಬಂಧಗಳಿಗೆ ಒಳಪಡತಕ್ಕದ್ದು.

**433. ಅಪೀಲು ನ್ಯಾಯಾಲಯದ ನ್ಯಾಯಾಧೀಶರಲ್ಲಿ ಸಮಾನ ಭಿನ್ನಾಭಿಪ್ರಾಯವಿರುವಾಗ ಪ್ರಕ್ರಿಯೆ.-** ಈ ಅಧ್ಯಾಯದ ಮೇರೆಗಿನ ಅಪೀಲು, ಉಚ್ಚ ನ್ಯಾಯಾಲಯದ ನ್ಯಾಯಪೀಠದ ಮುಂದೆ ವಿಚಾರಣೆಯಾಗಿರುವಾಗ ಮತ್ತು ಅದರಲ್ಲಿ ಆ ಬಗ್ಗೆ ಸಮಾನ ಭಿನ್ನಾಭಿಪ್ರಾಯ ಉಂಟಾದಾಗ, ಆ ಅಪೀಲನ್ನು ಅವರ ಅಭಿಪ್ರಾಯಗಳೊಂದಿಗೆ, ಆ ನ್ಯಾಯಾಲಯದ ಇನ್ನೊಬ್ಬ ನ್ಯಾಯಾಧೀಶನ ಮುಂದೆ ಮಂಡಿಸತಕ್ಕದ್ದು ಮತ್ತು ಆ ನ್ಯಾಯಾಧೀಶನು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆ ನಡೆಸಿದ ತರುವಾಯ, ತನ್ನ ಅಭಿಪ್ರಾಯವನ್ನು ಕೊಡತಕ್ಕದ್ದು ಮತ್ತು ತೀರ್ಪು ಅಥವಾ ಆದೇಶವು ಆ ಅಭಿಪ್ರಾಯಕ್ಕನುಸಾರವಾಗಿರತಕ್ಕದ್ದು:

ಪರಂತು, ನ್ಯಾಯಪೀಠದ ಒಬ್ಬ ನ್ಯಾಯಾಧೀಶನು ಅಥವಾ ಈ ಪ್ರಕರಣದ ಮೇರೆಗೆ ಅಪೀಲನ್ನು ಇನ್ನೊಬ್ಬ ನ್ಯಾಯಾಧೀಶನ ಮುಂದೆ ಇಟ್ಟಿರುವಲ್ಲಿ ಆ ನ್ಯಾಯಾಧೀಶನು ಹಾಗೆ ಇಚ್ಛಿಸಿದರೆ, ಆ ಅಪೀಲನ್ನು ವಿಸ್ತೃತ (larger) ನ್ಯಾಯಪೀಠವು ಮರುವಿಚಾರಣೆ ಮಾಡಿ ತೀರ್ಮಾನಿಸತಕ್ಕದ್ದು.

**434. ಅಪೀಲು ಮೇಲಿನ ತೀರ್ಪುಗಳ ಮತ್ತು ಆದೇಶಗಳ ಅಂತಿಮತೆ.-** 418ನೇ ಪ್ರಕರಣ, 419ನೇ ಪ್ರಕರಣ, 425ನೇ ಪ್ರಕರಣದ (4)ನೇ ಉಪಪ್ರಕರಣದ ಅಥವಾ ಅಧ್ಯಾಯ II ರಲ್ಲಿ ಉಪಬಂಧಿಸಲಾದ ಮೊಕದ್ದಮೆಗಳನ್ನು ಹೊರತುಪಡಿಸಿ, ಅಪೀಲು ನ್ಯಾಯಾಲಯವು ಅಪೀಲಿನ ಮೇಲೆ ನೀಡಿದ ತೀರ್ಪುಗಳು ಮತ್ತು ಮಾಡಿದ ಆದೇಶಗಳು ಅಂತಿಮವಾಗಿರತಕ್ಕದ್ದು:

ಪರಂತು, ಯಾವುದೇ ಮೊಕದ್ದಮೆಯಲ್ಲಿ ಅಪರಾಧ ನಿರ್ಣಯದ ವಿರುದ್ಧ ಮಾಡಿದ ಅಪೀಲು ಅಂತಿಮವಾಗಿ ಇತ್ಯರ್ಥವಾದರೂ, ಅಪೀಲು ನ್ಯಾಯಾಲಯವು,-

(ಎ) ಅದೇ ಮೊಕದ್ದಮೆಯಿಂದ ಉದ್ಭವಿಸುವ ಖುಲಾಸೆ ಆದೇಶದ ವಿರುದ್ಧ 419ನೇ ಪ್ರಕರಣದ ಮೇರೆಗೆ ಮಾಡಿದ ಅಪೀಲನ್ನು; ಅಥವಾ

(ಬಿ) ಅದೇ ಮೊಕದ್ದಮೆಯಿಂದ ಉದ್ಭವಿಸುವ ಶಿಕ್ಷೆಯನ್ನು ಹೆಚ್ಚಿಸುವುದಕ್ಕಾಗಿ 418ನೇ ಪ್ರಕರಣದ ಮೇರೆಗೆ ಮಾಡಿದ ಅಪೀಲನ್ನು

- ಅದರ ಗುಣಾವಗುಣಗಳ ಮೇಲೆ ವಿಚಾರಣೆ ಮಾಡಿ ವಿಲೆ ಮಾಡಬಹುದು.

**435. ಅಪೀಲುಗಳು ಕೊನೆಗೊಳ್ಳುವುದು.-** (1) 418ನೇ ಪ್ರಕರಣ ಅಥವಾ 419ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲು, ಆಪಾದಿತನ ಮರಣದ ತರುವಾಯ ಕೊನೆಗೊಳ್ಳತಕ್ಕದ್ದು.

(2) ಈ ಅಧ್ಯಾಯದ ಮೇರೆಗಿನ ಇತರ ಪ್ರತಿಯೊಂದು ಅಪೀಲು (ಜುಲ್ಮಾನೆಯ ಶಿಕ್ಷೆಯ ಆದೇಶದ ವಿರುದ್ಧ ಅಪೀಲನ್ನು ಹೊರತುಪಡಿಸಿ), ಅಪೀಲುದಾರನ ಮರಣದ ತರುವಾಯ ಕೊನೆಗೊಳ್ಳತಕ್ಕದ್ದು:

ಪರಂತು, ಅದು ಅಪರಾಧ ನಿರ್ಣಯ ಮತ್ತು ಮರಣ ಅಥವಾ ಕಾರಾವಾಸದ ಶಿಕ್ಷೆಯ ಆದೇಶದ ವಿರುದ್ಧದ ಅಪೀಲಾಗಿರುವಲ್ಲಿ ಮತ್ತು ಅಪೀಲು ಇತ್ಯರ್ಥವಾಗುವುದಕ್ಕೆ ಮುಂಚೆ ಅಪೀಲುದಾರನು ಮೃತಪಟ್ಟಾಗ, ಆತನ ಹತ್ತಿರದ ಸಂಬಂಧಿಕರು ಯಾರಾದರೂ, ಅಪೀಲುದಾರನು ಮರಣ ಹೊಂದಿದ ಮೂವತ್ತು ದಿನಗಳೊಳಗಾಗಿ ಅಪೀಲನ್ನು ಮುಂದುವರಿಸಲು ಅನುಮತಿಗಾಗಿ, ಅಪೀಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ಅನುಮತಿ ದೊರೆತರೆ, ಆ ಅಪೀಲು ಕೊನೆಗೊಳ್ಳತಕ್ಕದ್ದಲ್ಲ.

*ವಿವರಣೆ.-* ಈ ಪ್ರಕರಣದಲ್ಲಿ ìಹತ್ತಿರದ ಸಂಬಂಧಿಕî ಎಂದರೆ, ತಂದೆ, ತಾಯಿ, ಪತಿ, ಪತ್ನಿ, ಪಿತೃವಂಶಜ, ಸಹೋದರ ಅಥವಾ ಸಹೋದರಿ.

## ಅಧ್ಯಾಯ XXXII

## ನಿರ್ದೇಶನ ಮತ್ತು ಪುನರೀಕ್ಷಣೆ

**436. ಉಚ್ಚ ನ್ಯಾಯಾಲಯಕ್ಕೆ ನಿರ್ದೇಶನ.-** (1) ಯಾವುದೇ ನ್ಯಾಯಾಲಯಕ್ಕೆ ತನ್ನ ಮುಂದೆ ಇತ್ಯರ್ಥದಲ್ಲಿರುವ ಮೊಕದ್ದಮೆಯು, ಯಾವುದೇ ಅಧಿನಿಯಮ, ಅಧ್ಯಾದೇಶ ಅಥವಾ ವಿನಿಯಮದ ಅಥವಾ ಅಧಿನಿಯಮ, ಅಧ್ಯಾದೇಶ ಅಥವಾ ವಿನಿಯಮದಲ್ಲಿ ಅಡಕವಾದ ಯಾವುದೇ ಉಪಬಂಧದ ಸಿಂಧುತ್ವಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಒಳಗೊಂಡಿದೆಯೆಂದು ಮತ್ತು ಅದರ ನಿರ್ಧಾರವು ಮೊಕದ್ದಮೆಯನ್ನು ವಿಲೆ ಮಾಡಲು ಅವಶ್ಯವಾಗಿದೆಯೆಂದು ಮನದಟ್ಟಾದರೆ ಮತ್ತು ಅಂಥ ಅಧಿನಿಯಮ, ಅಧ್ಯಾದೇಶ, ವಿನಿಯಮ ಅಥವಾ ಉಪಬಂಧವು ಅಸಿಂಧುವಾಗಿದೆಯೆಂದು ಅಥವಾ ಕಾರ್ಯಗತಗೊಳಿಸಲು ಸಾಧ್ಯವಾಗುವುದಿಲ್ಲವೆಂದು ಅದು ಅಭಿಪ್ರಾಯಪಟ್ಟರೆ, ಆದರೆ ಆ ನ್ಯಾಯಾಲಯವು ಯಾವುದಕ್ಕೆ ಅಧೀನವಾಗಿದೆಯೋ ಆ ಉಚ್ಚ ನ್ಯಾಯಾಲಯವು ಅಥವಾ ಸರ್ವೋಚ್ಚ ನ್ಯಾಯಾಲಯವು ಹಾಗೆ ಘೋಷಿಸದಿದ್ದರೆ, ನ್ಯಾಯಾಲಯವು, ತನ್ನ ಅಭಿಪ್ರಾಯವನ್ನು ಮತ್ತು ಅದಕ್ಕಿರುವ ಕಾರಣಗಳನ್ನು ನಿರೂಪಿಸಿ ವಿಷಯವನ್ನು ಮಂಡಿಸತಕ್ಕದ್ದು ಮತ್ತು ಅದನ್ನು ಉಚ್ಚ ನ್ಯಾಯಾಲಯದ ತೀರ್ಮಾನಕ್ಕಾಗಿ ನಿರ್ದೇಶಿಸತಕ್ಕದ್ದು.

*ವಿವರಣೆ.-* ಈ ಪ್ರಕರಣದಲ್ಲಿ ìವಿನಿಯಮî ಎಂದರೆ, ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರಲ್ಲಿ ಅಥವಾ ರಾಜ್ಯದ ಸಾಮಾನ್ಯ ಖಂಡಗಳ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ ಯಾವುದೇ ವಿನಿಯಮ ಎಂದು ಅರ್ಥ.

(2) ಸೆಷನ್ ನ್ಯಾಯಾಲಯವು ತನ್ನ ಮುಂದೆ ಇತ್ಯರ್ಥದಲ್ಲಿರುವ (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗದಿರುವ ಯಾವುದೇ ಮೊಕದ್ದಮೆಯಲ್ಲಿ, ತಾನು ಸೂಕ್ತವೆಂದು ಭಾವಿಸಿದರೆ, ಅಂಥ ಮೊಕದ್ದಮೆಯ ವಿಚಾರಣೆಯಲ್ಲಿ ಉದ್ಭವವಾಗುವ ಯಾವುದೇ ಕಾನೂನಿಗೆ ಸಂಬಂಧಿಸಿದ ಪ್ರಶ್ನೆಯನ್ನು ಉಚ್ಚ ನ್ಯಾಯಾಲಯದ ತೀರ್ಮಾನಕ್ಕಾಗಿ ನಿರ್ದೇಶಿಸತಕ್ಕದ್ದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ನಿರ್ದೇಶಿಸುವ ಯಾವುದೇ ನ್ಯಾಯಾಲಯವು, ಉಚ್ಚ ನ್ಯಾಯಾಲಯವು ಅದನ್ನು ತೀರ್ಮಾನಿಸುವವರೆಗೆ, ಆಪಾದಿತನನ್ನು ಜೈಲಿಗೆ ಒಪ್ಪಿಸಬಹುದು ಅಥವಾ ಕರೆದಾಗ ಹಾಜರಾಗಬೇಕೆಂದು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು.

**437. ಉಚ್ಚ ನ್ಯಾಯಾಲಯದ ತೀರ್ಮಾನಕ್ಕೆ ಅನುಸಾರವಾಗಿ ಮೊಕದ್ದಮೆಯ ವಿಲೆ.-** (1) ಉಚ್ಚ ನ್ಯಾಯಾಲಯಕ್ಕೆ ಹಾಗೆ ಪ್ರಶ್ನೆಯನ್ನು ನಿರ್ದೇಶಿಸಿದಾಗ, ಆ ಬಗ್ಗೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು ಮತ್ತು ತನಗೆ ನಿರ್ದೇಶಿಸಿದ ನ್ಯಾಯಾಲಯಕ್ಕೆ ಅಂಥ ಆದೇಶದ ಪ್ರತಿಯನ್ನು ಕಳುಹಿಸುವಂತೆ ಮಾಡತಕ್ಕದ್ದು, ಆ ನ್ಯಾಯಾಲಯವು ಸದರಿ ಆದೇಶಕ್ಕೆ ಅನುಸಾರವಾಗಿ ಮೊಕದ್ದಮೆಯನ್ನು ಇತ್ಯರ್ಥ ಮಾಡತಕ್ಕದ್ದು.

(2) ಕಳುಹಿಸಲು ತಗುಲಿದ ವೆಚ್ಚಗಳನ್ನು ಯಾರು ಸಂದಾಯ ಮಾಡಬೇಕೆಂಬುದನ್ನು ಉಚ್ಚ ನ್ಯಾಯಾಲಯವು ನಿರ್ದೇಶಿಸಬಹುದು.

**438. ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸಲು ದಾಖಲೆಗಳನ್ನು ತರಿಸಿಕೊಳ್ಳುವುದು.-** (1) ಉಚ್ಚ ನ್ಯಾಯಾಲಯವು ಅಥವಾ ಯಾರೇ ಸೆಷನ್ಸ್ ನ್ಯಾಯಾಧೀಶನು ತನ್ನ ಅಥವಾ ಆತನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗಿರುವ ಯಾವುದೇ ಅಧೀನ ಕ್ರಿಮಿನಲ್ ನ್ಯಾಯಾಲಯದ ಮುಂದೆ ಇರುವ ಯಾವುದೇ ವ್ಯವಹರಣೆಯ ದಾಖಲೆಯನ್ನು, ಅಂಥ ಅಧೀನ ನ್ಯಾಯಾಲಯವು ದಾಖಲಿಸಿದ ಅಥವಾ ಮಾಡಿದ ಯಾವುದೇ ನಿರ್ಣಯ, ಶಿಕ್ಷೆಯ ಆದೇಶದ ಅಥವಾ ಆದೇಶದ ಯಥಾರ್ಥತೆಯ, ಕಾನೂನುಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಮತ್ತು ಅದರ ಯಾವುದೇ ವ್ಯವಹರಣೆಯ ಯುಕ್ತಬದ್ಧತೆಯ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶದಿಂದ ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು ಮತ್ತು ಅಂಥ ದಾಖಲೆಯನ್ನು ತರಿಸಿಕೊಳ್ಳುವಾಗ ಯಾವುದೇ ಶಿಕ್ಷೆಯ ಆದೇಶದ ಅಥವಾ ಆದೇಶದ ಜಾರಿಯನ್ನು ಅಮಾನತುಗೊಳಿಸಬೇಕೆಂದು ಮತ್ತು ಆಪಾದಿತನನ್ನು ಬಂಧಿಸಿಟ್ಟಿದ್ದರೆ, ಅವನನ್ನು, ದಾಖಲೆಯ ಪರಿಶೀಲನೆ ಇತ್ಯರ್ಥವಾಗುವವರೆಗೆ ಅವನ ಸ್ವಂತ ಬಂಧಪತ್ರದ ಮೇಲೆ ಅಥವಾ ಜಾಮೀನು ಬಂಧಪತ್ರದ ಮೇಲೆ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಬಹುದು.

*ವಿವರಣೆ.-* ಮೂಲ ಅಥವಾ ಅಪೀಲು ಅಧಿಕಾರವನ್ನು ಚಲಾಯಿಸುತ್ತಿರುವ ಎಲ್ಲಾ ಕಾರ್ಯನಿರ್ವಾಹಕ ಅಥವಾ ನ್ಯಾಯಿಕ ಮ್ಯಾಜಿಸ್ಟ್ರೇಟರು, ಈ ಉಪಪ್ರಕರಣದ ಮತ್ತು 439ನೇ ಪ್ರಕರಣದ ಉದ್ದೇಶಗಳಿಗಾಗಿ ಸೆಷನ್ಸ್ ನ್ಯಾಯಾಧೀಶನಿಗಿಂತ ಕೆಳದರ್ಜೆಯ ನ್ಯಾಯಾಧೀಶರೆಂದು ಭಾವಿಸತಕ್ಕದ್ದು.

(2) ಯಾವುದೇ ಅಪೀಲು, ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ ಮಾಡಿದ ಯಾವುದೇ ಮಧ್ಯಕಾಲೀನ ಆದೇಶಕ್ಕೆ ಸಂಬಂಧಿಸಿದಂತೆ, (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸತಕ್ಕದ್ದಲ್ಲ.

(3) ಯಾರೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯಕ್ಕಾಗಲಿ ಅಥವಾ ಸೆಷನ್ಸ್ ನ್ಯಾಯಾಧೀಶನಿಗಾಗಲಿ ಅರ್ಜಿಯನ್ನು ಸಲ್ಲಿಸಿದ್ದರೆ, ಅದೇ ವ್ಯಕ್ತಿಯು ಸಲ್ಲಿಸಿದ ಇನ್ನೊಂದು ಅರ್ಜಿಯನ್ನು ಅವರಲ್ಲಿ ಮತ್ತೊಬ್ಬರು ಸ್ವೀಕರಿಸತಕ್ಕದ್ದಲ್ಲ.

**439. ವಿಚಾರಣೆಗೆ ಆದೇಶಿಸಲು ಅಧಿಕಾರ.-** 438ನೇ ಪ್ರಕರಣದ ಮೇರೆಗೆ ಅಥವಾ ಅನ್ಯಥಾ ಯಾವುದೇ ದಾಖಲೆಯನ್ನು ಪರಿಶೀಲಿಸಿದ ನಂತರ, ಉಚ್ಚ ನ್ಯಾಯಾಲಯವು ಅಥವಾ ಸೆಷನ್ಸ್ ನ್ಯಾಯಾಧೀಶನು, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಖುದ್ದಾಗಿ ಅಥವಾ ಅವರಿಗೆ ಅಧೀನರಾಗಿರುವ ಯಾರೇ ಮ್ಯಾಜಿಸ್ಟ್ರೇಟನ ಮೂಲಕ, 226ನೇ ಪ್ರಕರಣದ ಅಥವಾ 227ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ವಜಾ ಮಾಡಿರುವ ಯಾವುದೇ ದೂರಿನ ಬಗ್ಗೆ ಅಥವಾ ಅಪರಾಧದ ಆಪಾದಿತನಾಗಿ ವಿಮೋಚಿತನಾದ ಯಾರೇ ವ್ಯಕ್ತಿಯ ಮೊಕದ್ದಮೆಯ ಬಗ್ಗೆ ಮತ್ತಷ್ಟು ವಿಚಾರಣೆಯನ್ನು ಮಾಡಬಹುದೆಂದು ನಿರ್ದೇಶಿಸಬಹುದು ಮತ್ತು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಸ್ವತಃ ಅದರ ವಿಚಾರಣೆ ಮಾಡಬಹುದು ಅಥವಾ ಯಾರೇ ಅಧೀನ ಮ್ಯಾಜಿಸ್ಟ್ರೇಟನಿಗೆ ಹಾಗೆ ಮಾಡುವಂತೆ ನಿರ್ದೇಶಿಸಬಹುದು:

ಪರಂತು, ಅಂಥ ನಿರ್ದೇಶನವನ್ನು ಏಕೆ ಮಾಡಬಾರದೆಂಬುದಕ್ಕೆ ಅಂಥ ವ್ಯಕ್ತಿಯು ಕಾರಣ ತೋರಿಸಲು ಅವಕಾಶ ಪಡೆದಿದ್ದ ಹೊರತು, ಯಾವ ನ್ಯಾಯಾಲಯವೂ ವಿಮೋಚಿತನಾದ ಯಾರೇ ವ್ಯಕ್ತಿಯ ಮೊಕದ್ದಮೆಯ ವಿಚಾರಣೆಗಾಗಿ ಈ ಪ್ರಕರಣದ ಮೇರೆಗಿನ ಯಾವುದೇ ನಿರ್ದೇಶನವನ್ನು ನೀಡತಕ್ಕದ್ದಲ್ಲ.

**440. ಸೆಷನ್ಸ್ ನ್ಯಾಯಾಧೀಶನ ಪುನರೀಕ್ಷಣೆಯ ಅಧಿಕಾರಗಳು.-** (1) ಸೆಷನ್ಸ್ ನ್ಯಾಯಾಧೀಶನು ಯಾವ ವ್ಯವಹರಣೆಯ ದಾಖಲೆಯನ್ನು ತಾನೇ ತರಿಸಿಕೊಂಡಿರುವನೋ ಆ ಯಾವುದೇ ವ್ಯವಹರಣೆಯ ಸಂದರ್ಭದಲ್ಲಿ, ಅವನು, ಉಚ್ಚ ನ್ಯಾಯಾಲಯವು 442ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಚಲಾಯಿಸಬಹುದಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸೆಷನ್ಸ್ ನ್ಯಾಯಾಧೀಶನ ಮುಂದೆ ಪುನರೀಕ್ಷಣೆಯ ರೂಪದಲ್ಲಿ ಯಾವುದೇ ವ್ಯವಹರಣೆಯು ಪ್ರಾರಂಭವಾಗಿರುವಲ್ಲಿ, 442ನೇ ಪ್ರಕರಣದ (2), (3), (4) ಮತ್ತು (5)ನೇ ಉಪಪ್ರಕರಣಗಳ ಉಪಬಂಧಗಳು, ಸಾಧ್ಯವಾಗುವಷ್ಟರ ಮಟ್ಟಿಗೆ, ಅಂಥ ವ್ಯವಹರಣೆಗೆ ಅನ್ವಯಿಸತಕ್ಕದ್ದು ಮತ್ತು ಸದರಿ ಉಪಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖಗಳನ್ನು ಸೆಷನ್ಸ್ ನ್ಯಾಯಾಧೀಶನಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(3) ಯಾರೇ ವ್ಯಕ್ತಿಯು ಅಥವಾ ಅವನ ಪರವಾಗಿ ಪುನರೀಕ್ಷಣೆಗಾಗಿ ಅರ್ಜಿಯನ್ನು ಸೆಷನ್ಸ್ ನ್ಯಾಯಾಧೀಶನ ಮುಂದೆ ಸಲ್ಲಿಸಿರುವಲ್ಲಿ, ಅಂಥ ವ್ಯಕ್ತಿಯ ಸಂಬಂಧದಲ್ಲಿ ಅದರ ಮೇಲೆ ಸೆಷನ್ ನ್ಯಾಯಾಲಯವು ಮಾಡಿದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅಂಥ ವ್ಯಕ್ತಿಯ ಕೋರಿಕೆಯ ಮೇರೆಗೆ ಪುನರೀಕ್ಷಣೆ ರೂಪದಲ್ಲಿ ಮುಂದಿನ ಯಾವ ವ್ಯವಹರಣೆಯನ್ನು ಉಚ್ಚ ನ್ಯಾಯಾಲಯವು ಅಥವಾ ಯಾವುದೇ ಇತರ ನ್ಯಾಯಾಲಯವು ಸ್ವೀಕರಿಸತಕ್ಕದ್ದಲ್ಲ.

**441. ಅಪರ ಸೆಷನ್ಸ್ ನ್ಯಾಯಾಧೀಶನ ಅಧಿಕಾರ.-** ಅಪರ ಸೆಷನ್ಸ್ ನ್ಯಾಯಾಧೀಶನು, ಸೆಷನ್ಸ್ ನ್ಯಾಯಾಧೀಶನ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ವರ್ಗಾಯಿಸಿದ ಯಾವುದೇ ಮೊಕದ್ದಮೆಯ ಸಂಬಂಧದಲ್ಲಿ, ಈ ಅಧ್ಯಾಯದ ಮೇರೆಗೆ ಸೆಷನ್ಸ್ ನ್ಯಾಯಾಧೀಶನ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸಬಹುದು.

**442. ಉಚ್ಚ ನ್ಯಾಯಾಲಯದ ಪುನರೀಕ್ಷಣಾ ಅಧಿಕಾರಗಳು.-** (1) ಉಚ್ಚ ನ್ಯಾಯಾಲಯವು, ಯಾವ ವ್ಯವಹರಣೆಯ ದಾಖಲೆಯನ್ನು ತಾನಾಗಿಯೇ ತರಿಸಿಕೊಂಡಿದೆಯೋ ಅಥವಾ ಅನ್ಯಥಾ ತನ್ನ ಗಮನಕ್ಕೆ ಬಂದಿರುವುದೋ ಆ ವ್ಯವಹರಣೆಯ ಸಂದರ್ಭದಲ್ಲಿ, ಅದು ತನ್ನ ವಿವೇಚನಾನುಸಾರ 427, 430, 431 ಮತ್ತು 432ನೇ ಪ್ರಕರಣಗಳ ಮೂಲಕ ಅಪೀಲು ನ್ಯಾಯಾಲಯಕ್ಕೆ ಅಥವಾ 344ನೇ ಪ್ರಕರಣದ ಮೂಲಕ ಸೆಷನ್ ನ್ಯಾಯಾಲಯಕ್ಕೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಪುನರೀಕ್ಷಣಾ ನ್ಯಾಯಾಲಯದ ನ್ಯಾಯಾಧೀಶನು ಸಮಾನ ಭಿನ್ನಾಭಿಪ್ರಾಯ ಇರುವಾಗ, 433ನೇ ಪ್ರಕರಣದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಆ ಮೊಕದ್ದಮೆಯನ್ನು ವಿಲೆ ಮಾಡತಕ್ಕದ್ದು.

(2) ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ತನ್ನ ಪ್ರತಿರಕ್ಷೆಗಾಗಿ ವಾದಿಸಲು ಆಪಾದಿತನಿಗೆ ಅಥವಾ ಇತರ ವ್ಯಕ್ತಿಗೆ ಅವಕಾಶ ಕೊಟ್ಟ ಹೊರತು, ಅವನಿಗೆ ಪ್ರತಿಕೂಲವಾಗುವಂತೆ ಈ ಪ್ರಕರಣದ ಮೇರೆಗಿನ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

(3) ಖುಲಾಸೆಯ ನಿರ್ಣಯವನ್ನು ಅಪರಾಧ ನಿರ್ಣಯವೆಂದು ಬದಲಾಯಿಸಲು, ಈ ಪ್ರಕರಣದಲ್ಲಿರುವುದು ಯಾವುದೂ ಉಚ್ಚ ನ್ಯಾಯಾಲಯವು ಅಧಿಕೃತಗೊಳಿಸುತ್ತದೆಯೆಂದು ಭಾವಿಸತಕ್ಕದ್ದಲ್ಲ.

(4) ಈ ಸಂಹಿತೆಯ ಮೇರೆಗೆ ಅಪೀಲಿಗೆ ಅವಕಾಶವಿದ್ದು ಅಪೀಲನ್ನು ಸಲ್ಲಿಸದಿರುವಲ್ಲಿ ಅಪೀಲು ಸಲ್ಲಿಸಬಹುದಾಗಿದ್ದ, ಪಕ್ಷಕಾರನ ಕೋರಿಕೆಯ ಮೇರೆಗೆ ಪುನರೀಕ್ಷಣೆಯ ರೂಪದಲ್ಲಿನ ಯಾವುದೇ ವ್ಯವಹರಣೆಯನ್ನು ಸ್ವೀಕರಿಸತಕ್ಕದ್ದಲ್ಲ.

(5) ಈ ಸಂಹಿತೆಯ ಮೇರೆಗೆ ಅಪೀಲಿಗೆ ಅವಕಾಶವಿದ್ದು, ಆದರೆ ಯಾರೇ ವ್ಯಕ್ತಿಯು ಪುನರೀಕ್ಷಣೆ ಅರ್ಜಿಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವಲ್ಲಿ ಮತ್ತು ಯಾವ ಅಪೀಲಿಗೂ ಅವಕಾಶವಿಲ್ಲವೆಂಬ ತಪ್ಪು ನಂಬಿಕೆಯ ಮೇರೆಗೆ ಅಂಥ ಅರ್ಜಿಯನ್ನು ಸಲ್ಲಿಸಲಾಯಿತೆಂದು ಮತ್ತು ನ್ಯಾಯೋದ್ದೇಶದಿಂದ ಹಾಗೆ ಮಾಡುವುದು ಅವಶ್ಯಕವೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದಲ್ಲಿ, ಉಚ್ಚ ನ್ಯಾಯಾಲಯವು ಪುನರೀಕ್ಷಣೆಯ ಅರ್ಜಿಯನ್ನು ಅಪೀಲು ಅರ್ಜಿಯೆಂದು ಪರಿಗಣಿಸಬಹುದು ಮತ್ತು ಅದರ ಬಗ್ಗೆ ತದನುಸಾರವಾಗಿ ವ್ಯವಹರಿಸಬಹುದು.

**443. ಪುನರೀಕ್ಷಣಾ ಮೊಕದ್ದಮೆಗಳನ್ನು ಹಿಂಪಡೆಯಲು ಅಥವಾ ವರ್ಗಾಯಿಸಲು ಉಚ್ಚ ನ್ಯಾಯಾಲಯದ ಅಧಿಕಾರ.-** (1) ಒಂದೇ ಆರೋಪದ ಅಧಿವಿಚಾರಣೆಯಲ್ಲಿ ಅಪರಾಧಿಗಳೆಂದು ನಿರ್ಣೀತರಾದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ಪುನರೀಕ್ಷಣೆಗಾಗಿ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವಲ್ಲಿ ಮತ್ತು ಅದೇ ಅಧಿವಿಚಾರಣೆಯಲ್ಲಿ ಅಪರಾಧಿಯೆಂದು ನಿರ್ಣೀತನಾದ ಯಾರೇ ಇತರ ವ್ಯಕ್ತಿಯು, ಪುನರೀಕ್ಷಣೆಗಾಗಿ ಸೆಷನ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವಲ್ಲಿ, ಉಚ್ಚ ನ್ಯಾಯಾಲಯವು, ಪಕ್ಷಕಾರರ ಸಾಮಾನ್ಯ ಅನುಕೂಲವನ್ನು ಮತ್ತು ಅದರಲ್ಲಿ ಒಳಗೊಂಡ ಪ್ರಶ್ನೆಗಳ ಮಹತ್ವವನ್ನು ಗಮನಿಸಿ ಆ ಎರಡು ನ್ಯಾಯಾಲಯಗಳಲ್ಲಿ ಯಾವುದು ಪುನರೀಕ್ಷಣೆಯ ಅರ್ಜಿಗಳನ್ನು ಅಂತಿಮವಾಗಿ ವಿಲೆ ಮಾಡಬೇಕೆಂಬುದನ್ನು ತೀರ್ಮಾನಿಸತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು ಪುನರೀಕ್ಷಣೆಯ ಎಲ್ಲಾ ಅರ್ಜಿಗಳನ್ನು ತಾನೇ ವಿಲೆ ಮಾಡಬೇಕೆಂದು ತೀರ್ಮಾನಿಸಿದರೆ, ಸೆಷನ್ಸ್ ನ್ಯಾಯಾಧೀಶನ ಮುಂದೆ ಇತ್ಯರ್ಥವಾಗದೇ ಇರುವ ಪುನರೀಕ್ಷಣೆಯ ಅರ್ಜಿಗಳನ್ನು ತನಗೆ ವರ್ಗಾಯಿಸಬೇಕೆಂದು ಉಚ್ಚ ನ್ಯಾಯಾಲಯವು ನಿರ್ದೇಶಿಸತಕ್ಕದ್ದು ಮತ್ತು ಪುನರೀಕ್ಷಣೆಯ ಅರ್ಜಿಗಳನ್ನು ತಾನು ಇತ್ಯರ್ಥ ಮಾಡುವ ಅವಶ್ಯಕತೆಯಿಲ್ಲವೆಂದು ಉಚ್ಚ ನ್ಯಾಯಾಲಯವು ತೀರ್ಮಾನಿಸಿದರೆ, ತನಗೆ ಸಲ್ಲಿಸಲಾದ ಪುನರೀಕ್ಷಣೆಯ ಅರ್ಜಿಗಳನ್ನು ಸೆಷನ್ಸ್ ನ್ಯಾಯಾಧೀಶನಿಗೆ ವರ್ಗಾಯಿಸಬೇಕೆಂದು ಅದು ನಿರ್ದೇಶಿಸತಕ್ಕದ್ದು.

(2) ಪುನರೀಕ್ಷಣೆಯ ಯಾವುದೇ ಅರ್ಜಿಯು ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಿರುವಲ್ಲಿ, ಆ ನ್ಯಾಯಾಲಯವು ತನಗೆ ಯುಕ್ತಬದ್ಧವಾಗಿ ಸಲ್ಲಿಸಿದ ಅರ್ಜಿಯೆಂಬಂತೆ ಅದರ ಬಗ್ಗೆ ವ್ಯವಹರಿಸತಕ್ಕದ್ದು.

(3) ಪುನರೀಕ್ಷಣೆಯ ಅರ್ಜಿಯು ಸೆಷನ್ಸ್ ನ್ಯಾಯಾಧೀಶನಿಗೆ ವರ್ಗಾಯಿಸಿರುವಲ್ಲಿ, ಆ ನ್ಯಾಯಾಧೀಶನು ಅದನ್ನು ತನಗೆ ಯುಕ್ತಬದ್ಧವಾಗಿ ಸಲ್ಲಿಸಿದ ಅರ್ಜಿಯೆಂಬಂತೆಯೇ ಅದರ ಬಗ್ಗೆ ವ್ಯವಹರಿಸತಕ್ಕದ್ದು.

(4) ಪುನರೀಕ್ಷಣೆಯ ಅರ್ಜಿಯನ್ನು ಉಚ್ಚ ನ್ಯಾಯಾಲಯದಿಂದ ಸೆಷನ್ಸ್ ನ್ಯಾಯಾಧೀಶನಿಗೆ ವರ್ಗಾಯಿಸಿರುವಲ್ಲಿ, ಯಾರ ಪುನರೀಕ್ಷಣೆಯ ಅರ್ಜಿಗಳನ್ನು ಸೆಷನ್ಸ್ ನ್ಯಾಯಾಧೀಶನು ವಿಲೆ ಮಾಡಿರುವರೋ ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಪರವಾಗಿ ಉಚ್ಚ ನ್ಯಾಯಾಲಯವು ಅಥವಾ ಇತರ ಯಾವುದೇ ನ್ಯಾಯಾಲಯವು ಮತ್ತಾವುದೇ ಪುನರೀಕ್ಷಣೆಯ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ.

**444. ಪಕ್ಷಕಾರರಿಗೆ ವಾದ ಮಾಡಲು ಅವಕಾಶ ಕೊಡುವುದು ನ್ಯಾಯಾಲಯದ ಇಚ್ಛೆಗೆ ಸೇರಿದ್ದು.-** ಈ ಸಂಹಿತೆಯ ಮೂಲಕ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದುದನ್ನುಳಿದು, ಪುನರೀಕ್ಷಣೆಯ ತನ್ನ ಅಧಿಕಾರಗಳನ್ನು ಚಲಾಯಿಸುವ ಯಾವುದೇ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ವಾದಿಸಲು ಯಾವ ಪಕ್ಷಕಾರನಿಗೂ ಯಾವುದೇ ಹಕ್ಕು ಇರುವುದಿಲ್ಲ, ಆದರೆ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಅಂಥ ಅಧಿಕಾರಗಳನ್ನು ಚಲಾಯಿಸುವಾಗ ಯಾರೇ ಪಕ್ಷಕಾರನು ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಮಾಡುವ ವಾದವನ್ನು ಆಲಿಸಬಹುದು.

**445. ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಮಾಣೀಕರಿಸಿ ಕೆಳ ನ್ಯಾಯಾಲಯಕ್ಕೆ ಕಳುಹಿಸುವುದು.-** ಈ ಅಧ್ಯಾಯದ ಮೇರೆಗೆ ಉಚ್ಚ ನ್ಯಾಯಾಲಯವು ಅಥವಾ ಸೆಷನ್ಸ್ ನ್ಯಾಯಾಧೀಶನು ಮೊಕದ್ದಮೆಯನ್ನು ಪುನರೀಕ್ಷಣೆ ಮಾಡಿದಾಗ, ಅದು ಅಥವಾ ಅವನು 429ನೇ ಪ್ರಕರಣದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಅದರ ನಿರ್ಣಯ ಅಥವಾ ಆದೇಶವನ್ನು, ಪುನರ್ ಪರಿಶೀಲಿಸಲಾದ ನಿರ್ಣಯ, ಶಿಕ್ಷೆಯ ಆದೇಶ ಅಥವಾ ಆದೇಶವನ್ನು ಯಾವ ನ್ಯಾಯಾಲಯವು ದಾಖಲಿಸಿದೆಯೋ ಅಥವಾ ಮಾಡಿದೆಯೋ ಆ ನ್ಯಾಯಾಲಯಕ್ಕೆ ಪ್ರಮಾಣೀಕರಿಸಿ ಕಳುಹಿಸತಕ್ಕದ್ದು ಮತ್ತು ನಿರ್ಣಯ ಅಥವಾ ಆದೇಶವನ್ನು ಹಾಗೆ ಪ್ರಮಾಣೀಕರಿಸಿ ಯಾವ ನ್ಯಾಯಾಲಯಕ್ಕೆ ಕಳುಹಿಸಲಾಗಿದೆಯೋ ಆ ನ್ಯಾಯಾಲಯವು ಆನಂತರ ಹಾಗೆ ಪ್ರಮಾಣೀಕರಿಸಿದ ನಿರ್ಣಯಕ್ಕೆ ಅನುಸಾರವಾದಂಥ ಆದೇಶಗಳನ್ನು ಮಾಡತಕ್ಕದ್ದು ಮತ್ತು ಅವಶ್ಯಕವಾದರೆ ದಾಖಲೆಯನ್ನು ಅದಕ್ಕೆ ಅನುಸಾರವಾಗಿ ತಿದ್ದುಪಡಿ ಮಾಡತಕ್ಕದ್ದು.

## ಅಧ್ಯಾಯ XXXIII

## ಆಪರಾಧಿಕ ಮೊಕದ್ದಮೆಗಳ ವರ್ಗಾವಣೆ

**446. ಮೊಕದ್ದಮೆಗಳನ್ನು ಮತ್ತು ಅಪೀಲುಗಳನ್ನು ವರ್ಗಾವಣೆ ಮಾಡಲು ಸರ್ವೋಚ್ಚ ನ್ಯಾಯಾಲಯದ ಅಧಿಕಾರ.-** (1) ಈ ಪ್ರಕರಣದ ಮೇರೆಗಿನ ಆದೇಶವು ನ್ಯಾಯೋದ್ದೇಶದಿಂದ ಯುಕ್ತವಾದುದೆಂಬುದಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಕಂಡುಬರುವಂತೆ ಮಾಡಿದಾಗಲೆಲ್ಲಾ, ಅದು ಯಾವುದೇ ನಿರ್ದಿಷ್ಟ ಮೊಕದ್ದಮೆಯನ್ನು ಅಥವಾ ಅಪೀಲನ್ನು ಒಂದು ಉಚ್ಚ ನ್ಯಾಯಾಲಯದಿಂದ ಮತ್ತೊಂದು ಉಚ್ಚ ನ್ಯಾಯಾಲಯಕ್ಕೆ ಅಥವಾ ಒಂದು ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ಒಂದು ಕ್ರಿಮಿನಲ್ ನ್ಯಾಯಾಲಯದಿಂದ ಮತ್ತೊಂದು ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ಅದಕ್ಕೆ ಸಮನಾದ ಅಥವಾ ಅದಕ್ಕಿಂತ ಉನ್ನತ ಅಧಿಕಾರವ್ಯಾಪ್ತಿಯಿರುವ ಮತ್ತೊಂದು ಕ್ರಿಮಿನಲ್ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂಬುದಾಗಿ ನಿರ್ದೇಶಿಸಬಹುದು.

(2) ಭಾರತದ ಅಟಾರ್ನಿ-ಜನರಲ್ ಅಥವಾ ಹಿತಾಸಕ್ತಿಯುಳ್ಳ ಪಕ್ಷಕಾರನ ಅರ್ಜಿಯ ಮೇಲೆ ಮಾತ್ರ ಸರ್ವೋಚ್ಚ ನ್ಯಾಯಾಲಯವು ಈ ಪ್ರಕರಣದ ಮೇರೆಗೆ ಕ್ರಮ ತೆಗೆದುಕೊಳ್ಳಬಹುದು ಮತ್ತು ಅಂಥ ಪ್ರತಿಯೊಂದು ಅರ್ಜಿಯನ್ನು ಪ್ರಸ್ತಾವದ ಮೂಲಕ ಸಲ್ಲಿಸತಕ್ಕದ್ದು ಮತ್ತು ಅರ್ಜಿದಾರನು, ಭಾರತದ ಅಟಾರ್ನಿ-ಜನರಲ್ ಅಥವಾ ರಾಜ್ಯದ ಅಡ್ವೋಕೇಟ್- ಜನರಲ್ ನಾಗಿಲ್ಲದಿರುವಾಗ, ಆ ಅರ್ಜಿಯು ಅಫಿದಾವಿತ್ತ್ ಅಥವಾ ದೃಢೀಕರಣದ ಮೂಲಕ ಸಮರ್ಥಿತವಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಯಾವುದೇ ಅರ್ಜಿಯನ್ನು ವಜಾ ಮಾಡಿರುವಲ್ಲಿ, ಸರ್ವೋಚ್ಚ ನ್ಯಾಯಾಲಯವು ಅರ್ಜಿಯು ಕ್ಷುಲ್ಲಕ ಅಥವಾ ಕಿರುಕುಳಕರವಾಗಿತ್ತೆಂಬುದಾಗಿ ಅಭಿಪ್ರಾಯಪಟ್ಟರೆ, ಅರ್ಜಿಯನ್ನು ವಿರೋಧಿಸಿದ ಯಾರೇ ವ್ಯಕ್ತಿಗೆ, ಮೊಕದ್ದಮೆಯ ಸನ್ನಿವೇಶಗಳಲ್ಲಿ ಉಚಿತವೆಂದು ಪರ್ಯಾಲೋಚಿಸಬಹುದಾದಂಥ ಮೊಬಲಗನ್ನು ನಷ್ಟಪರಿಹಾರವಾಗಿ ಅರ್ಜಿದಾರನು ಸಂದಾಯ ಮಾಡುವಂತೆ ಆದೇಶಿಸಬಹುದು.

**447. ಮೊಕದ್ದಮೆಗಳನ್ನು ಮತ್ತು ಅಪೀಲುಗಳನ್ನು ವರ್ಗಾವಣೆ ಮಾಡಲು ಉಚ್ಚ ನ್ಯಾಯಾಲಯದ ಅಧಿಕಾರ.-** (1) ಉಚ್ಚ ನ್ಯಾಯಾಲಯವು,-

(ಎ) ಅಧೀನವಾದ ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿ ಸರಿಯಾದ ಮತ್ತು ನಿಷ್ಪಕ್ಷಪಾತವಾದ ವಿಚಾರಣೆ ಅಥವಾ ಅಧಿವಿಚಾರಣೆಯು ನಡೆಯುವುದಿಲ್ಲವೆಂದು; ಅಥವಾ

(ಬಿ) ಅಸಾಮಾನ್ಯ ಕ್ಲಿಷ್ಟತೆಯ ಕೆಲವು ಕಾನೂನು ಪ್ರಶ್ನೆಯು ಉದ್ಭವವಾಗುವ ಸಂಭವವಿದೆಯೆಂದು; ಅಥವಾ

(ಸಿ) ಈ ಪ್ರಕರಣದ ಮೇರೆಗಿನ ಆದೇಶವನ್ನು ಈ ಸಂಹಿತೆಯ ಯಾವುದೇ ಉಪಬಂಧವು ಅಗತ್ಯಪಡಿಸಿದೆಯೆಂದು ಅಥವಾ ಪಕ್ಷಕಾರರ ಅಥವಾ ಸಾಕ್ಷಿದಾರರ ಸಾಮಾನ್ಯ ಅನುಕೂಲಕ್ಕೆ ನೆರವಾಗುತ್ತದೆಯೆಂದು ಅಥವಾ ನ್ಯಾಯೋದ್ದೇಶದಿಂದ ಯುಕ್ತವಾಗಿದೆಯೆಂದು

- ಅದಕ್ಕೆ ಕಂಡುಬರುವಂತೆ ಮಾಡಿದಾಗಲೆಲ್ಲಾ, ಅದು,-

(i) ಯಾವುದೇ ಅಪರಾಧವನ್ನು ವಿಚಾರಣೆ ಅಥವಾ ಅಧಿವಿಚಾರಣೆ ಮಾಡಲು 197ರಿಂದ 205ರವರೆಗಿನ (ಎರಡೂ ಸೇರಿದಂತೆ) ಪ್ರಕರಣಗಳ ಮೇರೆಗೆ ಅರ್ಹತೆ ಹೊಂದಿಲ್ಲದ, ಆದರೆ ಇತರೆ ರೀತಿಯಲ್ಲಿ ಸಕ್ಷಮವಾಗಿರುವ ಯಾವುದೇ ನ್ಯಾಯಾಲಯವು ಅದನ್ನು ವಿಚಾರಣೆ ಅಥವಾ ಅಧಿವಿಚಾರಣೆ ಮಾಡಬೇಕೆಂದು;

(ii)ಯಾವುದೇ ನಿರ್ದಿಷ್ಟ ಮೊಕದ್ದಮೆಯನ್ನು ಅಥವಾ ಅಪೀಲನ್ನು ಅಥವಾ ಯಾವುದೇ ವರ್ಗದ ಮೊಕದ್ದಮೆಗಳನ್ನು ಅಥವಾ ಅಪೀಲುಗಳನ್ನು ತನ್ನ ಅಧಿಕಾರದ ಅಡಿಯಲ್ಲಿ ಬರುವ ಕ್ರಿಮಿನಲ್ ನ್ಯಾಯಾಲಯದಿಂದ ಅದಕ್ಕೆ ಸಮನಾದ ಅಥವಾ ಅದಕ್ಕಿಂತ ಉನ್ನತ ಅಧಿಕಾರವ್ಯಾಪ್ತಿಯನ್ನುಳ್ಳ ಯಾವುದೇ ಇತರ ಕ್ರಿಮಿನಲ್ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು;

(iii) ಯಾವುದೇ ನಿರ್ದಿಷ್ಟ ಮೊಕದ್ದಮೆಯನ್ನು ಅಧಿವಿಚಾರಣೆಗಾಗಿ ಸೆಷನ್ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದು; ಅಥವಾ

(iv)ಯಾವುದೇ ನಿರ್ದಿಷ್ಟ ಮೊಕದ್ದಮೆಯನ್ನು ಅಥವಾ ಅಪೀಲನ್ನು ತನಗೆ ವರ್ಗಾಯಿಸಬೇಕೆಂದು ಮತ್ತು ತನ್ನ ಮುಂದೆಯೇ ಅಧಿವಿಚಾರಣೆ ಮಾಡಬೇಕೆಂದು

- ಆದೇಶಿಸಬಹುದು.

(2) ಉಚ್ಚ ನ್ಯಾಯಾಲಯವು, ಕೆಳ ನ್ಯಾಯಾಲಯದ ವರದಿಯ ಮೇಲಾಗಲೀ ಅಥವಾ ಹಿತಾಸಕ್ತಿಯುಳ್ಳ ಪಕ್ಷಕಾರನ ಅರ್ಜಿಯ ಮೇಲಾಗಲೀ ಅಥವಾ ಸ್ವಯಂ ಪ್ರೇರಣೆಯಿಂದಾಗಲೀ ಕ್ರಮ ಕೈಗೊಳ್ಳಬಹುದು:

ಪರಂತು, ಒಂದೇ ಸೆಷನ್ ನ್ಯಾಯಾಲಯದ ವಿಭಾಗದಲ್ಲಿರುವ ಒಂದು ಕ್ರಿಮಿನಲ್ ನ್ಯಾಯಾಲಯದಿಂದ ಮತ್ತೊಂದು ಕ್ರಿಮಿನಲ್ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ವರ್ಗಾಯಿಸಬೇಕೆಂಬ ಅರ್ಜಿಯನ್ನು, ಅಂಥ ಸೆಷನ್ಸ್ ನ್ಯಾಯಾಧೀಶನಿಗೆ ಸಲ್ಲಿಸಿದ್ದು ಅಥವಾ ಅದು ಅವನಿಂದ ತಿರಸ್ಕೃತವಾಗಿದ್ದ ಹೊರತು, ಅದನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಮೇರೆಗಿನ ಆದೇಶಕ್ಕಾಗಿನ ಪ್ರತಿಯೊಂದು ಅರ್ಜಿಯನ್ನು ಪ್ರಸ್ತಾವದ ಮೂಲಕ ಸಲ್ಲಿಸತಕ್ಕದ್ದು ಮತ್ತು ಅರ್ಜಿದಾರನು, ರಾಜ್ಯದ ಅಡ್ವೊಕೇಟ್-ಜನರಲ್‌ನಾಗಿಲ್ಲದಿರುವಾಗ, ಆ ಅರ್ಜಿಯು ಅಫಿದಾವಿತ್ತ್ ಅಥವಾ ದೃಢೀಕರಣದ ಮೂಲಕ ಸಮರ್ಥಿತವಾಗಿರತಕ್ಕದ್ದು.

(4) ಅಂಥ ಅರ್ಜಿಯನ್ನು ಆಪಾದಿತ ವ್ಯಕ್ತಿಯು ಸಲ್ಲಿಸಿರುವಾಗ, ಉಚ್ಚ ನ್ಯಾಯಾಲಯವು (7)ನೇ ಉಪಪ್ರಕರಣದ ಮೇರೆಗೆ ನೀಡಬಹುದಾದ ಯಾವುದೇ ನಷ್ಟಪರಿಹಾರವನ್ನು ಸಂದಾಯ ಮಾಡುವುದಕ್ಕಾಗಿ ಬಂಧಪತ್ರವನ್ನು ಅಥವಾ ಜಾಮೀನು ಬಂಧಪತ್ರವನ್ನು ಬರೆದು ಕೊಡುವಂತೆ ಅವನಿಗೆ ನಿರ್ದೇಶಿಸಬಹುದು.

(5) ಅಂಥ ಅರ್ಜಿಯನ್ನು ಸಲ್ಲಿಸುವ ಪ್ರತಿಯೊಬ್ಬ ಆಪಾದಿತ ವ್ಯಕ್ತಿಯು ಅರ್ಜಿಯ ಬಗ್ಗೆ ಲಿಖಿತ ಸೂಚನೆಯನ್ನು, ಅರ್ಜಿ ಸಲ್ಲಿಸುವುದಕ್ಕೆ ಇರುವ ಕಾರಣಗಳನ್ನು ಉಲ್ಲೇಖಿಸಿರುವ ಒಂದು ಪ್ರತಿಯನ್ನು ಪಬ್ಲಿಕ್ ಪ್ರಾಸಿಕ್ಯೂಟರನಿಗೆ ನೀಡತಕ್ಕದ್ದು ಮತ್ತು

ಅಂಥ ಸೂಚನೆಯ ನೀಡಿಕೆ ಮತ್ತು ಅರ್ಜಿಯ ವಿಚಾರಣೆಯ ನಡುವೆ ಕೊನೆಯ ಪಕ್ಷ ಇಪ್ಪತ್ನಾಲ್ಕು ಗಂಟೆಗಳು ಕಳೆದಿರುವ ಹೊರತು, ಅರ್ಜಿಯ ಗುಣಾವಗುಣಗಳ ಮೇಲೆ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

(6) ಯಾವುದೇ ಅಧೀನ ನ್ಯಾಯಾಲಯದಿಂದ ಮೊಕದ್ದಮೆಯ ಅಥವಾ ಅಪೀಲಿನ ವರ್ಗಾವಣೆಗಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಉಚ್ಚ ನ್ಯಾಯಾಲಯವು ಹಾಗೆ ಮಾಡುವುದು ನ್ಯಾಯೋದ್ದೇಶದಿಂದ ಅವಶ್ಯವೆಂದು ಅದಕ್ಕೆ ಮನದಟ್ಟಾದಲ್ಲಿ, ಅದು ವಿಧಿಸಲು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳ ಮೇಲೆ ಅಧೀನ ನ್ಯಾಯಾಲಯದಲ್ಲಿನ ವ್ಯವಹರಣೆಗಳು ಅರ್ಜಿಯು ಇತ್ಯರ್ಥವಾಗುವವರೆಗೆ ತಡೆಯಾಜ್ಞೆ ನೀಡಬಹುದು:

ಪರಂತು, ಅಂಥ ತಡೆಯಾಜ್ಞೆಯು 346ನೇ ಪ್ರಕರಣದ ಮೇರೆಗೆ ರಿಮಾಂಡ್ ಮಾಡಲು ಅಧೀನ ನ್ಯಾಯಾಲಯಕ್ಕೆ ಇರುವ ಅಧಿಕಾರವನ್ನು ಬಾಧಿಸತಕ್ಕದ್ದಲ್ಲ.

(7) (1)ನೇ ಉಪಪ್ರಕರಣದ ಮೇರೆಗಿನ ಆದೇಶಕ್ಕಾಗಿನ ಅರ್ಜಿಯನ್ನು ವಜಾ ಮಾಡಿರುವಲ್ಲಿ, ಉಚ್ಚ ನ್ಯಾಯಾಲಯವು ಅರ್ಜಿಯು ಕ್ಷುಲ್ಲಕ ಅಥವಾ ಕಿರುಕುಳಕರವಾಗಿತ್ತೆಂಬುದಾಗಿ ಅಭಿಪ್ರಾಯಪಟ್ಟರೆ, ಅರ್ಜಿಯನ್ನು ವಿರೋಧಿಸಿದ ಯಾರೇ ವ್ಯಕ್ತಿಗೆ, ಮೊಕದ್ದಮೆಯ ಸನ್ನಿವೇಶಗಳಲ್ಲಿ ಉಚಿತವೆಂದು ಪರ್ಯಾಲೋಚಿಸಬಹುದಾದಂಥ ಮೊಬಲಗನ್ನು ನಷ್ಟಪರಿಹಾರವಾಗಿ ಅರ್ಜಿದಾರನು ಸಂದಾಯ ಮಾಡುವಂತೆ ಆದೇಶಿಸಬಹುದು.

(8) ಉಚ್ಚ ನ್ಯಾಯಾಲಯವು, ತನ್ನ ಮುಂದೆ ಅಧಿವಿಚಾರಣೆಗಾಗಿ ಒಂದು ಮೊಕದ್ದಮೆಯನ್ನು ಯಾವುದೇ ನ್ಯಾಯಾಲಯದಿಂದ ವರ್ಗಾಯಿಸಬೇಕೆಂದು (1)ನೇ ಉಪಪ್ರಕರಣದ ಮೇರೆಗೆ ಆದೇಶಿಸಿದರೆ, ಅದು ಅಂಥ ಅಧಿವಿಚಾರಣೆಯಲ್ಲಿ ಆ ನ್ಯಾಯಾಲಯವು, ಮೊಕದ್ದಮೆಯನ್ನು ಹಾಗೆ ವರ್ಗಾಯಿಸದಿದ್ದಲ್ಲಿ ಯಾವ ಪ್ರಕ್ರಿಯೆಯನ್ನು ಅನುಸರಿಸುತ್ತಿತ್ತೋ, ಅದೇ ಪ್ರಕ್ರಿಯೆಯನ್ನೇ ಅನುಸರಿಸತಕ್ಕದ್ದು.

(9) ಈ ಪ್ರಕರಣದಲ್ಲಿರುವುದಾವುದೂ 218ನೇ ಪ್ರಕರಣದ ಮೇರೆಗೆ ಯಾವುದೇ ಸರ್ಕಾರಿ ಆದೇಶಕ್ಕೆ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

**448. ಮೊಕದ್ದಮೆಗಳನ್ನು ಮತ್ತು ಅಪೀಲುಗಳನ್ನು ವರ್ಗಾಯಿಸಲು ಸೆಷನ್ಸ್ ನ್ಯಾಯಾಧೀಶನ ಅಧಿಕಾರ.-** (1) ಈ ಉಪಪ್ರಕರಣದ ಮೇರೆಗಿನ ಆದೇಶವು ನ್ಯಾಯೋದ್ದೇಶಕ್ಕಾಗಿ ಯುಕ್ತವಾಗಿದೆಯಂದು ಸೆಷನ್ಸ್ ನ್ಯಾಯಾಧೀಶನಿಗೆ ಕಂಡುಬರುವಂತೆ ಮಾಡಿದಾಗಲೆಲ್ಲಾ, ಅವನು ಯಾವುದೇ ನಿರ್ದಿಷ್ಟ ಮೊಕದ್ದಮೆಯನ್ನು ತನ್ನ ಸೆಷನ್ಸ್ ವಿಭಾಗದ ಒಂದು ಕ್ರಿಮಿನಲ್ ನ್ಯಾಯಾಲಯದಿಂದ ಮತ್ತೊಂದು ಕ್ರಿಮಿನಲ್ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದು ಆದೇಶಿಸಬಹುದು.

(2) ಸೆಷನ್ಸ್ ನ್ಯಾಯಾಧೀಶನು ಕೆಳ ನ್ಯಾಯಾಲಯದ ವರದಿಯ ಮೇಲಾಗಲೀ ಅಥವಾ ಹಿತಾಸಕ್ತಿಯುಳ್ಳ ಪಕ್ಷಕಾರರ ಅರ್ಜಿಯ ಮೇಲಾಗಲೀ ಅಥವಾ ಸ್ವಯಂ ಪ್ರೇರಣೆಯಿಂದಾಗಲೀ ಕ್ರಮ ಕೈಗೊಳ್ಳಬಹುದು.

(3) 447ನೇ ಪ್ರಕರಣದ (3), (4), (5), (6), (7) ಮತ್ತು (9)ನೇ ಉಪಪ್ರಕರಣಗಳ ಉಪಬಂಧಗಳು, ಅವು 447ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಆದೇಶಕ್ಕಾಗಿ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯ ಸಲ್ಲಿಸಿದ ಸಂಬಂಧದಲ್ಲಿ ಅನ್ವಯವಾಗುವಂತೆಯೆ (1)ನೇ ಉಪಪ್ರಕರಣದ ಮೇರೆಗಿನ ಆದೇಶಕ್ಕಾಗಿ ಸೆಷನ್ಸ್ ನ್ಯಾಯಾಧೀಶನಿಗೆ ಸಲ್ಲಿಸಿದ ಅರ್ಜಿಯ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು, ಆದರೆ ಆ ಪ್ರಕರಣದ (7)ನೇ ಉಪಪ್ರಕರಣವು, ಅದರಲ್ಲಿರುವ ‛ಮೊತ್ತ’ ಎಂಬ ಪದಕ್ಕೆ ಬದಲಾಗಿ "ಹತ್ತು ಸಾವಿರ ರೂಪಾಯಿಗಳನ್ನು ಮೀರದ ಮೊತ್ತ" ಎಂಬ ಪದಗಳನ್ನು ಪ್ರತ್ಯಾಯೋಜಿಸಿದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**449. ಸೆಷನ್ಸ್ ನ್ಯಾಯಾಧೀಶನು ಮೊಕದ್ದಮೆಗಳನ್ನು ಮತ್ತು ಅಪೀಲುಗಳನ್ನು ಹಿಂಪಡೆಯುವುದು.-** (1) ಸೆಷನ್ಸ್ ನ್ಯಾಯಾಧೀಶನು ತನಗೆ ಅಧೀನವಾದ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಂದ ಯಾವುದೇ ಮೊಕದ್ದಮೆಯನ್ನು ಅಥವಾ ಅಪೀಲನ್ನು ಹಿಂಪಡೆಯಬಹುದು ಅಥವಾ ಅವನು ತಾನೇ ಅವನಿಗೆ ವಹಿಸಿದ್ದ ಯಾವುದೇ ಮೊಕದ್ದಮೆ ಅಥವಾ ಅಪೀಲನ್ನು ವಾಪಸು ತರಿಸಿಕೊಳ್ಳಬಹುದು.

(2) ಮೊಕದ್ದಮೆಯ ಅಧಿವಿಚಾರಣೆಯು ಅಥವಾ ಅಪೀಲಿನ ವಿಚಾರಣೆಯು ಅಪರ ಸೆಷನ್ಸ್ ನ್ಯಾಯಾಧೀಶನ ಮುಂದೆ ಪ್ರಾರಂಭವಾಗುವುದಕ್ಕೆ ಮುಂಚೆ, ಯಾವುದೇ ಸಮಯದಲ್ಲಿ ಸೆಷನ್ಸ್ ನ್ಯಾಯಾಧೀಶನು, ತಾನು ಯಾರೇ ಅಪರ ಸೆಷನ್ಸ್ ನ್ಯಾಯಾಧೀಶನಿಗೆ ವಹಿಸಿದ್ದ ಯಾವುದೇ ಮೊಕದ್ದಮೆಯನ್ನು ಅಥವಾ ಅಪೀಲನ್ನು ವಾಪಸು ತರಿಸಿಕೊಳ್ಳಬಹುದು.

(3) ಸೆಷನ್ಸ್ ನ್ಯಾಯಾಧೀಶನು, ಮೊಕದ್ದಮೆಯನ್ನು ಅಥವಾ ಅಪೀಲನ್ನು (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಹಿಂಪಡೆದುಕೊಂಡಲ್ಲಿ ಅಥವಾ ವಾಪಸು ತರಿಸಿಕೊಂಡಲ್ಲಿ, ಅವನು ಸಂದರ್ಭಾನುಸಾರ, ಮೊಕದ್ದಮೆಯನ್ನು ತಾನೇ ತನ್ನ ನ್ಯಾಯಾಲಯದಲ್ಲಿ ಅಧಿವಿಚಾರಣೆ ಮಾಡಬಹುದು ಅಥವಾ ಅಪೀಲನ್ನು ವಿಚಾರಣೆ ಮಾಡಬಹುದು ಅಥವಾ ಈ ಸಂಹಿತೆಯ ಉಪಬಂಧಗಳಿಗನುಸಾರವಾಗಿ ಅಧಿವಿಚಾರಣೆ ಅಥವಾ ವಿಚಾರಣೆಗಾಗಿ ಇನ್ನೊಂದು ನ್ಯಾಯಾಲಯಕ್ಕೆ ವಹಿಸಿಕೊಡಬಹುದು.

**450. ನ್ಯಾಯಿಕ ಮ್ಯಾಜಿಸ್ಟ್ರೇಟನು ಮೊಕದ್ದಮೆಗಳನ್ನು ಹಿಂಪಡೆಯುವುದು.-** (1) ಯಾರೇ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನು ತನಗೆ ಅಧೀನನಾದ ಯಾರೇ ಮ್ಯಾಜಿಸ್ಟ್ರೇಟನಿಂದ ಯಾವುದೇ ಮೊಕದ್ದಮೆಯನ್ನು ಹಿಂಪಡೆದುಕೊಳ್ಳಬಹುದು ಅಥವಾ ಅವನು ತಾನೇ ವಹಿಸಿದ್ದ ಯಾವುದೇ ಮೊಕದ್ದಮೆಯನ್ನು ವಾಪಸು ತರಿಸಿಕೊಳ್ಳಬಹುದು ಮತ್ತು ಅಂಥ ಮೊಕದ್ದಮೆಯನ್ನು ತಾನೇ ವಿಚಾರಣೆ ಅಥವಾ ಅಧಿವಿಚಾರಣೆ ಮಾಡಬಹುದು ಅಥವಾ ಅದನ್ನು ವಿಚಾರಣೆ ಮಾಡಲು ಅಥವಾ ಅಧಿವಿಚಾರಣೆ ಮಾಡಲು ಸಕ್ಷಮನಾದಂಥ ಯಾರೇ ಇತರ ಮ್ಯಾಜಿಸ್ಟ್ರೇಟನಿಗೆ ವಿಚಾರಣೆ ಅಥವಾ ಅಧಿವಿಚಾರಣೆಗಾಗಿ ಕಳುಹಿಸಬಹುದು.

(2) ಯಾರೇ ನ್ಯಾಯಿಕ ಮ್ಯಾಜಿಸ್ಟ್ರೇಟನು ತಾನು 212ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾರೇ ಇತರ ಮ್ಯಾಜಿಸ್ಟ್ರೇಟನಿಗೆ ವಹಿಸಿರುವ ಯಾವುದೇ ಮೊಕದ್ದಮೆಯನ್ನು ವಾಪಸ್ಸು ತರಿಸಿಕೊಳ್ಳಬಹುದು ಮತ್ತು ಅಂಥ ಮೊಕದ್ದಮೆಯನ್ನು ತಾನೇ ವಿಚಾರಣೆ ಅಥವಾ ಅಧಿವಿಚಾರಣೆ ಮಾಡಬಹುದು.

**451. ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರು, ಮೊಕದ್ದಮೆಗಳನ್ನು ವಹಿಸಿಕೊಡುವುದು ಅಥವಾ ಹಿಂಪಡೆಯುವುದು.-** ಯಾರೇ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪವಿಭಾಗೀಯ ಮ್ಯಾಜಿಸ್ಟ್ರೇಟನು,-

(ಎ) ತನ್ನ ಮುಂದೆ ಪ್ರಾರಂಭ ಮಾಡಲಾದ ಯಾವುದೇ ವ್ಯವಹರಣೆಯನ್ನು ತನಗೆ ಅಧೀನನಾಗಿರುವ ಯಾರೇ ಮ್ಯಾಜಿಸ್ಟ್ರೇಟನಿಗೆ ಇತ್ಯರ್ಥ ಮಾಡಲು ಒಪ್ಪಿಸಬಹುದು;

(ಬಿ) ತನಗೆ ಅಧೀನನಾಗಿರುವ ಯಾರೇ ಮ್ಯಾಜಿಸ್ಟ್ರೇಟನಿಂದ ಯಾವುದೇ ಮೊಕದ್ದಮೆಯನ್ನು ಹಿಂಪಡೆದುಕೊಳ್ಳಬಹುದು ಅಥವಾ ಅವನಿಗೆ ತಾನೇ ವಹಿಸಿದ ಯಾವುದೇ ಮೊಕದ್ದಮೆಯನ್ನು ವಾಪಸು ತರಿಸಿಕೊಳ್ಳಬಹುದು ಮತ್ತು ಅಂಥ ವ್ಯವಹರಣೆಯನ್ನು ತಾನೇ ಇತ್ಯರ್ಥ ಮಾಡಬಹುದು ಅಥವಾ ಇತ್ಯರ್ಥ ಮಾಡುವುದಕ್ಕಾಗಿ ಯಾರೇ ಇತರ ಮ್ಯಾಜಿಸ್ಟ್ರೇಟನಿಗೆ ಕಳುಹಿಸಿಕೊಡಬಹುದು.

**452. ಕಾರಣಗಳನ್ನು ದಾಖಲಿಸುವುದು.-** 448ನೇ ಪ್ರಕರಣ, 449ನೇ ಪ್ರಕರಣ, 450ನೇ ಪ್ರಕರಣ ಅಥವಾ 451ನೇ ಪ್ರಕರಣದ ಮೇರೆಗಿನ ಆದೇಶವನ್ನು ಮಾಡುವ ಸೆಷನ್ಸ್ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ಅದನ್ನು ಮಾಡಲು ತನಗಿರುವ ಕಾರಣಗಳನ್ನು ದಾಖಲಿಸತಕ್ಕದ್ದು.

## ಅಧ್ಯಾಯ XXXIV

## ಶಿಕ್ಷೆಯ ಆದೇಶಗಳ ಜಾರಿ, ಅಮಾನತು, ಮಾಫಿ ಮತ್ತು ಶಿಕ್ಷೆಯನ್ನು ಪರಿವರ್ತಿಸುವುದು

### *ಎ.- ಮರಣದಂಡನೆಗಳು*

**453. ಪ್ರಕರಣ 409ರ ಮೇರೆಗೆ ಮಾಡಲಾದ ಆದೇಶದ ಜಾರಿ.-** ಮರಣದಂಡನೆಯನ್ನು ಸ್ಥಿರೀಕರಿಸಲು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ಮೊಕದ್ದಮೆಯಲ್ಲಿ, ಅದರ ಮೇಲೆ ಉಚ್ಚ ನ್ಯಾಯಾಲಯದ ಸ್ಥಿರೀಕರಣದ ಆದೇಶ ಅಥವಾ ಇತರ ಆದೇಶವು ತಲುಪಿದ ಮೇಲೆ, ಸೆಷನ್ ನ್ಯಾಯಾಲಯವು ವಾರಂಟ್ ಹೊರಡಿಸುವ ಮೂಲಕ ಅಥವಾ ಅವಶ್ಯಕವಾಗಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಅಂಥ ಆದೇಶವು ಕಾರ್ಯಗತವಾಗುವಂತೆ ಮಾಡತಕ್ಕದ್ದು.

**454. ಉಚ್ಚ ನ್ಯಾಯಾಲಯವು ವಿಧಿಸಿದ ಮರಣದಂಡನೆಯ ಜಾರಿ.-** ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಉಚ್ಚ ನ್ಯಾಯಾಲಯವು ಮರಣದಂಡನೆಯನ್ನು ವಿಧಿಸಿರುವಾಗ, ಸೆಷನ್ ನ್ಯಾಯಾಲಯವು, ಉಚ್ಚ ನ್ಯಾಯಾಲಯದ ಆದೇಶವು ತಲುಪಿದ ಮೇಲೆ ವಾರಂಟ್ ಹೊರಡಿಸುವ ಮೂಲಕ ಆ ಶಿಕ್ಷೆಯ ಆದೇಶವು ಕಾರ್ಯಗತವಾಗುವಂತೆ ಮಾಡತಕ್ಕದ್ದು.

**455. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಲಾಗಿರುವ ಸಂದರ್ಭದಲ್ಲಿ ಮರಣದಂಡನೆಯ ಜಾರಿಯನ್ನು ಮುಂದೂಡುವುದು.-** (1) ಉಚ್ಚ ನ್ಯಾಯಾಲಯವು ಒಬ್ಬ ವ್ಯಕ್ತಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿರುವಾಗ ಮತ್ತು ಸಂವಿಧಾನದ 134ನೇ ಅನುಚ್ಛೇದದ (1)ನೇ ಖಂಡದ (ಎ) ಅಥವಾ (ಬಿ) ಉಪಖಂಡದ ಮೇರೆಗೆ ಆ ತೀರ್ಪಿನ ಮೇಲೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಲು ಅವಕಾಶವಿರುವಾಗ, ಅಂಥ ಅಪೀಲು ಸಲ್ಲಿಸಲು ಇರುವ ಅವಧಿಯು ಮುಗಿಯುವವರೆಗೆ ಅಥವಾ ಅಪೀಲನ್ನು ಆ ಅವಧಿಯೊಳಗಾಗಿ ಸಲ್ಲಿಸಲಾಗಿದ್ದರೆ, ಅಂಥ ಅಪೀಲು ಇತ್ಯರ್ಥವಾಗುವವರೆಗೆ ಆ ಶಿಕ್ಷೆಯ ಆದೇಶದ ಜಾರಿಯನ್ನು ಮುಂದೂಡುವಂತೆ ಉಚ್ಚ ನ್ಯಾಯಾಲಯವು ಆದೇಶಿಸತಕ್ಕದ್ದು.

(2) ಉಚ್ಚ ನ್ಯಾಯಾಲಯವು ಮರಣದಂಡನೆಯ ಆದೇಶವನ್ನು ಮಾಡಿರುವಾಗ ಅಥವಾ ಅದನ್ನು ಸ್ಥಿರೀಕರಿಸುವಾಗ ಮತ್ತು ಮರಣದಂಡನೆ ಶಿಕ್ಷೆಗೆ ಒಳಗಾದ ವ್ಯಕ್ತಿಯು ಸಂವಿಧಾನದ 132ನೇ ಅನುಚ್ಛೇದದ ಮೇರೆಗೆ ಅಥವಾ 134ನೇ ಅನುಚ್ಛೇದದ (1)ನೇ ಖಂಡದ (ಸಿ) ಉಪಖಂಡದ ಮೇರೆಗೆ ಪ್ರಮಾಣಪತ್ರಕ್ಕಾಗಿ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದಲ್ಲಿ, ಉಚ್ಚ ನ್ಯಾಯಾಲಯವು ಅಂಥ ಮನವಿಯನ್ನು ಇತ್ಯರ್ಥಗೊಳಿಸುವವರೆಗೆ ಅಥವಾ ಅಂಥ ಮನವಿಯ ಮೇಲೆ ಪ್ರಮಾಣಪತ್ರವನ್ನು ನೀಡಲಾಗಿದ್ದರೆ, ಅಂಥ ಪ್ರಮಾಣಪತ್ರಕ್ಕನುಸಾರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಇರುವ ಅವಧಿಯು ಮುಗಿಯುವವರೆಗೆ, ಶಿಕ್ಷೆಯ ಆದೇಶದ ಜಾರಿಯನ್ನು ಮುಂದೂಡುವಂತೆ ಉಚ್ಚ ನ್ಯಾಯಾಲಯವು ಆದೇಶಿಸತಕ್ಕದ್ದು.

(3) ಉಚ್ಚ ನ್ಯಾಯಾಲಯವು ಮರಣದಂಡನೆಯ ಆದೇಶವನ್ನು ಮಾಡಿರುವಾಗ ಅಥವಾ ಅದನ್ನು ಸ್ಥಿರೀಕರಿಸಿರುವಾಗ ಮತ್ತು ಮರಣದಂಡನೆ ಶಿಕ್ಷೆಗೆ ಒಳಗಾದ ವ್ಯಕ್ತಿಯು, ಸಂವಿಧಾನದ 136ನೇ ಅನುಚ್ಛೇದದ ಮೇರೆಗೆ ಅಪೀಲು ಸಲ್ಲಿಸಲು ವಿಶೇಷ ಅನುಮತಿಗಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿರುವನೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ,

ಅಂಥ ಅರ್ಜಿ ಸಲ್ಲಿಸಲು ಅವನಿಗೆ ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಸಾಕೆಂದು ತಾನು ಪರ್ಯಾಲೋಚಿಸುವಂಥ ಅವಧಿಯವರೆಗೆ ಶಿಕ್ಷೆಯ ಆದೇಶದ ಜಾರಿಯನ್ನು ಮುಂದೂಡುವಂತೆ ಉಚ್ಚ ನ್ಯಾಯಾಲಯವು ಆದೇಶಿಸತಕ್ಕದ್ದು.

**456. ಗರ್ಭವತಿ ಮಹಿಳೆಗೆ ವಿಧಿಸಿದ ಮರಣದಂಡನೆ ಶಿಕ್ಷೆಯನ್ನು ಪರಿವರ್ತಿಸುವುದು.-** ಮರಣದಂಡನೆ ಶಿಕ್ಷೆ ವಿಧಿಸಿರುವ ಮಹಿಳೆಯು ಗರ್ಭವತಿಯಾಗಿರುವುದಾಗಿ ಕಂಡುಬಂದರೆ, ಉಚ್ಚ ನ್ಯಾಯಾಲಯವು ಆ ಶಿಕ್ಷೆಯನ್ನು ಆಜೀವ ಕಾರಾವಾಸ ಶಿಕ್ಷೆಗೆ ಪರಿವರ್ತಿಸಬಹುದು.

***ಬಿ.- ಕಾರಾವಾಸ***

**457. ಕಾರಾವಾಸದ ಸ್ಥಳವನ್ನು ಗೊತ್ತುಪಡಿಸುವ ಅಧಿಕಾರ.-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಲಾದುದನ್ನು ಹೊರತುಪಡಿಸಿ, ರಾಜ್ಯ ಸರ್ಕಾರವು, ಈ ಸಂಹಿತೆಯ ಮೇರೆಗೆ ಕಾರಾವಾಸಕ್ಕೆ ಗುರಿಯಾಗುವ ಅಥವಾ ಅಭಿರಕ್ಷೆಗೆ ಒಪ್ಪಿಸಲಾಗುವ ಯಾರೇ ವ್ಯಕ್ತಿಯನ್ನು ಯಾವ ಸ್ಥಳದಲ್ಲಿ ಬಂಧಿಸಿಡತಕ್ಕದ್ದೆಂಬುದನ್ನು ನಿರ್ದೇಶಿಸಬಹುದು.

(2) ಈ ಸಂಹಿತೆಯ ಮೇರೆಗೆ ಕಾರಾವಾಸಕ್ಕೆ ಗುರಿಯಾಗುವ ಅಥವಾ ಅಭಿರಕ್ಷೆಗೆ ಒಪ್ಪಿಸಲಾಗುವ ಯಾರೇ ವ್ಯಕ್ತಿಯನ್ನು ಸಿವಿಲ್ ಜೈಲಿನಲ್ಲಿ ಬಂಧಿಸಿಟ್ಟಿದ್ದರೆ, ಕಾರಾವಾಸದ ಅಥವಾ ಅಭಿರಕ್ಷೆಗೆ ಒಪ್ಪಿಸುವ ಆದೇಶವನ್ನು ಮಾಡುವ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು, ಆ ವ್ಯಕ್ತಿಯನ್ನು ಕ್ರಿಮಿನಲ್ ಕಾರಾಗೃಹಕ್ಕೆ ಸ್ಥಳಾಂತರಿಸತಕ್ಕದ್ದೆಂದು ನಿರ್ದೇಶಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಕ್ರಿಮಿನಲ್ ಜೈಲಿಗೆ ಸ್ಥಳಾಂತರಿಸಿದಾಗ, ಅಲ್ಲಿಂದ ಬಿಡುಗಡೆಯಾದ ಮೇಲೆ ಅವನನ್ನು,-

(ಎ) ಕ್ರಿಮಿನಲ್ ಜೈಲಿಗೆ ಸ್ಥಳಾಂತರಿಸಿದಂದಿನಿಂದ ಮೂರು ವರ್ಷಗಳು ಕಳೆದಿರುವ ಸಂದರ್ಭದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5)ರ 58ನೇ ಪ್ರಕರಣದ ಮೇರೆಗೆ ಸಿವಿಲ್ ಜೈಲಿನಿಂದ ಅವನು ಬಿಡುಗಡೆಯಾಗಿರುವನೆಂದು ಭಾವಿಸತಕ್ಕದ್ದು; ಅಥವಾ

(ಬಿ) ಸಿವಿಲ್ ಜೈಲಿನಲ್ಲಿ ಅವನ ಕಾರಾವಾಸಕ್ಕೆ ಆದೇಶಿಸಿದ ನ್ಯಾಯಾಲಯವು ಸಂದರ್ಭಾನುಸಾರ, ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908 ರ 5)ರ 58ನೇ ಪ್ರಕರಣದ ಮೇರೆಗೆ ಅವನು ಬಿಡುಗಡೆ ಹೊಂದಲು ಹಕ್ಕು ಹೊಂದಿರುವನೆಂದು ಕ್ರಿಮಿನಲ್ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಪ್ರಮಾಣೀಕರಿಸಿದ ಹೊರತು, ಸಿವಿಲ್ ಜೈಲಿಗೆ ವಾಪಸು ಕಳುಹಿಸತಕ್ಕದ್ದು.

**458. ಕಾರಾವಾಸ ಶಿಕ್ಷೆಯ ಜಾರಿ.-** (1) 453ನೇ ಪ್ರಕರಣದಲ್ಲಿ ಉಪಬಂಧಿಸಲಾದ ಮೊಕದ್ದಮೆಗಳಲ್ಲದ ಇತರ ಮೊಕದ್ದಮೆಗಳಲ್ಲಿ ಆಪಾದಿತನಿಗೆ ಆಜೀವ ಕಾರಾವಾಸ ಅಥವಾ ಯಾವುದೇ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಿರುವಲ್ಲಿ, ಶಿಕ್ಷೆಯ ಆದೇಶವನ್ನು ಮಾಡುವ ನ್ಯಾಯಾಲಯವು, ಆತನನ್ನು ಬಂಧಿಸಿಟ್ಟಿರುವ ಅಥವಾ ಇಡಬೇಕಾದ ಜೈಲಿಗೆ ಅಥವಾ ಇತರ ಸ್ಥಳಕ್ಕೆ ವಾರಂಟನ್ನು ಕೂಡಲೇ ಕಳುಹಿಸತಕ್ಕದ್ದು ಮತ್ತು ಆಪಾದಿತನು ಅಂಥ ಜೈಲು ಅಥವಾ ಇತರ ಸ್ಥಳದಲ್ಲಿ ಈಗಾಗಲೇ ಬಂಧಿತನಾಗಿದ್ದ ಹೊರತು, ವಾರಂಟಿನೊಂದಿಗೆ ಅವನನ್ನು ಅಂಥ ಜೈಲು ಅಥವಾ ಇತರ ಸ್ಥಳಕ್ಕೆ ಕಳುಹಿಸತಕ್ಕದ್ದು:

ಪರಂತು, ನ್ಯಾಯಾಲಯದ ಕಾರ್ಯಕಲಾಪವು ಮುಕ್ತಾಯವಾಗುವವರೆಗೆ ಆಪಾದಿತನಿಗೆ ಕಾರಾವಾಸದ ಶಿಕ್ಷೆಯನ್ನು ವಿಧಿಸಿರುವಲ್ಲಿ, ಜೈಲಿಗೆ ಕಳುಹಿಸುವುದಕ್ಕಾಗಿ ವಾರಂಟ್ ಸಿದ್ಧಪಡಿಸುವುದು ಅಥವಾ ಅದನ್ನು ಕಳುಹಿಸುವುದು ಅವಶ್ಯಕವಾಗಿರತಕ್ಕದ್ದಲ್ಲ ಮತ್ತು ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಸ್ಥಳದಲ್ಲಿ ಆಪಾದಿತನನ್ನು ಬಂಧಿಸಿಡಬಹುದು.

(2) (1)ನೇ ಉಪಪ್ರಕರಣದಲ್ಲಿ ನಮೂದಿಸಲಾದಂತೆ ಅಂಥ ಕಾರಾವಾಸದ ಶಿಕ್ಷೆಯನ್ನು ಆಪಾದಿತನಿಗೆ ವಿಧಿಸಿದಾಗ ನ್ಯಾಯಾಲಯದಲ್ಲಿ ಅವನು ಹಾಜರಿರದಿದ್ದರೆ, ಅವನನ್ನು ಬಂಧಿಸಿಡಬೇಕಾದ ಜೈಲಿಗೆ ಅಥವಾ ಇತರ ಸ್ಥಳಕ್ಕೆ ಕಳುಹಿಸುವ ಉದ್ದೇಶಕ್ಕಾಗಿ ಅವನನ್ನು ದಸ್ತಗಿರಿ ಮಾಡಲು ನ್ಯಾಯಾಲಯವು ವಾರಂಟ್ ಹೊರಡಿಸತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ, ಅವನು ದಸ್ತಗಿರಿಯಾದ ದಿನಾಂಕದಿಂದ ಶಿಕ್ಷೆಯು ಪ್ರಾರಂಭವಾಗತಕ್ಕದ್ದು.

**459. ವಾರಂಟ್ ಜಾರಿ ಮಾಡಲು ನಿರ್ದೇಶನ.-** ಕಾರಾವಾಸದ ಶಿಕ್ಷೆಯ ಜಾರಿಗಾಗಿನ ಪ್ರತಿಯೊಂದು ವಾರಂಟನ್ನು ಕೈದಿಯನ್ನು ಇಟ್ಟಿರುವ ಅಥವಾ ಬಂಧಿಸಿಡಬೇಕಾದ ಜೈಲು ಅಥವಾ ಇತರ ಸ್ಥಳದ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ನಿರ್ದೇಶಿಸತಕ್ಕದ್ದು.

**460. ವಾರಂಟನ್ನು ಯಾರಿಗೆ ಒಪ್ಪಿಸುವುದು.-** ಕೈದಿಯನ್ನು ಜೈಲಿನಲ್ಲಿ ಬಂಧಿಸಿಡಬೇಕಾದಾಗ, ಆ ವಾರಂಟನ್ನು ಜೈಲಿನ ಅಧಿಕಾರಿಗೆ ಒಪ್ಪಿಸತಕ್ಕದ್ದು.

***ಸಿ.- ಜುಲ್ಮಾನೆಯ ವಸೂಲಿ***

**461. ಜುಲ್ಮಾನೆ ವಸೂಲಿಗೆ ವಾರಂಟ್.-** (1) ಅಪರಾಧಿಗೆ ಜುಲ್ಮಾನೆಯನ್ನು ವಿಧಿಸಿರುವಾಗ, ಆದರೆ ಅಂಥ ಯಾವುದೇ ಸಂದಾಯವನ್ನು ಮಾಡದಿರುವಾಗ, ಶಿಕ್ಷೆಯ ಆದೇಶವನ್ನು ಮಾಡುವ ನ್ಯಾಯಾಲಯವು ಜುಲ್ಮಾನೆಯ ವಸೂಲಿಗಾಗಿ ಈ ಕೆಳಕಂಡ ಯಾವುದಾದರೂ ಒಂದು ಅಥವಾ ಎರಡೂ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು ಎಂದರೆ, ಅದು,-

(ಎ) ಅಪರಾಧಿಗೆ ಸೇರಿದ ಯಾವುದೇ ಚರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಮೊಬಲಗನ್ನು ವಸೂಲು ಮಾಡಲು ವಾರಂಟ್ ಹೊರಡಿಸಬಹುದು;

(ಬಿ) ಜುಲ್ಮಾನೆ ಸಂದಾಯ ಮಾಡಲು ತಪ್ಪಿದ ವ್ಯಕ್ತಿಯ ಚರ ಅಥವಾ ಸ್ಥಿರ ಸ್ವತ್ತಿನಿಂದ ಅಥವಾ ಎರಡರಿಂದಲೂ ಭೂಕಂದಾಯದ ಬಾಕಿಯೆಂಬಂತೆ ಆ ಮೊಬಲಗನ್ನು ವಸೂಲು ಮಾಡಲು ಜಿಲ್ಲಾಧಿಕಾರಿಯನ್ನು (ಜಿಲ್ಲಾ ಕಲೆಕ್ಟರ್) ಅಧಿಕೃತಗೊಳಿಸಿ ವಾರಂಟ್ ಹೊರಡಿಸಬಹುದು:

ಪರಂತು, ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ, ಅಪರಾಧಿಯನ್ನು ಕಾರಾವಾಸದಲ್ಲಿಡತಕ್ಕದ್ದೆಂದು ಆ ಶಿಕ್ಷೆಯ ಆದೇಶವು ನಿರ್ದೇಶಿಸಿದರೆ ಮತ್ತು ಹಾಗೆ ತಪ್ಪಿದ್ದಕ್ಕಾಗಿ ಅಂಥ ಅಪರಾಧಿಯು ಆ ಇಡೀ ಕಾರಾವಾಸ ಶಿಕ್ಷೆಯನ್ನು ಅನುಭವಿಸಿದರೆ, ಯಾವುದೇ ನ್ಯಾಯಾಲಯವು, ತಾನು ಲಿಖಿತದಲ್ಲಿ ವಿಶೇಷ ಕಾರಣಗಳನ್ನು ದಾಖಲಿಸಿ, ತಾನು ಹಾಗೆ ಮಾಡುವುದು ಅವಶ್ಯಕವೆಂದು ಪರ್ಯಾಲೋಚಿಸಿದ ಹೊರತು ಅಥವಾ 395ನೇ ಪ್ರಕರಣದ ಮೇರೆಗೆ ವೆಚ್ಚಗಳನ್ನು ಅಥವಾ ಪರಿಹಾರವನ್ನು ಜುಲ್ಮಾನೆ ಮೊಬಲಗಿನಿಂದ ಸಂದಾಯ ಮಾಡಬೇಕೆಂದು ಆದೇಶವನ್ನು ಮಾಡಿರುವ ಹೊರತು, ಅಂಥ ವಾರಂಟನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ವಾರಂಟ್‍ಗಳನ್ನು ಜಾರಿ ಮಾಡಬೇಕಾದ ರೀತಿಯನ್ನು ವಿನಿಯಮಿಸುವುದಕ್ಕಾಗಿ ಮತ್ತು ಅಂಥ ವಾರಂಟನ್ನು ಜಾರಿ ಮಾಡಿ ಜಪ್ತಿ ಮಾಡಲಾದ ಯಾವುದೇ ಸ್ವತ್ತಿನ ಬಗ್ಗೆ ಅಪರಾಧಿಯಲ್ಲದ ಯಾರೇ ವ್ಯಕ್ತಿಯು ಮಾಡಿದ ಯಾವುದೇ ಕ್ಲೇಮುಗಳ ಕ್ಷಿಪ್ರ ನಿರ್ಧಾರಕ್ಕಾಗಿ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

(3) (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನ್ಯಾಯಾಲಯವು ಜಿಲ್ಲಾಧಿಕಾರಿಗೆ ವಾರಂಟ್ ಹೊರಡಿಸಿರುವಲ್ಲಿ, ಆ ಜಿಲ್ಲಾಧಿಕಾರಿಯು ಭೂಕಂದಾಯದ ಬಾಕಿಗಳ ವಸೂಲಿಗೆ ಸಂಬಂಧಿಸಿದ ಕಾನೂನಿಗನುಸಾರವಾಗಿ, ಅಂಥ ವಾರಂಟ್ ಅಂಥ ಕಾನೂನಿನ ಮೇರೆಗೆ ಹೊರಡಿಸಲಾದ ಪ್ರಮಾಣಪತ್ರವೆಂಬಂತೆ, ಆ ಮೊಬಲಗನ್ನು ವಸೂಲು ಮಾಡತಕ್ಕದ್ದು:

ಪರಂತು, ಅಪರಾಧಿಯನ್ನು ದಸ್ತಗಿರಿ ಅಥವಾ ಕಾರಾಗೃಹದಲ್ಲಿ ತಡೆಹಿಡಿದಿಡುವ ಮೂಲಕ ಅಂಥ ಯಾವುದೇ ವಾರಂಟನ್ನು ಜಾರಿ ಮಾಡತಕ್ಕದ್ದಲ್ಲ.

**462. ಅಂಥ ವಾರಂಟಿನ ಪರಿಣಾಮ.-** 461ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಯಾವುದೇ ನ್ಯಾಯಾಲಯವು ಹೊರಡಿಸಿದ ವಾರಂಟನ್ನು ಅಂಥ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಜಾರಿ ಮಾಡಬಹುದು ಮತ್ತು ಅಂಥ ಸ್ವತ್ತು ಯಾರ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಇರುತ್ತದೋ ಆ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಆ ವಾರಂಟ್ ಹಿಂಬರಹ ಹೊಂದಿದಾಗ, ಅದು ಅಂಥ ಅಧಿಕಾರವ್ಯಾಪ್ತಿಯ ಹೊರಗೆ ಅಂಥ ಯಾವುದೇ ಸ್ವತ್ತಿನ ಜಫ್ತಿ ಮತ್ತು ಮಾರಾಟವನ್ನು ಅಧಿಕೃತಗೊಳಿಸತಕ್ಕದ್ದು.

**463. ಜುಲ್ಮಾನೆಯ ವಸೂಲಿಗಾಗಿ, ಈ ಸಂಹಿತೆಯು ವ್ಯಾಪ್ತವಾಗದ ಯಾವುದೇ ರಾಜ್ಯಕ್ಷೇತ್ರದಲ್ಲಿರುವ ನ್ಯಾಯಾಲಯವು ಹೊರಡಿಸಿದ ವಾರಂಟ್.-** ಈ ಸಂಹಿತೆಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಸಂಹಿತೆಯು ವ್ಯಾಪ್ತವಾಗದ ಯಾವುದೇ ರಾಜ್ಯಕ್ಷೇತ್ರದಲ್ಲಿನ ಕ್ರಿಮಿನಲ್ ನ್ಯಾಯಾಲಯವು ಅಪರಾಧಿಗೆ ಜುಲ್ಮಾನೆಯನ್ನು ವಿಧಿಸಿದಾಗ ಮತ್ತು ಶಿಕ್ಷೆಯ ಆದೇಶ ಮಾಡಿದ ನ್ಯಾಯಾಲಯವು, ಈ ಸಂಹಿತೆಯು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳಲ್ಲಿರುವ ಜಿಲ್ಲೆಯ ಜಿಲ್ಲಾಧಿಕಾರಿಗೆ, ಆ ಮೊಬಲಗನ್ನು ಭೂಕಂದಾಯದ ಬಾಕಿಯೆಂಬಂತೆ ವಸೂಲು ಮಾಡಲು ಅವನನ್ನು ಅಧಿಕೃತಗೊಳಿಸಿ ವಾರಂಟನ್ನು ಹೊರಡಿಸಿದಾಗ, ಅಂಥ ವಾರಂಟನ್ನು ಈ ಸಂಹಿತೆಯ ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳಲ್ಲಿರುವ ನ್ಯಾಯಾಲಯವು 461ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಹೊರಡಿಸಿದ ವಾರಂಟ್ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಸದರಿ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳು ಅಂಥ ವಾರಂಟಿನ ಜಾರಿಯ ಬಗ್ಗೆಯೂ ತದನುಸಾರವಾಗಿ ಅನ್ವಯವಾಗತಕ್ಕದ್ದು.

**464. ಕಾರಾವಾಸ ಶಿಕ್ಷೆಯ ಜಾರಿಯ ಅಮಾನತು.-** (1) ಅಪರಾಧಿಗೆ ಕೇವಲ ಜುಲ್ಮಾನೆಯ ಶಿಕ್ಷೆಯನ್ನು ಮತ್ತು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದರೆ ಕಾರಾವಾಸ ಶಿಕ್ಷೆಯನ್ನು ವಿಧಿಸಿರುವಾಗ ಮತ್ತು ಜುಲ್ಮಾನೆಯನ್ನು ಕೂಡಲೇ ಸಂದಾಯ ಮಾಡದಿರುವಾಗ, ನ್ಯಾಯಾಲಯವು,-

(ಎ) ಆದೇಶ ಮಾಡಿದ ದಿನಾಂಕದಿಂದ ಮೂವತ್ತು ದಿನಗಳಿಗೆ ಮೀರದ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಜುಲ್ಮಾನೆಯನ್ನು ಪೂರ್ಣವಾಗಿ ಸಂದಾಯ ಮಾಡತಕ್ಕದ್ದೆಂದು ಅಥವಾ ಎರಡು ಅಥವಾ ಮೂರು ಕಂತುಗಳಲ್ಲಿ ಮತ್ತು ಅದರ ಮೊದಲ ಕಂತನ್ನು ಆದೇಶ ಮಾಡಿದ ದಿನಾಂಕದಿಂದ ಮೂವತ್ತು ದಿನಗಳಿಗೆ ಮೀರದ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಮತ್ತು ಉಳಿದಿದ್ದನ್ನು ಅಥವಾ ಉಳಿದವುಗಳನ್ನು, ಸಂದರ್ಭಾನುಸಾರ, ಮೂವತ್ತು ದಿನಗಳಿಗೆ ಮೀರದ ಅಂತರದ ಅವಧಿಯಲ್ಲಿ ಅಥವಾ ಅವಧಿಗಳಲ್ಲಿ ಸಂದಾಯ ಮಾಡತಕ್ಕದ್ದೆಂದು ಆದೇಶಿಸಬಹುದು.

(ಬಿ) ಯಾವ ದಿನಾಂಕ ಅಥವಾ ದಿನಾಂಕಗಳಂದು ಅಥವಾ ಅದಕ್ಕೆ ಮುಂಚೆ, ಸಂದರ್ಭಾನುಸಾರ, ಜುಲ್ಮಾನೆಯ ಅಥವಾ ಅದರ ಕಂತುಗಳ ಸಂದಾಯವನ್ನು ಮಾಡಬೇಕಾಗಿದೆಯೋ ಆ ದಿನಾಂಕ ಅಥವಾ ದಿನಾಂಕಗಳಂದು ನ್ಯಾಯಾಲಯದ ಮುಂದೆ ಅವನು ಹಾಜರಾಗುವ ಷರತ್ತಿನ ಮೇಲೆ, ನ್ಯಾಯಾಲಯವು ಸೂಕ್ತವೆಂದು

ಭಾವಿಸುವಂತೆ, ಬಂಧಪತ್ರವನ್ನು ಅಥವಾ ಜಾಮೀನು ಬಂಧಪತ್ರವನ್ನು ಅಪರಾಧಿಯು ಬರೆದುಕೊಟ್ಟ ಮೇಲೆ, ಕಾರಾವಾಸದ ಶಿಕ್ಷೆಯ ಜಾರಿಯನ್ನು ಅಮಾನತುಗೊಳಿಸಿ, ಅಪರಾಧಿಯನ್ನು ಬಿಡುಗಡೆ ಮಾಡಬಹುದು ಮತ್ತು ಆದೇಶದ ಮೇರೆಗೆ ಯಾವ ದಿನಾಂಕದಂದು, ಸಂದರ್ಭಾನುಸಾರ, ಜುಲ್ಮಾನೆಯ ಮೊಬಲಗು ಅಥವಾ ಯಾವುದೇ ಕಂತು ಸಂದಾಯವಾಗಬೇಕಿತ್ತೋ ಆ ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಅದು ವಸೂಲಾಗದಿದ್ದರೆ, ಕಾರಾವಾಸದ ಶಿಕ್ಷೆಯ ಆದೇಶವನ್ನು ಕೂಡಲೇ ಜಾರಿ ಮಾಡಲು ನ್ಯಾಯಾಲಯವು ನಿರ್ದೇಶಿಸಬಹುದು.

(2) ಯಾವ ಹಣವು ವಸೂಲಾಗದಿದ್ದರೆ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದೋ ಆ ಹಣದ ಸಂದಾಯಕ್ಕಾಗಿ ಆದೇಶವನ್ನು ಮಾಡಲಾಗಿರುವ ಯಾವುದೇ ಸಂದರ್ಭಕ್ಕೂ, ಹಣವು ಕೂಡಲೇ ಸಂದಾಯವಾಗಿರದ ಸಂದರ್ಭಕ್ಕೂ (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು ಮತ್ತು ಯಾರ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು, ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ಬಂಧಪತ್ರವನ್ನು ಬರೆದುಕೊಡಲು ಅಗತ್ಯಪಡಿಸಿದಾಗ, ಹಾಗೆ ಮಾಡಲು ತಪ್ಪಿದರೆ, ನ್ಯಾಯಾಲಯವು ಕಾರಾವಾಸದ ಶಿಕ್ಷೆಯನ್ನು ಕೂಡಲೇ ವಿಧಿಸಬಹುದು.

***ಡಿ.- ಜಾರಿಯ ಬಗ್ಗೆ ಸಾಮಾನ್ಯ ಉಪಬಂಧಗಳು***

**465. ವಾರಂಟನ್ನು ಯಾರು ಹೊರಡಿಸಬಹುದು.-** ಶಿಕ್ಷೆಯ ಆದೇಶದ ಜಾರಿಗಾಗಿ ಹೊರಡಿಸುವ ಪ್ರತಿಯೊಂದು ವಾರಂಟನ್ನು, ಶಿಕ್ಷೆಯನ್ನು ವಿಧಿಸಿದ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟನು ಅಥವಾ ಅವನ ಪದದ-ಉತ್ತರಾಧಿಕಾರಿಯು ಹೊರಡಿಸಬಹುದು.

**466. ತಪ್ಪಿಸಿಕೊಂಡಿರುವ ನಿರ್ಣೀತ ಅಪರಾಧಿಯ ಮೇಲೆ ಶಿಕ್ಷೆಯ ಆದೇಶವು ಯಾವಾಗ ಜಾರಿಯಾಗುತ್ತದೆ.-** (1) ತಪ್ಪಿಸಿಕೊಂಡ ನಿರ್ಣೀತ ಅಪರಾಧಿಗೆ ಈ ಸಂಹಿತೆಯ ಮೇರೆಗೆ ಮರಣದಂಡನೆ, ಆಜೀವ ಕಾರಾವಾಸ ಅಥವಾ ಜುಲ್ಮಾನೆಯನ್ನು ವಿಧಿಸಿರುವಾಗ, ಅಂಥ ಶಿಕ್ಷೆಯ ಆದೇಶವು, ಈ ಹಿಂದಿನ ಉಪಬಂಧಗಳಿಗೊಳಪಟ್ಟು ಕೂಡಲೇ ಜಾರಿಯಾಗತಕ್ಕದ್ದು.

(2) ತಪ್ಪಿಸಿಕೊಂಡ ನಿರ್ಣೀತ ಅಪರಾಧಿಗೆ ಯಾವುದೇ ಅವಧಿಯ ಕಾರಾವಾಸದ ಶಿಕ್ಷೆಯನ್ನು ಈ ಸಂಹಿತೆಯ ಮೇರೆಗೆ ವಿಧಿಸಿರುವಾಗ,-

(ಎ) ಅಂಥ ಶಿಕ್ಷೆಯ ಆದೇಶವು ಅಂಥ ಅಪರಾಧಿಯು ತಪ್ಪಿಸಿಕೊಂಡಾಗ ಅನುಭವಿಸುತ್ತಿದ್ದುದಕ್ಕಿಂತ ಕಠಿಣ ಸ್ವರೂಪದ್ದಾಗಿದ್ದರೆ, ಆ ಹೊಸ ಶಿಕ್ಷೆಯ ಆದೇಶವು ಕೂಡಲೇ ಜಾರಿಯಾಗತಕ್ಕದ್ದು;

(ಬಿ) ಅಂಥ ಶಿಕ್ಷೆಯ ಆದೇಶವು ಅಂಥ ಅಪರಾಧಿಯು ತಪ್ಪಿಸಿಕೊಂಡಾಗ ಅನುಭವಿಸುತ್ತಿದ್ದುದಕ್ಕಿಂತ ಕಠಿಣ ಸ್ವರೂಪದ್ದಲ್ಲವಾದರೆ, ಅವನು ತಪ್ಪಿಸಿಕೊಂಡಾಗ, ಹಿಂದಿನ ಶಿಕ್ಷೆಯ ಆದೇಶದ ಪ್ರಕಾರ, ಅನುಭವಿಸದೆ ಉಳಿದಿರುವ ಅವಧಿಗೆ ಸಮನಾದ ಕಾರಾವಾಸವನ್ನು ಅನುಭವಿಸಿದ ತರುವಾಯ ಹೊಸ ಶಿಕ್ಷೆಯ ಆದೇಶವು ಜಾರಿಯಾಗತಕ್ಕದ್ದು.

(3) (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಕಠಿಣ ಕಾರಾವಾಸದ ಶಿಕ್ಷೆಯು ಸಾದಾ ಕಾರಾವಾಸದ ಶಿಕ್ಷೆಗಿಂತ ಕಠಿಣವೆಂದು ಭಾವಿಸತಕ್ಕದ್ದು.

**467. ಇನ್ನೊಂದು ಅಪರಾಧಕ್ಕಾಗಿ ಈಗಾಗಲೇ ಶಿಕ್ಷೆಗೆ ಒಳಗಾಗಿರುವ ಅಪರಾಧಿಯ ಮೇಲೆ ಶಿಕ್ಷೆಯ ಆದೇಶ.-** (1) ಕಾರಾವಾಸದ ಶಿಕ್ಷೆಯನ್ನು ಈಗಾಗಲೇ ಅನುಭವಿಸುತ್ತಿರುವ ವ್ಯಕ್ತಿಗೆ ತರುವಾಯದ ಅಪರಾಧ ನಿರ್ಣಯದ ಮೇಲೆ ಕಾರಾವಾಸವನ್ನು ಅಥವಾ ಆಜೀವ ಕಾರಾವಾಸವನ್ನು ವಿಧಿಸಿದಾಗ, ತರುವಾಯದ ಶಿಕ್ಷೆಯನ್ನು ಅಂಥ ಪೂರ್ವ ಶಿಕ್ಷೆಯೊಂದಿಗೆ

ಒಟ್ಟಿಗೇ ಅನುಭವಿಸತಕ್ಕದ್ದೆಂದು ನ್ಯಾಯಾಲಯವು ನಿರ್ದೇಶಿಸಿದ ಹೊರತು, ಅವನಿಗೆ ಮೊದಲು ವಿಧಿಸಿದ ಕಾರಾವಾಸವು ಮುಕ್ತಾಯವಾದ ಕೂಡಲೇ ಅಂಥ ಕಾರಾವಾಸ ಅಥವಾ ಆಜೀವ ಕಾರಾವಾಸವು ಪ್ರಾರಂಭವಾಗತಕ್ಕದ್ದು:

ಪರಂತು, ಭದ್ರತೆಯನ್ನು ಒದಗಿಸಲು ತಪ್ಪಿದ್ದಕ್ಕಾಗಿ 141ನೇ ಪ್ರಕರಣದ ಮೇರೆಗಿನ ಆದೇಶದ ಮೂಲಕ ಕಾರಾವಾಸ ಶಿಕ್ಷೆಯನ್ನು ವಿಧಿಸಲಾಗಿರುವ ವ್ಯಕ್ತಿಗೆ, ಅಂಥ ಶಿಕ್ಷೆಯನ್ನು ಅವನು ಅನುಭವಿಸುತ್ತಿರುವಾಗ, ಅಂಥ ಆದೇಶವನ್ನು ಮಾಡುವ ಮೊದಲು ಮಾಡಿದ ಅಪರಾಧಕ್ಕಾಗಿ ಕಾರಾವಾಸದ ಶಿಕ್ಷೆಯನ್ನು ವಿಧಿಸಿದಾಗ ಎರಡನೇ ಶಿಕ್ಷೆಯ ಆದೇಶವು ಕೂಡಲೇ ಪ್ರಾರಂಭವಾಗತಕ್ಕದ್ದು.

(2) ಆಜೀವ ಕಾರಾವಾಸದ ಶಿಕ್ಷೆಯನ್ನು ಈಗಾಗಲೇ ಅನುಭವಿಸುತ್ತಿರುವ ವ್ಯಕ್ತಿಗೆ ತರುವಾಯದ ಅಪರಾಧ ನಿರ್ಣಯಕ್ಕಾಗಿ ಯಾವುದೇ ಅವಧಿಯ ಕಾರಾವಾಸ ಅಥವಾ ಆಜೀವ ಕಾರಾವಾಸವನ್ನು ವಿಧಿಸಿದಾಗ, ಅಂಥ ಮೊದಲಿನ ಶಿಕ್ಷೆಯ ಆದೇಶದೊಂದಿಗೆ ತರುವಾಯದ ಶಿಕ್ಷೆಯ ಆದೇಶವನ್ನು ಅವನು ಅನುಭವಿಸತಕ್ಕದ್ದು.

**468. ಕಾರಾವಾಸದ ಶಿಕ್ಷೆಯ ಆದೇಶದಲ್ಲಿ ಆಪಾದಿತನನ್ನು ತಡೆಹಿಡಿದಿರಿಸಿರುವ ಅವಧಿಯನ್ನು ಕಳೆಯುವುದು.-** ಆಪಾದಿತ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ಕಾರಾವಾಸ ಶಿಕ್ಷೆಯಾಗಿರದ, ಯಾವುದೇ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಿರುವಾಗ, ಅದೇ ಮೊಕದ್ದಮೆಯ ತನಿಖೆ, ವಿಚಾರಣೆ ಅಥವಾ ಅಧಿವಿಚಾರಣೆಯ ಕಾಲದಲ್ಲಿ ಮತ್ತು ಅಂಥ ಅಪರಾಧ ನಿರ್ಣಯಕ್ಕೆ ಮುನ್ನ ಆತನನ್ನು ತಡೆಹಿಡಿದಿರಿಸಲಾಗಿದ್ದ ಅವಧಿಯನ್ನು, ಯಾವುದಾದರೂ ಇದ್ದರೆ ಅಂಥ ಅಪರಾಧ ನಿರ್ಣಯದ ಮೇಲೆ ಅವನಿಗೆ ವಿಧಿಸಿದ ಕಾರಾವಾಸದ ಅವಧಿಯಲ್ಲಿ ಕಳೆಯತಕ್ಕದ್ದು ಮತ್ತು ಅಂಥ ಅಪರಾಧ ನಿರ್ಣಯದ ಮೇಲೆ ಅಂಥ ವ್ಯಕ್ತಿಯು ಅನುಭವಿಸಬೇಕಾಗಿರುವ ಕಾರಾವಾಸವು ಅವನಿಗೆ ವಿಧಿಸಿದ ಕಾರಾವಾಸದ ಉಳಿದ ಅವಧಿ ಏನಾದರೂ ಇದ್ದರೆ ಅದಕ್ಕೆ ಸೀಮಿತವಾಗಿರತಕ್ಕದ್ದು:

ಪರಂತು, 475ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಮೊಕದ್ದಮೆಗಳಲ್ಲಿ ಹೇಳಿರುವ ಹದಿನಾಲ್ಕು ವರ್ಷದ ಅವಧಿಯಲ್ಲಿ ಅವನನ್ನು ತಡೆಹಿಡಿದಿರಿಸಲಾಗಿದ್ದ ಅವಧಿಯನ್ನು ಕಳೆಯತಕ್ಕದ್ದು.

**469. ಉಳಿಸುವಿಕೆ.-** (1) 466ನೇ ಅಥವಾ 467ನೇ ಪ್ರಕರಣದಲ್ಲಿರುವುದು ಯಾವುದೂ, ಯಾರೇ ವ್ಯಕ್ತಿಗೆ, ಅವನ ಹಿಂದಿನ ಅಥವಾ ತರುವಾಯದ ಅಪರಾಧ ನಿರ್ಣಯದ ಮೇಲೆ ಅವನು ಗುರಿಯಾಗಬಹುದಾದ ದಂಡನೆಯ ಯಾವುದೇ ಭಾಗಕ್ಕೆ ವಿನಾಯತಿ ನೀಡತಕ್ಕದ್ದಲ್ಲ.

(2) ಮುಖ್ಯವಾದ ಕಾರಾವಾಸದ ಶಿಕ್ಷೆಯ ಆದೇಶದ ಜೊತೆಗೆ, ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ಕಾರಾವಾಸವನ್ನು ವಿಧಿಸಿದಾಗ ಮತ್ತು ಆ ಶಿಕ್ಷೆಯನ್ನು ಅನುಭವಿಸುತ್ತಿರುವ ವ್ಯಕ್ತಿಯು ಅದು ಜಾರಿಯಾದ ತರುವಾಯ ಮತ್ತಷ್ಟು ಮುಖ್ಯ ಕಾರಾವಾಸದ ಶಿಕ್ಷೆಯನ್ನು ಅಥವಾ ಶಿಕ್ಷೆಗಳನ್ನು ಅನುಭವಿಸಬೇಕಾಗಿದ್ದರೆ, ಆ ಮತ್ತಷ್ಟು ಶಿಕ್ಷೆ ಅಥವಾ ಶಿಕ್ಷೆಗಳನ್ನು ಆ ವ್ಯಕ್ತಿಯು ಅನುಭವಿಸುವವರೆಗೆ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ವಿಧಿಸಿದ ಕಾರಾವಾಸದ ಶಿಕ್ಷೆಯನ್ನು ಜಾರಿಗೊಳಿಸತಕ್ಕದ್ದಲ್ಲ.

**470. ಶಿಕ್ಷೆಯ ಆದೇಶವು ಜಾರಿಯಾದ ಮೇಲೆ ವಾರಂಟಿನ ವಾಪಸಾತಿ.-** ಶಿಕ್ಷೆಯ ಆದೇಶವನ್ನು ಪೂರ್ಣವಾಗಿ ಜಾರಿಗೊಳಿಸಿದ ಮೇಲೆ, ಅದನ್ನು ಜಾರಿಗೊಳಿಸಿದ ಅಧಿಕಾರಿಯು ಆ ಶಿಕ್ಷೆಯ ಆದೇಶವನ್ನು ಜಾರಿ ಮಾಡಿದ ರೀತಿಯನ್ನು ಪ್ರಮಾಣೀಕರಿಸಿ, ತನ್ನ ಸಹಿಯೊಡನೆ ಹಿಂಬರಹ ಮಾಡಿ, ಅದನ್ನು ಹೊರಡಿಸಿದ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸತಕ್ಕದ್ದು.

**471. ಸಂದಾಯ ಮಾಡಲು ಆದೇಶಿತವಾದ ಹಣವನ್ನು ಜುಲ್ಮಾನೆಯೆಂಬಂತೆ ವಸೂಲು ಮಾಡುವುದು.-** ಈ ಸಂಹಿತೆಯ ಮೇರೆಗೆ ಮಾಡಲಾದ ಯಾವುದೇ ಆದೇಶದ ಕಾರಣದಿಂದ ಸಂದಾಯ ಮಾಡಬೇಕಾದ ಮತ್ತು ವಸೂಲು ಮಾಡಬೇಕಾದ ವಿಧಾನವನ್ನು ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರದ ಯಾವುದೇ (ಜುಲ್ಮಾನೆಯಲ್ಲದ) ಹಣವನ್ನು ಅದನ್ನು ಜುಲ್ಮಾನೆಯೆಂಬಂತೆ ವಸೂಲು ಮಾಡತಕ್ಕದ್ದು:

ಪರಂತು, 461ನೇ ಪ್ರಕರಣವನ್ನು 400ನೇ ಪ್ರಕರಣದ ಮೇರೆಗಿನ ಆದೇಶಕ್ಕೆ ಅದನ್ನು ಅನ್ವಯಿಸುವಲ್ಲಿ, ಈ ಪ್ರಕರಣದ ಕಾರಣದಿಂದ, 461ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದಲ್ಲಿನ "395ನೇ ಪ್ರಕರಣದ ಮೇರೆಗೆ" ಎಂಬ ಪದಗಳು ಹಾಗೂ ಅಂಕಿಗಳ ತರುವಾಯ, "ಅಥವಾ 400ನೇ ಪ್ರಕರಣದ ಮೇರೆಗೆ ಖರ್ಚುಗಳ ಸಂದಾಯದ ಆದೇಶ", ಎಂಬ ಪದಗಳು ಹಾಗೂ ಅಂಕಿಗಳನ್ನು ಸೇರಿಸಲಾಗಿದೆ ಎಂಬಂತೆ ಅರ್ಥೈಸತಕ್ಕದ್ದು.

***ಇ- ಶಿಕ್ಷೆಯ ಆದೇಶಗಳ ಅಮಾನತು, ಮಾಫಿ ಮತ್ತು ಶಿಕ್ಷೆಯನ್ನು ಪರಿವರ್ತಿಸುವುದು***

**472. ಮರಣದಂಡನೆ ಮೊಕದ್ದಮೆಗಳಲ್ಲಿ ಕ್ಷಮಾದಾನ ಅರ್ಜಿ.-** (1) ಮರಣದಂಡನೆ ಶಿಕ್ಷೆಗೆ ಒಳಗಾಗಿರುವ ಯಾರೇ ನಿರ್ಣೀತ ಅಪರಾಧಿ ಅಥವಾ ಆತನ ಕಾನೂನುಸಮ್ಮತ ವಾರಸುದಾರ ಅಥವಾ ಆತನ ಯಾರೇ ಇತರ ಸಂಬಂಧಿ ಕ್ಷಮಾದಾನ ಅರ್ಜಿಯನ್ನು ಸಲ್ಲಿಸದಿದ್ದರೆ, ಜೈಲಿನ ಅಧೀಕ್ಷಕನು,-

(i) ಸರ್ವೋಚ್ಚ ನ್ಯಾಯಾಲಯವು ಅಪೀಲನ್ನು ಪುನರೀಕ್ಷಣೆ ಅಥವಾ ಅಪೀಲು ಸಲ್ಲಿಸಲು ವಿಶೇಷ ಅನುಮತಿಯನ್ನು ವಜಾಗೊಳಿಸಿರುವ ಬಗ್ಗೆ ಮಾಹಿತಿ ನೀಡಿರುವಾಗ; ಅಥವಾ

(ii) ಉಚ್ಚ ನ್ಯಾಯಾಲಯವು ಮರಣದಂಡನೆ ಶಿಕ್ಷೆಯನ್ನು ಸ್ಥಿರೀಕರಿಸಿರುವ ದಿನಾಂಕದ ಬಗ್ಗೆ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಅಪೀಲು ಅಥವಾ ಅಪೀಲು ಸಲ್ಲಿಸಲು ವಿಶೇಷ ಅನುಮತಿಯನ್ನು ದಾಖಲಿಸುವುದಕ್ಕೆ ಪುರಸ್ಕರಿಸಿದ ಕಾಲಾವಧಿಯು ಮುಕ್ತಾಯಗೊಂಡಿರುವ ಮಾಹಿತಿಯನ್ನು ನೀಡಿರುವಾಗ

- ಸಂವಿಧಾನದ 72ನೇ ಅನುಚ್ಛೇದದ ಮೇರೆಗೆ ಭಾರತದ ರಾಷ್ಟ್ರಪತಿಗೆ ಅಥವಾ ಸಂವಿಧಾನದ 161ನೇ ಅನುಚ್ಛೇದದ ಮೇರೆಗೆ ರಾಜ್ಯಪಾಲನಿಗೆ ಕ್ಷಮಾದಾನ ಅರ್ಜಿಯನ್ನು ಮೂವತ್ತು ದಿನಗಳೊಳಗಾಗಿ ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಪ್ರಾರಂಭದಲ್ಲಿ ರಾಜ್ಯಪಾಲನಿಗೆ ಸಲ್ಲಿಸತಕ್ಕದ್ದು, ರಾಜ್ಯಪಾಲನು ಅಂಥ ಅರ್ಜಿಯನ್ನು ತಿರಸ್ಕರಿಸಿದ ಅಥವಾ ವಿಲೆ ಮಾಡಿದ ತರುವಾಯ, ಅಂಥ ಅರ್ಜಿಯನ್ನು ತಿರಸ್ಕರಿಸಿದ ಅಥವಾ ವಿಲೆ ಮಾಡಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ರಾಷ್ಟ್ರಪತಿಗೆ ಸಲ್ಲಿಸತಕ್ಕದ್ದು.

(3) ಜೈಲಿನ ಅಧೀಕ್ಷಕನು ಅಥವಾ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಯು, ಒಂದು ಮೊಕದ್ದಮೆಯಲ್ಲಿ ಒಬ್ಬರಿಗಿಂತ ಹೆಚ್ಚು ನಿರ್ಣೀತ ಅಪರಾಧಿಗಳಿದ್ದಲ್ಲಿ, ಪ್ರತಿಯೊಬ್ಬ ನಿರ್ಣೀತ ಅಪರಾಧಿಯು ಅರವತ್ತು ದಿನಗಳ ಅವಧಿಯೊಳಗಾಗಿ ಕ್ಷಮಾದಾನ ಅರ್ಜಿಯನ್ನು ಸಲ್ಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಇತರ ನಿರ್ಣೀತ ಅಪರಾಧಿಗಳಿಂದ ಅಂಥ ಕ್ಷಮಾದಾನ ಅರ್ಜಿಯನ್ನು ಸ್ವೀಕರಿಸದಿದ್ದಲ್ಲಿ, ಜೈಲಿನ ಅಧೀಕ್ಷಕನು ಮೊಕದ್ದಮೆಯ ದಾಖಲೆಯ ಪ್ರತಿ, ಹೆಸರುಗಳು, ವಿಳಾಸಗಳು ಮತ್ತು ಆ ಮೊಕದ್ದಮೆಗೆ ಸಂಬಂಧಪಟ್ಟ ಇತರ ಎಲ್ಲಾ ವಿವರಗಳನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಸದರಿ ಕ್ಷಮಾದಾನ ಅರ್ಜಿಯೊಂದಿಗೆ ಪರ್ಯಾಲೋಚನೆಗಾಗಿ ಕಳುಹಿಸತಕ್ಕದ್ದು.

(4) ಕೇಂದ್ರ ಸರ್ಕಾರವು ಕ್ಷಮಾದಾನದ ಅರ್ಜಿಯನ್ನು ಸ್ವೀಕರಿಸಿದ ನಂತರ ರಾಜ್ಯ ಸರ್ಕಾರದ ಅಭಿಪ್ರಾಯಗಳನ್ನು ಕೇಳತಕ್ಕದ್ದು ಮತ್ತು ಕ್ಷಮಾದಾನದ ಅರ್ಜಿಯನ್ನು ಮೊಕದ್ದಮೆಯ ದಾಖಲೆಗಳೊಂದಿಗೆ ಪರ್ಯಾಲೋಚಿಸತಕ್ಕದ್ದು ಮತ್ತು ರಾಜ್ಯ

ಸರ್ಕಾರದ ಅಭಿಪ್ರಾಯಗಳನ್ನು ಮತ್ತು ಜೈಲಿನ ಅಧೀಕ್ಷಕನಿಂದ ಮೊಕದ್ದಮೆಯ ದಾಖಲೆಗಳನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಸಾಧ್ಯವಾದಷ್ಟು ಬೇಗನೇ ಈ ಬಗ್ಗೆ ರಾಷ್ಟ್ರಪತಿಗೆ ಶಿಫಾರಸ್ಸನ್ನು ಮಾಡತಕ್ಕದ್ದು.

(5) ರಾಷ್ಟ್ರಪತಿಯು ಕ್ಷಮಾದಾನ ಅರ್ಜಿಯನ್ನು ಪರ್ಯಾಲೋಚಿಸಬಹುದು, ತೀರ್ಮಾನಿಸಬಹುದು ಮತ್ತು ವಿಲೆ ಮಾಡಬಹುದು ಮತ್ತು ಒಂದು ಮೊಕದ್ದಮೆಯಲ್ಲಿ ಒಬ್ಬನಿಗಿಂತ ಹೆಚ್ಚು ನಿರ್ಣೀತ ಅಪರಾಧಿಗಳು ಇದ್ದ ಸಂದರ್ಭದಲ್ಲಿ, ಕ್ಷಮಾದಾನ ಅರ್ಜಿಗಳನ್ನು ನ್ಯಾಯದ ಹಿತದೃಷ್ಟಿಯಿಂದ ಒಟ್ಟಿಗೆ ರಾಷ್ಟ್ರಪತಿಯವರು ತೀರ್ಮಾನಿಸತಕ್ಕದ್ದು.

(6) ಕ್ಷಮಾದಾನ ಅರ್ಜಿಯ ಮೇಲೆ ರಾಷ್ಟ್ರಪತಿಯವರ ಆದೇಶವನ್ನು ಸ್ವೀಕರಿಸಿದ ತರುವಾಯ ಕೇಂದ್ರ ಸರ್ಕಾರವು, ನಲ್ವತ್ತೆಂಟು ಗಂಟೆಯೊಳಗಾಗಿ ಅದನ್ನು ರಾಜ್ಯ ಸರ್ಕಾರದ ಗೃಹ ಇಲಾಖೆಗೆ ಮತ್ತು ಜೈಲಿನ ಅಧೀಕ್ಷಕನಿಗೆ ಅಥವಾ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ತಿಳಿಸತಕ್ಕದ್ದು.

(7) ಸಂವಿಧಾನದ 72ನೇ ಅನುಚ್ಛೇದ ಅಥವಾ 161ನೇ ಅನುಚ್ಛೇದದ ಮೇರೆಗೆ ಅನುಕ್ರಮವಾಗಿ ರಾಷ್ಟ್ರಪತಿಯ ಅಥವಾ ರಾಜ್ಯಪಾಲನ ಆದೇಶದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ ಮತ್ತು ರಾಷ್ಟ್ರಪತಿಯ ಅಥವಾ ರಾಜ್ಯಪಾಲನ ಆದೇಶವೇ ಅಂತಿಮವಾಗಿರತಕ್ಕದ್ದು ಮತ್ತು ಈ ಆದೇಶದ ತೀರ್ಮಾನಗಳ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದಲ್ಲ.

**473. ಶಿಕ್ಷೆಯ ಆದೇಶಗಳನ್ನು ಅಮಾನತುಗೊಳಿಸುವ ಅಥವಾ ಮಾಫಿ ಮಾಡುವ ಅಧಿಕಾರ.-** (1) ಯಾರೇ ವ್ಯಕ್ತಿಯು ಅಪರಾಧಕ್ಕಾಗಿ ಶಿಕ್ಷೆಯ ದಂಡನೆಗೆ ಒಳಗಾಗಿರುವಾಗ, ಸಮುಚಿತ ಸರ್ಕಾರವು, ಯಾವುದೇ ಸಮಯದಲ್ಲಿ ಷರತ್ತುಗಳಿಲ್ಲದೆ ಅಥವಾ ಶಿಕ್ಷೆಗೆ ಒಳಗಾದ ವ್ಯಕ್ತಿಯು ಒಪ್ಪುವ ಯಾವುದೇ ಷರತ್ತುಗಳ ಮೇಲೆ, ಅವನಿಗೆ ವಿಧಿಸಿದ ಶಿಕ್ಷೆಯ ಆದೇಶದ ಜಾರಿಯನ್ನು ಅಮಾನತುಗೊಳಿಸಬಹುದು ಅಥವಾ ದಂಡನೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಮಾಫಿ ಮಾಡಬಹುದು.

(2) ಶಿಕ್ಷೆಯ ಆದೇಶದ ಅಮಾನತು ಅಥವಾ ಮಾಫಿಗಾಗಿ ಸಮುಚಿತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುವಾಗ, ಸಮುಚಿತ ಸರ್ಕಾರವು, ಯಾವ ನ್ಯಾಯಾಲಯದಲ್ಲಿ ಅಥವಾ ಯಾವ ನ್ಯಾಯಾಲಯವು ಅಪರಾಧ ನಿರ್ಣಯ ಮಾಡಿತೋ ಅಥವಾ ಸ್ಥಿರೀಕರಿಸಿತ್ತೋ ಆ ನ್ಯಾಯಾಲಯದ ಪೀಠಾಸೀನ ನ್ಯಾಯಾಧೀಶನಿಗೆ ಆ ಮನವಿಯನ್ನು ಅಂಗೀಕರಿಸತಕ್ಕದ್ದೇ ಅಥವಾ ನಿರಾಕರಿಸತಕ್ಕದ್ದೇ ಎಂಬ ಬಗ್ಗೆ ಅವನ ಅಭಿಪ್ರಾಯವನ್ನು ಮತ್ತು ಅಂಥ ಅಭಿಪ್ರಾಯಕ್ಕೆ ಅವನಿಗಿರುವ ಕಾರಣಗಳನ್ನು ತಿಳಿಸಲು ಮತ್ತು ಅಂಥ ಅಭಿಪ್ರಾಯದ ಹೇಳಿಕೆಯೊಂದಿಗೆ ಅಧಿವಿಚಾರಣೆಯ ದಾಖಲೆಯ ಅಥವಾ ಅದರಲ್ಲಿರುವಷ್ಟು ದಾಖಲೆಯ ಪ್ರಮಾಣಿತ ಪ್ರತಿಯನ್ನು ಸಹ ಕಳುಹಿಸಲು ಅಗತ್ಯಪಡಿಸಬಹುದು.

(3) ಯಾವ ಷರತ್ತಿನ ಮೇಲೆ ಶಿಕ್ಷೆಯ ಆದೇಶವನ್ನು ಅಮಾನತುಗೊಳಿಸಲಾಗಿದೆಯೋ ಅಥವಾ ಮಾಫಿ ಮಾಡಲಾಗಿದೆಯೋ ಆ ಯಾವುದೇ ಷರತ್ತನ್ನು ನೆರವೇರಿಸಿಲ್ಲವೆಂದು ಸಮುಚಿತ ಸರ್ಕಾರವು ಅಭಿಪ್ರಾಯಪಟ್ಟರೆ, ಆ ಸರ್ಕಾರವು ಆ ಅಮಾನತು ಅಥವಾ ಮಾಫಿಯನ್ನು ರದ್ದುಗೊಳಿಸಬಹುದು ಮತ್ತು ಆ ತರುವಾಯ ಯಾರ ಪರವಾಗಿ ಆ ಶಿಕ್ಷೆಯ ಆದೇಶವನ್ನು ಅಮಾನತುಗೊಳಿಸಲಾಗಿತ್ತೋ ಅಥವಾ ಮಾಫಿ ಮಾಡಲಾಗಿತ್ತೋ ಆ ವ್ಯಕ್ತಿಯು ಮುಕ್ತನಿದ್ದರೆ, ಯಾರೇ ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ಅವನನ್ನು ದಸ್ತಗಿರಿ ಮಾಡಬಹುದು ಮತ್ತು ಶಿಕ್ಷೆಯ ಉಳಿದ ಭಾಗವನ್ನು ಅನುಭವಿಸಲು ಅವನನ್ನು ರಿಮಾಂಡ್ ಮಾಡಬಹುದು.

(4) ಈ ಪ್ರಕರಣದ ಮೇರೆಗೆ ಯಾವ ಷರತ್ತಿನ ಮೇಲೆ ಶಿಕ್ಷೆಯ ಆದೇಶವನ್ನು ಅಮಾನತುಗೊಳಿಸಲಾಗಿದೆಯೋ ಅಥವಾ ಮಾಫಿ ಮಾಡಲಾಗಿದೆಯೋ ಆ ಷರತ್ತನ್ನು, ಯಾರ ಪರವಾಗಿ ಆ ಶಿಕ್ಷೆಯ ಆದೇಶವನ್ನು ಅಮಾನತುಗೊಳಿಸಲಾಗಿದೆಯೋ

ಅಥವಾ ಮಾಫಿ ಮಾಡಲಾಗಿದೆಯೋ ಆ ವ್ಯಕ್ತಿಯು ಪಾಲಿಸಬೇಕಾಗಿರುವಂಥದ್ದಾಗಿರಬಹುದು ಅಥವಾ ಅವನ ಇಚ್ಛೆಯನ್ನು ಅವಲಂಬಿಸಿರಬಾರದು.

(5) ಸಮುಚಿತ ಸರ್ಕಾರವು, ಸಾಮಾನ್ಯ ನಿಯಮಗಳ ಅಥವಾ ವಿಶೇಷ ಆದೇಶಗಳ ಮೂಲಕ, ಶಿಕ್ಷೆಯ ಆದೇಶಗಳ ಅಮಾನತ್ತಿನ ಬಗ್ಗೆ ಮತ್ತು ಅರ್ಜಿಗಳನ್ನು ಸಲ್ಲಿಸಬೇಕಾದ ಮತ್ತು ಅವುಗಳೊಂದಿಗೆ ವ್ಯವಹರಿಸಬೇಕಾದ ಷರತ್ತುಗಳ ಬಗ್ಗೆ ನಿರ್ದೇಶನಗಳನ್ನು ನೀಡಬಹುದು:

ಪರಂತು, ಹದಿನೆಂಟು ವರ್ಷಗಳಿಗಿಂತ ಹೆಚ್ಚು ವಯಸ್ಸಿನ ವ್ಯಕ್ತಿಗೆ ವಿಧಿಸಲಾದ (ಜುಲ್ಮಾನೆಯ ಶಿಕ್ಷೆಯ ಆದೇಶವಲ್ಲದ) ಯಾವುದೇ ಶಿಕ್ಷೆಯ ಆದೇಶದ ಸಂದರ್ಭದಲ್ಲಿ, ಶಿಕ್ಷೆಗೊಳಗಾದ ವ್ಯಕ್ತಿಯು ಅಥವಾ ಆತನ ಪರವಾಗಿ ಯಾರೇ ಇತರ ವ್ಯಕ್ತಿಯು ಸಲ್ಲಿಸಿದ ಯಾವುದೇ ಅರ್ಜಿಯನ್ನು, ಶಿಕ್ಷೆಗೆ ಒಳಗಾದ ವ್ಯಕ್ತಿಯು ಜೈಲಿನಲ್ಲಿದ್ದರೆ ಮತ್ತು,-

(ಎ) ಆತನು ಅಂಥ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅದನ್ನು ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಮೂಲಕ ಸಲ್ಲಿಸಿದ ಹೊರತು; ಅಥವಾ

(ಬಿ) ಇತರ ಯಾರೇ ವ್ಯಕ್ತಿಯು ಅಂಥ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಶಿಕ್ಷೆಗೊಳಗಾದ ವ್ಯಕ್ತಿಯು ಜೈಲಿನಲ್ಲಿರುವನೆಂಬ ಬಗ್ಗೆ ಘೋಷಣೆಯನ್ನು ಅದು ಒಳಗೊಂಡಿರುವ ಹೊರತು

- ಪುರಸ್ಕರಿಸತಕ್ಕದ್ದಲ್ಲ.

(6) ಮೇಲಿನ ಉಪಪ್ರಕರಣಗಳ ಉಪಬಂಧಗಳು, ಯಾರೇ ವ್ಯಕ್ತಿಯ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಅಥವಾ ಅವನ ಮೇಲೆ ಅಥವಾ ಅವನ ಸ್ವತ್ತಿನ ಮೇಲೆ ಯಾವುದೇ ಹೊಣೆಗಾರಿಕೆಯನ್ನು ವಿಧಿಸುವ ಈ ಸಂಹಿತೆಯ ಅಥವಾ ಇತರ ಯಾವುದೇ ಕಾನೂನಿನ ಯಾವುದೇ ಪ್ರಕರಣದ ಮೇರೆಗೆ ಕ್ರಿಮಿನಲ್ ನ್ಯಾಯಾಲಯವು ಮಾಡಿದ ಯಾವುದೇ ಆದೇಶಕ್ಕೂ ಸಹ ಅನ್ವಯವಾಗತಕ್ಕದ್ದು.

(7) ಈ ಪ್ರಕರಣದಲ್ಲಿ ಮತ್ತು 474ನೇ ಪ್ರಕರಣದಲ್ಲಿ "ಸಮುಚಿತ ಸರ್ಕಾರ" ಎಂದರೆ:-

(ಎ) ಒಕ್ಕೂಟದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುವ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ವಿರುದ್ಧದ ಅಪರಾಧಕ್ಕಾಗಿ ಶಿಕ್ಷೆಯ ಆದೇಶವನ್ನು ವಿಧಿಸಿರುವ ಅಥವಾ ಆ ಕಾನೂನಿನ ಮೇರೆಗೆ (6)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶವನ್ನು ಮಾಡಿರುವ ಸಂದರ್ಭಗಳಲ್ಲಿ, ಕೇಂದ್ರ ಸರ್ಕಾರ;

(ಬಿ) ಇತರ ಸಂದರ್ಭಗಳಲ್ಲಿ, ಯಾವ ರಾಜ್ಯದಲ್ಲಿ ಅಪರಾಧಿಗೆ ಶಿಕ್ಷೆ ವಿಧಿಸಲಾಗಿದೆಯೋ ಅಥವಾ ಸದರಿ ಆದೇಶವನ್ನು ಮಾಡಲಾಗಿದೆಯೋ ಆ ರಾಜ್ಯ ಸರ್ಕಾರ.

**474. ಶಿಕ್ಷೆಯನ್ನು ಪರಿವರ್ತಿಸುವ ಅಧಿಕಾರ.-** ಸಮುಚಿತ ಸರ್ಕಾರವು, ಶಿಕ್ಷೆಗೆ ಗುರಿಯಾದ ವ್ಯಕ್ತಿಯ ಸಮ್ಮತಿಯಿಲ್ಲದೆ,-

(ಎ) ಮರಣದಂಡನೆಯನ್ನು, ಆಜೀವ ಕಾರವಾಸ ಶಿಕ್ಷೆಗೆ;

(ಬಿ) ಆಜೀವ ಕಾರಾವಾಸದ ಶಿಕ್ಷೆಯನ್ನು, ಏಳು ವರ್ಷಗಳಿಗೆ ಕಡಿಮೆಯಲ್ಲದ ಅವಧಿಯ ಕಾರವಾಸ ಶಿಕ್ಷೆಗೆ;

(ಸಿ) ಏಳು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಾರಾವಾಸ ಶಿಕ್ಷೆಯನ್ನು ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಕಾರವಾಸ ಶಿಕ್ಷೆಗೆ;

(ಡಿ) ಏಳು ವರ್ಷಕ್ಕಿಂತ ಕಡಿಮೆ ಅವಧಿಯ ಕಾರವಾಸ ಶಿಕ್ಷೆಯನ್ನು ಜುಲ್ಮಾನೆಗೆ;

(ಇ) ಕಠಿಣ ಕಾರಾವಾಸದ ಶಿಕ್ಷೆಯನ್ನು, ಆ ವ್ಯಕ್ತಿಗೆ ವಿಧಿಸಬಹುದಾಗಿದ್ದ ಯಾವುದೇ ಅವಧಿಯ ಸಾದಾ ಕಾರಾವಾಸ ಶಿಕ್ಷೆಗೆ

- ಪರಿವರ್ತಿಸಬಹುದು.

**475. ಕೆಲವು ಮೊಕದ್ದಮೆಗಳಲ್ಲಿ ಮಾಫಿ ಅಥವಾ ಶಿಕ್ಷೆಯನ್ನು ಪರಿವರ್ತಿಸುವ ಅಧಿಕಾರಗಳ ಮೇಲೆ ನಿರ್ಬಂಧ.-** 473ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವ ಅಪರಾಧಕ್ಕಾಗಿ ಕಾನೂನಿನ ಮೂಲಕ ಉಪಬಂಧಿಸಿರುವ ಶಿಕ್ಷೆಗಳಲ್ಲಿ ಮರಣದಂಡನೆಯೂ ಒಂದಾಗಿರುವುದೋ, ಆ ಯಾವುದೇ ಅಪರಾಧಕ್ಕಾಗಿ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದ ಮೇಲೆ, ಆಜೀವ ಕಾರಾವಾಸ ಶಿಕ್ಷೆಯನ್ನು ವಿಧಿಸಿರುವಲ್ಲಿ ಅಥವಾ ವ್ಯಕ್ತಿಯ ಮೇಲೆ ವಿಧಿಸಲಾದ ಮರಣದಂಡನೆಯನ್ನು 474ನೇ ಪ್ರಕರಣದ ಮೇರೆಗೆ ಆಜೀವ ಕಾರಾವಾಸ ಶಿಕ್ಷೆಯಾಗಿ ಪರಿವರ್ತಿಸಿರುವಲ್ಲಿ, ಅಂಥ ವ್ಯಕ್ತಿಯನ್ನು ಅವನು ಕನಿಷ್ಠ ಪಕ್ಷ ಹದಿನಾಲ್ಕು ವರ್ಷಗಳವರೆಗೆ ಕಾರಾವಾಸ ಶಿಕ್ಷೆಯನ್ನು ಅನುಭವಿಸಿದ್ದ ಹೊರತು, ಕಾರಾಗೃಹದಿಂದ ಬಿಡುಗಡೆ ಮಾಡತಕ್ಕದ್ದಲ್ಲ.

**476. ಮರಣದಂಡನೆಗಳ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಸಮವರ್ತಿ ಅಧಿಕಾರ.-** 473 ಮತ್ತು 474ನೇ ಪ್ರಕರಣಗಳಿಂದ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಮರಣದಂಡನೆಗಳ ಸಂದರ್ಭದಲ್ಲಿ ಕೇಂದ್ರ ಸರ್ಕಾರವೂ ಸಹ ಚಲಾಯಿಸಬಹುದು.

**477. ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿದ ತರುವಾಯ ರಾಜ್ಯ ಸರ್ಕಾರದ ಕ್ರಮ.-** (1) ಶಿಕ್ಷೆಯನ್ನು ಮಾಫಿ ಮಾಡುವ ಅಥವಾ ಪರಿವರ್ತಿಸುವ ಸಂಬಂಧದಲ್ಲಿ 473 ಮತ್ತು 474ನೇ ಪ್ರಕರಣಗಳ ಮೂಲಕ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು,-

(ಎ) ಈ ಸಂಹಿತೆಯಲ್ಲದ ಇತರ ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ಅಪರಾಧ ತನಿಖೆ ಮಾಡಲು ಅಧಿಕಾರ ನೀಡಲಾದ ಯಾವುದೇ ಏಜೆನ್ಸಿಯು ತನಿಖೆ ಮಾಡಿದ; ಅಥವಾ

(ಬಿ) ಕೇಂದ್ರ ಸರ್ಕಾರಕ್ಕೆ ಸೇರಿದ ಯಾವುದೇ ಸ್ವತ್ತಿನ ದುರ್ವಿನಿಯೋಗ ಅಥವಾ ನಾಶ ಅಥವಾ ಹಾನಿಯನ್ನು ಒಳಗೊಂಡ; ಅಥವಾ

(ಸಿ) ಕೇಂದ್ರ ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯು ತನ್ನ ಪದಕ್ಕೆ ಸಂಬಂಧಿಸಿ ಕರ್ತವ್ಯವನ್ನು ನಿರ್ವಹಿಸುವಾಗ ಅಥವಾ ನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವಾಗ ಮಾಡಿದ

- ಅಪರಾಧಕ್ಕಾಗಿ ಶಿಕ್ಷೆಯನ್ನು ವಿಧಿಸಿರುವ ಯಾವುದೇ ಸಂದರ್ಭದಲ್ಲಿ, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸದೆ ರಾಜ್ಯ ಸರ್ಕಾರವು ಚಲಾಯಿಸತಕ್ಕದ್ದಲ್ಲ.

(2) ಒಕ್ಕೂಟದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುವ ವಿಷಯಗಳಿಗೆ ಸಂಬಂಧಿಸಿದ ಕೆಲವು ಅಪರಾಧಗಳನ್ನೊಳಗೊಂಡ ಅಪರಾಧಗಳಿಗಾಗಿ ಅಪರಾಧಿಯೆಂದು ನಿರ್ಣೀತನಾದ ಮತ್ತು ಒಟ್ಟಿಗೆ ಅನುಭವಿಸಬೇಕಾದ ಪ್ರತ್ಯೇಕ ಕಾರಾವಾಸ ಅವಧಿಗಳ ಶಿಕ್ಷೆಗೆ ಗುರಿಯಾದ ವ್ಯಕ್ತಿಯ ಸಂಬಂಧದಲ್ಲಿ, ರಾಜ್ಯ ಸರ್ಕಾರವು ಮಾಡಿರುವ ಶಿಕ್ಷೆಯ ಆದೇಶಗಳ ಅಮಾನತು, ಮಾಫಿ ಅಥವಾ ಶಿಕ್ಷೆಯನ್ನು ಪರಿವರ್ತಿಸಿದ ಯಾವುದೇ ಆದೇಶವು, ಒಕ್ಕೂಟದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುವ ವಿಷಯಗಳ ಬಗ್ಗೆ ಅಂಥ ವ್ಯಕ್ತಿಯು ಮಾಡಿದ ಅಪರಾಧಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಸಹ ಅಂಥ ಶಿಕ್ಷೆಯ ಆದೇಶಗಳ, ಸಂದರ್ಭಾನುಸಾರ, ಅಮಾನತು, ಮಾಫಿ ಅಥವಾ ಶಿಕ್ಷೆಯನ್ನು ಪರಿವರ್ತಿಸುವ ಆದೇಶವನ್ನು ಮಾಡಿರುವ ಹೊರತು, ಪರಿಣಾಮಕಾರಿಯಾಗಿರತಕ್ಕದ್ದಲ್ಲ.

## ಅಧ್ಯಾಯ XXXV

## ಜಾಮೀನು ಮತ್ತು ಬಂಧಪತ್ರಗಳ ಬಗ್ಗೆ ಉಪಬಂಧಗಳು

**478. ಜಾಮೀನನ್ನು ಯಾವ ಮೊಕದ್ದಮೆಗಳಲ್ಲಿ ತೆಗೆದುಕೊಳ್ಳುವುದು.-** (1) ಜಾಮೀನೀಯವಲ್ಲದ ಅಪರಾಧಕ್ಕಾಗಿ ಆಪಾದಿತನಾದ ವ್ಯಕ್ತಿಯಲ್ಲದ ಇತರ ಯಾರೇ ವ್ಯಕ್ತಿಯನ್ನು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡಿದಾಗ ಅಥವಾ ತಡೆಹಿಡಿದಿರಿಸಿದಾಗ ಅಥವಾ ಅವನು ನ್ಯಾಯಾಲಯದ ಮುಂದೆ ಹಾಜರಾದಾಗ ಅಥವಾ ಅವನನ್ನು ಹಾಜರುಪಡಿಸಿದಾಗ ಮತ್ತು ಅಂಥ ಅಧಿಕಾರಿಯ ಅಭಿರಕ್ಷೆಯಲ್ಲಿರುವಾಗ ಯಾವುದೇ ಸಮಯದಲ್ಲಿ ಅಥವಾ ಅಂಥ ನ್ಯಾಯಾಲಯದ ಮುಂದೆ ಇರುವ ವ್ಯವಹರಣೆಯ ಯಾವುದೇ ಹಂತದಲ್ಲಿ ಜಾಮೀನನ್ನು ನೀಡಲು ಸಿದ್ಧನಾಗಿದ್ದರೆ, ಅಂಥ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ನಿರ್ಗತಿಕನಾಗಿದ್ದರೆ ಅಥವಾ ಜಾಮೀನನ್ನು ಒದಗಿಸಲು ಅಸಮರ್ಥನಾಗಿದ್ದರೆ, ಅಂಥ ವ್ಯಕ್ತಿಯಿಂದ ಜಾಮೀನು ಬಂಧಪತ್ರವನ್ನು ತೆಗೆದುಕೊಳ್ಳುವುದರ ಬದಲಿಗೆ, ಆ ಅಧಿಕಾರಿಯು ಅಥವಾ ಆ ನ್ಯಾಯಾಲಯವು ಸೂಕ್ತವೆಂದು ಭಾವಿಸಿ ಅಂಥ ಅಧಿಕಾರಿಯು ಅಥವಾ ನ್ಯಾಯಾಲಯವು, ಇದರಲ್ಲಿ ಇನ್ನು ಮುಂದೆ ಹೇಳಿರುವಂತೆ, ಅವನ ಹಾಜರಾತಿಗಾಗಿ ಅವನಿಂದ ಬಂಧಪತ್ರವನ್ನು ಪಡೆದುಕೊಂಡು ಅವನನ್ನು ಬಿಡುಗಡೆ ಮಾಡಬಹುದು ಮತ್ತು ಮಾಡತಕ್ಕದ್ದು.

*ವಿವರಣೆ.-* ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಒಂದು ವಾರದ ಅವಧಿಯ ಒಳಗಾಗಿ ಆತನು ಜಾಮೀನು ಬಂಧಪತ್ರವನ್ನು ಕೊಡಲು ಆಗದಿದ್ದಾಗ, ಅದು ಈ ಪರಂತುಕದ ಉದ್ದೇಶಕ್ಕಾಗಿ ಆತನು ನಿರ್ಗತಿಕನೆಂದು ಭಾವಿಸಲು ಆ ಅಧಿಕಾರಿಗೆ ಅಥವಾ ನ್ಯಾಯಾಲಯಕ್ಕೆ ಸಾಕಷ್ಟು ಆಧಾರವಾಗತಕ್ಕದ್ದು:

ಮತ್ತು ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ 135ನೇ ಪ್ರಕರಣದ (3)ನೇ ಉಪಪ್ರಕರಣದ ಅಥವಾ 492ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ವ್ಯಕ್ತಿಯು ತಾನು ಹಾಜರಾಗುವ ಸಮಯ ಮತ್ತು ಸ್ಥಳದ ಬಗೆಗಿನ ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಷರತ್ತುಗಳನ್ನು ಪಾಲಿಸಲು ತಪ್ಪಿದರೆ, ಅದೇ ಮೊಕದ್ದಮೆಗೆ ಸಂಬಂಧಿಸಿದಂತೆ ತರುವಾಯ ಒಂದು ಸಂದರ್ಭದಲ್ಲಿ ಅವನು ನ್ಯಾಯಾಲಯದ ಮುಂದೆ ಹಾಜರಾದಾಗ ಅಥವಾ ಅಭಿರಕ್ಷೆಯಲ್ಲಿ ಹಾಜರುಪಡಿಸಿದಾಗ ಜಾಮೀನಿನ ಮೇಲೆ ಬಿಡುಗಡೆ ಮಾಡಲು ನ್ಯಾಯಾಲಯವು ನಿರಾಕರಿಸಬಹುದು ಮತ್ತು 491ನೇ ಪ್ರಕರಣದ ಮೇರೆಗೆ ಆ ಜುಲ್ಮಾನೆಯನ್ನು ಸಂದಾಯ ಮಾಡಲು ಅಂಥ ಬಂಧಪತ್ರ ಅಥವಾ ಜಾಮೀನು ಬಂಧಪತ್ರದಿಂದ ಬದ್ಧನಾದ ಯಾರೇ ವ್ಯಕ್ತಿಯನ್ನು ಕರೆಸಲು ನ್ಯಾಯಾಲಯಕ್ಕೆ ಇರುವ ಅಧಿಕಾರಗಳಿಗೆ ಅಂಥ ಯಾವುದೇ ನಿರಾಕರಣೆಯು ಪ್ರತಿಕೂಲವಾಗಿರತಕ್ಕದ್ದಲ್ಲ.

**479. ವಿಚಾರಣಾಧೀನ ಕೈದಿಯನ್ನು ತಡೆಹಿಡಿದಿಡಬಹುದಾದ ಗರಿಷ್ಠ ಅವಧಿ.-** (1) ಯಾರೇ ವ್ಯಕ್ತಿಯನ್ನು ಈ ಸಂಹಿತೆಯ ಮೇರೆಗೆ ಯಾವುದೇ ಕಾನೂನು ಮೇರೆಗಿನ ಅಪರಾಧಕ್ಕಾಗಿ (ಆ ಕಾನೂನು ಮೇರೆಗೆ ಆ ಅಪರಾಧಕ್ಕಾಗಿ ಮರಣದಂಡನೆಯನ್ನು ಅಥವಾ ಆಜೀವ ಕಾರಾವಾಸವನ್ನು ಅದಕ್ಕಾಗಿ ನಿರ್ದಿಷ್ಟಪಡಿಸಬಹುದಾದ ದಂಡನೆಗಳಲ್ಲಿ ಒಂದು ದಂಡನೆಯೆಂದು ನಿರ್ದಿಷ್ಟಪಡಿಸಲಾಗಿದೆಯೋ ಆ ಅಪರಾಧವಾಗಿರದ) ತನಿಖೆಯ, ವಿಚಾರಣೆಯ ಅಥವಾ ಅಧಿವಿಚಾರಣೆಯ ಅವಧಿಯಲ್ಲಿ, ಆ ಕಾನೂನು ಮೇರೆಗಿನ ಆ ಅಪರಾಧಕ್ಕಾಗಿ ನಿರ್ದಿಷ್ಟಪಡಿಸಿದ ಕಾರಾವಾಸದ ಗರಿಷ್ಠ ಅವಧಿಯ ಅರ್ಧಕ್ಕಿಂತ ಹೆಚ್ಚಿನ ಅವಧಿಗೆ ತಡೆಹಿಡಿದಿರಿಸಿಕೊಂಡಿದ್ದರೆ, ನ್ಯಾಯಾಲಯವು ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ಮೊದಲ ಬಾರಿಗೆ ಅಪರಾಧಿಯಾಗಿದ್ದಲ್ಲಿ (ಅಪರಾಧಿಯು ಈ ಹಿಂದೆ ಯಾವುದೇ ಅಪರಾಧದ ನಿರ್ಣೀತನಾಗಿಲ್ಲದಿರುವ) ಆತನನ್ನು ಕಾನೂನಿನ ಅಡಿಯಲ್ಲಿ ಅಂಥ ಅಪರಾಧಕ್ಕಾಗಿ ನಿರ್ದಿಷ್ಟಪಡಿಸಲಾದ ಗರಿಷ್ಠ ಕಾರಾವಾಸದ ಅವಧಿಯ ಮೂರನೇ ಒಂದರಷ್ಟು ವಿಸ್ತರಿಸಬಹುದಾದ ಅವಧಿಯವರೆಗೆ ತಡೆಹಿಡಿದಿರಿಸಿದರೆ, ನ್ಯಾಯಾಲಯದಿಂದ ಬಂಧಪತ್ರದ ಮೇಲೆ ಬಿಡುಗಡೆ ಮಾಡತಕ್ಕದ್ದು:

ಮತ್ತು ಪರಂತು, ನ್ಯಾಯಾಲಯವು, ಪಬ್ಲಿಕ್ ಪ್ರಾಸಿಕ್ಯೂಟರನು ವಿಚಾರಣೆ ಮಾಡಿದ ತರುವಾಯ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಅಂಥ ವ್ಯಕ್ತಿಯನ್ನು ಸದರಿ ಅವಧಿಯ ಅರ್ಧಕ್ಕಿಂತ ಹೆಚ್ಚಿನ ಅವಧಿಯವರೆಗೆ ತಡೆಹಿಡಿದಿರುವುದನ್ನು ಮುಂದುವರಿಸುವ ಆದೇಶವನ್ನು ಮಾಡಬಹುದು ಅಥವಾ ಆತನ ಬಂಧಪತ್ರದ ಬದಲಾಗಿ ಜಾಮೀನು ಬಂಧಪತ್ರದ ಮೇಲೆ ಆತನನ್ನು ಬಿಡುಗಡೆ ಮಾಡಬಹುದು:

ಮತ್ತೂ ಪರಂತು, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ಸಂದರ್ಭದಲ್ಲಿ, ತನಿಖೆ, ವಿಚಾರಣೆ ಅಥವಾ ಅಧಿವಿಚಾರಣೆಯ ಅವಧಿಯಲ್ಲಿ ಆ ಕಾನೂನು ಮೇರೆಗೆ ಸದರಿ ಅಪರಾಧಕ್ಕಾಗಿ ಉಪಬಂಧಿಸಲಾದ ಗರಿಷ್ಠ ಕಾರಾವಾಸದ ಅವಧಿಗೂ ಮೀರಿ ತಡೆಹಿಡಿದಿರಿಸತಕ್ಕದ್ದಲ್ಲ.

*ವಿವರಣೆ.*- ಜಾಮೀನನ್ನು ನೀಡುವುದಕ್ಕಾಗಿ, ಈ ಪ್ರಕರಣದ ಮೇರೆಗೆ ತಡೆಹಿಡಿದಿರಿಸಿದ ಅವಧಿಯನ್ನು ಲೆಕ್ಕ ಹಾಕುವಾಗ, ಆಪಾದಿತನ ಕಾರಣದಿಂದಾಗಿ ವ್ಯವಹರಣೆಯು ಮುಂದುವರಿಯುವಲ್ಲಿ ಆದ ವಿಳಂಬದ ಕಾರಣದಿಂದಾದ ತಡೆಹಿಡಿದಿರಿಸಿದ ಅವಧಿಯನ್ನು ಹೊರತುಪಡಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದಾಗ್ಯೂ ಮತ್ತು ಅದರ ಮೂರನೇ ಪರಂತುಕಕ್ಕೆ ಒಳಪಟ್ಟು, ಒಬ್ಬ ವ್ಯಕ್ತಿಯ ವಿರುದ್ಧ ಒಂದಕ್ಕಿಂತ ಹೆಚ್ಚಿನ ಅಪರಾಧಗಳಲ್ಲಿ ಅಥವಾ ಬಹು ಮೊಕದ್ದಮೆಗಳಲ್ಲಿ ತನಿಖೆ, ವಿಚಾರಣೆ ಅಥವಾ ಅಧಿವಿಚಾರಣೆ ಬಾಕಿ ಉಳಿದಿದ್ದರೆ, ನ್ಯಾಯಾಲಯವು ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದಲ್ಲ.

(3) ಜೈಲಿನ ಅಧೀಕ್ಷಕನು ಆಪಾದಿತ ವ್ಯಕ್ತಿಯನ್ನು ತಡೆಹಿಡಿದಿರಿಸಿದ್ದಲ್ಲಿ, ತಡೆಹಿಡಿದಿರಿಸಲಾದ ವ್ಯಕ್ತಿಯು (1)ನೇ ಉಪಪ್ರಕರಣದಲ್ಲಿ ನಮೂದಿಸಿದ ಅರ್ಧದಷ್ಟು ಅವಧಿ ಅಥವಾ ಮೂರನೇ ಒಂದರಷ್ಟು ಅವಧಿಯನ್ನು ಪೂರ್ಣಗೊಳಿಸಿದ ನಂತರ, ಸಂದರ್ಭಾನುಸಾರ (1)ನೇ ಉಪಪ್ರಕರಣದ ಮೇರೆಗೆ ಮುಂದುವರೆಯಲು ಅಂಥ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದಕ್ಕಾಗಿ ನ್ಯಾಯಾಲಯಕ್ಕೆ ಲಿಖಿತದಲ್ಲಿ ಕೂಡಲೇ ಅರ್ಜಿಯನ್ನು ಸಲ್ಲಿಸತಕ್ಕದ್ದು.

**480. ಜಾಮೀನೀಯವಲ್ಲದ ಅಪರಾಧದ ಮೊಕದ್ದಮೆಯಲ್ಲಿ ಯಾವಾಗ ಜಾಮೀನನ್ನು ತೆಗೆದುಕೊಳ್ಳಬಹುದು.-** (1) ಜಾಮೀನೀಯವಲ್ಲದ ಯಾವುದೇ ಅಪರಾಧವನ್ನು ಮಾಡಿರುವ ಆಪಾದನೆಗೊಳಗಾದ ಅಥವಾ ಶಂಕಿಸಲಾದ ಯಾರೇ ವ್ಯಕ್ತಿಯನ್ನು ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ವಾರಂಟ್ ಇಲ್ಲದೇ ದಸ್ತಗಿರಿ ಮಾಡಿದಾಗ ಅಥವಾ ತಡೆಹಿಡಿದಿರಿಸಿದಾಗ ಅಥವಾ ಉಚ್ಚ ನ್ಯಾಯಾಲಯ ಅಥವಾ ಸೆಷನ್ ನ್ಯಾಯಾಲಯದ ಹೊರತು ಇತರೆ ನ್ಯಾಯಾಲಯದ ಮುಂದೆ ಹಾಜರಾದಾಗ ಅಥವಾ ಕರೆ ತಂದಾಗ, ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು, ಆದರೆ,-

(i) ಮರಣದಂಡನೆ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧದ ತಪ್ಪಿತಸ್ಥನಾಗಿರುವನೆಂದು ನಂಬಲು ಯುಕ್ತ ಕಾರಣಗಳಿವೆಯೆಂದು ಕಂಡುಬಂದರೆ, ಅಂಥ ವ್ಯಕ್ತಿಯನ್ನು ಹಾಗೆ ಬಿಡುಗಡೆ ಮಾಡತಕ್ಕದ್ದಲ್ಲ;

(ii) ಅಂಥ ಅಪರಾಧವು ಸಂಜ್ಞೇಯ ಅಪರಾಧವಾಗಿದ್ದರೆ ಮತ್ತು ಮರಣದಂಡನೆ, ಆಜೀವ ಕಾರಾವಾಸ ಅಥವಾ ಏಳು ವರ್ಷಗಳ ಅಥವಾ ಅದಕ್ಕೂ ಹೆಚ್ಚಿನ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕೆ, ಈ ಹಿಂದೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ಎರಡು ಅಥವಾ ಹೆಚ್ಚಿನ ಸಂದರ್ಭಗಳಲ್ಲಿ ಮೂರು ವರ್ಷಗಳ ಅಥವಾ ಹೆಚ್ಚಿನ ಅವಧಿಗೆ, ಆದರೆ ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ಸಂಜ್ಞೇಯ ಅಪರಾಧಕ್ಕಾಗಿ ಈ ಹಿಂದೆಯೇ ಅಪರಾಧಿಯೆಂದು ನಿರ್ಣೀತನಾಗಿದ್ದರೆ, ಆತನನ್ನು ಹಾಗೆ ಬಿಡುಗಡೆ ಮಾಡತಕ್ಕದ್ದಲ್ಲ:

ಪರಂತು, (i)ನೇ ಖಂಡ ಅಥವಾ (ii)ನೇ ಖಂಡದಲ್ಲಿ ಉಲ್ಲೇಖಿಸಲಾದ ಅಂಥ ವ್ಯಕ್ತಿಯು ಮಗುವಾಗಿದ್ದರೆ ಅಥವಾ ಮಹಿಳೆಯಾಗಿದ್ದರೆ ಅಥವಾ ರೋಗಿ ಅಥವಾ ದುರ್ಬಲ ವ್ಯಕ್ತಿಯಾಗಿದ್ದರೆ, ಆ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೆಂದು ನ್ಯಾಯಾಲಯವು ನಿರ್ದೇಶಿಸಬಹುದು:

ಮತ್ತು ಪರಂತು, (ii)ನೇ ಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯನ್ನು ಇತರ ಯಾವುದೇ ವಿಶೇಷ ಕಾರಣಕ್ಕಾಗಿ ಅವನನ್ನು ಹಾಗೆ ಬಿಡುಗಡೆ ಮಾಡುವುದು ನ್ಯಾಯಸಮ್ಮತ ಮತ್ತು ಯುಕ್ತವೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಆ ವ್ಯಕ್ತಿಯನ್ನು ಹಾಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೆಂದು ಸಹ ನಿರ್ದೇಶಿಸಬಹುದು:

ಮತ್ತೂ ಪರಂತು, ತನಿಖೆ ಕಾಲದಲ್ಲಿ ಸಾಕ್ಷಿದಾರರನ್ನು ಗುರುತಿಸುವುದಕ್ಕಾಗಿ ಅಥವಾ ಆಪಾದಿತ ವ್ಯಕ್ತಿಯು ಮೊದಲ ಹದಿನೈದು ದಿನಗಳನ್ನು ಮೀರಿದ ಪೊಲೀಸ್ ಅಭಿರಕ್ಷೆಗಾಗಿ ಆಪಾದಿತ ವ್ಯಕ್ತಿಯು ಇರಬೇಕೆಂಬ ಸಂಗತಿಯು ಅವನು ಅನ್ಯಥಾ ಜಾಮೀನಿನ ಮೇಲೆ ಬಿಡುಗಡೆಗೆ ಹಕ್ಕುಳ್ಳವನಾಗಿದ್ದರೆ ಮತ್ತು ನ್ಯಾಯಾಲಯವು ನೀಡಬಹುದಾದಂಥ ನಿರ್ದೇಶನಗಳನ್ನು ಪಾಲಿಸುತ್ತೇನೆಂದು ವಾಗ್ದಾನವನ್ನು ಕೊಟ್ಟರೆ, ಅವನಿಗೆ ಜಾಮೀನು ನೀಡುವುದನ್ನು ನಿರಾಕರಿಸಲು ಸಾಕಷ್ಟು ಕಾರಣವಾಗತಕ್ಕದ್ದಲ್ಲ:

ಅಲ್ಲದೆ ಪರಂತು, ಯಾರೇ ವ್ಯಕ್ತಿಯ ವಿರುದ್ಧ ಆಪಾದಿಸಿರುವ ಅಪರಾಧವು, ಮರಣದಂಡನೆ, ಆಜೀವ ಕಾರಾವಾಸ ಅಥವಾ ಏಳು ವರ್ಷಗಳ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ದಂಡನೆಯಿಂದ ದಂಡನೀಯವಾದ ಅಪರಾಧವಾಗಿದ್ದರೆ, ಪಬ್ಲಿಕ್ ಪ್ರಾಸಿಕ್ಯೂಟರನಿಗೆ ವಿಚಾರಣೆ ಮಾಡಲು ಅವಕಾಶ ನೀಡದೆ ಈ ಉಪಪ್ರಕರಣದ ಮೇರೆಗೆ ನ್ಯಾಯಾಲಯವು ಆ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದಲ್ಲ.

(2) ಆಪಾದಿತನು ಜಾಮೀನೀಯವಲ್ಲದ ಅಪರಾಧವನ್ನು ಮಾಡಿರುವನೆಂದು ನಂಬಲು ಯುಕ್ತ ಕಾರಣಗಳಿಲ್ಲವೆಂಬುದಾಗಿ ಆದರೆ, ಅವನು ಮಾಡಿರುವ ಅಪರಾಧದ ಬಗ್ಗೆ ಮುಂದಿನ ವಿಚಾರಣೆ ಮಾಡಲು ಸಾಕಷ್ಟು ಕಾರಣಗಳಿವೆಯೆಂಬುದಾಗಿ ತನಿಖೆ, ವಿಚಾರಣೆ ಅಥವಾ ಅಧಿವಿಚಾರಣೆಯ ಯಾವುದೇ ಹಂತದಲ್ಲಿ, ಸಂದರ್ಭಾನುಸಾರ, ಅಂಥ ಅಧಿಕಾರಿಗೆ ಅಥವಾ ನ್ಯಾಯಾಲಯಕ್ಕೆ ಕಂಡುಬಂದರೆ, ಆಪಾದಿತನನ್ನು 492ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಮತ್ತು ಅಂಥ ವಿಚಾರಣೆಯು ಮುಗಿಯುವವರೆಗೆ ಜಾಮೀನಿನ ಮೇಲೆ ಅಥವಾ ಅಂಥ ಅಧಿಕಾರಿಯ ಅಥವಾ ನ್ಯಾಯಾಲಯದ ವಿವೇಚನಾನುಸಾರ, ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ ಅವನ ಹಾಜರಾತಿಗಾಗಿ ಬಂಧಪತ್ರವನ್ನು ಅವನು ಬರೆದುಕೊಟ್ಟ ಮೇಲೆ ಬಿಡುಗಡೆ ಮಾಡತಕ್ಕದ್ದು.

(3) ಏಳು ಅಥವಾ ಹೆಚ್ಚು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ ದಂಡನೀಯವಾದ ಅಪರಾಧವನ್ನು ಅಥವಾ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ VIನೇ ಅಧ್ಯಾಯ, VIIನೇ ಅಧ್ಯಾಯ ಅಥವಾ XVIIನೇ ಅಧ್ಯಾಯದ ಮೇರೆಗಿನ ಅಪರಾಧವನ್ನು ಮಾಡಿರುವನೆಂದು ಅಥವಾ ಅಂಥ ಯಾವುದೇ ಅಪರಾಧದ ದುಷ್ಪ್ರೇರಣೆ ಅಥವಾ ಒಳಸಂಚು ಅಥವಾ ಪ್ರಯತ್ನವನ್ನು ಮಾಡಿರುವನೆಂದು ಆಪಾದಿತನಾದ ಅಥವಾ ಶಂಕಿತನಾದ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವಾಗ ನ್ಯಾಯಾಲಯವು,-

(ಎ) ಅಂಥ ವ್ಯಕ್ತಿಯು ಈ ಅಧ್ಯಾಯದ ಮೇರೆಗೆ ಬರೆದುಕೊಟ್ಟಿರುವ ಬಂಧಪತ್ರದ ಷರತ್ತುಗಳಿಗನುಸಾರವಾಗಿ ಹಾಜರಾಗತಕ್ಕದ್ದೆಂಬ;

(ಬಿ) ಅಂಥ ವ್ಯಕ್ತಿಯು ಯಾವ ಅಪರಾಧವನ್ನು ಮಾಡಿರುವನೆಂದು ಆಪಾದಿತನಾಗಿರುವನೋ ಅಥವಾ ಶಂಕಿತನಾಗಿರುವನೋ ಆ ಅಪರಾಧದಂಥ ಇನ್ನೊಂದು ಅಪರಾಧವನ್ನು ಮಾಡತಕ್ಕದ್ದಲ್ಲವೆಂಬ; ಮತ್ತು

(ಸಿ) ಯಾವ ವ್ಯಕ್ತಿಗೆ ಮೊಕದ್ದಮೆಯ ಸಂಗತಿಗಳ ಬಗ್ಗೆ ತಿಳುವಳಿಕೆ ಇದೆಯೋ ಆ ಯಾರೇ ವ್ಯಕ್ತಿಯು ಅಂಥ ಸಂಗತಿಗಳನ್ನು ನ್ಯಾಯಾಲಯಕ್ಕೆ ಅಥವಾ ಯಾರೇ ಪೊಲೀಸ್ ಅಧಿಕಾರಿಗೆ ತಿಳಿಸದಂತೆ ತಡೆಯುವ ಸಲುವಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ರೀತಿಯ ಪ್ರೇರಣೆಯನ್ನು, ಬೆದರಿಕೆಯನ್ನು ಅಥವಾ ವಾಗ್ದಾನವನ್ನು ಮಾಡತಕ್ಕದ್ದಲ್ಲವೆಂದು ಮತ್ತು ಸಾಕ್ಷ್ಯವನ್ನು ನಾಶ ಮಾಡತಕ್ಕದ್ದಲ್ಲವೆಂಬ

- ಷರತ್ತುಗಳನ್ನು ವಿಧಿಸತಕ್ಕದ್ದು ಮತ್ತು ನ್ಯಾಯೋದ್ದೇಶಕ್ಕಾಗಿ ಅನ್ಯಥಾ ಅವಶ್ಯವೆಂದು ನ್ಯಾಯಾಲಯವು ಪರ್ಯಾಲೋಚಿಸುವಂಥ ಇತರ ಷರತ್ತುಗಳನ್ನು ಸಹ ವಿಧಿಸಬಹುದು.

(4) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ಅಧಿಕಾರಿಯು ಅಥವಾ ನ್ಯಾಯಾಲಯವು, ಹಾಗೆ ಮಾಡಲು ತನಗೆ ಇರುವ ಕಾರಣಗಳನ್ನು ಅಥವಾ ವಿಶೇಷ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(5) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ ಜಾಮೀನಿನ ಮೇಲೆ ಒಬ್ಬ ವ್ಯಕ್ತಿಯನ್ನು ಬಿಡುಗಡೆ ಮಾಡಿರುವ ಯಾವುದೇ ನ್ಯಾಯಾಲಯವು, ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡುವುದು ಮತ್ತು ಅವನನ್ನು ಅಭಿರಕ್ಷೆಗೆ ಒಪ್ಪಿಸುವುದು ಅವಶ್ಯಕವೆಂದು ತಾನು ಪರ್ಯಾಲೋಚಿಸಿದರೆ, ಹಾಗೆ ಮಾಡಲು ನಿರ್ದೇಶಿಸಬಹುದು.

(6) ಮ್ಯಾಜಿಸ್ಟ್ರೇಟನು ಅಧಿವಿಚಾರಣೆ ಮಾಡಬಹುದಾದ ಯಾವುದೇ ಮೊಕದ್ದಮೆಯಲ್ಲಿ, ಯಾವುದೇ ಜಾಮೀನೀಯವಲ್ಲದ ಅಪರಾಧಕ್ಕಾಗಿ ಆಪಾದಿತನಾಗಿರುವ ವ್ಯಕ್ತಿಯ ಅಧಿವಿಚಾರಣೆಯು, ಮೊಕದ್ದಮೆಯಲ್ಲಿ ಸಾಕ್ಷ್ಯವನ್ನು ತೆಗೆದುಕೊಳ್ಳಲು ನಿಗದಿ ಮಾಡಲಾದ ಮೊದಲ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಮುಕ್ತಾಯವಾಗದಿದ್ದರೆ, ಅಂಥ ವ್ಯಕ್ತಿಯನ್ನು, ಅವನು ಸದರಿ ಪೂರ್ಣ ಅವಧಿಯಲ್ಲಿ ಅಭಿರಕ್ಷೆಯಲ್ಲಿದ್ದರೆ, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಮ್ಯಾಜಿಸ್ಟ್ರೇಟನು ಅನ್ಯಥಾ ನಿರ್ದೇಶಿಸಿದ ಹೊರತು, ಮ್ಯಾಜಿಸ್ಟ್ರೇಟನಿಗೆ ಮನವರಿಕೆಯಾದರೆ ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು.

(7) ಒಂದು ಜಾಮೀನೀಯವಲ್ಲದ ಅಪರಾಧದ ಬಗ್ಗೆ ಆಪಾದಿತನಾಗಿರುವ ಒಬ್ಬ ವ್ಯಕ್ತಿಯ ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ಯಾವುದೇ ಸಮಯದಲ್ಲಿ ಮತ್ತು ತೀರ್ಪನ್ನು ನೀಡುವ ಮೊದಲು, ಆಪಾದಿತನು ಯಾವುದೇ ಅಂಥ ಅಪರಾಧದ ಬಗ್ಗೆ ತಪ್ಪಿತಸ್ಥನಲ್ಲವೆಂದು ನಂಬಲು ಯುಕ್ತ ಕಾರಣಗಳಿವೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದ್ದರೆ, ಆಪಾದಿತನು ಅಭಿರಕ್ಷೆಯಲ್ಲಿದ್ದರೆ, ತೀರ್ಪು ನೀಡುವುದನ್ನು ಅವನು ಕೇಳುವುದಕ್ಕೋಸ್ಕರ ತಾನು ಹಾಜರಾಗುವ ಬಗ್ಗೆ ಬಂಧಪತ್ರವನ್ನು ಅವನು ಬರೆದುಕೊಟ್ಟ ಮೇಲೆ ನ್ಯಾಯಾಲಯವು ಅವನನ್ನು ಬಿಡುಗಡೆ ಮಾಡತಕ್ಕದ್ದು.

**481. ಮುಂದಿನ ಅಪೀಲು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಲು ಆಪಾದಿತನಿಗೆ ಜಾಮೀನು.-** (1) ಅಧಿವಿಚಾರಣೆಯು ಮುಕ್ತಾಯಗೊಳ್ಳುವುದಕ್ಕೂ ಮುಂಚೆ ಮತ್ತು ಅಪೀಲು ವಿಲೆ ಆಗುವುದಕ್ಕೂ ಮುಂಚೆ, ಸಂದರ್ಭಾನುಸಾರ, ಅಪರಾಧದ ಅಧಿವಿಚಾರಣೆ ನಡೆಸುತ್ತಿರುವ ನ್ಯಾಯಾಲಯವು ಅಥವಾ ಅಪೀಲು ನ್ಯಾಯಾಲಯವು, ಆ ನ್ಯಾಯಾಲಯದ

ತೀರ್ಪಿನ ವಿರುದ್ಧ ಆಪಾದಿತನು ಸಲ್ಲಿಸಿದ ಯಾವುದೇ ಅಪೀಲಿಗೆ ಅಥವಾ ಅರ್ಜಿಗೆ ಸಂಬಂಧಪಟ್ಟಂತೆ ಮೇಲಿನ ನ್ಯಾಯಾಲಯದ ಮುಂದೆ ಹಾಜರಾಗುವಂತೆ ಆ ನ್ಯಾಯಾಲಯವು ನೋಟೀಸನ್ನು ಹೊರಡಿಸಿದಾಗಲೆಲ್ಲ ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಲು ಅವನನ್ನು ಅಗತ್ಯಪಡಿಸತಕ್ಕದ್ದು ಮತ್ತು ಅಂಥ ಬಂಧಪತ್ರವು ಆರು ತಿಂಗಳವರೆಗೆ ಜಾರಿಯಲ್ಲಿರತಕ್ಕದ್ದು.

(2) ಅಂಥ ಆಪಾದಿತನು ಹಾಜರಾಗಲು ತಪ್ಪಿದರೆ, ಬಂಧಪತ್ರ ಮುಟ್ಟುಗೋಲಾಗತಕ್ಕದ್ದು ಮತ್ತು 491ನೇ ಪ್ರಕರಣದ ಮೇರೆಗಿನ ಪ್ರಕ್ರಿಯೆಯು ಅನ್ವಯವಾಗತಕ್ಕದ್ದು.

**482. ದಸ್ತಗಿರಿಯಾಗುವೆನೆಂದು ಭೀತಿಯಿರುವ ವ್ಯಕ್ತಿಗೆ ಜಾಮೀನು ನೀಡಲು ನಿರ್ದೇಶನ.-** (1) ಯಾರೇ ವ್ಯಕ್ತಿಗೆ, ತನ್ನನ್ನು ಜಾಮೀನೀಯವಲ್ಲದ ಅಪರಾಧ ಮಾಡಿದ ಆಪಾದನೆಯ ಮೇಲೆ ದಸ್ತಗಿರಿ ಮಾಡಬಹುದೆಂದು ನಂಬಲು ಕಾರಣವಿರುವಲ್ಲಿ, ಈ ಪ್ರಕರಣದ ಮೇರೆಗೆ ನಿರ್ದೇಶನಕ್ಕಾಗಿ ಉಚ್ಚ ನ್ಯಾಯಾಲಯಕ್ಕೆ ಅಥವಾ ಸೆಷನ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಅಂಥ ದಸ್ತಗಿರಿಯ ಸಂದರ್ಭದಲ್ಲಿ, ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದೆಂದು ನಿರ್ದೇಶನ ನೀಡಬಹುದು.

(2) ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು (1)ನೇ ಉಪಪ್ರಕರಣದ ಮೇರೆಗೆ ನಿರ್ದೇಶನವನ್ನು ಮಾಡಿದಾಗ, ಅದು ಒಂದು ನಿರ್ದಿಷ್ಟ ಮೊಕದ್ದಮೆಯ ಸಂಗತಿಗಳನ್ನಾವಲಂಬಿಸಿ,-

(i) ಪೊಲೀಸ್ ಅಧಿಕಾರಿಯು ಅಗತ್ಯಪಡಿಸಿದಾಗಲೆಲ್ಲಾ ವಿಚಾರಣೆಗಾಗಿ ಆ ವ್ಯಕ್ತಿಯು ಹಾಜರಾಗತಕ್ಕದ್ದೆಂಬ ಷರತ್ತನ್ನು;

(ii) ಮೊಕದ್ದಮೆಯ ಸಂಗತಿಗಳ ಬಗ್ಗೆ ತಿಳಿದಿರುವ ಯಾರೇ ವ್ಯಕ್ತಿಗೆ ಅಂಥ ವಿಷಯಗಳನ್ನು ನ್ಯಾಯಾಲಯಕ್ಕೆ ಅಥವಾ ಯಾರೇ ಪೊಲೀಸ್ ಅಧಿಕಾರಿಗೆ ಬಹಿರಂಗಪಡಿಸದಂತೆ ಮನವೊಲಿಸಲು ಆ ವ್ಯಕ್ತಿಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪ್ರೇರಣೆ, ಬೆದರಿಕೆ ಅಥವಾ ವಾಗ್ದಾನ ಮಾಡಬಾರದೆಂಬ ಷರತ್ತನ್ನು;

(iii) ಆ ವ್ಯಕ್ತಿಯು ನ್ಯಾಯಾಲಯದ ಪೂರ್ವಾನುಮತಿಯಿಲ್ಲದೆ ಭಾರತವನ್ನು ಬಿಡಬಾರದೆಂಬ ಷರತ್ತನ್ನು;

(iv) 480ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಜಾಮೀನು ನೀಡಲಾಗಿದ್ದರೆ ಯಾವ ಷರತ್ತುಗಳನ್ನು ವಿಧಿಸಬಹುದಾಗಿತ್ತೋ ಆ ಇತರ ಷರತ್ತನ್ನು

- ಒಳಗೊಂಡು, ತಾನು ಸೂಕ್ತವೆಂದು ಭಾವಿಸುವಂಥ ಇತರ ಷರತ್ತುಗಳನ್ನು ಆ ನಿರ್ದೇಶನಗಳಲ್ಲಿ ಸೇರಿಸಬಹುದು.

(3) ಆ ತರುವಾಯ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯು ಅಂಥ ವ್ಯಕ್ತಿಯನ್ನು ಆಪಾದನೆಯ ಮೇಲೆ ವಾರಂಟಿಲ್ಲದೆಯೆ ದಸ್ತಗಿರಿ ಮಾಡಿದರೆ ಮತ್ತು ದಸ್ತಗಿರಿಯ ಸಮಯದಲ್ಲಿ ಅಥವಾ ಅಂಥ ಅಧಿಕಾರಿಯ ಅಭಿರಕ್ಷೆಯಲ್ಲಿರುವ ಯಾವುದೇ ಸಮಯದಲ್ಲಿ ಜಾಮೀನನ್ನು ಕೊಡಲು ಸಿದ್ಧನಾಗಿದ್ದರೆ, ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳುವ ಮ್ಯಾಜಿಸ್ಟ್ರೇಟನು ಆ ವ್ಯಕ್ತಿಯ ವಿರುದ್ಧ ಮೊದಲನೇ ವಾರಂಟನ್ನು ಹೊರಡಿಸಬೇಕೆಂದು ತೀರ್ಮಾನಿಸಿದರೆ, ಅವನು (1)ನೇ ಉಪಪ್ರಕರಣದ ಮೇರೆಗಿನ ನ್ಯಾಯಾಲಯದ ನಿರ್ದೇಶನಕ್ಕನುಸಾರವಾಗಿ ಜಾಮೀನೀಯ ವಾರಂಟನ್ನು ಹೊರಡಿಸತಕ್ಕದ್ದು.

(4) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 65ನೇ ಪ್ರಕರಣ ಮತ್ತು 70ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅಪರಾಧವನ್ನು ಮಾಡಿರುವನೆಂಬ ಆರೋಪದ ಮೇಲೆ ಯಾರೇ ವ್ಯಕ್ತಿಯ ದಸ್ತಗಿರಿಯನ್ನು ಒಳಗೊಂಡಿರುವ ಯಾವುದೇ ಮೊಕದ್ದಮೆಗೆ ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

**483. ಜಾಮೀನಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯ ಅಥವಾ ಸೆಷನ್ ನ್ಯಾಯಾಲಯದ ವಿಶೇಷ ಅಧಿಕಾರಗಳು.-** (1) ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು,-

(ಎ) ಅಪರಾಧಕ್ಕಾಗಿ ಆಪಾದಿತನಾದ ಮತ್ತು ಅಭಿರಕ್ಷೆಯಲ್ಲಿರುವ ಯಾರೇ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಬಹುದು ಮತ್ತು ಅಪರಾಧವು 480ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಸ್ವರೂಪದ ಅಪರಾಧವಾಗಿದ್ದರೆ, ಆ ಉಪಪ್ರಕರಣದಲ್ಲಿ ನಮೂದಿಸಲಾದ ಉದ್ದೇಶಗಳಿಗಾಗಿ ಅವಶ್ಯವೆಂದು ತಾನು ಪರ್ಯಾಲೋಚಿಸುವ ಯಾವುದೇ ಷರತ್ತನ್ನು ವಿಧಿಸಬಹುದು;

(ಬಿ) ಯಾರೇ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವಾಗ ಮ್ಯಾಜಿಸ್ಟ್ರೇಟನು ವಿಧಿಸಿದ ಯಾವುದೇ ಷರತ್ತನ್ನು ರದ್ದು ಮಾಡಬೇಕು ಅಥವಾ ಮಾರ್ಪಾಟು ಮಾಡಬೇಕು ಎಂದು ನಿರ್ದೇಶಿಸಬಹುದು:

ಪರಂತು, ಸೆಷನ್ ನ್ಯಾಯಾಲಯದಿಂದ ಮಾತ್ರ ಅಧಿವಿಚಾರಣೆ ಮಾಡಬಹುದಾದ ಅಥವಾ ಹಾಗೆ ಅಧಿವಿಚಾರಣೆಯಲ್ಲದಿದ್ದರೂ, ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಆಪಾದಿತನಾಗಿರುವ ವ್ಯಕ್ತಿಯನ್ನು ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು, ಜಾಮೀನು ನೀಡುವ ಮುಂಚೆ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅದು ಅಂಥ ನೋಟೀಸು ನೀಡಲು ಕಾರ್ಯಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟ ಹೊರತು, ಜಾಮೀನಿಗಾಗಿ ಸಲ್ಲಿಸಿದ ಅರ್ಜಿಯ ಸಂಬಂಧದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ನೋಟೀಸು ನೀಡತಕ್ಕದ್ದು:

ಮತ್ತು ಪರಂತು, ಉಚ್ಚ ನ್ಯಾಯಾಲಯ ಅಥವಾ ಸೆಷನ್ ನ್ಯಾಯಾಲಯವು, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 65ನೇ ಪ್ರಕರಣ ಅಥವಾ 70ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಅಧಿವಿಚಾರಣೆ ಮಾಡಬಹುದಾದ ಅಪರಾಧಕ್ಕಾಗಿ ಆಪಾದಿತನಾಗಿರುವ ವ್ಯಕ್ತಿಗೆ ಜಾಮೀನು ನೀಡುವ ಮುಂಚೆ, ಜಾಮೀನಿಗಾಗಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯ ಒಳಗಾಗಿ ಅಂಥ ಅರ್ಜಿಯ ನೋಟೀಸನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಗೆ ನೀಡತಕ್ಕದ್ದು.

(2) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 65ನೇ ಪ್ರಕರಣ ಅಥವಾ 70ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವ್ಯಕ್ತಿಯ ಜಾಮೀನಿಗಾಗಿನ ಅರ್ಜಿಯನ್ನು ವಿಚಾರಣೆ ಮಾಡುವ ಸಮಯದಲ್ಲಿ ಮಾಹಿತಿದಾರನ ಅಥವಾ ಆತನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯ ಹಾಜರಾತಿಯು ಕಡ್ಡಾಯವಾಗಿರತಕ್ಕದ್ದು.

(3) ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು, ಈ ಅಧ್ಯಾಯದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆಯಾದ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಮತ್ತು ಅವನನ್ನು ಅಭಿರಕ್ಷೆಗೆ ಒಪ್ಪಿಸಲು ನಿರ್ದೇಶಿಸಬಹುದು.

**484. ಬಂಧಪತ್ರದ ಮೊಬಲಗು ಮತ್ತು ಅದನ್ನು ಕಡಿಮೆ ಮಾಡುವಿಕೆ.-** (1) ಈ ಅಧ್ಯಾಯದ ಮೇರೆಗೆ ಬರೆದುಕೊಡಲಾದ ಪ್ರತಿಯೊಂದು ಬಂಧಪತ್ರದ ಮೊಬಲಗನ್ನು ಮೊಕದ್ದಮೆಯ ಸನ್ನಿವೇಶಗಳಿಗೆ ಸೂಕ್ತ ಗಮನಕೊಟ್ಟು ನಿಗದಿಗೊಳಿಸತಕ್ಕದ್ದು ಮತ್ತು ಅದು ಅಧಿಕವಾಗಿರತಕ್ಕದ್ದಲ್ಲ.

(2) ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು, ಪೊಲೀಸ್ ಅಧಿಕಾರಿಯು ಅಥವಾ ಮ್ಯಾಜಿಸ್ಟ್ರೇಟನು ಅಗತ್ಯಪಡಿಸುವ ಜಾಮೀನನ್ನು ಕಡಿಮೆ ಮಾಡಬೇಕೆಂದು ನಿರ್ದೇಶಿಸಬಹುದು.

**485. ಆಪಾದಿತನ ಮತ್ತು ಜಾಮೀನುದಾರರ ಬಂಧಪತ್ರ.-** (1) ಯಾರೇ ವ್ಯಕ್ತಿಯು ಬಂಧಪತ್ರದ ಮೇಲೆ ಅಥವಾ ಜಾಮೀನು ಬಂಧಪತ್ರದ ಮೇಲೆ ಬಿಡುಗಡೆಯಾಗುವ ಮುಂಚೆ, ಸಂದರ್ಭಾನುಸಾರ, ಪೊಲೀಸ್ ಅಧಿಕಾರಿಯು ಅಥವಾ ನ್ಯಾಯಾಲಯವು ಸಾಕೆಂದು ಭಾವಿಸುವಂಥ ಹಣದ ಮೊತ್ತಕ್ಕಾಗಿ ಮತ್ತು ಅವನು ಬಂಧಪತ್ರದ ಮೇಲೆ ಅಥವಾ ಜಾಮೀನು ಬಂಧಪತ್ರದ ಮೇಲೆ ಬಿಡುಗಡೆಯಾದಾಗ ಬಂಧಪತ್ರದಲ್ಲಿ ತಿಳಿಸಲಾದ ಸಮಯ ಮತ್ತು ಸ್ಥಳದಲ್ಲಿ ಅವನು ಹಾಜರಾಗತಕ್ಕದ್ದೆಂಬ ಮತ್ತು ಸಂದರ್ಭಾನುಸಾರ, ಪೊಲೀಸ್ ಅಧಿಕಾರಿ ಅಥವಾ ನ್ಯಾಯಾಲಯವು ಅನ್ಯಥಾ ನಿರ್ದೇಶಿಸುವವರೆಗೆ ಹಾಗೆ ಹಾಜರಾಗುವುದು ಮುಂದುವರೆಯತಕ್ಕದ್ದೆಂಬ ಷರತ್ತಿಗೊಳಪಟ್ಟು ಅವನು ಮತ್ತು ಒಬ್ಬ ಅಥವಾ ಸಾಕಷ್ಟು ಮಂದಿ ಜಾಮೀನುದಾರರು ಬಂಧಪತ್ರವನ್ನು ಬರೆದುಕೊಡತಕ್ಕದ್ದು.

(2) ಯಾರೇ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಯಾವುದೇ ಷರತ್ತನ್ನು ವಿಧಿಸಿರುವಲ್ಲಿ, ಆ ಷರತ್ತನ್ನು ಸಹ ಬಂಧಪತ್ರ ಅಥವಾ ಜಾಮೀನು ಬಂಧಪತ್ರ ಒಳಗೊಳ್ಳತಕ್ಕದ್ದು.

(3) ಮೊಕದ್ದಮೆಯಲ್ಲಿ ಹಾಗೆ ಅಗತ್ಯಪಡಿಸಿದರೆ, ಜಾಮೀನು ಬಂಧಪತ್ರದ ಮೇಲೆ ಬಿಡುಗಡೆಯಾದ ವ್ಯಕ್ತಿಯನ್ನು, ಆರೋಪಕ್ಕೆ ಉತ್ತರಿಸಲು ಹಾಜರಾಗಬೇಕೆಂದು ಕೇಳಿದಾಗ ಉಚ್ಚ ನ್ಯಾಯಾಲಯದಲ್ಲಿ, ಸೆಷನ್ ನ್ಯಾಯಾಲಯದಲ್ಲಿ ಅಥವಾ ಇತರ ನ್ಯಾಯಾಲಯದಲ್ಲಿ ಹಾಜರಾಗಲು, ಆ ಬಂಧಪತ್ರ ಅಥವಾ ಜಾಮೀನು ಬಂಧಪತ್ರ ಬದ್ಧಗೊಳಿಸತಕ್ಕದ್ದು.

(4) ಜಾಮೀನುದಾರನು ಅರ್ಹನೇ (fit) ಅಥವಾ ಪರ್ಯಾಪ್ತನೇ (sufficient) ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ನ್ಯಾಯಾಲಯವು, ಸಂಗತಿಗಳ ರುಜುವಾತಿಗಾಗಿ ಪರ್ಯಾಪ್ತತೆ (sufficiency) ಅಥವಾ ಅರ್ಹತೆಗೆ (fit) ಸಂಬಂಧಪಟ್ಟಂತೆ ಆ ವಿವರಗಳನ್ನು ಒಳಗೊಂಡಿರುವ ಅಫಿಡಾವಿಟ್ ಅನ್ನು ತೆಗೆದುಕೊಳ್ಳಬಹುದು ಮತ್ತು ಅವಶ್ಯವೆನಿಸಿದರೆ ಪರ್ಯಾಪ್ತತೆ ಮತ್ತು ಅರ್ಹತೆಯ ಬಗ್ಗೆ ತಾನೇ ವಿಚಾರಣೆಯನ್ನು ನಡೆಸಬಹುದು ಅಥವಾ ಆ ನ್ಯಾಯಾಲಯಕ್ಕೆ ಅಧೀನನಾದ ಮ್ಯಾಜಿಸ್ಟ್ರೇಟನು ವಿಚಾರಣೆಯನ್ನು ನಡೆಸಬಹುದು.

**486. ಜಾಮೀನುದಾರರಿಂದ ಘೋಷಣೆ.-** ಆಪಾದಿತನು ಜಾಮೀನಿನ ಮೇಲೆ ಬಿಡುಗಡೆಯಾಗಲು ಆಪಾದಿತನಿಗೆ ಜಾಮೀನುದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಆಪಾದಿತನಿಗೆ ಜಾಮೀನಾಗಿರುವುದೂ ಸೇರಿದಂತೆ, ತಾನು ಬೇರೆ ಎಷ್ಟು ವ್ಯಕ್ತಿಗಳಿಗೆ ಜಾಮೀನುದಾರನಾಗಿರುವುದರ ಬಗ್ಗೆ ಸುಸಂಗತ ವಿವರಗಳನ್ನೊಳಗೊಂಡ ಘೋಷಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು.

**487. ಅಭಿರಕ್ಷೆಯಿಂದ ಬಿಡುಗಡೆ.-** (1) ಬಂಧಪತ್ರವನ್ನು ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಟ್ಟ ಕೂಡಲೇ, ಯಾರ ಹಾಜರಾತಿಗಾಗಿ ಅದನ್ನು ಬರೆದುಕೊಡಲಾಗಿತ್ತೋ ಆ ವ್ಯಕ್ತಿಯನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅವನು ಜೈಲಿನಲ್ಲಿದ್ದರೆ, ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವ ನ್ಯಾಯಾಲಯವು ಬಿಡುಗಡೆಯ ಆದೇಶವನ್ನು ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ನೀಡತಕ್ಕದ್ದು ಮತ್ತು ಅಂಥ ಅಧಿಕಾರಿಯು, ಆದೇಶಗಳನ್ನು ಸ್ವೀಕರಿಸಿದ ತರುವಾಯ ಅವನನ್ನು ಬಿಡುಗಡೆ ಮಾಡತಕ್ಕದ್ದು.

(2) ಈ ಪ್ರಕರಣ, 478 ಮತ್ತು 480ನೇ ಪ್ರಕರಣದಲ್ಲಿರುವುದು ಯಾವುದೂ, ಯಾವುದರ ಬಗ್ಗೆ ಬಂಧಪತ್ರವನ್ನು ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಲಾಗಿತ್ತೋ, ಅದಲ್ಲದ ಇತರ ಕೆಲವು ವಿಷಯಕ್ಕಾಗಿ ತಡೆಹಿಡಿದಿರಿಸಲು ಗುರಿಯಾದ ಯಾರೇ ವ್ಯಕ್ತಿಯ ಬಿಡುಗಡೆಯನ್ನು ಅಗತ್ಯಪಡಿಸುವುದೆಂದು ಭಾವಿಸತಕ್ಕದ್ದಲ್ಲ.

**488. ಮೊದಲು ತೆಗೆದುಕೊಂಡ ಜಾಮೀನು ಸಾಕಷ್ಟಿಲ್ಲದಿರುವಾಗ ಶಕ್ತ ಜಾಮೀನಿಗಾಗಿ ಆದೇಶಿಸುವ ಅಧಿಕಾರ.-** ತಪ್ಪಿನಿಂದ, ಮೋಸದಿಂದ ಅಥವಾ ಅನ್ಯಥಾ ಅಪರ್ಯಾಪ್ತ ಜಾಮೀನುದಾರನನ್ನು ಅಂಗೀಕರಿಸಿದ್ದರೆ ಅಥವಾ ಆನಂತರ ತಮ್ಮ ಪರ್ಯಾಪ್ತತೆಯನ್ನು ಕಳೆದುಕೊಂಡರೆ, ಜಾಮೀನಿನ ಮೇಲೆ ಬಿಡುಗಡೆಯಾದ ವ್ಯಕ್ತಿಯನ್ನು ತನ್ನ ಮುಂದೆ ಹಾಜರುಪಡಿಸಬೇಕೆಂದು ನಿರ್ದೇಶಿಸಿ ಅವನ ದಸ್ತಗಿರಿಗಾಗಿ ನ್ಯಾಯಾಲಯವು ವಾರಂಟನ್ನು ಹೊರಡಿಸಬಹುದು ಮತ್ತು ಪರ್ಯಾಪ್ತ ಜಾಮೀನುದಾರರನ್ನು ಒದಗಿಸಬೇಕೆಂದು ಅವನಿಗೆ ಆದೇಶಿಸಬಹುದು ಮತ್ತು ಅವನು ಹಾಗೆ ಮಾಡಲು ತಪ್ಪಿದರೆ, ಅವನನ್ನು ಜೈಲಿಗೆ ಒಪ್ಪಿಸಬಹುದು.

**489. ಜಾಮೀನುದಾರರ ವಿಮೋಚನೆ.-** (1) ಜಾಮೀನಿನ ಮೇಲೆ ಬಿಡುಗಡೆಯಾದ ವ್ಯಕ್ತಿಯ ಹಾಜರಾತಿ ಮತ್ತು ಉಪಸ್ಥಿತಿಗಾಗಿ ಜಾಮೀನು ನೀಡಿರುವ ಎಲ್ಲಾ ಅಥವಾ ಯಾರೇ ಜಾಮೀನುದಾರನು ಪೂರ್ಣವಾಗಿ ಅಥವಾ ಅರ್ಜಿದಾರರಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಬಂಧಪತ್ರದಿಂದ ವಿಮೋಚನೆಗೊಳಿಸುವಂತೆ ಯಾವುದೇ ಸಮಯದಲ್ಲಿ ಮ್ಯಾಜಿಸ್ಟ್ರೇಟನಿಗೆ ಅರ್ಜಿ ಸಲ್ಲಿಸಬಹುದು.

(2) ಅಂಥ ಅರ್ಜಿಯನ್ನು ಸಲ್ಲಿಸಿದ ಮೇಲೆ, ಮ್ಯಾಜಿಸ್ಟ್ರೇಟನು ಹಾಗೆ ಬಿಡುಗಡೆಯಾದ ವ್ಯಕ್ತಿಯನ್ನು ತನ್ನ ಮುಂದೆ ಹಾಜರುಪಡಿಸಬೇಕೆಂದು ನಿರ್ದೇಶಿಸಿ ದಸ್ತಗಿರಿಯ ವಾರಂಟನ್ನು ಹೊರಡಿಸಬಹುದು.

(3) ಆ ವಾರಂಟಿಗನುಸಾರವಾಗಿ ಅಂಥ ವ್ಯಕ್ತಿಯು ಹಾಜರಾದ ಮೇಲೆ ಅಥವಾ ತಾನಾಗಿಯೇ ಹಾಜರಾದ ಮೇಲೆ, ಮ್ಯಾಜಿಸ್ಟ್ರೇಟನು, ಬಂಧಪತ್ರವನ್ನು ಪೂರ್ಣವಾಗಿ ಅಥವಾ ಅರ್ಜಿದಾರರಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಅದರಿಂದ ವಿಮೋಚನೆಗೊಳಿಸುವಂತೆ ನಿರ್ದೇಶಿಸತಕ್ಕದ್ದು ಮತ್ತು ಇತರ ಪರ್ಯಾಪ್ತ ಜಾಮೀನುದಾರರನ್ನು ಒದಗಿಸಬೇಕೆಂದು ಅಂಥ ವ್ಯಕ್ತಿಯನ್ನು ಕೇಳತಕ್ಕದ್ದು ಮತ್ತು ಹಾಗೆ ಮಾಡಲು ಅವನು ತಪ್ಪಿದ್ದಲ್ಲಿ, ಅವನನ್ನು ಜೈಲಿಗೆ ಒಪ್ಪಿಸಬಹುದು.

**490. ಮುಚ್ಚಳಿಕೆ ಬದಲಾಗಿ ಠೇವಣಿ.-** ಯಾವುದೇ ನ್ಯಾಯಾಲಯ ಅಥವಾ ಅಧಿಕಾರಿಯು ಯಾರೇ ವ್ಯಕ್ತಿಯನ್ನು ಬಂಧಪತ್ರ ಅಥವಾ ಜಾಮೀನು ಬಂಧಪತ್ರವನ್ನು ಬರೆದುಕೊಡಲು ಅಗತ್ಯಪಡಿಸಿದಾಗ, ಅಂಥ ನ್ಯಾಯಾಲಯ ಅಥವಾ ಅಧಿಕಾರಿಯು, ಸದ್ವರ್ತನೆಯ ಬಗೆಗಿನ ಬಂಧಪತ್ರದ ಹೊರತಾಗಿ, ಅಂಥ ಬಂಧಪತ್ರವನ್ನು ಬರೆದುಕೊಡುವ ಬದಲಾಗಿ ನ್ಯಾಯಾಲಯ ಅಥವಾ ಅಧಿಕಾರಿಯು ನಿಗದಿಪಡಿಸಬಹುದಾದ ಮೊತ್ತದಷ್ಟು ಹಣವನ್ನು ಅಥವಾ ಅದಕ್ಕೆ ಸಮನಾದ ಮೊತ್ತದ ಸರ್ಕಾರಿ ಪ್ರಾಮಿಸರಿ ನೋಟುಗಳನ್ನು ಠೇವಣಿ ಮಾಡಲು ಅನುಮತಿ ನೀಡಬಹುದು.

**491. ಬಂಧಪತ್ರವನ್ನು ಮುಟ್ಟುಗೋಲು ಹಾಕಿಕೊಂಡಾಗ ಪ್ರಕ್ರಿಯೆ.-** (1) (ಎ) ನ್ಯಾಯಾಲಯದ ಮುಂದೆ ಹಾಜರಾತಿಗಾಗಿ ಅಥವಾ ಸ್ವತ್ತನ್ನು ಹಾಜರುಪಡಿಸುವುದಕ್ಕಾಗಿ ಈ ಸಂಹಿತೆಯ ಮೇರೆಗೆ ಬಂಧಪತ್ರವನ್ನು ಬರೆದುಕೊಟ್ಟಿದ್ದಲ್ಲಿ ಮತ್ತು ಆ ಬಂಧಪತ್ರ ಮುಟ್ಟುಗೋಲಾಗಿದೆಯೆಂದು ಆ ನ್ಯಾಯಾಲಯಕ್ಕೆ ಅಥವಾ ತರುವಾಯ ಮೊಕದ್ದಮೆಯನ್ನು ವರ್ಗಾಯಿಸಲಾದ ಯಾವುದೇ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ರುಜುವಾತು ಆಗಿರುವಲ್ಲಿ; ಅಥವಾ

(ಬಿ) ಈ ಸಂಹಿತೆಯ ಮೇರೆಗಿನ ಇತರ ಯಾವುದೇ ಬಂಧಪತ್ರದ ಸಂಬಂಧದಲ್ಲಿ, ಬಂಧಪತ್ರವನ್ನು ತೆಗೆದುಕೊಂಡ ನ್ಯಾಯಾಲಯಕ್ಕೆ ಅಥವಾ ತರುವಾಯ ಮೊಕದ್ದಮೆಯನ್ನು ವರ್ಗಾಯಿಸಲಾದ ಯಾವುದೇ ನ್ಯಾಯಾಲಯಕ್ಕೆ ಅಥವಾ ಯಾರೇ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಬಂಧಪತ್ರ ಮುಟ್ಟುಗೋಲಾಗಿದೆಯೆಂದು ಮನವರಿಕೆಯಾಗುವಂತೆ ರುಜುವಾತು ಆಗಿರುವಲ್ಲಿ

- ನ್ಯಾಯಾಲಯವು ಅಂಥ ರುಜುವಾತಿನ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ಅಂಥ ಬಂಧಪತ್ರದಿಂದ ಬದ್ಧನಾದ ಯಾರೇ ವ್ಯಕ್ತಿಯನ್ನು ಅದರ ಮೇರೆಗೆ ದಂಡವನ್ನು ಸಂದಾಯ ಮಾಡಲು ಅಥವಾ ಏಕೆ ಅದನ್ನು ಸಂದಾಯ ಮಾಡಬಾರದೆಂಬುದಕ್ಕೆ ಕಾರಣ ತೋರಿಸಲು ಕೇಳಬಹುದು.

*ವಿವರಣೆ.*- ನ್ಯಾಯಾಲಯದ ಮುಂದೆ ಹಾಜರಾತಿಗಾಗಿ ಅಥವಾ ಸ್ವತ್ತನ್ನು ಹಾಜರುಪಡಿಸುವುದಕ್ಕಾಗಿ ಬರೆದುಕೊಟ್ಟ ಬಂಧಪತ್ರದಲ್ಲಿರುವ ಷರತ್ತು, ಮೊಕದ್ದಮೆಯನ್ನು ಆ ತರುವಾಯ ಯಾವ ನ್ಯಾಯಾಲಯಕ್ಕೆ ವರ್ಗಾಯಿಸಬಹುದೋ, ಆ ನ್ಯಾಯಾಲಯದ ಮುಂದೆ ಸಂದರ್ಭಾನುಸಾರ, ಹಾಜರಾತಿಗಾಗಿ ಅಥವಾ ಸ್ವತ್ತನ್ನು ಹಾಜರುಪಡಿಸುವುದಕ್ಕಾಗಿ ಇರುವ ಷರತ್ತನ್ನು ಒಳಗೊಂಡಿದೆ ಎಂಬಂತೆ ಅರ್ಥೈಸತಕ್ಕದ್ದು.

(2) ಸಾಕಷ್ಟು ಕಾರಣವನ್ನು ತೋರಿಸದಿದ್ದರೆ ಮತ್ತು ದಂಡವನ್ನು ಸಂದಾಯ ಮಾಡದಿದ್ದರೆ, ಅಂಥ ದಂಡವು ಈ ಸಂಹಿತೆಯ ಮೇರೆಗೆ ವಿಧಿಸಲಾದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ವಸೂಲು ಮಾಡಲು ನ್ಯಾಯಾಲಯವು ಮುಂದುವರಿಯಬಹುದು:

ಪರಂತು, ಅಂಥ ದಂಡವನ್ನು ಸಂದಾಯ ಮಾಡದಿರುವಲ್ಲಿ ಮತ್ತು ಹಿಂದೆ ಹೇಳಿದ ರೀತಿಯಲ್ಲಿ ವಸೂಲ್ಮಾಡಲಾಗದಿದ್ದರೆ, ಹಾಗೆ ಜಾಮೀನುದಾರನಾಗಿ ಬದ್ಧವಾಗಿರುವ ವ್ಯಕ್ತಿಯು ದಂಡವನ್ನು ವಸೂಲು ಮಾಡಲು ಆದೇಶಿಸುವ ನ್ಯಾಯಾಲಯದ ಆದೇಶದಂತೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿ ಸಿವಿಲ್ ಜೈಲಿನಲ್ಲಿ ಕಾರಾವಾಸಕ್ಕೆ ಗುರಿಯಾಗತಕ್ಕದ್ದು.

(3) ನ್ಯಾಯಾಲಯವು, ನಮೂದಿಸಲಾದ ದಂಡದ ಯಾವುದೇ ಭಾಗವನ್ನು ಮಾಫಿ ಮಾಡುವುದಕ್ಕಾಗಿನ ಮತ್ತು ಸಂದಾಯವನ್ನು ಭಾಗಶಃ ಮಾತ್ರವೇ ಜಾರಿ ಮಾಡುವುದಕ್ಕಾಗಿನ ಕಾರಣಗಳನ್ನು ದಾಖಲಿಸಿ ಮಾಫಿ ಮಾಡಬಹುದು ಮತ್ತು ಜಾರಿಗೊಳಿಸತಕ್ಕದ್ದು.

(4) ಬಂಧಪತ್ರವನ್ನು ಬರೆದುಕೊಟ್ಟ ಜಾಮೀನುದಾರನು ಬಂಧಪತ್ರ ಮುಟ್ಟುಗೋಲಾಗುವುದಕ್ಕೆ ಮುಂಚೆಯೇ ಮರಣ ಹೊಂದಿದ್ದರೆ, ಅವನ ಸಂಪದವನ್ನು ಬಂಧಪತ್ರದ ಸಂಬಂಧದಲ್ಲಿನ ಎಲ್ಲಾ ಹೊಣೆಗಾರಿಕೆಯಿಂದ ವಿಮೋಚನೆಗೊಳಿಸತಕ್ಕದ್ದು.

(5) 125ನೇ ಅಥವಾ 136ನೇ ಅಥವಾ 401ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ಒದಗಿಸಿದ ಯಾರೇ ವ್ಯಕ್ತಿಯು, ಅವನ ಬಂಧಪತ್ರ ಅಥವಾ ಅದಕ್ಕೆ ಬದಲಾಗಿ 494ನೇ ಪ್ರಕರಣದ ಮೇರೆಗೆ ಬರೆದುಕೊಡಲಾದ ಬಂಧಪತ್ರದ ಷರತ್ತುಗಳ ಉಲ್ಲಂಘನೆ ಮಾಡಿದ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ, ಅವನನ್ನು ಅಂಥ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣಯಿಸಿದ ನ್ಯಾಯಾಲಯದ ತೀರ್ಪಿನ ಪ್ರಮಾಣಿತ ಪ್ರತಿಯನ್ನು ಈ ಪ್ರಕರಣದ ಮೇರೆಗಿನ ವ್ಯವಹರಣೆಗಳಲ್ಲಿ ಅವನ ಜಾಮೀನುದಾರ ಅಥವಾ ಜಾಮೀನುದಾರರ ವಿರುದ್ಧ ಸಾಕ್ಷ್ಯವಾಗಿ ಉಪಯೋಗಿಸಬಹುದು ಮತ್ತು ಅಂಥ ಪ್ರಮಾಣಿತ ಪ್ರತಿಯನ್ನು ಹಾಗೆ ಉಪಯೋಗಿಸಿದರೆ, ಅನ್ಯಥಾ ರುಜುವಾತಾದ ಹೊರತು ಆ ಅಪರಾಧವನ್ನು ಅವನು ಮಾಡಿರುವನೆಂಬುದಾಗಿ ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

**492. ಬಂಧಪತ್ರ ಮತ್ತು ಜಾಮೀನು ಬಂಧಪತ್ರದ ರದ್ಧತಿ.-** 491ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಈ ಸಂಹಿತೆಯ ಮೇರೆಗೆ, ಮೊಕದ್ದಮೆಯಲ್ಲಿ ವ್ಯಕ್ತಿಯ ಹಾಜರಾತಿಗಾಗಿ ಬಂಧಪತ್ರ ಅಥವಾ ಜಾಮೀನು ಬಂಧಪತ್ರ ಇರುವಲ್ಲಿ ಮತ್ತು ಅದನ್ನು ಷರತ್ತಿನ ಉಲ್ಲಂಘನೆಗಾಗಿ ಮುಟ್ಟುಗೋಲು ಹಾಕಿಕೊಂಡಿರುವಲ್ಲಿ,-

(ಎ) ಅಂಥ ವ್ಯಕ್ತಿಯು ಬರೆದುಕೊಟ್ಟ ಬಂಧಪತ್ರ ಹಾಗೂ ಆ ಮೊಕದ್ದಮೆಯಲ್ಲಿ ಅವನ ಒಬ್ಬ ಅಥವಾ ಹೆಚ್ಚಿನ ಜಾಮೀನುದಾರರು ಬರೆದುಕೊಟ್ಟ ಬಂಧಪತ್ರ ಯಾವುದಾದರೂ ಇದ್ದರೆ, ಅದು ರದ್ದಾಗತಕ್ಕದ್ದು; ಮತ್ತು

(ಬಿ) ಆ ತರುವಾಯ, ಸಂದರ್ಭಾನುಸಾರ ಪೊಲೀಸ್ ಅಧಿಕಾರಿ ಅಥವಾ ನ್ಯಾಯಾಲಯವು, ಯಾರ ಸಮಕ್ಷಮ ಹಾಜರಾಗಲು ಬಂಧಪತ್ರ ಬರೆದುಕೊಡಲಾಗಿತ್ತೋ ಅವನಿಗೆ ಬಂಧಪತ್ರದಿಂದ ಬದ್ಧನಾದ ವ್ಯಕ್ತಿಯು ಅದರ ಷರತ್ತುಗಳ ಪಾಲಿಸಲು ವಿಫಲನಾಗಿದ್ದಕ್ಕಾಗಿ ಸಾಕಷ್ಟು ಕಾರಣಗಳಿಲ್ಲವೆಂದು ಮನದಟ್ಟಾದರೆ, ಅಂಥ ವ್ಯಕ್ತಿಯನ್ನು ಆ ಮೊಕದ್ದಮೆಯಲ್ಲಿ ಅವನ ಸ್ವಂತ ಬಂಧಪತ್ರದ ಮೇಲೆ ಬಿಡುಗಡೆ ಮಾಡತಕ್ಕದ್ದಲ್ಲ:

ಪರಂತು, ಈ ಸಂಹಿತೆಯ ಇತರ ಯಾವುದೇ ಉಪಬಂಧಗಳಿಗೆ ಒಳಪಟ್ಟು, ಸಂದರ್ಭಾನುಸಾರ ಪೊಲೀಸ್ ಅಧಿಕಾರಿ ಅಥವಾ ನ್ಯಾಯಾಲಯವು ಯೋಗ್ಯವೆಂದು ಯೋಚಿಸುವಂಥ ಮೊತ್ತದ ಹಣಕ್ಕೆ ಹೊಸದಾಗಿ ವೈಯಕ್ತಿಕ ಬಂಧಪತ್ರ ಮತ್ತು ಅಂಥ ಒಬ್ಬ ಅಥವಾ ಹೆಚ್ಚಿನ ಜಾಮೀನುದಾರರು ಬರೆದುಕೊಟ್ಟ ಬಂಧಪತ್ರದ ಮೇಲೆ ಅವನನ್ನು ಆ ಮೊಕದ್ದಮೆಯಲ್ಲಿ ಬಿಡುಗಡೆ ಮಾಡಬಹುದು.

**493. ಜಾಮೀನುದಾರನ ದಿವಾಳಿ ಅಥವಾ ಮರಣದ ಸಂದರ್ಭದಲ್ಲಿ ಅಥವಾ ಬಂಧಪತ್ರವನ್ನು ಮುಟ್ಟುಗೋಲು ಹಾಕಿಕೊಂಡಾಗ ಪ್ರಕ್ರಿಯೆ.-** ಈ ಸಂಹಿತೆಯ ಮೇರೆಗಿನ ಜಾಮೀನು ಬಂಧಪತ್ರವನ್ನು ಬರೆದುಕೊಟ್ಟ ಯಾರೇ ಜಾಮೀನುದಾರನು ದಿವಾಳಿಯಾದಾಗ ಅಥವಾ ಮರಣ ಹೊಂದಿದಾಗ ಅಥವಾ 491ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾವುದೇ ಬಂಧಪತ್ರ ಮುಟ್ಟುಗೋಲಾದಾಗ, ಯಾವ ನ್ಯಾಯಾಲಯದ ಆದೇಶದಿಂದ ಬಂಧಪತ್ರವನ್ನು ತೆಗೆದುಕೊಳ್ಳಲಾಗಿತ್ತೋ ಆ ನ್ಯಾಯಾಲಯವು ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಅಂಥ ಭದ್ರತೆಯನ್ನು ಒದಗಿಸಬೇಕೆಂದು ಅಗತ್ಯಪಡಿಸಲಾದ ವ್ಯಕ್ತಿಯನ್ನು ಮೂಲ ಆದೇಶದ ನಿರ್ದೇಶನಗಳಿಗನುಸಾರವಾಗಿ ಹೊಸ ಭದ್ರತೆಯನ್ನು ಒದಗಿಸಬೇಕೆಂದು ಆದೇಶಿಸಬಹುದು ಮತ್ತು ಅಂಥ ಭದ್ರತೆಯನ್ನು ಒದಗಿಸದಿದ್ದರೆ, ಅಂಥ ಮೂಲ ಆದೇಶವನ್ನು ಪಾಲಿಸದಿದ್ದರೆ ಹೇಗೋ ಹಾಗೆ ಅಂಥ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ಕ್ರಮ ಕೈಗೊಳ್ಳಬಹುದು.

**494. ಮಗುವಿನಿಂದ ಬಂಧಪತ್ರ ಅಗತ್ಯವಾದಾಗ.-** ಬಂಧಪತ್ರವನ್ನು ಬರೆದುಕೊಡಬೇಕೆಂದು ಯಾವುದೇ ನ್ಯಾಯಾಲಯವು ಅಥವಾ ಅಧಿಕಾರಿಯು ಅಗತ್ಯಪಡಿಸಿದ ವ್ಯಕ್ತಿಯು ಮಗುವಿದ್ದಾಗ, ಮಗುವಿನ ಬದಲಾಗಿ, ಒಬ್ಬ ಜಾಮೀನುದಾರನು ಅಥವಾ ಜಾಮೀನುದಾರರು ಮಾತ್ರ ಬರೆದುಕೊಟ್ಟ ಬಂಧಪತ್ರವನ್ನು ಅಂಥ ನ್ಯಾಯಾಲಯ ಅಥವಾ ಅಧಿಕಾರಿಯು ಅಂಗೀಕರಿಸಬಹುದು.

**495. 491ನೇ ಪ್ರಕರಣದ ಮೇರೆಗಿನ ಆದೇಶಗಳ ಮೇಲೆ ಅಪೀಲು.-** 491ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಎಲ್ಲ ಆದೇಶಗಳು,-

(i) ಮ್ಯಾಜಿಸ್ಟ್ರೇಟನು ಮಾಡಿದ ಆದೇಶದ ಸಂದರ್ಭದಲ್ಲಿ, ಸೆಷನ್ಸ್ ನ್ಯಾಯಾಧೀಶನಿಗೆ;

(ii) ಸೆಷನ್ ನ್ಯಾಯಾಲಯವು ಮಾಡಿದ ಆದೇಶದ ಸಂದರ್ಭದಲ್ಲಿ, ಅಂಥ ನ್ಯಾಯಾಲಯವು ಮಾಡಿದ ಆದೇಶದ ಮೇಲೆ ಅಪೀಲಿಗೆ ಅವಕಾಶವಿರುವ ನ್ಯಾಯಾಲಯಕ್ಕೆ

- ಅಪೀಲು ಸಲ್ಲಿಸಬಹುದಾದವುಗಳಾಗಿರತಕ್ಕದ್ದು.

**496. ಕೆಲವು ಮುಚ್ಚಳಿಕೆಗಳ ಮೇಲೆ ಬಾಕಿಯಿರುವ ಮೊತ್ತವನ್ನು ವಸೂಲಿ ಮಾಡುವಂತೆ ನಿರ್ದೇಶಿಸುವ ಅಧಿಕಾರ.-** ಉಚ್ಚ ನ್ಯಾಯಾಲಯವು ಅಥವಾ ಸೆಷನ್ ನ್ಯಾಯಾಲಯವು, ಅಂಥ ಉಚ್ಚ ನ್ಯಾಯಾಲಯ ಅಥವಾ ಸೆಷನ್ ನ್ಯಾಯಾಲಯದಲ್ಲಿ

ಉಪಸ್ಥಿತಿ ಅಥವಾ ಹಾಜರಾತಿಗಾಗಿ ಇರುವ ಬಂಧಪತ್ರದ ಮೇಲೆ ಬಾಕಿಯಿರುವ ಮೊತ್ತವನ್ನು ವಸೂಲಿ ಮಾಡುವಂತೆ ಯಾರೇ ಮ್ಯಾಜಿಸ್ಟ್ರೇಟನಿಗೆ ನಿರ್ದೇಶಿಸಬಹುದು.

## ಅಧ್ಯಾಯ XXXVI

## ಸ್ವತ್ತಿನ ವಿಲೆ

**497. ಕೆಲವು ಮೊಕದ್ದಮೆಗಳಲ್ಲಿ ಅಧಿವಿಚಾರಣೆ ಇತ್ಯರ್ಥವಾಗುವವರೆಗೆ ಸ್ವತ್ತನ್ನು ಅಭಿರಕ್ಷೆಯಲ್ಲಿಡಲು ಹಾಗೂ ವಿಲೆ ಮಾಡಲು ಆದೇಶ.-** ಮೊಕದ್ದಮೆಯ ಯಾವುದೇ ವಿಚಾರಣೆ ಅಥವಾ ಅಧಿವಿಚಾರಣೆಯ ಕಾಲದಲ್ಲಿ ಯಾವುದೇ ಕ್ರಿಮಿನಲ್ ನ್ಯಾಯಾಲಯದ ಮುಂದೆ ಅಥವಾ ಸಂಜ್ಞಾನಕ್ಕೆ ತೆಗೆದುಕೊಳ್ಳಲು ಅಥವಾ ಅಧಿವಿಚಾರಣೆ ನಡೆಸಲು ಅಧಿಕಾರ ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಯಾವುದೇ ಸ್ವತ್ತನ್ನು ಹಾಜರುಪಡಿಸಿದಾಗ, ವಿಚಾರಣೆ ಅಥವಾ ಅಧಿವಿಚಾರಣೆಯು ಮುಕ್ತಾಯವಾಗುವವರೆಗೆ, ಅಂಥ ಸ್ವತ್ತಿನ ಯುಕ್ತ ಅಭಿರಕ್ಷೆಗಾಗಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ಮಾಡಬಹುದು ಮತ್ತು ಆ ಸ್ವತ್ತು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ನಶಿಸಿ ಹೋಗುವ ಸ್ವರೂಪದ್ದಾಗಿದ್ದರೆ ಅಥವಾ ಅನ್ಯಥಾ ಹಾಗೆ ಮಾಡುವುದು ಯುಕ್ತವಾದರೆ, ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ಅವಶ್ಯಕವೆಂದು ತಾನು ಭಾವಿಸುವಂಥ ಸಾಕ್ಷ್ಯವನ್ನು ದಾಖಲಿಸಿದ ತರುವಾಯ, ಅದನ್ನು ಮಾರಾಟ ಮಾಡಲು ಅಥವಾ ಅನ್ಯಥಾ ವಿಲೆ ಮಾಡಲು ಆದೇಶಿಸಬಹುದು.

*ವಿವರಣೆ.*- ಈ ಪ್ರಕರಣದ ಉದ್ದೇಶಗಳಿಗಾಗಿ "ಸ್ವತ್ತು" ಎಂಬುದು,-

(ಎ) ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಅಥವಾ ಅದರ ಅಭಿರಕ್ಷೆಯಲ್ಲಿರುವ ಯಾವುದೇ ರೀತಿಯ ಸ್ವತ್ತನ್ನು ಅಥವಾ ದಸ್ತಾವೇಜನ್ನು;

(ಬಿ) ಯಾವುದರ ಬಗ್ಗೆ ಅಪರಾಧವನ್ನು ಮಾಡಿದಂತೆ ಕಂಡುಬರುತ್ತದೋ ಅಥವಾ ಯಾವುದನ್ನು ಯಾವುದೇ ಅಪರಾಧವನ್ನು ಮಾಡಲು ಉಪಯೋಗಿಸಿದಂತೆ ಕಂಡುಬರುತ್ತದೋ ಆ ಯಾವುದೇ ಸ್ವತ್ತನ್ನು

- ಒಳಗೊಳ್ಳುತ್ತದೆ.

(2) ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನ ಮುಂದೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವತ್ತನ್ನು ಹಾಜರುಪಡಿಸಿದಂದಿನಿಂದ ಹದಿನಾಲ್ಕು ದಿನಗಳ ಅವಧಿಯೊಳಗೆ, ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಿದಂಥ ನಮೂನೆ ಮತ್ತು ರೀತಿಯಲ್ಲಿ ಸ್ವತ್ತಿನ ವಿವರಣೆಯನ್ನು ಒಳಗೊಂಡಿರುವ ಅದರ ವಿವರಣಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(3) ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟ್, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವತ್ತಿನ ಛಾಯಾಚಿತ್ರವನ್ನು ತೆಗೆದುಕೊಳ್ಳುವಂತೆ ಮತ್ತು ಅವಶ್ಯಕವಾದರೆ ಮೊಬೈಲ್ ಫೋನಿನಲ್ಲಿ ಅಥವಾ ಯಾವುದೇ ವಿದ್ಯುನ್ಮಾನ ಸಾಧನದಲ್ಲಿ ವೀಡಿಯೋ ಚಿತ್ರೀಕರಣ ಮಾಡುವಂತೆ ಮಾಡತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗೆ ಸಿದ್ಧಪಡಿಸಿದ ವಿವರಣಪಟ್ಟಿಯನ್ನು ಮತ್ತು (3)ನೇ ಉಪಪ್ರಕರಣದ ಮೇರೆಗೆ ತೆಗೆದುಕೊಂಡ ಛಾಯಾಚಿತ್ರ ಅಥವಾ ವೀಡಿಯೋ ಚಿತ್ರೀಕರಣವನ್ನು ಈ ಸಂಹಿತೆಯ ಮೇರೆಗೆ ಯಾವುದೇ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಬಳಸತಕ್ಕದ್ದು.

(5) ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟ್, (2)ನೇ ಉಪಪ್ರಕರಣದ ಮೇರೆಗೆ ವಿವರಣಪಟ್ಟಿಯನ್ನು ಸಿದ್ಧಪಡಿಸಿದ ನಂತರ ಮತ್ತು (3)ನೇ ಉಪಪ್ರಕರಣದ ಮೇರೆಗೆ ಛಾಯಾಚಿತ್ರ ಅಥವಾ ವೀಡಿಯೋ ಚಿತ್ರೀಕರಣವನ್ನು ತೆಗೆದುಕೊಂಡ ನಂತರ

ಮೂವತ್ತು ದಿನಗಳ ಅವಧಿಯೊಳಗೆ, ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಸ್ವತ್ತನ್ನು ವಿಲೆ, ನಾಶ, ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ವಿಲೇವಾರಿ ಮಾಡಲು ಆದೇಶಿಸತಕ್ಕದ್ದು.

**498. ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ಸ್ವತ್ತಿನ ವಿಲೆಗಾಗಿ ಆದೇಶ.-** (1) ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ತನಿಖೆ, ವಿಚಾರಣೆ ಅಥವಾ ಅಧಿವಿಚಾರಣೆಯು ಮುಕ್ತಾಯವಾದಾಗ, ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ತನ್ನ ಮುಂದೆ ಹಾಜರುಪಡಿಸಲಾದ ಅಥವಾ ತನ್ನ ಅಭಿರಕ್ಷೆಯಲ್ಲಿರುವ ಅಥವಾ ಯಾವ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಅಪರಾಧವನ್ನು ಮಾಡಿದಂತೆ ಕಂಡುಬರುತ್ತದೋ ಅಥವಾ ಯಾವುದೇ ಅಪರಾಧವನ್ನು ಮಾಡಲು ಉಪಯೋಗಿಸಿದಂತೆ ಕಂಡುಬರುತ್ತದೋ ಆ ಯಾವುದೇ ಸ್ವತ್ತನ್ನು ಅಥವಾ ದಸ್ತಾವೇಜನ್ನು ವಿಲೆ ಮಾಡುವ, ನಾಶಗೊಳಿಸುವ, ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಅಥವಾ ಅದರ ಸ್ವಾಧೀನತೆಗೆ ಹಕ್ಕುಳ್ಳವನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಗೆ ಒಪ್ಪಿಸುವ ಮೂಲಕ ಅಥವಾ ಅನ್ಯಥಾ ವಿಲೇವಾರಿ ಮಾಡಲು ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು.

(2) ಯಾವುದೇ ಸ್ವತ್ತಿನ ಸ್ವಾಧೀನತೆಗೆ ಹಕ್ಕುಳ್ಳವನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಗೆ, ಯಾವುದೇ ಷರತ್ತಿಲ್ಲದೆ ಅಥವಾ (1)ನೇ ಉಪಪ್ರಕರಣದ ಮೇರೆಗಿನ ಆದೇಶವನ್ನು ಅಪೀಲಿನ ಅಥವಾ ಪುನರೀಕ್ಷಣೆಯ ಮೇಲೆ ಮಾರ್ಪಡಿಸಿದರೆ ಅಥವಾ ರದ್ದುಪಡಿಸಿದರೆ ನ್ಯಾಯಾಲಯಕ್ಕೆ ಅಂಥ ಸ್ವತ್ತನ್ನು ಹಿಂದಿರುಗಿಸಲು ವಚನಬದ್ಧನಾಗಿದ್ದೇನೆಂದು ನ್ಯಾಯಾಲಯಕ್ಕೆ ಅಥವಾ ಮ್ಯಾಜಿಸ್ಟ್ರೇಟನಿಗೆ ತೃಪ್ತಿಯಾಗುವಂತೆ, ಜಾಮೀನುದಾರ ಸಹಿತ ಅಥವಾ ರಹಿತ ಬಂಧಪತ್ರವನ್ನು ಬರೆದುಕೊಡುವನೆಂಬ ಷರತ್ತಿನ ಮೇಲೆ ಯಾವುದೇ ಸ್ವತ್ತನ್ನು ಒಪ್ಪಿಸಿಕೊಡಲು (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಬಹುದು.

(3) ಸೆಷನ್ ನ್ಯಾಯಾಲಯವು, (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ತಾನೇ ಮಾಡುವ ಬದಲಾಗಿ, ಸ್ವತ್ತನ್ನು ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಒಪ್ಪಿಸಲು ನಿರ್ದೇಶಿಸಬಹುದು, ಅವನು ಆ ತರುವಾಯ 503, 504 ಮತ್ತು 505ನೇ ಪ್ರಕರಣಗಳಲ್ಲಿ ಉಪಬಂಧಿತವಾದ ರೀತಿಯಲ್ಲಿ ವ್ಯವಹರಿಸತಕ್ಕದ್ದು.

(4) ಆ ಸ್ವತ್ತು ಪಶುಸಂಪತ್ತಾಗಿದ್ದ ಹೊರತು ಅಥವಾ ಶೀಘ್ರವಾಗಿ ಹಾಗೂ ಸ್ವಾಭಾವಿಕವಾಗಿ ನಶಿಸಿ ಹೋಗುವಂಥಾಗಿದ್ದ ಹೊರತು ಅಥವಾ (2)ನೇ ಉಪಪ್ರಕರಣದ ಅನುಸಾರವಾಗಿ ಬಂಧಪತ್ರವನ್ನು ಬರೆದುಕೊಟ್ಟಿದ್ದ ಹೊರತು, (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶವನ್ನು ಎರಡು ತಿಂಗಳ ಕಾಲ ಜಾರಿಗೆ ತರತಕ್ಕದ್ದಲ್ಲ ಅಥವಾ ಅಪೀಲನ್ನು ಸಲ್ಲಿಸಲಾಗಿರುವಲ್ಲಿ, ಅಂಥ ಅಪೀಲು ಇತ್ಯರ್ಥವಾಗುವವರೆಗೆ ವಿಲೇವಾರಿ ಮಾಡತಕ್ಕದ್ದಲ್ಲ.

(5) ಈ ಪ್ರಕರಣದಲ್ಲಿ "ಸ್ವತ್ತು" ಎಂಬುದು, ಯಾವ ಸ್ವತ್ತಿನ ಸಂಬಂಧದಲ್ಲಿ ಅಪರಾಧವನ್ನು ಮಾಡಿದಂತೆ ಕಂಡುಬರುತ್ತದೋ ಆ ಸ್ವತ್ತಿನ ಸಂದರ್ಭದಲ್ಲಿ, ಮೂಲತಃ ಯಾರೇ ಪಕ್ಷಕಾರನ ಸ್ವಾಧೀನತೆಯಲ್ಲಿ ಅಥವಾ ನಿಯಂತ್ರಣದಲ್ಲಿ ಇರುವಂಥ ಸ್ವತ್ತು ಮಾತ್ರವಲ್ಲದೆ ಅದನ್ನು ಯಾವುದನ್ನಾಗಿ ಅಥವಾ ಯಾವುದಕ್ಕೆ ಪರಿವರ್ತಿಸಲಾಯಿತೋ ಅಥವಾ ವಿನಿಮಯ ಮಾಡಿಕೊಳ್ಳಲಾಯಿತೋ ಆ ಯಾವುದೇ ಸ್ವತ್ತನ್ನು ಸಹ ಮತ್ತು ಅಂಥ ಪರಿವರ್ತನೆ ಅಥವಾ ವಿನಿಮಯದಿಂದ ಕೂಡಲೇ ಅಥವಾ ಅನ್ಯಥಾ ಆರ್ಜಿಸಿದ ಯಾವುದೇ ವಸ್ತುವನ್ನು ಒಳಗೊಳ್ಳುತ್ತದೆ.

**499. ಆಪಾದಿತನಲ್ಲಿ ದೊರೆತ ಹಣವನ್ನು ಅಮಾಯಕ ಖರೀದಿದಾರನಿಗೆ ಸಂದಾಯ ಮಾಡುವುದು.-** ಕಳವು ಮಾಡಿದ ಅಥವಾ ಕಳವು ಮಾಡಿದ ಸ್ವತ್ತನ್ನು ಸ್ವೀಕರಿಸುವುದನ್ನು ಒಳಗೊಳ್ಳುವ ಅಥವಾ ಹಾಗೆನ್ನಬಹುದಾದ ಯಾವುದೇ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದರೆ ಮತ್ತು ಅವನಿಂದ ಕಳವು ಮಾಡಿದ ಸ್ವತ್ತೆಂದು ತಿಳಿಯದೆ ಅಥವಾ ಹಾಗೆ ನಂಬಲು ಕಾರಣವಿಲ್ಲದೆಯೇ ಆ ಕಳವು ಮಾಡಿದ ಸ್ವತ್ತನ್ನು, ಅವನಿಂದ ಇತರ ಯಾರೇ ವ್ಯಕ್ತಿಯು ಖರೀದಿ

ಮಾಡಿರುವುದು ರುಜುವಾತಾದಾಗ ಮತ್ತು ನ್ಯಾಯಾಲಯವು, ಅಪರಾಧಿಯೆಂದು ನಿರ್ಣೀತನಾದ ಆ ವ್ಯಕ್ತಿಯ ಸ್ವಾಧೀನದಿಂದ ಅವನು ದಸ್ತಗಿರಿಯಾದಾಗ ಯಾವುದೇ ಹಣವನ್ನು ತೆಗೆದುಕೊಂಡಿರುವಾಗ, ಅಂಥ ಖರೀದಿದಾರನ ಅರ್ಜಿಯ ಮೇಲೆ ಮತ್ತು ಕಳವು ಮಾಡಿದ ಸ್ವತ್ತನ್ನು ಅದರ ಸ್ವಾಧೀನತೆಗಾಗಿ ಹಕ್ಕುಳ್ಳ ವ್ಯಕ್ತಿಗೆ ಹಿಂದಿರುಗಿಸಿದ ಮೇಲೆ, ಅಂಥ ಖರೀದಿದಾರನು ಸಂದಾಯ ಮಾಡಿದ್ದ ಬೆಲೆಯನ್ನು ಮೀರದ ಮೊತ್ತವನ್ನು ಅಂಥ ಆದೇಶದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಅಂಥ ಹಣದಿಂದ ಅವನಿಗೆ ನೀಡಲು ಆದೇಶಿಸಬಹುದು.

**500. 498ನೇ ಅಥವಾ 499ನೇ ಪ್ರಕರಣದ ಮೇರೆಗಿನ ಆದೇಶಗಳ ವಿರುದ್ಧ ಅಪೀಲು.-** (1) 498ನೇ ಪ್ರಕರಣ ಅಥವಾ 499ನೇ ಪ್ರಕರಣದ ಮೇರೆಗೆ ನ್ಯಾಯಾಲಯವು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ನ್ಯಾಯಾಲಯದ ಅಪರಾಧ ನಿರ್ಣಯಗಳ ಮೇಲೆ ಸಾಮಾನ್ಯವಾಗಿ ಯಾವ ನ್ಯಾಯಾಲಯಕ್ಕೆ ಅಪೀಲುಗಳನ್ನು ಸಲ್ಲಿಸಬಹುದೋ, ಆ ನ್ಯಾಯಾಲಯಕ್ಕೆ ಆ ಆದೇಶದ ವಿರುದ್ಧ ಅಪೀಲು ಸಲ್ಲಿಸಬಹುದು.

(2) ಅಪೀಲು ನ್ಯಾಯಾಲಯವು, ಅಂಥ ಅಪೀಲಿನ ಮೇಲೆ ಅಪೀಲಿನ ಇತ್ಯರ್ಥವಾಗುವವರೆಗೆ ಆದೇಶವನ್ನು ತಡೆಹಿಡಿಯಬೇಕೆಂದು ಆದೇಶಿಸಬಹುದು ಅಥವಾ ಆದೇಶವನ್ನು ಮಾರ್ಪಡಿಸಬಹುದು, ವ್ಯತ್ಯಾಸಗೊಳಿಸಬಹುದು ಅಥವಾ ರದ್ದುಗೊಳಿಸಬಹುದು ಮತ್ತು ನ್ಯಾಯಸಮ್ಮತವಾಗಬಹುದಾದ ಮುಂದಿನ ಯಾವುದೇ ಆದೇಶಗಳನ್ನು ಮಾಡಬಹುದು.

(3) ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣೆಯ ನ್ಯಾಯಾಲಯವು ಯಾವ ಮೊಕದ್ದಮೆಯಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶವನ್ನು ಮಾಡಲಾಯಿತೋ ಆ ಮೊಕದ್ದಮೆಯನ್ನು ವ್ಯವಹರಿಸುವಾಗ, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಗಳನ್ನೂ ಸಹ ಚಲಾಯಿಸಬಹುದು.

**501. ಮಾನಹಾನಿಕರ ಹಾಗೂ ಇತರ ವಸ್ತುಗಳನ್ನು ನಾಶ ಮಾಡುವುದು.-** (1) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 294ನೇ ಪ್ರಕರಣ, 295ನೇ ಪ್ರಕರಣ ಅಥವಾ 356ನೇ ಪ್ರಕರಣದ (3)ನೇ ಮತ್ತು (4)ನೇ ಉಪಪ್ರಕರಣದ ಮೇರೆಗೆ ಅಪರಾಧ ನಿರ್ಣಯವಾದ ಮೇಲೆ, ಯಾವುದರ ಬಗ್ಗೆ ಅಪರಾಧ ನಿರ್ಣಯವಾಗಿತ್ತೋ ಮತ್ತು ಯಾವುದು ನ್ಯಾಯಾಲಯದ ಅಭಿರಕ್ಷೆಯಲ್ಲಿ ಇದೆಯೋ ಅಥವಾ ಯಾವುದು ಅಪರಾಧ ನಿರ್ಣೀತ ವ್ಯಕ್ತಿಯ ಸ್ವಾಧೀನತೆ ಅಥವಾ ಅಧಿಕಾರದಲ್ಲಿ ಉಳಿದಿದೆಯೋ ಆ ವಸ್ತುವಿನ ಎಲ್ಲ ಪ್ರತಿಗಳನ್ನು ನಾಶ ಮಾಡಲು ನ್ಯಾಯಾಲಯವು ಆದೇಶಿಸಬಹುದು.

(2) ನ್ಯಾಯಾಲಯವು, ಅದೇ ರೀತಿಯಲ್ಲಿ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 274ನೇ ಪ್ರಕರಣ, 275ನೇ ಪ್ರಕರಣ, 276ನೇ ಪ್ರಕರಣ ಅಥವಾ 277ನೇ ಪ್ರಕರಣದ ಮೇರೆಗೆ ಅಪರಾಧ ನಿರ್ಣಯವಾದ ಮೇಲೆ, ಯಾವ ಆಹಾರ, ಪಾನೀಯ, ಔಷಧಿ ಅಥವಾ ವೈದ್ಯಕೀಯ ತಯಾರಿಕೆಯ ಸಂಬಂಧದಲ್ಲಿ ಅಪರಾಧ ನಿರ್ಣಯವಾಯಿತೋ ಅವುಗಳನ್ನು ನಾಶ ಮಾಡುವಂತೆ ಆದೇಶಿಸಬಹುದು.

**502. ಸ್ಥಿರ ಸ್ವತ್ತಿನ ಸ್ವಾಧೀನತೆಯನ್ನು ಹಿಂದಿರುಗಿಸಲು ಅಧಿಕಾರ.-** (1) ಆಪರಾಧಿಕ ಬಲಪ್ರಯೋಗದಿಂದ ಅಥವಾ ಬಲಪ್ರದರ್ಶನದಿಂದ ಅಥವಾ ಆಪರಾಧಿಕ ಭಯೋತ್ಪಾದನೆಯಿಂದ ಕೂಡಿದ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ ಮತ್ತು ಅಂಥ ಬಲಪ್ರಯೋಗ ಅಥವಾ ಬಲಪ್ರದರ್ಶನ ಅಥವಾ ಭಯೋತ್ಪಾದನೆಯಿಂದಾಗಿ ಯಾರೇ ವ್ಯಕ್ತಿಯು ಯಾವುದೇ ಸ್ಥಿರ ಸ್ವತ್ತಿನ ಸ್ವಾಧೀನತೆಯನ್ನು ಕಳೆದುಕೊಂಡಿದ್ದಾನೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಆ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರಬಹುದಾದ ಇತರ ಯಾರೇ ವ್ಯಕ್ತಿಯನ್ನು ಅವಶ್ಯಕವಾದರೆ ಬಲವಂತವಾಗಿ ಹೊರದೂಡಿದ ತರುವಾಯ, ಸ್ವತ್ತಿನ ಸ್ವಾಧೀನತೆಯನ್ನು ಕಳೆದುಕೊಂಡಿದ್ದ ವ್ಯಕ್ತಿಗೆ ಅದರ ಸ್ವಾಧೀನತೆಯನ್ನು ಹಿಂದಿರುಗಿಸಬೇಕೆಂದು ಆದೇಶಿಸಬಹುದು:

ಪರಂತು, ನ್ಯಾಯಾಲಯವು, ಅಪರಾಧ ನಿರ್ಣಯವಾದ ದಿನಾಂಕದಿಂದ ಒಂದು ತಿಂಗಳ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಅಪರಾಧವನ್ನು ಅಧಿವಿಚಾರಣೆ ಮಾಡುತ್ತಿರುವ ನ್ಯಾಯಾಲಯವು (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿಲ್ಲದಿದ್ದರೆ ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣಾ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಸಂದರ್ಭಾನುಸಾರ, ಅಪೀಲು, ಉಲ್ಲೇಖ ಅಥವಾ ಪುನರೀಕ್ಷಣೆಯನ್ನು ಇತ್ಯರ್ಥ ಮಾಡುತ್ತಿರುವಾಗ, ಅಂಥ ಆದೇಶವನ್ನು ಮಾಡಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಲ್ಲಿ, 500ನೇ ಪ್ರಕರಣದ ಉಪಬಂಧಗಳು, 499ನೇ ಪ್ರಕರಣದ ಮೇರೆಗಿನ ಆದೇಶದ ಸಂಬಂಧದಲ್ಲಿ ಅನ್ವಯವಾಗುವಂತೆಯೇ, ಅದರ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು.

(4) ಸಿವಿಲ್ ದಾವೆಯಲ್ಲಿ ಯಾರೇ ವ್ಯಕ್ತಿಯು ಸ್ಥಾಪಿಸಲು ಸಾಧ್ಯವಾಗಬಹುದಾದ ಅಂಥ ಸ್ಥಿರ ಸ್ವತ್ತಿನಲ್ಲಿ ಇರುವ ಯಾವುದೇ ಅಧಿಕಾರ ಅಥವಾ ಅದರಲ್ಲಿರುವ ಯಾವುದೇ ಹಿತಾಸಕ್ತಿಯನ್ನು ಈ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವು ಬಾಧಿಸತಕ್ಕದ್ದಲ್ಲ.

**503. ಸ್ವತ್ತನ್ನು ವಶಪಡಿಸಿಕೊಂಡ ಮೇಲೆ ಪೊಲೀಸರಿಂದ ಪ್ರಕ್ರಿಯೆ.-** (1) ಯಾರೇ ಪೊಲೀಸ್ ಅಧಿಕಾರಿಯು ಮಾಡಿದ ಸ್ವತ್ತಿನ ವಶಪಡಿಸಿಕೊಳ್ಳುವಿಕೆಯನ್ನು ಈ ಸಂಹಿತೆಯ ಉಪಬಂಧಗಳ ಮೇರೆಗೆ ಮ್ಯಾಜಿಸ್ಟ್ರೇಟನಿಗೆ ವರದಿ ಮಾಡಿದಾಗಲೆಲ್ಲಾ ಮತ್ತು ವಿಚಾರಣೆ ಅಥವಾ ಅಧಿವಿಚಾರಣೆಯ ಸಮಯದಲ್ಲಿ ಕ್ರಿಮಿನಲ್ ನ್ಯಾಯಾಲಯದ ಮುಂದೆ ಅಂಥ ಸ್ವತ್ತನ್ನು ಹಾಜರುಪಡಿಸದಿದ್ದಾಗ, ಅಂಥ ಸ್ವತ್ತಿನ ವಿಲೆಯ ಬಗ್ಗೆ ಅಥವಾ ಅದರ ಸ್ವಾಧೀನತೆಗಾಗಿ ಹಕ್ಕುಳ್ಳ ವ್ಯಕ್ತಿಗೆ ಅಂಥ ಸ್ವತ್ತನ್ನು ಒಪ್ಪಿಸುವ ಬಗ್ಗೆ ಅಥವಾ ಅಂಥ ವ್ಯಕ್ತಿಯು ಯಾರೆಂದು ನಿಶ್ಚಯಿಸಲಾಗಿಲ್ಲದಿದ್ದರೆ, ಅಂಥ ಸ್ವತ್ತಿನ ಅಭಿರಕ್ಷೆ ಮತ್ತು ಅದನ್ನು ಹಾಜರುಪಡಿಸುವ ಬಗ್ಗೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮ್ಯಾಜಿಸ್ಟ್ರೇಟನು ಮಾಡಬಹುದು.

(2) ಮ್ಯಾಜಿಸ್ಟ್ರೇಟನು, ಹಾಗೆ ಹಕ್ಕುಳ್ಳ ವ್ಯಕ್ತಿಯು ಯಾರೆಂದು ತಿಳಿದಿದ್ದರೆ ಸೂಕ್ತವೆಂದು ಭಾವಿಸುವಂಥ ಷರತ್ತುಗಳ (ಯಾವುದಾದರೂ ಇದ್ದರೆ) ಮೇಲೆ ಅವನಿಗೆ ಸ್ವತ್ತನ್ನು ಒಪ್ಪಿಸಿಕೊಡಲು ಆದೇಶಿಸಬಹುದು ಮತ್ತು ಅಂಥ ವ್ಯಕ್ತಿ ಯಾರೆಂದು ತಿಳಿದಿಲ್ಲದಿದ್ದರೆ, ಮ್ಯಾಜಿಸ್ಟ್ರೇಟನು ಅದನ್ನು ಇರಿಸಿಕೊಳ್ಳಬಹುದು ಮತ್ತು ಅಂಥ ಸಂದರ್ಭದಲ್ಲಿ, ಆ ಸ್ವತ್ತು ಒಳಗೊಂಡಿರುವ ವಸ್ತುಗಳನ್ನು ನಿರ್ದಿಷ್ಟಪಡಿಸಿ ಮತ್ತು ಅದಕ್ಕೆ ಕ್ಲೇಮು ಹೊಂದಿರಬಹುದಾದ ಯಾರೇ ವ್ಯಕ್ತಿಯು ತನ್ನ ಮುಂದೆ ಹಾಜರಾಗುವಂತೆ ಮತ್ತು ಉದ್ಘೋಷಣೆಯ ದಿನಾಂಕದಿಂದ ಆರು ತಿಂಗಳೊಳಗಾಗಿ ಅವನು ತನ್ನ ಕ್ಲೇಮನ್ನು ಸ್ಥಾಪನೆ ಮಾಡುವಂತೆ ಅಗತ್ಯಪಡಿಸಿ, ಉದ್ಘೋಷಣೆಯನ್ನು ಹೊರಡಿಸಬಹುದು.

**504. ಆರು ತಿಂಗಳೊಳಗಾಗಿ ಯಾರೇ ಕ್ಲೇಮುದಾರನು ಹಾಜರಾಗದಿದ್ದಾಗ ಪ್ರಕ್ರಿಯೆ.-** (1) ಯಾರೇ ವ್ಯಕ್ತಿಯು ಅಂಥ ಸ್ವತ್ತಿಗೆ ತನ್ನ ಕ್ಲೇಮನ್ನು ಅಂಥ ಅವಧಿಯೊಳಗೆ ಸ್ಥಾಪಿಸದಿದ್ದರೆ ಮತ್ತು ಯಾರ ಸ್ವಾಧೀನದಲ್ಲಿ ಅಂಥ ಸ್ವತ್ತು ದೊರಕಿತೋ ಆ ವ್ಯಕ್ತಿಯು ಅದನ್ನು ತಾನು ಕಾನೂನುಸಮ್ಮತವಾಗಿ ಆರ್ಜಿಸಿದನೆಂದು ತೋರಿಸಿಕೊಡಲು ಅಸಮರ್ಥನಾದರೆ, ಅಂಥ ಸ್ವತ್ತು ರಾಜ್ಯ ಸರ್ಕಾರದ ವಿಲೆಗೆ ಒಳಪಡತಕ್ಕದ್ದೆಂದು ಮತ್ತು ಆ ಸರ್ಕಾರವು ಅದನ್ನು ಮಾರಾಟ ಮಾಡಬಹುದೆಂದು ಮ್ಯಾಜಿಸ್ಟ್ರೇಟನು ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ರಾಜ್ಯ ಸರ್ಕಾರವು ನಿಯಮಗಳ ಮೂಲಕ ಉಪಬಂಧಿಸಿದಂಥ ರೀತಿಯಲ್ಲಿ ಅಂಥ ಮಾರಾಟದ ಹುಟ್ಟುವಳಿಯ ಬಗ್ಗೆ ವ್ಯವಹರಿಸತಕ್ಕದ್ದು.

(2) ಮ್ಯಾಜಿಸ್ಟ್ರೇಟನು ಮಾಡಿದ ಅಪರಾಧ ನಿರ್ಣಯಗಳ ಬಗ್ಗೆ ಸಾಮಾನ್ಯವಾಗಿ ಅಪೀಲುಗಳನ್ನು ಯಾವ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದೋ, ಆ ನ್ಯಾಯಾಲಯಕ್ಕೆ ಅಂಥ ಯಾವುದೇ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಬಹುದು.

**505. ಕೆಟ್ಟುಹೋಗುವ ಸ್ವತ್ತನ್ನು ಮಾರಾಟ ಮಾಡಲು ಅಧಿಕಾರ.-** ಅಂಥ ಸ್ವತ್ತಿನ ಸ್ವಾಧೀನತೆಗೆ ಹಕ್ಕುಳ್ಳ ವ್ಯಕ್ತಿಯು ಯಾರೆಂದು ತಿಳಿದಿಲ್ಲದಿದ್ದರೆ ಅಥವಾ ಅವನು ಗೈರುಹಾಜರಾದರೆ ಮತ್ತು ಆ ಸ್ವತ್ತು ಶೀಘ್ರ ಹಾಗೂ ಸ್ವಾಭಾವಿಕವಾಗಿ ನಶಿಸಿ ಹೋಗುವಂಥ ಸ್ವರೂಪದ್ದಾಗಿದ್ದರೆ ಅಥವಾ ವಶಪಡಿಸಿಕೊಳ್ಳುವಿಕೆಯ ಬಗ್ಗೆ ಯಾವ ಮ್ಯಾಜಿಸ್ಟ್ರೇಟನಿಗೆ ವರದಿ ಮಾಡಲಾಯಿತೋ ಅವನು ಅದರ ಮಾರಾಟವು ಮಾಲೀಕನಿಗೆ ಅನುಕೂಲವಾಗಬಹುದೆಂದು ಅಭಿಪ್ರಾಯಪಟ್ಟರೆ ಅಥವಾ ಅಂಥ ಸ್ವತ್ತಿನ ಮೌಲ್ಯವು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿದ್ದರೆ, ಮ್ಯಾಜಿಸ್ಟ್ರೇಟನು ಅದನ್ನು ಮಾರಾಟ ಮಾಡಲು ಯಾವುದೇ ಕಾಲದಲ್ಲಿ ನಿರ್ದೇಶಿಸಬಹುದು ಮತ್ತು 503ನೇ ಮತ್ತು 504ನೇ ಪ್ರಕರಣದ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ, ಅಂಥ ಮಾರಾಟದ ನಿವ್ವಳ ಹುಟ್ಟುವಳಿಗೆ ಅನ್ವಯಿಸತಕ್ಕದ್ದು.

## ಅಧ್ಯಾಯ XXXVII

## ಕ್ರಮಬದ್ಧವಲ್ಲದ ವ್ಯವಹರಣೆಗಳು

**506. ವ್ಯವಹರಣೆಗಳನ್ನು ದೋಷಪೂರ್ಣಗೊಳಿಸದ ಅಕ್ರಮಗಳು.-** ಕಾನೂನು ಪ್ರಕಾರ ಅಧಿಕಾರ ಹೊಂದಿರದ ಯಾರೇ ಮ್ಯಾಜಿಸ್ಟ್ರೇಟನು ಈ ಕೆಳಕಂಡವುಗಳನ್ನು ಎಂದರೆ:-

(ಎ) 97ನೇ ಪ್ರಕರಣದ ಮೇರೆಗೆ ಶೋಧನೆಯ-ವಾರಂಟನ್ನು ಹೊರಡಿಸಲು;

(ಬಿ) 174ನೇ ಪ್ರಕರಣದ ಮೇರೆಗೆ, ಅಪರಾಧವನ್ನು ತನಿಖೆ ಮಾಡಲು ಪೊಲೀಸರಿಗೆ ಆದೇಶ ನೀಡಲು;

(ಸಿ) 196ನೇ ಪ್ರಕರಣದ ಮೇರೆಗೆ ಶವ ಪಂಚನಾಮೆ ಮಾಡಿಸಲು;

(ಡಿ) ಅವನ ಅಧಿಕಾರವ್ಯಾಪ್ತಿ ಹೊರಗೆ ಅಪರಾಧವನ್ನು ಮಾಡಿದ್ದು ಅವನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಇರುವ ಒಬ್ಬ ವ್ಯಕ್ತಿಯ ದಸ್ತಗಿರಿಗಾಗಿ, 207ನೇ ಪ್ರಕರಣದ ಮೇರೆಗೆ ಆದೇಶಿಕೆ ಹೊರಡಿಸಲು;

(ಇ) 210ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಥವಾ (ಬಿ) ಖಂಡದ ಮೇರೆಗಿನ ಒಂದು ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು;

(ಎಫ್) 212ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮೊಕದ್ದಮೆಯನ್ನು ವಹಿಸಿಕೊಡಲು;

(ಜಿ) 343ನೇ ಪ್ರಕರಣದ ಮೇರೆಗೆ ಕ್ಷಮೆಯನ್ನು ನೀಡಲು;

(ಹೆಚ್) 450ನೇ ಪ್ರಕರಣದ ಮೇರೆಗೆ ಒಂದು ಮೊಕದ್ದಮೆಯನ್ನು ಪುನಃ ತರಿಸಿಕೊಳ್ಳಲು ಮತ್ತು ಅದನ್ನು ತಾನೇ ಅಧಿವಿಚಾರಣೆ ಮಾಡಲು; ಅಥವಾ

(ಐ) 504ನೇ ಪ್ರಕರಣ ಅಥವಾ 505ನೇ ಪ್ರಕರಣದ ಮೇರೆಗೆ ಸ್ವತ್ತನ್ನು ಮಾರಾಟ ಮಾಡಲು

- ಅದನ್ನು ಸದ್ಭಾವನೆಯಿಂದ ತಪ್ಪಾಗಿ ಮಾಡಿದ್ದರೆ, ಅವನು ಹಾಗೆ ಅಧಿಕಾರ ಹೊಂದಿಲ್ಲ ಎಂಬ ಕಾರಣ ಮಾತ್ರದಿಂದಲೇ ಅವನ ವ್ಯವಹರಣೆಗಳನ್ನು ರದ್ದುಗೊಳಿಸತಕ್ಕದ್ದಲ್ಲ.

**507. ವ್ಯವಹರಣೆಗಳನ್ನು ದೋಷಪೂರ್ಣಗೊಳಿಸುವ ಅಕ್ರಮಗಳು.-** ಈ ಬಗ್ಗೆ ಕಾನೂನಿನಿಂದ ಅಧಿಕಾರ ಹೊಂದಿರದ ಯಾರೇ ಮ್ಯಾಜಿಸ್ಟ್ರೇಟನು ಈ ಕೆಳಕಂಡ ಯಾವುದೇ ಕ್ರಮವನ್ನು ಕೈಗೊಂಡರೆ, ಎಂದರೆ:-

(ಎ) 85ನೇ ಪ್ರಕರಣದ ಮೇರೆಗೆ ಸ್ವತ್ತನ್ನು ಜಫ್ತಿ ಮಾಡಿದರೆ ಮತ್ತು ಮಾರಾಟ ಮಾಡಿದರೆ;

(ಬಿ) ಅಂಚೆ ಅಥವಾ ಟೆಲಿಗ್ರಾಫ್ ಪ್ರಾಧಿಕಾರದ ಅಭಿರಕ್ಷೆಯಲ್ಲಿರುವ ದಸ್ತಾವೇಜು, ಭಾಂಗಿ (ಪಾರ್ಸೆಲ್) ಅಥವಾ ಇತರ ವಸ್ತುಗಳಿಗಾಗಿ ಶೋಧನೆಯ-ವಾರಂಟನ್ನು ಹೊರಡಿಸಿದರೆ;

(ಸಿ) ಶಾಂತಿಪಾಲನೆಗಾಗಿ ಭದ್ರತೆಯನ್ನು ಕೇಳಿದರೆ;

(ಡಿ) ಸನ್ನಡತೆಗಾಗಿ ಭದ್ರತೆಯನ್ನು ಕೇಳಿದರೆ;

(ಇ) ಸನ್ನಡತೆಯವನಾಗಿರಲು ಕಾನೂನು ಪ್ರಕಾರ ಬದ್ಧನಾದ ವ್ಯಕ್ತಿಯನ್ನು ಬಿಡುಗಡೆಗೊಳಿಸಿದರೆ;

(ಎಫ್) ಶಾಂತಿಪಾಲನೆಗಾಗಿ ಇರುವ ಬಂಧಪತ್ರವನ್ನು ರದ್ದು ಮಾಡಿದರೆ;

(ಜಿ) ಜೀವನಾಂಶಕ್ಕಾಗಿ ಆದೇಶವನ್ನು ಮಾಡಿದರೆ;

(ಹೆಚ್) ಸ್ಥಳೀಯ ಉಪದ್ರವದ ಸಂಬಂಧದಲ್ಲಿ 152ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿದರೆ;

(ಐ) ಸಾರ್ವಜನಿಕ ಉಪದ್ರವದ ಪುನರಾವೃತ್ತಿ ಅಥವಾ ಮುಂದುವರಿಕೆಯನ್ನು 162ನೇ ಪ್ರಕರಣದ ಮೇರೆಗೆ ನಿಷೇಧಿಸಿದರೆ;

(ಜೆ) ಅಧ್ಯಾಯ XIರ ಭಾಗ 'ಸಿ' ಅಥವಾ 'ಡಿ' ಯ ಮೇರೆಗೆ ಆದೇಶವನ್ನು ಮಾಡಿದರೆ;

(ಕೆ) 210ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡರೆ;

(ಎಲ್) ಅಪರಾಧಿಯ ಅಧಿವಿಚಾರಣೆ ಮಾಡಿದರೆ;

(ಎಂ) ಅಪರಾಧಿಯನ್ನು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಿದರೆ;

(ಎನ್) ಮತ್ತೊಬ್ಬ ಮ್ಯಾಜಿಸ್ಟ್ರೇಟನು ದಾಖಲಿಸಿದ ವ್ಯವಹರಣೆಗಳ ಮೇಲೆ 364ನೇ ಪ್ರಕರಣದ ಮೇರೆಗೆ ಶಿಕ್ಷೆಯ ಆದೇಶವನ್ನು ಮಾಡಿದರೆ;

(ಓ) ಅಪೀಲನ್ನು ತೀರ್ಮಾನಿಸಿದರೆ;

(ಪಿ) 438ನೇ ಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ತರಿಸಿಕೊಂಡರೆ; ಅಥವಾ

(ಕ್ಯೂ) 491ನೇ ಪ್ರಕರಣದ ಮೇರೆಗೆ ನೀಡಲಾದ ಆದೇಶವನ್ನು ಪರಿಷ್ಕರಿಸಿದರೆ

- ಅವನ ವ್ಯವಹರಣೆಗಳು ಅನೂರ್ಜಿತವಾಗತಕ್ಕದ್ದು.

**508. ಯುಕ್ತವಲ್ಲದ ಸ್ಥಳದಲ್ಲಿ ವ್ಯವಹರಣೆಗಳು.-** ಯಾವುದೇ ಕ್ರಿಮಿನಲ್ ನ್ಯಾಯಾಲಯದ ಯಾವುದೇ ನಿರ್ಣಯ, ಶಿಕ್ಷೆ ಅಥವಾ ಆದೇಶವನ್ನು, ಅದಕ್ಕೆ ಸಂಬಂಧಿಸಿದ ವಿಚಾರಣೆ, ಅಧಿವಿಚಾರಣೆ ಅಥವಾ ಇತರ ವ್ಯವಹರಣೆಗಳು ಯುಕ್ತವಲ್ಲದ ಸೆಷನ್ಸ್ ವಿಭಾಗದಲ್ಲಿ, ಜಿಲ್ಲೆಯಲ್ಲಿ, ಉಪ-ವಿಭಾಗದಲ್ಲಿ ಅಥವಾ ಇತರ ಸ್ಥಳೀಯ ಪ್ರದೇಶದಲ್ಲಿ ನಡೆದಿವೆಯೆಂಬ ಕಾರಣದ ಮೇಲೆ ಮಾತ್ರವೇ, ಅಂಥ ತಪ್ಪು ವಾಸ್ತವವಾಗಿ ನ್ಯಾಯದ ವಿಫಲತೆಗೆ ಕಾರಣವಾಯಿತೆಂದು ಕಂಡುಬಂದ ಹೊರತು ರದ್ದುಗೊಳಿಸತಕ್ಕದ್ದಲ್ಲ.

**509. 183ನೇ ಅಥವಾ 316ನೇ ಪ್ರಕರಣದ ಉಪಬಂಧಗಳನ್ನು ಪಾಲಿಸದಿರುವುದು.-** (1) ಯಾವ ನ್ಯಾಯಾಲಯದ ಮುಂದೆ ಆಪಾದಿತ ವ್ಯಕ್ತಿಯು ಮಾಡಿದ ತಪ್ಪೊಪ್ಪಿಗೆ ಅಥವಾ ಇತರ ಹೇಳಿಕೆಯನ್ನು 183ನೇ ಅಥವಾ 316ನೇ ಪ್ರಕರಣದ

ಮೇರೆಗೆ ದಾಖಲಿಸಲಾಯಿತೋ ಅಥವಾ ದಾಖಲಿಸಲಾಗಿದೆಯೆಂದು ತಾತ್ಪರ್ಯವಾಗುವುದೋ ಆ ಯಾವುದೇ ನ್ಯಾಯಾಲಯದ ಮುಂದೆ ಅಂಥ ತಪ್ಪೊಪ್ಪಿಗೆಯನ್ನು ಅಥವಾ ಹೇಳಿಕೆಯನ್ನು ಸಾಕ್ಷ್ಯವಾಗಿ ಸಲ್ಲಿಸಿರುವಾಗ ಅಥವಾ ಅದನ್ನು ಹಾಗೆ ಸ್ವೀಕರಿಸಿರುವಾಗ ಆ ಹೇಳಿಕೆಯನ್ನು ದಾಖಲಿಸಿರುವ ಮ್ಯಾಜಿಸ್ಟ್ರೇಟನು ಆ ಯಾವುದೇ ಪ್ರಕರಣಗಳ ಯಾವುದೇ ಉಪಬಂಧಗಳನ್ನು ಪಾಲಿಸಿಲ್ಲವೆಂದು ಆ ನ್ಯಾಯಾಲಯವು ನಿರ್ಣಯಿಸಿದ್ದರೆ, ಅದು ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ 47)ರ 94ನೇ ಪ್ರಕರಣದಲ್ಲಿ ಏನೇ ಇದ್ದರೂ, ಹಾಗೆ ಪಾಲನೆಯಾಗದಿದ್ದ ಬಗ್ಗೆ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು ಮತ್ತು ಹಾಗೆ ಪಾಲಿಸಿಲ್ಲದಿರುವುದು ಆಪಾದಿತನು ತನ್ನ ಪ್ರತಿರಕ್ಷೆಗೆ ಅದರ ಗುಣಾವಗುಣಗಳ ಮೇಲೆ ಪ್ರತಿಕೂಲವಾಗಿಲ್ಲವೆಂದು ಮತ್ತು ದಾಖಲಿಸಲಾದ ಹೇಳಿಕೆಯನ್ನು ಯುಕ್ತಬದ್ಧವಾಗಿ ಮಾಡಿದನೆಂದು ಮನವರಿಕೆಯಾದರೆ, ಅಂಥ ಹೇಳಿಕೆಯನ್ನು ಸ್ವೀಕರಿಸಬಹುದು.

(2) ಈ ಪ್ರಕರಣದಲ್ಲಿನ ಉಪಬಂಧಗಳು ಅಪೀಲು, ನಿರ್ದೇಶನ ಮತ್ತು ಪುನರೀಕ್ಷಣೆಯ ನ್ಯಾಯಾಲಯಗಳಿಗೆ ಅನ್ವಯವಾಗುತ್ತವೆ.

**510. ಆರೋಪ ರೂಪಿಸುವಲ್ಲಿ ಲೋಪ ಅಥವಾ ಆರೋಪ ಇಲ್ಲದಿರುವುದು ಅಥವಾ ಆರೋಪದಲ್ಲಿ ತಪ್ಪು ಇವುಗಳ ಪರಿಣಾಮ.-** (1) ಯಾವ ಆರೋಪವನ್ನೂ ಸಲ್ಲಿಸಿಲ್ಲವೆಂಬ ಕಾರಣದಿಂದ ಅಥವಾ ಯಾವುದೇ ಆರೋಪಗಳ ತಪ್ಪು ಸಂಯೋಜನೆಯನ್ನೊಳಗೊಂಡು ಆರೋಪದಲ್ಲಿನ ಯಾವುದೇ ತಪ್ಪು, ಲೋಪ ಅಥವಾ ಅಕ್ರಮದ ಕಾರಣದಿಂದ ಮಾತ್ರವೇ ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣಾ ನ್ಯಾಯಾಲಯವು, ನ್ಯಾಯ ವಿಫಲತೆಯು ವಾಸ್ತವವಾಗಿ ಅದರಿಂದ ಸಂಭವಿಸಿತ್ತೆಂದು ಅಭಿಪ್ರಾಯಪಟ್ಟ ಹೊರತು, ಸಕ್ಷಮ ಅಧಿಕಾರವ್ಯಾಪ್ತಿಯ ನ್ಯಾಯಾಲಯದ ಯಾವುದೇ ನಿರ್ಣಯ, ಶಿಕ್ಷೆಯ ಆದೇಶ ಅಥವಾ ಆದೇಶವು ಕಾನೂನುಮಾನ್ಯವಲ್ಲವೆಂದು ಭಾವಿಸತಕ್ಕದ್ದಲ್ಲ.

(2) ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣಾ ನ್ಯಾಯಾಲಯವು ನ್ಯಾಯ ವಿಫಲತೆಯು ವಾಸ್ತವವಾಗಿ ಉಂಟಾಯಿತೆಂದು ಅಭಿಪ್ರಾಯಪಟ್ಟರೆ ಅದು,-

(ಎ) ಆರೋಪವನ್ನು ರೂಪಿಸದಿರುವ ಸಂದರ್ಭದಲ್ಲಿ, ಆರೋಪವನ್ನು ರೂಪಿಸಬೇಕೆಂದು ಮತ್ತು ಆರೋಪವನ್ನು ರೂಪಿಸಿದ ಕೂಡಲೇ ಅಧಿವಿಚಾರಣೆಯನ್ನು ಪುನಃ ಪ್ರಾರಂಭಿಸಬೇಕೆಂದು ಆದೇಶಿಸಬಹುದು;

(ಬಿ) ಆರೋಪದಲ್ಲಿನ ತಪ್ಪು, ಲೋಪ ಅಥವಾ ಅಕ್ರಮದ ಸಂದರ್ಭದಲ್ಲಿ, ರೂಪಿಸಿದ ಆರೋಪದ ಮೇಲೆ ತಾನು ಸೂಕ್ತವೆಂದು ಭಾವಿಸಿದಂತೆ ಹೊಸ ಆರೋಪದ ಅಧಿವಿಚಾರಣೆ ಮಾಡಬೇಕೆಂದು ನಿರ್ದೇಶಿಸಬಹುದು:

ಪರಂತು, ರುಜುವಾತಾದ ಸಂಗತಿಗಳ ಸಂಬಂಧದಲ್ಲಿ ಆಪಾದಿತನ ವಿರುದ್ಧ ಯಾವ ಕಾನೂನುಮಾನ್ಯ ಆರೋಪವನ್ನು ರೂಪಿಸಲಾಗದಂಥ ರೀತಿಯಲ್ಲಿ ಮೊಕದ್ದಮೆಯ ಸಂಗತಿಗಳು ಇವೆಯೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಆ ಅಪರಾಧ ನಿರ್ಣಯವನ್ನು ರದ್ದುಗೊಳಿಸತಕ್ಕದ್ದು.

**511. ತಪ್ಪು, ಲೋಪ ಅಥವಾ ಅಕ್ರಮದ ಕಾರಣದಿಂದ ನಿರ್ಣಯ ಅಥವಾ ಶಿಕ್ಷೆಯ ಆದೇಶವು ಯಾವಾಗ ವಿಪರ್ಯಯವಾಗುವುದು.-** (1) ಇದರಲ್ಲಿ ಈ ಹಿಂದೆ ಇರುವ ಉಪಬಂಧಗಳಿಗೊಳಪಟ್ಟು, ದೂರು, ಸಮನ್ಸ್, ವಾರಂಟ್, ಉದ್ಘೋಷಣೆ, ಆದೇಶ, ತೀರ್ಪು ಅಥವಾ ಅಧಿವಿಚಾರಣೆಗೆ ಮುಂಚಿನ ಅಥವಾ ಅದು ನಡೆಯುತ್ತಿರುವಾಗಿನ ಯಾವುದೇ ಇತರ ವ್ಯವಹರಣೆಗಳಲ್ಲಿನ ಅಥವಾ ಈ ಸಂಹಿತೆಯ ಮೇರೆಗಿನ ಯಾವುದೇ ವಿಚಾರಣೆ ಅಥವಾ ಇತರ ವ್ಯವಹರಣೆಗಳಲ್ಲಿನ ಯಾವುದೇ ತಪ್ಪು, ಲೋಪ ಅಥವಾ ಅಕ್ರಮದ ಕಾರಣದಿಂದ ಅಥವಾ ಪ್ರಾಸಿಕ್ಯೂಷನ್ನಿಗಾಗಿ ಮಾಡಲಾದ ಯಾವುದೇ ಮಂಜೂರಾತಿಯಲ್ಲಿನ ಯಾವುದೇ ತಪ್ಪು ಅಥವಾ ಅಕ್ರಮದ ಕಾರಣದಿಂದ, ನ್ಯಾಯ ವಿಫಲತೆಯು ವಾಸ್ತವವಾಗಿ

ಸಂಭವಿಸಿತ್ತೆಂದು ಆ ನ್ಯಾಯಾಲಯವು ಅಭಿಪ್ರಾಯಪಟ್ಟ ಹೊರತು, ಸಕ್ಷಮ ಅಧಿಕಾರವ್ಯಾಪ್ತಿಯ ನ್ಯಾಯಾಲಯವು ಮಾಡಿದ ಯಾವ ನಿರ್ಣಯ, ಶಿಕ್ಷೆಯ ಆದೇಶ ಅಥವಾ ಆದೇಶವನ್ನು ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣಾ ನ್ಯಾಯಾಲಯವು ವಿಪರ್ಯಯ ಅಥವಾ ಬದಲಾವಣೆ ಮಾಡತಕ್ಕದ್ದಲ್ಲ.

(2) ಈ ಸಂಹಿತೆಯ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಆದ ಯಾವುದೇ ತಪ್ಪು, ಲೋಪ ಅಥವಾ ಅಕ್ರಮದಿಂದ ಅಥವಾ ಪ್ರಾಸಿಕ್ಯೂಷನ್ನಿಗಾಗಿ ಮಾಡಿದ ಯಾವುದೇ ಮಂಜೂರಾತಿಯಲ್ಲಿನ ಯಾವುದೇ ತಪ್ಪು ಅಥವಾ ಅಕ್ರಮದಿಂದ ನ್ಯಾಯ ವಿಫಲತೆಯು ಸಂಭವಿಸಿದೆಯೆ ಇಲ್ಲವೇ ಎಂದು ನಿರ್ಧರಿಸುವಲ್ಲಿ ವ್ಯವಹರಣೆಗಳ ಈ ಮುಂಚಿನ ಹಂತದಲ್ಲಿಯೇ ಆಕ್ಷೇಪಣೆಯನ್ನು ಮಾಡಬಹುದಾಗಿತ್ತೇ ಅಥವಾ ಮಾಡತಕ್ಕದ್ದಾಗಿತ್ತೇ ಎಂಬ ಅಂಶಕ್ಕೆ ನ್ಯಾಯಾಲಯವು ಗಮನ ನೀಡತಕ್ಕದ್ದು.

**512. ನ್ಯೂನ್ಯತೆ ಅಥವಾ ದೋಷದಿಂದ ಜಪ್ತಿಯು ಕಾನೂನುಬಾಹಿರವಾಗದಿರುವುದು.-** ಸಮನುಗಳು, ಅಪರಾಧ ನಿರ್ಣಯ, ಜಪ್ತಿಯ ಆಜ್ಞೆ ಅಥವಾ ಅದಕ್ಕೆ ಸಂಬಂಧಿಸಿದ ಇತರ ವ್ಯವಹರಣೆಗಳಲ್ಲಿನ ಯಾವುದೇ ನ್ಯೂನ್ಯತೆ ಅಥವಾ ನಮೂನೆಯ ಕೊರತೆಯ ಕಾರಣದಿಂದ ಈ ಸಂಹಿತೆಯ ಮೇರೆಗೆ ಮಾಡಲಾದ ಯಾವ ಜಪ್ತಿಯನ್ನೂ ಕಾನೂನುಬಾಹಿರವೆಂದು ಭಾವಿಸತಕ್ಕದ್ದಲ್ಲ ಅಥವಾ ಅದನ್ನು ಮಾಡುವ ಯಾರೇ ವ್ಯಕ್ತಿಯನ್ನು ಅತಿಕ್ರಮಣಕಾರಿಯೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ XXXVIII

## ಕೆಲವು ಅಪರಾಧಗಳನ್ನು ಸಂಜ್ಞೇಯತೆಗೆ ತೆಗೆದುಕೊಳ್ಳಲು ಕಾಲಪರಿಮಿತಿ

**513. ಪರಿಭಾಷೆಗಳು.-** ಈ ಅಧ್ಯಾಯದ ಉದ್ದೇಶಗಳಿಗಾಗಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ "ಕಾಲಪರಿಮಿತಿ ಅವಧಿ"ಎಂದರೆ, ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವುದಕ್ಕಾಗಿ 514ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿ.

**514. ಕಾಲಪರಿಮಿತಿ ಅವಧಿಯು ಮುಕ್ತಾಯವಾದ ನಂತರ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಪ್ರತಿಷೇಧ.-** (1) ಈ ಸಂಹಿತೆಯಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಕಾಲಪರಿಮಿತಿ ಅವಧಿಯು ಮುಕ್ತಾಯವಾದ ನಂತರ, ಯಾವುದೇ ನ್ಯಾಯಾಲಯವು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರವರ್ಗದ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಕಾಲಪರಿಮಿತಿ ಅವಧಿಯು,-

(ಎ) ಆ ಅಪರಾಧವು ಜುಲ್ಮಾನೆಯಿಂದ ಮಾತ್ರ ದಂಡನೀಯವಾಗಿದ್ದರೆ, ಆರು ತಿಂಗಳುಗಳಾಗಿರತಕ್ಕದ್ದು;

(ಬಿ) ಆ ಅಪರಾಧವು ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ, ಒಂದು ವರ್ಷವಾಗಿರತಕ್ಕದ್ದು;

(ಸಿ) ಆ ಅಪರಾಧವು ಒಂದು ವರ್ಷಕ್ಕೆ ಮೀರಿದ ಆದರೆ ಮೂರು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ, ಮೂರು ವರ್ಷಗಳಾಗಿರತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ, ಒಟ್ಟಿಗೆ ಅಧಿವಿಚಾರಣೆ ಮಾಡಬಹುದಾಗಿರುವ ಅಪರಾಧಗಳಿಗೆ ಸಂಬಂಧಿಸಿದಂತೆ ಕಾಲಪರಿಮಿತಿಯ ಅವಧಿಯನ್ನು, ಸಂದರ್ಭಾನುಸಾರ ತೀವ್ರ ದಂಡನೆಯಿಂದ ಅಥವಾ ಅತಿ ತೀವ್ರ ದಂಡನೆಯಿಂದ ದಂಡನೀಯವಾದಂಥ ಅಪರಾಧಕ್ಕೆ ಸಂಬಂಧದಲ್ಲಿ ನಿರ್ಧರಿಸತಕ್ಕದ್ದು.

*ವಿವರಣೆ:-* ಕಾಲಪರಿಮಿತಿಯ ಅವಧಿಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಯುಕ್ತ ದಿನಾಂಕವು 223ನೇ ಪ್ರಕರಣದ ಮೇರೆಗೆ ದೂರನ್ನು ದಾಖಲಿಸಿದ ದಿನಾಂಕ ಅಥವಾ 173ನೇ ಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ದಾಖಲಿಸಿದ ದಿನಾಂಕವಾಗಿರತಕ್ಕದ್ದು.

**515. ಕಾಲಪರಿಮಿತಿ ಅವಧಿಯ ಪ್ರಾರಂಭ.-** (1) ಅಪರಾಧಿಗೆ ಸಂಬಂಧಿಸಿದಂತೆ ಕಾಲಪರಿಮಿತಿ ಅವಧಿಯು,-

(ಎ) ಅಪರಾಧವು ನಡೆದ ದಿನಾಂಕದಿಂದ; ಅಥವಾ

(ಬಿ) ಆ ಅಪರಾಧದಿಂದ ಬಾಧಿತನಾದ ವ್ಯಕ್ತಿಗೆ ಅಥವಾ ಯಾರೇ ಪೊಲೀಸ್ ಅಧಿಕಾರಿಗೆ ಆ ಅಪರಾಧವು ನಡೆದದ್ದು ತಿಳಿಯದಿರುವಲ್ಲಿ, ಅಂಥ ವ್ಯಕ್ತಿಗೆ ಅಥವಾ ಆ ಯಾರೇ ಪೊಲೀಸ್ ಅಧಿಕಾರಿಗೆ ಅಂಥ ಅಪರಾಧವು ನಡೆದದ್ದು ತಿಳಿದ ಮೊದಲನೆಯ ದಿನದಿಂದ, ಇವೆರಡರಲ್ಲಿ ಯಾವುದು ಮೊದಲೋ ಆ ದಿನದಿಂದ; ಅಥವಾ

(ಸಿ) ಆ ಅಪರಾಧವು ಯಾರಿಂದ ನಡೆದಿದೆ ಎಂದು ತಿಳಿಯದಿರುವಲ್ಲಿ, ಆ ಅಪರಾಧದಿಂದ ಬಾಧಿತನಾದ ವ್ಯಕ್ತಿಗೆ ಅಥವಾ ಅಪರಾಧದ ತನಿಖೆ ಮಾಡುತ್ತಿರುವ ಪೊಲೀಸ್ ಅಧಿಕಾರಿಗೆ ಅಪರಾಧಿಯ ಗುರುತು ತಿಳಿದ ಮೊದಲ ದಿನದಿಂದ, ಇವೆರಡರಲ್ಲಿ ಯಾವುದು ಮೊದಲೋ ಆ ದಿನದಿಂದ

- ಪ್ರಾರಂಭವಾಗತಕ್ಕದ್ದು.

(2) ಸದರಿ ಅವಧಿಯನ್ನು ಲೆಕ್ಕ ಹಾಕುವಲ್ಲಿ ಯಾವ ದಿನದಿಂದ ಅಂಥ ಅವಧಿಯನ್ನು ಲೆಕ್ಕ ಹಾಕಬೇಕೋ ಆ ದಿನವನ್ನು ಬಿಟ್ಟುಬಿಡತಕ್ಕದ್ದು.

**516. ಕೆಲವು ಮೊಕದ್ದಮೆಗಳಲ್ಲಿ ಅವಧಿಯನ್ನು ಹೊರತುಪಡಿಸುವಿಕೆ.-** (1) ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಮೊದಲನೆಯ ನ್ಯಾಯಾಲಯದಲ್ಲಿ ಅಥವಾ ಅಪೀಲು ಅಥವಾ ಪುನರೀಕ್ಷಣಾ ನ್ಯಾಯಾಲಯದಲ್ಲಿ ಯಾರೇ ವ್ಯಕ್ತಿಯು ಅಪರಾಧಿಯ ವಿರುದ್ಧ ಇನ್ನೊಂದು ಪ್ರಾಸಿಕ್ಯೂಷನನ್ನು ಯುಕ್ತ ತತ್ಪರತೆಯಿಂದ ನಡೆಸುತ್ತಿರುವ ಅವಧಿಯನ್ನು ಹೊರತುಪಡಿಸತಕ್ಕದ್ದು:

ಪರಂತು, ಅವೇ ಸಂಗತಿಗಳಿಗೆ ಪ್ರಾಸಿಕ್ಯೂಷನ್ ಸಂಬಂಧಿಸಿರುವ ಹೊರತು ಮತ್ತು ಅಧಿಕಾರವ್ಯಾಪ್ತಿಯ ನ್ಯೂನ್ಯತೆ ಅಥವಾ ಅದೇ ಸ್ವರೂಪದ ಇತರ ಕಾರಣದಿಂದ ಅದನ್ನು ಸ್ವೀಕರಿಸಲು ಅಸಮರ್ಥವಾದ ನ್ಯಾಯಾಲಯದಲ್ಲಿ ಸದ್ಭಾವನೆಯಿಂದ ಅದನ್ನು ನಡೆಸಿದ್ದ ಹೊರತು, ಹಾಗೆ ಅಂಥ ಅವಧಿಯನ್ನು ಹೊರತುಪಡಿಸತಕ್ಕದ್ದಲ್ಲ.

(2) ಅಪರಾಧದ ಬಗ್ಗೆ ಪ್ರಾಸಿಕ್ಯೂಷನ್ ಹೂಡುವುದನ್ನು ನಿರ್ಬಂಧಕಾಜ್ಞೆಯ ಅಥವಾ ಆದೇಶದ ಮೂಲಕ ತಡೆಹಿಡಿದಿರುವಾಗ, ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಲ್ಲಿ, ನಿರ್ಬಂಧಕಾಜ್ಞೆಯು ಅಥವಾ ಆದೇಶವು ಮುಂದುವರಿಯುವ ಅವಧಿಯನ್ನು, ಅದನ್ನು ಹೊರಡಿಸಲಾದ ಅಥವಾ ಮಾಡಲಾದ ದಿನವನ್ನು ಮತ್ತು ಅದನ್ನು ಹಿಂತೆಗೆದುಕೊಂಡ ದಿನವನ್ನು ಹೊರತುಪಡಿಸತಕ್ಕದ್ದು.

(3) ಅಪರಾಧದ ಬಗ್ಗೆ ಪ್ರಾಸಿಕ್ಯೂಷನ್ನಿನ ನೋಟೀಸನ್ನು ನೀಡಲಾಗಿರುವಾಗ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಪರಾಧದ ಬಗ್ಗೆ ಯಾವುದೇ ಪ್ರಾಸಿಕ್ಯೂಷನ್ ಹೂಡಲು ಸರ್ಕಾರದ ಅಥವಾ ಇತರ ಯಾವುದೇ ಪ್ರಾಧಿಕಾರದ ಸಮ್ಮತಿ ಅಥವಾ ಮಂಜೂರಾತಿಯು ಅಗತ್ಯವಾಗಿರುವಾಗ, ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಅಂಥ ನೋಟೀಸಿನ ಅವಧಿಯನ್ನು ಅಥವಾ ಸಂದರ್ಭಾನುಸಾರ, ಅಂಥ ಅನುಮತಿಯನ್ನು ಅಥವಾ ಮಂಜೂರಾತಿಯನ್ನು ಪಡೆಯುವುದಕ್ಕಾಗಿ ಅಗತ್ಯವಾದ ಸಮಯವನ್ನು ಹೊರತುಪಡಿಸತಕ್ಕದ್ದು.

*ವಿವರಣೆ.*- ಸರ್ಕಾರದ ಅಥವಾ ಇತರ ಯಾವುದೇ ಪ್ರಾಧಿಕಾರದ ಸಮ್ಮತಿ ಅಥವಾ ಮಂಜೂರಾತಿಯನ್ನು ಪಡೆಯುವುದಕ್ಕಾಗಿ ಅಗತ್ಯವಾದ ಕಾಲವನ್ನು ಲೆಕ್ಕ ಹಾಕುವಲ್ಲಿ, ಆ ಸಮ್ಮತಿ ಅಥವಾ ಮಂಜೂರಾತಿಯನ್ನು ಪಡೆಯಲು ಅರ್ಜಿ ಸಲ್ಲಿಸಿದ ದಿನಾಂಕವನ್ನು ಮತ್ತು ಸರ್ಕಾರದ ಅಥವಾ ಇತರೆ ಪ್ರಾಧಿಕಾರದ ಆದೇಶವನ್ನು ಪಡೆದ ದಿನಾಂಕವನ್ನು ಹೊರತುಪಡಿಸತಕ್ಕದ್ದು.

(4) ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಲ್ಲಿ ಯಾವ ಕಾಲಾವಧಿಯಲ್ಲಿ ಅಪರಾಧಿಯು,-

(ಎ) ಭಾರತದಿಂದ ಅಥವಾ ಕೇಂದ್ರ ಸರ್ಕಾರದ ಆಡಳಿತದಲ್ಲಿರುವ ಭಾರತದ ಹೊರಗಿನ ಯಾವುದೇ ರಾಜ್ಯಕ್ಷೇತ್ರದಿಂದ ಗೈರುಹಾಜರಾಗಿರುವನೋ ಆ ಕಾಲವನ್ನು; ಅಥವಾ

(ಬಿ) ತಲೆಮರೆಸಿಕೊಳ್ಳುವ ಅಥವಾ ಬಚ್ಚಿಟ್ಟುಕೊಳ್ಳುವ ಮೂಲಕ ದಸ್ತಗಿರಿಯನ್ನು ತಪ್ಪಿಸಿಕೊಂಡ ಕಾಲವನ್ನು

- ಹೊರತುಪಡಿಸತಕ್ಕದ್ದು.

**517. ನ್ಯಾಯಾಲಯವು ಮುಚ್ಚಿರುವ ದಿನವನ್ನು ಹೊರತುಪಡಿಸುವಿಕೆ.-** ನ್ಯಾಯಾಲಯವು ಮುಚ್ಚಿರುವ ದಿನದಂದು ಕಾಲಪರಿಮಿತಿ ಅವಧಿಯು ಮುಕ್ತಾಯವಾದಾಗ, ನ್ಯಾಯಾಲಯವು ಮರು ಪ್ರಾರಂಭವಾಗುವ ದಿನದಂದು, ನ್ಯಾಯಾಲಯವು ಆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

*ವಿವರಣೆ.*- ನ್ಯಾಯಾಲಯವು, ತನ್ನ ಸಾಮಾನ್ಯ ಕೆಲಸದ ಅವಧಿಯಲ್ಲಿ ಯಾವುದೇ ದಿನದಂದು ಮುಚ್ಚಲಾಗಿದ್ದರೆ, ಈ ಪ್ರಕರಣದ ಅರ್ಥದಲ್ಲಿ ಅದು ಆ ದಿನದಂದು ಮುಚ್ಚಲಾಗಿದೆ ಎಂದು ಭಾವಿಸತಕ್ಕದ್ದು.

**518. ಮುಂದುವರಿಯುತ್ತಿರುವ ಅಪರಾಧ.-** ಮುಂದುವರಿಯುತ್ತಿರುವ ಅಪರಾಧದ ಸಂದರ್ಭದಲ್ಲಿ, ಅಪರಾಧವು ಮುಂದುವರಿಯುತ್ತಿರುವ ಕಾಲದ ಪ್ರತಿಯೊಂದು ನಿಮಿಷದಲ್ಲೂ ಕಾಲಪರಿಮಿತಿ ಅವಧಿಯು ಹೊಸದಾಗಿ ಪ್ರಾರಂಭವಾಗತಕ್ಕದ್ದು.

**519. ಕೆಲವು ಮೊಕದ್ದಮೆಗಳಲ್ಲಿ ಕಾಲಪರಿಮಿತಿ ಅವಧಿಯ ವಿಸ್ತರಣೆ.-** ಈ ಅಧ್ಯಾಯದ ಹಿಂದಿನ ಉಪಬಂಧಗಳಲ್ಲಿ ಏನೇ ಇದ್ದರೂ, ಮೊಕದ್ದಮೆಯ ಸಂಗತಿಗಳ ಮೇಲೆ ಮತ್ತು ಪರಿಸ್ಥಿತಿಗಳ ಮೇಲೆ ಆ ವಿಳಂಬವನ್ನು ಸಕಾರಣವಾಗಿ ವಿವರಿಸಲಾಗಿದೆಯೆಂದು ಅಥವಾ ನ್ಯಾಯೋದ್ದೇಶಗಳಿಗಾಗಿ ಹಾಗೆ ಮಾಡುವುದು ಅವಶ್ಯಕವೆಂದು ತನಗೆ ಮನದಟ್ಟಾದರೆ, ಯಾವುದೇ ನ್ಯಾಯಾಲಯವು ಕಾಲಪರಿಮಿತಿ ಅವಧಿಯು ಮುಕ್ತಾಯವಾದ ತರುವಾಯವೂ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

## ಅಧ್ಯಾಯ XXXIX

### ಸಂಕೀರ್ಣ

**520. ಉಚ್ಚ ನ್ಯಾಯಾಲಯಗಳಲ್ಲಿ ಅಧಿವಿಚಾರಣೆಗಳು.-** ಉಚ್ಚ ನ್ಯಾಯಾಲಯವು 447ನೇ ಪ್ರಕರಣದ ಮೇರೆಗಲ್ಲದೆ ಅನ್ಯಥಾ ಅಪರಾಧವನ್ನು ಅಧಿವಿಚಾರಣೆ ಮಾಡಿದಾಗ, ಅದು ಅಪರಾಧದ ಅಧಿವಿಚಾರಣೆಯಲ್ಲಿ ಸೆಷನ್ ನ್ಯಾಯಾಲಯವು ಆ ಮೊಕದ್ದಮೆಯನ್ನು ಅಧಿವಿಚಾರಣೆ ಮಾಡುತ್ತಿರುವಾಗ ಅನುಸರಿಸಬಹುದಾಗಿದ್ದ ಪ್ರಕ್ರಿಯೆಯನ್ನೇ ತಾನು ಅನುಸರಿಸತಕ್ಕದ್ದು.

**521. ಸೇನಾ-ನ್ಯಾಯಾಲಯದ ಅಧಿವಿಚಾರಣೆಗೆ ಗುರಿಯಾಗುವ ವ್ಯಕ್ತಿಗಳನ್ನು ಸಮಾದೇಶಾಧಿಕಾರಿ (ಕಮಾಂಡಿಂಗ್ ಆಫೀಸರ್)ಗಳಿಗೆ ಒಪ್ಪಿಸುವುದು.-** (1) ಕೇಂದ್ರ ಸರ್ಕಾರವು ಈ ಸಂಹಿತೆಯ ಮತ್ತು ವಾಯು ಸೇನಾ ಅಧಿನಿಯಮ, 1950 (1950ರ 45), ಭೂ ಸೇನಾ ಅಧಿನಿಯಮ, 1950 (1950ರ 46), ನೌಕಾ ಸೇನಾ ಅಧಿನಿಯಮ, 1957 (1957ರ 62) ಮತ್ತು ಕೇಂದ್ರದ ಸಶಸ್ತ್ರ ಪಡೆಗಳಿಗೆ ಸಂಬಂಧಿಸಿದಂತೆ ಮಾಡಲಾದ, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿಗೆ

ಸುಸಂಗತವಾದ ಭೂಸೇನಾ, ನೌಕಾಸೇನಾ ಅಥವಾ ವಾಯುಸೇನಾ ಕಾನೂನಿಗೆ ಅಥವಾ ಅಂಥ ಇತರ ಕಾನೂನಿಗೆ ಒಳಪಟ್ಟಿರುವ ವ್ಯಕ್ತಿಗಳನ್ನು ಯಾವ ಸಂದರ್ಭಗಳಲ್ಲಿ ಈ ಸಂಹಿತೆಯು ಅನ್ವಯವಾಗುವ ನ್ಯಾಯಾಲಯ ಅಥವಾ ಸೇನಾ-ನ್ಯಾಯಾಲಯವು ಅಧಿವಿಚಾರಣೆ ಮಾಡಬೇಕು ಎಂಬ ಬಗ್ಗೆ ನಿಯಮಗಳನ್ನು ರಚಿಸಬಹುದು ಮತ್ತು ಯಾರೇ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಕರೆತಂದಾಗ ಮತ್ತು ಈ ಸಂಹಿತೆಯು ಅನ್ವಯವಾಗುವ ನ್ಯಾಯಾಲಯದಿಂದ ಅಥವಾ ಸೇನಾ-ನ್ಯಾಯಾಲಯದಿಂದ ಅಧಿವಿಚಾರಣೆ ಮಾಡಬಹುದಾದ ಅಪರಾಧಕ್ಕಾಗಿ ಅವನು ಆರೋಪಿತನಾಗಿರುವಲ್ಲಿ, ಅಂಥ ಮ್ಯಾಜಿಸ್ಟ್ರೇಟನು ಅಂಥ ನಿಯಮಗಳಿಗೆ ಗಮನ ನೀಡತಕ್ಕದ್ದು ಮತ್ತು ಸೂಕ್ತ ಸಂದರ್ಭಗಳಲ್ಲಿ ಅವನು ಆಪಾದಿತನಾಗಿರುವ ಅಪರಾಧದ ಬಗೆಗಿನ ಹೇಳಿಕೆಯೊಡನೆ ಸಂದರ್ಭಾನುಸಾರ ಅವನು ಸೇರಿರುವ ಘಟಕದ ಕಮಾಂಡಿಂಗ್ ಆಫೀಸರ್‌ಗೆ ಅಥವಾ ತೀರ ಹತ್ತಿರದ ಭೂಸೇನಾ, ನೌಕಾಸೇನಾ ಅಥವಾ ವಾಯು ಸೇನಾದ ಠಾಣೆಯ ಕಮಾಂಡಿಂಗ್ ಆಫೀಸರ್‌ಗೆ ಸೇನಾ-ನ್ಯಾಯಾಲಯವು ಅಧಿವಿಚಾರಣೆ ಮಾಡುವ ಉದ್ದೇಶಕ್ಕಾಗಿ ಆತನನ್ನು ಒಪ್ಪಿಸತಕ್ಕದ್ದು.

*ವಿವರಣೆ.*- ಈ ಪ್ರಕರಣದಲ್ಲಿ,-

(ಎ) "ಘಟಕ" ಎಂಬುದು ರೆಜಿಮೆಂಟ್, ದಳ, ನೌಕೆ, ಸೇನಾ ತುಕಡಿ, ಗುಂಪು, ಬಟಾಲಿಯನ್ ಅಥವಾ ಕಂಪೆನಿಯನ್ನು ಒಳಗೊಳ್ಳುತ್ತದೆ;

(ಬಿ) "ಸೇನಾ-ನ್ಯಾಯಾಲಯ" ಎಂಬುದು ಕೇಂದ್ರದ ಸಶಸ್ತ್ರ ಪಡೆಗಳಿಗೆ ಅನ್ವಯವಾಗುವ ಸುಸಂಗತ ಕಾನೂನಿನ ಮೇರೆಗೆ ರಚಿತವಾದ ಸೇನಾ-ನ್ಯಾಯಾಲಯವು ಹೊಂದಿರುವ ಅಧಿಕಾರಗಳಂಥವೇ ಅಧಿಕಾರಗಳನ್ನು ಪಡೆದಿರುವ ಯಾವುದೇ ನ್ಯಾಯಾಧಿಕರಣವನ್ನು ಒಳಗೊಳ್ಳುತ್ತದೆ.

(2) ಅಂಥ ಯಾವುದೇ ಸ್ಥಳದಲ್ಲಿ ಇರುವ ಅಥವಾ ನಿಯುಕ್ತರಾಗಿರುವ ಸೈನಿಕರ, ನಾವಿಕರ ಅಥವಾ ವೈಮಾನಿಕರ ಯಾವುದೇ ಘಟಕ ಅಥವಾ ನಿಕಾಯದ ಸಮಾದೇಶಾಧಿಕಾರಿಯು (ಕಮಾಂಡಿಂಗ್ ಆಫೀಸರ್) ಅಂಥ ಅಪರಾಧಕ್ಕಾಗಿ ಆಪಾದಿತನಾದ ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡುವ ಮತ್ತು ಸುರಕ್ಷಿತವಾಗಿಡುವ ಉದ್ದೇಶಕ್ಕಾಗಿ ಲಿಖಿತ ಮನವಿ ಮಾಡಿಕೊಂಡಾಗ, ಪ್ರತಿಯೊಬ್ಬ ಮ್ಯಾಜಿಸ್ಟ್ರೇಟನು ಅ ಬಗ್ಗೆ ತನ್ನ ಸರ್ವ ಪ್ರಯತ್ನವನ್ನು ಮಾಡತಕ್ಕದ್ದು.

(3) ಉಚ್ಚ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ರಾಜ್ಯದಲ್ಲೇ ಇರುವ ಯಾವುದೇ ಜೈಲಿನಲ್ಲಿ ತಡೆಹಿಡಿದಿರಿಸಲಾದ ಕೈದಿಯನ್ನು ಸೇನಾ ನ್ಯಾಯಾಲಯದ ಮುಂದೆ ಇರುವ ಅಧಿವಿಚಾರಣೆಗಾಗಿ ಅಥವಾ ಸೇನಾ-ನ್ಯಾಯಾಲಯದ ಮುಂದೆ ಇತ್ಯರ್ಥವಾಗಬೇಕಾಗಿರುವ ಯಾವುದೇ ವಿಷಯದ ಬಗ್ಗೆ ವಿಚಾರಣೆ ಮಾಡಲು ಕರೆತರಬೇಕೆಂದು ನಿರ್ದೇಶಿಸಬಹುದು.

**522. ನಮೂನೆಗಳು.-** ಸಂವಿಧಾನದ 227ನೇ ಅನುಚ್ಛೇದದ ಮೂಲಕ ಪ್ರದತ್ತವಾದ ಅಧಿಕಾರಕ್ಕೊಳಪಟ್ಟು, ಎರಡನೇ ಅನುಸೂಚಿಯಲ್ಲಿ ನಮೂದಿಸಲಾದ ನಮೂನೆಗಳನ್ನು ಪ್ರತಿಯೊಂದು ಮೊಕದ್ದಮೆಯ ಸನ್ನಿವೇಶಗಳಿಗೆ ಅಗತ್ಯವಾಗುವ ಬದಲಾವಣೆಗಳೊಡನೆ, ಅದರಲ್ಲಿ ನಮೂದಿಸಲಾದ ಆಯಾ ಉದ್ದೇಶಗಳಿಗಾಗಿ ಉಪಯೋಗಿಸಬಹುದು ಮತ್ತು ಉಪಯೋಗಿಸಿದರೆ ಅದು ಸಾಕಾಗುತ್ತದೆ.

**523. ಉಚ್ಚ ನ್ಯಾಯಾಲಯದ ನಿಯಮ ರಚನಾಧಿಕಾರ.-** (1) ಪ್ರತಿಯೊಂದು ಉಚ್ಚ ನ್ಯಾಯಾಲಯವೂ, ರಾಜ್ಯ ಸರ್ಕಾರದ ಪೂರ್ವ ಅನುಮೋದನೆಯನ್ನು ಪಡೆದು,-

(ಎ) ತನಗೆ ಅಧೀನವಾಗಿರುವ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಅರ್ಜಿ-ಬರಹಗಾರರಾಗಿ ಕೆಲಸ ಮಾಡಲು ಅನುಮತಿ ಪಡೆಯಬಹುದಾದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ;

(ಬಿ) ಅಂಥ ವ್ಯಕ್ತಿಗಳಿಗೆ ಲೈಸೆನ್ಸು ನೀಡಿಕೆಯನ್ನು, ಅವರು ನಡೆಸಬೇಕಾದ ವ್ಯವಹಾರಗಳ ರೀತಿಯನ್ನು ಮತ್ತು ಅವರು ವಿಧಿಸಬೇಕಾದ ಫೀಜನ್ನು ವಿನಿಯಮಿಸುವುದಕ್ಕೆ ಸಂಬಂಧಿಸಿದಂತೆ;

(ಸಿ) ಹಾಗೆ ರಚಿಸಲಾದ ಯಾವುದೇ ನಿಯಮಗಳ ಉಲ್ಲಂಘನೆಗಾಗಿ ವಿಧಿಸಬೇಕಾದ ದಂಡದ ಬಗ್ಗೆ ಉಪಬಂಧಿಸುವ ಮತ್ತು ಅಂಥ ಉಲ್ಲಂಘನೆಯನ್ನು ಅನ್ವೇಷಿಸುವ ಮತ್ತು ದಂಡವನ್ನು ವಿಧಿಸುವ ಪ್ರಾಧಿಕಾರಿಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ;

(ಡಿ) ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ಉಪಬಂಧಿಸುವುದು ಅಗತ್ಯವಾಗಿರುವ ಅಥವಾ ಉಪಬಂಧಿಸಬಹುದಾದ ಇತರ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ

- ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಲಾದ ಎಲ್ಲ ನಿಯಮಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**524. ಕೆಲವು ಮೊಕದ್ದಮೆಗಳಲ್ಲಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ಹಂಚಿಕೆ ಮಾಡಲಾದ ಪ್ರಕಾರ್ಯಗಳನ್ನು ಬದಲಾಯಿಸುವ ಅಧಿಕಾರ.-** ರಾಜ್ಯದ ವಿಧಾನಸಭೆಯು, ನಿರ್ಣಯದ ಮೂಲಕ ಹಾಗೆ ಅನುಮತಿಸಿದ್ದರೆ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ 127, 128, 129, 164 ಮತ್ತು 166ನೇ ಪ್ರಕರಣಗಳಲ್ಲಿನ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ಮಾಡಿದ ಉಲ್ಲೇಖಗಳನ್ನು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದೆಂದು ನಿರ್ದೇಶಿಸಬಹುದು.

**525. ನ್ಯಾಯಾಧೀಶನಿಗೆ ಅಥವಾ ಮ್ಯಾಜಿಸ್ಟ್ರೇಟನಿಗೆ ಖುದ್ದು ಹಿತಾಸಕ್ತಿ ಇರುವ ಮೊಕದ್ದಮೆಗಳು.-** ಯಾರೇ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು, ತನ್ನ ನ್ಯಾಯಾಲಯದಿಂದ ಯಾವ ನ್ಯಾಯಾಲಯಕ್ಕೆ ಅಪೀಲು ಮಾಡಬಹುದೋ ಆ ನ್ಯಾಯಾಲಯದ ಅನುಮತಿ ಪಡೆದ ಹೊರತು, ತಾನು ಪಕ್ಷಕಾರನಾಗಿರುವ ಅಥವಾ ತನಗೆ ಖುದ್ದು ಹಿತಾಸಕ್ತಿ ಇರುವ ಯಾವುದೇ ಮೊಕದ್ದಮೆಯನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ ಅಥವಾ ಅಧಿವಿಚಾರಣೆಗೆ ಒಪ್ಪಿಸತಕ್ಕದ್ದಲ್ಲ ಮತ್ತು ಯಾರೇ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ತಾನೇ ಮಾಡಿದ ಯಾವುದೇ ತೀರ್ಪು ಅಥವಾ ಆದೇಶದ ಮೇಲೆ ಅಪೀಲು ವಿಚಾರಣೆ ಮಾಡತಕ್ಕದ್ದಲ್ಲ.

*ವಿವರಣೆ.-* ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ತನ್ನ ಪದೀಯ ಸಾಮರ್ಥ್ಯದಿಂದಾಗಿ ಮೊಕದ್ದಮೆಗೆ ಸಂಬಂಧಿಸಿರುವನೆಂಬ ಕಾರಣ ಮಾತ್ರದಿಂದಲೇ ಅಥವಾ ಅಪರಾಧವು ನಡೆದಿದೆಯೆಂದು ಆಪಾದಿತವಾದ ಸ್ಥಳವನ್ನು ಅಥವಾ ಮೊಕದ್ದಮೆಗೆ ಸಂಬಂಧಪಟ್ಟ ಇತರ ಯಾವುದೇ ಮುಖ್ಯ ವ್ಯವಹಾರವು ನಡೆದಿದೆಯೆಂದು ಆಪಾದಿತವಾದ ಯಾವುದೇ ಇತರ ಸ್ಥಳವನ್ನು ನೋಡಿರುವನೆಂಬ ಮತ್ತು ಆ ಮೊಕದ್ದಮೆಗೆ ಸಂಬಂಧಿಸಿದಂತೆ ವಿಚಾರಣೆಯನ್ನು ಮಾಡಿರುವನೆಂಬ ಕಾರಣ ಮಾತ್ರದಿಂದ ಆ ಯಾವುದೇ ಮೊಕದ್ದಮೆಯಲ್ಲಿ ಅವನು ಪಕ್ಷಕಾರನಾಗಿರುವನೆಂದು ಅಥವಾ ಅವನಿಗೆ ಖುದ್ದು ಹಿತಾಸಕ್ತಿ ಹೊಂದಿರುವನೆಂದು ಭಾವಿಸತಕ್ಕದ್ದಲ್ಲ.

**526. ವೃತ್ತಿನಿರತನಾದ ನ್ಯಾಯವಾದಿಯು ಕೆಲವು ನ್ಯಾಯಾಲಯಗಳಲ್ಲಿ ಮ್ಯಾಜಿಸ್ಟ್ರೇಟನಾಗಿ ಕಾರ್ಯನಿರ್ವಹಿಸಬಾರದು.-** ಯಾರೇ ಮ್ಯಾಜಿಸ್ಟ್ರೇಟನ ನ್ಯಾಯಾಲಯದಲ್ಲಿ ವೃತ್ತಿನಿರತನಾಗಿರುವ ಯಾರೇ ನ್ಯಾಯವಾದಿಯೂ ಆ ನ್ಯಾಯಾಲಯದಲ್ಲಿ ಅಥವಾ

ಆ ನ್ಯಾಯಾಲಯದ ಸ್ಥಳೀಯ ಅಧಿಕಾರವ್ಯಾಪ್ತಿಯಲ್ಲಿರುವ ಯಾವುದೇ ನ್ಯಾಯಾಲಯದಲ್ಲಿ ಮ್ಯಾಜಿಸ್ಟ್ರೇಟನಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ.

**527. ಮಾರಾಟಕ್ಕೆ ಸಂಬಂಧಪಟ್ಟ ಲೋಕ ನೌಕರನು ಆ ಸ್ವತ್ತನ್ನು ಖರೀದಿ ಮಾಡಬಾರದು ಅಥವಾ ಅದಕ್ಕಾಗಿ ಹರಾಜು ಕೂಗಬಾರದು.-** ಈ ಸಂಹಿತೆಯ ಮೇರೆಗಿನ ಯಾವುದೇ ಸ್ವತ್ತಿನ ಮಾರಾಟದ ಸಂಬಂಧದಲ್ಲಿ ಯಾವುದೇ ಕರ್ತವ್ಯವನ್ನು ನಿರ್ವಹಿಸಬೇಕಾಗಿರುವ ಲೋಕ ನೌಕರನು ಆ ಸ್ವತ್ತನ್ನು ಖರೀದಿ ಮಾಡತಕ್ಕದ್ದಲ್ಲ ಅಥವಾ ಅದಕ್ಕಾಗಿ ಹರಾಜು ಕೂಗತಕ್ಕದ್ದಲ್ಲ.

**528. ಉಚ್ಚ ನ್ಯಾಯಾಲಯದ ಅಂತರ್ನಿಹಿತ ಅಧಿಕಾರಗಳನ್ನು ಉಳಿಸುವಿಕೆ.-** ಈ ಸಂಹಿತೆಯ ಮೇರೆಗೆ ಯಾವುದೇ ಆದೇಶವನ್ನು ಕಾರ್ಯಗತಗೊಳಿಸಲು ಅಥವಾ ಯಾವುದೇ ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವನ್ನು ತಡೆಯಲು ಅಥವಾ ಅನ್ಯಥಾ ನ್ಯಾಯೋದ್ದೇಶವನ್ನು ಈಡೇರಿಸಲು ಅವಶ್ಯಕವಾಗಬಹುದಾದಂಥ ಆದೇಶಗಳನ್ನು ಮಾಡಲು ಉಚ್ಚ ನ್ಯಾಯಾಲಯಕ್ಕಿರುವ ಅಂತರ್ನಿಹಿತ ಅಧಿಕಾರಗಳನ್ನು ಈ ಸಂಹಿತೆಯಲ್ಲಿರುವುದು ಯಾವುದೂ ಸೀಮಿತಗೊಳಿಸುವುದೆಂದು ಅಥವಾ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

**529. ನ್ಯಾಯಾಲಯಗಳ ಮೇಲೆ ನಿರಂತರ ಅಧೀಕ್ಷಣೆಯನ್ನು ಮಾಡುವುದು ಉಚ್ಚ ನ್ಯಾಯಾಲಯದ ಕರ್ತವ್ಯ.-** ಪ್ರತಿಯೊಂದು ಉಚ್ಚ ನ್ಯಾಯಾಲಯವು, ತನಗೆ ಅಧೀನವಾಗಿರುವ ಸೆಷನ್ ನ್ಯಾಯಾಲಯಗಳ ಮತ್ತು ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿನ ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟರು ಮೊಕದ್ದಮೆಗಳನ್ನು ತ್ವರಿತವಾಗಿ ಮತ್ತು ಯುಕ್ತವಾಗಿ ಇತ್ಯರ್ಥ ಮಾಡುತ್ತಿರುವರೆಂಬುದನ್ನು ಖಚಿತಪಡಿಸಿಕೊಳ್ಳಲು ಅವುಗಳ ಅಧೀಕ್ಷಣೆಯನ್ನು ಮಾಡತಕ್ಕದ್ದು.

**530. ವಿದ್ಯುನ್ಮಾನ ವಿಧಾನದಲ್ಲಿ ನಡೆಸಬೇಕಾದ ಅಧಿವಿಚಾರಣೆ ಮತ್ತು ವ್ಯವಹರಣೆಗಳು.-** ಈ ಕೆಳಗಿನವುಗಳು, ಎಂದರೆ:-

(i) ಸಮನುಗಳು ಮತ್ತು ವಾರಂಟುಗಳ ಹೊರಡಿಸುವಿಕೆ, ನೀಡುವಿಕೆ ಮತ್ತು ಜಾರಿಗೊಳಿಸುವಿಕೆ;

(ii) ದೂರುದಾರ ಮತ್ತು ಸಾಕ್ಷಿದಾರರ ಪರಿಶೀಲನೆ;

(iii) ವಿಚಾರಣೆಗಳು ಮತ್ತು ಅಧಿವಿಚಾರಣೆಗಳಲ್ಲಿ ಸಾಕ್ಷ್ಯವನ್ನು ದಾಖಲಿಸುವುದು; ಮತ್ತು

(iv) ಎಲ್ಲಾ ಅಪೀಲು ವ್ಯವಹರಣೆಗಳು ಅಥವಾ ಇತರ ವ್ಯವಹರಣೆಗಳನ್ನು ಒಳಗೊಂಡಂತೆ

- ಈ ಸಂಹಿತೆಯ ಮೇರೆಗಿನ ಎಲ್ಲಾ ಅಧಿವಿಚಾರಣೆಗಳು, ವಿಚಾರಣೆಗಳು ಮತ್ತು ವ್ಯವಹರಣೆಗಳನ್ನು ವಿದ್ಯುನ್ಮಾನ ಸಂವಹನವನ್ನು ಬಳಸಿಕೊಂಡು ಅಥವಾ ಶ್ರವ್ಯ-ದೃಶ್ಯ ವಿದ್ಯುನ್ಮಾನ ಸಾಧನಗಳನ್ನು ಬಳಸಿಕೊಂಡು ವಿದ್ಯುನ್ಮಾನ ವಿಧಾನದಲ್ಲಿ ನಡೆಸಬಹುದು.

**531. ನಿರಸನ ಮತ್ತು ಉಳಿಸುವಿಕೆಗಳು.-** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದರೂ,-

(ಎ) ಈ ಸಂಹಿತೆಯು ಜಾರಿಗೆ ಬರುವ ದಿನಾಂಕದ ನಿಕಟಪೂರ್ವದಲ್ಲಿ ಯಾವುದೇ ಅಪೀಲು, ಅರ್ಜಿ, ಅಧಿವಿಚಾರಣೆ, ವಿಚಾರಣೆ ಅಥವಾ ತನಿಖೆ ಮುಕ್ತಾಯವಾಗದಿದ್ದರೆ, ಅಂಥ ಅಪೀಲು, ಅರ್ಜಿ, ಅಧಿವಿಚಾರಣೆ, ವಿಚಾರಣೆ ಅಥವಾ ತನಿಖೆಯನ್ನು ಈ ಸಂಹಿತೆಯು ಜಾರಿಗೆ ಬಂದಿರಲಿಲ್ಲವೆಂಬ ರೀತಿಯಲ್ಲಿ, ಇದರ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ (ಇದರಲ್ಲಿ ಇನ್ನು ಮುಂದೆ ಹಳೆಯ ಸಂಹಿತೆ ಎಂದು ಕರೆಯಲಾಗುವ) ದಂಡ

ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳಿಗನುಸಾರವಾಗಿ, ಸಂದರ್ಭಾನುಸಾರ, ವಿಲೆ ಮಾಡತಕ್ಕದ್ದು, ಮುಂದುವರಿಸತಕ್ಕದ್ದು, ನಡೆಸತಕ್ಕದ್ದು ಅಥವಾ ಮಾಡತಕ್ಕದ್ದು;

(ಬಿ) ಹಳೆಯ ಸಂಹಿತೆಯ ಮೇರೆಗೆ ಮಾಡಿದ ಮತ್ತು ಈ ಸಂಹಿತೆಯ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಎಲ್ಲಾ ಪ್ರಕಟಿತ ಅಧಿಸೂಚನೆಗಳು, ಹೊರಡಿಸಲಾದ ಉದ್ಘೋಷಣೆಗಳು, ಪ್ರದತ್ತವಾದ ಅಧಿಕಾರಗಳು, ನಿಯಮಿತವಾದ ನಮೂನೆಗಳು, ನಿರ್ದಿಷ್ಟಪಡಿಸಲಾದ ಸ್ಥಳೀಯ ಅಧಿಕಾರವ್ಯಾಪ್ತಿಗಳು, ಮಾಡಲಾದ ಶಿಕ್ಷೆಯ ಆದೇಶಗಳು ಮತ್ತು ಆದೇಶಗಳು, ನಿಯಮಗಳು ಮತ್ತು ವಿಶೇಷ ಮ್ಯಾಜಿಸ್ಟ್ರೇಟರ ನೇಮಕಗಳಲ್ಲದ ಉಳಿದ ನೇಮಕಗಳು ಇವುಗಳನ್ನು ಕ್ರಮವಾಗಿ, ಈ ಸಂಹಿತೆಯ ಸಂವಾದಿ ಉಪಬಂಧಗಳ ಮೇರೆಗೆ ಪ್ರಕಟಿಸಲಾಗಿದೆ, ಹೊರಡಿಸಲಾಗಿದೆ, ಪ್ರದಾನ ಮಾಡಲಾಗಿದೆ, ನಿಯಮಿಸಲಾಗಿದೆ, ನಿರ್ದಿಷ್ಟಪಡಿಸಲಾಗಿದೆ, ನೀಡಲಾಗಿದೆ ಅಥವಾ ಮಾಡಲಾಗಿದೆಯೆಂದು ಭಾವಿಸತಕ್ಕದ್ದು;

(ಸಿ) ಹಳೆಯ ಸಂಹಿತೆಯ ಮೇರೆಗೆ ಕೊಡಲಾದ ಯಾವುದೇ ಮಂಜೂರಾತಿಗೆ ಅಥವಾ ನೀಡಲಾದ ಸಮ್ಮತಿಗೆ ಅನುಸಾರವಾಗಿ ಆ ಸಂಹಿತೆಯ ಮೇರೆಗೆ ವ್ಯವಹರಣೆಯನ್ನು ಪ್ರಾರಂಭಿಸದಿದ್ದರೆ, ಅಂಥ ಮಂಜೂರಾತಿ ಅಥವಾ ಸಮ್ಮತಿಯನ್ನು ಈ ಸಂಹಿತೆಯ ಸಂವಾದಿ ಉಪಬಂಧಗಳ ಮೇರೆಗೆ ಕೊಡಲಾಗಿದೆ ಅಥವಾ ನೀಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಸಂಹಿತೆಯ ಮೇರೆಗೆ ಅಂಥ ಮಂಜೂರಾತಿ ಅಥವಾ ಸಮ್ಮತಿಗೆ ಅನುಸಾರವಾಗಿ ವ್ಯವಹರಣೆಗಳನ್ನು ಪ್ರಾರಂಭಿಸಬಹುದು.

(3) ಹಳೆಯ ಸಂಹಿತೆಯ ಮೇರೆಗೆ ಅರ್ಜಿ ಅಥವಾ ಇತರ ವ್ಯವಹರಣೆಗೆ ನಿರ್ದಿಷ್ಟಪಡಿಸಲಾದ ಅವಧಿಯು ಈ ಸಂಹಿತೆಯ ಪ್ರಾರಂಭದಂದು ಅಥವಾ ಅದಕ್ಕೂ ಮುನ್ನ ಮುಕ್ತಾಯವಾಗಿದ್ದರೆ, ಈ ಸಂಹಿತೆಯಲ್ಲಿರುವುದು ಯಾವುದೂ ಈ ಸಂಹಿತೆಯ ಮೇರೆಗೆ ಯಾವುದೇ ಅಂಥ ಅರ್ಜಿಯನ್ನು ಸಲ್ಲಿಸಲು ಅಥವಾ ವ್ಯವಹರಣೆಯನ್ನು ಪ್ರಾರಂಭಿಸಲು ಅವುಗಳಿಗಾಗಿ ಈ ಸಂಹಿತೆಯಲ್ಲಿ ಹೆಚ್ಚಿನ ಅವಧಿಯನ್ನು ನಿರ್ದಿಷ್ಟಪಡಿಸಲಾಗಿದೆಯೆಂಬ ಅಥವಾ ಕಾಲದ ವಿಸ್ತರಣೆಗಾಗಿ ಈ ಸಂಹಿತೆಯಲ್ಲಿ ಉಪಬಂಧಗಳನ್ನು ಕಲ್ಪಿಸಲಾಗಿದೆಯೆಂಬ ಕಾರಣದಿಂದ ಮಾತ್ರವೇ ಅವುಗಳನ್ನು ಮಾಡಲು ಅಥವಾ ಪ್ರಾರಂಭ ಮಾಡಲು ಅಧಿಕಾರ ನೀಡುವುದೆಂದು ಅರ್ಥೈಸತಕ್ಕದ್ದಲ್ಲ.

## ಮೊದಲನೇ ಅನುಸೂಚಿ

## ಅಪರಾಧಗಳ ವರ್ಗೀಕರಣ

**ವಿವರಣಾತ್ಮಕ ಸೂಚನೆ.-** (1) ಭಾರತೀಯ ನ್ಯಾಯ ಸಂಹಿತೆಯ ಮೇರೆಗಿನ ಅಪರಾಧಗಳ ಬಗ್ಗೆ ಮೊದಲನೆಯ ಅಂಕಣದಲ್ಲಿ ಯಾವ ಪ್ರಕರಣದ ಸಂಖ್ಯೆಯನ್ನು ಕೊಡಲಾಗಿದೆಯೋ ಆ ಪ್ರಕರಣದ ಎದುರಿನ ಎರಡನೆಯ ಮತ್ತು ಮೂರನೆಯ ಅಂಕಣಗಳಲ್ಲಿ ಮಾಡಲಾದ ನಮೂನೆಗಳನ್ನು ಭಾರತೀಯ ನ್ಯಾಯ ಸಂಹಿತೆಯ ಮೇರೆಗಿನ ಅಪರಾಧದ ಪರಿಭಾಷೆಯೆಂದಾಗಲಿ, ಅದಕ್ಕೆ ನಿಯಮಿಸಲಾದ ದಂಡನೆಯೆಂದಾಗಲಿ ಉದ್ದೇಶಿಸದೆ, ಆ ಪ್ರಕರಣದ ಸಾರಾಂಶವಾಗಿ ಮಾತ್ರ ಕೊಡಲಾಗಿದೆ.

(2) ಈ ಅನುಸೂಚಿಯಲ್ಲಿ, (i) "ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್" ಮತ್ತು "ಯಾರೇ ಮ್ಯಾಜಿಸ್ಟ್ರೇಟ್" ಎಂಬ ಪದಾವಳಿಯು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರನ್ನು ಒಳಗೊಳ್ಳುವುದಿಲ್ಲ; (ii) "ಸಂಜ್ಞೇಯ" ಎಂಬ ಪದವು "ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು" ಎಂಬ ಅರ್ಥ ಕೊಡುತ್ತದೆ ಮತ್ತು (iii) "ಸಂಜ್ಞೇಯವಲ್ಲ" ಎಂಬ ಪದವು "ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡತಕ್ಕದ್ದಲ್ಲ" ಎಂಬ ಅರ್ಥ ಕೊಡುತ್ತದೆ.

### I. ಭಾರತೀಯ ನ್ಯಾಯ ಸಂಹಿತೆಯ ಮೇರೆಗಿನ ಅಪರಾಧಗಳು

| ಪ್ರಕರಣ | ಅಪರಾಧ | ದಂಡನೆ | ಸಂಜ್ಞೇಯ ಅಥವಾ ಸಂಜ್ಞೇಯವಲ್ಲ | ಜಾಮೀನೀಯ ಅಥವಾ ಜಾಮೀನೀಯವಲ್ಲ | ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ |
|---|---|---|---|---|---|
| 1 | 2 | 3 | 4 | 5 | 6 |
| 49. | ಯಾವುದೇ ಅಪರಾಧದ ದುಷ್ಪ್ರೇರಣೆ, ದುಷ್ಪ್ರೇರಣೆಯ ಪರಿಣಾಮವಾಗಿ ದುಷ್ಪ್ರೇರಿತ ಕೃತ್ಯವನ್ನು ಮಾಡಿದ್ದರೆ ಮತ್ತು ಅದರ ದಂಡನೆಗೆ ಸ್ಪಷ್ಟ ಉಪಬಂಧವು ಇಲ್ಲದಿದ್ದರೆ. | ದುಷ್ಪ್ರೇರಿತ ಅಪರಾಧಕ್ಕೆ ಇರುವಂಥದ್ದೇ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 50. | ಯಾವುದೇ ಅಪರಾಧದ ದುಷ್ಪ್ರೇರಣೆ, ದುಷ್ಪ್ರೇರಕನ ಉದ್ದೇಶಕ್ಕಿಂತಲೂ ಬೇರೆಯದಾದ ಉದ್ದೇಶದಿಂದ ದುಷ್ಪ್ರೇರಿತನು ಕೃತ್ಯವನ್ನು ಮಾಡಿದರೆ. | ದುಷ್ಪ್ರೇರಿತ ಅಪರಾಧಕ್ಕೆ ಇರುವಂಥದ್ದೇ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 51. | ಯಾವುದೇ ಅಪರಾಧದ ದುಷ್ಪ್ರೇರಣೆ, ದುಷ್ಪ್ರೇರಣೆ ಮಾಡಿದ ಕೃತ್ಯವೇ ಒಂದು ಮತ್ತು ಮಾಡಲಾದ ಕೃತ್ಯವೇ ಬೇರೊಂದು; ಪರಂತುಕಕ್ಕೆ ಒಳಪಟ್ಟು | ಉದ್ದೇಶಿತ ದುಷ್ಪ್ರೇರಿತ ಅಪರಾಧಕ್ಕೆ ಇರುವಂಥದ್ದೇ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |

| | | | | | |
|---|---|---|---|---|---|
| 52. | ಯಾವ ಕೃತ್ಯಕ್ಕೆ ದುಷ್ಪ್ರೇರಣೆ ನೀಡಲಾಯಿತೋ ಆ ಕೃತ್ಯಕ್ಕಾಗಿ ಮತ್ತು ನಡೆದ ಕೃತ್ಯಕ್ಕಾಗಿ ಸಂಚಿತ ದಂಡನೆಗೆ ದುಷ್ಪ್ರೇರಕನು ಯಾವಾಗ ಗುರಿಯಾಗುತ್ತಾನೆ. | ದುಷ್ಪ್ರೇರಿತ ಅಪರಾಧಕ್ಕೆ ಇರುವಂಥದ್ದೇ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 53. | ಯಾವುದೇ ಅಪರಾಧದ ದುಷ್ಪ್ರೇರಣೆ, ದುಷ್ಪ್ರೇರಕನು ಉದ್ದೇಶಿಸಿದ ಪರಿಣಾಮಕ್ಕಿಂತ ಭಿನ್ನವಾದ ಪರಿಣಾಮವು ದುಷ್ಪ್ರೇರಿತ ಕೃತ್ಯದಿಂದ ಉಂಟಾದರೆ. | ಮಾಡಿದ ಅಪರಾಧಕ್ಕೆ ಇರುವಂಥದ್ದು. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 54. | ಯಾವುದೇ ಅಪರಾಧದ ದುಷ್ಪ್ರೇರಣೆ, ಅಪರಾಧವು ನಡೆದಾಗ ದುಷ್ಪ್ರೇರಕನು ಉಪಸ್ಥಿತನಿದ್ದರೆ. | ಮಾಡಿದ ಅಪರಾಧಕ್ಕೆ ಇರುವಂಥದ್ದು. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 55. | ಮರಣದಂಡನೆ ಅಥವಾ ಆಜೀವ ಕಾರಾವಾಸದೊಂದಿಗೆ ದಂಡನೀಯವಾದ ಅಪರಾಧಕ್ಕೆ ದುಷ್ಪ್ರೇರಣೆ, ಆ ದುಷ್ಪ್ರೇರಣೆಯ ಪರಿಣಾಮವಾಗಿ ಅಪರಾಧವು ನಡೆಯದಿದ್ದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ಜಾಮೀನೀಯವಲ್ಲ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| | ದುಷ್ಪ್ರೇರಣೆಯ ಪರಿಣಾಮವಾಗಿ ಹಾನಿಯನ್ನುಂಟು ಮಾಡುವ ಕೃತ್ಯವು ನಡೆದಿದ್ದರೆ. | 14 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ಜಾಮೀನೀಯವಲ್ಲ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 56. | ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕೆ ದುಷ್ಪ್ರೇರಣೆ, ಆ ದುಷ್ಪ್ರೇರಣೆಯ ಪರಿಣಾಮವಾಗಿ ಅಪರಾಧವು ನಡೆಯದಿದ್ದರೆ. | ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾಲು ಭಾಗದವರೆಗಿನ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |

| | | | | | |
|---|---|---|---|---|---|
| | ದುಷ್ಪ್ರೇರಣೆ ಮಾಡಿದವನು ಅಥವಾ ದುಷ್ಪ್ರೇರಣೆಗೆ ಒಳಗಾದವನು ಅಪರಾಧವನ್ನು ಪ್ರತಿಬಂಧಿಸುವ ಕರ್ತವ್ಯವುಳ್ಳ ಲೋಕ ನೌಕರನಾಗಿದ್ದರೆ. | ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಅರ್ಧ ಭಾಗದವರೆಗಿನ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 57. | ಸಾರ್ವಜನಿಕರಿಂದ ಅಥವಾ ಹತ್ತಕ್ಕಿಂತ ಹೆಚ್ಚು ಜನರಿಂದ ಅಪರಾಧ ಮಾಡಿಸಲು ದುಷ್ಪ್ರೇರಣೆ. | 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 58(ಎ) | ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡುವ ಸಂಚನ್ನು ಮರೆಮಾಚುವುದು, ಆ ಅಪರಾಧವು ನಡೆದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ಜಾಮೀನೀಯವಲ್ಲ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 58(ಬಿ) | ಆ ಅಪರಾಧವು ನಡೆಯದಿದ್ದರೆ. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ಜಾಮೀನೀಯ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 59(ಎ) | ಅಪರಾಧವನ್ನು ಪ್ರತಿಬಂಧಿಸುವುದು ತನ್ನ ಕರ್ತವ್ಯವಾಗಿರುವ ಲೋಕ ನೌಕರನು ಆ ಅಪರಾಧದ ಸಂಚನ್ನು ಮರೆಮಾಚುವುದು, ಆ ಅಪರಾಧವು ನಡೆದರೆ. | ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಅರ್ಧ ಭಾಗದವರೆಗಿನ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 59(ಬಿ) | ಆ ಅಪರಾಧವು ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡನೀಯವಾಗಿದ್ದರೆ. | 10 ವರ್ಷಗಳ ಕಾರಾವಾಸ | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ಜಾಮೀನೀಯವಲ್ಲ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 59(ಸಿ) | ಆ ಅಪರಾಧವು ನಡೆಯದಿದ್ದರೆ | ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾಲು ಭಾಗದವರೆಗಿನ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ. | ಜಾಮೀನೀಯ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |

| | | | | | |
|---|---|---|---|---|---|
| 60(ಎ) | ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡುವ ಸಂಚನ್ನು ಮರೆಮಾಚುವುದು, ಆ ಅಪರಾಧವು ನಡೆದರೆ. | ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಕಾಲು ಭಾಗದವರೆಗಿನ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲ ವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 60(ಬಿ) | ಆ ಅಪರಾಧವು ನಡೆಯದಿದ್ದರೆ. | ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಎಂಟನೇ ಒಂದು ಭಾಗದ ಅವಧಿಯವರೆಗಿನ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ದುಷ್ಪ್ರೇರಿತ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕನುಸಾರವಾಗಿ | ಜಾಮೀನೀಯ. | ದುಷ್ಪ್ರೇರಿತ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 61(2)(ಎ) | ಮರಣದಂಡನೆಯಿಂದ, ಆಜೀವ ಕಾರಾವಾಸದಿಂದ ಅಥವಾ 2 ವರ್ಷಗಳಿಗೆ ಅಥವಾ ಅದಕ್ಕೆ ಮೇಲ್ಪಟ್ಟ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡಲು ಆಪರಾಧಿಕ ಒಳಸಂಚು. | ಒಳಸಂಚಿನ ಉದ್ದೇಶವಿರುವ ಅಪರಾಧದ ದುಷ್ಪ್ರೇರಣೆಗಾಗಿ ಇರುವಂಥದ್ದು. | ಒಳಸಂಚಿನ ಉದ್ದೇಶವಿರುವ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ಒಳಸಂಚಿನ ಉದ್ದೇಶವಿರುವ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲ ವೇ ಎಂಬುದಕ್ಕೆ ಅನುಸಾರವಾಗಿ. | ಒಳಸಂಚಿನ ಉದ್ದೇಶವಿರುವ ಅಪರಾಧದ ದುಷ್ಪ್ರೇರಣೆಯನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 61(2)(1) | ಇತರ ಯಾವುದೇ ಆಪರಾಧಿಕ ಒಳಸಂಚು. | 6 ತಿಂಗಳುಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 62. | ಆಜೀವ ಕಾರಾವಾಸದಿಂದ ಅಥವಾ ಕಾರಾವಾಸದಿಂದ ದಂಡನೀಯವಾದ ಅಪರಾಧವನ್ನು ಮಾಡಲು ಪ್ರಯತ್ನ ಮತ್ತು ಅಂಥ ಪ್ರಯತ್ನ ಮಾಡುವ ದೆಸೆಯಲ್ಲಿ ಯಾವುದೇ ಕೃತ್ಯವನ್ನು ಮಾಡುವುದು. | ಆ ಅಪರಾಧಕ್ಕಾಗಿ ಉಪಬಂಧಿತವಾದ ಬಹುದೀರ್ಘತಮ ಅವಧಿಯ ಅರ್ಧ ಭಾಗದ ಅವಧಿಯವರೆಗಿನ ಕಾರಾವಾಸ ಅಥವಾ ಆ ಅಪರಾಧಕ್ಕಾಗಿ ಉಪಬಂಧಿಸಿರುವ ಬಹುದೀರ್ಘತಮ ಅವಧಿಯ ಅರ್ಧ ಭಾಗ ಮೀರದ ಅವಧಿಯ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ದುಷ್ಪ್ರೇರಿತ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲ ವೇ ಎಂಬುದಕ್ಕೆ ಅನುಸಾರವಾಗಿ. | ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 64(1) | ಅತ್ಯಾಚಾರ | 10 ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ ಕಠಿಣ ಕಾರಾವಾಸದಿಂದ, ಆದರೆ, ಅಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ |

| | | | | | |
|---|---|---|---|---|---|
| 64(2) | ಪೊಲೀಸ್ ಅಧಿಕಾರಿಯು ಅಥವಾ ಲೋಕ ನೌಕರನು ಅಥವಾ ಸಶಸ್ತ್ರ ದಳದ ಸದಸ್ಯನು ಅಥವಾ ಆಡಳಿತ ವರ್ಗದ ವ್ಯಕ್ತಿಯು ಅಥವಾ ಜೈಲು, ರಿಮ್ಯಾಂಡ್ ಹೋಮ್ ಅಥವಾ ಇತರ ಅಭಿರಕ್ಷೆ ಸ್ಥಳದ ಸಿಬ್ಬಂದಿಯು ಅಥವಾ ಮಹಿಳೆಯರ ಅಥವಾ ಮಕ್ಕಳ ಸಂಸ್ಥೆಯ ಅಥವಾ ಆಡಳಿತ ವರ್ಗದ ವ್ಯಕ್ತಿಯು ಅಥವಾ ಆಸ್ಪತ್ರೆಯ ಸಿಬ್ಬಂದಿಯು ಎಸಗಿದ ಅತ್ಯಾಚಾರ ಮತ್ತು ನಂಬಿಕಸ್ಥ ಅಥವಾ ಅಧಿಕಾರ ಸ್ಥಾನದಲ್ಲಿರುವ ವ್ಯಕ್ತಿಯು ಅಥವಾ ಅತ್ಯಾಚಾರಕ್ಕೆ ಒಳಗಾದ ವ್ಯಕ್ತಿಯ ಹತ್ತಿರದ ಸಂಬಂಧಿಯಾಗಿರುವ ವ್ಯಕ್ತಿಯು ಎಸಗಿದ ಅತ್ಯಾಚಾರ. | 10 ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಗೆ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ |
| 65(1) | ಹದಿನಾರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯ ಮೇಲೆ ಅತ್ಯಾಚಾರದ ಅಪರಾಧ ಎಸಗುವ ವ್ಯಕ್ತಿಗಳು. | 20 ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ |
| 65(2) | ಹನ್ನೆರಡು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯ ಮೇಲೆ ಅತ್ಯಾಚಾರದ ಅಪರಾಧ ಎಸಗುವ ವ್ಯಕ್ತಿಗಳು. | 20 ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ ಅಥವಾ ಮರಣದಂಡನೆ. | ಸಂಜ್ಞೇಯ | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ |

| | | | | | |
|---|---|---|---|---|---|
| 66. | ಅತ್ಯಾಚಾರದ ಅಪರಾಧ ಎಸಗುವ ಮತ್ತು ಮರಣವನ್ನುಂಟು ಮಾಡುವಂಥ ಗಾಯವನ್ನು ಮಾಡುವ ಅಥವಾ ಸತತವಾಗಿ ನಿಶ್ಚೇಷ್ಟಿತ ಸ್ಥಿತಿಯಲ್ಲಿರುವಂತೆ ಮಾಡುವ ವ್ಯಕ್ತಿ. | 20 ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಮರಣದಂಡನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 67. | ಪ್ರತ್ಯೇಕ ವಾಸದ ಅವಧಿಯಲ್ಲಿ ಪತಿಯು ತನ್ನ ಪತ್ನಿಯೊಡನೆ ಲೈಂಗಿಕ ಸಂಭೋಗ ಮಾಡುವುದು | 2 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ (ಸಂತ್ರಸ್ತೆಯ ದೂರಿನ ನಂತರ ಮಾತ್ರವೇ) | ಜಾಮೀನೀಯ | ಸೆಷನ್ ನ್ಯಾಯಾಲಯ |
| 68. | ಅಧಿಕಾರಸ್ಥಾನ, ಇತ್ಯಾದಿಯಲ್ಲಿರುವ ವ್ಯಕ್ತಿಯಿಂದ ಲೈಂಗಿಕ ಸಂಭೋಗ. | 5 ವರ್ಷಗಳಿಗೆ ಕಡಿಮೆಯಿಲ್ಲದ, ಆದರೆ, 10 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 69. | ವಂಚನೆಯ ವಿಧಾನಗಳು, ಇತ್ಯಾದಿಗಳನ್ನು ಬಳಸಿ ಲೈಂಗಿಕ ಸಂಭೋಗ | 10 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 70(1) | ಸಾಮೂಹಿಕ ಅತ್ಯಾಚಾರ | 20 ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯ ಕಠಿಣ ಕಾರಾವಾಸ, ಆದರೆ, ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 70(2). | ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ. | ಆಜೀವ ಕಾರಾವಾಸ ಎಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ ಅಥವಾ ಮರಣದಂಡನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |

| | | | | | |
|---|---|---|---|---|---|
| 71 | ಪುನರಾವರ್ತಿತ ಅಪರಾಧಿಗಳು | ಆಜೀವ ಕಾರಾವಾಸದಿಂದ ಅಂದರೆ, ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ಕಾರಾವಾಸ ಅಥವಾ ಮರಣದಂಡನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 72(1) | ಕೆಲವು ಅಪರಾಧಗಳು, ಇತ್ಯಾದಿಗಳ ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸುವಿಕೆ | 2 ವರ್ಷಗಳವರೆಗಿನ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 73. | ಪೂರ್ವ ಅನುಮತಿಯಿಲ್ಲದೆ ನ್ಯಾಯಾಲಯದ ವ್ಯವಹರಣೆಗಳ ಮುದ್ರಣ ಅಥವಾ ಪ್ರಕಟಣೆ | 2 ವರ್ಷಗಳವರೆಗಿನ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 74 | ಮಹಿಳೆಯ ಗೌರವ-ಘನತೆಗೆ ಕುಂದುಂಟು ಮಾಡುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗ | 1 ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ, 5 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 75(2) | ಲೈಂಗಿಕ ಕಿರುಕುಳ ಮತ್ತು (1)ನೇ ಉಪಪ್ರಕರಣದ ಖಂಡ (i)ರಲ್ಲಿ ಅಥವಾ ಖಂಡ (ii)ರಲ್ಲಿ ಅಥವಾ ಖಂಡ (iii)ರಲ್ಲಿ ನಿರ್ದಿಷ್ಟಪಡಿಸಿರುವ ಲೈಂಗಿಕ ಕಿರುಕುಳಕ್ಕೆ ದಂಡನೆ. | 3 ವರ್ಷಗಳವರೆಗಿನ ಕಠಿಣ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 75(3) | ಲೈಂಗಿಕ ಕಿರುಕುಳ ಮತ್ತು (1)ನೇ ಉಪಪ್ರಕರಣದ ಖಂಡ (iv)ರಲ್ಲಿ ನಿರ್ದಿಷ್ಟಪಡಿಸಿರುವ ಲೈಂಗಿಕ ಕಿರುಕುಳಕ್ಕೆ ದಂಡನೆ. | 1 ವರ್ಷದವರೆಗಿನ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 76 | ಮಹಿಳೆಯನ್ನು ವಿವಸ್ತ್ರಗೊಳಿಸುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗಿಸುವುದು | 3 ವರ್ಷಗಳಿಗಿಂತ ಕಡಿಮೆಯಿಲ್ಲದ, 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 77 | ಅನ್ಯರ ಲೈಂಗಿಕ ಕ್ರಿಯೆಯನ್ನು ಕದ್ದು ನೋಡುವುದು | 1 ವರ್ಷಕ್ಕೆ ಕಡಿಮೆಯಿಲ್ಲದ, 3 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯ | ಸೆಷನ್ ನ್ಯಾಯಾಲಯ |
| | ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯ | 3 ವರ್ಷಗಳಿಗಿಂತ ಕಡಿಮೆಯಿಲ್ಲದ, 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 78(2) | ಗೊತ್ತಾಗದಂತೆ ಹಿಂಬಾಲಿಸುವುದು | 3 ವರ್ಷಗಳವರೆಗಿನ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| | ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯ | 5 ವರ್ಷಗಳವರೆಗಿನ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 79 | ಮಹಿಳೆಯ ಗೌರವ-ಘನತೆಗೆ ಕುಂದುಂಟು ಮಾಡುವ, ಇತ್ಯಾದಿಯ ಉದ್ದೇಶದಿಂದ ಯಾವುದೇ ಪದವನ್ನು ಉಚ್ಚರಿಸುವುದು ಅಥವಾ ಆಂಗಿಕಸನ್ನೆ ಮಾಡುವುದು. | 3 ವರ್ಷಗಳ ಸಾದಾ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 80(2) | ವಧು-ವರದಕ್ಷಿಣೆ ಮರಣ | 7 ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯ, ಆದರೆ ಆಜೀವ ಕಾರಾವಾಸದವರೆಗೆ ವಿಸ್ತರಿಸಬಹುದಾದ ಕಾರಾವಾಸ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 81 | ಒಬ್ಬ ಪುರುಷನು ವಂಚನೆಯಿಂದ ಕಾನೂನುಬದ್ಧವಾಗಿ ತನ್ನನ್ನು ಮದುವೆಯಾಗದಿರುವ ಮಹಿಳೆಯನ್ನು, ಕಾನೂನುಬದ್ಧವಾಗಿ ವಿವಾಹವಾಗಿದೆಯೆಂದು ಮೋಸದಿಂದ ನಂಬಿಸಿ ಮತ್ತು ಆ ನಂಬಿಕೆಯಂತೆ ತನ್ನೊಡನೆ ವಾಸಿಸುವಂತೆ ಮಾಡುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 82(1) | ಪತಿಯು ಅಥವಾ ಪತ್ನಿಯು ಜೀವಿಸಿರುವಾಗ ಪುನಃ ಮದುವೆಯಾಗುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 82(2) | ತರುವಾಯ ಮದುವೆಯನ್ನು ಯಾರ ಸಂಗಡ ಮಾಡಿಕೊಳ್ಳಲಾಗುತ್ತದೋ ಆತನಿಗೆ ಅಥವಾ ಆಕೆಗೆ ಮೊದಲಿನ ಮದುವೆಯ ಸಂಗತಿಯನ್ನು ಮರೆಮಾಚಿ ಅದೇ ಅಪರಾಧ ಮಾಡುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 83 | ಒಬ್ಬ ವ್ಯಕ್ತಿಯು, ತನಗೆ ಕಾನೂನುಬದ್ಧವಾಗಿ ವಿವಾಹವಾಗಿಲ್ಲ ಎಂದು ತಿಳಿದಿದ್ದೂ, ಆ ಮೂಲಕ ಮೋಸ ಮಾಡುವ ಉದ್ದೇಶದಿಂದ ವಿವಾಹ ಸಮಾರಂಭವನ್ನು ಮಾಡಿಕೊಳ್ಳುವುದು. | 7 ವರ್ಷಗಳವರೆಗಿನ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 84 | ವಿವಾಹಿತ ಮಹಿಳೆಯನ್ನು ಆಪರಾಧಿಕ ಉದ್ದೇಶದಿಂದ ಪುಸಲಾಯಿಸುವುದು ಅಥವಾ ಕರೆದುಕೊಂಡು ಹೋಗುವುದು ಅಥವಾ ತಡೆಹಿಡಿದಿಟ್ಟುಕೊಳ್ಳುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 85 | ವಿವಾಹಿತ ಮಹಿಳೆಯನ್ನು ಕ್ರೌರ್ಯಕ್ಕೆ ಒಳಪಡಿಸಿದ್ದಕ್ಕಾಗಿ ದಂಡನೆ. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ ಅಪರಾಧದಿಂದ ಬಾಧಿತನಾದ ವ್ಯಕ್ತಿ ಅಥವಾ ರಕ್ತಸಂಬಂಧ ಮೂಲಕ ವಿವಾಹ ಅಥವಾ ದತ್ತಕದಿಂದಾಗಿ ಅವಳಿಗೆ ಸಂಬಂಧವಿರುವ ಯಾರೇ ವ್ಯಕ್ತಿ ಅಥವಾ ಅಂಥ ಯಾರೇ ಸಂಬಂಧಿಕನು ಇಲ್ಲದಿದ್ದಲ್ಲಿ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಸೂಚಿಸಿರಬಹುದಾದಂಥ ವರ್ಗ ಅಥವಾ ದರ್ಜೆಗೆ ಸೇರಿದ ಯಾರೇ ಲೋಕ ನೌಕರನು ಅಪರಾಧ ನಡೆಯುವುದರ ಸಂಬಂಧದಲ್ಲಿ ಮಾಹಿತಿಯನ್ನು ನೀಡಿದರೆ ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 87 | ಮದುವೆ, ಇತ್ಯಾದಿಗೆ ಮಹಿಳೆಗೆ ಒತ್ತಾಯ ಮಾಡಲು ಅಪಹರಣ ಮಾಡುವುದು, ಬಲಾತ್ ಅಪಹರಣ ಮಾಡುವುದು ಅಥವಾ ಪ್ರೇರೇಪಣೆ ಮಾಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 88 | ಗರ್ಭಪಾತವುಂಟು ಮಾಡುವುದು | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| | ಮಹಿಳೆಯು ತುಂಬು ಗರ್ಭಿಣಿಯಾಗಿದ್ದರೆ | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 89 | ಮಹಿಳೆಯ ಸಮ್ಮತಿಯಿಲ್ಲದೆ ಗರ್ಭಪಾತವನ್ನುಂಟು ಮಾಡುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 90(1) | ಗರ್ಭಪಾತವಾಗಿಸುವ ಉದ್ದೇಶದಿಂದ ಮಾಡಲಾದ ಕೃತ್ಯದಿಂದ ಉಂಟಾದ ಮರಣ | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 90(2) | ಕೃತ್ಯವನ್ನು ಮಹಿಳೆಯ ಸಮ್ಮತಿಯಿಲ್ಲದೆ ಮಾಡಿದರೆ | ಆಜೀವ ಕಾರಾವಾಸ ಅಥವಾ ಮೇಲಿನಂತೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 91 | ಮಗುವು ಜೀವಂತವಾಗಿ ಹುಟ್ಟದಂತೆ ಅಥವಾ ಅದು ಹುಟ್ಟಿದ ಅನಂತರ ಸಾಯುವಂತೆ ಮಾಡುವ ಉದ್ದೇಶದಿಂದ ಮಾಡಿದ ಕೃತ್ಯ | 10 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 92 | ಆಪರಾಧಿಕ ಮಾನವ ಹತ್ಯೆಯೆಂದು ಪರಿಗಣಿತವಾಗುವ ಕೃತ್ಯದಿಂದ ಗರ್ಭಸ್ಥ ಮಗುವಿಗೆ ಮರಣವನ್ನುಂಟು ಮಾಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |

| | | | | | |
|---|---|---|---|---|---|
| 93 | ತಂದೆ ತಾಯಿಯ ಅಥವಾ ಮಗುವಿನ ರಕ್ಷಣೆಯ ಹೊಣೆಯನ್ನು ಹೊತ್ತಿರುವ ವ್ಯಕ್ತಿಯು 12 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಗುವನ್ನು ಪೂರ್ತಿಯಾಗಿ ತೊರೆದು ಬಿಡುವ ಉದ್ದೇಶದಿಂದ ಅಪಾಯಕ್ಕೆ ಒಡ್ಡುವುದು | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 94 | ಮೃತದೇಹವನ್ನು ರಹಸ್ಯವಾಗಿ ವಿಲೆ ಮಾಡಿ ಜನನವನ್ನು ಮರೆಮಾಚುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 95 | ಅಪರಾಧವನ್ನು ಮಾಡಲು ಮಗುವನ್ನು ಬಾಡಿಗೆಗೆ ತೆಗೆದುಕೊಳ್ಳುವುದು, ನಿಯೋಜಿಸಿಕೊಳ್ಳುವುದು ಅಥವಾ ತೊಡಗಿಸಿಕೊಳ್ಳುವುದು | 3 ವರ್ಷಗಳಿಗಿಂತ ಕಡಿಮೆ ಇಲ್ಲದ, ಆದರೆ 10 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| | ಅಪರಾಧ ನಡೆದಿದ್ದರೆ. | ಮೇಲಿನ ಅದೇ ಅಪರಾಧದಂತೆ | ಸಂಜ್ಞೇಯ. | ಜಾಮೀನೀಯವಲ್ಲ | ಅಪರಾಧ ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ |
| 96 | ಮಗುವನ್ನು ಒದಗಿಸುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 97 | ಹತ್ತು ವರ್ಷದೊಳಗಿನ ಮಗುವನ್ನು ಅದರ ಮೈಮೇಲಿರುವ ವಸ್ತುವನ್ನು ಕಳವು ಮಾಡುವ ಉದ್ದೇಶದಿಂದ ಅಪಹರಣ ಮಾಡುವುದು ಅಥವಾ ಬಲಾತ್ ಅಪಹರಣ ಮಾಡುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 98 | ವೇಶ್ಯಾವೃತ್ತಿ, ಇತ್ಯಾದಿ ಉದ್ದೇಶಗಳಿಗಾಗಿ ಮಗುವನ್ನು ಮಾರಾಟ ಮಾಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 99 | ವೇಶ್ಯಾವೃತ್ತಿ, ಇತ್ಯಾದಿ ಉದ್ದೇಶಗಳಿಗಾಗಿ ಮಗುವನ್ನು ಕೊಂಡುಕೊಳ್ಳುವುದು | 7 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ 14 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 103(1) | ಕೊಲೆ. | ಮರಣದಂಡನೆ ಅಥವಾ ಆಜೀವ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 103(2) | ಐದು ಅಥವಾ ಅದಕ್ಕಿಂತ ಹೆಚ್ಚು ಜನರ ಗುಂಪಿನಿಂದ ಕೊಲೆ. | ಮರಣದಂಡನೆ ಅಥವಾ ಆಜೀವ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 104 | ಆಜೀವ ಕಾರಾವಾಸಕ್ಕೆ ಗುರಿಯಾದವನು ಮಾಡಿದ ಕೊಲೆ | ಮರಣದಂಡನೆ ಅಥವಾ ಆಜೀವ ಕಾರಾವಾಸದಿಂದ ಎಂದರೆ, ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ಕಾರಾವಾಸ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |

| | | | | | |
|---|---|---|---|---|---|
| 105. | ಕೊಲೆಯೆಂದು ಪರಿಗಣಿಸಲಾಗದ ಆಪರಾಧಿಕ ಮಾನವ ಹತ್ಯೆ, ಮರಣಕ್ಕೆ ಕಾರಣವಾದ ಕೃತ್ಯವನ್ನು ಮರಣ, ಇತ್ಯಾದಿಯನ್ನು ಉಂಟು ಮಾಡುವ ಉದ್ದೇಶದಿಂದ ಮಾಡಲಾಗಿದ್ದರೆ. | ಆಜೀವ ಕಾರಾವಾಸ ಅಥವಾ 5 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ 10 ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| | ಮರಣವುಂಟಾಗುವ ಸಂಭವವಿದೆಯೆಂಬುದು ತಿಳಿದಿದ್ದೂ ಆದರೆ, ಮರಣ ಇತ್ಯಾದಿಯನ್ನು ಉಂಟುಮಾಡುವ ಉದ್ದೇಶವಿಲ್ಲದೆ ಕೃತ್ಯವನ್ನು ಮಾಡಿದ್ದರೆ. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 106(1) | ನಿರ್ಲಕ್ಷ್ಯದಿಂದ ಮರಣವನ್ನುಂಟು ಮಾಡುವುದು | 5 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| | ನೋಂದಾಯಿತ ವೈದ್ಯಕೀಯ ವೃತ್ತಿಗನು ನಿರ್ಲಕ್ಷ್ಯದಿಂದ ಮರಣವನ್ನುಂಟು ಮಾಡುವುದು | 2 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 106(2) | ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡುವ ಮೂಲಕ ಮರಣವನ್ನು ಉಂಟುಮಾಡುವುದು ಮತ್ತು ತಪ್ಪಿಸಿಕೊಳ್ಳುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 107. | ಮಗುವಿನ ಅಥವಾ ಅಸ್ವಸ್ಥಚಿತ್ತದ ವ್ಯಕ್ತಿಯ, ಮುಂತಾದವರ ಆತ್ಮಹತ್ಯೆಗೆ ದುಷ್ಪ್ರೇರಣೆ | ಮರಣದಂಡನೆ ಅಥವಾ ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 108. | ಆತ್ಮಹತ್ಯೆಗೆ ದುಷ್ಪ್ರೇರಣೆ. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 109(1). | ಕೊಲೆ ಮಾಡಲು ಪ್ರಯತ್ನ. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| | ಆ ಕೃತ್ಯವು ಯಾರೇ ವ್ಯಕ್ತಿಗೆ ಗಾಯವುಂಟು ಮಾಡಿದರೆ. | ಆಜೀವ ಕಾರಾವಾಸ ಅಥವಾ ಮೇಲಿನಂತೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 109(2) | ಆಜೀವ ಕಾರಾವಾಸ ಶಿಕ್ಷೆಗೆ ಗುರಿಯಾದವನಿಂದ ಕೊಲೆಯ ಪ್ರಯತ್ನ, ಗಾಯ ಉಂಟಾದರೆ. | ಮರಣದಂಡನೆ ಅಥವಾ ಆಜೀವ ಕಾರಾವಾಸದಿಂದ ಎಂದರೆ, ವ್ಯಕ್ತಿಯ ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ಕಾರಾವಾಸ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 110 | ಆಪರಾಧಿಕ ಮಾನವ ಹತ್ಯೆಯನ್ನು ಮಾಡಲು ಪ್ರಯತ್ನ | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| | ಅಂಥ ಕೃತ್ಯವು ಯಾರೇ ವ್ಯಕ್ತಿಗೆ ಗಾಯವುಂಟು ಮಾಡಿದರೆ. | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |

| | | | | | |
|---|---|---|---|---|---|
| 111(2)(ಎ) | ಯಾರೇ ವ್ಯಕ್ತಿಯ ಮರಣವು ಸಂಘಟಿತ ಅಪರಾಧದಿಂದ ಉಂಟಾದರೆ. | ಮರಣದಂಡನೆ ಅಥವಾ ಆಜೀವ ಕಾರಾವಾಸ ಮತ್ತು 10 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 111(2)(ಬಿ) | ಇತರ ಯಾವುದೇ ಸಂದರ್ಭದಲ್ಲಿ. | 5 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಮತ್ತು 5 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 111(3) | ಸಂಘಟಿತ ಅಪರಾಧ ಮಾಡುವುದನ್ನು ದುಷ್ಪ್ರೇರಿಸುವುದು, ಪ್ರಯತ್ನಿಸುವುದು, ಒಳಸಂಚು ನಡೆಸುವುದು ಅಥವಾ ಗೊತ್ತಿದ್ದೂ ಅನುಕೂಲ ಕಲ್ಪಿಸುವುದು. | 5 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಮತ್ತು 5 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 111(4) | ಸಂಘಟಿತ ಅಪರಾಧದ ಸಿಂಡಿಕೇಟಿನ ಸದಸ್ಯನಾಗಿರುವುದು | 5 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಮತ್ತು 5 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 111(5) | ಸಂಘಟಿತ ಅಪರಾಧವನ್ನು ಮಾಡಿರುವ ಯಾರೇ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ಆಶ್ರಯ ನೀಡುವುದು ಅಥವಾ ಬಚ್ಚಿಡುವುದು. | 3 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಮತ್ತು 5 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 111(6) | ಸಂಘಟಿತ ಅಪರಾಧದ ಉತ್ಪತ್ತಿಗಳಿಂದ ಪಡೆದ ಅಥವಾ ಬಂದ ಅಥವಾ ಆರ್ಜಿಸಿರುವ ಸ್ವತ್ತಿನ ಸ್ವಾಧೀನತೆ. | 3 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಮತ್ತು 2 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |

| | | | | | |
|---|---|---|---|---|---|
| 111(7) | ಸಂಘಟಿತ ಅಪರಾಧದ ಸಿಂಡಿಕೇಟಿನ ಸದಸ್ಯರ ಪರವಾಗಿ ಸ್ವತ್ತಿನ ಸ್ವಾಧೀನತೆ. | 3 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ 10 ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು 1 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 112. | ಸಣ್ಣಪುಟ್ಟ ಸಂಘಟಿತ ಅಪರಾಧ | 1 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ 7 ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 113(2)(ಎ) | ಯಾರೇ ವ್ಯಕ್ತಿಯ ಮರಣಕ್ಕೆ ಕಾರಣವಾಗುವ ಭಯೋತ್ಪಾದಕ ಕೃತ್ಯ | ಮರಣದಂಡನೆ ಅಥವಾ ಆಜೀವ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 113(2)(ಬಿ) | ಇತರ ಯಾವುದೇ ಸಂದರ್ಭದಲ್ಲಿ | 5 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 113(3) | ಭಯೋತ್ಪಾದಕ ಕೃತ್ಯ ಎಸಗಲು ಸಂಚು ರೂಪಿಸುವುದು, ಪ್ರಯತ್ನಿಸುವುದು, ದುಷ್ಪ್ರೇರಿಸುವುದು, ಮುಂತಾದವುಗಳು ಅಥವಾ ಗೊತ್ತಿದ್ದೂ ಅನುಕೂಲ ಕಲ್ಪಿಸುವುದು. | 5 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 113(4) | ಭಯೋತ್ಪಾದಕ ಕೃತ್ಯ ನಡೆಯಲು ಶಿಬಿರಗಳು, ತರಬೇತಿ, ಇತ್ಯಾದಿಗಳನ್ನು ನಡೆಸುವುದು. | 5 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 113(5) | ಭಯೋತ್ಪಾದಕ ಕೃತ್ಯದಲ್ಲಿ ತೊಡಗಿರುವ ಸಂಸ್ಥೆಯೊಂದರ ಸದಸ್ಯನಾಗಿರುವುದು | ಆಜೀವ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 113(6) | ಭಯೋತ್ಪಾದಕ ಕೃತ್ಯವನ್ನು ಎಸಗಿರುವ ಯಾರೇ ವ್ಯಕ್ತಿಗೆ ಆಶ್ರಯ ನೀಡುವುದು, ಬಚ್ಚಿಡುವುದು, ಮುಂತಾದವು. | 3 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 113(7) | ಭಯೋತ್ಪಾದಕ ಕೃತ್ಯ ಮಾಡುವುದರಿಂದ ಪಡೆದ ಅಥವಾ ಬಂದ ಸ್ವತ್ತಿನ ಸ್ವಾಧೀನತೆ. | ಆಜೀವ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 115(2) | ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು | 1 ವರ್ಷದ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 117(2) | ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 117(3) | ಶಾಶ್ವತ ಅಂಗವೈಕಲ್ಯ ಅಥವಾ ಸತತ ನಿಶ್ಚೇಷ್ಟಿತ ಸ್ಥಿತಿಗೆ ದೂಡಲು ಕಾರಣವಾಗುವ ಯಾವುದೇ ಗಾಯವನ್ನುಂಟು ಮಾಡಿದರೆ | 10 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಅಂದರೆ, ಆ ವ್ಯಕ್ತಿಯು ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ಕಾರಾವಾಸ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 117(4) | 5 ಅಥವಾ ಹೆಚ್ಚು ವ್ಯಕ್ತಿಗಳ ಗುಂಪು ಒಟ್ಟಿಗೆ ಸೇರಿ ತೀವ್ರ ಗಾಯವುಂಟು ಮಾಡುವುದು. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 118(1) | ಅಪಾಯಕಾರಿ ಆಯುಧಗಳಿಂದ ಅಥವಾ ಸಾಧನಗಳಿಂದ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು | 3 ವರ್ಷಗಳ ಕಾರಾವಾಸ ಅಥವಾ ರೂ.20,000 ಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 118(2) | ಅಪಾಯಕಾರಿ ಆಯುಧಗಳಿಂದ ಅಥವಾ ಸಾಧನಗಳಿಂದ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು (122(2)ನೇ ಪ್ರಕರಣದಲ್ಲಿ ಉಪಬಂಧಿಸಿರುವುದನ್ನು ಹೊರತುಪಡಿಸಿ) | ಆಜೀವ ಕಾರಾವಾಸ ಅಥವಾ 1 ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ 10 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 119(1) | ಸ್ವತ್ತನ್ನು ಬಲಾದ್ಗ್ರಹಣ ಮಾಡಲು ಅಥವಾ ಕಾನೂನುಬಾಹಿರವಾದ ಕೃತ್ಯವನ್ನು ಮಾಡುವಂತೆ ಒತ್ತಾಯಿಸಲು ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 119(2) | (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಉದ್ದೇಶಕ್ಕಾಗಿ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 120(1) | ಬಲವಂತ ಮಾಡಿ ತಪ್ಪೊಪ್ಪಿಗೆಯನ್ನು ಅಥವಾ ಮಾಹಿತಿಯನ್ನು ಪಡೆಯಲು ಅಥವಾ ಸ್ವತ್ತನ್ನು ವಾಪಸ್ಸು ಕೊಡುವಂತೆ ಒತ್ತಾಯಿಸಲು, ಇತ್ಯಾದಿಗಳಿಗಾಗಿ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 120(2) | ಬಲವಂತ ಮಾಡಿ ತಪ್ಪೊಪ್ಪಿಗೆಯನ್ನು ಅಥವಾ ಮಾಹಿತಿಯನ್ನು ಪಡೆಯಲು ಅಥವಾ ಸ್ವತ್ತನ್ನು ವಾಪಸ್ಸು ಕೊಡುವಂತೆ ಒತ್ತಾಯಿಸಲು, ಇತ್ಯಾದಿಗಳಿಗಾಗಿ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 121(1) | ಲೋಕ ನೌಕರನು ತನ್ನ ಕರ್ತವ್ಯಗಳನ್ನು ನಿರ್ವಹಿಸದಂತೆ ಅವನನ್ನು ನಿರ್ಬಂಧಿಸಲು ಅವನಿಗೆ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 121(2) | ಲೋಕ ನೌಕರನು ತನ್ನ ಕರ್ತವ್ಯಗಳನ್ನು ನಿರ್ವಹಿಸದಂತೆ ಅವನನ್ನು ನಿರ್ಬಂಧಿಸಲು ಅವನಿಗೆ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು | 1 ವರ್ಷಕ್ಕಿಂತ ಕಡಿಮೆಯಿಲ್ಲದ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 122(1) | ಪ್ರಚೋದನೆ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಯನ್ನು ಗಾಯಗೊಳಿಸುವ ಉದ್ದೇಶವಿಲ್ಲದೇ ಗಂಭೀರ ಮತ್ತು ಹಠಾತ್ ಪ್ರಚೋದನೆಯಿಂದ ಗಾಯವನ್ನುಂಟು ಮಾಡುವುದು | 1 ತಿಂಗಳ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 122(2) | ಪ್ರಚೋದನೆ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಯನ್ನು ಗಾಯಗೊಳಿಸುವ ಉದ್ದೇಶವಿಲ್ಲದೇ ಗಂಭೀರ ಮತ್ತು ಹಠಾತ್ ಪ್ರಚೋದನೆಯಿಂದ ತೀವ್ರವಾಗಿ ಗಾಯವನ್ನುಂಟು ಮಾಡುವುದು. | 5 ವರ್ಷಗಳ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 123. | ಅಪರಾಧವನ್ನು ಮಾಡುವ ಉದ್ದೇಶದಿಂದ ವಿಷ, ಮುಂತಾದವುಗಳ ಮೂಲಕ ಗಾಯವನ್ನುಂಟು ಮಾಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 124(1) | ಆ್ಯಸಿಡ್, ಇತ್ಯಾದಿಗಳನ್ನು ಬಳಸಿ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡುವುದು | 10 ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 124(2) | ಸ್ವಯಿಚ್ಛೆಯಿಂದ ಆ್ಯಸಿಡ್‌ನ್ನು ಎರಚುವುದು ಅಥವಾ ಎರಚಲು ಪ್ರಯತ್ನಿಸುವುದು. | 5 ವರ್ಷಗಳು, ಆದರೆ 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 125. | ಮಾನವರ ಪ್ರಾಣಕ್ಕೆ ಅಥವಾ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವ ಯಾವುದೇ ಕೃತ್ಯವನ್ನು ಮಾಡುವುದು | 3 ತಿಂಗಳುಗಳ ಕಾರಾವಾಸ ಅಥವಾ 2,500 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 125(ಎ) | ಗಾಯವನ್ನುಂಟು ಮಾಡಿದ್ದಲ್ಲಿ. | 6 ತಿಂಗಳುಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 125(ಬಿ) | ತೀವ್ರ ಗಾಯವನ್ನುಂಟು ಮಾಡಿದ್ದಲ್ಲಿ | 3 ವರ್ಷಗಳ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 126(2) | ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ನಿರ್ಬಂಧಿಸುವುದು | 1 ತಿಂಗಳ ಸಾದಾ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 127(2) | ಯಾರೇ ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸುವುದು | 1 ವರ್ಷದ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 127(3) | ಮೂರು ಅಥವಾ ಹೆಚ್ಚು ದಿನಗಳವರೆಗೆ ಅಕ್ರಮವಾಗಿ ಬಂಧಿಸುವುದು | 3 ವರ್ಷಗಳ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 127(4) | 10 ಅಥವಾ ಹೆಚ್ಚು ದಿನಗಳವರೆಗೆ ಅಕ್ರಮವಾಗಿ ಬಂಧಿಸುವುದು | 5 ವರ್ಷಗಳ ಕಾರಾವಾಸ ಮತ್ತು 10,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 127(5) | ವ್ಯಕ್ತಿಯ ಬಿಡುಗಡೆಗಾಗಿ ಕ್ರಮಬದ್ಧವಾಗಿ ರಿಟ್ ಆಜ್ಞೆ ಮಾಡಲಾಗಿದೆಯೆಂಬುದು ಗೊತ್ತಿದ್ದರೂ, ಆ ಯಾರೇ ವ್ಯಕ್ತಿಯನ್ನು ಯಾರೇ ವ್ಯಕ್ತಿಯು ಅಕ್ರಮವಾಗಿ ಬಂಧಿಸುವುದು | ಯಾವುದೇ ಇತರ ಪ್ರಕರಣದ ಮೇರೆಗಿನ ಕಾರಾವಾಸಕ್ಕೆ ಹೆಚ್ಚುವರಿಯಾಗಿ 2 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 127(6) | ಗುಪ್ತವಾಗಿ ಅಕ್ರಮ ಬಂಧಿಸುವುದು. | ಇತರ ದಂಡನೆಗೆ ಗುರಿಯಾಗಿರುವುದಕ್ಕೆ ಹೆಚ್ಚುವರಿಯಾಗಿ 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 127(7) | ಸ್ವತ್ತಿನ ಬಲಾದ್ಗ್ರಹಣಕ್ಕಾಗಿ ಅಥವಾ ಕಾನೂನುಬಾಹಿರ ಕೃತ್ಯ, ಇತ್ಯಾದಿಗಳಿಗೆ ಬಲವಂತ ಮಾಡುವ ಉದ್ದೇಶದಿಂದ ಅಕ್ರಮವಾಗಿ ಬಂಧನದಲ್ಲಿಟ್ಟಿರುವುದು. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 127(8) | ತಪ್ಪೊಪ್ಪಿಗೆ ಅಥವಾ ಮಾಹಿತಿಯ ಬಲಾದ್ಗ್ರಹಣ ಅಥವಾ ಸ್ವತ್ತು ಇತ್ಯಾದಿಗಳನ್ನು ಹಿಂದಕ್ಕೆ ಕೊಡುವಂತೆ ಒತ್ತಾಯ ಮಾಡುವ ಉದ್ದೇಶದಿಂದ ಅಕ್ರಮವಾಗಿ ಬಂಧನದಲ್ಲಿಟ್ಟುಕೊಂಡಿರುವುದು | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 131. | ತೀವ್ರ ಉದ್ರೇಕದಿಂದಲ್ಲದೆ ಮಾಡಿದ ಹಲ್ಲೆಗಾಗಿ ಅಥವಾ ಆಪರಾಧಿಕ ಬಲಪ್ರಯೋಗ | 3 ತಿಂಗಳ ಕಾರಾವಾಸ ಅಥವಾ 1,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 132. | ಲೋಕ ನೌಕರನು ತನ್ನ ಕರ್ತವ್ಯವನ್ನು ನಿರ್ವಹಿಸದಂತೆ ಅವನನ್ನು ನಿರ್ಬಂಧಿಸುವ ಸಲುವಾಗಿ ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್. |
| 133. | ತೀವ್ರ ಅಥವಾ ಹಠಾತ್ ಉದ್ರೇಕದಿಂದಲ್ಲದೆ ವ್ಯಕ್ತಿಗೆ ಅವಮಾನ ಮಾಡುವ ಸಲುವಾಗಿ ಅವನ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 134. | ವ್ಯಕ್ತಿಯು ಧರಿಸಿರುವ ಅಥವಾ ಒಯ್ಯುತ್ತಿರುವ ಸ್ವತ್ತನ್ನು ಕಳವು ಮಾಡಲು ಪ್ರಯತ್ನ ಮಾಡುವಾಗ ಅವನ ಮೇಲೆ ಹಲ್ಲೆ ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 135. | ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಿಟ್ಟುಕೊಳ್ಳಲು ಪ್ರಯತ್ನ ಮಾಡುವಾಗ ಅವನ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು | 1 ವರ್ಷದ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 136. | ತೀವ್ರ ಉದ್ರೇಕದಿಂದ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು | ಒಂದು ತಿಂಗಳ ಸಾದಾ ಕಾರಾವಾಸ ಅಥವಾ 1000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 137(2) | ಅಪಹರಣ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 139(1) | ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ ಮಗುವನ್ನು ಅಪಹರಣ ಮಾಡುವುದು | 10 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 139(2) | ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ ಮಗುವನ್ನು ಅಂಗ ಊನ ಮಾಡುವುದು | 20 ವರ್ಷಗಳಿಗೆ ಕಡಿಮೆಯಿಲ್ಲದ ಕಾರಾವಾಸ, ಆ ವ್ಯಕ್ತಿಯ ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತಾವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 140(1) | ಕೊಲೆ ಮಾಡುವ ಉದ್ದೇಶದಿಂದ ಅಪಹರಣ ಮಾಡುವುದು ಅಥವಾ ಬಲಾತ್ ಅಪಹರಣ ಮಾಡುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 140(2) | ಒತ್ತೆ ಹಣ, ಇತ್ಯಾದಿಗಾಗಿ ಅಪಹರಣ ಮಾಡುವುದು | ಮರಣದಂಡನೆ ಅಥವಾ ಆಜೀವ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 140(3) | ಗೋಪ್ಯವಾಗಿ ಮತ್ತು ಅಕ್ರಮವಾಗಿ ಬಂಧಿಸಿಟ್ಟುಕೊಳ್ಳುವ ಉದ್ದೇಶದಿಂದ ವ್ಯಕ್ತಿಯ ಅಪಹರಣ ಅಥವಾ ಬಲಾತ್ ಅಪಹರಣ ಮಾಡುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 140(4) | ವ್ಯಕ್ತಿಗೆ ತೀವ್ರ ಗಾಯ ಅಥವಾ ಗುಲಾಮಗಿರಿ, ಇತ್ಯಾದಿಗಳಿಗೆ ಒಳಪಡಿಸಲು ಅಪಹರಣ ಮಾಡುವುದು ಅಥವಾ ಬಲಾತ್ ಅಪಹರಣ ಮಾಡುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 141. | ವಿದೇಶದಿಂದ ಹುಡುಗಿ ಅಥವಾ ಹುಡುಗನನ್ನು ತರುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 142. | ಅಪಹರಣಕ್ಕೀಡಾದ ಅಥವಾ ಬಲಾತ್ ಅಪಹರಣಕ್ಕೀಡಾದ ವ್ಯಕ್ತಿಯನ್ನು ಅಕ್ರಮವಾಗಿ ಬಚ್ಚಿಡುವುದು ಅಥವಾ ಬಂಧನದಲ್ಲಿಟ್ಟುಕೊಳ್ಳುವುದು | ಅಪಹರಣ ಅಥವಾ ಬಲಾತ್ ಅಪಹರಣಕ್ಕೆ ವಿಧಿಸುವ ದಂಡನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಅಪಹರಣ ಅಥವಾ ಬಲಾತ್ ಅಪಹರಣವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |

| | | | | | |
|---|---|---|---|---|---|
| 143(2) | ವ್ಯಕ್ತಿಗಳನ್ನು ದುರ್ವ್ಯಾಪಾರ ಮಾಡುವುದು | 7 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, 10 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 143(3) | ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳನ್ನು ದುರ್ವ್ಯಾಪಾರ ಮಾಡುವುದು. | 10 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, ಅಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 143(4) | ಮಗುವಿನ ದುರ್ವ್ಯಾಪಾರ ಮಾಡುವುದು. | 10 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 143(5) | ಒಂದಕ್ಕಿಂತ ಹೆಚ್ಚು ಮಗುವನ್ನು ದುರ್ವ್ಯಾಪಾರ ಮಾಡುವುದು. | 14 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 143(6) | ಮಕ್ಕಳನ್ನು ದುರ್ವ್ಯಾಪಾರ ಮಾಡಿದ ಅಪರಾಧಕ್ಕಾಗಿ ಒಂದಕ್ಕಿಂತ ಹೆಚ್ಚಿನ ಸಲ ಅಪರಾಧಿಯೆಂದು ನಿರ್ಣೀತನಾಗುವುದು. | ಆಜೀವ ಕಾರಾವಾಸ, ಎಂದರೆ, ಆ ವ್ಯಕ್ತಿಯ ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 143(7) | ಮಗುವನ್ನು ದುರ್ವ್ಯಾಪಾರ ಮಾಡುವ ಕೃತ್ಯದಲ್ಲಿ ಲೋಕ ನೌಕರನು ಅಥವಾ ಪೊಲೀಸ್ ಅಧಿಕಾರಿಯು ತೊಡಗಿಕೊಂಡಿರುವುದು. | ಆಜೀವ ಕಾರಾವಾಸ, ಎಂದರೆ, ಆ ವ್ಯಕ್ತಿಯ ಸ್ವಾಭಾವಿಕವಾಗಿ ಜೀವಿಸುವ ಉಳಿದ ಜೀವಿತ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 144(1) | ದುರ್ವ್ಯಾಪಾರಕ್ಕೊಳಗಾದ ಮಗುವಿನ ಶೋಷಣೆ. | 5 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, 10 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 144(2) | ದುರ್ವ್ಯಾಪಾರಕ್ಕೊಳಗಾದ ವ್ಯಕ್ತಿಯ ಶೋಷಣೆ. | 3 ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 145. | ಗುಲಾಮರ ಬಗ್ಗೆ ರೂಢಿಗತ ವ್ಯವಹಾರ | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 146. | ಕಾನೂನುಬಾಹಿರ ಕಡ್ಡಾಯ ದುಡಿಮೆ | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 147. | ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡುವುದು ಅಥವಾ ಯುದ್ಧ ಹೂಡುವುದಕ್ಕೆ ಪ್ರಯತ್ನ ಮಾಡುವುದು ಅಥವಾ ಅದಕ್ಕೆ ದುಷ್ಪ್ರೇರಣೆ ಮಾಡುವುದು | ಮರಣದಂಡನೆ ಅಥವಾ ಆಜೀವ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 148. | ರಾಷ್ಟ್ರದ ವಿರುದ್ಧ ಕೆಲವು ಅಪರಾಧಗಳನ್ನು ಮಾಡಲು ಒಳಸಂಚು ಹೂಡುವುದು. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 149. | ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡುವ ಉದ್ದೇಶದಿಂದ ಶಸ್ತ್ರ, ಮುಂತಾದವುಗಳನ್ನು ಸಂಗ್ರಹಿಸುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 150. | ಯುದ್ಧ ಹೂಡುವ ಸಂಚಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮರೆಮಾಚುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 151. | ಯಾವುದೇ ಕಾನೂನುಬದ್ಧ ಅಧಿಕಾರ ಚಲಾಯಿಸಲು ಅಥವಾ ಯಾವುದೇ ಕಾನೂನುಬದ್ಧ ಅಧಿಕಾರವನ್ನು ಚಲಾಯಿಸದಂತೆ ಪ್ರತಿಬಂಧಿಸಲು ಬಲವಂತ ಮಾಡುವ ಉದ್ದೇಶದಿಂದ ರಾಷ್ಟ್ರಪತಿ, ರಾಜ್ಯಪಾಲ, ಮುಂತಾದವರ ಮೇಲೆ ಹಲ್ಲೆ ಮಾಡುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 152. | ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಗೆ ಅಪಾಯವನ್ನುಂಟುಮಾಡುವ ಕೃತ್ಯ | ಆಜೀವ ಕಾರಾವಾಸ ಅಥವಾ 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 153. | ಭಾರತ ಸರ್ಕಾರದೊಂದಿಗೆ ಶಾಂತಿಯುತವಾದ ಸಂಬಂಧ ಇಟ್ಟುಕೊಂಡಿರುವ ಯಾವುದೇ ವಿದೇಶಿ ರಾಷ್ಟ್ರದ ಸರ್ಕಾರದ ವಿರುದ್ಧ ಯುದ್ಧ ಹೂಡುವುದು | ಆಜೀವ ಕಾರಾವಾಸ ಮತ್ತು ಜುಲ್ಮಾನೆ, ಅಥವಾ 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ, ಅಥವಾ ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 154. | ಭಾರತ ಸರ್ಕಾರದೊಂದಿಗೆ ಶಾಂತಿಯುತವಾದ ಸಂಬಂಧವನ್ನು ಇಟ್ಟುಕೊಂಡಿರುವ ಯಾವುದೇ ವಿದೇಶಿ ರಾಷ್ಟ್ರದ ರಾಜ್ಯಕ್ಷೇತ್ರಗಳಲ್ಲಿ ಲೂಟಿ ಮಾಡುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ ಮತ್ತು ನಿರ್ದಿಷ್ಟ ಸ್ವತ್ತಿನ ಮುಟ್ಟುಗೋಲು. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 155. | 153ನೇ ಪ್ರಕರಣ ಮತ್ತು 154ನೇ ಪ್ರಕರಣದಲ್ಲಿ ನಮೂದಿಸಿದಂತೆ ಯುದ್ಧ ಮಾಡಿ ಅಥವಾ ಲೂಟಿ ಮಾಡುವ ಮೂಲಕ ತೆಗೆದುಕೊಂಡ ಸ್ವತ್ತನ್ನು ಸ್ವೀಕರಿಸುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ ಮತ್ತು ನಿರ್ದಿಷ್ಟ ಸ್ವತ್ತಿನ ಮುಟ್ಟುಗೋಲು. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 156. | ಲೋಕ ನೌಕರನು ತನ್ನ ಅಭಿರಕ್ಷೆಯಲ್ಲಿರುವ ರಾಷ್ಟ್ರ ಕೈದಿ ಅಥವಾ ಯುದ್ಧ ಕೈದಿಗೆ ತಪ್ಪಿಸಿಕೊಂಡು ಹೋಗಲು ಸ್ವಯಿಚ್ಛೆಯಿಂದ ಅವಕಾಶ ಮಾಡಿಕೊಡುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 157. | ಲೋಕ ನೌಕರನು ತನ್ನ ನಿರ್ಲಕ್ಷ್ಯದಿಂದ ತನ್ನ ಅಭಿರಕ್ಷೆಯಲ್ಲಿರುವ ರಾಷ್ಟ್ರ ಕೈದಿ ಅಥವಾ ಯುದ್ಧ ಕೈದಿಯು ತಪ್ಪಿಸಿಕೊಂಡು ಹೋಗುವುದಕ್ಕೆ ಆಸ್ಪದ ಮಾಡಿಕೊಡುವುದು | 3 ವರ್ಷಗಳ ಸಾದಾ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 158. | ಅಂಥ ಕೈದಿಯು ತಪ್ಪಿಸಿಕೊಳ್ಳಲು ಅಥವಾ ಅವನನ್ನು ಬಿಡಿಸಿಕೊಳ್ಳಲು ಸಹಾಯ ಮಾಡುವುದು ಅಥವಾ ಅವನಿಗೆ ಆಶ್ರಯ ನೀಡುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 159. | ದಂಗೆಗೆ ದುಷ್ಪ್ರೇರಣೆ ಅಥವಾ ಒಬ್ಬ ಅಧಿಕಾರಿಯನ್ನು, ಭೂ ಸೈನಿಕನನ್ನು, ನೌಕಾ ಸೈನಿಕನನ್ನು ಅಥವಾ ವಾಯು ಸೈನಿಕನನ್ನು ಅವನ ನಿಷ್ಠೆ ಅಥವಾ ಕರ್ತವ್ಯದಿಂದ ವಿಮುಖನನ್ನಾಗಿ ಮಾಡಲು ಪ್ರಯತ್ನಿಸುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 160. | ದಂಗೆಗೆ ದುಷ್ಪ್ರೇರಣೆ, ಅದರ ಪರಿಣಾಮವಾಗಿ ದಂಗೆ ನಡೆದರೆ. | ಮರಣದಂಡನೆ ಅಥವಾ ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 161. | ಒಬ್ಬ ಅಧಿಕಾರಿ, ಭೂ ಸೈನಿಕನ, ನೌಕಾ ಸೈನಿಕನ ಅಥವಾ ವಾಯು ಸೈನಿಕನ ಮೇಲಾಧಿಕಾರಿಯು ತನ್ನ ಹುದ್ದೆಯ ಕರ್ತವ್ಯ ನಿರ್ವಹಣೆ ಮಾಡುತ್ತಿರುವಾಗ ಆ ಅಧಿಕಾರಿಯ ಮೇಲೆ ಹಲ್ಲೆ ಮಾಡಲು ಅಧಿಕಾರಿಗೆ, ಭೂ ಸೈನಿಕನಿಗೆ, ನೌಕಾ ಸೈನಿಕನಿಗೆ ಅಥವಾ ವಾಯು ಸೈನಿಕನಿಗೆ ದುಷ್ಪ್ರೇರಣೆ | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 162. | ಅಂಥ ಹಲ್ಲೆಗೆ ದುಷ್ಪ್ರೇರಣೆ, ಅದರ ಪರಿಣಾಮವಾಗಿ ಹಲ್ಲೆ ನಡೆದರೆ | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 163. | ಒಬ್ಬ ಅಧಿಕಾರಿ, ಭೂ ಸೈನಿಕನು, ನೌಕಾ ಸೈನಿಕನು ಅಥವಾ ವಾಯು ಸೈನಿಕನು ದಳವನ್ನು ತ್ಯಜಿಸಿ ಹೋಗಲು ದುಷ್ಪ್ರೇರಣೆ | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 164. | ತ್ಯಜಿಸಿದವನಿಗೆ ಆಶ್ರಯ ನೀಡುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 165. | ತ್ಯಜಿಸಿದವನನ್ನು ವ್ಯಾಪಾರಿ ಹಡಗಿನ ಯಜಮಾನನ ಅಥವಾ ಅದರ ಪ್ರಭಾರವನ್ನು ಹೊಂದಿರುವ ವ್ಯಕ್ತಿಯ ನಿರ್ಲಕ್ಷ್ಯದ ನಿಮಿತ್ತ ಬಚ್ಚಿಡುವುದು | 3000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 166 | ಅವಿಧೇಯತೆಯ ಕೃತ್ಯವನ್ನು ಮಾಡಲು ಒಬ್ಬ ಅಧಿಕಾರಿಗೆ, ಭೂ ಸೈನಿಕನಿಗೆ, ನೌಕಾ ಸೈನಿಕನಿಗೆ ಅಥವಾ ವಾಯು ಸೈನಿಕನಿಗೆ ದುಷ್ಪ್ರೇರಣೆ, ಅದರ ಪರಿಣಾಮವಾಗಿ ಅಪರಾಧವು ನಡೆದಿದ್ದರೆ. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 168. | ಭೂ ಸೈನಿಕ, ನೌಕಾ ಸೈನಿಕ ಅಥವಾ ವಾಯು ಸೈನಿಕನು ಉಪಯೋಗಿಸುವ ಉಡುಪನ್ನು ಅಥವಾ ಚಿಹ್ನೆ (ಟೋಕನ್)ಯನ್ನು ಧರಿಸುವುದು | 3 ತಿಂಗಳುಗಳ ಕಾರಾವಾಸ ಅಥವಾ 2000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 173. | ಲಂಚಗುಳಿತನ. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ, ಸತ್ಕಾರ ಮಾತ್ರವಾದರೆ, ಜುಲ್ಮಾನೆ ಮಾತ್ರ. | ಸಂಜ್ಞೇಯವಲ್ಲ | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 174. | ಚುನಾವಣೆಯಲ್ಲಿ ಅನುಚಿತ ಪ್ರಭಾವ ಬೀರುವುದಕ್ಕೆ ಅಥವಾ ಇನ್ನೊಬ್ಬನಂತೆ ನಟಿಸುವುದು | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 175. | ಚುನಾವಣೆಗೆ ಸಂಬಂಧಿಸಿದ ಸುಳ್ಳು ಹೇಳಿಕೆ | ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 176. | ಚುನಾವಣೆಗಳ ಸಂಬಂಧದಲ್ಲಿ ಕಾನೂನುಬಾಹಿರ ಸಂದಾಯಗಳು | 10,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 177. | ಚುನಾವಣೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಇಡಲು ತಪ್ಪುವುದು | 5,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 178. | ನಾಣ್ಯಗಳು, ಸರ್ಕಾರಿ ಸ್ಟಾಂಪುಗಳು, ಕರೆನ್ಸಿ-ನೋಟುಗಳು ಅಥವಾ ಬ್ಯಾಂಕ್-ನೋಟುಗಳ ಖೋಟಾ ತಯಾರಿಕೆ | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 179. | ನಕಲಿ ಅಥವಾ ಖೋಟಾ ನಾಣ್ಯ, ಸರ್ಕಾರಿ ಸ್ಟಾಂಪು, ಕರೆನ್ಸಿ-ನೋಟುಗಳನ್ನು ಅಥವಾ ಬ್ಯಾಂಕ್-ನೋಟುಗಳನ್ನು ಅಸಲಿಯಂತೆ ಬಳಸುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 180. | ನಕಲಿ ಅಥವಾ ಖೋಟಾ ನಾಣ್ಯ, ಸರ್ಕಾರಿ ಸ್ಟಾಂಪು, ಕರೆನ್ಸಿ-ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ಹೊಂದಿರುವುದು | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 181. | ಖೋಟಾ ನಾಣ್ಯಗಳು, ಸರ್ಕಾರಿ ಸ್ಟಾಂಪುಗಳು, ಕರೆನ್ಸಿ-ನೋಟುಗಳು ಅಥವಾ ಬ್ಯಾಂಕು-ನೋಟುಗಳ ಖೋಟಾ ತಯಾರಿಕೆಯ ಸಲುವಾಗಿ ಯಂತ್ರೋಪಕರಣವನ್ನು, ಉಪಕರಣವನ್ನು ಅಥವಾ ಸಾಮಗ್ರಿಯನ್ನು ನಿರ್ಮಿಸುವುದು, ಕೊಳ್ಳುವುದು, ಮಾರಾಟ ಮಾಡುವುದು ಅಥವಾ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವುದು. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಸೆಷನ್ ನ್ಯಾಯಾಲಯ. |
| 182(1) | ಕರೆನ್ಸಿ-ನೋಟುಗಳನ್ನು ಅಥವಾ ಬ್ಯಾಂಕ್-ನೋಟುಗಳನ್ನು ಹೋಲುವ ದಸ್ತಾವೇಜುಗಳನ್ನು ತಯಾರಿಸುವುದು ಅಥವಾ ಬಳಸುವುದು. | 300 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 182(2) | ಮುದ್ರಕನ ಹೆಸರು ಮತ್ತು ವಿಳಾಸವನ್ನು ಬಹಿರಂಗಪಡಿಸಲು ನಿರಾಕರಿಸುವುದು. | 600 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 183. | ಸರ್ಕಾರಕ್ಕೆ ನಷ್ಟವುಂಟು ಮಾಡುವ ಉದ್ದೇಶದಿಂದ ಸರ್ಕಾರಿ ಸ್ಟಾಂಪುಗಳನ್ನು ಅಂಟಿಸಿರುವ ವಸ್ತುಗಳಿಂದ ಯಾವುದೇ ಬರಹವನ್ನು ತೊಡೆದು ಹಾಕುವುದು ಅಥವಾ ದಸ್ತಾವೇಜಿಗಾಗಿ ಉಪಯೋಗಿಸುವ ಸ್ಟಾಂಪನ್ನು ಅದರಿಂದ ತೆಗೆದು ಹಾಕುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 184. | ಮೊದಲು ಬಳಸಲಾಗಿದೆಯೆಂದು ಗೊತ್ತಾದ ಸರ್ಕಾರಿ ಸ್ಟಾಂಪನ್ನು ಬಳಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 185. | ಸ್ಟಾಂಪನ್ನು ಬಳಸಲಾಗಿದೆಯೆಂಬುದನ್ನು ತೋರಿಸುವ ಗುರುತನ್ನು ಅಳಿಸಿ ಹಾಕುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 186. | ನಕಲಿ ಸ್ಟಾಂಪುಗಳು. | 200 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 187. | ಟಂಕಸಾಲೆಯಲ್ಲಿ ನಿಯೋಜಿತನಾದ ವ್ಯಕ್ತಿಯು, ಕಾನೂನಿನ ಮೂಲಕ ನಿಗದಿಪಡಿಸಿರುವ ತೂಕ ಮತ್ತು ಸಮ್ಮಿಶ್ರಣಕ್ಕಿಂತ ಭಿನ್ನವಾದ ತೂಕದ ಮತ್ತು ಸಮ್ಮಿಶ್ರಣದ ನಾಣ್ಯವಾಗುವಂತೆ ಮಾಡುವುದು. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 188. | ಯಾವುದೇ ನಾಣ್ಯ ತಯಾರಿಕೆಯ ಉಪಕರಣವನ್ನು ಟಂಕಸಾಲೆಯಿಂದ ಕಾನೂನುಬಾಹಿರವಾಗಿ ಹೊರಗೆ ಒಯ್ಯುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 189(2) | ಕಾನೂನುಬಾಹಿರ ಕೂಟದ ಸದಸ್ಯನಾಗಿರುವುದು. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 189(3) | ಚೆದುರಿ ಹೋಗಲು ಸಮಾದೇಶ ಮಾಡಲಾಗಿದೆ ಎಂದು ತಿಳಿದೂ ಕಾನೂನುಬಾಹಿರ ಕೂಟವನ್ನು ಸೇರುವುದು ಅಥವಾ ಅದರಲ್ಲಿ ಮುಂದುವರಿಯುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 189(4) | ಯಾವುದೇ ಮಾರಕ ಆಯುಧವನ್ನು ಹೊಂದಿ, ಕಾನೂನುಬಾಹಿರ ಕೂಟವನ್ನು ಸೇರುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 189(5) | ಐದು ಅಥವಾ ಹೆಚ್ಚು ವ್ಯಕ್ತಿಗಳ ಯಾವುದೇ ಕೂಟಕ್ಕೆ ಚೆದುರಲು ಕಾನೂನುಬದ್ಧವಾಗಿ ಸಮಾದೇಶ ಮಾಡಿದ ತರುವಾಯ ಅಂಥ ಕೂಟವನ್ನು ತಿಳಿದೂ ಅದಕ್ಕೆ ಸೇರುವುದು ಅಥವಾ ಅದರಲ್ಲಿ ಮುಂದುವರಿಯುವುದು. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 189(6) | ಕಾನೂನುಬಾಹಿರ ಕೂಟಗಳಲ್ಲಿ ಭಾಗವಹಿಸಲು ವ್ಯಕ್ತಿಗಳನ್ನು ಬಾಡಿಗೆಯ ಮೇಲೆ ಗೊತ್ತುಮಾಡುವುದು ಅಥವಾ ನೇಮಕ ಮಾಡಿಕೊಳ್ಳುವುದು ಅಥವಾ ನಿಯೋಜಿಸುವುದು. | ಅಂಥ ಕೂಟದ ಸದಸ್ಯನಿಗೆ ಇರುವಂಥದ್ದು ಮತ್ತು ಅಂಥ ಕೂಟದ ಯಾರೇ ಸದಸ್ಯನು ಮಾಡಿದ ಯಾವುದೇ ಅಪರಾಧಕ್ಕಾಗಿ ಇರುವಂಥದ್ದು. | ಸಂಜ್ಞೇಯ. | ಅಪರಾಧವು ಸಂಜ್ಞೇಯ ಅಥವಾ ಸಂಜ್ಞೇಯವಲ್ಲವೇ ಎಂಬುದರ ಪ್ರಕಾರ. | ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ |

| | | | | | |
|---|---|---|---|---|---|
| 189(7) | ಕಾನೂನುಬಾಹಿರ ಕೂಟಕ್ಕಾಗಿ ಬಾಡಿಗೆಗೆ ಗೊತ್ತುಮಾಡಿಕೊಂಡಿದ್ದ ವ್ಯಕ್ತಿಗಳಿಗೆ ಆಶ್ರಯ ನೀಡುವುದು. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 189(8) | ಯಾವುದೇ ಕಾನೂನುಬಾಹಿರ ಕೂಟದಲ್ಲಿ ಅಥವಾ ದೊಂಬಿಯಲ್ಲಿ ಭಾಗವಹಿಸಲು ಬಾಡಿಗೆಗೆ ನೇಮಿಸುವುದು. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 189(9) | ಅಥವಾ ಆಯುಧ ಸಮೇತ ಹೋದರೆ. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 190 | ಕಾನೂನುಬಾಹಿರ ಕೂಟದ ಪ್ರತಿಯೊಬ್ಬ ಸದಸ್ಯನು ಏಕೋದ್ದೇಶವನ್ನು ಈಡೇರಿಸುವಲ್ಲಿ ಮಾಡಿದ ಅಪರಾಧದ ತಪ್ಪಿತಸ್ಥನಾಗುವುದು | ಅದೇ ಅಪರಾಧದಂತೆಯೇ | ಅಪರಾಧವು ಸಂಜ್ಞೇಯ ಅಥವಾ ಸಂಜ್ಞೇಯವಲ್ಲವೇ ಎಂಬುದರ ಪ್ರಕಾರ. | ಅಪರಾಧದ ಪ್ರಕಾರ ಜಾಮೀನು ಅಥವಾ ಜಾಮೀನು ರಹಿತ | ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾಗಿದ್ದ ನ್ಯಾಯಾಲಯ |
| 191(2) | ದೊಂಬಿ | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 191(3) | ಮಾರಕ ಆಯುಧವನ್ನು ಹೊಂದಿ ದೊಂಬಿ ಮಾಡುವುದು. | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 192 | ದೊಂಬಿ ಮಾಡಿಸುವ ಉದ್ದೇಶದಿಂದ, ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಲೆಕ್ಕಿಸದೆ ಪ್ರಚೋದನೆ ನೀಡುವುದು, ದೊಂಬಿಯು ನಡೆದರೆ. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| | ದೊಂಬಿಯು ನಡೆಯದಿದ್ದರೆ. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 193(1) | ಭೂಮಿಯ ಒಡೆಯ ಅಥವಾ ಅಧಿಭೋಗದಾರನು ದೊಂಬಿ, ಇತ್ಯಾದಿಯ ಮಾಹಿತಿಯನ್ನು ಕೊಡದಿರುವುದು. | 1,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 193(2) | ಯಾವ ವ್ಯಕ್ತಿಯ ಪ್ರಯೋಜನಕ್ಕಾಗಿ ಅಥವಾ ಯಾರ ಪರವಾಗಿ ದೊಂಬಿ ನಡೆಯಿತೋ ಆ ವ್ಯಕ್ತಿಯು ಅದನ್ನು ನಿವಾರಿಸಲು ಎಲ್ಲ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳದಿರುವುದು. | ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 193(3) | ಯಾವ ಒಡೆಯನ ಅಥವಾ ಅಧಿಭೋಗದಾರನ ಪ್ರಯೋಜನಕ್ಕಾಗಿ ದೊಂಬಿಯು ನಡೆಸಲಾಯಿತೋ ಅವನ ಏಜೆಂಟನು ಅದನ್ನು ನಿವಾರಿಸಲು ಎಲ್ಲ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳದಿರುವುದು. | ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 194(2) | ಸಾರ್ವಜನಿಕ ಸ್ಥಳಗಳಲ್ಲಿ ಹೊಡೆದಾಟ. | ಒಂದು ತಿಂಗಳ ಕಾರಾವಾಸ ಅಥವಾ 1000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 195(1) | ದೊಂಬಿ, ಇತ್ಯಾದಿಯನ್ನು ದಮನ ಮಾಡುತ್ತಿರುವ ಲೋಕ ನೌಕರನ ಮೇಲೆ ಹಲ್ಲೆ ಮಾಡುವುದು ಅಥವಾ ಅವನಿಗೆ ಅಡ್ಡಿಪಡಿಸುವುದು | 3 ವರ್ಷಗಳ ಕಾರಾವಾಸ ಅಥವಾ 25,000 ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 195(2) | ದೊಂಬಿ, ಇತ್ಯಾದಿಯನ್ನು ದಮನ ಮಾಡುತ್ತಿರುವ ಲೋಕ ನೌಕರನನ್ನು ಹಲ್ಲೆ ಮಾಡುವುದಾಗಿ ಬೆದರಿಕೆ ಹಾಕುವುದು ಅಥವಾ ಅಡ್ಡಿಪಡಿಸಲು ಪ್ರಯತ್ನಿಸುವುದು | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 196(1) | ವಿವಿಧ ಗುಂಪುಗಳ ನಡುವೆ ಧರ್ಮ, ಮೂಲವಂಶ, ಜನ್ಮಸ್ಥಳ, ನಿವಾಸ, ಭಾಷೆ, ಇತ್ಯಾದಿಗಳ ಆಧಾರದ ಮೇಲೆ ದ್ವೇಷವನ್ನು ಉಂಟು ಮಾಡುವುದು ಮತ್ತು ಸೌಹಾರ್ದತೆಗೆ ಬಾಧಕವಾಗುವ ಕೃತ್ಯಗಳನ್ನು ಮಾಡುವುದು | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 196(2) | ಪೂಜಾ ಸ್ಥಳ, ಇತ್ಯಾದಿಗಳಲ್ಲಿ ವರ್ಗಗಳ ಮಧ್ಯೆ ದ್ವೇಷ ಹುಟ್ಟಿಸುವುದು. | 5 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 197(1) | ರಾಷ್ಟ್ರೀಯ ಅಖಂಡತೆಗೆ ಬಾಧಕವಾಗುವ ಆರೋಪಣೆಗಳು, ದೃಢವಾದ ಪ್ರತಿಪಾದನೆಗಳು | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 197(2) | ಸಾರ್ವಜನಿಕ ಪೂಜಾ ಸ್ಥಳ, ಇತ್ಯಾದಿಗಳಲ್ಲಿ ಅದು ನಡೆದರೆ. | 5 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 198 | ಯಾರೇ ವ್ಯಕ್ತಿಗೆ ಕ್ಷತಿಯುಂಟು ಮಾಡುವ ಉದ್ದೇಶದಿಂದ ಲೋಕ ನೌಕರನು ಕಾನೂನಿನ ನಿರ್ದೇಶನವನ್ನು ಪಾಲಿಸದಿರುವುದು | 1 ವರ್ಷದ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 199 | ಲೋಕ ನೌಕರನು ಕಾನೂನು ಮೇರೆಗಿನ ನಿರ್ದೇಶನವನ್ನು ಪಾಲಿಸದಿರುವುದು | 6 ತಿಂಗಳಿಗೆ ಕಡಿಮೆಯಿಲ್ಲದ ಆದರೆ 2 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 200. | ಆಸ್ಪತ್ರೆಯಿಂದ ಸಂತ್ರಸ್ತ ವ್ಯಕ್ತಿಗೆ ಚಿಕಿತ್ಸೆ ಕೊಡದಿರುವುದು. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 201 | ಕ್ಷತಿಯುಂಟು ಮಾಡುವ ಉದ್ದೇಶದಿಂದ ಲೋಕ ನೌಕರನು ತಪ್ಪು ದಸ್ತಾವೇಜನ್ನು ರೂಪಿಸುವುದು | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 202 | ಲೋಕ ನೌಕರನು ಕಾನೂನುಬಾಹಿರವಾಗಿ ವ್ಯಾಪಾರದಲ್ಲಿ ತೊಡಗುವುದು | 1 ವರ್ಷದ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ ಅಥವಾ ಸಮುದಾಯ ಸೇವೆ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |

| | | | | | |
|---|---|---|---|---|---|
| 203 | ಲೋಕ ನೌಕರನು ಕಾನೂನುಬಾಹಿರವಾಗಿ ಸ್ವತ್ತನ್ನು ಖರೀದಿಸುವುದು ಅಥವಾ ಆ ಬಗ್ಗೆ ಹರಾಜಿನಲ್ಲಿ ಕೂಗುವುದು | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ ಮತ್ತು ಸ್ವತ್ತನ್ನು ಕೊಂಡು ಕೊಂಡಿದ್ದರೆ ಅದನ್ನು ಸರ್ಕಾರವು ವಶಪಡಿಸಿಕೊಳ್ಳುವುದು. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 204 | ಲೋಕ ನೌಕರನಂತೆ ನಟನೆ. | 6 ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ 3 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ. | ಯಾರೇ ಮ್ಯಾಜಿಸ್ಟ್ರೇಟ್. |
| 205 | ಲೋಕ ನೌಕರನು ಧರಿಸುವ ಪೋಷಾಕನ್ನು ಅಥವಾ ಹಾಕಿಕೊಳ್ಳುವ ಚಿಹ್ನೆಯನ್ನು ವಂಚನೆ ಮಾಡುವ ಉದ್ದೇಶದಿಂದ ಧರಿಸುವುದು ಅಥವಾ ಹಾಕಿಕೊಳ್ಳುವುದು | 3 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್. |
| 206(ಎ) | ಲೋಕ ನೌಕರನಿಂದ ಸಮನ್ಸ್ ಜಾರಿಗೊಳಿಸುವುದರಿಂದ ಅಥವಾ ಇತರ ವ್ಯವಹರಣೆಗಳಿಂದ ತಪ್ಪಿಸಿಕೊಳ್ಳಲು ತಲೆಮರೆಸಿಕೊಳ್ಳುವುದು | 1 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 206(ಬಿ) | ಸಮನ್ಸ್ ಅಥವಾ ನೋಟೀಸು ನ್ಯಾಯಾಲಯದಲ್ಲಿ ಖುದ್ದು ಹಾಜರಾತಿ, ಇತ್ಯಾದಿಯನ್ನು ಅಗತ್ಯಪಡಿಸಿದ್ದರೆ. | 6 ತಿಂಗಳ ಸಾದಾ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 207(ಎ) | ಸಮನ್ಸ್ ಜಾರಿಯಾಗುವುದನ್ನು ಅಥವಾ ಇತರ ವ್ಯವಹರಣೆಯನ್ನು ಅಥವಾ ಅದರ ಪ್ರಕಟಣೆಯನ್ನು ಪ್ರತಿಬಂಧಿಸುವುದು. | 1 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 207(ಬಿ) | ಆ ಸಮನ್, ಇತ್ಯಾದಿಗಳು ನ್ಯಾಯಾಲಯದಲ್ಲಿ ಖುದ್ದು ಹಾಜರಾತಿ, ಇತ್ಯಾದಿಯನ್ನು ಅಗತ್ಯಪಡಿಸಿದ್ದರೆ. | 6 ತಿಂಗಳ ಸಾದಾ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್. |
| 208(ಎ) | ಲೋಕ ನೌಕರನು ಹೊರಡಿಸಿದ ಆದೇಶವನ್ನು ಪಾಲಿಸದೆ ಗೈರುಹಾಜರಾಗುವುದು. | 1 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 208(ಬಿ) | ಆ ಆದೇಶವು ನ್ಯಾಯಾಲಯದಲ್ಲಿ ಖುದ್ದು ಹಾಜರಾತಿ, ಇತ್ಯಾದಿಯನ್ನು ಅಗತ್ಯಪಡಿಸಿದ್ದರೆ. | 6 ತಿಂಗಳ ಸಾದಾ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 209 | ಈ ಸಂಹಿತೆಯ 84ನೇ ಪ್ರಕರಣದ ಮೇರೆಗೆ ಹೊರಡಿಸಲಾಗಿರುವ ಉದ್ಘೋಷಣೆಗೆ ಪ್ರತಿಯಾಗಿ ಹಾಜರಾಗದಿರುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ ಅಥವಾ ಸಮುದಾಯ ಸೇವೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| | ಈ ಸಂಹಿತೆಯ 84ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಉದ್ಘೋಷಿತ ಅಪರಾಧಿ ಎಂದು ಘೋಷಿಸಲಾದ ವ್ಯಕ್ತಿಯ ಸಂದರ್ಭದಲ್ಲಿ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 210(ಎ) | ದಸ್ತಾವೇಜನ್ನು ಲೋಕ ನೌಕರನ ಮುಂದೆ ಹಾಜರುಪಡಿಸಲು ಕಾನೂನುಸಮ್ಮತವಾಗಿ ಬದ್ಧನಾದ ವ್ಯಕ್ತಿಯು ಹಾಗೆ ಹಾಜರುಪಡಿಸಲು ಅಥವಾ ಒಪ್ಪಿಸಲು ತಪ್ಪುವುದು | 1 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಅಧ್ಯಾಯ XXVIII ರ ಉಪಬಂಧಗಳಿಗೊಳಪಟ್ಟು ಯಾವ ನ್ಯಾಯಾಲಯದಲ್ಲಿ ಆ ಅಪರಾಧವನ್ನು ಮಾಡಲಾಗಿದೆಯೋ ಆ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಲಯದಲ್ಲಿ ನಡೆಯದಿದ್ದರೆ, ಯಾರೇ ಮ್ಯಾಜಿಸ್ಟ್ರೇಟ್ |
| 210(ಬಿ) | ಆ ದಸ್ತಾವೇಜನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಅಥವಾ ಒಪ್ಪಿಸಲು ಅಗತ್ಯಪಡಿಸಲಾಗಿದ್ದರೆ. | 6 ತಿಂಗಳ ಸಾದಾ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ | ಅಧ್ಯಾಯ XXVIII ರ ಉಪಬಂಧಗಳಿಗೊಳಪಟ್ಟು ಯಾವ ನ್ಯಾಯಾಲಯದಲ್ಲಿ ಆ ಅಪರಾಧವನ್ನು ಮಾಡಲಾಗಿದೆಯೋ ಆ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಲಯದಲ್ಲಿ ನಡೆಯದಿದ್ದರೆ, ಯಾರೇ ಮ್ಯಾಜಿಸ್ಟ್ರೇಟ್ |
| 211(ಎ) | ಲೋಕ ನೌಕರನಿಗೆ ಸೂಚನೆ ಅಥವಾ ಮಾಹಿತಿಯನ್ನು ನೀಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಹಾಗೆ ಮಾಡಲು ತಪ್ಪುವುದು | 1 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 211(ಬಿ) | ಅಗತ್ಯಪಡಿಸಲಾದ ನೋಟೀಸು ಅಥವಾ ಮಾಹಿತಿಯು ಅಪರಾಧ ಇತ್ಯಾದಿಯನ್ನು ಮಾಡಿರುವುದಕ್ಕೆ ಸಂಬಂಧಿಸಿದ್ದರೆ. | 6 ತಿಂಗಳ ಸಾದಾ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 211(ಸಿ) | ಈ ಸಂಹಿತೆಯ 394ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಆದೇಶದ ಮೇರೆಗೆ ನೋಟೀಸು ನೀಡಲು ಅಥವಾ ಮಾಹಿತಿಯನ್ನು ಕೊಡಲು ಅಗತ್ಯಪಡಿಸಲಾಗಿದ್ದರೆ. | 6 ತಿಂಗಳ ಕಾರಾವಾಸ ಅಥವಾ 1000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 212(ಎ) | ಲೋಕ ನೌಕರನಿಗೆ ಸುಳ್ಳು ಮಾಹಿತಿಯನ್ನು ತಿಳಿದೂ ಒದಗಿಸುವುದು. | 6 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 212(ಬಿ) | ಅಗತ್ಯಪಡಿಸಲಾದ ಮಾಹಿತಿಯನ್ನು, ಅಪರಾಧ, ಇತ್ಯಾದಿಗಳನ್ನು ಮಾಡಿರುವುದಕ್ಕೆ ಸಂಬಂಧಿಸಿದ್ದರೆ. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 213 | ಲೋಕ ನೌಕರನು ಪ್ರಮಾಣ ಮಾಡಬೇಕೆಂದು ಯುಕ್ತಬದ್ಧವಾಗಿ ಅಗತ್ಯಪಡಿಸಿದಾಗ ಪ್ರಮಾಣ ಮಾಡಲು ನಿರಾಕರಿಸುವುದು. | 6 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಅಧ್ಯಾಯ XXVIII ರ ಉಪಬಂಧಗಳಿಗೊಳಪಟ್ಟು ಯಾವ ನ್ಯಾಯಾಲಯದಲ್ಲಿ ಆ ಅಪರಾಧವನ್ನು ಮಾಡಲಾಗಿದೆಯೋ ಆ ನ್ಯಾಯಾಲಯದಲ್ಲಿಅಥವಾ ನ್ಯಾಯಾಲಯದಲ್ಲಿ ನಡೆಯದಿದ್ದರೆ, ಯಾರೇ ಮ್ಯಾಜಿಸ್ಟ್ರೇಟ್. |
| 214 | ಅಧಿಕೃತಗೊಳಿಸಲಾದ ಲೋಕ ನೌಕರನು ಸತ್ಯ ಹೇಳಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದು, ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸುವುದು. | 6 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ | ಅಧ್ಯಾಯ XXVIII ರ ಉಪಬಂಧಗಳಿಗೊಳಪಟ್ಟು ಯಾವ ನ್ಯಾಯಾಲಯದಲ್ಲಿ ಆ ಅಪರಾಧವನ್ನು ಮಾಡಲಾಗಿದೆಯೋ ಆ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಲಯದಲ್ಲಿ ನಡೆಯದಿದ್ದರೆ, ಯಾರೇ ಮ್ಯಾಜಿಸ್ಟ್ರೇಟ್ |
| 215 | ಲೋಕ ನೌಕರನ ಮುಂದೆ ಕೊಟ್ಟಿರುವ ಹೇಳಿಕೆಗೆ ಸಹಿ ಹಾಕಲು, ಕಾನೂನುಸಮ್ಮತವಾಗಿ ಅಗತ್ಯಪಡಿಸಲಾಗಿದ್ದರೂ, ನಿರಾಕರಿಸುವುದು. | 3 ತಿಂಗಳ ಸಾದಾ ಕಾರಾವಾಸ ಅಥವಾ 3000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಅಧ್ಯಾಯ XXVIII ರ ಉಪಬಂಧಗಳಿಗೊಳಪಟ್ಟು ಯಾವ ನ್ಯಾಯಾಲಯದಲ್ಲಿ ಆ ಅಪರಾಧವನ್ನು ಮಾಡಲಾಗಿದೆಯೋ ಆ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಲಯದಲ್ಲಿ ನಡೆಯದಿದ್ದರೆ, ಯಾರೇ ಮ್ಯಾಜಿಸ್ಟ್ರೇಟ್ |
| 216 | ಸುಳ್ಳೆಂದು ತಿಳಿದೂ ಅದನ್ನು ನಿಜವೆಂದು ಪ್ರಮಾಣ ಮಾಡಿ ಲೋಕ ನೌಕರನಿಗೆ ಹೇಳುವುದು. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 217 | ಯಾರೇ ವ್ಯಕ್ತಿಗೆ ಹಾನಿ ಅಥವಾ ಕಿರುಕುಳವಾಗುವಂತೆ ಲೋಕ ನೌಕರನು ತನ್ನ ಕಾನೂನುಬದ್ಧ ಅಧಿಕಾರವನ್ನು ಉಪಯೋಗಿಸುವಂತೆ ಮಾಡಲು ಸುಳ್ಳು ಮಾಹಿತಿಯನ್ನು ಒದಗಿಸುವುದು. | 1 ವರ್ಷದ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 218. | ಲೋಕ ನೌಕರನು ತನಗಿರುವ ಕಾನೂನುಬದ್ಧ ಅಧಿಕಾರದ ಮೇರೆಗೆ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕೆ ಆತನಿಗೆ ಪ್ರತಿರೋಧಿಸುವುದು | 6 ತಿಂಗಳ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 219 | ಲೋಕ ನೌಕರನು ತನಗಿರುವ ಅಧಿಕಾರದ ಮೇರೆಗೆ ಮಾರಾಟಕ್ಕೆ ಇಟ್ಟಿರುವ ಸ್ವತ್ತನ್ನು ಮಾರಾಟ ಮಾಡಲು ಆತನಿಗೆ ಅಡ್ಡಿಪಡಿಸುವುದು | 1 ತಿಂಗಳ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 220 | ಲೋಕ ನೌಕರನು ತನಗಿರುವ ಅಧಿಕಾರದ ಮೇರೆಗೆ ಮಾರಾಟಕ್ಕೆ ಇಟ್ಟಿರುವ ಸ್ವತ್ತನ್ನು ಕಾನೂನುಬಾಹಿರವಾಗಿ ಖರೀದಿ ಮಾಡುವುದು ಅಥವಾ ಆ ಬಗ್ಗೆ ಹರಾಜಿನಲ್ಲಿ ಸವಾಲು ಕೂಗುವುದು | 1 ತಿಂಗಳ ಕಾರಾವಾಸ ಅಥವಾ 200 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 221. | ಲೋಕ ನೌಕರನು ತನ್ನ ಸಾರ್ವಜನಿಕ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅವನಿಗೆ ಅಡ್ಡಿಪಡಿಸುವುದು | 3 ತಿಂಗಳ ಕಾರಾವಾಸ ಅಥವಾ 2,500 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 222(ಎ) | ಲೋಕ ನೌಕರನಿಗೆ ಸಹಾಯ ಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿದ್ದು ಅವನಿಗೆ ಸಹಾಯ ಮಾಡದಿರುವುದು | 1 ತಿಂಗಳ ಸಾದಾ ಕಾರಾವಾಸ ಅಥವಾ 2,500 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 222(ಬಿ) | ಆದೇಶಿಕೆಗಳ ಜಾರಿ, ಅಪರಾಧಗಳ ತಡೆಹಿಡಿಯುವಿಕೆ ಮುಂತಾದವುಗಳಲ್ಲಿ ಸಹಾಯವನ್ನು ಅಪೇಕ್ಷಿಸುವ ಲೋಕ ನೌಕರನಿಗೆ ಸಹಾಯ ನೀಡಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವುದು. | 6 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 223(ಎ) | ಲೋಕ ನೌಕರನಿಂದ ವಿಧ್ಯುಕ್ತವಾಗಿ ಪ್ರಖ್ಯಾಪಿತವಾದ ಆದೇಶವನ್ನು ಉಲ್ಲಂಘಿಸುವುದು, ಅಂಥ ಉಲ್ಲಂಘನೆಯು ಕಾನೂನುಸಮ್ಮತವಾಗಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ಅಡ್ಡಿ, ಕಿರುಕುಳ ಅಥವಾ ಕ್ಷತಿಯನ್ನು ಉಂಟುಮಾಡಿದರೆ. | 6 ತಿಂಗಳ ಸಾದಾ ಕಾರಾವಾಸ ಅಥವಾ 2500 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 223(ಬಿ) | ಅಂಥ ಉಲ್ಲಂಘನೆಯಿಂದ ಮಾನವನ ಪ್ರಾಣ, ಆರೋಗ್ಯ ಅಥವಾ ಸುರಕ್ಷೆ, ಇತ್ಯಾದಿಗಳಿಗೆ ಅಪಾಯ ಉಂಟಾದರೆ ಅಥವಾ ದೊಂಬಿ ಅಥವಾ ಹೊಡೆದಾಟ ಉಂಟಾದರೆ ಅಥವಾ ಉಂಟಾಗುವ ಸಂಭವವಿದ್ದರೆ | 1 ವರ್ಷದ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 224 | ಲೋಕ ನೌಕರನಿಗೆ, ಮುಂತಾದವರಿಗೆ ಕ್ಷತಿಯುಂಟು ಮಾಡುವ ಬೆದರಿಕೆ | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 225. | ರಕ್ಷಣೆ ಪಡೆಯಲು ಲೋಕ ನೌಕರನಿಗೆ ಅರ್ಜಿ ಸಲ್ಲಿಸದ ಹಾಗೆ ತಡೆಯಲು ವ್ಯಕ್ತಿಯನ್ನು ಪ್ರೇರೇಪಿಸಲು ಕ್ಷತಿಯುಂಟು ಮಾಡುವ ಬೆದರಿಕೆ | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 226 | ಕಾನೂನುಬದ್ಧ ಅಧಿಕಾರವನ್ನು ಚಲಾಯಿಸುವಂತೆ ಒತ್ತಾಯಿಸಿ ಅಥವಾ ಅದಕ್ಕೆ ಅಡ್ಡಿಪಡಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುವುದು | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ ಅಥವಾ ಸಮುದಾಯ ಸೇವೆ | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 229(1) | ನ್ಯಾಯಿಕ ವ್ಯವಹರಣೆಯಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯವನ್ನು ಕೊಡುವುದು ಅಥವಾ ಸೃಷ್ಟಿಸುವುದು. | 7 ವರ್ಷಗಳ ಕಾರಾವಾಸ ಮತ್ತು 10,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 229(2) | ಇತರ ಯಾವುದೇ ಸಂದರ್ಭದಲ್ಲಿ ಸುಳ್ಳು ಸಾಕ್ಷ್ಯವನ್ನು ಕೊಡುವುದು ಅಥವಾ ಸೃಷ್ಟಿಸುವುದು. | 3 ವರ್ಷಗಳ ಕಾರಾವಾಸ ಮತ್ತು 5000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 230(1) | ಯಾರೇ ವ್ಯಕ್ತಿಯನ್ನು ಮರಣದಂಡನೆಯ ನಿರ್ಣಯಕ್ಕೆ ಬರುವಂತೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಕೊಡುವುದು ಅಥವಾ ಸೃಷ್ಟಿಸುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಠಿಣ ಕಾರಾವಾಸ ಮತ್ತು 50,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 230(2) | ಅದರಿಂದ ಅಮಾಯಕ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾಗಿ ಗಲ್ಲಿಗೇರಿಸಲ್ಪಟ್ಟರೆ. | ಮರಣದಂಡನೆ ಅಥವಾ ಮೇಲ್ಕಂಡಂತೆ | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 231 | ಆಜೀವ ಕಾರಾವಾಸದಿಂದ ಅಥವಾ 7 ವರ್ಷಗಳ ಅಥವಾ ಅದಕ್ಕೂ ಮೀರಿದ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಅಪರಾಧ ನಿರ್ಣಯವಾಗುವಂತೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಕೊಡುವುದು ಅಥವಾ ಸೃಷ್ಟಿಸುವುದು | ಆ ಅಪರಾಧಕ್ಕೆ ಇದ್ದಂತೆಯೇ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 232(1) | ಸುಳ್ಳು ಸಾಕ್ಷ್ಯವನ್ನು ಕೊಡುವಂತೆ ಯಾರೇ ವ್ಯಕ್ತಿಗೆ ಬೆದರಿಕೆ ಹಾಕುವುದು | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಸುಳ್ಳು ಸಾಕ್ಷ್ಯವನ್ನು ಕೊಡುವ ಅಪರಾಧದ ಆರೋಪ ಕುರಿತು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ. |
| 232(2) | ಸುಳ್ಳು ಸಾಕ್ಷ್ಯದ ಪರಿಣಾಮವಾಗಿ ಅಮಾಯಕ ವ್ಯಕ್ತಿಯನ್ನು ಅಪರಾಧ ನಿರ್ಣೀತನೆಂದು ನಿರ್ಣಯಿಸಿ ಮರಣದಂಡನೆಯನ್ನು ಅಥವಾ ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಿದ್ದರೆ. | ಆ ಅಪರಾಧಕ್ಕೆ ಇದ್ದಂತೆಯೇ. | ಸಂಜ್ಞೇಯ. | ಜಾಮೀನೀಯವಲ್ಲ | ಸುಳ್ಳು ಸಾಕ್ಷ್ಯವನ್ನು ಕೊಡುವ ಅಪರಾಧದ ಆರೋಪ ಕುರಿತು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ |

| | | | | | |
|---|---|---|---|---|---|
| 233 | ಸುಳ್ಳೆಂದು ಅಥವಾ ಸೃಷ್ಟಿಸಲಾದುದು ಎಂದು ತಿಳಿದಿರುವ ಸಾಕ್ಷ್ಯವನ್ನು ನ್ಯಾಯಿಕ ವ್ಯವಹರಣೆಯಲ್ಲಿ ಬಳಸುವುದು. | ಸುಳ್ಳು ಸಾಕ್ಷ್ಯವನ್ನು ಕೊಡುವುದಕ್ಕೆ ಅಥವಾ ಸೃಷ್ಟಿಸುವುದಕ್ಕೆ ಇದ್ದಂತೆಯೇ. | ಸಂಜ್ಞೇಯವಲ್ಲ. | ಅಂಥ ಸಾಕ್ಷ್ಯವನ್ನು ಕೊಡುವ ಅಪರಾಧವು ಜಾಮೀನೀಯವೇ ಅಥವಾ ಜಾಮೀನೀಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ಸುಳ್ಳು ಸಾಕ್ಷ್ಯವನ್ನು ಕೊಡುವ ಅಥವಾ ಸೃಷ್ಟಿಸುವ ಅಪರಾಧದ ಆರೋಪ ಕುರಿತು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ |
| 234 | ಯಾವುದೇ ಸಂಗತಿಗೆ ಸಂಬಂಧಿಸಿ ಅಂಥ ಪ್ರಮಾಣಪತ್ರವನ್ನು ಕಾನೂನುಬದ್ಧವಾಗಿ ಸಾಕ್ಷ್ಯವಾಗಿ ಸ್ವೀಕರಿಸಬಹುದೋ ಅಂಥ ಸುಳ್ಳು ಪ್ರಮಾಣಪತ್ರವನ್ನು ತಿಳಿದೂ ಕೊಡುವುದು ಅಥವಾ ಅದಕ್ಕೆ ಸಹಿ ಹಾಕುವುದು. | ಸುಳ್ಳು ಸಾಕ್ಷ್ಯವನ್ನು ಕೊಡುವುದಕ್ಕೆ ಇದ್ದಂತೆಯೇ. | ಸಂಜ್ಞೇಯವಲ್ಲ. | ಜಾಮೀನೀಯ. | ಸುಳ್ಳು ಸಾಕ್ಷ್ಯವನ್ನು ಕೊಡುವ ಅಪರಾಧದ ಆರೋಪ ಕುರಿತು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ |
| 235 | ಮುಖ್ಯಾಂಶದಲ್ಲಿ ಸುಳ್ಳೆಂದು ಗೊತ್ತಿರುವ ಪ್ರಮಾಣಪತ್ರವನ್ನು ಸತ್ಯವಾದುದು ಎಂಬಂತೆ ಬಳಸುವುದು | ಸುಳ್ಳು ಸಾಕ್ಷ್ಯ ಕೊಡುವುದಕ್ಕೆ ಇದ್ದಂತೆಯೇ. | ಸಂಜ್ಞೇಯವಲ್ಲ. | ಜಾಮೀನೀಯ. | ಸುಳ್ಳು ಸಾಕ್ಷ್ಯವನ್ನು ಕೊಡುವ ಅಪರಾಧದ ಆರೋಪ ಕುರಿತು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ |
| 236 | ಕಾನೂನಿಗನುಸಾರವಾಗಿ ಸಾಕ್ಷ್ಯವಾಗಿ ಸ್ವೀಕರಿಸಬಹುದಾದ ಯಾವುದೇ ಘೋಷಣೆಯಲ್ಲಿ ಮಾಡಿರುವ ಸುಳ್ಳು ಹೇಳಿಕೆ | ಸುಳ್ಳು ಸಾಕ್ಷ್ಯ ಕೊಡುವುದಕ್ಕೆ ಇದ್ದಂತೆಯೇ. | ಸಂಜ್ಞೇಯವಲ್ಲ. | ಜಾಮೀನೀಯ. | ಸುಳ್ಳು ಸಾಕ್ಷ್ಯವನ್ನು ಕೊಡುವ ಅಪರಾಧದ ಆರೋಪ ಕುರಿತು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ |
| 237 | ಯಾವುದೇ ಅಂಥ ಘೋಷಣೆಯು ಸುಳ್ಳೆಂದು ಗೊತ್ತಿದ್ದರೂ ಅದನ್ನು ಸತ್ಯವಾದುದೆಂದು ಬಳಸುವುದು | ಸುಳ್ಳು ಸಾಕ್ಷ್ಯ ಕೊಡುವುದಕ್ಕೆ ಇದ್ದಂತೆಯೇ. | ಸಂಜ್ಞೇಯವಲ್ಲ. | ಜಾಮೀನೀಯ. | ಸುಳ್ಳು ಸಾಕ್ಷ್ಯವನ್ನು ನೀಡುವ ಅಪರಾಧದ ಆರೋಪ ಕುರಿತು ಅಧಿವಿಚಾರಣೆ ಮಾಡಬೇಕಾದ ನ್ಯಾಯಾಲಯ |
| 238(ಎ) | ನಡೆದ ಅಪರಾಧದ ಸಾಕ್ಷ್ಯವನ್ನು ಇಲ್ಲದಂತೆ ಮಾಡುವುದು ಅಥವಾ ಅಪರಾಧಿಯನ್ನು ರಕ್ಷಿಸಲು ಅದಕ್ಕೆ ಸಂಬಂಧಿಸಿದಂತೆ ಸುಳ್ಳು ಮಾಹಿತಿ ನೀಡುವುದು. ಅಪರಾಧವು ಮರಣದಂಡನೀಯವಾಗಿರುವಲ್ಲಿ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಯಾವ ಅಪರಾಧದ ಸಂಬಂಧದಲ್ಲಿ ಸಾಕ್ಷ್ಯವನ್ನು ಇಲ್ಲದಂತೆ ಮಾಡಲಾಗಿದೆಯೋ ಆ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ಜಾಮೀನೀಯ. | ಸೆಷನ್ ನ್ಯಾಯಾಲಯ. |
| 238(ಬಿ) | ಆಜೀವ ಕಾರಾವಾಸದಿಂದ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾಗಿರುವಲ್ಲಿ. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 238(ಸಿ) | 10 ವರ್ಷಗಳಿಗಿಂತ ಕಡಿಮೆ ಕಾರಾವಾಸದಿಂದ ದಂಡನೀಯವಾಗಿರುವಲ್ಲಿ. | ಅಪರಾಧಕ್ಕಾಗಿ ಉಪಬಂಧಿಸಲಾದ ಬಹುದೀರ್ಘತಮ ಅವಧಿಯ ಕಾಲುಭಾಗದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ. |
| 239 | ಮಾಹಿತಿಯನ್ನು ನೀಡಲು ಕಾನೂನುಬದ್ಧನಾಗಿರುವ ವ್ಯಕ್ತಿಯು ಅಪರಾಧದ ಮಾಹಿತಿಯನ್ನು ನೀಡಲು ಉದ್ದೇಶಪೂರ್ವಕವಾಗಿ ತಪ್ಪುವುದು | 6 ತಿಂಗಳುಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 240 | ನಡೆದ ಅಪರಾಧಕ್ಕೆ ಸಂಬಂಧಿಸಿದಂತೆ ಸುಳ್ಳು ಮಾಹಿತಿಯನ್ನು ನೀಡುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 241 | ಸಾಕ್ಷ್ಯವೆಂದು ಹಾಜರುಪಡಿಸುವುದನ್ನು ತಪ್ಪಿಸಲು ಯಾವುದೇ ದಸ್ತಾವೇಜನ್ನು ಬಚ್ಚಿಡುವುದು ಅಥವಾ ನಾಶಪಡಿಸುವುದು | 3 ವರ್ಷಗಳ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 242 | ದಾವೆಯಲ್ಲಿ ಅಥವಾ ಕ್ರಿಮಿನಲ್ ಪ್ರಾಸಿಕ್ಯೂಷನ್ ನಲ್ಲಿ ಯಾವುದೇ ಕೃತ್ಯ ಅಥವಾ ವ್ಯವಹರಣೆಯ ಉದ್ದೇಶಕ್ಕಾಗಿ ಜಾಮೀನುದಾರನಾಗಲು ಅಥವಾ ಭದ್ರತೆ ಕೊಡಲು ಇನ್ನೊಬ್ಬನಂತೆ ನಟಿಸುವುದು | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 243. | ಮುಟ್ಟುಗೋಲಾಗಿ ಅಥವಾ ಶಿಕ್ಷೆಯ ಆದೇಶದ ಮೇರೆಗಿನ ಜುಲ್ಮಾನೆಯ ವಸೂಲಿಗಾಗಿ ಅಥವಾ ಡಿಕ್ರಿಯ ಜಾರಿ ಕ್ರಮದಲ್ಲಿ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳದಂತೆ ತಡೆಯಲು ಸ್ವತ್ತನ್ನು ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು, ಇತ್ಯಾದಿ. | 3 ವರ್ಷಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 244 | ಮುಟ್ಟುಗೋಲಾಗಿ ಅಥವಾ ಶಿಕ್ಷೆಯ ಆದೇಶದ ಮೇರೆಗಿನ ಜುಲ್ಮಾನೆಯ ವಸೂಲಿಗಾಗಿ ಅಥವಾ ಡಿಕ್ರಿಯ ಜಾರಿಯ ಕ್ರಮದಲ್ಲಿ ಸ್ವತ್ತನ್ನು ವಶಪಡಿಸಿಕೊಳ್ಳದಂತೆ ತಡೆಯಲು, ಅಧಿಕಾರವಿಲ್ಲದೆಯೇ ಸ್ವತ್ತನ್ನು ಕ್ಲೇಮು ಮಾಡುವುದು ಅಥವಾ ಅದರ ಸಂಬಂಧವಾದ ಯಾವುದೇ ಅಧಿಕಾರದ ಬಗ್ಗೆ ಮೋಸದಿಂದ ವರ್ತಿಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 245. | ಬಾಕಿಯಿರದ ಮೊತ್ತಕ್ಕಾಗಿ ಮೋಸದಿಂದ ಡಿಕ್ರಿಯನ್ನು ಮಾಡಲು ಕಾರಣವಾಗುವುದು ಅಥವಾ ಮೊತ್ತವನ್ನು ತೀರಿಸಿದ ತರುವಾಯವೂ ಮೋಸದಿಂದ ಡಿಕ್ರಿಯನ್ನು ಜಾರಿ ಮಾಡಿಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 246 | ನ್ಯಾಯಾಲಯದಲ್ಲಿ ಸುಳ್ಳು ಕ್ಲೇಮು. | 2 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 247 | ಬಾಕಿಯಿರದ ಮೊತ್ತಕ್ಕಾಗಿ ಮೋಸದಿಂದ ಡಿಕ್ರಿಯನ್ನು ಪಡೆಯುವುದು ಅಥವಾ ಮೊತ್ತವನ್ನು ತೀರಿಸಿದ ತರುವಾಯವೂ ಮೋಸದಿಂದ ಡಿಕ್ರಿಯನ್ನು ಜಾರಿ ಮಾಡಿಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 248(ಎ) | ಕ್ಷತಿಯುಂಟು ಮಾಡಬೇಕೆಂಬ ಉದ್ದೇಶದಿಂದ ಅಪರಾಧದ ಬಗ್ಗೆ ಸುಳ್ಳು ಆಪಾದನೆ | 5 ವರ್ಷಗಳ ಕಾರಾವಾಸ ಅಥವಾ 2 ಲಕ್ಷ ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 248(ಬಿ) | ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷ ಅಥವಾ ಅದಕ್ಕೂ ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಬಗ್ಗೆ ಸುಳ್ಳು ಆಪಾದನೆ ಮಾಡಿ ಆಪರಾಧಿಕ ವ್ಯವಹರಣೆಯನ್ನು ಹೂಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಸೆಷನ್ ನ್ಯಾಯಾಲಯ |
| 249(ಎ) | ಅಪರಾಧಿಗೆ ಆಶ್ರಯ ನೀಡುವುದು, ಅಪರಾಧವು ಮರಣದಂಡನೀಯವಾದುದಾಗಿದ್ದರೆ. | 5 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 249(ಬಿ) | ಆಜೀವ ಕಾರಾವಾಸದಿಂದ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 249(ಸಿ) | 10 ವರ್ಷದ್ದಲ್ಲದ, ಆದರೆ 1 ವರ್ಷದ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | ಆ ಅಪರಾಧಕ್ಕಾಗಿ ಉಪಬಂಧಿಸಲಾದ ಬಹುದೀರ್ಘತಮ ಅವಧಿಯ ಕಾರಾವಾಸದ ಕಾಲುಭಾಗ ಅವಧಿಯ ಮತ್ತು ಆ ಸ್ವರೂಪದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 250(ಎ) | ಅಪರಾಧಿಯನ್ನು ದಂಡನೆಯಿಂದ ರಕ್ಷಿಸಲು ಕಾಣಿಕೆ, ಇತ್ಯಾದಿಗಳನ್ನು ತೆಗೆದುಕೊಳ್ಳುವುದು, ಅಪರಾಧವು ಮರಣದಂಡನೀಯವಾದುದಾಗಿದ್ದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 250(ಬಿ) | ಆಜೀವ ಕಾರಾವಾಸದಿಂದ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 250(ಸಿ) | 10 ವರ್ಷಗಳಿಗೆ ಮೀರದ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | ಆ ಅಪರಾಧಕ್ಕಾಗಿ ಉಪಬಂಧಿಸಲಾದ ಬಹುದೀರ್ಘತಮ ಅವಧಿಯಲ್ಲಿ ಕಾಲುಭಾಗ ಅವಧಿಯ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 251(ಎ) | ಅಪರಾಧಿಯನ್ನು ರಕ್ಷಿಸುವುದಕ್ಕೆ ಪ್ರತಿಫಲವಾಗಿ ಕಾಣಿಕೆ ನೀಡುವುದು ಅಥವಾ ಸ್ವತ್ತನ್ನು ವಾಪಸ್ಸು ಕೊಡುವುದು, ಆ ಅಪರಾಧವು ಮರಣದಂಡನೀಯವಾದುದಾಗಿದ್ದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 251(ಬಿ) | ಆಜೀವ ಕಾರಾವಾಸದಿಂದ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 251(ಸಿ) | 10 ವರ್ಷಗಳಿಗೆ ಮೀರದ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | ಆ ಅಪರಾಧಕ್ಕಾಗಿ ಉಪಬಂಧಿಸಲಾದ ಬಹುದೀರ್ಘತಮ ಅವಧಿಯಲ್ಲಿ ಕಾಲುಭಾಗ ಅವಧಿಯ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 252. | ಅಪರಾಧಿಯನ್ನು ದಸ್ತಗಿರಿ ಮಾಡಿಸದೇ ಆ ಅಪರಾಧದಿಂದಾಗಿ ಒಬ್ಬ ವ್ಯಕ್ತಿಯು ಕಳೆದುಕೊಂಡ ಚರಸ್ವತ್ತನ್ನು ಪುನಃ ಪಡೆಯುವುದಕ್ಕೆ ಸಹಾಯ ಮಾಡಲು ಬಹುಮಾನ ಸ್ವೀಕರಿಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 253(ಎ) | ಅಭಿರಕ್ಷೆಯಿಂದ ತಪ್ಪಿಸಿಕೊಂಡಿರುವ ಅಥವಾ ದಸ್ತಗಿರಿಗಾಗಿ ಆದೇಶ ಹೊರಡಿಸಿರುವ ಅಪರಾಧಿಗೆ ಆಶ್ರಯ ಕೊಡುವುದು, ಅಪರಾಧವು ಮರಣದಂಡನೀಯವಾದುದಾಗಿದ್ದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 253(ಬಿ) | ಆಜೀವ ಕಾರಾವಾಸದಿಂದ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | ಜುಲ್ಮಾನೆ ಸಹಿತವಾದ ಅಥವಾ ರಹಿತವಾದ 3 ವರ್ಷಗಳ ಕಾರಾವಾಸ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 253(ಸಿ) | 10 ವರ್ಷಗಳಿಗಲ್ಲದೆ, ಆದರೆ 1 ವರ್ಷದ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ. | ಆ ಅಪರಾಧಕ್ಕಾಗಿ ಉಪಬಂಧಿಸಲಾದ ಬಹುದೀರ್ಘತಮ ಅವಧಿಯಲ್ಲಿ ಕಾಲುಭಾಗ ಅವಧಿಯ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 254 | ಸುಲಿಗೆಕೋರರಿಗೆ ಅಥವಾ ದರೋಡೆಕೋರರಿಗೆ ಆಶ್ರಯ ನೀಡುವುದು. | 7 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 255 | ವ್ಯಕ್ತಿಗೆ ದಂಡನೆಯಾಗದಂತೆ ಅಥವಾ ಅವನ ಸ್ವತ್ತು ಮುಟ್ಟುಗೋಲಾಗದಂತೆ ರಕ್ಷಿಸುವ ಉದ್ದೇಶದಿಂದ ಲೋಕ ನೌಕರನು ಕಾನೂನಿನ ನಿರ್ದೇಶನವನ್ನು ಉಲ್ಲಂಘಿಸುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 256 | ವ್ಯಕ್ತಿಗೆ ದಂಡನೆಯಾಗದಂತೆ ಅಥವಾ ಅವನ ಸ್ವತ್ತು ಮುಟ್ಟುಗೋಲಾಗದಂತೆ ರಕ್ಷಿಸುವ ಉದ್ದೇಶದಿಂದ ಲೋಕ ನೌಕರನು ಸರಿಯಲ್ಲದ ದಾಖಲೆಯನ್ನು ಅಥವಾ ಬರಹವನ್ನು ರೂಪಿಸುವುದು | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 257 | ನ್ಯಾಯಿಕ ವ್ಯವಹರಣೆಯಲ್ಲಿ ಲೋಕ ನೌಕರನು ಕಾನೂನಿಗೆ ತದ್ವಿರುದ್ಧವಾದ ಆದೇಶ, ವರದಿ, ಮುಂತಾದವುಗಳನ್ನು ಭ್ರಷ್ಟತೆಯಿಂದ ಸಿದ್ಧಪಡಿಸುವುದು ಮತ್ತು ಘೋಷಿಸುವುದು | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 258 | ಅಧಿಕಾರವುಳ್ಳ ವ್ಯಕ್ತಿಯು ತಾನು ಕಾನೂನಿಗೆ ತದ್ವಿರುದ್ಧವಾಗಿ ವರ್ತಿಸುತ್ತಿರುವನೆಂಬುದು ಗೊತ್ತಿದ್ದರೂ, ವ್ಯಕ್ತಿಯನ್ನು ಅಧಿವಿಚಾರಣೆಗೆ ಅಥವಾ ಬಂಧನಕ್ಕೆ ಒಪ್ಪಿಸುವುದು | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 259(ಎ) | ಅಪರಾಧಿಯನ್ನು ದಸ್ತಗಿರಿ ಮಾಡಲು ಕಾನೂನುಬದ್ಧನಾದ ಲೋಕ ನೌಕರನು ಉದ್ದೇಶಪೂರ್ವಕವಾಗಿ ದಸ್ತಗಿರಿ ಮಾಡದಿರುವುದು, ಆ ಅಪರಾಧವು ಮರಣದಂಡನೀಯವಾದುದಾಗಿದ್ದರೆ. | ಜುಲ್ಮಾನೆ ಸಹಿತವಾದ ಅಥವಾ ರಹಿತವಾದ 7 ವರ್ಷಗಳ ಕಾರಾವಾಸ. | ಯಾವ ಅಪರಾಧದ ಬಗ್ಗೆ ಹಾಗೆ ದಸ್ತಗಿರಿ ಮಾಡಿಲ್ಲವೋ ಆ ಅಪರಾಧವು ಸಂಜ್ಞೇಯವೇ ಅಥವಾ ಸಂಜ್ಞೇಯವಲ್ಲವೇ ಎಂಬುದಕ್ಕೆ ಅನುಸಾರವಾಗಿ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 259(ಬಿ) | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾದುದಾಗಿದ್ದರೆ | ಜುಲ್ಮಾನೆ ಸಹಿತವಾದ ಅಥವಾ ರಹಿತವಾದ 3 ವರ್ಷಗಳ ಕಾರಾವಾಸ | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 259(ಸಿ) | 10 ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ. | ಜುಲ್ಮಾನೆ ಸಹಿತವಾದ ಅಥವಾ ರಹಿತವಾದ 2 ವರ್ಷಗಳ ಕಾರಾವಾಸ. | ಸಂಜ್ಞೇಯ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 260(ಎ) | ನ್ಯಾಯಾಲಯದ ಶಿಕ್ಷೆಯ ಆದೇಶದ ಮೇರೆಗೆ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಕಾನೂನುಬದ್ಧನಾದ ಲೋಕನೌಕರನು ಉದ್ದೇಶಪೂರ್ವಕವಾಗಿ ದಸ್ತಗಿರಿ ಮಾಡದಿರುವುದು, ಅದು ಮರಣದಂಡನೆಯ ಶಿಕ್ಷೆಯ ಆದೇಶವಾಗಿದ್ದರೆ. | ಆಜೀವ ಕಾರಾವಾಸ ಅಥವಾ ಜುಲ್ಮಾನೆ ಸಹಿತವಾದ ಅಥವಾ ರಹಿತವಾದ 14 ವರ್ಷಗಳ ಕಾರಾವಾಸ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 260(ಬಿ) | ಆಜೀವ ಕಾರಾವಾಸದ ಅಥವಾ 10 ವರ್ಷಗಳ ಅಥವಾ ಹೆಚ್ಚಿನ ಅವಧಿಯ ಕಾರಾವಾಸದ ಶಿಕ್ಷೆಯ ಆದೇಶವಾಗಿದ್ದರೆ. | ಜುಲ್ಮಾನೆ ಸಹಿತವಾದ ಅಥವಾ ರಹಿತವಾದ 7 ವರ್ಷಗಳ ಕಾರಾವಾಸ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 260(ಸಿ) | 10 ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸದ ಶಿಕ್ಷೆಯ ಆದೇಶವಾಗಿದ್ದರೆ ಅಥವಾ ಕಾನೂನುಬದ್ಧವಾಗಿ ಅಭಿರಕ್ಷೆಗೆ ಒಪ್ಪಿಸಲಾಗಿದ್ದರೆ. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 261 | ಬಂಧನದಲ್ಲಿ ಇರುವವನು ಲೋಕ ನೌಕರನ ನಿರ್ಲಕ್ಷ್ಯದಿಂದಾಗಿ ತಪ್ಪಿಸಿಕೊಂಡು ಹೋಗುವುದು | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 262 | ವ್ಯಕ್ತಿಯು ತಾನು ಕಾನೂನುಬದ್ಧವಾಗಿ ದಸ್ತಗಿರಿಯಾಗುವುದಕ್ಕೆ ಪ್ರತಿರೋಧಿಸುವುದು ಅಥವಾ ಅಡ್ಡಿಪಡಿಸುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 263(ಎ) | ಯಾರೇ ವ್ಯಕ್ತಿಯ ಕಾನೂನುಬದ್ಧ ದಸ್ತಗಿರಿಗೆ ಪ್ರತಿರೋಧಿಸುವುದು ಅಥವಾ ಅಡ್ಡಿಪಡಿಸುವುದು ಅಥವಾ ಕಾನೂನುಬದ್ಧ ಅಭಿರಕ್ಷೆಯಿಂದ ಅವನನ್ನು ಬಿಡಿಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 263(ಬಿ) | ಆಜೀವ ಕಾರಾವಾಸದಿಂದ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾಗುವ ಅಪರಾಧದ ಬಗ್ಗೆ ಆಪಾದಿತನಾಗಿದ್ದರೆ. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 263(ಸಿ) | ಮರಣದಂಡನೀಯ ಅಪರಾಧದ ಬಗ್ಗೆ ಆಪಾದಿತನಾಗಿದ್ದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 263(ಡಿ) | ಆಜೀವ ಕಾರಾವಾಸ ಅಥವಾ 10 ವರ್ಷಗಳ ಅಥವಾ ಅದಕ್ಕೆ ಮೀರಿದ ಅವಧಿಯ ಕಾರಾವಾಸದಿಂದ ಶಿಕ್ಷೆಯ ಆದೇಶಿತನಾಗಿದ್ದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 263(ಇ) | ಮರಣದಂಡನೆಯಿಂದ ಶಿಕ್ಷೆಯ ಆದೇಶಿತನಾಗಿದ್ದರೆ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 264 | ಯಾವ ಸಂದರ್ಭಗಳಿಗೆ ಅನ್ಯಥಾ ಉಪಬಂಧ ಕಲ್ಪಿಸಿಲ್ಲವೋ ಅಂಥ ಸಂದರ್ಭಗಳಲ್ಲಿ ಲೋಕ ನೌಕರನು ದಸ್ತಗಿರಿ ಮಾಡದಿರುವುದು ಅಥವಾ ತಪ್ಪಿಸಿಕೊಂಡು ಹೋಗಲು ಆಸ್ಪದ ಮಾಡಿಕೊಡುವುದು:- | | | | |
| | (ಎ) ಉದ್ದೇಶಪೂರ್ವಕವಾಗಿ ದಸ್ತಗಿರಿ ಮಾಡದಿರುವ ಅಥವಾ ತಪ್ಪಿಸಿಕೊಳ್ಳಲು ಆಸ್ಪದ ಮಾಡಿಕೊಟ್ಟಿರುವ ಸಂದರ್ಭದಲ್ಲಿ. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| | (ಬಿ) ನಿರ್ಲಕ್ಷ್ಯದಿಂದ ದಸ್ತಗಿರಿ ಮಾಡದಿರುವ ಅಥವಾ ತಪ್ಪಿಸಿಕೊಳ್ಳಲು ಆಸ್ಪದ ಮಾಡಿಕೊಟ್ಟಿರುವ ಸಂದರ್ಭದಲ್ಲಿ. | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 265 | ಯಾವ ಸಂದರ್ಭಗಳಿಗೆ ಅನ್ಯಥಾ ಉಪಬಂಧ ಕಲ್ಪಿಸಿಲ್ಲವೋ ಅಂಥ ಸಂದರ್ಭಗಳಲ್ಲಿ ಕಾನೂನುಬದ್ಧವಾಗಿ ದಸ್ತಗಿರಿಗೆ ಪ್ರತಿರೋಧಿಸುವುದು ಅಥವಾ ಅಡ್ಡಿಪಡಿಸುವುದು ಅಥವಾ ತಪ್ಪಿಸಿಕೊಳ್ಳುವುದು ಅಥವಾ ಬಿಡಿಸಿಕೊಳ್ಳುವುದು | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ. | ಯಾರೇ ಮ್ಯಾಜಿಸ್ಟ್ರೇಟ್ |
| 266 | ದಂಡನೆಯನ್ನು ಮಾಫಿ ಮಾಡಿದ ಷರತ್ತಿನ ಉಲ್ಲಂಘನೆ. | ಮೂಲ ಶಿಕ್ಷೆಯ ಆದೇಶದ ದಂಡನೆ ಅಥವಾ ದಂಡನೆಯ ಒಂದು ಭಾಗವನ್ನು ಅನುಭವಿಸಿದ್ದರೆ, ಉಳಿದ ಭಾಗ. | ಸಂಜ್ಞೇಯ. | ಜಾಮೀನೀಯವಲ್ಲ | ಮೂಲ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾಗಿದ್ದ ನ್ಯಾಯಾಲಯ. |

| | | | | | |
|---|---|---|---|---|---|
| 267 | ಯಾವುದೇ ಹಂತದ ನ್ಯಾಯಿಕ ವ್ಯವಹರಣೆಯನ್ನು ನಡೆಸುತ್ತಿರುವ ಲೋಕ ನೌಕರನಿಗೆ ಉದ್ದೇಶಪೂರ್ವಕವಾಗಿ ಅವಮಾನ ಮಾಡುವುದು ಅಥವಾ ಅವನ ಕೆಲಸಕ್ಕೆ ಅಡ್ಡಿಪಡಿಸುವುದು. | 6 ತಿಂಗಳ ಸಾದಾ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಅಧ್ಯಾಯ XXVIII ರ ಉಪಬಂಧಗಳಿಗೊಳಪಟ್ಟು ಯಾವ ನ್ಯಾಯಾಲಯದಲ್ಲಿ ಆ ಅಪರಾಧವನ್ನು ಮಾಡಲಾಗಿದೆಯೋ ಆ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಲಯದಲ್ಲಿ ನಡೆಯದಿದ್ದರೆ, ಯಾರೇ ಮ್ಯಾಜಿಸ್ಟ್ರೇಟ್ |
| 268 | ಅಸೆಸರ್‌ನಂತೆ ನಟಿಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 269 | ಬಂಧಪತ್ರ ಅಥವಾ ಜಾಮೀನು ಬಂಧಪತ್ರದ ಮೇಲೆ ಬಿಡುಗಡೆಯಾಗಿರುವ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗಲು ತಪ್ಪುವುದು | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 271 | ಪ್ರಾಣಕ್ಕೆ ಅಪಾಯಕಾರಿಯಾದ ಯಾವುದೇ ರೋಗದ ಸೋಂಕನ್ನು ಹರಡುವ ಸಂಭವವಿರುವುದೆಂದು ತಿಳಿದಿರುವ ಯಾವುದೇ ಕೃತ್ಯವನ್ನು ನಿರ್ಲಕ್ಷ್ಯದಿಂದ ಮಾಡುವುದು. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 272 | ಪ್ರಾಣಕ್ಕೆ ಅಪಾಯಕಾರಿಯಾದ ಯಾವುದೇ ರೋಗದ ಸೋಂಕನ್ನು ಹರಡುವ ಸಂಭವವಿರುವುದೆಂದು ತಿಳಿದಿರುವ ಯಾವುದೇ ಕೃತ್ಯವನ್ನು ದ್ವೇಷಪೂರ್ವಕವಾಗಿ ಮಾಡುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 273 | ಯಾವುದೇ ರೋಗಿ ಸಂಸರ್ಗ ನಿಷೇಧ ಸ್ಥಳದ ನಿಯಮವನ್ನು ತಿಳಿದೂ ಉಲ್ಲಂಘಿಸುವುದು. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 274 | ಮಾರಾಟ ಮಾಡಲು ಉದ್ದೇಶಿಸಿರುವ ಆಹಾರ ಅಥವಾ ಪಾನೀಯವನ್ನು ಅವುಗಳನ್ನು ಹಾನಿಕರಗೊಳಿಸುವ ಉದ್ದೇಶದಿಂದ ಕಲಬೆರಕೆ ಮಾಡುವುದು. | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 275 | ಯಾವುದೇ ಆಹಾರ ಅಥವಾ ಪಾನೀಯವನ್ನು ಅದು ಹಾನಿಕರ ಎಂದು ತಿಳಿದಿದ್ದೂ ಮಾರಾಟ ಮಾಡುವುದು. | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 276 | ಮಾರಾಟ ಮಾಡಲು ಉದ್ದೇಶಿಸಿರುವ ಯಾವುದೇ ಔಷಧ ಅಥವಾ ವೈದ್ಯಕೀಯ ತಯಾರಿಕೆಯನ್ನು, ಅದರ ಸತ್ವವನ್ನು ತಗ್ಗಿಸುವ ಅಥವಾ ಅದರ ಕ್ರಿಯಾಶಕ್ತಿಯನ್ನು ಬದಲಾಯಿಸುವ ಅಥವಾ ಅದನ್ನು ಹಾನಿಕರಗೊಳಿಸುವ ಉದ್ದೇಶದಿಂದ ಕಲಬೆರಕೆ ಮಾಡುವುದು. | 1 ವರ್ಷದ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 277 | ಕಲಬೆರಕೆ ಮಾಡಿದ ಔಷಧಗಳ ಮಾರಾಟ | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 278 | ಒಂದು ಔಷಧವನ್ನು ಬೇರೊಂದು ಔಷಧವೆಂದು ಅಥವಾ ತಯಾರಿಕೆಯೆಂದು ತಿಳಿದೂ ಮಾರಾಟ ಮಾಡುವುದು | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 279 | ಸಾರ್ವಜನಿಕ ಚಿಲುಮೆ ಅಥವಾ ಜಲಾಶಯದ ನೀರನ್ನು ಮಲೀನಗೊಳಿಸುವುದು. | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 280 | ವಾತಾವರಣವನ್ನು ಆರೋಗ್ಯಕ್ಕೆ ಹಾನಿಕರವಾಗುವಂತೆ ಮಾಡುವುದು. | 1000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 281 | ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಚಲಾಯಿಸುವುದು ಅಥವಾ ಸವಾರಿ ಮಾಡುವುದು. | 6 ತಿಂಗಳ ಕಾರಾವಾಸ ಅಥವಾ 1,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 282 | ನೌಕೆಯನ್ನು ದುಡುಕಿನಿಂದ ಚಲಾಯಿಸುವುದು. | 6 ತಿಂಗಳ ಕಾರಾವಾಸ ಅಥವಾ 10,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 283 | ಮಾರ್ಗ ತಪ್ಪಿಸುವ ಬೆಳಕು, ಗುರುತು ಅಥವಾ ತೇಲು ಬುರುಡೆಯನ್ನು ಪ್ರದರ್ಶಿಸುವುದು. | 7 ವರ್ಷಗಳ ಕಾರಾವಾಸ ಮತ್ತು 10,000 ರೂಪಾಯಿಗಳಿಗೆ ಕಡಿಮೆ ಇಲ್ಲದ ಜುಲ್ಮಾನೆ | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 284 | ಬಾಡಿಗೆ ಪಡೆದು ವ್ಯಕ್ತಿಯನ್ನು ಸುರಕ್ಷಿತವಲ್ಲದ ಅಥವಾ ಹೆಚ್ಚು ಭಾರ ಹೇರಿದ ನೌಕೆಯಲ್ಲಿ ನೀರಿನ ಮೂಲಕ ಸಾಗಿಸುವುದು. | 6 ತಿಂಗಳ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 285 | ಸಾರ್ವಜನಿಕ ದಾರಿಯಲ್ಲಿ ಅಥವಾ ನೌಕಾ ಸಂಚಾರದ ಮಾರ್ಗದಲ್ಲಿ ಅಪಾಯ ಅಥವಾ ಅಡ್ಡಿಯನ್ನುಂಟು ಮಾಡುವುದು. | 5000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 286 | ವಿಷ ಪದಾರ್ಥಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ. | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 287 | ಬೆಂಕಿ ಅಥವಾ ದಹನಶೀಲ ವಸ್ತುವಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ. | 6 ತಿಂಗಳ ಕಾರಾವಾಸ ಅಥವಾ 2,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 288 | ಸ್ಫೋಟಕ ಪದಾರ್ಥಗಳಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ. | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 289 | ಯಂತ್ರೋಪಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ. | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 290 | ಕಟ್ಟಡಗಳನ್ನು ಕೆಡವಿ ಹಾಕುವುದು, ದುರಸ್ತಿ ಮಾಡುವುದು ಅಥವಾ ನಿರ್ಮಾಣ ಮಾಡುವುದು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 291 | ಪ್ರಾಣಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ವರ್ತನೆ | 6 ತಿಂಗಳ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 292 | ಅನ್ಯಥಾ ಉಪಬಂಧಿಸದ ಸಂದರ್ಭಗಳಲ್ಲಿ ಸಾರ್ವಜನಿಕ ಉಪದ್ರವವುಂಟು ಮಾಡುವುದು. | 1000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 293 | ಉಪದ್ರವವನ್ನು ನಿಲ್ಲಿಸಲು ನಿರ್ಬಂಧಕಾಜ್ಞೆಯನ್ನು ಹೊರಡಿಸಿದ ತರುವಾಯವೂ ಉಪದ್ರವವನ್ನು ಮುಂದುವರಿಸುವುದು. | 6 ತಿಂಗಳ ಸಾದಾ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 294(2) | ಅಶ್ಲೀಲ ಪುಸ್ತಕ, ಮುಂತಾದವುಗಳ ಮಾರಾಟ, ಇತ್ಯಾದಿ. | ಮೊದಲ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ 2 ವರ್ಷಗಳ ಕಾರಾವಾಸ ಮತ್ತು 5,000 ರೂಪಾಯಿಗಳ ಜುಲ್ಮಾನೆ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ 5 ವರ್ಷಗಳ ಕಾರಾವಾಸ ಮತ್ತು 10,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 295 | ಮಕ್ಕಳಿಗೆ ಅಶ್ಲೀಲ ವಸ್ತುಗಳನ್ನು ಮಾರಾಟ ಮಾಡುವುದು, ಇತ್ಯಾದಿ. | ಮೊದಲ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ 3 ವರ್ಷಗಳ ಕಾರಾವಾಸ ಮತ್ತು 2,000 ರೂಪಾಯಿಗಳ ಜುಲ್ಮಾನೆ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ 7 ವರ್ಷಗಳ ಕಾರಾವಾಸ ಮತ್ತು 5,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 296 | ಅಶ್ಲೀಲ ಕೃತ್ಯಗಳು ಮತ್ತು ಹಾಡುಗಳು | 3 ತಿಂಗಳ ಕಾರಾವಾಸ ಅಥವಾ 1,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 297(1) | ಲಾಟರಿ ಕಾರ್ಯಾಲಯವನ್ನು ಇಟ್ಟುಕೊಂಡಿರುವುದು. | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 297(2) | ಲಾಟರಿಗಳಿಗೆ ಸಂಬಂಧಿಸಿದಂತೆ ಪ್ರಸ್ತಾವಗಳನ್ನು ಪ್ರಕಟಿಸುವುದು. | 5,000 ರೂಪಾಯಿಗಳ ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 298 | ಯಾವುದೇ ವರ್ಗದವರ ಧರ್ಮಕ್ಕೆ ಅಪಮಾನ ಮಾಡುವ ಉದ್ದೇಶದಿಂದ ಪೂಜಾಸ್ಥಳವನ್ನು ಅಪವಿತ್ರಗೊಳಿಸುವುದು, ಇತ್ಯಾದಿ. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 299 | ಯಾವುದೇ ಜನವರ್ಗದ ಧರ್ಮವನ್ನು ಅಥವಾ ಧಾರ್ಮಿಕ ನಂಬಿಕೆಗಳನ್ನು ಅಪಮಾನಗೊಳಿಸಿ ಅವರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡುವ ಉದ್ದೇಶದಿಂದ ಬುದ್ಧಿಪೂರ್ವಕವಾಗಿ ಮತ್ತು ದ್ವೇಷ ಭಾವನೆಯಿಂದ ಮಾಡಿದ ಕೃತ್ಯಗಳು | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 300 | ಧಾರ್ಮಿಕ ಕೂಟಕ್ಕೆ ಅಡಚಣೆಯುಂಟು ಮಾಡುವುದು. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 301 | ಸ್ಮಶಾನ, ಮುಂತಾದವುಗಳಲ್ಲಿ ಅತಿಕ್ರಮಣ ಪ್ರವೇಶ. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 302 | ಧಾರ್ಮಿಕ ಭಾವನೆಗಳಿಗೆ ಬುದ್ಧಿಪೂರ್ವಕವಾಗಿ ನೋವುಂಟು ಮಾಡುವ ಉದ್ದೇಶದಿಂದ ಪದಗಳು, ಇತ್ಯಾದಿಗಳನ್ನು ಉಚ್ಚರಿಸುವುದು | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 303(2) | ಕಳವು | 1 ವರ್ಷಕ್ಕೆ ಕಡಿಮೆ ಇರದ, ಆದರೆ 5 ವರ್ಷಗಳಿಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| | ಸ್ವತ್ತಿನ ಮೌಲ್ಯವು 5,000 ರೂಪಾಯಿಗಳಿಗೆ ಕಡಿಮೆಯಿರುವೆಡೆಗಳಲ್ಲಿ | ಸ್ವತ್ತಿನ ಮೌಲ್ಯವನ್ನು ಹಿಂದಿರುಗಿಸಿದ ಅಥವಾ ಕಳುವಾದ ಸ್ವತ್ತನ್ನು ವಾಪಸ್ಸು ನೀಡಿದ ತರುವಾಯ, ಸಮುದಾಯ ಸೇವೆಯೊಂದಿಗೆ ದಂಡಿತನಾಗತಕ್ಕದ್ದು. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 304(2) | ಕಸಿದುಕೊಳ್ಳುವುದು | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 305 | ವಾಸದ ಮನೆ ಅಥವಾ ಸಾರಿಗೆ ಸಾಧನಗಳ ಅಥವಾ ಪೂಜಾ ಸ್ಥಳ, ಇತ್ಯಾದಿಗಳಲ್ಲಿ ಕಳವು. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 306 | ಗುಮಾಸ್ತ ಅಥವಾ ಸೇವಕನಿಂದ ಯಜಮಾನನ ಅಥವಾ ನಿಯೋಜಕನ ಸ್ವಾಧೀನದಲ್ಲಿರುವ ಸ್ವತ್ತಿನ ಕಳವು. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 307 | ಕಳವು ಮಾಡುವುದಕ್ಕಾಗಿ ಮರಣ, ಗಾಯ ಅಥವಾ ಪ್ರತಿಬಂಧಿಸಲು ಸಿದ್ಧತೆಗಳನ್ನು ಮಾಡಿಕೊಂಡ ತರುವಾಯ ಕಳವು. | 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 308(2) | ಬಲಾದ್ಗ್ರಹಣ | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 308(3) | ಬಲಾದ್ಗ್ರಹಣ ಮಾಡುವ ಸಲುವಾಗಿ ಕ್ಷತಿಯುಂಟು ಮಾಡುವುದಾಗಿ ಭಯಪಡಿಸುವುದು ಅಥವಾ ಭಯಪಡಿಸಲು ಪ್ರಯತ್ನಿಸುವುದು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 308(4) | ಬಲಾದ್ಗ್ರಹಣ ಮಾಡುವ ಸಲುವಾಗಿ ವ್ಯಕ್ತಿಗೆ ಮರಣ ಅಥವಾ ತೀವ್ರಗಾಯವನ್ನುಂಟು ಮಾಡುವುದಾಗಿ ಭಯಪಡಿಸುವುದು ಅಥವಾ ಭಯಪಡಿಸಲು ಪ್ರಯತ್ನಿಸುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 308(5) | ಮರಣ ಅಥವಾ ತೀವ್ರಗಾಯವನ್ನುಂಟು ಮಾಡುವುದಾಗಿ ಭಯಪಡಿಸುವ ಮೂಲಕ ಬಲಾದ್ಗ್ರಹಣ ಮಾಡುವುದು | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 308(6) | ಬಲಾದ್ಗ್ರಹಣ ಮಾಡುವ ಸಲುವಾಗಿ ಮರಣದಂಡನೆ, ಆಜೀವ ಕಾರಾವಾಸ ಅಥವಾ ಹತ್ತು ವರ್ಷಗಳ ಕಾರಾವಾಸದಿಂದ ದಂಡನೀಯವಾದ ಅಪರಾಧದ ಅಪಾದನೆ ಮಾಡುವುದಾಗಿ ಭಯಪಡಿಸುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 308(7) | ಬಲಾದ್ಗ್ರಹಣ ಮಾಡುವುದಕ್ಕಾಗಿ ಮರಣದಂಡನೆ, ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸದಿಂದ ದಂಡನೀಯವಾದ ಅಪರಾಧದ ಆಪಾದನೆಯ ಭಯವನ್ನು ವ್ಯಕ್ತಿಯಲ್ಲಿ ಉಂಟು ಮಾಡುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 309(4) | ಸುಲಿಗೆ | 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| | ಸುಲಿಗೆಯು ಸೂರ್ಯಾಸ್ತ ಹಾಗೂ ಸೂರ್ಯೋದಯಗಳ ಮಧ್ಯೆ ಹೆದ್ದಾರಿಯಲ್ಲಿ ನಡೆದಿದ್ದರೆ. | 14 ವರ್ಷಗಳ ಕಠಿಣ ಕಾರಾವಾಸ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 309(5) | ಸುಲಿಗೆಯನ್ನು ಮಾಡಲು ಪ್ರಯತ್ನ. | 7 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 309(6) | ಕ್ಷತಿಯನ್ನುಂಟು ಮಾಡುವುದು | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 310(2) | ದರೋಡೆ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 310(3) | ದರೋಡೆಯಲ್ಲಿ ಕೊಲೆ. | ಮರಣದಂಡನೆ, ಆಜೀವ ಕಾರಾವಾಸ ಅಥವಾ 10 ವರ್ಷಗಳಿಗೆ ಕಡಿಮೆಯಿಲ್ಲದ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 310(4) | ದರೋಡೆ ಮಾಡಲು ಸಿದ್ಧತೆ ಮಾಡಿಕೊಳ್ಳುವುದು | 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 310(5) | ದರೋಡೆ ಮಾಡುವ ಉದ್ದೇಶಕ್ಕಾಗಿ ಸೇರಿದ ಐದು ಅಥವಾ ಹೆಚ್ಚು ವ್ಯಕ್ತಿಗಳಲ್ಲಿ ಒಬ್ಬನಾಗಿರುವುದು | 7 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |

| | | | | | |
|---|---|---|---|---|---|
| 310(6) | ರೂಢಿಗತವಾಗಿ ದರೋಡೆ ಮಾಡುವ ಉದ್ದೇಶಕ್ಕಾಗಿ ಜೊತೆಗೂಡಿದ ವ್ಯಕ್ತಿಗಳ ಗುಂಪಿಗೆ ಸೇರಿರುವುದು. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 311 | ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡಲು ಪ್ರಯತ್ನಿಸಿ ಸುಲಿಗೆ ಅಥವಾ ದರೋಡೆ ಮಾಡುವುದು. | 7 ವರ್ಷಗಳಿಗೆ ಕಡಿಮೆಯಿಲ್ಲದ ಕಾರಾವಾಸ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 312 | ಮಾರಕ ಆಯುಧದೊಡನೆ ಸಜ್ಜಿತನಾಗಿರುವಾಗ ಸುಲಿಗೆ ಅಥವಾ ದರೋಡೆ ಮಾಡಲು ಪ್ರಯತ್ನಿಸುವುದು. | 7 ವರ್ಷಗಳಿಗೆ ಕಡಿಮೆಯಿಲ್ಲದ ಕಾರಾವಾಸ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 313 | ರೂಢಿಗತವಾಗಿ ಕಳವು ಮಾಡುವ ಉದ್ದೇಶಕ್ಕಾಗಿ ಜೊತೆಗೂಡಿದ ವ್ಯಕ್ತಿಗಳ ಅಲೆದಾಡುವ ಗುಂಪಿಗೆ ಸೇರುವುದು. | 7 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 314 | ಚರಸ್ವತ್ತಿನ ಅಪ್ರಾಮಾಣಿಕ ದುರ್ವಿನಿಯೋಗ ಅಥವಾ ಅದನ್ನು ಸ್ವಂತ ಉಪಯೋಗಕ್ಕಾಗಿ ಬಳಸಿಕೊಳ್ಳುವುದು. | 6 ತಿಂಗಳಿಗೆ ಕಡಿಮೆಯಿಲ್ಲದ ಆದರೆ 2 ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 315 | ಮರಣದ ಸಮಯದಲ್ಲಿ ಮೃತ ವ್ಯಕ್ತಿಯ ಸ್ವಾಧೀನದಲ್ಲಿದ್ದ ಸ್ವತ್ತಿನ ಅಪ್ರಾಮಾಣಿಕ ದುರ್ವಿನಿಯೋಗ | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| | ಮೃತ ವ್ಯಕ್ತಿಯು ನಿಯೋಜಿಸಿದ ಗುಮಾಸ್ತ ಅಥವಾ ವ್ಯಕ್ತಿಯಿಂದ ಆ ಅಪರಾಧವು ನಡೆದಿದ್ದರೆ. | 7 ವರ್ಷಗಳ ಕಾರಾವಾಸ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 316(2) | ಆಪರಾಧಿಕ ನಂಬಿಕೆ ದ್ರೋಹ. | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 316(3) | ಸಾಗಣೆದಾರ, ಬಂದರು ಕಟ್ಟೆಯ ಯಜಮಾನ, ಮುಂತಾದವರಿಂದ ಆಪರಾಧಿಕ ನಂಬಿಕೆ ದ್ರೋಹ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 316(4) | ಗುಮಾಸ್ತ ಅಥವಾ ಸೇವಕನಿಂದ ಆಪರಾಧಿಕ ನಂಬಿಕೆ ದ್ರೋಹ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 316(5) | ಲೋಕ ನೌಕರ ಅಥವಾ ಬ್ಯಾಂಕರ್, ವ್ಯಾಪಾರಿ ಅಥವಾ ಏಜೆಂಟ್, ಮುಂತಾದವರಿಂದ ಆಪರಾಧಿಕ ನಂಬಿಕೆ ದ್ರೋಹ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 317(2) | ಕಳವು ಮಾಡಿದ ಸ್ವತ್ತನ್ನು, ಅದು ಕಳವು ಮಾಡಿದ ಸ್ವತ್ತೆಂದು ಗೊತ್ತಿದ್ದರೂ ಅಪ್ರಾಮಾಣಿಕವಾಗಿ ಸ್ವೀಕರಿಸುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 317(3) | ಕಳವು ಮಾಡಿದ ಸ್ವತ್ತನ್ನು, ಅದು ದರೋಡೆಯದೆಂದು ಗೊತ್ತಿದ್ದರೂ ಅಪ್ರಾಮಾಣಿಕವಾಗಿ ಸ್ವೀಕರಿಸುವುದು. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 317(4) | ಕಳವು ಮಾಡಿದ ಸ್ವತ್ತಿನ ರೂಢಿಗತ ವ್ಯವಹಾರ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |

| | | | | | |
|---|---|---|---|---|---|
| 317(5) | ಕಳವು ಮಾಡಿದ ಸ್ವತ್ತನ್ನು, ಅದು ಕಳವು ಮಾಡಿದ ಸ್ವತ್ತೆಂದು ತಿಳಿದೂ ಬಚ್ಚಿಡಲು ಅಥವಾ ವಿಲೆ ಮಾಡಲು ಸಹಾಯ ಮಾಡುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 318(2) | ವಂಚಿಸುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 318(3) | ಯಾವ ವ್ಯಕ್ತಿಯ ಹಿತಾಸಕ್ತಿಯನ್ನು ಕಾಪಾಡಲು ಕಾನೂನಿನಿಂದ ಅಥವಾ ಕಾನೂನುಸಮ್ಮತ ಕರಾರಿನಿಂದ ಅಪರಾಧಿಯು ಬದ್ಧನಾಗಿದ್ದನೋ ಆ ವ್ಯಕ್ತಿಗೆ ವಂಚಿಸುವುದು. | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 318(4) | ವಂಚಿಸುವುದು ಮತ್ತು ಸ್ವತ್ತನ್ನು ಒಪ್ಪಿಸಲು ಅಪ್ರಾಮಾಣಿಕವಾಗಿ ಪ್ರೇರೇಪಿಸುವುದು. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 319(2) | ಮತ್ತೊಬ್ಬನಂತೆ ವರ್ತಿಸಿ ವಂಚಿಸುವುದು. | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆಯೊಂದಿಗೆ ಅಥವಾ ಅವೆರಡರೊಂದಿಗೆ | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 320 | ಸಾಲದಾತರಲ್ಲಿ ಸ್ವತ್ತು, ಇತ್ಯಾದಿ ಹಂಚಿಕೆಯಾಗುವುದನ್ನು ತಪ್ಪಿಸಲು ಅದನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು. | 6 ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ 2 ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 321 | ಅಪರಾಧಿಗೆ ಬರಬೇಕಾಗಿರುವ ಸಾಲದ ಅಥವಾ ತಗಾದೆ ಹಣವನ್ನು ಅವನ ಸಾಲದಾತರಿಗೆ ದೊರೆಯದಂತೆ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ತಪ್ಪಿಸುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 322 | ಪ್ರತಿಫಲದ ಬಗ್ಗೆ ಸುಳ್ಳು ಹೇಳಿಕೆಯನ್ನೊಳಗೊಂಡ ವರ್ಗಾವಣೆಯ ಪತ್ರವನ್ನು ಅಪ್ರಾಮಾಣಿಕವಾಗಿ ಮತ್ತು ಮೋಸದಿಂದ ಬರೆದುಕೊಡುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 323 | ತನ್ನ ಅಥವಾ ಇತರ ಯಾರೇ ವ್ಯಕ್ತಿಯ ಸ್ವತ್ತನ್ನು ಮೋಸದಿಂದ ಸಾಗಿಸುವುದು ಅಥವಾ ಬಚ್ಚಿಡುವುದು ಅಥವಾ ಅದನ್ನು ಮಾಡಲು ಸಹಾಯ ಮಾಡುವುದು ಅಥವಾ ತನಗೆ ಹಕ್ಕುಳ್ಳ ಯಾವುದೇ ದೇಣಿ ಅಥವಾ ಕ್ಲೇಮನ್ನು ಅಪ್ರಾಮಾಣಿಕವಾಗಿ ಬಿಟ್ಟು ಬಿಡುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 324(2) | ಕೇಡು | 6 ತಿಂಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 324(3) | ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಸ್ವತ್ತು ಸೇರಿದಂತೆ ಯಾವುದೇ ಸ್ವತ್ತಿಗೆ ನಷ್ಟ ಅಥವಾ ಹಾನಿಯನ್ನುಂಟು ಮಾಡುವ ಕೇಡು. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 324(4) | ಇಪ್ಪತ್ತು ಸಾವಿರ ರೂಪಾಯಿಗಳು ಆದರೆ 2 ಲಕ್ಷ ರೂಪಾಯಿಗಳಿಗೆ ಕಡಿಮೆಯಿರುವ ಮೊತ್ತಕ್ಕೆ ನಷ್ಟ ಅಥವಾ ಹಾನಿಯನ್ನುಂಟು ಮಾಡುವ ಕೇಡು | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 324(5) | 1 ಲಕ್ಷ ರೂಪಾಯಿಗಳು ಅಥವಾ ಅದಕ್ಕಿಂತ ಮೇಲ್ಪಟ್ಟ ಮೊತ್ತದ ನಷ್ಟ ಅಥವಾ ಹಾನಿಯನ್ನುಂಟು ಮಾಡುವ ಕೇಡು | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 324(6) | ಯಾರೇ ವ್ಯಕ್ತಿಗೆ ಮರಣದ ಅಥವಾ ಗಾಯದ ಅಥವಾ ಅಕ್ರಮವಾಗಿ ಪ್ರತಿಬಂಧಿಸುವ ಅಥವಾ ಮರಣದ ಅಥವಾ ಗಾಯದ ಅಥವಾ ಅಕ್ರಮವಾಗಿ ಪ್ರತಿಬಂಧಿಸುವ ಭಯವನ್ನುಂಟು ಮಾಡುವ ಸಿದ್ಧತೆ ನಡೆಸಿ ಕೇಡನ್ನುಂಟು ಮಾಡುವುದು. | 5 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 325 | ಪ್ರಾಣಿಯನ್ನು ಕೊಂದು ಅಥವಾ ಅಂಗವಿಕಲಗೊಳಿಸಿ ಮಾಡಿದ ಕೇಡು | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 326(ಎ) | ಬೇಸಾಯೋದ್ದೇಶ, ಇತ್ಯಾದಿಗಳಿಗೆ ನೀರಿನ ಸರಬರಾಜನ್ನು ಕಡಿಮೆ ಮಾಡುವ ಕೇಡು. | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 326(ಬಿ) | ಸಾರ್ವಜನಿಕ ರಸ್ತೆ, ಸೇತುವೆ, ಸಂಚಾರ ಯೋಗ್ಯ ನದಿ ಅಥವಾ ಸಂಚಾರ ಯೋಗ್ಯ ಕಾಲುವೆಗೆ ಕ್ಷತಿಯುಂಟು ಮಾಡುವ ಮತ್ತು ಪ್ರಯಾಣ ಮಾಡಲು ಅಥವಾ ಸ್ವತ್ತನ್ನು ಸಾಗಿಸಲು ಆಗದಂತೆ ಅಥವಾ ಸುರಕ್ಷತೆ ಕಡಿಮೆಯಾಗುವಂತೆ ಮಾಡುವ ಕೇಡು. | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 326(ಸಿ) | ಸಾರ್ವಜನಿಕ ಚರಂಡಿಗೆ ಹಾನಿ ಅಥವಾ ನಷ್ಟ ಉಂಟಾಗುವಂತೆ ಮಾಡಲು ತುಂಬಾ ನೀರು ಹರಿಸುವ ಅಥವಾ ಅಡ್ಡಿ ಉಂಟುಮಾಡುವ ಕೇಡು. | 5 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆಯೊಂದಿಗೆ ಅಥವಾ ಅವೆರಡರೊಂದಿಗೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 326(ಡಿ) | ದೀಪಗೃಹವನ್ನು ಅಥವಾ ಸಮುದ್ರ-ಗುರುತುಚಿಹ್ನೆಯನ್ನು ನಾಶಪಡಿಸುವ ಅಥವಾ ಕದಲಿಸುವ ಅಥವಾ ಅದರ ಉಪಯುಕ್ತತೆಯನ್ನು ಕಡಿಮೆ ಮಾಡುವ ಅಥವಾ ಸುಳ್ಳು ದೀಪಗಳನ್ನು ಪ್ರದರ್ಶಿಸುವ ಕೇಡು. | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 326(ಇ) | ಸಾರ್ವಜನಿಕ ಪ್ರಾಧಿಕಾರವು ನೆಟ್ಟ ಭೂಮಿ ಗುರುತನ್ನು ನಾಶಪಡಿಸುವುದು ಅಥವಾ ಕದಲಿಸುವುದು, ಇತ್ಯಾದಿಯಿಂದ ಮಾಡಿದ ಕೇಡು. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 326(ಎಫ್) | ಹಾನಿಯುಂಟುಮಾಡುವ ಉದ್ದೇಶದಿಂದ ಬೆಂಕಿ ಅಥವಾ ಸ್ಫೋಟಕ ವಸ್ತುವನ್ನು ಬಳಸಿ ಕೇಡು ಮಾಡುವುದು. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 326(ಜಿ) | ಮನೆ, ಇತ್ಯಾದಿಯನ್ನು ನಾಶಪಡಿಸುವ ಉದ್ದೇಶದಿಂದ ಬೆಂಕಿ ಅಥವಾ ಸ್ಫೋಟಕ ವಸ್ತುವನ್ನು ಬಳಸಿ ಕೇಡು ಮಾಡುವುದು. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 327(1) | ಅಂತಸ್ತುಳ್ಳ ನೌಕೆ ಅಥವಾ 20 ಟನ್ನುಗಳ ಹೊರೆಯ ನೌಕೆಯನ್ನು ನಾಶಪಡಿಸುವ ಅಥವಾ ಅಭದ್ರ ಮಾಡುವ ಉದ್ದೇಶದಿಂದ ಮಾಡಿದ ಕೇಡು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 327(2) | ಹಿಂದಿನ ಪ್ರಕರಣದಲ್ಲಿ ವಿವರಿಸಲಾದ ಕೇಡು, ಬೆಂಕಿ ಅಥವಾ ಯಾವುದೇ ಸ್ಫೋಟಕ ವಸ್ತುವಿನಿಂದ ನಡೆದಿದ್ದರೆ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 328 | ಕಳವು, ಇತ್ಯಾದಿಗಳನ್ನು ಮಾಡಲು ನೌಕೆಯನ್ನು ನಡೆಸುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 329(3) | ಆಪರಾಧಿಕ ಅತಿಕ್ರಮಣ ಪ್ರವೇಶ. | 3 ತಿಂಗಳ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 329(4) | ಮನೆ ಅತಿಕ್ರಮಣ ಪ್ರವೇಶ. | 1 ವರ್ಷದ ಕಾರಾವಾಸ ಅಥವಾ 5,000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 331(1) | ಹೊಂಚುಹಾಕಿ ಮನೆ-ಅತಿಕ್ರಮಣ ಪ್ರವೇಶ ಮಾಡುವುದು ಅಥವಾ ಮನೆಗೆ ಕನ್ನ ಹಾಕುವುದು | 2 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 331(2) | ರಾತ್ರಿಯಲ್ಲಿ ಹೊಂಚುಹಾಕಿ ಮನೆ ಅತಿಕ್ರಮಣ ಪ್ರವೇಶ ಮಾಡುವುದು ಅಥವಾ ಮನೆಗೆ ಕನ್ನ ಹಾಕುವುದು. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 331(3) | ಕಾರಾವಾಸದಿಂದ ದಂಡನೀಯವಾದ ಅಪರಾಧವಾಗುವಂಥ ಅಪರಾಧವನ್ನು ಮಾಡಲು ಹೊಂಚುಹಾಕಿ ಮನೆ ಅತಿಕ್ರಮಣ ಪ್ರವೇಶ ಮಾಡುವುದು ಅಥವಾ ಮನೆಗೆ ಕನ್ನ ಹಾಕುವುದು. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| | ಅಪರಾಧವು ಕಳವಿನದಾಗಿದ್ದರೆ. | 10 ವರ್ಷಗಳ ಕಾರಾವಾಸ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 331(4) | ಕಾರಾವಾಸದಿಂದ ದಂಡನೀಯವಾದ ಅಪರಾಧವಾಗುವಂಥ ಅಪರಾಧವನ್ನು ಮಾಡಲು ಹೊಂಚುಹಾಕಿ ರಾತ್ರಿಯಲ್ಲಿ ಮನೆ ಅತಿಕ್ರಮಣ ಪ್ರವೇಶ ಮಾಡುವುದು ಅಥವಾ ಮನೆಗೆ ಕನ್ನ ಹಾಕುವುದು. | 5 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| | ಅಪರಾಧವು ಕಳವಿನದಾಗಿದ್ದರೆ. | 14 ವರ್ಷಗಳ ಕಾರಾವಾಸ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 331(5) | ಗಾಯ, ಹಲ್ಲೆ, ಇತ್ಯಾದಿಗಳನ್ನು ಮಾಡಲು ಸಿದ್ಧತೆ ಮಾಡಿಕೊಂಡ ಆನಂತರ ಹೊಂಚುಹಾಕಿ ಮನೆ ಅತಿಕ್ರಮಣ ಪ್ರವೇಶ ಮಾಡುವುದು ಅಥವಾ ಮನೆಗೆ ಕನ್ನ ಹಾಕುವುದು. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 331(6) | ಗಾಯ, ಇತ್ಯಾದಿಗಳನ್ನು ಉಂಟು ಮಾಡಲು ಸಿದ್ಧತೆ ಮಾಡಿಕೊಂಡ ಆನಂತರ ಹೊಂಚು ಹಾಕಿ ರಾತ್ರಿಯಲ್ಲಿ ಮನೆ ಅತಿಕ್ರಮಣ ಪ್ರವೇಶ ಮಾಡುವುದು ಅಥವಾ ಮನೆಗೆ ಕನ್ನ ಹಾಕುವುದು. | 14 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 331(7) | ಹೊಂಚು ಹಾಕಿ ಮನೆ ಅತಿಕ್ರಮಣ ಪ್ರವೇಶ ಮಾಡುವಾಗ ಅಥವಾ ಮನೆಗೆ ಕನ್ನ ಹಾಕುವಾಗ ಉಂಟಾದ ತೀವ್ರ ಗಾಯ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 331(8) | ರಾತ್ರಿಯಲ್ಲಿ ಮನೆಗೆ ಕನ್ನ ಹಾಕುವುದಕ್ಕೆ ಸಂಬಂಧಿಸಿದ ಒಬ್ಬ ಅಥವಾ ಅನೇಕ ವ್ಯಕ್ತಿಗಳಿಂದ ಉಂಟಾದ ಮರಣ ಅಥವಾ ತೀವ್ರ ಗಾಯ, ಇತ್ಯಾದಿ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 332(ಎ) | ಮರಣದಂಡನೀಯವಾದ ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 332(ಬಿ) | ಆಜೀವ ಕಾರಾವಾಸದಿಂದ ದಂಡನೀಯವಾದ ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ. | 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ |
| 332(ಸಿ) | ಕಾರಾವಾಸದಿಂದ ದಂಡನೀಯವಾದ ಅಪರಾಧವಾಗುವಂಥ ಮನೆ-ಅತಿಕ್ರಮಣ ಪ್ರವೇಶ. | 2 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| | ಅಪರಾಧವು ಕಳವಿನದಾಗಿದ್ದರೆ. | 7 ವರ್ಷಗಳ ಕಾರಾವಾಸ | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 333 | ಗಾಯ, ಹಲ್ಲೆ, ಇತ್ಯಾದಿಗಳನ್ನು ಮಾಡಲು ಸಿದ್ಧತೆ ಮಾಡಿಕೊಂಡ ಆನಂತರ ಮನೆ ಅತಿಕ್ರಮಣ ಪ್ರವೇಶ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 334(1) | ಸ್ವತ್ತು ಇರುವ ಅಥವಾ ಇದೆಯೆಂದು ಭಾವಿಸಿರುವ ಯಾವುದೇ ಮುಚ್ಚಿದ ಧಾರಕವನ್ನು ಅಪ್ರಾಮಾಣಿಕವಾಗಿ ಒಡೆದು ತೆರೆಯುವುದು ಅಥವಾ ಬಿಚ್ಚುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 334(2) | ಯಾವುದೇ ಸ್ವತ್ತು ಇರುವ ಅಥವಾ ಇದೆಯೆಂದು ಭಾವಿಸಲಾದ ಯಾವುದೇ ಮುಚ್ಚಿದ ಧಾರಕವನ್ನು ತನಗೆ ವಹಿಸಲಾಗಿದ್ದು ಅದನ್ನು ಮೋಸದಿಂದ ತೆರೆಯುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 336(2) | ಸುಳ್ಳು ಸೃಷ್ಟನೆ. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 336(3) | ವಂಚಿಸುವ ಉದ್ದೇಶಕ್ಕಾಗಿ ಸುಳ್ಳು ಸೃಷ್ಟನೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 336(4) | ಯಾರೇ ವ್ಯಕ್ತಿಯ ಖ್ಯಾತಿಗೆ ಕುಂದುತರುವ ಉದ್ದೇಶಕ್ಕಾಗಿ ಬಳಸುವ ಸಂಭವವಿದೆಯೆಂದು ಗೊತ್ತಿದ್ದೂ ಸುಳ್ಳು ಸೃಷ್ಟನೆ ಮಾಡುವುದು. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 337 | ಲೋಕ ನೌಕರನು ಇಟ್ಟಿರುವ ನ್ಯಾಯಾಲಯದ ದಾಖಲೆ ಅಥವಾ ಜನನ, ಇತ್ಯಾದಿಗಳ ರಿಜಿಸ್ಟರನ ದಾಖಲೆಗಳ ಸುಳ್ಳು ಸೃಷ್ಟನೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 338 | ಬೆಲೆಯುಳ್ಳ ಯಾವುದೇ ಭದ್ರತಾ ಪತ್ರ, ಮರಣಶಾಸನ ಅಥವಾ ಯಾವುದೇ ಭದ್ರತಾ ಪತ್ರವನ್ನು ಮಾಡಲು ಅಥವಾ ವರ್ಗಾಯಿಸಲು ಅಥವಾ ಯಾವುದೇ ಹಣ, ಇತ್ಯಾದಿಯನ್ನು ಸ್ವೀಕರಿಸಲು ಇರುವ ಪ್ರಾಧಿಕಾರದ ಸುಳ್ಳು ಸೃಷ್ಟನೆ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| | ಬೆಲೆಯುಳ್ಳ ಭದ್ರತಾ ಪತ್ರವು ಕೇಂದ್ರ ಸರ್ಕಾರದ ಪ್ರಾಮಿಸರಿ ನೋಟಾಗಿದ್ದರೆ. | ಆಜೀವ ಕಾರಾವಾಸ ಅಥವಾ 10 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 339 | ದಸ್ತಾವೇಜನ್ನು ಅದು ಸುಳ್ಳು ಸೃಷ್ಟನೆ ಎಂದು ತಿಳಿದಿದ್ದೂ ನೈಜ ಎಂದು ಉಪಯೋಗಿಸುವ ಉದ್ದೇಶದಿಂದ ಸ್ವಾಧೀನ ಹೊಂದಿರುವುದು; ಆ ದಸ್ತಾವೇಜು 337ನೇ ಪ್ರಕರಣದಲ್ಲಿ ಸೂಚಿಸಲಾದ ವಿವರಣೆಗಳಲ್ಲಿ ಒಂದಾಗಿದ್ದರೆ. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| | ಆ ದಸ್ತಾವೇಜು 338ನೇ ಪ್ರಕರಣದಲ್ಲಿ ಸೂಚಿಸಲಾದ ವಿವರಣೆಗಳಲ್ಲಿ ಒಂದಾಗಿದ್ದರೆ. | ಆಜೀವ ಕಾರಾವಾಸ ಅಥವಾ 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 340(2) | ಸುಳ್ಳು ಸೃಷ್ಟನೆಯೆಂದು ತಿಳಿದಿರುವ ಸುಳ್ಳು ದಸ್ತಾವೇಜನ್ನು ನೈಜವಾದುದೆಂದು ಬಳಸುವುದು. | ಅಂಥ ದಸ್ತಾವೇಜಿನ ಸುಳ್ಳು ಸೃಷ್ಟನೆಗಾಗಿ ಇರುವ ದಂಡನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 341(1) | 338ನೇ ಪ್ರಕರಣದ ಮೇರೆಗೆ ದಂಡನೀಯವಾದ ಸುಳ್ಳು ಸೃಷ್ಟನೆ ಮಾಡುವ ಉದ್ದೇಶದಿಂದ ಮೊಹರು, ಫಲಕ, ಇತ್ಯಾದಿಗಳನ್ನು ಮಾಡುವುದು ಅಥವಾ ಅವುಗಳ ಖೋಟಾ ತಯಾರಿಕೆ ಅಥವಾ ಅಂಥದೇ ಉದ್ದೇಶದಿಂದ ಆ ಮೊಹರು ಫಲಕ, ಇತ್ಯಾದಿಗಳನ್ನು, ಅವು ಖೋಟಾ ಎಂದು ತಿಳಿದಿದ್ದೂ ಸ್ವಾಧೀನ ಹೊಂದಿರುವುದು. | ಆಜೀವ ಕಾರಾವಾಸ ಅಥವಾ 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 341(2) | 338ನೇ ಪ್ರಕರಣದಿಂದಲ್ಲದೇ ಅನ್ಯಥಾ ದಂಡನೀಯವಾದ ಸುಳ್ಳು ಸೃಷ್ಟನೆ ಮಾಡುವ ಉದ್ದೇಶದಿಂದ ಮೊಹರು ಫಲಕ ಮುಂತಾದುವನ್ನು ಮಾಡುವುದು ಅಥವಾ ಖೋಟಾ ತಯಾರಿ ಮಾಡುವುದು ಅಥವಾ ಅಂಥದೇ ಉದ್ದೇಶದಿಂದ ಆ ಮೊಹರು, ಫಲಕ, ಇತ್ಯಾದಿಗಳನ್ನು, ಅವು ಖೋಟಾ ಎಂದು ತಿಳಿದಿದ್ದೂ, ಸ್ವಾಧೀನ ಹೊಂದಿರುವುದು. | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 341(3) | ಖೋಟಾ ಎಂದು ತಿಳಿದಿದ್ದು ಯಾವುದೇ ಮೊಹರು, ಫಲಕ ಅಥವಾ ಇತರ ಲಿಖಿತ ಸಲಕರಣೆಯ ಸ್ವಾಧೀನ ಹೊಂದಿರುವುದು | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 341(4) | ಖೋಟಾ ಎಂದು ತಿಳಿದಿದ್ದೂ ಅಥವಾ ಖೋಟಾವೆಂದು ನಂಬಲು ಕಾರಣವಿದ್ದು ಯಾವುದೇ ಮೊಹರು ಫಲಕ ಅಥವಾ ಇತರ ಸಲಕರಣೆಯನ್ನು ಮೋಸದಿಂದ ಅಥವಾ ಅಪ್ರಾಮಾಣಿಕವಾಗಿ ಉಪಯೋಗಿಸುವುದು | ಆತನು ಅಂತಹ ಮೊಹರು ಫಲಕ ಅಥವಾ ಲಿಖಿತ ದಸ್ತಾವೇಜನ್ನು ತಯಾರಿಸಿದ್ದರೆ ಅಥವಾ ಖೋಟಾ ತಯಾರಿಕೆ ಮಾಡಿದ್ದರೆ ಆ ಅಪರಾಧಕ್ಕೆ ಇರುವಂಥದ್ದೆ. | ಸಂಜ್ಞೇಯ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 342(1) | ಪ್ರಕರಣ 338ರಲ್ಲಿ ವಿವರಿಸಿರುವಂಥ ದಸ್ತಾವೇಜುಗಳನ್ನು ಅಧಿಪ್ರಮಾಣನಗೊಳಿಸುವುದಕ್ಕಾಗಿ ಬಳಸುವ ಸಾಧನ ಅಥವಾ ಚಿಹ್ನೆಯ ಖೋಟಾ ತಯಾರಿಕೆ ಅಥವಾ ಖೋಟಾ ಚಿಹ್ನೆ ಇರುವ ವಸ್ತುವನ್ನು ಇಟ್ಟುಕೊಂಡಿರುವುದು | ಆಜೀವ ಕಾರಾವಾಸ ಅಥವಾ 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 342(2) | ಪ್ರಕರಣ 338ರಲ್ಲಿ ವಿವರಿಸಿರುವಂಥ ದಸ್ತಾವೇಜುಗಳಲ್ಲದ ಇತರ ದಸ್ತಾವೇಜುಗಳನ್ನು ಅಧಿಪ್ರಮಾಣನಗೊಳಿಸುವುದಕ್ಕಾಗಿ ಬಳಸುವ ಸಾಧನ ಅಥವಾ ಚಿಹ್ನೆಯ ಖೋಟಾ ತಯಾರಿಕೆ ಅಥವಾ ಖೋಟಾ ಚಿಹ್ನೆ ಇರುವ ವಸ್ತುವನ್ನು ಇಟ್ಟುಕೊಂಡಿರುವುದು | 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 343 | ಮರಣಶಾಸನ, ಮುಂತಾದವನ್ನು ಮೋಸದಿಂದ ನಾಶಪಡಿಸುವುದು ಅಥವಾ ವಿರೂಪಗೊಳಿಸುವುದು ಅಥವಾ ನಾಶಪಡಿಸಲು ಅಥವಾ ವಿರೂಪಗೊಳಿಸಲು ಪ್ರಯತ್ನಿಸುವುದು ಅಥವಾ ಬಚ್ಚಿಡುವುದು. | ಆಜೀವ ಕಾರಾವಾಸ ಅಥವಾ 7 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 344 | ಸುಳ್ಳು ಲೆಕ್ಕಪತ್ರಗಳನ್ನು ಬರೆಯುವುದು. | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 345(3) | ಯಾರೇ ವ್ಯಕ್ತಿಗೆ ಮೋಸ ಮಾಡಲು ಅಥವಾ ಹಾನಿ ಉಂಟು ಮಾಡಲು ಸುಳ್ಳು ಸ್ವತ್ತು ಗುರುತನ್ನು ಉಪಯೋಗಿಸುವುದು. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 346 | ಕ್ಷತಿಯನ್ನುಂಟು ಮಾಡುವ ಉದ್ದೇಶದಿಂದ ಸ್ವತ್ತು ಗುರುತನ್ನು ತೆಗೆದು ಹಾಕುವುದು, ನಾಶಗೊಳಿಸುವುದು ಅಥವಾ ವಿರೂಪಗೊಳಿಸುವುದು. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 347(1) | ಹಾನಿ ಅಥವಾ ಕ್ಷತಿಯುಂಟು ಮಾಡುವ ಉದ್ದೇಶದಿಂದ ಇನ್ನೊಬ್ಬನು ಬಳಸುವ ಸ್ವತ್ತು ಗುರುತನ್ನು ಖೋಟಾ ತಯಾರಿ ಮಾಡುವುದು. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 347(2) | ಲೋಕ ನೌಕರನು ಉಪಯೋಗಿಸಿದ ಸ್ವತ್ತು ಗುರುತನ್ನು ಅಥವಾ ಯಾವುದೇ ಸ್ವತ್ತಿನ ತಯಾರಿಕೆ, ಗುಣ, ಇತ್ಯಾದಿಗಳನ್ನು ನಮೂದಿಸಲು ಅವನು ಉಪಯೋಗಿಸುವ ಯಾವುದೇ ಗುರುತನ್ನು ಖೋಟಾ ತಯಾರಿ ಮಾಡುವುದು. | 3 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 348 | ಯಾವುದೇ ಸರ್ಕಾರಿ ಅಥವಾ ಖಾಸಗಿ ಸ್ವತ್ತು ಗುರುತನ್ನು ಖೋಟಾ ತಯಾರಿ ಮಾಡಲು ಯಾವುದೇ ಅಚ್ಚನ್ನು, ಪಟ್ಟಿಕೆಯನ್ನು ಅಥವಾ ಇತರ ಉಪಕರಣವನ್ನು ಮೋಸದಿಂದ ತಯಾರು ಮಾಡುವುದು ಅಥವಾ ಸ್ವಾಧೀನ ಹೊಂದಿರುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 349 | ಖೋಟಾ ಸ್ವತ್ತು ಗುರುತು ಹಾಕಿದ ಸರಕನ್ನು ಗೊತ್ತಿದ್ದೂ ಮಾರಾಟ ಮಾಡುವುದು. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 350(1) | ಸರಕು ಇರುವ ಯಾವುದೇ ಪ್ಯಾಕೇಜ್ ಅಥವಾ ಧಾರಕದ ಮೇಲೆ ಅದರಲ್ಲಿರದಿರುವ ಸರಕುಗಳು ಅದರಲ್ಲಿವೆಯೆಂದು ನಂಬಿಸುವ ಉದ್ದೇಶದಿಂದ, ಮೋಸ ಮಾಡಿ ಸುಳ್ಳು ಗುರುತನ್ನು ಹಾಕುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 350(2) | ಅಂಥ ಯಾವುದೇ ಸುಳ್ಳು ಗುರುತನ್ನು ಬಳಸುವುದು. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 351(2) | ಆಪರಾಧಿಕ ಭಯೋತ್ಪಾದನೆ. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 351(3) | ಮರಣ ಅಥವಾ ತೀವ್ರ ಗಾಯ, ಇತ್ಯಾದಿಗಳನ್ನು ಉಂಟುಮಾಡುವುದಕ್ಕಾಗಿ ಬೆದರಿಕೆಯನ್ನು ಹಾಕಿದ್ದರೆ. | 7 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 351(4) | ಅನಾಮಧೇಯ ಸಂವಹನದ ಮೂಲಕ ಅಥವಾ ಯಾರಿಂದ ಬೆದರಿಕೆಯನ್ನು ಕಳುಹಿಸಲಾಗುತ್ತಿದೆ ಎಂಬುದನ್ನು ಮರೆಮಾಚಲು ಮುನ್ನೆಚ್ಚರಿಕೆ ವಹಿಸುವ ಆಪರಾಧಿಕ ಭಯೋತ್ಪಾದನೆಯನ್ನು ಮಾಡುವುದು. | 351(1)ನೇ ಪ್ರಕರಣದ ಮೇರೆಗಿನ ದಂಡನೆಯ ಜೊತೆಗೆ 2 ವರ್ಷಗಳ ಕಾರಾವಾಸ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 352 | ಶಾಂತಿ ಭಂಗವನ್ನು ಮಾಡಲು ಉದ್ರೇಕಿಸುವುದಕ್ಕಾಗಿ ಅವಮಾನ. | 2 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 353(1) | ದಂಗೆಯ ಅಥವಾ ಸಾರ್ವಜನಿಕ ಶಾಂತಿಗೆ ವಿರುದ್ಧವಾದ ಅಪರಾಧ ಮಾಡುವ ಉದ್ದೇಶದಿಂದ ಪ್ರಚಾರ ಮಾಡಲಾದ ಸುಳ್ಳು ಹೇಳಿಕೆ, ವದಂತಿ, ಇತ್ಯಾದಿ. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 353(2) | ಬೇರೆ ಬೇರೆ ವರ್ಗಗಳ ನಡುವೆ ವೈರ, ದ್ವೇಷ ಅಥವಾ ವೈಮನಸ್ಸನ್ನು ಉಂಟುಮಾಡುವ ಉದ್ದೇಶದಿಂದ ಪ್ರಚಾರ ಮಾಡಲಾದ ಸುಳ್ಳು ಹೇಳಿಕೆ, ವದಂತಿ, ಇತ್ಯಾದಿ. | 3 ವರ್ಷಗಳ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 353(3) | ವೈರ, ದ್ವೇಷ ಅಥವಾ ವೈಮನಸ್ಸು ಹುಟ್ಟಿಸುವ ಉದ್ದೇಶದಿಂದ ಪೂಜಾಸ್ಥಳ, ಇತ್ಯಾದಿಯಲ್ಲಿ ಪ್ರಚಾರ ಮಾಡಲಾದ ಸುಳ್ಳು ಹೇಳಿಕೆ ವದಂತಿ, ಇತ್ಯಾದಿ. | 5 ವರ್ಷಗಳ ಕಾರಾವಾಸ ಮತ್ತು ಜುಲ್ಮಾನೆ. | ಸಂಜ್ಞೇಯ. | ಜಾಮೀನೀಯವಲ್ಲ | ಯಾರೇ ಮ್ಯಾಜಿಸ್ಟ್ರೇಟ್ |
| 354 | ದೈವೀ ಅವಕೃಪೆಗೆ ಗುರಿಯಾಗುವನೆಂದು ವ್ಯಕ್ತಿಯು ನಂಬುವಂತೆ ಮಾಡಿ ಮಾಡಿದ ಕೃತ್ಯ. | 1 ವರ್ಷದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 355 | ಸಾರ್ವಜನಿಕ ಸ್ಥಳ, ಇತ್ಯಾದಿಯಲ್ಲಿ ಪಾನಮತ್ತ ಸ್ಥಿತಿಯಲ್ಲಿ ಕಾಣಿಸಿಕೊಳ್ಳುವುದು ಮತ್ತು ಯಾರೇ ವ್ಯಕ್ತಿಗೆ ಕಿರುಕುಳ ಕೊಡುವುದು. | 24 ಗಂಟೆಗಳ ಸಾದಾ ಕಾರಾವಾಸ ಅಥವಾ 1000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ ಅಥವಾ ಸಮುದಾಯ ಸೇವೆ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |
| 356(2) | ರಾಷ್ಟ್ರಪತಿ ಅಥವಾ ಉಪ-ರಾಷ್ಟ್ರಪತಿ ಅಥವಾ ರಾಜ್ಯದ ರಾಜ್ಯಪಾಲ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಮಂತ್ರಿಗೆ ಅವನು ತನ್ನ ಪದೀಯ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಆದ ಮಾನಹಾನಿಯ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರು ಮಾಡಿದ ದೂರಿನ ಮೇಲೆ. | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ ಅಥವಾ ಸಮುದಾಯ ಸೇವೆ. | ಸಂಜ್ಞೇಯವಲ್ಲ. | ಜಾಮೀನೀಯ | ಸೆಷನ್ ನ್ಯಾಯಾಲಯ |
| | ಇತರ ಯಾವುದೇ ಸಂದರ್ಭದಲ್ಲಿ ಮಾನಹಾನಿ. | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ ಅಥವಾ ಸಮುದಾಯ ಸೇವೆ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |

| | | | | | |
|---|---|---|---|---|---|
| 356(3) | ರಾಷ್ಟ್ರಪತಿ ಅಥವಾ ಉಪ-ರಾಷ್ಟ್ರಪತಿ ಅಥವಾ ರಾಜ್ಯದ ರಾಜ್ಯಪಾಲ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಮಂತ್ರಿಗೆ, ಅವನು ತನ್ನ ಪದೀಯ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಆದ ಮಾನಹಾನಿಯ ವಿಷಯವನ್ನು ಅದು ಮಾನ ಹಾನಿಕರವಾದುದೆಂದು ಗೊತ್ತಿದ್ದರೂ ಮುದ್ರಿಸುವುದರ ಅಥವಾ ಕೆತ್ತುವುದರ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರನು ಮಾಡಿದ ದೂರಿನ ಮೇಲೆ. | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಸೆಷನ್ ನ್ಯಾಯಾಲಯ |
| | ಇತರ ಯಾವುದೇ ಸಂದರ್ಭದಲ್ಲಿ ಮಾನಹಾನಿಕರವಾದುದೆಂದು ಗೊತ್ತಿದ್ದರೂ, ಆ ವಿಷಯವನ್ನು ಮುದ್ರಿಸುವುದು ಅಥವಾ ಕೆತ್ತುವುದು. | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 356(4) | ರಾಷ್ಟ್ರಪತಿ ಅಥವಾ ಉಪ-ರಾಷ್ಟ್ರಪತಿ ಅಥವಾ ರಾಜ್ಯದ ರಾಜ್ಯಪಾಲ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಮಂತ್ರಿಗೆ ಅವನು ತನ್ನ ಪದೀಯ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಆದ ಮಾನಹಾನಿಯ ವಿಷಯವನ್ನೊಳಗೊಂಡಿರುವ ಮುದ್ರಿತ ಅಥವಾ ಕೆತ್ತಿದ ವಸ್ತುವನ್ನು ಮಾರಾಟ ಮಾಡುವ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರು ಮಾಡಿದ ದೂರಿನ ಮೇಲೆ. | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಸೆಷನ್ ನ್ಯಾಯಾಲಯ |
| | ಇತರ ಯಾವುದೇ ಸಂದರ್ಭದಲ್ಲಿ ಮಾನಹಾನಿಕರ ವಿಷಯವನ್ನೊಳಗೊಂಡಿರುವ ಮುದ್ರಿತ ಅಥವಾ ಕೆತ್ತಿದ ವಸ್ತುವನ್ನು, ಅದು ಅಂಥ ವಿಷಯವನ್ನು ಒಳಗೊಂಡಿದೆಯೆಂದು ಗೊತ್ತಿದ್ದರೂ ಮಾರಾಟ ಮಾಡುವುದು. | 2 ವರ್ಷಗಳ ಸಾದಾ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ |
| 357 | ಚಿಕ್ಕ ವಯಸ್ಸಿನ, ಅಸ್ವಸ್ಥಚಿತ್ತದ ಅಥವಾ ಕಾಯಿಲೆಯ ಕಾರಣದಿಂದ ಅಸಹಾಯಕನಾಗಿರುವ ವ್ಯಕ್ತಿಗೆ ಆರೈಕೆ ಮಾಡಲು ಅಥವಾ ಅವನ ಅಗತ್ಯಗಳನ್ನು ಪೂರೈಸಲು ಬದ್ಧನಾಗಿದ್ದು ಸ್ವಯಿಚ್ಛೆಯಿಂದ ಹಾಗೆ ಮಾಡದಿರುವುದು. | 3 ತಿಂಗಳ ಕಾರಾವಾಸ ಅಥವಾ 5000 ರೂಪಾಯಿಗಳ ಜುಲ್ಮಾನೆ ಅಥವಾ ಅವೆರಡೂ. | ಸಂಜ್ಞೇಯವಲ್ಲ. | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

| **II.- ಇತರ ಕಾನೂನುಗಳ ವಿರುದ್ಧ ಅಪರಾಧಗಳ ವರ್ಗೀಕರಣ.** | | | |
|---|---|---|---|
| **ಅಪರಾಧ** | **ಸಂಜ್ಞೇಯ ಅಥವಾ ಸಂಜ್ಞೇಯವಲ್ಲ** | **ಜಾಮೀನೀಯ ಅಥವಾ ಜಾಮೀನೀಯವಲ್ಲ** | **ಅಧಿವಿಚಾರಣೆ ಮಾಡಬಹುದಾದ ನ್ಯಾಯಾಲಯ.** |

| | | | |
|---|---|---|---|
| ಮರಣದಂಡನೆ, ಆಜೀವ ಕಾರಾವಾಸ ಅಥವಾ 7 ವರ್ಷಗಳಿಗಿಂತ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ. | ಸಂಜ್ಞೇಯ. | ಜಾಮೀನೀಯವಲ್ಲ | ಸೆಷನ್ ನ್ಯಾಯಾಲಯ. |
| 3 ಮತ್ತು ಅದಕ್ಕಿಂತ ಹೆಚ್ಚು ವರ್ಷಗಳ ಆದರೆ 7 ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ದಂಡನೀಯವಾಗಿದ್ದರೆ. | ಸಂಜ್ಞೇಯ. | ಜಾಮೀನೀಯವಲ್ಲ | ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್. |
| 3 ವರ್ಷಗಳಿಗಿಂತ ಕಡಿಮೆ ಅವಧಿಯ ಕಾರಾವಾಸ ಅಥವಾ ಕೇವಲ ಜುಲ್ಮಾನೆಯಿಂದ ಮಾತ್ರ ದಂಡನೀಯವಾಗಿದ್ದರೆ. | ಸಂಜ್ಞೇಯ | ಜಾಮೀನೀಯ | ಯಾರೇ ಮ್ಯಾಜಿಸ್ಟ್ರೇಟ್ |

**ಎರಡನೇ ಅನುಸೂಚಿ**

**(522ನೇ ಪ್ರಕರಣವನ್ನು ನೋಡಿ)**

**ನಮೂನೆ ಸಂಖ್ಯೆ. 1**

**ಪೊಲೀಸರಿಂದ ಹಾಜರಾತಿಗಾಗಿ ನೋಟೀಸ್**

**[ 35(3)ನೇ ಪ್ರಕರಣವನ್ನು ನೋಡಿ]**

ಕ್ರಮ ಸಂ. ------------- ಪೊಲೀಸ್ ಠಾಣೆ ---------

ಗೆ,

-------------

(ಆಪಾದಿತನ/ ನೋಟೀಸ್‌ದಾರನ ಹೆಸರು)

-----------

(ಕೊನೆಯ ತಿಳಿದಿರುವ ವಿಳಾಸ)ದ

---------------

[ದೂರವಾಣಿ ಸಂಖ್ಯೆ/ ಇ-ಮೇಲ್ ಐಡಿ (ಯಾವುದಾದರೂ ಇದ್ದರೆ)]

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ 35ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ, ಈ ಮೂಲಕ ನಿಮಗೆ ತಿಳಿಸುವುದೇನೆಂದರೆ, ನಾನು -------- ಪೊಲೀಸ್ ಠಾಣೆಯಲ್ಲಿ ------- ರಲ್ಲಿ ನೋಂದಾಯಿತವಾದ ------ ದಿನಾಂಕದ ------- ಮೊಕದ್ದಮೆ ಸಂಖ್ಯೆಯ ಪ್ರಥಮ ಮಾಹಿತಿ ವರದಿಯ ತನಿಖೆಯ ಅವಧಿಯಲ್ಲಿ ಪ್ರಸ್ತುತ ವಿಚಾರಣೆಯ ಸಂಬಂಧದಲ್ಲಿ ನಿಮ್ಮ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಖಚಿತಪಡಿಸಿಕೊಳ್ಳಲು ನಿಮ್ಮನ್ನು ಪ್ರಶ್ನಿಸಲು ಸಮಂಜಸವಾದ ಕಾರಣಗಳಿವೆ ಎಂದು ತಿಳಿದು ಬಂದಿದೆ. ಆದ್ದರಿಂದ, ನೀವು ------ ರಂದು ಬೆಳಗ್ಗೆ ----- ಗಂಟೆಯಿಂದ ಮಧ್ಯಾಹ್ನ ----- ಗಂಟೆಯವರೆಗೆ ನನ್ನ ಮುಂದೆ ಹಾಜರಾಗುವುದಕ್ಕೆ ನಿರ್ದೇಶಿಸಿದೆ.

ಪೊಲೀಸ್ ಠಾಣೆ

ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಹೆಸರು ಮತ್ತು ಪದನಾಮ

(ಮೊಹರು)

******

**ನಮೂನೆ ಸಂಖ್ಯೆ. 2**

**ಆಪಾದಿತ ವ್ಯಕ್ತಿಗೆ ಸಮನ್**

**(63ನೇ ಪ್ರಕರಣವನ್ನು ನೋಡಿ)**

ಗೆ, -------------(ಆಪಾದಿತನ ಹೆಸರು) ----------- (ವಿಳಾಸ)ದ

--------------- ಆರೋಪಣೆಗೆ (ಆರೋಪಿತ ಅಪರಾಧವನ್ನು, ಸಂಕ್ಷಿಪ್ತವಾಗಿ ವಿವರಿಸಿ) ಉತ್ತರಿಸಲು ನೀವು ಹಾಜರಾಗುವುದು ಅವಶ್ಯವಾದುದರಿಂದ, ನೀವು ಖುದ್ದಾಗಿ ಅಥವಾ ಸಂದರ್ಭಾನುಸಾರ ನ್ಯಾಯವಾದಿಯ ಮೂಲಕ) ---------- (ಮ್ಯಾಜಿಸ್ಟ್ರೇಟ್‌ನ) ಮುಂದೆ ------------ ದಿನಾಂಕದಂದು ಹಾಜರಾಗುವಂತೆ ಈ ಮೂಲಕ ಅಗತ್ಯಪಡಿಸಲಾಗಿದೆ. ಇದಕ್ಕೆ ತಪ್ಪಕೂಡದು.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 3**

**ದಸ್ತಗಿರಿಯ ವಾರಂಟ್**

**(72ನೇ ಪ್ರಕರಣವನ್ನು ನೋಡಿ)**

ಗೆ, -------- (ವಾರಂಟನ್ನು ಜಾರಿಗೊಳಿಸುವ ವ್ಯಕ್ತಿ ಅಥವಾ ವ್ಯಕ್ತಿಗಳ ಹೆಸರು ಮತ್ತು ಪದನಾಮ),

------------- (ವಿಳಾಸ)ದ ------------- (ಆಪಾದಿತನ ಹೆಸರು) ಅಪರಾಧದ ಆರೋಪಣೆಗೆ ಗುರಿಯಾಗಿರುವುದರಿಂದ ಸದರಿ ------------- ನನ್ನು ದಸ್ತಗಿರಿ ಮಾಡಲು ಮತ್ತು ನನ್ನ ಮುಂದೆ ಹಾಜರುಪಡಿಸಲು ನಿಮಗೆ ಈ ಮೂಲಕ ನಿರ್ದೇಶಿಸಲಾಗಿದೆ. ಇದಕ್ಕೆ ತಪ್ಪಕೂಡದು.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

(73ನೇ ಪ್ರಕರಣವನ್ನು ನೋಡಿ)

ಈ ವಾರಂಟಿಗೆ ಈ ಕೆಳಕಂಡಂತೆ ಹಿಂಬರಹವನ್ನು ಮಾಡಬಹುದು:-

ಸದರಿ ---------- ಎಂಬವನು, ತಾನು -----------ರೂಪಾಯಿಗಳಿಗೆ ----------- ರೂಪಾಯಿಗಳಿಗಾಗಿ ಒಬ್ಬ ಜಾಮೀನುದಾರನೊಂದಿಗೆ (ಅಥವಾ ________ ರೂಪಾಯಿಗಳ ಮೊತ್ತಕ್ಕೆ ಒಬ್ಬರಂತೆ ಇಬ್ಬರು ಜಾಮೀನುದಾರರೊಂದಿಗೆ) ----------- ದಿನಾಂಕದಂದು ನನ್ನ ಮುಂದೆ ಹಾಜರಾಗಲು ಮತ್ತು ನಾನು ಅನ್ಯಥಾ ನಿರ್ದೇಶಿಸುವವರೆಗೆ ಹಾಗೆ ಹಾಜರಾಗುತ್ತಿರಲು ಬಂಧಪತ್ರ ಬರೆದುಕೊಟ್ಟರೆ, ಅವನನ್ನು ಬಿಡುಗಡೆ ಮಾಡಬಹುದು.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 4**

**ವಾರಂಟಿನ ಮೇರೆಗೆ ದಸ್ತಗಿರಿ ಮಾಡಿದ ತರುವಾಯ ಬಂಧಪತ್ರ ಮತ್ತು ಜಾಮೀನು ಬಂಧಪತ್ರ**

**(83ನೇ ಪ್ರಕರಣವನ್ನು ನೋಡಿ)**

-------- ಆರೋಪಣೆಗೆ ಉತ್ತರ ನೀಡಲು, ನನ್ನ ಹಾಜರಾತಿಯನ್ನು ಒತ್ತಾಯಪಡಿಸಿ ಹೊರಡಿಸಲಾದ ವಾರಂಟಿನ ಮೇರೆಗೆ --------- ಯ ಜಿಲ್ಲಾ ಮ್ಯಾಜಿಸ್ಟ್ರೇಟರ (ಅಥವಾ ಸಂದರ್ಭಾನುಸಾರ) ಹಾಜರುಪಡಿಸಲಾದ ---------- (ಹೆಸರಿನ) ನಾನು, --------- ದಿನಾಂಕದಂದು, ನ್ಯಾಯಾಲಯದಲ್ಲಿ ಹಾಜರಾಗಿ, ಆರೋಪಣೆಗೆ ಉತ್ತರಿಸಲು ಮತ್ತು ನ್ಯಾಯಾಲಯವು ಅನ್ಯಥಾ ನಿರ್ದೇಶಿಸುವವರೆಗೆ ಹಾಜರಾಗುತ್ತಿರಲು ಬದ್ಧನಾಗಿರುತ್ತೇನೆ ಮತ್ತು ನಾನು ಇದರಂತೆ ಮಾಡಲು ತಪ್ಪಿದ್ದಲ್ಲಿ --------- ರೂಪಾಯಿಗಳ ಮೊಬಲಗನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಕೊಡಲು ನಾನು ಬದ್ಧನಾಗಿರುತ್ತೇನೆ.

20____ರ _______ನ__________ನೇ ದಿನಾಂಕ.

(ಸಹಿ)

ಯಾವ ಆರೋಪಣೆಯ ಮೇಲೆ ------ ನನ್ನ ದಸ್ತಗಿರಿ ಮಾಡಲಾಗಿದೆಯೋ, ಆ ಆರೋಪಣೆಗೆ ಉತ್ತರಿಸಲು--------- ದಿನಾಂಕದಂದು --------------- ನ್ಯಾಯಾಲಯದಲ್ಲಿ ---------- ಮುಂದೆ ಅವನು ಹಾಜರಾಗಲು ಮತ್ತು ನ್ಯಾಯಾಲಯವು ಅನ್ಯಥಾ ನಿರ್ದೇಶಿಸುವವರೆಗೆ ಹಾಗೆ ಹಾಜರಾಗಲು ಅವನಿಗೆ ನಾನು ಜಾಮೀನುದಾರನಾಗಿರುವೆನೆಂದು ಈ ಮೂಲಕ ಘೋಷಿಸುತ್ತೇನೆ ಮತ್ತು ಅವನು ಅದಕ್ಕೆ ತಪ್ಪಿದರೆ ------------ ರೂಪಾಯಿಗಳ ಮೊಬಲಗನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ನಾನು ಬದ್ಧನಾಗಿರುತ್ತೇನೆ.

20____ರ _______ನ__________ನೇ ದಿನಾಂಕ.

(ಸಹಿ)

******

## ನಮೂನೆ ಸಂಖ್ಯೆ. 5

## ಆಪಾದಿತ ವ್ಯಕ್ತಿಯ ಹಾಜರಾತಿಯನ್ನು ಅಗತ್ಯಪಡಿಸುವ ಉದ್ಘೋಷಣೆ.

## (84ನೇ ಪ್ರಕರಣವನ್ನು ನೋಡಿ)

-------(ಹೆಸರು, ವಿವರ ಮತ್ತು ವಿಳಾಸ) ಎಂಬವನು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ--------- ಪ್ರಕರಣದ ಮೇರೆಗೆ ದಂಡನೀಯವಾದ --------- ಅಪರಾಧವನ್ನು ಮಾಡಿರುವನೆಂದು (ಅಥವಾ ಮಾಡಿರಬಹುದೆಂಬ ಸಂಶಯದ ಮೇಲೆ) ನನಗೆ ದೂರು ಬಂದಿರುವುದರಿಂದ ಮತ್ತು ಅದರ ಮೇಲೆ ಹೊರಡಿಸಲಾದ ದಸ್ತಗಿರಿ ವಾರಂಟ್ ಸದರಿ ವ್ಯಕ್ತಿ -------------(ಹೆಸರು)ಯು ಸಿಗಲಿಲ್ಲವೆಂಬ ಲಿಖಿತದೊಂದಿಗೆ ವಾಪಸ್ಸಾಗಿರುವುದರಿಂದ ಮತ್ತು ಸದರಿ ವ್ಯಕ್ತಿಯು ------------(ಹೆಸರು) ತಲೆಮರೆಸಿಕೊಂಡಿರುವನೆಂದು (ಅಥವಾ ಸದರಿ ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳಲು ಸ್ವತಃ ಬಚ್ಚಿಟ್ಟುಕೊಂಡಿರುವನೆಂದು);

ನನಗೆ ಮನದಟ್ಟಾಗಿರುವುದರಿಂದ --------- ದ ಸದರಿ ವ್ಯಕ್ತಿಯು ಈ ನ್ಯಾಯಾಲಯದ ಮುಂದೆ ಅಥವಾ ನನ್ನ ಮುಂದೆ ------------(ಸ್ಥಳ) ದಲ್ಲಿ ------- ದಿನಾಂಕದಂದು ಸದರಿ ದೂರಿಗೆ ಉತ್ತರಿಸಲು ಹಾಜರಾಗಬೇಕೆಂದು ಈ ಮೂಲಕ ಉದ್ಘೋಷಿಸಲಾಗಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 6

## ಸಾಕ್ಷಿಯ ಹಾಜರಾತಿಯನ್ನು ಅಗತ್ಯಪಡಿಸುವ ಉದ್ಘೋಷಣೆ.

## (84, 90 ಮತ್ತು 93ನೇ ಪ್ರಕರಣಗಳನ್ನು ನೋಡಿ)

------------ (ಹೆಸರು, ವಿವರ ಮತ್ತು ವಿಳಾಸ) ನು ---------(ಅಪರಾಧವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿ) ಅಪರಾಧವನ್ನು ಮಾಡಿರುವನೆಂದು (ಅಥವಾ ಮಾಡಿರಬಹುದೆಂಬ ಸಂಶಯದ ಮೇಲೆ) ನನಗೆ ದೂರು ಬಂದಿರುವುದರಿಂದ ಮತ್ತು -------- (ಸಾಕ್ಷಿಯ ಹೆಸರು, ವಿವರ ಮತ್ತು ವಿಳಾಸ) ನನ್ನು ಸದರಿ ದೂರಿನ ಬಗ್ಗೆ ವಿಚಾರಣೆ ಮಾಡುವುದಕ್ಕಾಗಿ ಈ ನ್ಯಾಯಾಲಯದ ಮುಂದೆ ಹಾಜರಾಗಲು ಒತ್ತಾಯಪಡಿಸಿ, ವಾರಂಟನ್ನು ಹೊರಡಿಸಲಾಗಿದೆ; ಮತ್ತು ಸದರಿ ವಾರಂಟ್ ಸದರಿ ವ್ಯಕ್ತಿಗೆ -------- (ಸಾಕ್ಷಿಯ ಹೆಸರು) ಜಾರಿ ಮಾಡಲಾಗಲಿಲ್ಲವೆಂದು ಲಿಖಿತದೊಂದಿಗೆ ವಾಪಾಸಾಗಿರುವುದರಿಂದ ಮತ್ತು ಅವನು ತಲೆಮರೆಸಿಕೊಂಡಿರುವನೆಂದು (ಅಥವಾ ಸದರಿ ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳಲು ಸ್ವತಃ ಬಚ್ಚಿಟ್ಟುಕೊಂಡಿರುವನೆಂದು) ನನಗೆ ಮನದಟ್ಟಾಗಿರುವುದರಿಂದ;

ಸದರಿ ವ್ಯಕ್ತಿಯನ್ನು --------(ಹೆಸರು) ------- ದೂರಿಗೆ ಸಂಬಂಧಿಸಿದ --------ಅಪರಾಧದ ಬಗ್ಗೆ ವಿಚಾರಣೆ ಮಾಡುವುದಕ್ಕಾಗಿ ---------- ದಿನಾಂಕದಂದು ------- ಗಂಟೆಗೆ ----------- ನ್ಯಾಯಾಲಯದ ಮುಂದೆ ----------(ಸ್ಥಳ) ದಲ್ಲಿ ಹಾಜರಾಗಬೇಕೆಂದು ಈ ಮೂಲಕ ಉದ್ಘೋಷಿಸಲಾಗಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 7**

**ಸಾಕ್ಷಿಯ ಹಾಜರಾತಿಯನ್ನು ಒತ್ತಾಯಪಡಿಸಲು ಜಪ್ತಿ ಆದೇಶ.**

**(85ನೇ ಪ್ರಕರಣವನ್ನು ನೋಡಿ)**

-----------------ಯ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

ಈ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ದೂರಿನ ಸಂಬಂಧವಾಗಿ ಅಭಿಸಾಕ್ಷ್ಯವನ್ನು ನೀಡುವುದಕ್ಕಾಗಿ ----------- (ಹೆಸರು, ವಿವರ ಮತ್ತು ವಿಳಾಸ)ನ ಹಾಜರಾತಿಯನ್ನು ಒತ್ತಾಯಪಡಿಸಲು ಒಂದು ವಾರಂಟನ್ನು ಯುಕ್ತಬದ್ಧವಾಗಿ ಹೊರಡಿಸಿರುವುದರಿಂದ ಮತ್ತು ಜಾರಿಗೊಳಿಸಲಾಗಲಿಲ್ಲವೆಂಬ ಲಿಖಿತದೊಂದಿಗೆ ಸದರಿ ವಾರಂಟ್ ವಾಪಸಾಗಿರುವುದರಿಂದ ಮತ್ತು ಅವನು ತಲೆ ತಲೆಮರೆಸಿಕೊಂಡಿರುವನೆಂದು (ಅಥವಾ ಸದರಿ ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳಲು ಸ್ವತಃ ಬಚ್ಚಿಟ್ಟುಕೊಂಡಿರುವನೆಂದು) ನನಗೆ ಮನದಟ್ಟಾಗಿರುವುದರಿಂದ ಅದರ ಮೇಲೆ ಸದರಿ -------------------- ಉದ್ಘೋಷಣೆಯಲ್ಲಿ ಉಲ್ಲೇಖಿಸಿದ ಸಮಯದಲ್ಲಿ ಮತ್ತು ಸ್ಥಳದಲ್ಲಿ ಹಾಜರಾಗಿ ಸಾಕ್ಷ್ಯ ನೀಡಬೇಕೆಂದು ಅವನನ್ನು ಅಗತ್ಯಪಡಿಸುವ ಉದ್ಘೋಷಣೆಯನ್ನು ಯುಕ್ತಬದ್ಧವಾಗಿ ಹೊರಡಿಸಿ ಪ್ರಕಟಿಸಲಾಗಿದೆ ಅಥವಾ ಹೊರಡಿಸಿ ಪ್ರಕಟಿಸಲಾಗುತ್ತಿದೆ;

--------------- ಜಿಲ್ಲೆಯೊಳಗೆ ನಿಮಗೆ ದೊರೆಯಬಹುದಾದ --------- ಮೌಲ್ಯದ ಸದರಿ---------------- ಗೆ ಸೇರಿದ ಚರ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳುವ ಮೂಲಕ ಜಪ್ತಿ ಮಾಡಲು ಮತ್ತು ಈ ನ್ಯಾಯಾಲಯದ ಮುಂದಿನ ಆದೇಶವಾಗುವವರೆಗೆ ಸದರಿ ಸ್ವತ್ತನ್ನು ಜಪ್ತಿಯಲ್ಲಿಟ್ಟುಕೊಂಡಿರಲು ಮತ್ತು ಈ ವಾರಂಟನ್ನು ಜಾರಿ ಮಾಡಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಈ ವಾರಂಟನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 8**

**ಆಪಾದಿತ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಪಡಿಸಲು ಜಪ್ತಿ ಆದೇಶ**

**(85ನೇ ಪ್ರಕರಣವನ್ನು ನೋಡಿ)**

ಗೆ, ------------- (ವಾರಂಟನ್ನು ಜಾರಿ ಮಾಡಬೇಕಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಹೆಸರು ಮತ್ತು ಪದನಾಮ)

-------(ಹೆಸರು, ವಿವರ ಮತ್ತು ವಿಳಾಸ) ಎಂಬವನು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ------- ಪ್ರಕರಣದ ಮೇರೆಗೆ ದಂಡನೀಯವಾದ ---------- ಅಪರಾಧವನ್ನು ಮಾಡಿರುವನೆಂದು (ಅಥವಾ ಮಾಡಿರಬಹುದೆಂಬ ಶಂಕೆಯ ಮೇಲೆ) ನನಗೆ ದೂರು ಬಂದಿರುವುದರಿಂದ ಮತ್ತು ಸದರಿ --------(ಹೆಸರು)ನು ಸಿಗುತ್ತಿಲ್ಲವೆಂಬ ಲಿಖಿತದೊಂದಿಗೆ ಆ ಮೇರೆಗೆ ಹೊರಡಿಸಿದ ದಸ್ತಗಿರಿಯ ವಾರಂಟ್ ಹಿಂದಿರುಗಿ ಬಂದುದರಿಂದ; ಮತ್ತು ಸದರಿ ----------(ಹೆಸರು) ಎಂಬವನು ತಲೆಮರೆಸಿಕೊಂಡಿರುವನೆಂದು (ಅಥವಾ ಸದರಿ ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳಲು ಸ್ವತಃ ಬಚ್ಚಿಟ್ಟುಕೊಂಡಿರುವನೆಂದು) ನನಗೆ ಮನದಟ್ಟಾಗಿರುವುದರಿಂದ ಮತ್ತು ಅದರ ಮೇಲೆ ------------ ದಿನಗಳೊಳಗಾಗಿ ಸದರಿ ----------- ನನ್ನು ಅಗತ್ಯಪಡಿಸಿ ಸದರಿ ಆರೋಪಣೆಗೆ ಉತ್ತರಿಸುವುದಾಗಿ ಹಾಜರಾಗಲು ಉದ್ಘೋಷಣೆಯನ್ನು ಯುಕ್ತಬದ್ಧವಾಗಿ ಹೊರಡಿಸಿ, ಪ್ರಕಟಿಸಲಾಗುವುದರಿಂದ ಅಥವಾ ಪ್ರಕಟಿಸಲಾಗುತ್ತಿರುವುದರಿಂದ ಮತ್ತು ಸದರಿ --------- ನು ---------- ಜಿಲ್ಲೆಯಲ್ಲಿಯ --------------- ಗ್ರಾಮದಲ್ಲಿ (ಅಥವಾ ಪಟ್ಟಣದಲ್ಲಿ) ಸರ್ಕಾರಕ್ಕೆ ಕಂದಾಯ ಸಂದಾಯ ಮಾಡುವ ಭೂಮಿಯನ್ನುಳಿದು ಎಂದರೆ ಈ ಕೆಳಕಂಡ ಸ್ವತ್ತನ್ನು ಹೊಂದಿರುವುದರಿಂದ ಮತ್ತು ಅದರ ಜಪ್ತಿಗಾಗಿ ಆದೇಶವಾಗಿರುವುದರಿಂದ;

ನೀವು 85ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಅಥವಾ (ಸಿ) ಖಂಡದಲ್ಲಿ ಅಥವಾ ಅವೆರಡರಲ್ಲೂ* ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸದರಿ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಈ ನ್ಯಾಯಾಲಯದ ಮುಂದಿನ ಆದೇಶವಾಗುವವರೆಗೆ, ಅದನ್ನು ಜಪ್ತಿಯಲ್ಲಿರಿಸಿಕೊಳ್ಳಲು ಮತ್ತು ಅದನ್ನು ಜಾರಿ ಮಾಡಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಈ ವಾರಂಟನ್ನು ಹಿಂದಿರುಗಿಸಲು ನಿಮ್ಮನ್ನು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

* ಜಪ್ತಿಯಾಗುವ ಸ್ವತ್ತಿನ ಸ್ವರೂಪವನ್ನು ಅವಲಂಬಿಸಿ ಅನ್ವಯವಾಗದಿರುವುದನ್ನು ಹೊಡೆದುಹಾಕುವುದು

**ನಮೂನೆ ಸಂಖ್ಯೆ. 9**

**ಜಪ್ತಿ ಮಾಡಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಕಲೆಕ್ಟರನಿಗೆ ಪ್ರಾಧಿಕಾರ ಕೊಡುವ ಆದೇಶ**

**(85ನೇ ಪ್ರಕರಣವನ್ನು ನೋಡಿ)**

-------------------------- ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ/ ಜಿಲ್ಲಾ ಕಲೆಕ್ಟರನಿಗೆ,

(ಹೆಸರು, ವಿವರ ಮತ್ತು ವಿಳಾಸ) --------------ಎಂಬವನು ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ---------- ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿರುವನೆಂಬ (ಅಥವಾ ಮಾಡಿರಬಹುದೆಂಬ ಶಂಕೆಯ ಮೇಲೆ) ನನಗೆ ದೂರು ಬಂದಿರುವುದರಿಂದ ಮತ್ತು ಸದರಿ ---------(ಹೆಸರು) ಎಂಬವನು ಸಿಗುತ್ತಿಲ್ಲವೆಂದು ಆ ಮೇರೆಗೆ ಹೊರಡಿಸಿದ ದಸ್ತಗಿರಿ ವಾರಂಟ್ ಹಿಂದಿರುಗಿ ಬಂದುದರಿಂದ ಮತ್ತು ಸದರಿ ---------- (ಹೆಸರು) ನು ತಲೆಮರೆಸಿಕೊಂಡಿರುವನೆಂದು (ಅಥವಾ ಸದರಿ ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳಲು ಸ್ವತಃ ಬಚ್ಚಿಟ್ಟುಕೊಂಡಿರುವನೆಂದು) ನನಗೆ ಮನದಟ್ಟಾಗಿರುವುದರಿಂದ ಮತ್ತು ಅದರ ಮೇಲೆ ----------------- ದಿನಗಳೊಳಗಾಗಿ ಸದರಿ ಆರೋಪಣೆಗೆ ಉತ್ತರಿಸುವುದಕ್ಕಾಗಿ ಹಾಜರಾಗಲು ಸದರಿ ------------- ನನ್ನು ಅಗತ್ಯಪಡಿಸಿ ಉದ್ಘೋಷಣೆಯನ್ನು ಯುಕ್ತಬದ್ಧವಾಗಿ ಹೊರಡಿಸಿ ಪ್ರಕಟಿಸಲಾಗಿರುವುದರಿಂದ ಅಥವಾ ಹೊರಡಿಸಿ ಪ್ರಕಟಿಸಲಾಗುತ್ತಿರುವುದರಿಂದ ಮತ್ತು ಸದರಿ ------ ನು --------- ಜಿಲ್ಲೆಯಲ್ಲಿಯ --------- ಗ್ರಾಮದಲ್ಲಿ (ಅಥವಾ ಪಟ್ಟಣದಲ್ಲಿ) ಸರ್ಕಾರಕ್ಕೆ ಕಂದಾಯವನ್ನು ಸಂದಾಯ ಮಾಡುವ ನಿರ್ದಿಷ್ಟ ಭೂಮಿಯನ್ನು ಹೊಂದಿರುವುದರಿಂದಲೂ;

85ನೇ ಪ್ರಕರಣದ (4)ನೇ ಉಪಪ್ರಕರಣದ (ಎ) ಅಥವಾ (ಸಿ) ಖಂಡದಲ್ಲಿ ಅಥವಾ ಅವೆರಡರಲ್ಲಿ* ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸದರಿ ಭೂಮಿಯನ್ನು ಜಪ್ತಿ ಮಾಡಿಸಲು ಮತ್ತು ಈ ನ್ಯಾಯಾಲಯದ ಮುಂದಿನ ಆದೇಶವಾಗುವವರೆಗೆ ಜಪ್ತಿಯಲ್ಲಿರಿಸಿಕೊಳ್ಳಲು ಮತ್ತು ಈ ಆದೇಶಕ್ಕನುಸಾರವಾಗಿ ನೀವು ಯಾವ ಕ್ರಮ ಕೈಗೊಂಡಿರುವಿರೆಂಬುದನ್ನು ವಿಳಂಬವಿಲ್ಲದೆ ಪ್ರಮಾಣೀಕರಿಸಲು, ಈ ಮೂಲಕ ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಕೋರಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

* ಅನ್ವಯವಾಗದಿರುವುದನ್ನು ಹೊಡೆದುಹಾಕುವುದು

## ನಮೂನೆ ಸಂಖ್ಯೆ. 10

## ಸಾಕ್ಷಿಯನ್ನು ಕರೆತರಲು ಹೊರಡಿಸಲಾಗುವ ಮೊದಲ ವಾರಂಟ್

## (90ನೇ ಪ್ರಕರಣವನ್ನು ನೋಡಿ)

ಗೆ, --------------- (ವಾರಂಟನ್ನು ಜಾರಿ ಮಾಡಬೇಕಾದ ಪೊಲೀಸ್ ಅಧಿಕಾರಿಯ ಅಥವಾ ಇತರ ವ್ಯಕ್ತಿಯ ಅಥವಾ ವ್ಯಕ್ತಿಗಳ ಹೆಸರು ಮತ್ತು ಪದನಾಮ)

-------------ವಿಳಾಸದ -------------- (ಆಪಾದಿತನ ಹೆಸರು ಮತ್ತು ವಿವರ) ಎಂಬವನು ------------------- ಅಪರಾಧವನ್ನು (ಅಪರಾಧವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿ) ಮಾಡಿರುವನೆಂದು (ಅಥವಾ ಮಾಡಿರಬಹುದೆಂಬ ಸಂಶಯದ ಮೇಲೆ) ನನಗೆ ದೂರು ಬಂದಿರುವುದರಿಂದ ಮತ್ತು ಸದರಿ ದೂರಿನ ಬಗ್ಗೆ ------------(ಸಾಕ್ಷಿಯ ಹೆಸರು ಮತ್ತು ವಿವರ)ನು ಸಾಕ್ಷ್ಯ ನೀಡಬಲ್ಲನೆಂದು ಕಂಡುಬಂದಿರುವುದರಿಂದ ಮತ್ತು ಸದರಿ ದೂರಿನ ವಿಚಾರಣೆಯ ಸಮಯದಲ್ಲಿ ಸಾಕ್ಷಿದಾರನಾಗಿ ಹಾಜರಾಗಬೇಕೆಂದು, ಒತ್ತಾಯಪಡಿಸುವ ಹೊರತು ಅವನು ಹಾಜರಾಗುವುದಿಲ್ಲವೆಂದು ನಂಬಲು ಸಾಕಷ್ಟು ಸರಿಯಾದ ಕಾರಣವಿರುವುದರಿಂದ;

ಸದರಿ ---------------(ಸಾಕ್ಷಿಯ ಹೆಸರು) ನನ್ನು ದಸ್ತಗಿರಿ ಮಾಡಲು ಮತ್ತು ದೂರು ಮಾಡಲಾದ ಅಪರಾಧದ ಬಗ್ಗೆ ವಿಚಾರಣೆ ಮಾಡಲು ------ ದಿನಾಂಕದಂದು -------- ಈ ನ್ಯಾಯಾಲಯದ ಮುಂದೆ ಅವನನ್ನು ಕರೆತರಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ _________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 11**

**ನಿರ್ದಿಷ್ಟ ಅಪರಾಧದ ಸುದ್ದಿ ಬಂದ ಆನಂತರ ಶೋಧಿಸಲು ವಾರಂಟ್**

**(96ನೇ ಪ್ರಕರಣವನ್ನು ನೋಡಿ)**

ಗೆ, ---------------- (ವಾರಂಟನ್ನು ಜಾರಿ ಮಾಡಬೇಕಾದ ಪೊಲೀಸ್ ಅಧಿಕಾರಿಯ ಅಥವಾ ಇತರ ವ್ಯಕ್ತಿಯ ಅಥವಾ ವ್ಯಕ್ತಿಗಳ ಹೆಸರು ಮತ್ತು ಪದನಾಮ)

------------- ಅಪರಾಧವು (ಅಪರಾಧವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿ) ನಡೆದಿರುವುದೆಂದು ----------- (ಅಥವಾ ನಡೆದಿರಬಹುದೆಂಬ ಶಂಕೆಯ ಮೇಲೆ) ನನಗೆ ಮಾಹಿತಿ ಬಂದಿರುವುದರಿಂದ, (ಅಥವಾ ದೂರು ಬಂದಿರುವುದರಿಂದ) ಸದರಿ ------------ಅಪರಾಧದ (ಅಥವಾ ಶಂಕಿತ ಅಪರಾಧದ) ಬಗ್ಗೆ ಈಗ ನಡೆಯುತ್ತಿರುವ (ನಡೆಯಲಿರುವ) ವಿಚಾರಣೆಗೆ -------------(ವಸ್ತುವನ್ನು ಸ್ಪಷ್ಟವಾಗಿ ನಮೂದಿಸಿ) ಹಾಜರುಪಡಿಸುವುದು ಅಗತ್ಯವೆಂದು ಕಂಡುಬಂದಿರುವುದರಿಂದ;

----------------- (ಶೋಧನೆಯು ಸೀಮಿತವಾಗಿರುವ ಮನೆ ಅಥವಾ ಸ್ಥಳ ಅಥವಾ ಅದರ ಭಾಗವನ್ನು ವಿವರಿಸಿ)ಯಲ್ಲಿ ಸದರಿ -------------- (ನಿರ್ದಿಷ್ಟಪಡಿಸಿದ ವಸ್ತು)ವಿಗಾಗಿ ಶೋಧಿಸಲು ಮತ್ತು, ಅದು ದೊರೆತರೆ, ಅದನ್ನು ಈ ನ್ಯಾಯಾಲಯದ ಮುಂದೆ ಕೂಡಲೇ ಹಾಜರುಪಡಿಸಲು ಮತ್ತು ವಾರಂಟ್ ಜಾರಿಯಾದೊಡನೆ ಅದರ ಮೇರೆಗೆ ನೀವು ಏನು ಮಾಡಿದಿರಿ ಎಂಬುದನ್ನು ಪ್ರಮಾಣೀಕರಿಸುವ ಹಿಂಬರಹದ ಜೊತೆಗೆ ಈ ವಾರಂಟನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 12

## ವಸ್ತುವನ್ನು ಇಟ್ಟಿರಬಹುದೆಂದು ಶಂಕಿಸಲಾದ ಸ್ಥಳವನ್ನು ಶೋಧಿಸಲು ವಾರಂಟ್

## (97ನೇ ಪ್ರಕರಣವನ್ನು ನೋಡಿ)

ಗೆ, --------- (ಕಾನ್ಸ್‌ಟೇಬಲಿಗಿಂತ ಮೇಲ್ದರ್ಜೆಯ ಪೊಲೀಸ್ ಅಥವಾ ಅಧಿಕಾರಿಯ ಹೆಸರು ಮತ್ತು ಪದನಾಮ)

ನನಗೆ ಬಂದ ಮಾಹಿತಿಯ ಪ್ರಕಾರ ಮತ್ತು ಆ ಬಗ್ಗೆ ವಿಚಾರಿಸಿದರೆ ಮೇಲೆ --------------(ಮನೆ ಅಥವಾ ಇತರ ಸ್ಥಳವನ್ನು ವಿವರಿಸಿ) ಕಳವು ಮಾಡಿದ ಸ್ವತ್ತನ್ನು ಇಡುವ (ಅಥವಾ ಅದರ ಮಾರಾಟದ ಸ್ಥಳವೆಂದು ಅಥವಾ ಈ ಪ್ರಕರಣದಲ್ಲಿ ಹೇಳಿದ ಎರಡರಲ್ಲೊಂದು ಉದ್ದೇಶಕ್ಕಾಗಿದ್ದರೆ ಈ ಪ್ರಕರಣದ ಶಬ್ದಗಳಲ್ಲಿ ಆ ಉದ್ದೇಶವನ್ನು ವಿವರಿಸಿ) ಉಪಯೋಗಿಸಲಾಗಿದೆ ಎಂದು ನನಗೆ ನಂಬಿಕೆಯುಂಟಾಗಿರುವುದರಿಂದ;

ಸದರಿ ಮನೆ (ಅಥವಾ ಇತರ ಸ್ಥಳವನ್ನು) ಅಗತ್ಯವಾಗತಕ್ಕ ಸಹಾಯದೊಂದಿಗೆ ಪ್ರವೇಶಿಸಲು ಮತ್ತು ಅವಶ್ಯವಾದಲ್ಲಿ, ಆ ಉದ್ದೇಶಕ್ಕಾಗಿ ಯುಕ್ತ ಬಲವನ್ನು ಉಪಯೋಗಿಸಲು ಮತ್ತು ಸದರಿ ಮನೆಯ ಪ್ರತಿಯೊಂದು ಭಾಗವನ್ನು (ಅಥವಾ ಇತರ ಸ್ಥಳವನ್ನು ಅಥವಾ ಶೋಧನೆಯು ಯಾವುದಾದರೂ ಒಂದು ಭಾಗಕ್ಕೆ (ಸೀಮಿತವಾಗಿರುವಲ್ಲಿ, ಆ ಭಾಗವನ್ನು ಸ್ಪಷ್ಟವಾಗಿ ನಮೂದಿಸಿ) ಶೋಧಿಸಲು ಮತ್ತು ಯಾವುದೇ ಸ್ವತ್ತನ್ನು (ಅಥವಾ ಸಂದರ್ಭಾನುಸಾರ, ದಸ್ತಾವೇಜುಗಳನ್ನು ಅಥವಾ ಸ್ಟಾಂಪುಗಳನ್ನು ಅಥವಾ ಮೊಹರುಗಳನ್ನು ಅಥವಾ ನಾಣ್ಯಗಳನ್ನು ಅಥವಾ ಅಶ್ಲೀಲ ವಸ್ತುಗಳನ್ನು) (ಸಂದರ್ಭಾನುಸಾರ ಸೇರಿಸಿ) ಮತ್ತು ಸುಳ್ಳು ಸೃಷ್ಟನೆಯ ದಸ್ತಾವೇಜುಗಳನ್ನು ಅಥವಾ ಖೋಟಾ ಸ್ಟಾಂಪುಗಳು ಅಥವಾ ಖೋಟಾ ಮೊಹರುಗಳನ್ನು ಅಥವಾ ಖೋಟಾ ನಾಣ್ಯಗಳನ್ನು ಅಥವಾ (ಸಂದರ್ಭಾನುಸಾರ) ಖೋಟಾ ಕರೆನ್ಸಿ ನೋಟುಗಳನ್ನು ತಯಾರಿಸಲು ಇಟ್ಟಿರುವರೆಂದು ಸಕಾರಣವಾಗಿ ನೀವು ನಂಬಬಹುದಾದಂಥ ಯಾವುದೇ ಉಪಕರಣಗಳನ್ನು ಮತ್ತು ಸಾಮಗ್ರಿಗಳನ್ನು ಸಹ ವಶಕ್ಕೆ ತೆಗೆದುಕೊಳ್ಳಲು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳಲು ಮತ್ತು ವಾರಂಟನ್ನು ಜಾರಿ ಮಾಡಿದೊಡನೆಯೇ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದಾದಂಥ ಸದರಿ ವಸ್ತುಗಳನ್ನು ಕೂಡಲೇ ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಮತ್ತು ಹಾಗೆ ವಾರಂಟ್ ಜಾರಿಯಾದ ಕೂಡಲೇ ನೀವು ಅದರ ಮೇರೆಗೆ ನೀವು ಏನು ಮಾಡಿದಿರಿ ಎಂಬುದನ್ನು ಪ್ರಮಾಣೀಕರಿಸುವ ಹಿಂಬರಹದ ಜೊತೆಗೆ ಈ ವಾರಂಟನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 13**

**ಶಾಂತಿಪಾಲನೆಗಾಗಿ ಬಂಧಪತ್ರ**

**(125 ಮತ್ತು 126ನೇ ಪ್ರಕರಣಗಳನ್ನು ನೋಡಿ)**

------------(ಸ್ಥಳ)ದ ನಿವಾಸಿಯಾದ -----------(ಹೆಸರು) ನಾನು ----------- ಅವಧಿಯವರೆಗೆ ಅಥವಾ ಈಗ ------------ನ್ಯಾಯಾಲಯದಲ್ಲಿ ನಡೆಯುತ್ತಿರುವ --------- ವಿಷಯದ ಬಗ್ಗೆ ವಿಚಾರಣೆಯು ಮುಗಿಯುವವರೆಗೆ ಶಾಂತಿಯನ್ನು ಪಾಲಿಸಲು ಬಂಧಪತ್ರ ಬರೆದುಕೊಡಬೇಕೆಂದು ಕೇಳಲಾಗಿರುವುದರಿಂದ, ನಾನು ಸದರಿ ಅವಧಿಯಲ್ಲಿ ಅಥವಾ ಸದರಿ ವಿಚಾರಣೆಯು ಮುಗಿಯುವವರೆಗೆ ಶಾಂತಿಭಂಗ ಮಾಡದಿರಲು ಅಥವಾ ಶಾಂತಿ ಭಂಗವನ್ನುಂಟು ಮಾಡಬಹುದಾದ ಯಾವುದೇ ಕೃತ್ಯವನ್ನು ಮಾಡದಿರಲು ಬದ್ಧನಾಗಿರುತ್ತೇನೆ ಮತ್ತು ಹಾಗೆ ಮಾಡಲು ತಪ್ಪಿದ್ದಲ್ಲಿ, ನಾನು -------------- ರೂಪಾಯಿಗಳ ಮೊಬಲಗುಗಳನ್ನು ಸರ್ಕಾರಕ್ಕೆ ಕೊಡಲು ಈ ಮೂಲಕ ಬದ್ಧನಾಗಿರುತ್ತೇನೆ.

20____ರ _______ನ__________ನೇ ದಿನಾಂಕ.

(ಸಹಿ)

******

## ನಮೂನೆ ಸಂಖ್ಯೆ 14

### ಸದ್ವರ್ತನೆಗಾಗಿ ಬಂಧಪತ್ರ

### (127, 128 ಮತ್ತು 129ನೇ ಪ್ರಕರಣಗಳನ್ನು ನೋಡಿ)

----------(ಸ್ಥಳ)ದ ನಿವಾಸಿಯಾದ ---------------(ಹೆಸರು) ನಾನು ------------- ಅವಧಿಯವರೆಗೆ (ಅವಧಿಯನ್ನು ಉಲ್ಲೇಖಿಸಿ ಅಥವಾ ಈಗ ------------- ನ್ಯಾಯಾಲಯದಲ್ಲಿ ನಡೆಯುತ್ತಿರುವ -------------- ವಿಷಯದ ಬಗ್ಗೆ ವಿಚಾರಣೆಯು ಮುಗಿಯುವವರೆಗೆ ಸರ್ಕಾರದ ಬಗ್ಗೆ ಮತ್ತು ಭಾರತದ ಎಲ್ಲ ನಾಗರಿಕರ ಬಗ್ಗೆ ಸದ್ವರ್ತನೆಯಿಂದಿರುತ್ತೇನೆಂದು ಬಂಧಪತ್ರ ಬರೆದುಕೊಡಬೇಕೆಂದು ಕೇಳಲಾಗಿರುವುದರಿಂದ ನಾನು ಸದರಿ ಅವಧಿಯಲ್ಲಿ ಅಥವಾ ಸದರಿ ವಿಚಾರಣೆಯು ಮುಗಿಯುವವರೆಗೆ ಸರ್ಕಾರದ ಬಗ್ಗೆ ಮತ್ತು ಭಾರತದ ಎಲ್ಲ ನಾಗರಿಕರ ಬಗ್ಗೆ ಸದ್ವರ್ತನೆಯಿಂದಿರಲು ಬದ್ಧನಾಗಿರುತ್ತೇನೆ. ಹಾಗೆ ಮಾಡಲು ತಪ್ಪಿದರೆ ನಾನು ಸರ್ಕಾರಕ್ಕೆ ------------- ರೂಪಾಯಿಗಳ ಮೊಬಲಗನ್ನು ಕೊಡಲು ಈ ಮೂಲಕ ಬದ್ಧನಾಗಿರುತ್ತೇನೆ.

20____ರ _______ನ__________ನೇ ದಿನಾಂಕ.

(ನ್ಯಾಯಲಯದ ಮೊಹರು)

(ಸಹಿ)

(ಜಾಮೀನುದಾರ ಸಹಿತವಾದ ಬಂಧಪತ್ರವನ್ನು ಬರೆದುಕೊಡಬೇಕಾಗಿರುವಲ್ಲಿ, ಸೇರಿಸಿ)

ಸದರಿ ಅವಧಿಯಲ್ಲಿ ಅಥವಾ ಸದರಿ ವಿಚಾರಣೆಯು ಮುಗಿಯುವವರೆಗೆ ಸದರಿ ----------- ನು ಸರ್ಕಾರದ ಬಗ್ಗೆ ಮತ್ತು ಭಾರತದ ಎಲ್ಲ ನಾಗರಿಕರ ಬಗ್ಗೆ ಸದ್ವರ್ತನೆಯಿಂದಿರುವನೆಂಬುದಕ್ಕೆ ನಾವು ಜಾಮೀನುದಾರರಾಗಿರುತ್ತೇವೆಂದು ಮತ್ತು ಅವನು ಹಾಗೆ ಮಾಡಲು ತಪ್ಪಿದರೆ ನಾವು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಸರ್ಕಾರಕ್ಕೆ --------------- ರೂಪಾಯಿಗಳ ಮೊಬಲಗನ್ನು ಕೊಡಲು ಈ ಮೂಲಕ ಬದ್ಧರಾಗಿರುತ್ತೇವೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 15**

**ಶಾಂತಿ ಭಂಗವಾಗಬಹುದೆಂಬ ಸುದ್ದಿ ಬಂದ ಮೇಲೆ ಸಮನುಗಳು**

**(132ನೇ ಪ್ರಕರಣವನ್ನು ನೋಡಿ)**

ಗೆ,------------ ದ ------------------

ನೀವು ಶಾಂತಿ ಭಂಗ ಮಾಡುವ ಸಂಭವವಿದೆಯೆಂದು (ಅಥವಾ ಶಾಂತಿ ಭಂಗವನ್ನುಂಟು ಮಾಡಬಹುದಾದ ಕೃತ್ಯವನ್ನು ನಡೆಸಬಹುದೆಂದು ನಂಬಲರ್ಹವಾದ ಸುದ್ದಿಯ ಮೂಲಕ (ಸುದ್ದಿಯ ಸಾರವನ್ನು ವಿವರಿಸಿ) ನನಗೆ ಕಂಡುಬರುವಂತೆ ಮಾಡಿರುವುದರಿಂದ ------------- 20-----ರಂದು ಬೆಳಗಿನ ಹತ್ತು ಗಂಟೆಗೆ ------------- ಮ್ಯಾಜಿಸ್ಟ್ರೇಟರ ಕಚೇರಿಯಲ್ಲಿ ಖುದ್ದಾಗಿ (ಅಥವಾ ಯುಕ್ತಬದ್ಧವಾಗಿ ಅಧಿಕೃತ ಏಜೆಂಟನ ಮೂಲಕ) ಹಾಜರಾಗಿ, -------------- ಅವಧಿಯವರೆಗೆ ಶಾಂತಿಪಾಲನೆ ಮಾಡುವುದಕ್ಕಾಗಿ ------------ ರೂಪಾಯಿಗಳಿಗಾಗಿ ಬಂಧಪತ್ರವನ್ನು ಬರೆದುಕೊಡಲು (ಜಾಮೀನುದಾರರ ಅಗತ್ಯವಿದ್ದರೆ ಸೇರಿಸಿ ಮತ್ತು ಒಬ್ಬ ಸಂದರ್ಭಾನುಸಾರ ಇಬ್ಬರು) ಜಾಮೀನುದಾರ (ಅಥವಾ ಜಾಮೀನುದಾರರು) --------- ರೂಪಾಯಿಗಳ ಮೊಬಲಿಗಾಗಿ ಸಂದರ್ಭಾನುಸಾರ ಒಬ್ಬರಿಗಿಂತ ಹೆಚ್ಚಾಗಿದ್ದರೆ ಪ್ರತಿಯೊಬ್ಬರೂ ಬಂಧಪತ್ರವನ್ನು ಬರೆದು ಕೊಡುವ ಮೂಲಕ ಭದ್ರತೆಯನ್ನು ಒದಗಿಸಲೂ ಸಹ ನಿಮ್ಮನ್ನು ಏಕೆ ಅಗತ್ಯಪಡಿಸಬಾರದೆಂಬುದಕ್ಕೆ ಕಾರಣ ತೋರಿಸಲು ಈ ಮೂಲಕ ನಿಮ್ಮನ್ನು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 16**

**ಶಾಂತಿಪಾಲನೆಗಾಗಿ ಭದ್ರತೆ ಕೊಡಲು ತಪ್ಪಿದ್ದಲ್ಲಿ ಬಂಧನಕ್ಕೊಪ್ಪಿಸಲು ವಾರಂಟ್**

**(141ನೇ ಪ್ರಕರಣವನ್ನು ನೋಡಿ)**

---------- ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

ತಿಂಗಳುಗಳ ಅವಧಿಯವರೆಗೆ ಶಾಂತಿಪಾಲನೆ ಮಾಡಲು ಸದರಿ ------------- (ಹೆಸರು ಮತ್ತು ವಿಳಾಸ)ನು -------------- ರೂಪಾಯಿಗಳ ಒಂದು ಬಂಧಪತ್ರವನ್ನು ಜಾಮೀನುದಾರನೊಂದಿಗೆ (ಅಥವಾ ಪ್ರತಿಯೊಬ್ಬರೂ --- ------ ರೂಪಾಯಿಗಳಿಗೆ ಜಾಮೀನಾಗಿರುವ ಇಬ್ಬರು ಜಾಮೀನುದಾರರೊಂದಿಗೆ ಒಂದು ಬಂಧಪತ್ರವನ್ನು ಏಕೆ ಬರೆದು ಕೊಡಬಾರದು ಎಂಬುದಕ್ಕೆ ಕಾರಣ ತೋರಿಸಬೇಕೆಂದು ಹೊರಡಿಸಲಾದ ಸಮನಿಗನುಸಾರವಾಗಿ -----------(ಹೆಸರು ಮತ್ತು ವಿಳಾಸ) ನು -------------- ದಿನಾಂಕದಂದು ಖುದ್ದಾಗಿ ಅಥವಾ ಪ್ರಾಧಿಕಾರ ಪಡೆದ ಅವನ ಏಜೆಂಟನ ಮೂಲಕ ನನ್ನ ಮುಂದೆ ಹಾಜರಾಗಿರುವುದರಿಂದ ಮತ್ತು ಭದ್ರತೆಯನ್ನು ಕೊಡಲು -------------(ಸಮನುಗಳಲ್ಲಿ ಉಲ್ಲೇಖಿಸಿದ ಭದ್ರತೆಯಿಂದ ಆದೇಶ ಮಾಡಿದ ಭದ್ರತೆಯು ಭಿನ್ನವಾಗಿರುವಲ್ಲಿ, ಭದ್ರತೆಯನ್ನು ಹೆಸರಿಸಿ) ಸದರಿ -------- ---(ಹೆಸರು) ನನ್ನು ಅಗತ್ಯಪಡಿಸುವ ಆದೇಶವು ಈಗ ಮಾಡಲ್ಪಟ್ಟಿರುವುದರಿಂದ ಮತ್ತು ಸದರಿ ಆದೇಶವನ್ನು ಪಾಲಿಸಲು ಅವನು ತಪ್ಪಿರುವುದರಿಂದ;

ಈ ವಾರಂಟಿನ ಜೊತೆಗೆ, ಸದರಿ ----------(ಹೆಸರು) ನನ್ನು ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಕಾನೂನುಬದ್ಧವಾಗಿ ಈ ಮಧ್ಯೆ ಅವನನ್ನು ಬಿಡುಗಡೆ ಮಾಡುವಂತೆ ಆದೇಶಿಸಿರುವ ಹೊರತು ಸದರಿ -------ಅವಧಿಯ (ಕಾರಾವಾಸದ ಅವಧಿ) ವರೆಗೆ ಸದರಿ ಜೈಲಿನಲ್ಲಿ ಅವನನ್ನು ಸುರಕ್ಷಿತವಾಗಿರಿಸಲು ಮತ್ತು ಈ ವಾರಂಟನ್ನು ಜಾರಿ ಮಾಡಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದ ಜೊತೆಗೆ ಅದನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 17**

**ಸದ್ವರ್ತನೆಯ ಬಗ್ಗೆ ಭದ್ರತೆ ಒದಗಿಸಲು ತಪ್ಪಿದ್ದಲ್ಲಿ ಬಂಧನಕ್ಕೊಪ್ಪಿಸಲು ವಾರಂಟ್**

**(141ನೇ ಪ್ರಕರಣವನ್ನು ನೋಡಿ)**

------------- ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

-------------(ಹೆಸರು ಮತ್ತು ವಿವರ)ನು --------- ಜಿಲ್ಲೆಯೊಳಗೆ ಬಚ್ಚಿಟ್ಟುಕೊಂಡಿರುವನೆಂದು ನನಗೆ ಕಂಡುಬರುವಂತೆ ಮಾಡಿರುವುದರಿಂದ ಮತ್ತು ಅವನು ಸಂಜ್ಞೇಯ ಅಪರಾಧವನ್ನು ಮಾಡುವ ದೃಷ್ಟಿಯಿಂದ ಹಾಗೆ ಮಾಡುತ್ತಿರುವನೆಂದು ನಂಬಲು ಕಾರಣವಿರುವುದರಿಂದ;

ಅಥವಾ

ನನ್ನ ಮುಂದೆ ಒದಗಿಸಲಾದ ಮತ್ತು ದಾಖಲಿಸಲಾದ ------------(ಹೆಸರು ಮತ್ತು ವಿವರ)ನ ಸಾಮಾನ್ಯ ಚಾರಿತ್ರ್ಯದ ಸಾಕ್ಷ್ಯದಿಂದ ಅವನು ರೂಢಿಗತ ಸುಲಿಗೆಕೋರನೆಂದು (ಅಥವಾ ಸಂದರ್ಭಾನುಸಾರ ಮನೆಗಳ್ಳ, ಇತ್ಯಾದಿಯೆಂದು) ಕಂಡುಬಂದಿರುವುದರಿಂದ;

ಮತ್ತು ಒಬ್ಬ ಜಾಮೀನುದಾರನೊಂದಿಗೆ (ಅಥವಾ ಸಂದರ್ಭಾನುಸಾರ ಇಬ್ಬರು ಅಥವಾ ಹೆಚ್ಚು ಜಾಮೀನುದಾರರೊಂದಿಗೆ) ತಾನು ಸ್ವತಃ ---------- ರೂಪಾಯಿಗಳಿಗಾಗಿ ಮತ್ತು ಸದರಿ ಜಾಮೀನುದಾರನು (ಅಥವಾ ಸದರಿ ಜಾಮೀನುದಾರರಲ್ಲದ ಪ್ರತಿಯೊಬ್ಬನ) -------- ರೂಪಾಯಿಗಳಿಗಾಗಿ ಬಂಧಪತ್ರವನ್ನು ಬರೆದುಕೊಟ್ಟು ತಾನು ------- ಅವಧಿ (ಅವಧಿಯನ್ನು ವಿವರಿಸಿ ಸದ್ವರ್ತನೆಯಿಂದಿರುವುದಾಗಿ ಭದ್ರತೆಯನ್ನು ಒದಗಿಸುವಂತೆ ಸದರಿ ----------ನನ್ನು (ಹೆಸರು) ಅಗತ್ಯಪಡಿಸಿರುವುದನ್ನು ವಿವರಿಸಿ ಆದೇಶವನ್ನು ದಾಖಲಿಸಲಾಗಿರುವುದರಿಂದ ------------- ಸದರಿ ------------- ನ್ನು (ಹೆಸರಿಸಿ) ಸದರಿ ಆದೇಶವನ್ನು ಪಾಲಿಸಲು ತಪ್ಪಿಸಿರುವುದರಿಂದ ಮತ್ತು ಆ ತಪ್ಪಿಗಾಗಿ ಸದರಿ ಭದ್ರತೆಯನ್ನು ಮುಂಚೆಯೇ ಒದಗಿಸಿರುವ ಹೊರತು, ಅವನು ಅವಧಿಯ (ಅವಧಿಯನ್ನು ವಿವರಿಸಿ) ಕಾರಾವಾಸಕ್ಕೆ ಗುರಿಯಾಗುವಂತೆ ನ್ಯಾಯನಿರ್ಣೀತನಾಗಿರುವುದರಿಂದ;

ಈ ವಾರಂಟಿನ ಜೊತೆಗೆ ಸದರಿ ------(ಹೆಸರು)ನನ್ನು ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಕಾನೂನುಬದ್ಧವಾಗಿ ಈ ಮಧ್ಯೆ ಅವನನ್ನು ಬಿಡುಗಡೆ ಮಾಡುವಂತೆ ಆದೇಶಿಸಿರುವ ಹೊರತು (ಕಾರಾವಾಸದ ಅವಧಿ) ------------- ಅವಧಿಯವರೆಗೆ ಜೈಲಿನಲ್ಲಿ ಅವನನ್ನು ಸುರಕ್ಷಿತವಾಗಿರಿಸಲು ಅಥವಾ ಈಗಾಗಲೇ ಅವನು ಕಾರಾವಾಸದಲ್ಲಿದ್ದರೆ ಅಲ್ಲಿಯೇ ಇರಿಸಲು ಮತ್ತು ಈ ವಾರಂಟನ್ನು ಜಾರಿ ಮಾಡಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದ ಜೊತೆಗೆ ಅದನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 18

## ಭದ್ರತೆ ಕೊಡಲು ತಪ್ಪಿದುದಕ್ಕಾಗಿ ಬಂಧನದಲ್ಲಿರುವ ವ್ಯಕ್ತಿಯನ್ನು ವಿಮೋಚನೆ ಮಾಡಲು ವಾರಂಟ್

## (141 ಮತ್ತು 142ನೇ ಪ್ರಕರಣಗಳನ್ನು ನೋಡಿ)

------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ (ಅಥವಾ ಯಾರ ಅಭಿರಕ್ಷೆಯಲ್ಲಿ ವ್ಯಕ್ತಿಯು ಇರುವನೋ ಆ ಇತರ ಅಧಿಕಾರಿಗೆ),

ನ್ಯಾಯಾಲಯದ ------- 20 ------- ದಿನಾಂಕದ ವಾರಂಟಿನ ಮೇರೆಗೆ ------------------ (ಕೈದಿಯ ಹೆಸರು ಮತ್ತು ವಿವರ) ನನ್ನು ನಿಮ್ಮ ಅಭಿರಕ್ಷೆಗೆ ಒಪ್ಪಿಸಲಾಗಿರುವುದರಿಂದ; ಮತ್ತು ಅವನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ ------ಪ್ರಕರಣದ ಮೇರೆಗೆ ಈಚೆಗೆ ಯುಕ್ತಬದ್ಧವಾಗಿ ಭದ್ರತೆಯನ್ನು ಒದಗಿಸಿರುವುದರಿಂದ;

ಅಥವಾ

ನ್ಯಾಯಾಲಯದ ------- 20 -------- ದಿನಾಂಕದ ವಾರಂಟಿನ ಮೇರೆಗೆ ------------(ಕೈದಿಯ ಹೆಸರು ಮತ್ತು ವಿವರ) ನನ್ನು ನಿಮ್ಮ ಅಭಿರಕ್ಷೆಗೆ ಒಪ್ಪಿಸಿರುವುದರಿಂದ ಮತ್ತು ಅವನನ್ನು ಬಿಡುಗಡೆ ಮಾಡಿದರೆ ಜನ ಸಮುದಾಯಕ್ಕೆ ಅಪಾಯವಿಲ್ಲವೆಂಬುದಕ್ಕೆ ಸಾಕಷ್ಟು ಕಾರಣಗಳಿವೆಯೆಂದು ನನಗೆ ಕಂಡುಬಂದಿರುವುದರಿಂದ;

ಬೇರೆ ಇತರ ಕಾರಣಕ್ಕೆ ತಡೆಹಿಡಿದಿರಿಸುವುದಕ್ಕೆ ಅವನು ಬದ್ಧನಾಗಿರುವ ಹೊರತು, ಸದರಿ ---------- (ಹೆಸರು)ನನ್ನು ನಿಮ್ಮ ಅಭಿರಕ್ಷೆಯಿಂದ ಕೂಡಲೇ ಬಿಡುಗಡೆ ಮಾಡಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 19**

**ಜೀವನಾಂಶ ಕೊಡಲು ತಪ್ಪಿದುದಕ್ಕಾಗಿ ಕಾರಾವಾಸದ ವಾರಂಟ್**

**(144ನೇ ಪ್ರಕರಣವನ್ನು ನೋಡಿ)**

----------- ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

--------------(ಹೆಸರು, ವಿವರ ಮತ್ತು ವಿಳಾಸ)ನು ----------- ಕಾರಣದಿಂದ (ಕಾರಣವನ್ನು ವಿವರಿಸಿ) ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಅಸಮರ್ಥರಾಗಿರುವ ತನ್ನ ಹೆಂಡತಿಯನ್ನು --------(ಹೆಸರು) ಅಥವಾ ತನ್ನ ಮಗುವನ್ನು -----------(ಹೆಸರು) ಅಥವಾ ತಂದೆ ಅಥವಾ ತಾಯಿಯನ್ನು ---------(ಹೆಸರು) ಸಂರಕ್ಷಿಸಲು ಸಾಕಷ್ಟು ಸಂಪಾದನೆಯುಳ್ಳವನೆಂದು ನನ್ನ ಮುಂದೆ ರುಜುವಾತಾಗಿರುವುದರಿಂದ ಮತ್ತು ಹಾಗೆ ಮಾಡಲು ಅವನು ನಿರ್ಲಕ್ಷಿಸಿರುವುದರಿಂದ (ಅಥವಾ ತಿರಸ್ಕರಿಸಿರುವುದರಿಂದ) ಮತ್ತು ತನ್ನ ಹೆಂಡತಿಗೆ ------------(ಅಥವಾ ಮಗು ಅಥವಾ ತಂದೆ ಅಥವಾ ತಾಯಿಗೆ) ----------- ರೂಪಾಯಿಗಳ ಮೊಬಲಗಿನ ಮಾಸಿಕ ಜೀವನಾಂಶ ಕೊಡಬೇಕೆಂದು ಸದರಿ ----------(ಹೆಸರು) ನನ್ನು ಅಗತ್ಯಪಡಿಸುವ ಯುಕ್ತಬದ್ಧ ಆದೇಶವನ್ನು ಮಾಡಿರುವುದರಿಂದ ಮತ್ತು ಅದಲ್ಲದೆ ಸದರಿ ----------(ಹೆಸರು)ನು ----------- ರೂಪಾಯಿಗಳ ----------- ತಿಂಗಳ (ಅಥವಾ ತಿಂಗಳುಗಳ) ಭತ್ಯೆಯ ಮೊಬಲಗನ್ನು ಸಂದಾಯ ಮಾಡಲು ತಪ್ಪಿ ಸದರಿ ಆದೇಶವನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿರುವನೆಂದು ರುಜುವಾತಾಗಿರುವುದರಿಂದ;

ಮತ್ತು ಆ ಮೇಲೆ --------------- ಅವಧಿಯವರೆಗೆ ಅವನನ್ನು ಸದರಿ ಜೈಲಿನಲ್ಲಿ ಕಾರಾವಾಸದಲ್ಲಿರಿಸುವಂತೆ ನ್ಯಾಯನಿರ್ಣಯ ಮಾಡಿ ಆದೇಶವನ್ನು ಮಾಡಿರುವುದರಿಂದ;

ಈ ವಾರಂಟಿನ ಜೊತೆಗೆ, ಸದರಿ ----------(ಹೆಸರು) ನನ್ನು ಸದರಿ ಜೈಲಿನಲ್ಲಿ ನಿಮ್ಮ ಅಭಿರಕ್ಷೆಯಲ್ಲಿರಿಸಲು ಮತ್ತು ಕಾನೂನಿಗನುಸಾರವಾಗಿ ಸದರಿ ಆದೇಶವನ್ನು ಜಾರಿಗೊಳಿಸಲು ಮತ್ತು ವಾರಂಟನ್ನು ಜಾರಿ ಮಾಡಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಈ ವಾರಂಟನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 20

## ಜಪ್ತಿ ಮತ್ತು ಮಾರಾಟದ ಮೂಲಕ ಜೀವನಾಂಶದ ಸಂದಾಯವನ್ನು ಒತ್ತಾಯಪಡಿಸುವ ವಾರಂಟ್

## (144ನೇ ಪ್ರಕರಣವನ್ನು ನೋಡಿ)

ಗೆ, ------------------ (ವಾರಂಟನ್ನು ಜಾರಿ ಮಾಡುವ ಪೊಲೀಸ್ ಅಧಿಕಾರಿಯ ಅಥವಾ ಇತರ ವ್ಯಕ್ತಿಯ ಹೆಸರು ಮತ್ತು ಪದನಾಮ)

--------- (ಹೆಸರು) ನು, ತನ್ನ ಹೆಂಡತಿಗೆ (ಅಥವಾ ಮಗು ಅಥವಾ ತಂದೆ ಅಥವಾ ತಾಯಿಗೆ) -------- ------ (ರೂಪಾಯಿಗಳ) ಮಾಸಿಕ ಜೀವನಾಂಶ ಕೊಡಲು ಅಗತ್ಯಪಡಿಸುವ ಯುಕ್ತಬದ್ಧವಾದ ಆದೇಶವಾಗಿರುವುದರಿಂದ; ಮತ್ತು ಸದರಿ ----------(ಹೆಸರು) ನು ಸದರಿ ಆದೇಶವನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿ ---------- ತಿಂಗಳಿನ (ಅಥವಾ ತಿಂಗಳುಗಳ) ಮಾಸಿಕ ಭತ್ಯೆಯಾದ --------- ರೂಪಾಯಿಗಳನ್ನು ಸಂದಾಯ ಮಾಡಲು ತಪ್ಪಿರುವುದರಿಂದ;

------------ ಜಿಲ್ಲೆಯೊಳಗಿರಬಹುದಾದ ಸದರಿ -----------(ಹೆಸರು) ಗೆ ಸೇರಿದ ಯಾವುದೇ ಚರ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಅಂಥ ಜಪ್ತಿಯ ಆನಂತರ -----------(ಅವಕಾಶ ಕೊಡಲಾದ ದಿನ ಅಥವಾ ಗಂಟೆಯನ್ನು ವಿವರಿಸಿ) ----------- ಒಳಗೆ (ಅಥವಾ ಕೂಡಲೇ ಸದರಿ ಮೊಬಲಗನ್ನು ಸಂದಾಯ ಮಾಡದಿದ್ದಲ್ಲಿ) ಜಪ್ತಿ ಮಾಡಿದ ಚರ ಸ್ವತ್ತನ್ನು ಅಥವಾ ಸದರಿ ಮೊಬಲಗಿಗೆ ಸಾಕಾಗಬಹುದಾದಷ್ಟನ್ನು ಮಾರಾಟ ಮಾಡಲು ಮತ್ತು ವಾರಂಟನ್ನು ಜಾರಿ ಮಾಡಿದ ಕೂಡಲೇ ಅದರ ಮೇರೆಗೆ ನೀವು ಏನು ಮಾಡಿದಿರಿ ಎಂಬುದನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಈ ವಾರಂಟನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 21**

**ಉಪದ್ರವಗಳ ನಿವಾರಣೆಗೆ ಆದೇಶ**

**(152ನೇ ಪ್ರಕರಣವನ್ನು ನೋಡಿ)**

ಗೆ, ------------- (ಹೆಸರು, ವಿವರ ಮತ್ತು ವಿಳಾಸ)

----------------------- ಯಿಂದ (ಅಡಚಣೆ ಅಥವಾ ಉಪದ್ರವಕ್ಕೆ ಕಾರಣವಾದುದನ್ನು ವಿವರಿಸಿ) ಸಾರ್ವಜನಿಕ ರಸ್ತೆಯನ್ನು (ಅಥವಾ ಇತರ ಸಾರ್ವಜನಿಕ ಸ್ಥಳ, ಇತ್ಯಾದಿಗಳನ್ನು) ಉಪಯೋಗಿಸುವ ವ್ಯಕ್ತಿಗಳಿಗೆ ಅಡಚಣೆಯೊಡ್ಡಲು (ರಸ್ತೆ ಅಥವಾ ಸಾರ್ವಜನಿಕ ಸ್ಥಳವನ್ನು ವಿವರಿಸಿ) ಅಥವಾ ಉಪದ್ರವ ಕೊಡಲು ನೀವು ಕಾರಣರಾಗಿರುವಿರೆಂದು ನನಗೆ ಕಂಡುಬಂದಿರುವುದರಿಂದ ಮತ್ತು ಅಂಥ ಅಡಚಣೆ (ಅಥವಾ ಉಪದ್ರವ)ಯು, ಇನ್ನೂ ಇರುವುದರಿಂದ;

ಅಥವಾ

ನೀವು ವ್ಯಾಪಾರ ಅಥವಾ ಕಸುಬನ್ನು, ------------(ನಿರ್ದಿಷ್ಟ ವ್ಯಾಪಾರ ಅಥವಾ ಕಸುಬನ್ನು ಮತ್ತು ಅದು ನಡೆಯುವ ಸ್ಥಳವನ್ನು ವಿವರಿಸಿ) ಅದರ ಮಾಲೀಕನಾಗಿ ಅಥವಾ ವ್ಯವಸ್ಥಾಪಕರಾಗಿ ನಡೆಸುತ್ತಿರುವಿರೆಂದು ಮತ್ತು ಅದು ಜನಾರೋಗ್ಯಕ್ಕೆ (ಅಥವಾ ಸೌಖ್ಯಕ್ಕೆ) ---------------- ಕಾರಣದಿಂದ (ಯಾವ ರೀತಿಯಲ್ಲಿ ಹಾನಿಕಾರಕ ಪರಿಣಾಮಗಳಾದುವೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ) ಹಾನಿಕಾರಕವಾಗಿರುವುದೆಂದು ಮತ್ತು ಅದನ್ನು ತಡೆಹಿಡಿಯಬೇಕೆಂದು ಅಥವಾ ಸ್ಥಳಾಂತರಿಸಬೇಕೆಂದು ನನಗೆ ಕಂಡುಬರುವಂತೆ ಮಾಡಿರುವುದರಿಂದ;

ಅಥವಾ

ನೀವು ಸಾರ್ವಜನಿಕ ದಾರಿಗೆ ಹೊಂದಿಕೊಂಡ ---------------- (ಈ ದಾರಿಯನ್ನು ವಿವರಿಸಿ) ಕೆರೆಯ (ಅಥವಾ ಬಾವಿಯ ಅಥವಾ ಗುಂಡಿಯ) ಮಾಲೀಕರೆಂದು (ಅಥವಾ ಅದರ ಸ್ವಾಧೀನ ಅಥವಾ ಹತೋಟಿಯನ್ನು ಹೊಂದಿರುವವರೆಂದು) ಮತ್ತು ಸದರಿ ಕೆರೆಗೆ (ಅಥವಾ ಬಾವಿ ಅಥವಾ ಗುಂಡಿಗೆ) ಬೇಲಿಯಿಲ್ಲದೆ (ಅಥವಾ ಭದ್ರವಾದ ಬೇಲಿಯಿಲ್ಲದೆ) ಇರುವುದರಿಂದ ಸಾರ್ವಜನಿಕ ಸುರಕ್ಷತೆಗೆ ಅಪಾಯವಿದೆಯೆಂದು ನನಗೆ ಕಂಡುಬರುವಂತೆ ಮಾಡಿರುವುದರಿಂದ;

ಅಥವಾ

(ಸಂದರ್ಭಾನುಸಾರ) ಇತ್ಯಾದಿ ಕಾರಣದಿಂದ,

ನಾನು, ------------(ಅವಕಾಶ ಕೊಡಲಾದ ಕಾಲವನ್ನು ತಿಳಿಸಿ) ಒಳಗೆ (ಉಪದ್ರವನ್ನು ನಿಲ್ಲಿಸಲು ಏನು ಮಾಡಬೇಕೆಂಬುದನ್ನು ವಿವರಿಸಿ) ಅಥವಾ ----------- ತಿಂಗಳ --------- ದಿನಾಂಕದಂದು ----------- ವೇಳೆಯಲ್ಲಿ ----------- ನ್ಯಾಯಾಲಯದಲ್ಲಿ ಹಾಜರಾಗಲು ಮತ್ತು ಈ ಆದೇಶವನ್ನು ಏಕೆ ಜಾರಿ ಮಾಡಬಾರದೆಂಬುದಕ್ಕೆ ಕಾರಣ ತೋರಿಸಲು, ಈ ಮೂಲಕ ನಿಮಗೆ ನಿರ್ದೇಶಿಸುತ್ತೇನೆ ಮತ್ತು ಅಗತ್ಯಪಡಿಸುತ್ತೇನೆ;

ಅಥವಾ

ನಾನು ---------- ಒಳಗೆ (ಅವಕಾಶ ಕೊಡಲಾದ ಕಾಲವನ್ನು ತಿಳಿಸಿ) ಸದರಿ ಸ್ಥಳದಲ್ಲಿ ಸದರಿ ವ್ಯಾಪಾರ ಅಥವಾ ಕಸುಬು ನಡೆಸಿರುವುದನ್ನು ನಿಲ್ಲಿಸಲು ಮತ್ತು ಅದನ್ನು ಪುನಃ ನಡೆಸದಿರಲು ಅಥವಾ ಈಗ ಅದನ್ನು ನಡೆಸಲಾಗುತ್ತಿರುವ ಸ್ಥಳದಿಂದ ಸದರಿ ವ್ಯಾಪಾರವನ್ನು ಬೇರೆಡೆಗೆ ಸಾಗಿಸಲು ಅಥವಾ ಹಾಜರಾಗಲು, ಇತ್ಯಾದಿಗಳನ್ನು ಈ ಮೂಲಕ, ನಿಮಗೆ ನಿರ್ದೇಶಿಸುತ್ತೇನೆ ಮತ್ತು ಅಗತ್ಯಪಡಿಸುತ್ತೇನೆ;

ಅಥವಾ

ನಾನು --------- ಒಳಗೆ (ಅವಕಾಶ ಕೊಡಲಾದ ಕಾಲವನ್ನು ತಿಳಿಸಿ) ಸಾಕಷ್ಟು ಬೇಲಿಯನ್ನು ಹಾಕಲು (ಬೇಲಿಯ ಬಗೆ ಮತ್ತು ಬೇಲಿ ಹಾಕಬೇಕಾದ ಭಾಗವನ್ನು ವಿವರಿಸಿ) ಅಥವಾ ಹಾಜರಾಗಲು ಇತ್ಯಾದಿಗಳನ್ನು ಮಾಡಲು ಈ ಮೂಲಕ, ನಿಮಗೆ ನಿರ್ದೇಶಿಸುತ್ತೇನೆ ಮತ್ತು ಅಗತ್ಯಪಡಿಸುತ್ತೇನೆ;

ಅಥವಾ

ನಾನು (ಸಂದರ್ಭಾನುಸಾರ) ಇತ್ಯಾದಿ, ಇತ್ಯಾದಿಗಾಗಿ ನಿಮಗೆ ನಿರ್ದೇಶಿಸುತ್ತೇನೆ ಮತ್ತು ಅಗತ್ಯಪಡಿಸುತ್ತೇನೆ.

20____ರ _______ನ__________ನೇ ದಿನಾಂಕ

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 22**

**ಮ್ಯಾಜಿಸ್ಟ್ರೇಟರ ನೋಟೀಸು ಮತ್ತು ಅಂತಿಮ ಆದೇಶ**

**(160ನೇ ಪ್ರಕರಣವನ್ನು ನೋಡಿ)**

ಗೆ, ------------------- (ಹೆಸರು, ವಿವರ ಮತ್ತು ವಿಳಾಸ)

------------- ದಿನಾಂಕದಂದು ನಿಮ್ಮನ್ನು ------------ ಅಗತ್ಯಪಡಿಸಿ ಹೊರಡಿಸಲಾದ ಆದೇಶವು (ಆದೇಶದಲ್ಲಿ ಅಗತ್ಯಪಡಿಸಿರುವುದನ್ನು ಸ್ಥೂಲವಾಗಿ ವಿವರಿಸಿ) ಸಕಾರಣವಾದುದು ಮತ್ತು ಯುಕ್ತವೆಂದು ನಾನು ಈ ಮೂಲಕ, ನಿಮಗೆ ನೋಟೀಸು ಕೊಡುತ್ತೇನೆ ಅಂಥ ಆದೇಶವನ್ನು ಖಾಯಂಗೊಳಿಸಲಾಗಿದೆ ಮತ್ತು ಆ ಆದೇಶವನ್ನು (ಅವಕಾಶ ಕೊಡಲಾದ ಕಾಲವನ್ನು ವಿವರಿಸಿ) ----------------- ದೊಳಗೆ ನೀವು ಪಾಲಿಸಬೇಕೆಂದು ನಾನು ಈ ಮೂಲಕ ನಿಮಗೆ ನಿರ್ದೇಶಿಸುತ್ತೇನೆ ಮತ್ತು ಅಗತ್ಯಪಡಿಸುತ್ತೇನೆ, ಹಾಗೆ ಮಾಡದಿದ್ದರೆ ಅವಿಧೇಯತೆಗಾಗಿ ಭಾರತೀಯ ನ್ಯಾಯ ಸಂಹಿತೆ, 2023 ರಲ್ಲಿ ಉಪಬಂಧಿಸಲಾದ ದಂಡಕ್ಕೆ ಗುರಿಯಾಗುವಿರಿ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 23**

**ವಿಚಾರಣೆಯು ಇತ್ಯರ್ಥವಾಗುವವರೆಗೆ ಸನ್ನಿಹಿತ ಅಪಾಯವಾಗದಂತೆ ನಿರ್ಬಂಧಕಾಜ್ಞೆ**

**(161ನೇ ಪ್ರಕರಣವನ್ನು ನೋಡಿ)**

ಗೆ, -------------------- (ಹೆಸರು, ವಿವರ ಮತ್ತು ವಿಳಾಸ)

20------ವರ್ಷದ ------- ದಿನಾಂಕದಂದು ನಾನು ಹೊರಡಿಸಿದ ಷರತ್ತಿಗೊಳಪಟ್ಟ ಆದೇಶದ ವಿಚಾರಣೆಯು ಇತ್ಯರ್ಥವಾಗದೆ ಇರುವುದರಿಂದ ಮತ್ತು ಸದರಿ ಆದೇಶದಲ್ಲಿ ಉಲ್ಲೇಖಿಸಿದ ಉಪದ್ರವದಿಂದ, ಸಾರ್ವಜನಿಕರಿಗೆ ತೀವ್ರ ಸ್ವರೂಪದ ಅಪಾಯ ಅಥವಾ ಹಾನಿಯು ಸನ್ನಿಹಿತವಾಗಿರುವುದರಿಂದ, ಅದನ್ನು ತಡೆಗಟ್ಟಲು ಅವಶ್ಯಕವಾದ ತ್ವರಿತ ಕ್ರಮ ಕೈಗೊಳ್ಳಬೇಕೆಂದು, ನನಗೆ ಕಂಡುಬರುವಂತೆ ಮಾಡಿರುವುದರಿಂದ ನಾನು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ 161ನೇ ಪ್ರಕರಣದ ಉಪಬಂಧಗಳ ಮೇರೆಗೆ, ವಿಚಾರಣೆಯ ಫಲಿತಾಂಶ ಬರುವವರೆಗೆ (ತಾತ್ಕಾಲಿಕ ಸುರಕ್ಷೆಗಾಗಿ ಏನು ಮಾಡಬೇಕೆಂಬುದನ್ನು ಸ್ಪಷ್ಟವಾಗಿ ವಿವರಿಸಿ) ------------------ ಕೂಡಲೇ ಮಾಡಬೇಕೆಂದು ಈ ಮೂಲಕ, ನಿಮಗೆ ನಿರ್ದೇಶಿಸುತ್ತೇನೆ ಮತ್ತು ಆಜ್ಞಾಪಿಸುತ್ತೇನೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 24

## ಉಪದ್ರವ ಪುನರಾವೃತ್ತಿ, ಇತ್ಯಾದಿಯನ್ನು ನಿಷೇಧಿಸುವ ಮ್ಯಾಜಿಸ್ಟ್ರೇಟರ ಆದೇಶ

**(162ನೇ ಪ್ರಕರಣವನ್ನು ನೋಡಿ)**

ಗೆ, ------------------ (ಹೆಸರು, ವಿವರ ಮತ್ತು ವಿಳಾಸ)

(ಸಂದರ್ಭಾನುಸಾರ 21ನೇ ನಮೂನೆ ಅಥವಾ 25ನೇ ನಮೂನೆಗೆ ಅನುಸಾರವಾದ ಸೂಕ್ತವಾದ ನಿರೂಪಣೆಯನ್ನು ವಿವರಿಸಿ) ಇತ್ಯಾದಿ ನನಗೆ ಕಂಡುಬರುವಂತೆ ಮಾಡಿರುವುದರಿಂದ;

ಸದರಿ ಉಪದ್ರವವನ್ನು ಪುನರಾವೃತ್ತಿಗೊಳಿಸದಿರಲು ಮತ್ತು ಮುಂದುವರಿಸದಿರಲು, ನಾನು ಈ ಮೂಲಕ ಕಟ್ಟುನಿಟ್ಟಾಗಿ ಆದೇಶಿಸುತ್ತೇನೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

*****

## ನಮೂನೆ ಸಂಖ್ಯೆ. 25

## ಅಡಚಣೆ, ದೊಂಬಿ, ಇತ್ಯಾದಿಯನ್ನು ತಪ್ಪಿಸಲು ಮ್ಯಾಜಿಸ್ಟ್ರೇಟರ ಆದೇಶ.

**(163ನೇ ಪ್ರಕರಣವನ್ನು ನೋಡಿ)**

ಗೆ, ------------------------ (ಹೆಸರು, ವಿವರ ಮತ್ತು ವಿಳಾಸ)

ನೀವು --------------- (ಸ್ವತ್ತನ್ನು ಸ್ಪಷ್ಟವಾಗಿ ವಿವರಿಸಿ)ದ ಸ್ವಾಧೀನ ಹೊಂದಿರುವಿರೆಂದು (ಅಥವಾ ಅದರ ಆಡಳಿತ ಹೊಂದಿರುವಿರೆಂದು) ಮತ್ತು ಸದರಿ ಭೂಮಿಯಲ್ಲಿ ಚರಂಡಿಯನ್ನು ತೋಡುವ ಮೂಲಕ, ಅದಕ್ಕೆ ಹೊಂದಿಕೊಂಡಿರುವ ಸಾರ್ವಜನಿಕ ರಸ್ತೆಯನ್ನು ಉಪಯೋಗಿಸುವ ವ್ಯಕ್ತಿಗಳಿಗೆ ಅಡಚಣೆಯಾಗುವಂತೆ ಅಗೆದ ಮಣ್ಣನ್ನು ಮತ್ತು ಕಲ್ಲುಗಳನ್ನು ಎಸೆಯಲಿರುವಿರೆಂದು ಅಥವಾ ಹಾಕಲಿರುವಿರೆಂದು ನನಗೆ ಕಂಡುಬರುವಂತೆ ಮಾಡಿರುವುದರಿಂದ;

ಅಥವಾ

ನೀವು ಮತ್ತು ಇತರ ಕೆಲವು ವ್ಯಕ್ತಿಗಳು (ವ್ಯಕ್ತಿಗಳ ವರ್ಗವನ್ನು ಉಲ್ಲೇಖಿಸಿ) ಸಾರ್ವಜನಿಕ ಬೀದಿಯಲ್ಲಿ (ಸಂದರ್ಭಾನುಸಾರ) ಸೇರುವಿರೆಂದು ಮತ್ತು ಮೆರವಣಿಗೆಯಲ್ಲಿ ಹೋಗುವಿರೆಂದು ಮತ್ತು ಅಂಥ ಮೆರವಣಿಗೆಯು, ದೊಂಬಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಟಕ್ಕೆ ಕಾರಣವಾಗುವ ಸಂಭವವಿರುವುದೆಂದು ನನಗೆ ಕಂಡುಬರುವಂತೆ ಮಾಡಿರುವುದರಿಂದ;

ಅಥವಾ

(ಸಂದರ್ಭಾನುಸಾರ) ಇತ್ಯಾದಿ, ಇತ್ಯಾದಿ ಕಂಡುಬರುವಂತೆ ಮಾಡಿರುವುದರಿಂದ;

ಸದರಿ ರಸ್ತೆಯ ಯಾವುದೇ ಭಾಗದ ಮೇಲೆ, ಭೂಮಿಯಿಂದ ಅಗೆದ ಮಣ್ಣು ಅಥವಾ ಕಲ್ಲುಗಳನ್ನು ಹಾಕದಿರಲು ಅಥವಾ ಹಾಕಲು ಅನುಮತಿಸದಿರಲು ನಾನು ಈ ಮೂಲಕ ನಿಮಗೆ ಆದೇಶಿಸುತ್ತೇನೆ.

ಅಥವಾ

ನಾನು ಈ ಮೂಲಕ ಸದರಿ ಬೀದಿಯಲ್ಲಿ ಹಾದುಹೋಗುವ ಮೆರವಣಿಗೆಯನ್ನು ನಿಷೇಧಿಸುತ್ತೇನೆ ಮತ್ತು ಅಂಥ ಮೆರವಣಿಗೆ (ಅಥವಾ ಉಕ್ತ ಸಂದರ್ಭಕ್ಕೆ ಅಗತ್ಯವಾದಂತೆ) ಯಲ್ಲಿ ಭಾಗವಹಿಸಕೂಡದೆಂದು ನಿಮಗೆ ಕಟ್ಟು ನಿಟ್ಟಾಗಿ ಎಚ್ಚರಿಕೆ ನೀಡುತ್ತೇನೆ ಮತ್ತು ಆಜ್ಞಾಪಿಸುತ್ತೇನೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 26

## ವಿವಾದದಲ್ಲಿರುವ ಭೂಮಿ, ಇತ್ಯಾದಿಗಳ ಸ್ವಾಧೀನವನ್ನಿಟ್ಟುಕೊಳ್ಳಲು ಹಕ್ಕುಳ್ಳ ಪಕ್ಷಕಾರನು ಯಾರೆಂಬುದನ್ನು ಕುರಿತು ಘೋಷಿಸುವ ಮ್ಯಾಜಿಸ್ಟ್ರೇಟರ ಆದೇಶ

**(164ನೇ ಪ್ರಕರಣವನ್ನು ನೋಡಿ)**

ನನ್ನ ಸ್ಥಳೀಯ ಅಧಿಕಾರವ್ಯಾಪ್ತಿಯೊಳಗೆ ಬರುವ, ಕೆಲವೊಂದು (ವಿವಾದದ ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸಿ) --------------ಗಳಿಗೆ ಸಂಬಂಧಿಸಿದಂತೆ (ಪಕ್ಷಕಾರರ ಹೆಸರು ಮತ್ತು ವಾಸ ಸ್ಥಳವನ್ನು ಅಥವಾ ಹಳ್ಳಿಗರ ಗುಂಪುಗಳ ಮಧ್ಯೆ ವಿವಾದ ಇದ್ದರೆ, ಕೇವಲ ವಾಸಸ್ಥಳವನ್ನು ವಿವರಿಸಿ) ------------ರವರ ಮಧ್ಯೆ ಶಾಂತಿಭಂಗವನ್ನುಂಟು ಮಾಡುವ ಸಂಭವವಿದ್ದಂಥ ವಿವಾದವು ಇದ್ದಿತ್ತೆಂದು ಮತ್ತು ಸದರಿ --------------(ವಿವಾದದ ವಿಷಯ) ವಾಸ್ತವಿಕ ಸ್ವಾಧೀನತೆಯ ಸಂಗತಿಗೆ, ಸಂಬಂಧಿಸಿದಂತೆ ಇರುವ ಅವರವರ ಕ್ಲೇಮಿನ ಬಗ್ಗೆ ಲಿಖಿತ ಹೇಳಿಕೆ ಕೊಡಲು ಸದರಿ ಎಲ್ಲ ಪಕ್ಷಕಾರರನ್ನು ಕೇಳಲಾಗಿತ್ತು ಮತ್ತು ತಮಗಿರುವ ಕಾನೂನುಸಮ್ಮತ ಸ್ವಾಧೀನಾಧಿಕಾರದ ಬಗ್ಗೆ ಸದರಿ ಪಕ್ಷಗಳು ಮಾಡಿದ ಕ್ಲೇಮಿನ ಗುಣಾವಗುಣಗಳನ್ನು ಗಣಿಸದೆ, ಅದರ ಬಗ್ಗೆ ನಡೆಸಿದ ಯುಕ್ತ ವಿಚಾರಣೆಯಿಂದ ಸದರಿ ಹೆಸರು ಅಥವಾ ಹೆಸರುಗಳು ಅಥವಾ ವಿವರಣೆ) ಅವರು ವಾಸ್ತವಿಕ ಸ್ವಾಧೀನದ ಬಗ್ಗೆ ಮಾಡಿದ ಕ್ಲೇಮು ನಿಜವೆಂದು ಯುಕ್ತಬದ್ಧವಾಗಿ ದಾಖಲಿತವಾದ ಕಾರಣಗಳ ಮೇಲೆ ನನಗೆ ಕಂಡುಬಂದಿರುವುದರಿಂದ, ಅವನು ---------------(ಅಥವಾ ಅವರು ಸದರಿ --------------(ವಿವಾದದ ವಿಷಯ) ಸ್ವಾಧೀನ ಹೊಂದಿದವನೆಂದು ಮತ್ತು ಕಾನೂನುಯುಕ್ತ ಕ್ರಮದ ಮೂಲಕ ಹೊರದೂಡುವವರೆಗೆ ಅಂಥ ಸ್ವಾಧೀನವನ್ನು ಇಟ್ಟುಕೊಳ್ಳಲು ಹಕ್ಕುಳ್ಳವರೆಂದು ನಾನು ತೀರ್ಮಾನಿಸಿ ಘೋಷಿಸುತ್ತೇನೆ ಮತ್ತು ಈ ಮಧ್ಯೆ ಅವನ (ಅಥವಾ ಅವರ) ಸ್ವಾಧೀನಕ್ಕೆ ಯಾವುದೇ ತೊಂದರೆಯುಂಟು ಮಾಡಕೂಡದೆಂದು ನಾನು ಕಟ್ಟುನಿಟ್ಟಾಗಿ ಆದೇಶಿಸುತ್ತೇನೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 27

## ಭೂಮಿಯ ಸ್ವಾಧೀನತೆ, ಇತ್ಯಾದಿಗೆ ಸಂಬಂಧಿಸಿದ ವಿವಾದದ ಸಂದರ್ಭದಲ್ಲಿ ಜಪ್ತಿ ವಾರಂಟ್.

**(165ನೇ ಪ್ರಕರಣವನ್ನು ನೋಡಿ)**

---------------- ದಲ್ಲಿರುವ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

(ಅಥವಾ ------------ ಯ ಕಲೆಕ್ಟರನಿಗೆ).

ನನ್ನ ಅಧಿಕಾರವ್ಯಾಪ್ತಿಯ ಎಲ್ಲೆಯೊಳಗೆ ಬರುವ ಕೆಲವೊಂದು (ವಿವಾದದ ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸಿ) ಗಳಿಗೆ ಸಂಬಂಧಿಸಿದಂತೆ -------------- (ಸಂಬಂಧಿಸಿದ ಪಕ್ಷಕಾರರ ಹೆಸರು ಮತ್ತು ವಾಸಸ್ಥಳವನ್ನು ಅಥವಾ ಹಳ್ಳಿಗರ ಗುಂಪುಗಳ ಮಧ್ಯೆ ವಿವಾದವು ಇದ್ದರೆ ಕೇವಲ ವಾಸಸ್ಥಳವನ್ನು ವಿವರಿಸಿ) ----------- ರವರ ಮಧ್ಯೆ ಶಾಂತಿ ಭಂಗವನ್ನುಂಟು ಮಾಡುವ ಸಂಭವವಿದ್ದಂತ ವಿವಾದವು ಇದ್ದಿತ್ತೆಂದು ಮತ್ತು ಸದರಿ ----------------(ವಿವಾದದ ವಿಷಯ) ವಾಸ್ತವಿಕ ಸ್ವಾಧೀನತೆಯ ಸಂಗತಿಗೆ ಸಂಬಂಧಿಸಿದಂತೆ ಇರುವ ಅವರವರ ಕ್ಲೇಮುಗಳ ಬಗ್ಗೆ ಲಿಖಿತ ಹೇಳಿಕೆ ಕೊಡಲು ಸದರಿ ಪಕ್ಷಕಾರರನ್ನು ಕೇಳಲಾಗಿತ್ತೆಂದು ನನಗೆ ಕಂಡು ಬರುವಂತೆ ಮಾಡಿರುವುದರಿಂದ ಮತ್ತು ಕ್ಲೇಮುಗಳ ಬಗ್ಗೆ ಯುಕ್ತ ವಿಚಾರಣೆ ನಡೆಸಿದ ಮೇಲೆ ಪಕ್ಷಕಾರರಲ್ಲಿ ಯಾರೂ ಸ್ವಾಧೀನ ----------------(ಸದರಿ ವಿವಾದದ ವಿಷಯ) ಹೊಂದಿಲ್ಲವೆಂದು ನಾನು ನಿರ್ಧರಿಸಿರುವುದರಿಂದ (ಅಥವಾ ಹಿಂದಿನದಕ್ಕೆ ಸಂಬಂಧಿಸಿದಂತೆ) ಸದರಿ ಪಕ್ಷಕಾರರಲ್ಲಿ ಯಾರು ಸ್ವಾಧೀನ ಹೊಂದಿದ್ದಾರೆಂಬುದನ್ನು ಮನದಟ್ಟು ಮಾಡಿಕೊಳ್ಳಲು ಅಸಮರ್ಥನಾಗಿರುವುದರಿಂದ;

ಸದರಿ-------------- (ವಿವಾದದ ವಿಷಯ) ಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅದನ್ನು ಇಟ್ಟುಕೊಳ್ಳುವುದರ ಮೂಲಕ ಅದನ್ನು ಜಪ್ತಿ ಮಾಡಲು ಮತ್ತು ಪಕ್ಷಕಾರರ ಅಧಿಕಾರಗಳನ್ನು ಅಥವಾ ಅದರ ಸ್ವಾಧೀನ ಪಡೆಯಲು ಅವರಿಗಿರುವ ಕ್ಲೇಮನ್ನು ಸಕ್ಷಮ ನ್ಯಾಯಾಲಯವು ತೀರ್ಮಾನಿಸಿ ಡಿಕ್ರಿ ಅಥವಾ ಆದೇಶ ಮಾಡುವವರೆಗೆ ಅದನ್ನು ಜಪ್ತಿಯಲ್ಲಿಟ್ಟುಕೊಂಡಿರಲು ಮತ್ತು ಈ ವಾರಂಟನ್ನು ಜಾರಿ ಮಾಡಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಇದನ್ನು ಹಿಂತಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 28**

**ಭೂಮಿ ಅಥವಾ ಜಲದಲ್ಲಿ ಯಾವುದನ್ನಾದರೂ ಮಾಡಲು ನಿಷೇಧಿಸುವ ಮ್ಯಾಜಿಸ್ಟ್ರೇಟರ ಆದೇಶ**

**(166ನೇ ಪ್ರಕರಣವನ್ನು ನೋಡಿ)**

ನನ್ನ ಸ್ಥಳೀಯ ಅಧಿಕಾರವ್ಯಾಪ್ತಿಯಲ್ಲಿ ಬರುವ -------------(ವಿವಾದದ ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸಿ) ಭೂಮಿಯ (ಅಥವಾ ಜಲದ) ಉಪಯೋಗದ ಅಧಿಕಾರಕ್ಕೆ ಸಂಬಂಧಿಸಿದಂತೆ ವಿವಾದ ಉದ್ಭವಿಸಿದ್ದು ಅದರ ಸ್ವಾಧೀನವನ್ನು -------------(ವ್ಯಕ್ತಿ ಅಥವಾ ವ್ಯಕ್ತಿಗಳನ್ನು ವಿವರಿಸಿ) ಪ್ರತ್ಯೇಕವಾಗಿ ಕ್ಲೇಮು ಮಾಡಿದ್ದು ಮತ್ತು ಅದರ ಬಗ್ಗೆ ತಕ್ಕ ವಿಚಾರಣೆ ನಡೆಸಿದ ತರುವಾಯ, ಸದರಿ ಭೂಮಿಯು (ಅಥವಾ ಜಲವು) ಸಾರ್ವಜನಿಕರ (ಅಥವಾ ವ್ಯಕ್ತಿಯಾಗಿದ್ದರೆ ಅಥವಾ ವ್ಯಕ್ತಿಗಳ ವರ್ಗವಾಗಿದ್ದರೆ, ಅವನನ್ನು ಅಥವಾ ಅವರನ್ನು ವಿವರಿಸಿರಿ) ಉಪಯೋಗಕ್ಕಾಗಿ ಇರುವುದೆಂದು ಮತ್ತು (ವರ್ಷವಿಡೀ ಅದನ್ನು ಉಪಯೋಗಿಸಲು ಸಾಧ್ಯವಿದ್ದರೆ) ಸದರಿ ವಿಚಾರಣೆ ಆರಂಭವಾಗುವುದಕ್ಕೆ ಮುನ್ನ ಮೂರು ತಿಂಗಳೊಳಗಾಗಿ ಸದರಿ ಉಪಯೋಗವನ್ನು ಮಾಡಿಕೊಳ್ಳಲಾಗಿದೆ, (ಅಥವಾ ನಿರ್ದಿಷ್ಟ ಕಾಲದಲ್ಲಿ ಮಾತ್ರ ಉಪಯೋಗಿಸಿಕೊಳ್ಳುತ್ತಿರುವ ಪಕ್ಷದಲ್ಲಿ ಎಂದರೆ "ಉಪಯೋಗ ಯೋಗ್ಯವಾದ ಕಾಲಗಳಲ್ಲಿ ಕೊನೆಯ ಕಾಲದಲ್ಲಿ ಮಾತ್ರ" ಉಪಯೋಗಿಸಲಾಗಿದೆ) ಎಂದು ನನಗೆ ಕಂಡುಬರುವುದರಿಂದ,

ಸದರಿ --------------(ಸ್ವಾಧೀನಕ್ಕೆ ಕ್ಲೇಮುದಾರ ಅಥವಾ ಕ್ಲೇಮುದಾರರು) ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಯಾರಾದರೂ ಹಿಂದೆ ಹೇಳಿದ ಉಪಯೋಗದ ಅಧಿಕಾರಕ್ಕೆ ವಿರುದ್ಧವಾಗಿ ಅವನು (ಅಥವಾ ಅವರು) ಪ್ರತ್ಯೇಕ ಸ್ವಾಧೀನಕ್ಕೆ ಹಕ್ಕುದಾರರೆಂದು ತೀರ್ಮಾನಿಸುವ ಸಕ್ಷಮ ನ್ಯಾಯಾಲಯದ ಡಿಕ್ರಿ ಅಥವಾ ಆದೇಶವನ್ನು ಪಡೆಯುವವರೆಗೆ ಸದರಿ ಭೂಮಿಯ (ಅಥವಾ ಜಲದ) ಸ್ವಾಧೀನವನ್ನು ತೆಗೆದುಕೊಳ್ಳತಕ್ಕದ್ದಲ್ಲ (ಅಥವಾ ಇಟ್ಟುಕೊಳ್ಳತಕ್ಕದ್ದಲ್ಲ.)

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 29

## ಪೊಲೀಸ್ ಅಧಿಕಾರಿಯ ಮುಂದೆ ನಡೆದ ಪ್ರಾರಂಭಿಕ ವಿಚಾರಣೆಯ ಮೇಲೆ ಬಂಧಪತ್ರ ಮತ್ತು ಜಾಮೀನು ಬಂಧಪತ್ರ

**(189ನೇ ಪ್ರಕರಣವನ್ನು ನೋಡಿ)**

ನಾನು ------------ (ಹೆಸರು) ಅಪರಾಧದ ಬಗ್ಗೆ ಆಪಾದಿತನಾಗಿರುವುದರಿಂದ ---------------ಮತ್ತು ವಿಚಾರಣೆಯ ಆನಂತರ ------------ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗಬೇಕೆಂದು ನನ್ನನ್ನು ಅಗತ್ಯಪಡಿಸಿರುವುದರಿಂದ;

ಅಥವಾ

ಮತ್ತು ವಿಚಾರಣೆಯ ಆನಂತರ, ಅಗತ್ಯಪಡಿಸಿದಾಗ ಹಾಜರಾಗುತ್ತೇನೆಂದು ಮುಚ್ಚಳಿಕೆ ಬರೆದುಕೊಡಲು ಕೇಳಿರುವುದರಿಂದ, ಸದರಿ ಆಪಾದನೆಗೆ ಇನ್ನೂ ಹೆಚ್ಚಿಗೆ ಉತ್ತರಿಸಲು -------------------- ದಿನಾಂಕದಂದು (ಅಥವಾ ಇನ್ನು ಮುಂದೆ ನಾನು ಹಾಜರಾಗಬೇಕೆಂದು ಅಗತ್ಯಪಡಿಸಲಾಗುವ ದಿನದಂದು) ------------ ನ್ಯಾಯಾಲಯದಲ್ಲಿ ಹಾಜರಾಗಲು ನಾನು ಈ ಮೂಲಕ ಬದ್ಧನಾಗಿರುತ್ತೇನೆ ಮತ್ತು ಇದಕ್ಕೆ ತಪ್ಪಿದ್ದಲ್ಲಿ ಸರ್ಕಾರಕ್ಕೆ -------- ------------ ರೂಪಾಯಿಗಳನ್ನು ಕೊಡಲು ನಾನು ಬದ್ಧನಾಗಿರುತ್ತೇನೆ.

20____ರ _______ನ_________ನೇ ದಿನಾಂಕ.

(ಸಹಿ)

ಮೇಲ್ಕಂಡ ---------(ಹೆಸರು) ನು ತನ್ನ ಮೇಲಿನ ಆಪಾದನೆಗೆ ಇನ್ನೂ ಹೆಚ್ಚಿಗೆ ಉತ್ತರಿಸಲು ------------ ದಿನಾಂಕದಂದು (ಅಥವಾ ಆನಂತರ ಅವನು ಹಾಜರಾಗಬೇಕೆಂದು ಅಗತ್ಯಪಡಿಸಲಾಗುವ ದಿನದಂದು) --------- ಅವರ ನ್ಯಾಯಾಲಯದಲ್ಲಿ -----------------ದಲ್ಲಿ ಹಾಜರಾಗುತ್ತಾನೆಂದು ನಾನು ಜಾಮೀನುದಾರನಾಗಿ ಘೋಷಿಸುತ್ತೇನೆ (ಅಥವಾ ನಾವು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಜಾಮೀನುದಾರರಾಗಿ ಘೋಷಿಸುತ್ತೇವೆ) ಮತ್ತು ಹಾಗೆ ಮಾಡಲು ಅವನು ತಪ್ಪಿದರೆ, ನಾನು (ಅಥವಾ ನಾವು) ----------------- ರೂಪಾಯಿಗಳ ಮೊಬಲಗನ್ನು ಸರ್ಕಾರಕ್ಕೆ ಕೊಡಲು ಈ ಮೂಲಕ ಬದ್ಧನಾಗಿರುತ್ತೇನೆ (ಬದ್ಧರಾಗಿರುತ್ತೇವೆ).

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 30

## ವಿಚಾರಣೆ ನಡೆಸುವುದಕ್ಕೆ ಅಥವಾ ಸಾಕ್ಷ್ಯ ಕೊಡುವುದಕ್ಕೆ ಬಂಧಪತ್ರ

**(190ನೇ ಪ್ರಕರಣವನ್ನು ನೋಡಿ)**

------------- (ಸ್ಥಳ) ದ ನಾನು ----------(ಹೆಸರು) ----------- ದಿನದಂದು ------------- ಗಂಟೆಗೆ ------------ಲ್ಲಿರುವ ------- ಅವರ ನ್ಯಾಯಾಲಯದಲ್ಲಿ ಹಾಜರಾಗಲು ಮತ್ತು 'ಎ' 'ಬಿ' ಅವರ ವಿರುದ್ಧ ಮಾಡಲಾದ ----------- ದೋಷಾರೋಪಣೆಯ ವಿಷಯದಲ್ಲಿ ಪ್ರಾಸಿಕ್ಯೂಷನ್ ನಡೆಸಲು (ಅಥವಾ ಪ್ರಾಸಿಕ್ಯೂಷನ್ ನಡೆಸಲು ಮತ್ತು ಸಾಕ್ಷ್ಯ ನೀಡಲು ಅಥವಾ ಸಾಕ್ಷ್ಯ ನೀಡಲು) ಈ ಮೂಲಕ ಬದ್ಧನಾಗಿರುತ್ತೇನೆ ಮತ್ತು ಇದಕ್ಕೆ ತಪ್ಪಿದರೆ, ನಾನು ---------------- ರೂಪಾಯಿಗಳ ಮೊಬಲಗನ್ನು ಸರ್ಕಾರಕ್ಕೆ ಕೊಡಲು ಈ ಮೂಲಕ ಬದ್ಧನಾಗಿರುತ್ತೇನೆ.

20____ರ _______ನ_________ನೇ ದಿನಾಂಕ.

(ಸಹಿ)

******

**ನಮೂನೆ ಸಂಖ್ಯೆ. 31**

**ಲಘು ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಗೆ ವಿಶೇಷ ಸಮನ್ಸ್**

**(229ನೇ ಪ್ರಕರಣವನ್ನು ನೋಡಿ)**

ಗೆ, --------------------------- (ಆಪಾದಿತನ ಹೆಸರು, ವಿಳಾಸ)

ಲಘು ಅಪರಾಧದ (ಆರೋಪಿತವಾದ ಅಪರಾಧವನ್ನು ಸಂಕ್ಷಿಪ್ತವಾಗಿ ವಿವರಿಸಿ) ------------- ಆಪಾದನೆಗೆ ಉತ್ತರಿಸಲು ನೀವು ಹಾಜರಾಗುವುದು ಅವಶ್ಯವಿರುವುದರಿಂದ 20----- ವರ್ಷದ ---- ತಿಂಗಳ ---- ದಿನದಂದು ---------- ಮ್ಯಾಜಿಸ್ಟ್ರೇಟರ ಮುಂದೆ ನೀವು ಖುದ್ದಾಗಿ (ಅಥವಾ ನ್ಯಾಯವಾದಿಯ ಮೂಲಕ) ಹಾಜರಾಗತಕ್ಕದ್ದು ಅಥವಾ ನೀವು ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗದೆ ದೋಷಾರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಛಿಸಿದರೆ ಮೇಲ್ಕಂಡ ದಿನಾಂಕದೊಳಗಾಗಿ ಲಿಖಿತ ಒಪ್ಪಿಗೆಯನ್ನು ಮತ್ತು ---------------ರೂಪಾಯಿಗಳನ್ನು ಜುಲ್ಮಾನೆಯಾಗಿ ಕಳುಹಿಸತಕ್ಕದ್ದು ಅಥವಾ ನ್ಯಾಯವಾದಿಯ ಮೂಲಕ ಹಾಜರಾಗಿ ಒಪ್ಪಿಕೊಳ್ಳಲು ಇಚ್ಛಿಸಿದರೆ ನಿಮ್ಮ ಪರವಾಗಿ ದೋಷಾರೋಪವನ್ನು ಒಪ್ಪಿಕೊಳ್ಳಲು ಲಿಖಿತದ ಮೂಲಕ ನ್ಯಾಯವಾದಿಯನ್ನು ಅಧಿಕೃತಗೊಳಿಸಬಹುದು ಮತ್ತು ಅವನ ಮೂಲಕ ಜುಲ್ಮಾನೆಯನ್ನು ಸಂದಾಯ ಮಾಡಬೇಕು ಎಂದು ಈ ಮೂಲಕ ನಿಮ್ಮನ್ನು ಅಗತ್ಯಪಡಿಸಿದೆ ಇದಕ್ಕೆ ತಪ್ಪಕೂಡದು.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

(ಟಿಪ್ಪಣಿ.- ಈ ಸಮನ್‌ನಲ್ಲಿ ನಿರ್ದಿಷ್ಟಪಡಿಸಿದ ಜುಲ್ಮಾನೆಯ ಮೊಬಲಗು ಐದು ಸಾವಿರ ರೂಪಾಯಿಗಳಿಗೆ ಮೀರತಕ್ಕದ್ದಲ್ಲ.)

******

**ನಮೂನೆ ಸಂಖ್ಯೆ. 32**

**ವಿಚಾರಣೆಗೆ ಆಪಾದಿತನನ್ನು ಒಪ್ಪಿಸುವ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ಮ್ಯಾಜಿಸ್ಟ್ರೇಟನ ನೋಟೀಸ್**

**(232ನೇ ಪ್ರಕರಣವನ್ನು ನೋಡಿ)**

---------------- ಮ್ಯಾಜಿಸ್ಟ್ರೇಟರ್, ಸೆಷನ್ ನ್ಯಾಯಾಲಯದ ಮುಂಬರುವ ಉಪವೇಶನಗಳಲ್ಲಿ ಆರೋಪದ ವಿವರಣೆಗಾಗಿ ----------------ನನ್ನು ಒಪ್ಪಿಸಿದ್ದಾನೆಂದು ಈ ಮೂಲಕ ನೋಟೀಸ್ ಕೊಡಲಾಗಿದೆ ಮತ್ತು ಮ್ಯಾಜಿಸ್ಟ್ರೇಟರ ಸದರಿ ಮೊಕದ್ದಮೆಯನ್ನು ಪಬ್ಲಿಕ್ ಪ್ರಾಸಿಕ್ಯೂಟರು ನಡೆಸಬೇಕೆಂದು ಈ ಮೂಲಕ ಅನುದೇಶಿಸುತ್ತಾರೆ.

ಆಪಾದಿತನ ಮೇಲೆ ಹೊರಿಸಲಾದ ಆರೋಪವು -------------------- ಇತ್ಯಾದಿ (ಆರೋಪಣೆಯಲ್ಲಿದ್ದಂತೆ ಅಪರಾಧವನ್ನು ವಿವರಿಸಿ) ಯದಾಗಿರುತ್ತದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 33

## ಆರೋಪಗಳು

## (234, 235 ಮತ್ತು 236ನೇ ಪ್ರಕರಣಗಳನ್ನು ನೋಡಿ)

## I. ಒಂದು ಬಾಬ್ತುವಿನ ಬಗ್ಗೆ ಆರೋಪಗಳು

(1) (ಎ) ನಾನು -------------(ಮ್ಯಾಜಿಸ್ಟ್ರೇಟನ ಹೆಸರು ಮತ್ತು ಪದ, ಇತ್ಯಾದಿ) ಈ ಮೂಲಕ ಕೆಳಕಂಡಂತೆ ನಿಮ್ಮನ್ನು -------------(ಆಪಾದಿತನ ಹೆಸರು) ಆರೋಪಕ್ಕೆ ಗುರಿಪಡಿಸುತ್ತೇನೆ:-

(ಬಿ) 147ನೇ ಪ್ರಕರಣದ- ಅನುಸಾರ ನೀವು ಭಾರತ ಸರ್ಕಾರದ ವಿರುದ್ಧ ------------- ದಲ್ಲಿ ---------------- ದಿನದಂದು ಅಥವಾ ಆ ಸುಮಾರಿನಲ್ಲಿ ಯುದ್ಧ ನಡೆಸಿದಿರಿ ಮತ್ತು ಅದರಿಂದ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 147ನೇ ಪ್ರಕರಣದ ಮೇರೆಗೆ, ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(ಸಿ) ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮ್ಯಾಜಿಸ್ಟ್ರೇಟರ ಸಹಿ ಮತ್ತು ಮೊಹರು)

[(ಬಿ) ಖಂಡಕ್ಕೆ ಬದಲಾಗಿ ಈ ಮುಂದಿನಂತೆ ಪ್ರತಿಸ್ಥಾಪಿಸತಕ್ಕದ್ದು]:-

(2) 151ನೇ ಪ್ರಕರಣದ- ಅನುಸಾರ ರಾಷ್ಟ್ರಪತಿಯವರು ಅಥವಾ ಸಂದರ್ಭಾನುಸಾರ ರಾಜ್ಯಪಾಲರು ಕಾನೂನುಬದ್ಧ ಅಧಿಕಾರವನ್ನು ಚಲಾಯಿಸದಂತೆ, ಭಾರತದ ರಾಷ್ಟ್ರಪತಿಯವರನ್ನು ಅಥವಾ ಸಂದರ್ಭಾನುಸಾರ (ರಾಜ್ಯದ ಹೆಸರು) ------------------------- ರಾಜ್ಯಪಾಲರನ್ನು ಪ್ರೇರೇಪಿಸುವ ಉದ್ದೇಶದಿಂದ, ನೀವು ----------- ದಲ್ಲಿ --------- ದಿನಾಂಕದಂದು ಅಥವಾ ಆ ಸುಮಾರಿನಲ್ಲಿ ರಾಷ್ಟ್ರಪತಿಯವರ ಅಥವಾ ಸಂದರ್ಭಾನುಸಾರ ರಾಜ್ಯಪಾಲರ ಮೇಲೆ, ಹಲ್ಲೆ ಮಾಡಿರುವಿರಿ ಮತ್ತು ಹಾಗೆ ಮಾಡುವುದರ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 151ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(3) 198ನೇ ಪ್ರಕರಣದ ಅನುಸಾರ- ------------- ದಿನದಂದು ಅಥವಾ ಆ ಸುಮಾರಿಗೆ ---------------------- ಗಂಟೆಯಲ್ಲಿ ------------ ಅಧಿನಿಯಮದ --------- ಪ್ರಕರಣದ ಉಪಬಂಧಗಳಿಗೆ ವಿರೋಧವಾದ ಆಚರಣೆಯಾಗಿರುವ ಮತ್ತು ------------------------- ನಿಗೆ ಅದು ಪ್ರತಿಕೂಲವಾಗಿದೆಯೆಂದು ನೀವು ತಿಳಿದಿರುವ ---------------- ಕೃತ್ಯವನ್ನು ಮಾಡಿದಿರಿ (ಅಥವಾ ಸಂದರ್ಭಾನುಸಾರ ಮಾಡಲಿಲ್ಲ) ---------------ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 198ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(4) 229ನೇ ಪ್ರಕರಣದ ಅನುಸಾರ - ---------------- ಸಮಕ್ಷಮ ---------------- ವಿಚಾರಣೆಯ ಸಮಯದಲ್ಲಿ -------------- ದಿನಾಂಕದಂದು ಅಥವಾ ಆ ಸುಮಾರಿನಲ್ಲಿ "--------------- ------" ಎಂದು ಸಾಕ್ಷ್ಯದಲ್ಲಿ ಹೇಳಿರುವಿರಿ; ಆ ಹೇಳಿಕೆಯನ್ನು ನೀವು ಸುಳ್ಳೆಂದು ನಂಬಿದ್ದೂ ಅಥವಾ ನಿಜವೆಂದು ನಂಬದಿದ್ದೂ ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 229ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(5) 105ನೇ ಪ್ರಕರಣದ ಅನುಸಾರ - ನೀವು -------------- ದಿನದಂದು ಅಥವಾ ಆ ಸುಮಾರಿನಲ್ಲಿ --- ------------------ ದಲ್ಲಿ ---------------ನ ಮರಣಕ್ಕೆ ಕಾರಣವಾದ, ಆದರೆ ಕೊಲೆ ಎಂದು ಪರಿಗಣಿಸಲಾದ ಆಪರಾಧಿಕ ಮಾನವ ಹತ್ಯೆಯನ್ನು ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 105ನೇ ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(6) 108ನೇ ಪ್ರಕರಣದ ಅನುಸಾರ - ನೀವು ----------- ದಿನದಂದು ಅಥವಾ ಆ ಸುಮಾರಿನಲ್ಲಿ ------ ------- ದಲ್ಲಿ ----------- ಕುಡಿದು ಮತ್ತಿನಿಂದ 'ಎ', 'ಬಿ', ನು ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಿಸಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 108ನೇ ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(7) 117(2)ನೇ ಪ್ರಕರಣದ ಅನುಸಾರ - ನೀವು --------------- ದಿನದಂದು ಅಥವಾ ಸುಮಾರಿನಲ್ಲಿ -- -------------------- ನಿಗೆ ಸ್ವಯಿಚ್ಛೆಯಿಂದ ತೀವ್ರ ಗಾಯವನ್ನು ಉಂಟು ಮಾಡಿದಿರಿ ಮತ್ತು ----------- -------ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 117(2)ನೇ ಪ್ರಕರಣದ ಮೇರೆಗೆ ಈ ನ್ಯಾಯಾಲಯದ ಸಂಜ್ಞೇಯದೊಳಗೆ ದಂಡನೀಯವಾದ ಅಪರಾಧವನ್ನು ಮಾಡಿರುವಿರಿ.

(8) 309(2)ನೇ ಪ್ರಕರಣದ ಅನುಸಾರ ನೀವು -------------- ದಿನದಂದು ಅಥವಾ ಆ ಸುಮಾರಿನಲ್ಲಿ --- -------------------- (ಹೆಸರನ್ನು ವಿವರಿಸಿ)ನನ್ನು ಸುಲಿಗೆ ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 309(2)ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(9) 310(2)ನೇ ಪ್ರಕರಣದ ಅನುಸಾರ - ನೀವು -------------- ದಿನದಂದು ಅಥವಾ ಆ ಸುಮಾರಿನಲ್ಲಿ - ------------------ದರೋಡೆ ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 310(2)ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

**II. ಎರಡು ಅಥವಾ ಹೆಚ್ಚು ಬಾಬ್ತುಗಳ ಬಗ್ಗೆ ಆರೋಪಗಳು**

(1) (ಎ) ನಾನು, --------------(ಮ್ಯಾಜಿಸ್ಟ್ರೇಟರ ಹೆಸರು ಮತ್ತು ಪದ, ಇತ್ಯಾದಿ) ಈ ಕೆಳಕಂಡಂತೆ ನಿಮ್ಮನ್ನು -------------(ಆಪಾದಿತನ ಹೆಸರು) ಆರೋಪಕ್ಕೆ ಗುರಿಪಡಿಸುತ್ತೇನೆ:-

(ಬಿ) 179ನೇ ಪ್ರಕರಣದ ಅನುಸಾರ -ಮೊದಲನೆಯದು- ನೀವು ------------- ದಿನದಂದು ಅಥವಾ ಆ ಸುಮಾರಿಗೆ ------------- ನಲ್ಲಿ ನಾಣ್ಯವು ಖೋಟಾ ಎಂದು ತಿಳಿದೂ, ಎ.ಬಿ ಎಂಬ ಹೆಸರಿನ ವ್ಯಕ್ತಿಗೆ ನೈಜವಾದುದೆಂದು ಕೊಟ್ಟಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 179ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಎರಡನೆಯದು- ನೀವು -------------- ದಿನದಂದು ಅಥವಾ ಆ ಸುಮಾರಿನಲ್ಲಿ ---------------- ನಾಣ್ಯವು ಖೋಟಾ ಎಂದು ತಿಳಿದೂ ಅದು ನೈಜವಾದುದೆಂದು ಇನ್ನೊಬ್ಬ ವ್ಯಕ್ತಿಯು, ಎ, ಬಿ ಎಂಬ ಅದನ್ನು ಸ್ವೀಕರಿಸಿರುವಂತೆ ಇನ್ನೊಬ್ಬ ವ್ಯಕ್ತಿಯನ್ನು ಪ್ರೇರಿಸಲು ಪ್ರಯತ್ನಿಸಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 179ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(ಸಿ) ಮತ್ತು ನೀವು ಸದರಿ ಆರೋಪದ ಮೇಲೆ ಸದರಿ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮ್ಯಾಜಿಸ್ಟ್ರೇಟರ ಸಹಿ ಮತ್ತು ಮೊಹರು)

[(ಬಿ) ಖಂಡಕ್ಕೆ ಬದಲಾಗಿ ಈ ಮುಂದಿನಂತೆ ಪ್ರತಿಸ್ಥಾಪಿಸತಕ್ಕದ್ದು]:-

(2) 103ನೇ ಮತ್ತು 105ನೇ ಪ್ರಕರಣಗಳು ಅನುಸಾರ - ಮೊದಲನೆಯದು- ನೀವು -------------- ದಿನದಂದು ಅಥವಾ ಆ ಸುಮಾರಿನಲ್ಲಿ ---------------- ಮರಣವನ್ನುಂಟು ಮಾಡಿ ಕೊಲೆಯನ್ನು ಮಾಡಿದಿರಿ ಮತ್ತು -----------ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 103ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಎರಡನೆಯದಾಗಿ- ನೀವು --------------- ದಿನದಂದು ಅಥವಾ ಆ ಸುಮಾರಿಗೆ --------------- ನ ಮರಣಕ್ಕೆ ಕಾರಣವಾದ, ಆದರೆ ಕೊಲೆಯೆಂದು ಪರಿಗಣಿಸಲಾಗದ ಆಪರಾಧಿಕ ಮಾನವ ಹತ್ಯೆಯನ್ನು ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 105ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(3) 303(2)ನೇ ಮತ್ತು 307ನೇ ಪ್ರಕರಣಗಳು ಅನುಸಾರ -ಮೊದಲನೆಯದು:- ನೀವು ---------------- ದಿನದಂದು ಅಥವಾ ಆ ಸುಮಾರಿನಲ್ಲಿ -------------- ನಲ್ಲಿ ಕಳವು ಮಾಡಿರುವಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 303(2)ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಎರಡನೆಯದು- ನೀವು ----------- ದಿನದಂದು ಅಥವಾ ಆ ಸುಮಾರಿನಲ್ಲಿ ------------- ರಲ್ಲಿ ಕಳವು ಮಾಡುವುದಕ್ಕಾಗಿ ಒಬ್ಬ ವ್ಯಕ್ತಿಯ ಮರಣವನ್ನುಂಟು ಮಾಡಲು ಸಿದ್ಧತೆಗಳನ್ನು ಮಾಡಿಕೊಂಡು ಅಂಥ ಕಳವನ್ನು ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 307ನೇ ಪ್ರಕರಣದ ಮೇರೆಗೆ, ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಮೂರನೆಯದು- ನೀವು ------------ ದಿನದಂದು ಅಥವಾ ಆ ಸುಮಾರಿನಲ್ಲಿ --------------- ರಲ್ಲಿ ಕಳವು ಮಾಡಿದ ಆನಂತರ ನೀವು ತಪ್ಪಿಸಿಕೊಂಡು ಹೋಗುವುದಕ್ಕಾಗಿ ಯಾರೇ ವ್ಯಕ್ತಿಗೆ ಪ್ರತಿಬಂಧ ಮಾಡುವ ಸಿದ್ಧತೆಯನ್ನು ಮಾಡಿಕೊಂಡು ಅಂಥ ಕಳವನ್ನು ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 307ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ನಾಲ್ಕನೆಯದು- ನೀವು ------------ ದಿನದಂದು ಅಥವಾ ಆ ----------ಸುಮಾರಿನಲ್ಲಿ ಕಳವು ಮಾಡಿದ ಸ್ವತ್ತನ್ನು ಇಟ್ಟುಕೊಳ್ಳುವುದಕ್ಕಾಗಿ ಯಾರೇ ವ್ಯಕ್ತಿಗೆ ಗಾಯದ ಭಯವನ್ನುಂಟು ಮಾಡುವ ಸಿದ್ಧತೆ ಮಾಡಿಕೊಂಡು ಕಳವನ್ನು ಮಾಡಿದಿರಿ, ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 307ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(4) 229ನೇ ಪ್ರಕರಣದ ಅನುಸಾರ ಪರ್ಯಾಯ ಆರೋಪ- ------------ ನ ಮುಂದೆ ------------- ವಿಚಾರಣೆಯ ಸಮಯದಲ್ಲಿ -------------- ದಿನಾಂಕದಂದು ಅಥವಾ ಆ ಸುಮಾರಿನಲ್ಲಿ "---------------------" ಎಂದು ಸಾಕ್ಷ್ಯ ಹೇಳಿದಿರಿ ಮತ್ತು ------------ ನ ಮುಂದೆ ವಿಚಾರಣೆಯ ಸಮಯದಲ್ಲಿ --------------------- ದಲ್ಲಿ -------- ದಿನಾಂಕದಂದು ಅಥವಾ ಆ ಸುಮಾರಿಗೆ "-----------------" ಎಂದು ಸಾಕ್ಷ್ಯ ಹೇಳಿದಿರಿ ಮತ್ತು ಅವೆರಡರ ಪೈಕಿ ಒಂದು ಹೇಳಿಕೆಯನ್ನು ಅದು ಸುಳ್ಳೆಂದು ನಿಮಗೆ ತಿಳಿದಿದ್ದೂ ಅಥವಾ ನಂಬಿದ್ದೂ ಅಥವಾ ನಿಜವೆಂದು ನಂಬದಿದ್ದೂ ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 229ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

(ಮ್ಯಾಜಿಸ್ಟ್ರೇಟರ ಅಧಿವಿಚಾರಣೆ ನಡೆಸುವ ಸಂದರ್ಭಗಳಲ್ಲಿ "ಸೆಷನ್ ನ್ಯಾಯಾಲಯದ ಸಂಜ್ಞೇಯದೊಳಗೆ" ಎಂಬುದಕ್ಕೆ ಬದಲಾಗಿ 'ನನ್ನ ಸಂಜ್ಞೇಯದೊಳಗೆ' ಎಂದು ಬರೆಯಿರಿ)

### III. ಹಿಂದಿನ ಅಪರಾಧ ನಿರ್ಣಯದ ತರುವಾಯದ ಕಳವಿನ ಬಗ್ಗೆ ಆರೋಪಗಳು

ನಾನು -------------(ಮ್ಯಾಜಿಸ್ಟ್ರೇಟರ ಹೆಸರು ಮತ್ತು ಪದ, ಇತ್ಯಾದಿ) ನಾನು ಈ ಕೆಳಕಂಡಂತೆ ನಿಮ್ಮನ್ನು ----------------(ಆಪಾದಿತ ವ್ಯಕ್ತಿಯ ಹೆಸರು) ಆರೋಪಕ್ಕೆ ಗುರಿಪಡಿಸುತ್ತೇನೆ:-

ನೀವು ------------ ದಿನದಂದು ಅಥವಾ ಆ ಸುಮಾರಿನಲ್ಲಿ -------------------- ರಲ್ಲಿ ಕಳವು ಮಾಡಿದಿರಿ ಮತ್ತು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 303(2)ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಸೆಷನ್ ನ್ಯಾಯಾಲಯದ (ಅಥವಾ ಸಂದರ್ಭಾನುಸಾರ ಮ್ಯಾಜಿಸ್ಟ್ರೇಟರ) ಸಂಜ್ಞೇಯದೊಳಗೆ ಮಾಡಿರುವಿರಿ ಮತ್ತು ನೀವು ----------(ಆಪಾದಿತನ ಹೆಸರು) ಸದರಿ ಅಪರಾಧವನ್ನು ಮಾಡುವ ಮೊದಲು ------------ ದಿನಾಂಕದಂದು ---------------(ಅಪರಾಧ ನಿರ್ಣಯ ಮಾಡಿದ ನ್ಯಾಯಾಲಯವನ್ನು ನಮೂದಿಸಿ) ಈಗಲೂ ಪೂರ್ಣವಾಗಿ ಜಾರಿಯಲ್ಲಿರುವ ಮತ್ತು ಪರಿಣಾಮಕಾರಿಯಾಗಿರುವ, ರಾತ್ರಿಯಲ್ಲಿ ಮನೆಗೆ ಕನ್ನ ಹಾಕುವ ಅಪರಾಧಕ್ಕಾಗಿ -----------(ಯಾವ ಪ್ರಕರಣದ ಮೇರೆಗೆ ಆಪಾದಿತನು ಅಪರಾಧ ನಿರ್ಣೀತನಾದನೋ, ಆ ಪ್ರಕರಣದಲ್ಲಿ ಉಪಯೋಗಿಸಿದ ಪದಗಳಲ್ಲಿ ಅಪರಾಧವನ್ನು ವಿವರಿಸಿ) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ XVIIನೇ ಅಧ್ಯಾಯದ ಮೇರೆಗೆ ಮೂರು ವರ್ಷಗಳ ಅವಧಿಯ ಕಾರಾವಾಸದಿಂದ ದಂಡನೀಯವಾಗುವ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತರಾಗಿದ್ದೀರಿ ಮತ್ತು ಆ ಮೂಲಕ ಭಾರತೀಯ ನ್ಯಾಯ

ಸಂಹಿತೆ, 2023 (2023ರ 45)ರ 13ನೇ ಪ್ರಕರಣದ ಮೇರೆಗೆ ಹೆಚ್ಚಿಸಿದ ದಂಡನೆಗೆ ಹೊಣೆಯಾಗಿರುವಿರಿ ಎಂಬುದಾಗಿ ಮತ್ತಷ್ಟು ಆರೋಪಕ್ಕೆ ನಿಮ್ಮನ್ನು ಗುರಿಪಡಿಸಲಾಗಿದೆ.

ಮತ್ತು ನೀವು ಅಧಿವಿಚಾರಣೆ, ಇತ್ಯಾದಿಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

******

**ನಮೂನೆ ಸಂಖ್ಯೆ. 34**

**ಸಾಕ್ಷಿಗೆ ಸಮನುಗಳು**

**(63 ಮತ್ತು 267ನೇ ಪ್ರಕರಣಗಳನ್ನು ನೋಡಿ)**

ಸಾಕ್ಷಿಯ ವಿಳಾಸ ------------------ಗೆ,

---------(ವಿಳಾಸ)ದ ------------- (ಆಪಾದಿತನ ಹೆಸರು) ನು ----------- ಅಪರಾಧವನ್ನು (ವೇಳೆ ಮತ್ತು ಸ್ಥಳದೊಂದಿಗೆ ಅಪರಾಧವನ್ನು ಸಂಕ್ಷಿಪ್ತವಾಗಿ ನಮೂದಿಸಿ) ಮಾಡಿರುವನೆಂದು (ಅಥವಾ ಮಾಡಿರಬಹುದೆಂಬ ಶಂಕೆಯ ಮೇಲೆ ನನಗೆ ದೂರು ಬಂದಿರುವುದರಿಂದ ಮತ್ತು ಪ್ರಾಸಿಕ್ಯೂಷನ್ ಪರವಾಗಿ ನೀವು ಮುಖ್ಯ ಸಾಕ್ಷ್ಯವನ್ನು ಕೊಡುವ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವ ಸಂಭವವಿರುವುದೆಂದು ನನಗೆ ಕಂಡುಬಂದಿರುವುದರಿಂದ;

ಅಂಥ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸಲು ಅಥವಾ ಸದರಿ ದೂರಿಗೆ ಸಂಬಂಧಿಸಿದಂತೆ ನಿಮಗೆ ಗೊತ್ತಿದ್ದ ಸಾಕ್ಷ್ಯವನ್ನು ನೀಡಲು ಈ ನ್ಯಾಯಾಲಯದ ಮುಂದೆ ----------- ದಿನಾಂಕದ ಮುಂಜಾನೆ 10 ಗಂಟೆಗೆ ಹಾಜರಾಗಲು ಮತ್ತು ನ್ಯಾಯಾಲಯದ ಅನುಮತಿ ಇಲ್ಲದೆ ಅಲ್ಲಿಂದ ಹೋಗದಿರಲು ಈ ಮೂಲಕ ನಿಮಗೆ ಸಮನ್ ಮಾಡಲಾಗಿದೆ; ಮತ್ತು ನ್ಯಾಯಸಮ್ಮತವಾದ ಕಾರಣವಿಲ್ಲದೆ ಸದರಿ ದಿನಾಂಕದಂದು ಹಾಜರಾಗಲು ಉಪೇಕ್ಷಿಸಿದರೆ ಅಥವಾ ನಿರಾಕರಿಸಿದರೆ, ನಿಮ್ಮ ಹಾಜರಾತಿಯನ್ನು ಒತ್ತಾಯಪಡಿಸುವ ವಾರಂಟನ್ನು ಹೊರಡಿಸಲಾಗುವುದು ಎಂದು ಈ ಮೂಲಕ ನಿಮಗೆ ಎಚ್ಚರಿಕೆಯನ್ನು ಕೊಡಲಾಗಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 35**

**ನ್ಯಾಯಾಲಯವು ಕಾರಾವಾಸದ ಶಿಕ್ಷೆ ಅಥವಾ ಜುಲ್ಮಾನೆಯನ್ನು ವಿಧಿಸಿದ್ದರೆ ಅದರ ಮೇಲೆ ಜೈಲಿಗೊಪ್ಪಿಸುವ ವಾರಂಟ್**

**(258, 271 ಮತ್ತು 278ನೇ ಪ್ರಕರಣಗಳನ್ನು ನೋಡಿ)**

------------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

20------------------ವರ್ಷದ ------------------ ಸಂಖ್ಯೆಯ ಮೊಕದ್ದಮೆಯಲ್ಲಿ ------------------(ಸಂದರ್ಭಾನುಸಾರ 1ನೇ, 2ನೇ, 3ನೇ) ಸಂಖ್ಯೆಯ ಕೈದಿಯು ----------- (ಕೈದಿಯ ಹೆಸರು) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ (ಅಥವಾ --------ಅಧಿನಿಯಮದ) -------ಪ್ರಕರಣದ (ಅಥವಾ__ ಪ್ರಕರಣಗಳ) ಮೇರೆಗೆ ----------------- ಅಪರಾಧದ ಬಗ್ಗೆ ----------------- ನನ್ನ ಮುಂದೆ --------------- (ಹೆಸರು ಮತ್ತು ಪದನಾಮ) ಅಪರಾಧಿಯೆಂದು ನಿರ್ಣೀತವಾಗಿ ದಂಡಿತ ----------------(ದಂಡನೆಯನ್ನು ಪೂರ್ಣವಾಗಿ ಮತ್ತು ಸ್ಪಷ್ಟವಾಗಿ ನಮೂದಿಸಿ) ನಾಗಿರುವುದರಿಂದ;

ಈ ವಾರಂಟಿನ ಜೊತೆಗೆ ಸದರಿ ------------------(ಕೈದಿಯ ಹೆಸರು) ನನ್ನು ಸದರಿ ಜೈಲಿನಲ್ಲಿ ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಆ ಮೂಲಕ ಕಾನೂನಿಗನುಸಾರವಾಗಿ ಹಿಂದೆ ಹೇಳಿದ ಶಿಕ್ಷೆಯ ಆದೇಶವನ್ನು ಜಾರಿಗೊಳಿಸಲು ನಿಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 36**

**ಪರಿಹಾರ ಸಂದಾಯ ಮಾಡಲು ತಪ್ಪಿದ್ದಲ್ಲಿ ಕಾರಾವಾಸದ ವಾರಂಟ್**

**(273ನೇ ಪ್ರಕರಣವನ್ನು ನೋಡಿ)**

------------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗಳಿಗೆ,

-------------(ಹೆಸರು ಮತ್ತು ವಿವರ) ಎಂಬವನು -------------(ಆಪಾದಿತನ ಹೆಸರು ಮತ್ತು ವಿವರ) ಯ ವಿರುದ್ಧ ------------(ಅದನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿ) ಎಂಬುದಾಗಿ ದೂರು ಕೊಟ್ಟಿದ್ದಾನೆ ಮತ್ತು ಸದರಿ ------------(ಹೆಸರು) ವಿರುದ್ಧ ಆಪಾದನೆ ಮಾಡುವುದಕ್ಕೆ ಯುಕ್ತ ಕಾರಣವಿರಲಿಲ್ಲವೆಂಬ ಆಧಾರದ ಮೇಲೆ ಅದನ್ನು ಮಾಡಲಾಗಿದೆ ಮತ್ತು ಸದರಿ ----------------(ದೂರುದಾರನ ಹೆಸರು) ------------------ ರೂಪಾಯಿಗಳ ಮೊಬಲಗನ್ನು ಪರಿಹಾರವಾಗಿ ಕೊಡಬೇಕೆಂದು ವಜಾ ಆದೇಶವಾಗಿ ಮತ್ತು ಸದರಿ ಮೊಬಲಗು ಸಂದಾಯವಾಗದಿರುವುದರಿಂದ ಮತ್ತು ಹಿಂದೆ ಹೇಳಿದ ಮೊಬಲಗು ಮುಂಚಿತವಾಗಿ ಸಂದಾಯವಾಗದಿದ್ದರೆ ---------- ದಿನಗಳ ಅವಧಿಯವರೆಗೆ ಅವನನ್ನು ಜೈಲಿನಲ್ಲಿ ಸಾದಾ ಕಾರಾವಾಸದಲ್ಲಿರಿಸಲು ಆದೇಶವಾಗಿರುವುದರಿಂದ;

ಈ ವಾರಂಟಿನ ಜೊತೆಗೆ ಸದರಿ -------- (ಹೆಸರು)ನನ್ನು ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಸದರಿ ಮೊಬಲಗು ಮುಂಚಿತವಾಗಿ ಸಂದಾಯವಾಗದಿದ್ದರೆ, ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 8(6)(ಬಿ)ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು -------(ಕಾರಾವಾಸದ ಅವಧಿ) ಸದರಿ ಅವಧಿಯವರೆಗೆ ಅವನನ್ನು ಸದರಿ ಜೈಲಿನಲ್ಲಿ ಸುರಕ್ಷಿತವಾಗಿಟ್ಟುಕೊಳ್ಳಲು ಮತ್ತು ಆ ಮೊಬಲಗು ಸಂದಾಯವಾದೊಡನೆ ಅವನನ್ನು ಬಿಡುಗಡೆ ಮಾಡಲು ಮತ್ತು ಈ ವಾರಂಟನ್ನು ಜಾರಿಗೊಳಿಸಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಹಿಂದಿರುಗಿಸಲು ಈ ಮೂಲಕ ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 37

## ಅಪರಾಧದ ಆರೋಪಕ್ಕೆ ಉತ್ತರಿಸಲು ಬಂದೀಖಾನೆಯಲ್ಲಿರುವ ವ್ಯಕ್ತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಅಗತ್ಯಪಡಿಸುವ ಆದೇಶ

**(302ನೇ ಪ್ರಕರಣವನ್ನು ನೋಡಿ)**

------------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

ಮೇಲ್ಕಂಡ ಬಂದೀಖಾನೆಯಲ್ಲಿ ಈಗ ಬಂಧನದಲ್ಲಿರುವ/ ಸೆರೆಯಲ್ಲಿರುವ ---------- (ಕೈದಿಯ ಹೆಸರು)ನ ಹಾಜರಾತಿಯು ---------- (ಆರೋಪಿಸಲಾದ ಅಪರಾಧವನ್ನು ಸಂಕ್ಷಿಪ್ತವಾಗಿ ವಿವರಿಸಿ) ಆರೋಪಕ್ಕೆ ಉತ್ತರಿಸಲು ಅಥವಾ ವ್ಯವಹರಣೆಯ ------------ (ವ್ಯವಹರಣೆಯ ವಿವರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ) ಉದ್ದೇಶಕ್ಕಾಗಿ ಈ ನ್ಯಾಯಾಲಯದಲ್ಲಿ ಅಗತ್ಯವಾಗಿರುವುದರಿಂದ;

ಸದರಿ ------------ಆರೋಪಕ್ಕೆ ಉತ್ತರಿಸಲು ಅಥವಾ ಸದರಿ ವ್ಯವಹರಣೆಯ ಉದ್ದೇಶಕ್ಕಾಗಿ------20 ----- ದಿನಾಂಕದಂದು ಬೆಳಿಗ್ಗೆ ---- ಗಂಟೆಗೆ ಸದರಿ ------------- ನನ್ನ ಈ ನ್ಯಾಯಾಲಯದ ಮುಂದೆ ಸುರಕ್ಷಿತವಾಗಿಯೂ ಸುನಿಶ್ಚಿತವಾಗಿಯೂ ಕರೆದುಕೊಂಡು ಬಂದು ಹಾಜರುಪಡಿಸಬೇಕೆಂದು ಮತ್ತು ಈ ನ್ಯಾಯಾಲಯವು ಅವನ ಮುಂದಿನ ಹಾಜರಾತಿಯನ್ನು ಮನ್ನಾ ಮಾಡಿದ ಆನಂತರ ಅವನನ್ನು ಸದರಿ ಬಂದೀಖಾನೆಗೆ ಮರಳಿ ಸುರಕ್ಷಿತವಾಗಿಯೂ ಸುನಿಶ್ಚಿತವಾಗಿಯೂ ಕರೆದುಕೊಂಡು ಹೋಗಬೇಕೆಂದು ನಿಮ್ಮನ್ನು ಈ ಮೂಲಕ ಅಗತ್ಯಪಡಿಸಿದೆ.

ಮತ್ತು ಈ ಆದೇಶದ ಅಂಶಗಳನ್ನು ಸದರಿ ---------ನಿಗೆ ತಿಳಿಸಬೇಕೆಂದು ಮತ್ತು ಇದಕ್ಕೆ ಲಗತ್ತಿಸಿದ ಅದರ ಪ್ರತಿಯನ್ನು ಅವನಿಗೆ ಕೊಡಬೇಕೆಂದು ನಿಮ್ಮನ್ನು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

ಪ್ರತಿ ಸಹಿ ಮಾಡಲಾಗಿದೆ

(ಮೊಹರು) (ಸಹಿ)

*******

**ನಮೂನೆ ಸಂಖ್ಯೆ. 38**

**ಸಾಕ್ಷ್ಯ ಕೊಡುವುದಕ್ಕಾಗಿ ಬಂದೀಖಾನೆಯಲ್ಲಿರುವ ವ್ಯಕ್ತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಅಗತ್ಯಪಡಿಸುವ ಆದೇಶ**

**(302ನೇ ಪ್ರಕರಣವನ್ನು ನೋಡಿ)**

------------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

(ಆಪಾದಿತನ ವ್ಯಕ್ತಿಯ ಹೆಸರು) -------------- ನು --------------(ವೇಳೆ ಮತ್ತು ಸ್ಥಳ ಸಹಿತ ಅಪರಾಧವನ್ನು ಸಂಕ್ಷಿಪ್ತವಾಗಿ ವಿವರಿಸಿ) ಅಪರಾಧವನ್ನು ಮಾಡಿರುವನೆಂದು ಈ ನ್ಯಾಯಾಲಯದ ಮುಂದೆ ದೂರು ಬಂದಿರುವುದರಿಂದ ಮತ್ತು ಮೇಲ್ಕಂಡ ಬಂದೀಖಾನೆಯಲ್ಲಿ ಈಗ ಬಂಧನದಲ್ಲಿರುವ / ಸೆರೆಯಲ್ಲಿರುವ ----------- (ಕೈದಿಯ ಹೆಸರು) ನು ಪ್ರಾಸಿಕ್ಯೂಷನ್/ ಪ್ರತಿರಕ್ಷೆಯ ಪರವಾಗಿ ಮುಖ್ಯ ಸಾಕ್ಷ್ಯವನ್ನು ಕೊಡುವ ಸಂಭವವಿದೆಯೆಂದು ಕಂಡುಬಂದಿರುವುದರಿಂದ;

ಈಗ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ವಿಷಯದ ಬಗ್ಗೆ ಸಾಕ್ಷ್ಯ ನೀಡಲು ------------ 20 ---- ದಿನಾಂಕದಂದು ಬೆಳಿಗ್ಗೆ ----------- ಗಂಟೆಗೆ ಸದರಿ ----------- ನನ್ನು ಈ ನ್ಯಾಯಾಲಯದ ಮುಂದೆ ಸುರಕ್ಷಿತವಾಗಿ ಮತ್ತು ಸುನಿಶ್ಚಿತವಾಗಿ ಕರೆದುಕೊಂಡು ಬಂದು ಹಾಜರುಪಡಿಸಲು ಮತ್ತು ನ್ಯಾಯಾಲಯವು ಅವನ ಮುಂದಿನ ಹಾಜರಾತಿಯನ್ನು ಮನ್ನಾ ಮಾಡಿದ ಆನಂತರ ಅವನನ್ನು ಸದರಿ ಬಂದೀಖಾನೆಗೆ ಮರಳಿ ಸುರಕ್ಷಿತವಾಗಿ ಮತ್ತು ಸುನಿಶ್ಚಿತವಾಗಿ ಕರೆದುಕೊಂಡು ಹೋಗಲು ನಿಮ್ಮನ್ನು ಈ ಮೂಲಕ ಅಗತ್ಯಪಡಿಸಿದೆ;

ಮತ್ತು ಈ ಆದೇಶದ ಅಂಶಗಳನ್ನು ಸದರಿ ------------ ನಿಗೆ ತಿಳಿಸಬೇಕೆಂದು ಮತ್ತು ಇದಕ್ಕೆ ಲಗತ್ತಿಸಿದ ಅದರ ಪ್ರತಿಯನ್ನು ಅವನಿಗೆ ಕೊಡಬೇಕೆಂದು ನಿಮ್ಮನ್ನು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

ಪ್ರತಿ ಸಹಿ ಮಾಡಲಾಗಿದೆ

(ಮೊಹರು) (ಸಹಿ)

******

**ನಮೂನೆ ಸಂಖ್ಯೆ. 39**

**ಜುಲ್ಮಾನೆ ವಿಧಿಸಲಾದ ಬಗ್ಗೆ ನಿಂದನೆ ಮಾಡಿದ ಕೆಲವು ಮೊಕದ್ದಮೆಗಳಲ್ಲಿ ಬಂಧನಕ್ಕೊಪಿಸುವ ವಾರಂಟ್**

**(384ನೇ ಪ್ರಕರಣವನ್ನು ನೋಡಿ)**

------------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

ಈ ದಿನ ನನ್ನ ಮುಂದೆ ವ್ಯವಹರಣೆಯು ನಡೆಯುತ್ತಿರುವಾಗ ---------(ಅಪರಾಧಿಯ ಹೆಸರು ಮತ್ತು ವಿವರ) ನು ನ್ಯಾಯಾಲಯದ ಸಮ್ಮುಖದಲ್ಲಿ (ಅಥವಾ ಅದಕ್ಕೆ ಕಾಣುವಂತೆ) ಬುದ್ಧಿಪೂರ್ವಕವಾಗಿ ನಿಂದನೆ ಮಾಡಿರುವುದರಿಂದ;

ಮತ್ತು ಸದರಿ -------(ಅಪರಾಧಿಯ ಹೆಸರು) ನು ಅಂಥ ನಿಂದನೆಗಾಗಿ ------------ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡಬೇಕೆಂದು ನ್ಯಾಯಾಲಯವು ನಿರ್ಣಯಿಸಿರುವುದರಿಂದ ಅಥವಾ ಅದಕ್ಕೆ ತಪ್ಪಿದರೆ (ತಿಂಗಳು ಮತ್ತು ದಿನಗಳ ಅವಧಿಯನ್ನು ವಿವರಿಸಿ) ----------------ಅವಧಿಯು ಸಾದಾ ಕಾರಾವಾಸವನ್ನು ಅನುಭವಿಸಬೇಕಾಗಿರುವುದರಿಂದ;

ಈ ವಾರಂಟಿನ ಜೊತೆಗೆ ಸದರಿ --------(ಅಪರಾಧಿಯ ಹೆಸರು) ನನ್ನ ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳುವ ಮತ್ತು ಸದರಿ ಜುಲ್ಮಾನೆಯನ್ನು ಮುಂಚಿತವಾಗಿ ಸಂದಾಯ ಮಾಡಿದ ಹೊರತು, ಸದರಿ ---------(ಕಾರಾವಾಸದ ಅವಧಿ) ಅವಧಿಯವರೆಗೆ ಅವನನ್ನು ಸದರಿ ಜೈಲಿನಲ್ಲಿ ಸುರಕ್ಷಿತವಾಗಿರಿಸಿಕೊಳ್ಳಲು ಮತ್ತು ಅದು ಸಂದಾಯವಾದ ಕೂಡಲೇ ಅವನನ್ನು ಬಿಡುಗಡೆ ಮಾಡಲು ಮತ್ತು ವಾರಂಟನ್ನು ಜಾರಿಗೊಳಿಸಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಅದನ್ನು ಹಿಂದಿರುಗಿಸಲು ನಿಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 40

## ಉತ್ತರಿಸಲು ಅಥವಾ ದಸ್ತಾವೇಜನ್ನು ಹಾಜರುಪಡಿಸಲು ನಿರಾಕರಿಸುವ ಸಾಕ್ಷಿಯನ್ನು ಅಭಿರಕ್ಷೆಗೊಪ್ಪಿಸಲು ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಾಧೀಶನ ವಾರಂಟ್

**(388ನೇ ಪ್ರಕರಣವನ್ನು ನೋಡಿ)**

ಗೆ, ------------- (ನ್ಯಾಯಾಲಯದ ಅಧಿಕಾರಿಯ ಹೆಸರು ಮತ್ತು ಪದನಾಮ)

-----------(ಹೆಸರು ಮತ್ತು ವಿವರ) ನನ್ನು ಸಾಕ್ಷಿಯಾಗಿ ಸಮನ್ ಮಾಡಲಾಗಿದ್ದು (ಅಥವಾ ಈ ನ್ಯಾಯಾಲಯದ ಮುಂದೆ ಕರೆತರಲಾಗಿದ್ದು) ಆಪಾದಿಸಲಾದ ಅಪರಾಧದ ವಿಚಾರಣೆಯಲ್ಲಿ ಈ ದಿನ ಸಾಕ್ಷ್ಯ ಕೊಡಲು ಅವನನ್ನು ಅಗತ್ಯಪಡಿಸಿದ್ದು, ಆ ಆಪಾದಿಸಲಾದ ಅಪರಾಧಕ್ಕೆ ಸಂಬಂಧಿಸಿದಂತೆ ಮತ್ತು ಯುಕ್ತಬದ್ಧವಾಗಿ ದಾಖಲಿಸಿಕೊಂಡು ಅವನಿಗೆ ಕೇಳಲಾದ ಒಂದು ಪ್ರಶ್ನೆಗೆ (ಅಥವಾ ನಿಶ್ಚಿತ ಪ್ರಶ್ನೆಗಳಿಗೆ) ಉತ್ತರಿಸಲು ಅಥವಾ ಕೇಳಲಾದ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಯಾವುದೇ ನ್ಯಾಯಸಮ್ಮತವಾದ ಕಾರಣವಿಲ್ಲದೆ ನಿರಾಕರಿಸುವುದರಿಂದ ಮತ್ತು ಅವನ ನಿರಾಕರಣೆಯಿಂದಾಗಿ ಅವಧಿಯವರೆಗೆ ------------(ನ್ಯಾಯ ನಿರ್ಣೀತವಾದ ಬಂಧನದ ಅವಧಿ) ಅಭಿರಕ್ಷೆಯಲ್ಲಿ ಇಡಲು ಆದೇಶವಾಗಿರುವುದರಿಂದ;

ಸದರಿ -------(ಹೆಸರು) ನನ್ನು ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ------------- ದಿನಗಳ ಅವಧಿಯವರೆಗೆ ಸುರಕ್ಷಿತವಾಗಿ ಅವನನ್ನು ನಿಮ್ಮ ಅಭಿರಕ್ಷೆಯಲ್ಲಿಟ್ಟುಕೊಂಡಿರಲು ಮತ್ತು ಈ ಮಧ್ಯೆ ಅವನು ವಿಚಾರಣೆಗೆ ಒಪ್ಪಿದರೆ ಮತ್ತು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಅಥವಾ ಕೇಳಿದ ದಸ್ತಾವೇಜನ್ನು ಹಾಜರುಪಡಿಸಲು ಒಪ್ಪಿದರೆ ಸದರಿ ಅವಧಿಯ ಕೊನೆಯ ದಿನ ಅಥವಾ ಅಂಥ ಒಪ್ಪಿಗೆಯು ಗೊತ್ತಾದ ಕೂಡಲೇ ಕಾನೂನಿಗನುಸಾರವಾಗಿ ವ್ಯವಹರಿಸಲು ಅವನನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಮತ್ತು ವಾರಂಟನ್ನು ಜಾರಿಗೊಳಿಸಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಅದನ್ನು ಹಿಂದಿರುಗಿಸಲು ನಿಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 41

## ಮರಣ ಶಿಕ್ಷೆಯ ಆದೇಶದ ಮೇರೆಗೆ ಬಂಧನಕ್ಕೊಪ್ಪಿಸುವ ವಾರಂಟ್

## (407ನೇ ಪ್ರಕರಣವನ್ನು ನೋಡಿ)

----------------- ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

--------------- 20 --------------- ದಿನದಂದು ನನ್ನ ಮುಂದೆ ನಡೆದ ನ್ಯಾಯಾಲಯದ ಉಪವೇಶನದಲ್ಲಿ 20--------------- ವರ್ಷದ --------------- ಸಂಖ್ಯೆಯ ಮೊಕದ್ದಮೆಯಲ್ಲಿ ------ --------------- ದ ಬಗ್ಗೆ ವಿಚಾರಣೆಯಲ್ಲಿ -------------- (ಸಂದರ್ಭಾನುಸಾರವಾಗಿ 1ನೇ, 2ನೇ, 3ನೇ ಸಂಖ್ಯೆಯ) ಕೈದಿಯ --------(ಕೈದಿಯ ಹೆಸರು) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ------- --ಪ್ರಕರಣದ ಮೇರೆಗೆ ಕೊಲೆಯೆಂದು ಪರಿಗಣಿಸಬಹುದಾದ ಆಪರಾಧಿಕ ಮಾನವ ಹತ್ಯೆಯ ಬಗ್ಗೆ ಯುಕ್ತಬದ್ಧವಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ ಮತ್ತು ------------- ದ ------------- ನ್ಯಾಯಾಲಯದ ಸ್ಥಿರೀಕರಣಕ್ಕೊಳಪಟ್ಟು ಸದರಿ ------------ ಗೆ ಕಾರಣ ಶಿಕ್ಷೆಯನ್ನು ವಿಧಿಸಲಾಗಿರುವುದರಿಂದ;

ಈ ವಾರಂಟಿನ ಜೊತೆಗೆ ಸದರಿ ಜೈಲಿನಲ್ಲಿ ಸದರಿ --------(ಕೈದಿಯ ಹೆಸರು) ನನ್ನು ನಿಮ್ಮ ಅಭಿರಕ್ಷೆಯಲ್ಲಿ ತೆಗೆದುಕೊಳ್ಳಲು ಮತ್ತು ಹಾಗೆ ಸದರಿ ನ್ಯಾಯಾಲಯದ ಆದೇಶವನ್ನು ಜಾರಿ ಮಾಡಲು ಈ ನ್ಯಾಯಾಲಯದ ಮುಂದಿನ ವಾರಂಟ್ ಅಥವಾ ಆದೇಶವು ಬರುವವರೆಗೆ ಅವನನ್ನು ಸುರಕ್ಷಿತವಾಗಿರಿಸಿಕೊಳ್ಳಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 42**

**ಶಿಕ್ಷೆಯ ಆದೇಶದ ಶಿಕ್ಷೆಯನ್ನು ಪರಿವರ್ತಿಸಿದ ಆನಂತರ ಹೊರಡಿಸುವ ವಾರಂಟ್**

**(427,453 ಮತ್ತು 456ನೇ ಪ್ರಕರಣಗಳನ್ನು ನೋಡಿ)**

------------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

---------20---------- ದಿನದಂದು ನ್ಯಾಯಾಲಯದ ಉಪವೇಶನದಲ್ಲಿ ನಡೆದ ವಿಚಾರಣೆಯಲ್ಲಿ ---------- (ಸಂದರ್ಭಾನುಸಾರವಾಗಿ 1ನೇ, 2ನೇ, 3ನೇ) ಕ್ರಮ ಸಂಖ್ಯೆಯ ಕೈದಿಯ --------(ಕೈದಿಯ ಹೆಸರು) ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ ---------------- ಪ್ರಕರಣದ ಮೇರೆಗೆ ದಂಡನೀಯವಾದ -------------- ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ ಮತ್ತು ಅವನಿಗೆ --------------- ವಿಧಿಸಲಾಗಿದೆ ಮತ್ತು ಅದರ ಮೇಲೆ ಅವನನ್ನು ನಿಮ್ಮ ಅಭಿರಕ್ಷೆಗೆ ಒಪ್ಪಿಸಲಾಗಿದೆ ಮತ್ತು --------------- ನ್ಯಾಯಾಲಯದ ಆದೇಶದಿಂದ (ಅದರ ದ್ವಿಪ್ರತಿಯನ್ನು ಇಲ್ಲಿ ಲಗತ್ತಿಸಲಾಗಿದೆ) ಸದರಿ ಶಿಕ್ಷೆಯ ಆದೇಶದಲ್ಲಿ ನ್ಯಾಯನಿರ್ಣೀತವಾದ ದಂಡನೆಯನ್ನು ಆಜೀವ ಕಾರಾವಾಸಕ್ಕೆ ಪರಿವರ್ತಿಸಿರುವುದರಿಂದ,

ಸದರಿ ಆದೇಶದ ಮೇರೆಗೆ ಆಜೀವ ಕಾರಾವಾಸವನ್ನು ಅವನು ಅನುಭವಿಸುವ ಉದ್ದೇಶಕ್ಕಾಗಿ ಯುಕ್ತ ಪ್ರಾಧಿಕಾರಕ್ಕೆ ಮತ್ತು ಅಭಿರಕ್ಷೆಗೆ ನೀವು ಅವನನ್ನು ಒಪ್ಪಿಸುವವರೆಗೆ ಕಾನೂನಿನ ಮೂಲಕ ಅಗತ್ಯಪಡಿಸಿದಂತೆ ಸದರಿ--------(ಕೈದಿಯ ಹೆಸರು) ನು ಸದರಿ ಜೈಲಿನಲ್ಲಿ, ನಿಮ್ಮ ಅಭಿರಕ್ಷೆಯಲ್ಲಿ ಸುರಕ್ಷಿತವಾಗಿರಿಸಿಕೊಳ್ಳಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

ಅಥವಾ

ತಗ್ಗಿಸಿದ ಶಿಕ್ಷೆಯ ಆದೇಶವು ಕಾರಾವಾಸವಾಗಿದ್ದರೆ, "ನಿಮ್ಮ ಅಭಿರಕ್ಷೆಯಲ್ಲಿ ಸುರಕ್ಷಿತವಾಗಿರಿಸಿಕೊಳ್ಳಲು ಎಂಬ ಶಬ್ದಗಳ ಆನಂತರ ಮತ್ತು ಮೇಲ್ಕಂಡ ಆದೇಶದ ಮೇರೆಗೆ ಅಲ್ಲಿ ಕಾನೂನಿಗನುಸಾರವಾಗಿ ಕಾರಾವಾಸದ ದಂಡನೆಯನ್ನು ಜಾರಿಗೊಳಿಸಲು" ಎಂಬ ಶಬ್ಧಗಳನ್ನು ಸೇರಿಸಿ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 43

## ಮರಣದಂಡನೆ ಶಿಕ್ಷೆಯ ಆದೇಶದ ಜಾರಿಯ ಬಗ್ಗೆ ವಾರಂಟ್

## (453 ಮತ್ತು 454ನೇ ಪ್ರಕರಣಗಳನ್ನು ನೋಡಿ)

------------------ ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ,

20---------- ದಿನದಂದು ನನ್ನ ಮುಂದೆ ನಡೆದ ನ್ಯಾಯಾಲಯದ ಉಪವೇಶನದಲ್ಲಿ 20----------------- ವರ್ಷದ ------------------ಸಂಖ್ಯೆಯ -----------ಮೊಕದ್ದಮೆಯಲ್ಲಿ (ಸಂದರ್ಭಾನುಸಾರ 1ನೇ, 2ನೇ, 3ನೇ) ಸಂಖ್ಯೆಯ ಕೈದಿಯನ್ನು ----------(ಕೈದಿಯ ಹೆಸರು) ಮರಣದಂಡನೆಗೆ ಗುರಿಮಾಡಿ ಈ ------------- ನ್ಯಾಯಾಲಯದ ದಿನಾಂಕದ ವಾರಂಟಿನ ಮೂಲಕ ನಿಮ್ಮ ಅಭಿರಕ್ಷೆಗೆ ಒಪ್ಪಿಸಲಾಗಿರುವುದರಿಂದ; ಮತ್ತು ಸದರಿ ಶಿಕ್ಷೆಯ ಆದೇಶವನ್ನು ಸ್ಥಿರೀಕರಿಸಿದ ------------ ಉಚ್ಚ ನ್ಯಾಯಾಲಯದ, ಆದೇಶವು ಈ ನ್ಯಾಯಾಲಯಕ್ಕೆ ತಲುಪಿರುವುದರಿಂದ,

ಸದರಿ ------------------ನನ್ನು ------------(ಜಾರಿಯ ವೇಳೆ ಮತ್ತು ಸ್ಥಳ) ದಲ್ಲಿ ಅವನು ಸಾಯುವವರೆಗೆ ಅವನ ಕುತ್ತಿಗೆಗೆ ನೇಣು ಹಾಕುವುದರ ಮೂಲಕ ಸದರಿ ಶಿಕ್ಷೆಯ ಆದೇಶವನ್ನು ಜಾರಿಗೊಳಿಸಲು ಮತ್ತು ಶಿಕ್ಷೆಯ ಆದೇಶವನ್ನು ಜಾರಿಗೊಳಿಸಿರುವುದನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ನ್ಯಾಯಾಲಯಕ್ಕೆ ಈ ವಾರಂಟನ್ನು ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 44

## ಜಪ್ತಿ ಮತ್ತು ಮಾರಾಟದ ಮೂಲಕ ಜುಲ್ಮಾನೆಯ ವಸೂಲಿಗಾಗಿ ವಾರಂಟ್

## (461ನೇ ಪ್ರಕರಣವನ್ನು ನೋಡಿ)

ಗೆ, ----------------- (ವಾರಂಟನ್ನು ಜಾರಿಗೊಳಿಸುವ ಪೊಲೀಸ್ ಅಧಿಕಾರಿಯ ಅಥವಾ ಇತರ ವ್ಯಕ್ತಿಯ ಅಥವಾ ವ್ಯಕ್ತಿಗಳ ಹೆಸರು ಮತ್ತು ಪದನಾಮ)

20--------- ದಿನದಂದು --------------(ಅಪರಾಧಿಯ ಹೆಸರು ಮತ್ತು ವಿವರ) ಎಂಬವನು ನನ್ನ ಮುಂದೆ ---------------(ಅಪರಾಧವನ್ನು ಸಂಕ್ಷಿಪ್ತವಾಗಿ ವಿವರಿಸಿ) ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ; ಮತ್ತು ---------------- ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡಲು ಶಿಕ್ಷೆಯ ಆದೇಶಿತನಾಗಿದ್ದಾನೆ; ಮತ್ತು ಸದರಿ -----------(ಹೆಸರು) ನು ಸದರಿ ಜುಲ್ಮಾನೆಯನ್ನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ್ದರೂ ಅದನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡಿಲ್ಲ, ಆದ್ದರಿಂದ;

-------------- ಜಿಲ್ಲೆಯೊಳಗಿರಬಹುದಾದ ಸದರಿ -----------(ಹೆಸರು) ಗೆ ಸೇರಿದ ಯಾವುದೇ ಚರ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಅಂಥ ಜಪ್ತಿಯ ಆನಂತರ ಅಥವಾ ಆ ಕೂಡಲೇ ----------- (ಅವಕಾಶ ಕೊಡಲಾದ ದಿನಗಳು ಅಥವಾ ಗಂಟೆಗಳನ್ನು ನಮೂದಿಸಿ) ಸದರಿ ಮೊಬಲಗು ಸಂದಾಯವಾಗದಿರುವಲ್ಲಿ, ಜಪ್ತಿ ಮಾಡಿದ ಚರ ಸ್ವತ್ತನ್ನು ಅಥವಾ ಸದರಿ ಜುಲ್ಮಾನೆಗೆ ಸಾಕಾಗುವಷ್ಟು ಅದರ ಭಾಗವನ್ನು ಮಾರಲು ಮತ್ತು ವಾರಂಟನ್ನು ಜಾರಿ ಮಾಡಿದ ಕೂಡಲೇ ಅದರ ಮೇರೆಗೆ ನೀವು ಏನು ಮಾಡಿದಿರಿ ಎಂಬುದನ್ನು ಪ್ರಾಮಾಣೀಕರಿಸುವ ಹಿಂಬರಹದೊಂದಿಗೆ ಅದನ್ನು ಹಿಂದಿರುಗಿಸಲು, ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 45**

**ಜುಲ್ಮಾನೆಯನ್ನು ವಸೂಲ್ಮಾಡುವ ಬಗ್ಗೆ ವಾರಂಟ್**

**(461ನೇ ಪ್ರಕರಣವನ್ನು ನೋಡಿ)**

ಗೆ, ----------------- ಜಿಲ್ಲೆಯ ಕಲೆಕ್ಟರ್, ಜಿಲ್ಲಾಧಿಕಾರಿ

---------- (ಅಪರಾಧಿಯ ಹೆಸರು ವಿಳಾಸ ಮತ್ತು ವಿವರ)ನು ---------------- 20 ---- ದಿನಾಂಕದಂದು ನನ್ನ ಮುಂದೆ ------------- (ಅಪರಾಧವನ್ನು ಸಂಕ್ಷಿಪ್ತವಾಗಿ ವಿವರಿಸಿ) ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ ಮತ್ತು ---------------- ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡಲು ಶಿಕ್ಷೆಯಿಂದ ಆದೇಶಿತನಾಗಿದ್ದಾನೆ; ಮತ್ತು

ಸದರಿ -------------(ಹೆಸರು) ನು, ಸದರಿ ಜುಲ್ಮಾನೆಯನ್ನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ್ದರೂ, ಅದನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡಿಲ್ಲ ಆದ್ದರಿಂದ;

ಸದರಿ ----------(ಹೆಸರು) ಎಂಬವನ ಚರ ಅಥವಾ ಸ್ಥಿರ ಸ್ವತ್ತಿನಿಂದ ಅಥವಾ ಅವೆರಡರಿಂದಲೂ ಭೂ ಕಂದಾಯದ ಬಾಕಿಯಂತೆ ಸದರಿ ಜುಲ್ಮಾನೆಯ ಮೊಬಲಗನ್ನು ವಸೂಲು ಮಾಡಲು ಮತ್ತು ಆದೇಶಕ್ಕೆ ಅನುಸಾರವಾಗಿ ನೀವು ಏನು ಮಾಡಿದಿರಿ ಎಂಬುದನ್ನು ವಿಳಂಬ ಮಾಡದೆ ಪ್ರಮಾಣೀಕರಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 46

## ಜುಲ್ಮಾನೆಯ ವಸೂಲಿಯು ಬಾಕಿಯಿರುವಾಗ ಬಿಡುಗಡೆಯಾದ ಅಪರಾಧಿಯ ಹಾಜರಾತಿಗಾಗಿ ಬಂಧಪತ್ರ

**(464 (1) (ಬಿ)ನೇ ಪ್ರಕರಣವನ್ನು ನೋಡಿ)**

-------(ಸ್ಥಳದ) ನಿವಾಸಿಯಾದ ನಾನು ----------(ಹೆಸರು)-----------------ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡಲು ಮತ್ತು ಅದನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ ----------------ಗಾಗಿ ಕಾರಾವಾಸವನ್ನು ಅನುಭವಿಸಲು ಶಿಕ್ಷೆಗೊಳಗಾಗಿರುವುದರಿಂದ ಮತ್ತು --------ಈ ಕೆಳಕಂಡ ದಿನಾಂಕ (ಅಥವಾ ದಿನಾಂಕಗಳಂದು) ನನ್ನ ಹಾಜರಾತಿಗಾಗಿ ಬಂಧಪತ್ರವನ್ನು ನಾನು ಬರೆದುಕೊಡುವ ಷರತ್ತಿನ ಮೇಲೆ ನನ್ನನ್ನು ಬಿಡುಗಡೆ ಮಾಡುವಂತೆ ನ್ಯಾಯಾಲಯವು ಆದೇಶ ನೀಡಿರುವುದರಿಂದ; ಅಂದರೆ:-

-------------- ನ್ಯಾಯಾಲಯದ ಮುಂದೆ --------- ಗಂಟೆಗೆ ಈ ಕೆಳಕಂಡ ದಿನಾಂಕದಂದು (ಅಥವಾ ದಿನಾಂಕಗಳಂದು) ಖುದ್ದಾಗಿ ಹಾಜರಾಗಲು ನಾನು ಈ ಮೂಲಕ ಬದ್ಧನಾಗಿರುತ್ತೇನೆ; ಅಂದರೆ:-

ಮತ್ತು ಇದಕ್ಕೆ ತಪ್ಪುವ ಸಂದರ್ಭದಲ್ಲಿ ----------- ರೂಪಾಯಿಗಳ ಮೊತ್ತವನ್ನು ಸರ್ಕಾರ ಮುಟ್ಟುಗೋಲಾಗಿಸಲು ನಾನು ಬದ್ಧನಾಗಿರುತ್ತೇನೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

ಜಾಮೀನುದಾರರೊಂದಿಗೆ ಬಂಧಪತ್ರವನ್ನು ಬರೆದುಕೊಡುವಾಗ ಸೇರಿಸಿ-

ಮೇಲೆ ಹೆಸರಿಸಿದವನಿಗೆ, ಜಾಮೀನುದಾರರಾದ ನಾವು, ಅವನು ----------------ನ್ಯಾಯಾಲಯದ ಮುಂದೆ ಈ ಕೆಳಕಂಡ ದಿನಾಂಕದಂದು (ಅಥವಾ ದಿನಾಂಕಗಳಂದು) ಹಾಜರಾಗುತ್ತೇವೆಂದು ಈ ಮೂಲಕ ಘೋಷಿಸುತ್ತೇವೆ, ಎಂದರೆ:-

ಮತ್ತು ಅವನು ಅದಕ್ಕೆ ತಪ್ಪಿದ್ದಲ್ಲಿ ನಾವು ಒಟ್ಟಾಗಿ ಮತ್ತು ಪ್ರತ್ಯೇಕವಾಗಿ ರೂಪಾಯಿಗಳ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲಾಗಿಸಲು ನಾವು ಬದ್ಧರಾಗಿದ್ದೇವೆ.

(ಸಹಿ)

******

## ನಮೂನೆ ಸಂಖ್ಯೆ. 47

## ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಅಥವಾ ನ್ಯಾಯಾಲಯದ ಮುಂದೆ ಹಾಜರಾಗುವುದಕ್ಕಾಗಿ ಬಂಧಪತ್ರ ಮತ್ತು ಜಾಮೀನು ಬಂಧಪತ್ರ

**[478, 479, 480, 481, 482(3) ಮತ್ತು 485ನೇ ಪ್ರಕರಣಗಳನ್ನು ನೋಡಿ]**

ನಾನು ---------------- (ಸ್ಥಳ)ದ ಹೆಸರು ------------ ಅಪರಾಧದ ಆಪಾದನೆಯ ವಾರಂಟಿಲ್ಲದೆಯೇ ಮೇಲೆ ------------ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಮೂಲಕ ದಸ್ತಗಿರಿ ಮಾಡಲ್ಪಟ್ಟಿದ್ದೇನೆ ಅಥವಾ ಬಂಧಿಸಲ್ಪಟ್ಟಿದ್ದೇನೆ (ಅಥವಾ ನನ್ನನ್ನು ----------------ನ್ಯಾಯಾಲಯದ ಮುಂದೆ ಕರೆತರಲಾಗಿದೆ) ಮತ್ತು -----------ಅಂಥ ಆಪಾದನೆಗೆ ಸಂಬಂಧಿಸಿದ ಯಾವುದೇ ತನಿಖೆ ಅಥವಾ ವಿಚಾರಣೆಯು ನಡೆಯುವ ಪ್ರತಿಯೊಂದು ದಿನ ಅಂಥ ಅಧಿಕಾರಿಯ ಅಥವಾ ನ್ಯಾಯಾಲಯದ ಮುಂದೆ ನಾನು ಹಾಜರಾಗುವೆನೆಂಬ ಷರತ್ತಿನ ಮೇಲೆ ಅಂಥ ಅಧಿಕಾರಿ ಅಥವಾ ನ್ಯಾಯಾಲಯದ ಮುಂದೆ ಭದ್ರತೆ ಕೊಡಲು ನನ್ನನ್ನು ಅಗತ್ಯಪಡಿಸಲಾಗಿದೆ ಮತ್ತು ಅದಕ್ಕೆ ತಪ್ಪಿದರೆ ----------------ರೂಪಾಯಿಗಳ ಮೊಬಲಗನ್ನು ಸರ್ಕಾರಕ್ಕೆ ಕೊಡಲು ನಾನು ಬದ್ಧನಾಗಿರುತ್ತೇನೆ.

20____ರ _______ನ_________ನೇ ದಿನಾಂಕ.

(ಸಹಿ)

ಸದರಿ ----------(ಹೆಸರು) ಯ ಮೇಲೆ ಮಾಡಲಾದ ಆಪಾದನೆಗೆ ಸಂಬಂಧಿಸಿದ ಯಾವುದೇ ತನಿಖೆಯು ನಡೆಯುವ ಅಥವಾ ಅಂಥ ಆಪಾದನೆಗೆ ಸಂಬಂಧಿಸಿದ ಯಾವುದೇ ವಿಚಾರಣೆಯು ನಡೆಯುವ ಪ್ರತಿಯೊಂದು ದಿನವೂ ------ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿಯ ಅಥವಾ ---------ನ್ಯಾಯಾಲಯದ ಮುಂದೆ ಹಾಜರಾಗುವೆನೆಂದು ಮತ್ತು ಅಂಥ ತನಿಖೆಯ ಉದ್ದೇಶಕ್ಕಾಗಿ ಅಥವಾ ಆಪಾದನೆಗೆ ಉತ್ತರಿಸುವುದಕ್ಕಾಗಿ (ಸಂದರ್ಭಾನುಸಾರ) ಅಂಥ ಅಧಿಕಾರಿಯ ಅಥವಾ ನ್ಯಾಯಾಲಯದ ಮುಂದೆ ಇರುವೆನೆಂದು ಅಥವಾ ಹಾಜರಾಗುವೆನೆಂದು (ನಾನು ಅಥವಾ ನಾವು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ) ಸದರಿ ವ್ಯಕ್ತಿಗೆ ----(ಹೆಸರು) ಜಾಮೀನುದಾರನಾಗಿರುವೆನೆಂದು (ಜಾಮೀನುದಾರರಾಗಿರುವೆವೆಂದು) ಘೋಷಿಸುತ್ತೇನೆ (ಘೋಷಿಸುತ್ತೇವೆ) ಮತ್ತು ಅವನು ಇದಕ್ಕೆ ತಪ್ಪಿದರೆ ------------ರೂಪಾಯಿಗಳ ಮೊಬಲಗನ್ನು ಸರ್ಕಾರಕ್ಕೆ ಕೊಡಲು ನಾನು ಈ ಮೂಲಕ (ಅಥವಾ ನಾವು ಈ ಮೂಲಕ) ಬದ್ಧರಾಗಿರುತ್ತೇನೆ (ಬದ್ಧರಾಗಿರುತ್ತೇವೆ).

20____ರ _______ನ_________ನೇ ದಿನಾಂಕ.

(ಸಹಿ)

******

**ನಮೂನೆ ಸಂಖ್ಯೆ. 48**

**ಭದ್ರತೆ ಕೊಡಲು ತಪ್ಪಿದ್ದಕ್ಕಾಗಿ ಬಂಧನದಲ್ಲಿರುವ ವ್ಯಕ್ತಿಯನ್ನು ಬಿಡುಗಡೆ ಮಾಡಲು ವಾರಂಟ್**

**(487ನೇ ಪ್ರಕರಣವನ್ನು ನೋಡಿ)**

---------------- ಜೈಲಿನ ಪ್ರಭಾರವನ್ನು ಹೊಂದಿರುವ ಅಧಿಕಾರಿಗೆ (ಅಥವಾ ಯಾರ ಅಭಿರಕ್ಷೆಯಲ್ಲಿ ಆ ವ್ಯಕ್ತಿಯು ಇರುವನೋ ಆ ಅಧಿಕಾರಿಗೆ),

----------------- (ಕೈದಿಯ ಹೆಸರು ಮತ್ತು ವಿವರ)ನನ್ನು ಈ ನ್ಯಾಯಾಲಯದ --------- ದಿನಾಂಕದ ವಾರಂಟಿನ ಮೇರೆಗೆ ನಿಮ್ಮ ಅಭಿರಕ್ಷೆಗೆ ಒಪ್ಪಿಸಲಾಗಿದ್ದು ಮತ್ತು ಅವನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ 46)ರ 485ನೇ ಪ್ರಕರಣದ ಮೇರೆಗೆ ಜಾಮೀನುದಾರನೊಂದಿಗೆ (ಅಥವಾ ಜಾಮೀನುದಾರರೊಂದಿಗೆ) ಬಂಧಪತ್ರವನ್ನು ಯುಕ್ತಬದ್ಧವಾಗಿ ಬರೆದುಕೊಟ್ಟಿರುವುದರಿಂದ;

ಬೇರೆ ಇತರ ಕಾರಣಕ್ಕಾಗಿ ಅವನನ್ನು ಬಂಧನದಲ್ಲಿಡಬೇಕಾಗಿದ್ದ ಹೊರತು ಸದರಿ ------------(ಹೆಸರು) ನನ್ನು ನಿಮ್ಮ ಅಭಿರಕ್ಷೆಯಿಂದ ಕೂಡಲೇ ಬಿಡುಗಡೆಗೊಳಿಸಿ ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 49

## ಬಂಧಪತ್ರವನ್ನು ಜಾರಿಗೊಳಿಸುವುದಕ್ಕಾಗಿ ಜಪ್ತಿ ವಾರಂಟ್

## (491ನೇ ಪ್ರಕರಣವನ್ನು ನೋಡಿ)

--------------- ದ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಪೊಲೀಸ್ ಅಧಿಕಾರಿಗೆ,

---------- ನು (ವ್ಯಕ್ತಿಯ ಹೆಸರು, ವಿವರಣೆ ಮತ್ತು ವಿಳಾಸ) ---------ರಂದು ---------- (ಸಂದರ್ಭವನ್ನು ವಿವರಿಸಿ) ಅವನ ಮುಚ್ಚಳಿಕೆಗೆ ಅನುಸಾರವಾಗಿ ಹಾಜರಾಗಲು ತಪ್ಪಿರುವುದರಿಂದ ಮತ್ತು ಆ ತಪ್ಪಿತದಿಂದಾಗಿ ಸರ್ಕಾರಕ್ಕೆ (ಬಂಧಪತ್ರದಲ್ಲಿನ ದಂಡ) ---------- ರೂಪಾಯಿಗಳ ಮೊತ್ತವನ್ನು ಮುಟ್ಟುಗೋಲಾಗಿಸಿರುವುದರಿಂದ ಮತ್ತು ಸದರಿ ------- (ವ್ಯಕ್ತಿಯ ಹೆಸರು) ನು ಯುಕ್ತ ಸೂಚನೆಯ ಮೇಲೆ ಸದರಿ ಮೊತ್ತವನ್ನು ಸಂದಾಯ ಮಾಡಲು ಅಥವಾ ಅವನ ವಿರುದ್ಧವಾಗಿ ಸಂದಾಯವನ್ನು ಏತಕ್ಕಾಗಿ ಜಾರಿಗೊಳಿಸಬಾರದು ಎನ್ನುವುದಕ್ಕೆ ಸಾಕಷ್ಟು ಕಾರಣವನ್ನು ತೋರಿಸಲು ಅವನು ತಪ್ಪಿರುವುದರಿಂದ;

------------- ಜಿಲ್ಲೆಯೊಳಗೆ ನೀವು ಕಾಣಬಹುದಾದಂಥ ಸದರಿ ---------- ಎಂಬವನ (ಹೆಸರು) ಯಾವುದೇ ಚರ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳುವುದರ ಮತ್ತು ತಡೆಹಿಡಿದಿರುವುದರ ಮೂಲಕ ಜಪ್ತಿ ಮಾಡಲು ಮತ್ತು ಸದರಿ ಮೊಬಲಗನ್ನು ---------- ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ, ಹಾಗೆ ಜಪ್ತಿ ಮಾಡಿದ ಸ್ವತ್ತನ್ನು ಅಥವಾ ಹಿಂದೆ ಹೇಳಿದ ಮೊಬಲಗನ್ನು ವಸೂಲಿ ಮಾಡುವುದಕ್ಕೆ, ಸಾಕಾಗುವಷ್ಟನ್ನು ಮಾರಾಟ ಮಾಡಲು ಮತ್ತು ಈ ವಾರಂಟ್ ಮೇರೆಗೆ ನೀವು ಏನು ಮಾಡಿದ್ದೀರಿ ಎಂಬ ಬಗ್ಗೆ ವಿವರಣಾ ಪಟ್ಟಿ ಸಲ್ಲಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 50**

**ಬಂಧಪತ್ರದ ಉಲ್ಲಂಘನೆಗಾಗಿ ಜಾಮೀನುದಾರನಿಗೆ ನೋಟೀಸು**

**(491ನೇ ಪ್ರಕರಣವನ್ನು ನೋಡಿ)**

ಗೆ, --------------------

20---------- ನೇ ---------- ತಿಂಗಳು ----------ನೇ ದಿನದಂದು. ನೀವು---------- (ಸ್ಥಳ) ದ ---------- (ಹೆಸರು) ಎಂಬವನಿಗೆ ಅವನು ನ್ಯಾಯಾಲಯದ ಮುಂದೆ ---------- ದಿನದಂದು ಹಾಜರಾಗುವುದಕ್ಕೆ ಜಾಮೀನುದಾರರಾಗಿರುವುದರಿಂದ ಮತ್ತು ಅದಕ್ಕೆ ತಪ್ಪಿದ್ದಲ್ಲಿ ------------------------- ರೂಪಾಯಿಗಳ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲಾಗಿಸಲು ನೀವು ಕೂಡ ಬದ್ಧರಾಗಿದ್ದರಿಂದ ಮತ್ತು ಸದರಿ ------- (ಹೆಸರು) ಎಂಬವನು, ಈ ನ್ಯಾಯಾಲಯದ ಮುಂದೆ ಹಾಜರಾಗಲು ತಪ್ಪಿರುವುದರಿಂದ ಮತ್ತು ಅಂಥ ತಪ್ಪಿತದ ಕಾರಣದಿಂದಾಗಿ ನೀವು ಹಿಂದೆ ಹೇಳಿದ ರೂಪಾಯಿಗಳ ಮೊತ್ತವನ್ನು ಮುಟ್ಟುಗೋಲಾಗಿಸಿರುವುದರಿಂದ.

ಸದರಿ ದಂಡವನ್ನು ಸಂದಾಯ ಮಾಡಲು ಅಥವಾ ಈ ದಿನಾಂಕದಿಂದ --------ದಿನಗಳೊಳಗೆ ಸದರಿ ಮೊತ್ತದ ಸಂದಾಯವನ್ನು ನಿಮ್ಮ ವಿರುದ್ಧ ಜಾರಿಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ನಿಮ್ಮನ್ನು ಈ ಮೂಲಕ ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 51

## ಸದ್ವರ್ತನೆ ಬಂಧಪತ್ರದ ಮುಟ್ಟುಗೋಲು ಬಗ್ಗೆ ಜಾಮೀನುದಾರನಿಗೆ ನೋಟೀಸು

## (491ನೇ ಪ್ರಕರಣವನ್ನು ನೋಡಿ)

ಗೆ, --------------------

20---------- ನೇ ---------- ತಿಂಗಳು ----------ನೇ ದಿನದಂದು. ನೀವು ---------- (ಸ್ಥಳ) ದ ---------- (ಹೆಸರು) ಎಂಬವನಿಗೆ ಅವನು --------- ಅವಧಿಯವರೆಗೆ ಸದ್ವರ್ತನೆಯಿಂದ ಇರುವನೆಂಬ ಬಗ್ಗೆ ಜಾಮೀನುದಾರನಾಗಿರುವುದರಿಂದ ಮತ್ತು ಅದಕ್ಕೆ ತಪ್ಪಿದರೆ, --------- ರೂಪಾಯಿಗಳ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲಾಗಿಸಲು ನೀನು ಬದ್ಧನಾಗಿದ್ದರಿಂದ ಮತ್ತು ಸದರಿ ----------(ಹೆಸರು) ನು, ನೀವು ಅಂಥ ಜಾಮೀನುದಾರನಾದಂದಿನಿಂದ ---------(ಅಪರಾಧದ ಹೆಸರನ್ನು ಸಂಕ್ಷಿಪ್ತವಾಗಿ ವಿವರಿಸಿ) ಅಪರಾಧ ಮಾಡಿದ್ದಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವುದರಿಂದ, ಅದರಿಂದಾಗಿ ನಿಮ್ಮ ಭದ್ರತಾ ಬಂಧಪತ್ರ ಮುಟ್ಟುಗೋಲು ಆಗಿರುವುದರಿಂದ;

ಸದರಿ --------- ರೂಪಾಯಿಗಳ ದಂಡವನ್ನು ಸಂದಾಯ ಮಾಡಲು ಅಥವಾ ಅದನ್ನು ಏಕೆ ಸಂದಾಯ ಮಾಡುವುದಿಲ್ಲ ಎಂಬುದಕ್ಕೆ ---------ದಿನಗಳೊಳಗೆ ಕಾರಣ ತೋರಿಸುವಂತೆ ನಿಮ್ಮನ್ನು ಈ ಮೂಲಕ ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 52**

**ಜಾಮೀನುದಾರನ ವಿರುದ್ಧ ಜಪ್ತಿ ವಾರಂಟ್**

**(491ನೇ ಪ್ರಕರಣವನ್ನು ನೋಡಿ)**

ಗೆ, ----------ದ

------------- (ಹೆಸರು, ವಿವರಣೆ ಮತ್ತು ವಿಳಾಸ) ಎಂಬವನು ----------(ಬಂಧಪತ್ರದ ಷರತ್ತುಗಳನ್ನು ನಮೂದಿಸಿ) ಹಾಜರಾಗುವುದಕ್ಕಾಗಿ ಜಾಮೀನುದಾರನಾಗಿ ಸ್ವತಃ ಬದ್ಧನಾಗಿರುವುದರಿಂದ ಮತ್ತು ಸದರಿ ---------- (ಹೆಸರು)ನ್ನು ಅದಕ್ಕೆ ತಪ್ಪಿರುವುದರಿಂದ ಮತ್ತು ಅದರಿಂದಾಗಿ ---------- ಬಂಧಪತ್ರದಲ್ಲಿನ ದಂಡ) ರೂಪಾಯಿಗಳ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಆಗಿಸಿರುವುದರಿಂದ;

ಜಿಲ್ಲೆಯೊಳಗೆ ನೀವು ಕಾಣಬಹುದಾದಂಥ, ಸದರಿ --------- (ಹೆಸರು)ನ ಯಾವುದೇ ಚರ ಸ್ವತ್ತನ್ನು ಅಭಿಗ್ರಹಣ ಮತ್ತು ತಡೆಹಿಡಿದಿರುವುದರ ಮೂಲಕ ಜಪ್ತಿ ಮಾಡಲು ಮತ್ತು ಸದರಿ ಮೊಬಲಗನ್ನು ---------ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ ಹಾಗೆ ಜಪ್ತಿ ಮಾಡಿದ ಸ್ವತ್ತನ್ನು ಅಥವಾ ಹಿಂದೆ ಹೇಳಿದ ಮೊಬಲಗನ್ನು, --------- ವಸೂಲಿ ಮಾಡುವುದಕ್ಕೆ ಸಾಕಾಗುವಷ್ಟನ್ನು ಮಾರಾಟ ಮಾಡಲು ಮತ್ತು ಈ ವಾರಂಟಿನ ಮೇರೆಗೆ ನೀವು ಏನು ಮಾಡಿದ್ದೀರಿ ಎಂಬ ಬಗ್ಗೆ ಕೂಡಲೇ ವಿವರಣಾ ಪಟ್ಟಿ ಸಲ್ಲಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 53**

**ಜಾಮೀನು ಪಡೆದ ಆಪಾದಿತ ವ್ಯಕ್ತಿಯ ಜಾಮೀನುದಾರನನ್ನು ಒಪ್ಪಿಸುವಿಕೆಯ ವಾರಂಟ್**

**(491ನೇ ಪ್ರಕರಣವನ್ನು ನೋಡಿ)**

ಗೆ, ---------- (ಸ್ಥಳ)ದ ಸಿವಿಲ್ ಜೈಲಿನ ಅಧೀಕ್ಷಕ (ಅಥವಾ ರಕ್ಷಕ)

---------- (ಜಾಮೀನುದಾರನ ಹೆಸರು ಮತ್ತು ವಿವರ) ನು ---------- (ಬಂಧಪತ್ರದ ಷರತ್ತುಗಳನ್ನು ತಿಳಿಸಿ) ಹಾಜರಾತಿಗಾಗಿ ಜಾಮೀನುದಾರನಾಗಿ ಸ್ವತಃ ಬದ್ಧನಾಗಿರುವುದರಿಂದ ಮತ್ತು ಸದರಿ ---------- (ಹೆಸರು)ನು ಅದಕ್ಕೆ ತಪ್ಪಿರುವುದರಿಂದ, ಆ ಮೂಲಕ ಸದರಿ ಬಂಧಪತ್ರದಲ್ಲಿ ನಮೂದಿಸಲಾದ ದಂಡವು ಸರ್ಕಾರಕ್ಕೆ ಮುಟ್ಟುಗೋಲಾಗಿರುವುದರಿಂದಾಗಿ ಮತ್ತು ಸದರಿ ---------- (ಜಾಮೀನುದಾರನ ಹೆಸರು) ನು ಅವನಿಗೆ ಕೊಟ್ಟ ಯುಕ್ತ ನೋಟೀಸಿನ ಮೇಲೆ ಸದರಿ ಮೊತ್ತವನ್ನು ಸಂದಾಯ ಮಾಡಲು ಅಥವಾ ಅವನ ವಿರುದ್ಧವಾಗಿ ಸಂದಾಯವನ್ನು ಏಕೆ ಜಾರಿಗೊಳಿಸಬಾರದು ಎಂಬುದಕ್ಕೆ ಯಾವ ಸಾಕಷ್ಟು ಕಾರಣಗಳನ್ನು ತೋರಿಸಲು ಅವನು ತಪ್ಪಿದರಿಂದ ಮತ್ತು ಅದನ್ನು ಅವನ ಚರ ಸ್ವತ್ತಿನ ಜಪ್ತಿ ಮತ್ತು ಮಾರಾಟದಿಂದ ವಸೂಲಿ ಮಾಡುವುದು ಸಾಧ್ಯವಾಗದಿರುವುದರಿಂದ ಮತ್ತು ಸಿವಿಲ್ ಜೈಲಿನಲ್ಲಿ ಅವನನ್ನು ---------- (ಅವಧಿಯನ್ನು ತಿಳಿಸಿ) ಕಾರಾಗೃಹದಲ್ಲಿಡಲು ಆದೇಶವನ್ನು ಮಾಡಲಾಗಿರುವುದರಿಂದ,

ಸದರಿ ಅಧೀಕ್ಷಕ ----------(ಅಥವಾ ರಕ್ಷಕ) ನಾದ ನೀವು, ಸದರಿ ---------- (ಹೆಸರು)ನನ್ನು ಈ ವಾರಂಟ್‌ನೊಂದಿಗೆ ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಅವನನ್ನು ಸದರಿ ಜೈಲಿನಲ್ಲಿ ಸದರಿ ---------- (ಕಾರಾವಾಸದ ಅವಧಿ) ವರೆಗೆ ಸುರಕ್ಷಿತವಾಗಿಟ್ಟುಕೊಳ್ಳಲು ಮತ್ತು ಈ ವಾರಂಟನ್ನು ಅದನ್ನು ಜಾರಿಗೊಳಿಸಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಹಿಂತಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 54

## ಶಾಂತಿಪಾಲನೆಗಾಗಿರುವ ಬಂಧಪತ್ರದ ಮುಟ್ಟುಗೋಲಿನ ಬಗ್ಗೆ ಮೂಲಕರ್ತನಿಗೆ ನೋಟೀಸು

**(491ನೇ ಪ್ರಕರಣವನ್ನು ನೋಡಿ)**

ಗೆ, ---------- (ಹೆಸರು, ವಿವರ ಮತ್ತು ವಿಳಾಸ)

20 ----------ನೇ ----------ತಿಂಗಳು---------- ದಿನದಂದು, ನೀವು ---------- (ಬಂಧಪತ್ರದಲ್ಲಿರುವಂತೆ) ಇತ್ಯಾದಿ ಮಾಡುವುದಿಲ್ಲವೆಂದು ಬಂಧಪತ್ರವನ್ನು ಬರೆದುಕೊಟ್ಟಿದ್ದು ಮತ್ತು ಅದನ್ನು ಮುಟ್ಟುಗೋಲು ಹಾಕಿದ್ದಕ್ಕೆ ನನ್ನ ಮುಂದೆ ರುಜುವಾತುಪಡಿಸಿರುವುದರಿಂದ ಮತ್ತು ಅದನ್ನು ಯುಕ್ತಬದ್ಧವಾಗಿ ದಾಖಲು ಮಾಡಿರುವುದರಿಂದ;

ಸದರಿ ---------- ರೂಪಾಯಿಗಳ ದಂಡವನ್ನು ಸಂದಾಯ ಮಾಡುವಂತೆ ಅಥವಾ ಅದರ ಸಂದಾಯವನ್ನು ನಿಮ್ಮ ವಿರುದ್ಧ ಏಕೆ ಜಾರಿಗೊಳಿಸಬಾರದು ಎಂಬುದಕ್ಕೆ ----------ದಿನಗಳೊಳಗಾಗಿ ನನ್ನ ಮುಂದೆ ಕಾರಣ ತೋರಿಸುವಂತೆ ನಿಮ್ಮನ್ನು ಈ ಮೂಲಕ ಕೇಳಲಾಗಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

## ನಮೂನೆ ಸಂಖ್ಯೆ. 55

## ಶಾಂತಿಪಾಲನೆಗಾಗಿರುವ ಬಂಧಪತ್ರದ ಉಲ್ಲಂಘನೆಗೆ ಮೂಲಕರ್ತನ ಸ್ವತ್ತನ್ನು ಜಪ್ತಿ ಮಾಡಲು ವಾರಂಟ್

**(491ನೇ ಪ್ರಕರಣವನ್ನು ನೋಡಿ)**

------------- (ಸ್ಥಳ)ದ ಪೊಲೀಸ್ ಠಾಣೆಯ ------------- (ಪೊಲೀಸ್ ಅಧಿಕಾರಿಯ ಹೆಸರು ಮತ್ತು ಪದನಾಮ)ಗೆ ------------- (ಹೆಸರು ಮತ್ತು ವಿವರ)ನು 20 -------------ನೇ -------------ತಿಂಗಳು -------------ದಿನದಂದು ಶಾಂತಿ ಉಲ್ಲಂಘನೆ, ಇತ್ಯಾದಿಗಳನ್ನು --------- (ಬಂಧಪತ್ರದಲ್ಲಿರುವಂತೆ) ಮಾಡದಿರಲು ಸ್ವತಃ ಬದ್ಧನಾಗಿ -------------ರೂಪಾಯಿಗಳ ಮೊತ್ತಕ್ಕೆ ಬಂಧಪತ್ರವನ್ನು ಬರೆದುಕೊಟ್ಟಿರುವುದರಿಂದ ಮತ್ತು ಆ ಬಂಧಪತ್ರವನ್ನು ಮುಟ್ಟುಗೋಲು ಹಾಕಿದ್ದಕ್ಕೆ ನನ್ನ ಮುಂದೆ ರುಜುವಾತು ಕೊಟ್ಟಿರುವುದರಿಂದ ಮತ್ತು ಅದು ಯುಕ್ತಬದ್ಧವಾಗಿ ದಾಖಲೆಯಾಗಿರುವುದರಿಂದ ಮತ್ತು ಸದರಿ------------- (ಹೆಸರು) ನಿಗೆ ಸದರಿ ಮೊತ್ತವನ್ನು ಏಕೆ ಸಂದಾಯ ಮಾಡಬಾರದೆನ್ನುವುದಕ್ಕೆ ಅವನನ್ನು ಕಾರಣ ತೋರಿಸುವಂತೆ ಕೇಳಿ ನೋಟೀಸನ್ನು ಕೊಡಲಾಗಿದ್ದು ಮತ್ತು ಹಾಗೆ ಮಾಡಲು ಅಥವಾ ಸದರಿ ಮೊತ್ತವನ್ನು ಸಂದಾಯ ಮಾಡಲು ಅವನು ತಪ್ಪಿರುವುದರಿಂದ;

------------- ಜಿಲ್ಲೆಯೊಳಗೆ ನೀವು ಕಾಣಬಹುದಾದಂಥ ಸದರಿ ------------- (ಹೆಸರು) ನಿಗೆ ಸಂಬಂಧಿಸಿದ ------------- ರೂಪಾಯಿಗಳ ಮೌಲ್ಯದ ಯಾವುದೇ ಚರ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳುವ ಮೂಲಕ ಜಪ್ತಿ ಮಾಡುವಂತೆ ಮತ್ತು ಸದರಿ ಮೊಬಲಗನ್ನು -------------ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ ಆ ರೀತಿ ಜಪ್ತಿ ಮಾಡಲಾದ ಸ್ವತ್ತನ್ನು ಅಥವಾ ಅದನ್ನು ವಸೂಲಿ ಮಾಡುವುದಕ್ಕೆ ಸಾಕಾಗುವಷ್ಟನ್ನು ಮಾರಾಟ ಮಾಡಲು ಮತ್ತು ಈ ವಾರಂಟ್ ಮೇರೆಗೆ ನೀವು ಏನು ಮಾಡಿದ್ದೀರಿ ಎಂಬುದನ್ನು, ಅದನ್ನು ಜಾರಿ ಮಾಡಿದ ತಕ್ಷಣವೇ ವಿವರಣಾ ಪಟ್ಟಿ ಸಲ್ಲಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 56**

**ಶಾಂತಿಪಾಲನೆಗಾಗಿ ಇರುವ ಬಂಧಪತ್ರದ ಉಲ್ಲಂಘನೆಗೆ ಕಾರಾವಾಸದ ವಾರಂಟ್**

**(491ನೇ ಪ್ರಕರಣವನ್ನು ನೋಡಿ)**

ಗೆ, -------------- (ಸ್ಥಳ)ದ ಸಿವಿಲ್ ಜೈಲಿನ ಅಧೀಕ್ಷಕ (ಅಥವಾ ರಕ್ಷಕ),

-------------- (ಹೆಸರು ಮತ್ತು ವಿವರ) ನು ಶಾಂತಿಪಾಲನೆಗಾಗಿ ತಾನು ಬರೆದುಕೊಟ್ಟ ಬಂಧಪತ್ರದ ಉಲ್ಲಂಘನೆ ಮಾಡಿದುದಕ್ಕೆ ನನ್ನ ಮುಂದೆ ರುಜುವಾತು ಮಾಡಿರುವುದರಿಂದ ಮತ್ತು ಅದನ್ನು ಯುಕ್ತಬದ್ಧವಾಗಿ ದಾಖಲೆ ಮಾಡಿರುವುದರಿಂದ, ಸರ್ಕಾರಕ್ಕೆ -------------ರೂಪಾಯಿಗಳ ಅವನ ಮೊತ್ತವು ಮುಟ್ಟುಗೋಲಾಗಿರುವುದರಿಂದ, ಮತ್ತು ಸದರಿ------------- (ಹೆಸರಿನ)ನು ------------- ಮೊಬಲಗನ್ನು ಸಂದಾಯ ಮಾಡಲು ಅಥವಾ ಸದರಿ ಮೊತ್ತವನ್ನು ಏಕೆ ಸಂದಾಯ ಮಾಡಬಾರದೆನ್ನುವುದಕ್ಕೆ ಹಾಗೆ ಮಾಡಲು ಅವನನ್ನು ಯುಕ್ತಬದ್ಧವಾಗಿ ಕೇಳಿದಾಗ್ಯೂ ಅವನು ಕಾರಣ ತೋರಿಸಲು ತಪ್ಪಿರುವುದರಿಂದ ಮತ್ತು ಅದನ್ನು ಅವರ ಚರ ಸ್ವತ್ತಿನ ಜಪ್ತಿಯ ಮೂಲಕ ಜಾರಿಗೊಳಿಸಲು ಸಾಧ್ಯವಾಗದಿರುವುದರಿಂದ ಮತ್ತು ಸಿವಿಲ್ ಜೈಲಿನಲ್ಲಿ ಅವನನ್ನು ------------- (ಕಾರಾವಾಸದ ಅವಧಿ) ಕಾರಾವಾಸಕ್ಕಾಗಿ ಆದೇಶವನ್ನು ಮಾಡಿರುವುದರಿಂದ;

ಸದರಿ ಸಿವಿಲ್ ಜೈಲಿನ ಅಧೀಕ್ಷಕ -------(ಅಥವಾ ರಕ್ಷಕ)ನಾದ ನೀನು ಸದರಿ------------- (ಹೆಸರು) ನನ್ನು ಈ ವಾರಂಟ್‌ನೊಂದಿಗೆ ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಅವನನ್ನು ಸದರಿ ಜೈಲಿನಲ್ಲಿ, ಸದರಿ ------------- (ಕಾರಾವಾಸದ ಅವಧಿ)ಯವರೆಗೆ ಸುರಕ್ಷಿತವಾಗಿಟ್ಟುಕೊಳ್ಳಲು ಮತ್ತು ಈ ವಾರಂಟನ್ನು, ಅದನ್ನು ಜಾರಿಗೊಳಿಸಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಹಿಂತಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ__________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

**ನಮೂನೆ ಸಂಖ್ಯೆ. 57**

**ಸದ್ವರ್ತನೆಗಾಗಿರುವ ಬಂಧಪತ್ರ ಮುಟ್ಟುಗೋಲಾದ ಮೇಲೆ ಜಪ್ತಿ ಮತ್ತು ಮಾರಾಟದ ವಾರಂಟ್**

**(491ನೇ ಪ್ರಕರಣವನ್ನು ನೋಡಿ)**

ಗೆ, -------------- ದ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಪೊಲೀಸ್ ಅಧಿಕಾರಿ,

-------------- (ಹೆಸರು ಮತ್ತು ವಿವರ ಮತ್ತು ವಿಳಾಸ)ನು 20----- ನೇ ತಿಂಗಳು------ ನೇ ದಿನ------------- (ಮೂಲಕರ್ತನ ಹೆಸರು, ಇತ್ಯಾದಿ) ಎಂಬವನ ಸದ್ವರ್ತನೆಗಾಗಿ -------------ರೂಪಾಯಿಗಳ ಮೊತ್ತದ ಬಂಧಪತ್ರದ ಮೂಲಕ ಭದ್ರತೆ ಕಟ್ಟಿದ್ದು ಮತ್ತು ಸದರಿ --------(ಹೆಸರು) ನು -----------ಅಪರಾಧವನ್ನು ಮಾಡಿದ ಬಗ್ಗೆ ನನ್ನ ಮುಂದೆ ರುಜುವಾತನ್ನು ಕೊಡಲಾಗಿದ್ದು ಮತ್ತು ಅದನ್ನು ಯುಕ್ತಬದ್ಧವಾಗಿ ದಾಖಲೆ ಮಾಡಿರುವುದರಿಂದ, ಆ ಮೂಲಕ ಸದರಿ ಬಂಧಪತ್ರವನ್ನು ಮುಟ್ಟುಗೋಲಾಗಿದ್ದ, ಮತ್ತು ಸದರಿ ------------- (ಹೆಸರು) ಗೆ ಸದರಿ ಮೊತ್ತವನ್ನು ಏಕೆ ಸಂದಾಯ ಮಾಡಬಾರದೆನ್ನುವುದಕ್ಕೆ ಕಾರಣ ತೋರಿಸುವಂತೆ ಅವನನ್ನು ಕೇಳಿ ನೋಟೀಸನ್ನು ಕೊಡಲಾಗಿದ್ದು;

ಅವನು -------------ಜಿಲ್ಲೆಯೊಳಗೆ ನೀವು ಕಾಣಬಹುದಾದಂಥ ಸದರಿ------------- (ಹೆಸರು) ನಿಗೆ ಸಂಬಂಧಿಸಿದ ----------ರೂಪಾಯಿಗಳ ಮೌಲ್ಯದ ಯಾವುದೇ ಚರ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಮೂಲಕ ಜಪ್ತಿ ಮಾಡುವಂತೆ ಮತ್ತು ಸದರಿ ಮೊಬಲಗನ್ನು ------------ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ, ಹಾಗೆ ಜಪ್ತಿ ಮಾಡಿದ ಸ್ವತ್ತನ್ನು ಅಥವಾ ಅದನ್ನು ವಸೂಲಿ ಮಾಡುವುದಕ್ಕೆ ಸಾಕಾಗುವಷ್ಟನ್ನು ಮಾರಾಟ ಮಾಡಲು ಮತ್ತು ಈ ವಾರಂಟ್ ಮೇರೆಗೆ ನೀವು ಏನು ಮಾಡಿದ್ದೀರಿ ಎಂಬುದನ್ನು ಅದನ್ನು ಜಾರಿಗೊಳಿಸಿದ ಕೂಡಲೇ ವಿವರಣಾ ಪಟ್ಟಿ ಸಲ್ಲಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ನಮೂನೆ ಸಂಖ್ಯೆ. 58

## ಸದ್ವರ್ತನೆಗಾಗಿರುವ ಬಂಧಪತ್ರ ಮುಟ್ಟುಗೋಲಾದ ಮೇಲೆ ಕಾರಾವಾಸದ ವಾರಂಟ್

**(491ನೇ ಪ್ರಕರಣವನ್ನು ನೋಡಿ)**

ಗೆ, -------------- ದ ಸಿವಿಲ್ ಜೈಲಿನ ಅಧೀಕ್ಷಕ (ಅಥವಾ ರಕ್ಷಕ),

-------------- (ಹೆಸರು, ವಿವರಣೆ ಮತ್ತು ವಿಳಾಸ) ಎಂಬವನು ---------ನೇ 20---------- ತಿಂಗಳು ------------- ನೇ ದಿನ------------- (ಮೂಲಕರ್ತನ ಹೆಸರು, ಇತ್ಯಾದಿ) ಸದ್ವರ್ತನೆಗಾಗಿ ತಾನು ಬರೆದುಕೊಟ್ಟಂಥ ಪತ್ರದ ಉಲ್ಲಂಘನೆ ಮಾಡಿದ್ದಕ್ಕೆ ನನ್ನ ಮುಂದೆ ರುಜುವಾತು ಆಗಿದ್ದು ಮತ್ತು ಅದನ್ನು ಯುಕ್ತಬದ್ಧವಾಗಿ ದಾಖಲೆ ಮಾಡಿದ್ದು ಆ ಮೂಲಕ ಸರ್ಕಾರಕ್ಕೆ ------------- ರೂಪಾಯಿಗಳ ಮೊತ್ತವನ್ನು ಮುಟ್ಟುಗೋಲಾಗಿಸಿರುವುದರಿಂದ ಮತ್ತು ಸದರಿ ಮೊತ್ತವನ್ನು ಸಂದಾಯ ಮಾಡಲು ಅಥವಾ ಸದರಿ ಮೊತ್ತವನ್ನು ಏಕೆ ಸಂದಾಯ ಮಾಡಬಾರದೆಂಬುದಕ್ಕೆ ಕಾರಣ ತೋರಿಸುವಂತೆ ಅವನನ್ನು ಹಾಗೆ ಕೇಳಿದಾಗ್ಯೂ, ಸಂದಾಯ ಮಾಡಲು ತಪ್ಪಿರುವುದರಿಂದ ಮತ್ತು ಸಂದಾಯವನ್ನು ಅವನ ಚರಸ್ವತ್ತಿನ ಜಪ್ತಿ ಮೂಲಕ ಜಾರಿಗೊಳಿಸಲಾಗದ್ದರಿಂದ ಮತ್ತು ------- ಸದರಿ ಸಿವಿಲ್ ಜೈಲಿನಲ್ಲಿ ------------- (ಕಾರಾವಾಸ ಅವಧಿ) ಗಾಗಿ ಕಾರಾವಾಸಕ್ಕಾಗಿ ಆದೇಶವನ್ನು ಮಾಡಿರುವುದರಿಂದ;

ಸದರಿ ಅಧೀಕ್ಷಕ ----------(ಅಥವಾ ರಕ್ಷಕ) ನಾದ ನೀವು ಸದರಿ------------- (ಹೆಸರು) ನನ್ನು ಈ ವಾರಂಟ್ ನೊಂದಿಗೆ ನಿಮ್ಮ ಅಭಿರಕ್ಷೆಗೆ ತೆಗೆದುಕೊಳ್ಳಲು ಮತ್ತು ಅವನನ್ನು ಸದರಿ ಜೈಲಿನಲ್ಲಿ ಸದರಿ ------------- (ಕಾರಾವಾಸದ ಅವಧಿ) ಯವರೆಗೆ ಸುರಕ್ಷಿತವಾಗಿಟ್ಟುಕೊಳ್ಳಲು ಮತ್ತು ಈ ವಾರಂಟನ್ನು ಅದನ್ನು ಜಾರಿಗೊಳಿಸಿದ ರೀತಿಯನ್ನು ಪ್ರಮಾಣೀಕರಿಸುವ ಹಿಂಬರಹದೊಂದಿಗೆ ಹಿಂದಿರುಗಿಸಲು ನಿಮ್ಮನ್ನು ಅಧಿಕೃತಗೊಳಿಸಿದೆ ಮತ್ತು ಅಗತ್ಯಪಡಿಸಿದೆ.

20____ರ _______ನ_________ನೇ ದಿನಾಂಕ.

(ನ್ಯಾಯಾಲಯದ ಮೊಹರು) (ಸಹಿ)

******

ಡಾ. ರಾಜೀವ್ ಮಣಿ

ಭಾರತ ಸರ್ಕಾರದ ಕಾರ್ಯದರ್ಶಿ

Dr. Rajiv Mani
Secretary to Government of India

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH